START

START

START

MICROFILMED

BY

KARNATAKA STATE

ARCHIVES

CAMP:-

MEGARAVALLI

SHIMOGA DIST.

DATE

19th JUNE 91

F.NO ARS 21 APP 83

MICROFILMED

BY

KARNATAKA STATE

ARCHIVES

CAMP:-

MEGARAVALLI

SHIMOGA DIST.

DATE

19th JUNE 91

F.No. ARS 21 APP 89

# ನಮ್ಮ ಪುಸ್ತಕದ ಸ್ಪರ್ಧೆ

## ಪ್ರಥಮ ಬಹುಮಾನ

**A ರೂ. 10** **B ರೂ. 30**

### ಬೇಕಾದಷ್ಟು ಇತರ ಬಹುಮಾನಗಳು

**ವಿಶೇಷ ಸೂಚನೆ**

೧. ಕೊನೆಯ ತಾರೀಖು ೫-೩-೧೯೩೮ ಸಂಜೆ ನಾಲ್ಕು ಘಂಟೆ.

೨. ಈ ಸ್ಪರ್ಧೆಗಳಲ್ಲಿ ಎರಡು ಬಗೆಯುಂಟು. (A) ಕಿರಿಯರ ಸ್ಪರ್ಧೆ. (B) ಹಿರಿಯರ ಸ್ಪರ್ಧೆ. **(ಈ ಸ್ಪರ್ಧೆಗಳ ಸಂಬಂಧದಲ್ಲಿ ೧೬ ವರ್ಷ ತುಂಬದವರು ಕಿರಿಯರು ಮತ್ತು ೧೬ ತುಂಬಿದವರು ಹಿರಿಯರು. ಹಿರಿಯರು ದಯವಿಟ್ಟು ಕಿರಿಯರ ಸ್ಪರ್ಧೆಯಲ್ಲಿ ಭಾಗ ವಹಿಸ ಬಾರದೆಂದು ಪ್ರಾರ್ಥನೆ.)**

೩. ನಮ್ಮ ಪುಸ್ತಕದ **ವಿಶೇಷಪ್ರತಿಯ ಚಂದಾದಾರರು** ಒಂದು ಉತ್ತರದ ಜೊತೆಗೆ ಮತ್ತೊಂದು ಹೆಚ್ಚಿನ (Extra) ಉತ್ತರವನ್ನು ಉಚಿತವಾಗಿ ಕಳುಹಿಸಬಹುದು. ಅಂತಹ ಹೆಚ್ಚಿನ ಉತ್ತರವನ್ನು ಬೇರೆ ಲಕ್ಕೋಟೆಯಲ್ಲಿಟ್ಟು ಅದರಮೇಲೆ ಕೆಂಪು ಶಾಯಿಯಲ್ಲಿ **"ಉಚಿತ"** ಎಂದು ಬರೆದಿರಬೇಕು.

**ನಿಯಮಗಳು**

೧. ಕಿರಿಯರ (A) ಉತ್ತರವೊಂದಕ್ಕೆ ಪ್ರವೇಶಧನ ಎರಡು ಆಣೆ. ಮೂರು ಉತ್ತರಗಳಿಗೆ ನಾಲ್ಕು ಆಣೆ. ಹಿರಿಯರ (B) ಉತ್ತರವೊಂದಕ್ಕೆ ಪ್ರವೇಶಧನ ಎಂಟು ಆಣೆ. ಮೂರಕ್ಕೆ ಒಂದು ರೂಪಾಯಿ. ಎಷ್ಟು ಉತ್ತರಗಳನ್ನಾದರೂ ಕಳುಹಿಸಬಹುದು. ಚಿತ್ರಿರುವ ಉತ್ತರಗಳನ್ನು ಅಂಗೀಕರಿಸಲಾಗುವುದಿಲ್ಲ. ೨. ಪ್ರವೇಶಧನವನ್ನು, ಪೋಸ್ಟಲ್ ಆರ್ಡರು, ಮಣಿಯಾರ್ಡರು, (ಅಥವಾ ನಾಲ್ಕಾಣೆಗೆ ಹೆಚ್ಚಲ್ಲದಿದ್ದರೆ ಸ್ಟ್ಯಾಂಪು) ಮೂಲಕ ಕಳುಹಿಸಬಹುದು. ೩. ಸ್ಪರ್ಧೆಗಳ ಸರಿಯಾದ ಉತ್ತರಗಳನ್ನು ಬೆಂಗಳೂರಿನ, ಬಳೇಪೇಟೆಯಲ್ಲಿರುವ "ಮೈಸೂರು ಓರಿಯೆಂಟಲ್ ಬ್ಯಾಂಕ್, ಲಿಮಿಟೆಡ್"ನಲ್ಲಿ ಇಟ್ಟಿದೆ. ಅದಕ್ಕೆ ಸರಿಯಾದ ಉತ್ತರಗಳನ್ನು ಬರೆದವರಿಗೆ ಬಹುಮಾನಗಳನ್ನು ಕೊಡಲಾಗುವುದು. ಹೆಚ್ಚಿನ ಉತ್ತರಗಳನ್ನು ಕಳುಹಿಸುವವರಿಗೆ ವಿಶೇಷ ಬಹುಮಾನವುಂಟು. ಸರಿಯಾದ ಉತ್ತರವು ಹಲವರಿಂದ ಬಂದಲ್ಲಿ ಬಹುಮಾನವನ್ನು ಅವರೆಲ್ಲರಿಗೂ ಹಂಚಲಾಗುವುದು. ಹಾಗೆ ಬಹುಮಾನ ಹಂಚುವ ಸಂದರ್ಭದಲ್ಲಿ ಬಹುಮಾನದ ಮೊಬಲಗು (A) ವರ್ಗದಲ್ಲಿ ಎಂಟಾಣೆಗೂ (B) ವರ್ಗದಲ್ಲಿ ಒಂದು ರೂಪಾಯಿಗೂ ಕಡಿಮೆ ಇರುವುದಿಲ್ಲ. ೪. ಒಂದು ತಪ್ಪಿನವರಿಗೆ ಪ್ರವೇಶಧನದ ಎರಡರಷ್ಟು ಬೆಲೆಯು ಬಹುಮಾನ. ಎರಡು ತಪ್ಪಿನವರಿಗೆ ಪ್ರವೇಶಧನವಿಲ್ಲದೆ ಮುಂದಿನ ಸ್ಪರ್ಧೆಯಲ್ಲಿ ಭಾಗವಹಿಸುವ ರಿಯಾಯಿತಿ. ೫. ಒಂದು ರೂಪಾಯಿಗಿಂತ ಕಡಿಮೆ ಬಹುಮಾನ ಬಂದಲ್ಲಿ ಆ ಬಹುಮಾನವನ್ನು ಮತ್ತಾವ ರೂಪದಲ್ಲಿಯಾದರೂ ಕೊಡುವ ಅಧಿಕಾರವು ಸಂಪಾದಕರಿಗೆ ಉಂಟು. ೬. ಸರಿಯಾದ ಉತ್ತರಗಳನ್ನು ೫-೩-೩೮ರಲ್ಲಿ, ತಪ್ಪಿಲ್ಲದ ಉತ್ತರಗಳನ್ನು ಕಳುಹಿಸಿ ಬಹುಮಾನಪಡೆದವರ ಹೆಸರುಗಳನ್ನು ೧೦-೩-೩೮ರಲ್ಲಿ, ಪತ್ರಿಕೆಗಳಲ್ಲಿ ಮುದ್ರಿಸಲಾಗುವುದು. ಒಂದು ಅಥವಾ ಎರಡು ತಪ್ಪಿನ ಉತ್ತರಗಳನ್ನು ಕಳುಹಿಸಿದವರ ಹೆಸರುಗಳನ್ನು ಮಾರ್ಚಿಯ **"ನಮ್ಮ ಪುಸ್ತಕ"**ದಲ್ಲಿ ಪ್ರಕಟಿಸಲಾಗುವುದು. ೭. ಈ ಸ್ಪರ್ಧೆಗಳ ತೀರ್ಮಾನದ ವಿಷಯವಾಗಿ **"ನಮ್ಮ ಪುಸ್ತಕ"**ದ ಸಂಪಾದಕರ ತೀರ್ಮಾನವೇ ಕೊನೆಯಾಗಿರತಕ್ಕದ್ದು.

ಉತ್ತರಗಳನ್ನು ನಮ್ಮ ಪುಸ್ತಕದ ಸ್ಪರ್ಧೆಯ ಮ್ಯಾನೇಜರು, ನಮ್ಮ ಪುಸ್ತಕದ ಕಛೇರಿ, ೬೭, ಶಂಕರಪುರ, ಬೆಂಗಳೂರು ನಗರ, ಇವರಿಗೆ ಕಳುಹಿಸಿ.

# ಕಿರಿಯರ ಸ್ಪರ್ಧೆ A. 1.

## ಸೂ ಚ ನೆ ಗ ಳು

**ಉದ್ದಕ್ಕೆ**

1. ಹರಿಯುವ ನೀರು. 2. ಮಕ್ಕಳು ಬರೆಯುವುದಕ್ಕೆ ಉಪಯೋಗಿಸುವ ವಸ್ತು. 4. ಎಲ್ಲ ಹೆಂಗುಸರೂ ಬೇಕು ಎನ್ನುವ ವಸ್ತು. 5. ಕೋಪದ ಹೆಸರು. (ತಿರುಗುಮುರುಗು) 7. ಮುದುಕರಾದ ಗುರುತು. 8. ಚಳಿಯಾದಾಗ ಇದು ಬೇಕು ಎನ್ನಿಸುತ್ತದೆ. (ತ. ಮು) 10 ಶಕ್ತಿದೇವತೆಯ ಹೆಸರು. 12. ತೋಳಿನ ಆಭರಣ. 15 ಆಶೀರ್ವಾದ ಮಾಡು ಎಂಬರ್ಥದ ಧಾತು. (ತ. ಮು.) 17. ಒಂದು ಹೂವಿನ ಹೆಸರು. (ತ. ಮು.)

| | | | | | | |
|---|---|---|---|---|---|---|
| ಜ ಹೊ | ಳೆ | × | 2 | ಳ | 3 | × |
| ಲ | × | 4 | ಗ | × | 5 | 6 |
| 7 | | × | 8 | 9 | × | |
| × | 10 | 11 | × | 12 | | × |
| 13 | × | ಣ | × | ತಿ | × | 14 ಣ |
| 15 | 16 | | × | 17 | 18 | |
| ಳು | | × | × | × | | × |

**ಮೇಲಿನಿಂದ**

1. ಯಾರಿಗೂ ಬೇಡವಾದುದು. 2. ಕೌಂಕುಳು. 3. ಗಂಡ. 6. ಎಲ್ಲರ ಕಣ್ಣಿಗೂ ಬೀಳುವ ಪ್ರಾಣಿ. 9. ಒಂದು ಹೂವು. 11. ಬಾಣಂತಿಯರಿಗೆ ಬಹಳ ಬೇಕಾಗುವ ಖಾರದ ಒಸ್ತು. 13. ಕನ್ನಡದಲ್ಲಿ ಒಂದು ಕ್ರಿಯಾಪದ. 14. ದೇಶೀ ತೂಕದ ಕೊನೆ. (ತ. ಮು.) 16. ಶಿವನ ಹೆಸರು. 18. ಮನೆಯಲ್ಲಿಯೂ ಕಾಡಿನಲ್ಲಿಯೂ ಇರುವ ಪ್ರಾಣಿ. (ತ. ಮು.)

# ಹಿರಿಯರ ಸ್ಪರ್ಧೆ B. 1.

**ಉದ್ದಕ್ಕೆ**

1. ಮದುವೆಯ ತಂತ್ರಗಳಲ್ಲಿ ಮುಖ್ಯವಾದುದು. 4. ಇದನ್ನು ಮಾಡಲು ಎಲ್ಲರೂ ಹಿಂಜರಿಯುತ್ತಾರೆ. 5. ಲಕ್ಷ್ಮಿಯ ಹೆಸರುಗಳಲ್ಲಿ ಒಂದು. 6. ವಿನಾಯಕನ ಕನ್ನಡದ ಹೆಸರು. 9. ಕಾಲಿನ ಹಿಂಭಾಗ. (ತಿರುಗುಮುರುಗು) 10. ಈಗ ಇಂತಹವರನ್ನು ಜನರು ಗೌರವಿಸುವುದಿಲ್ಲ. 11. ಕಬ್ಬಿನಿಂದ ಆಗುವ ಪದಾರ್ಥ. 12. ಭಾಗ. 13. ಗಿಡವು ಬಲಿತಮೇಲೆ ಈ ಹೆಸರು. 14. ಸೈನ್ಯ. 16. ಕ್ರಿಮಿ. (ತ. ಮು.) 18. ದೊಡ್ಡವರ ಬಳಿಗೆ ಹೋಗುವಾಗ ಇದು ಗೊತ್ತಾಗಿದ್ದರೆ ಒಳ್ಳೆಯದು. 20. ಜಾತಿ. 22. ದೇವರ ಮೂರ್ತಿಗಳು ಇರುವ ಕಡೆ. (ತ. ಮು.) 23. ಪಕ್ಷಿರಾಜ. 25. ಚಿಂದಿ. 26. ಲಕ್ಷ್ಮೀಪತಿ. 27. ಪೂರ್ವದಲ್ಲಿ ಬಾಳಿ ಬದುಕಿ ಈಗ ಹಾಳಾಗಿರುವ ಪಟ್ಟಣ. (25ರಲ್ಲಿ ಒಂದು ಕೊಂಬು ಹೆಚ್ಚಾಗಿದೆ.)

| | | | | | | | | |
|---|---|---|---|---|---|---|---|---|
| 1 ಉ | 2 ರು | ಟಿ | 3 ಣಿ | × | 4 | ಮಾ | | × |
| 5 | | × | 6 | 7 | | × | × | 8 |
| 9 | | | × | 10 | ಟಿ | × | 11 | |
| | × | × | 12 | | × | 13 | ರ | × |
| 14 | 15 | × | ವ | × | × | × | 16 | 17 |
| × | | × | 18 | | × | × | × | ಡು |
| 19 | × | 20 | | × | 21 | × | 22 | |
| 23 | 24 | | × | 25 | | | × | × |
| 26 | | | | × | | × | 27 | |

**ಮೇಲಿನಿಂದ**

1. ಹಾವುಗಳ ಒಡೆಯ. 2. ಗಂಡುಸರ ತಲೆಯಮೇಲಿರುತ್ತದೆ. 3. ಮರದ ತುಂಡು. (ತ. ಮು.) 4. ಮುಚ್ಚಿಡದೇ ಇರುವುದು. 7. ಕುಮಾರ ಸ್ವಾಮಿಯ ವಾಹನ. 8. ಕೀಳು ಜಾತಿಯವರಲ್ಲಿ ಈ ಹೆಸರು ಹೆಚ್ಚು. 11. ಕೈಯ ಭಾಗಗಳಲ್ಲಿ ಒಂದು. 12. ಮೆಟ್ಟಲುಗಳು. 15. ಒಂದು ಜಾತಿಯ ಪ್ರಾಣಿಗೆ ಮಾತ್ರ ಇರುವ ವಿಶೇಷ. (ತ. ಮು.) 17. ಬುದ್ಧಿಯಿಲ್ಲದವರನ್ನು ಹೀಗೆ ಕರೆಯುತ್ತೇವೆ. 19. ಪಟ್ಟಣಗಳ ಹೆಸರು ಒಂದು. 21. ಇದು ಚೆನ್ನಾಗಿರುವ ಹೆಂಗುಸರು ಎಲ್ಲರಿಂದಲೂ ಮೆಚ್ಚಿಗೆ ಪಡೆಯುತ್ತಾರೆ. (ತ. ಮು.) 24. ಅಂಗಡಿಯಲ್ಲಿ ಆಗುವ ಕೆಲಸವನ್ನು ಹೇಳುವ ಕ್ರಿಯಾಪದ. (ತ. ಮು.)

೧. ಉತ್ತರಗಳನ್ನು ಸ್ವಚ್ಛವಾದ ಬಿಳಿಯ ಕಾಗದದಮೇಲೆ ಚಿತ್ತಿಲ್ಲದೆ ಬರೆದು ಕಳುಹಿಸಿ: ಚಿತ್ತಿರುವ ಉತ್ತರಗಳನ್ನು ಗಮನಿಸುವುದಿಲ್ಲ. ೨. ಪ್ರತಿಯೊಂದು ಕೂಪನ್ನಿಗೂ ಸಂಖ್ಯೆಯನ್ನು ೧, ೨, ೩ ಎಂದು ಕ್ರಮವಾಗಿ ಹಾಕಿ. ೩. ಪ್ರತಿಯೊಂದು ಕೂಪನ್ನಿನಲ್ಲಿಯೂ (1) ಕಿರಿಯರ ಸ್ಪರ್ಧೆಯಾದರೆ A ಎಂದೂ ಹಿರಿಯರ ಸ್ಪರ್ಧೆಯಾದರೆ B ಎಂದೂ ದಪ್ಪನಾಗಿ ಬರೆಯಿರಿ. (2) ಕಳುಹಿಸಿರುವ ಕೂಪರ್‌ಗಳ ಸಂಖ್ಯೆಯನ್ನು ತಾಣಿಸಿ. (3) ಕೂಪರ್‌ಗಳ ಒಟ್ಟು ಹಣವೆಷ್ಟು ? ಯಾವ ವಮೂಲಕ ಕಳುಹಿಸಿರುವಿರಿ ? ಎಂಬುದನ್ನು ಸ್ಪಷ್ಟವಾಗಿ ಬರೆಯಿರಿ. ಪೋಸ್ಟಲ್ ಆರ್ಡರಾದರೆ, ಕ್ರಾಸ್ ಮಾಡಬೇಡಿ. ಬಸವನಗುಡಿ ಪೋಸ್ಟ್ ಆಫೀಸಿನಲ್ಲಿ ನಮ್ಮ ಪುಸ್ತಕದ ಸ್ಪರ್ಧೆಯ ಮ್ಯಾನೇಜರಿಗೆ ಕೊಡುವುದು ಎಂದು ಬರೆಯಿರಿ. ಮನಿಯಾರ್ಡರಾದರೆ, ಕೂಪರ್‌ನಲ್ಲಿ ನಮ್ಮ ಪುಸ್ತಕದ ಸ್ಪರ್ಧೆಯ ಮ್ಯಾನೇಜರರಿಗೆ ಎಂದು ಸ್ಪಷ್ಟವಾಗಿ ಬರೆಯಿರಿ. ಮತ್ತು ನಿಮ್ಮ ವಿಳಾಸವೂ ಕೆಳಗೆ ಬರೆಯಿರಿ. ೪. ನೀವು ಕಳುಹಿಸುವ ಉತ್ತರಗಳನ್ನು ಭದ್ರವಾದ ಲಕೋಟೆಯಲ್ಲಿಟ್ಟು ಲಕೋಟೆಯಮೇಲೆ ನಿಮ್ಮ ಹೆಸರು. ವಿಳಾಸ, ನಿಮ್ಮ ಊರಿನ ಪೋಸ್ಟ್, ಎಲ್ಲವನ್ನೂ ವಿಶದವಾಗಿ, ಕ್ರಮವಾಗಿ, ಬರೆಯಿರಿ.

# ನ ಮ್ಮ ಪು ಸ್ತ ಕ

ಹಿರಣ್ಮಯೇನ ಪಾತ್ರೇಣ । ಸತ್ಯಸ್ಯಾಪಿಹಿತಂ ಮುಖಂ ॥
ತತ್ತ್ವಂ ಪೂಷನ್ನಪಾವೃಣು । ಸತ್ಯಧರ್ಮಾಯ ದೃಷ್ಟಯೇ ॥
—ವೇದ

(ಸಂಪಾದಕ:—ನರಸಿಂಹ ಶಾಸ್ತ್ರಿ ದೇವುಡು, ಎಂ.ಎ.)


| ಸಂಪುಟ ೨ | ಪುಷ್ಯ ಈಶ್ವರ ೧೯೩೮ ಫೆಬ್ರವರಿ | ಸಂಚಿಕೆ ೫ |
|---|---|---|


## ವಿ ಷ ಯ ಸೂ ಚ ನೆ

696


### ವಿ ದ್ಯಾ ರ್ಥಿ ಗ ಳ ಭಾ ಗ

೧. ವೇದದ ಕಥೆಗಳು
೨. ಭಾಷೆ
೩. ದೇಶಾಂತರದ ಕಥೆಗಳು
೪. ಕರ್ನಾಟಕದ ಯಾತ್ರೆ
೫. ನಮ್ಮ ಆಹಾರ

### † ಹಿ ರಿ ಯ ರ ಭಾ ಗ

೧. ನಮ್ಮ ಮಾತು
೨. ನಾಳೆ ಮಾಡೋಣ
೩. ಭಕ್ತ ಭಂಡಾರಿ ವಿರುಪಣ್ಣ
೪. ನಾಪಾಸ್ (ಕಥೆ)
೫. ನಾನು ಓದಿದ ಪುಸ್ತಕ

### † ಮ ಕ್ಕ ಳ ಭಾ ಗ

೧. ವರ್ಣಮಾಲೆ
೨. ಚಿತ್ರಕಥೆ
೩. ಕೆಟ್ಟ ಕಸಿ (ಕಥೆ)
೪. ಚಿತ್ರಲಿಪಿ
೫. ಚಿತ್ರದ ಒಗಟು
೬. ಚುಕ್ಕಿಯ ಚಿತ್ರ
೭. ಬಣ್ಣದ ಚಿತ್ರ
೮. ಯಾವುದು ಯಾವುದು?
೯. ಮನೆಗಳು
೧೦. ವಿನೋದಗಣಿತ
೧೧. ಆಕಾಶದಲ್ಲಿ
೧೨. ವಿಜ್ಞಾನಪಂಡಿತ
೧೩. ನಿಮಗೆ ಗೊತ್ತೇ?
೧೪. ಕಳ್ಳರ ಕಳ್ಳ (ಕಥೆ)
೧೫. ಸಣ್ಣ ಕಥೆ


† ಸಾಮಾನ್ಯ ಪ್ರತಿಯಲ್ಲಿ ಈ ಎರಡು ಭಾಗಗಳು ಮಾತ್ರ ಇರುತ್ತವೆ.

## ವಂ ದ ನೆ ಗ ಳು

ಶ್ರೀಯುತ ಚಿಮ್ಮಲಗಿಯವರು, ಹೈದರಾಬಾದಿನ ಕನ್ನಡ ಸೀಮೆಯಲ್ಲಿ "ನಮ್ಮ ಪುಸ್ತಕ"ದ ಪ್ರತಿಗಳನ್ನು ಉಚಿತವಾಗಿ ಹಂಚುತ್ತಿರುವರು. ಇದಕ್ಕಾಗಿ ನನ್ನ ಕೃತಜ್ಞತೆಯ ವಂದನೆಗಳು.

---

ನಮ್ಮ ಪುಸ್ತಕದ ಕೈಬರವಣಿಗೆಯ ಸ್ಪರ್ಧೆಯ ಬಹುಮಾನಗಳು ಸಿದ್ಧವಾಗಿವೆ. ಆಯಾ ಶಾಲೆಗಳು ಇರುವ ಊರುಗಳು ಯಾವ ಪೋಸ್ಟು ಎಂಬುದು ತಿಳಿಯದೆ ಆ ಬಹುಮಾನಗಳನ್ನು ಕಳುಹಿಸಲು ಅನಾನುಕೂಲವಾಗಿದೆ. ದಯವಿಟ್ಟು ಬಹುಮಾನ ಪಡೆದ ಶಾಲೆಗಳ ಮುಖ್ಯೋಪಾಧ್ಯಾಯರು ತಮ್ಮ ಗ್ರಾಮಗಳ ಪೋಸ್ಟು ಯಾವುದು ಎಂಬುದನ್ನು ತಿಳಿಸಿ ಉಪಕಾರ ಮಾಡಬೇಕಾಗಿ ಪ್ರಾರ್ಥನೆ.

ಸಂಪಾದಕ.




ಹೋದ ಸಲ ನಮ್ಮ ಪುಸ್ತಕದಲ್ಲಿ ಬಂದ ಸ್ಪರ್ಧೆಗಳ ಕಾಲವನ್ನು ಬರುವ ತಿಂಗಳು ಜೂರವರೆಗೆ ಹೆಚ್ಚಿಸಿದೆ.

ನಮ್ಮವರು ಈಚೀಜೆಗೆ ವರ್ತಮಾನ ಪತ್ರಿಕೆಗಳನ್ನು ಓದುವುದು ಹೆಚ್ಚಾಗುತ್ತಿದೆ. ಆದರೆ, ಪತ್ರಿಕೆ ಓದುವವರೆಲ್ಲ ತರಿಸುವುದಿಲ್ಲ. ಆದರಿಂದ ನಮ್ಮ ಪತ್ರಿಕೆಗಳಿಗೆ ಹೆಚ್ಚು ಉತ್ತೇಜನವಿಲ್ಲ. ಉತ್ತೇಜನವು ಹೆಚ್ಚು ಹೆಚ್ಚು ದೊರೆತಂತೆಲ್ಲ ಪತ್ರಿಕೆಗಳೂ ಬೆಳೆಯುತ್ತವೆ. ನಮ್ಮಲ್ಲಿ, ಹಿಂದೂ, ಟೈಂಸ್, ಇಂತಹ ಪತ್ರಿಕೆಗಳೇ ಇಲ್ಲವಲ್ಲ ಎನ್ನುತ್ತಾರೆ. ಆದರೆ ಅವುಗಳಿಗಿರುವಷ್ಟು ಅನುಕೂಲ ನಮ್ಮ ಪತ್ರಿಕೆಗಳಿಗಿದೆಯೇ? ಕರ್ನಾಟಕದಲ್ಲಿ ೧ ಕೋಟಿ ೧೭ ಲಕ್ಷ ಕನ್ನಡಿಗರು ಇದ್ದಾರೆ. ಆದರೂ ಯಾವ ಪತ್ರಿಕೆ ಒಂದು ಲಕ್ಷಕ್ಕೆ ಏರಿದೆ. ಅದರಲ್ಲಿ ಅರ್ಧ ಅದರಲ್ಲಿ ಅರ್ಧ, ಅದರಲ್ಲಿ ಅರ್ಧ ಕೂಡ ಇಲ್ಲ. ಯಾವುದೋ ಒಂದು ವಾರಪತ್ರಿಕೆಯು ಮಾತ್ರ ೧೦ ಸಾವಿರಕ್ಕಿಂತ ಮೇಲಿದೆಯೆಂದು ವದಂತಿ. ಅದು ನಿಜವಾಗಲೆಂದು ನಾವೂ ಹಾರೈಸುತ್ತೇವೆ.

ಪತ್ರಿಕೆಗಳ ಬೆಳೆವಣಿಗೆಯು ಪ್ರಜಾವರ್ಗದ ಪ್ರೋತ್ಸಾಹಗನ್ನು ಅವಲಂಬಿಸಿದೆ. ಪತ್ರಿಕೆಗಳು ಉದ್ಯಾನದಲ್ಲಿರುವ ಹೂಗಿಡಗಳ ಹಾಗೆ. ತಕ್ಕ ಪೋಷಣೆಯಿಲ್ಲದೆ ಹೋದರೆ, ಸಾಯುವುವು. ಅಥವಾ ಬದುಕಿದರೆ ಕಾಡು ಬೆಳೆದು ಕೆಡುವುವು.

ಈ ಸಲ ಚೀನಾದಿಂದ ಬಂದಿರುವ ಸುದ್ದಿಯು ದಿಟನಾದರೆ ಅಲ್ಲಲ್ಲಿ ಚೀನಾದ ಕೈ ಬಲವಾಗುತ್ತಿದೆ. ರಷ್ಯಾ ಚೀನಾದ ಜೊತೆಗೆ ಸೇರಿದೆ. ಜಪಾನು ಬ್ರಿಟಿಷರಿಗೂ ಅಮೇರಿಕನ್ನರಿಗೂ ಬೇಕಾದಹಾಗೆ ಅವಮಾನ ಮಾಡುತ್ತಿದ್ದರೂ ಅದೇಕೋ ಬ್ರಿಟಿಷ್ ಸಿಂಹವೂ ಸ್ಯಾಂ ಮಾವಯ್ಯನೂ ಇನ್ನೂ ಕೆರಳಿಲ್ಲ. (ಬ್ರಿಟಿಷ್ ಲೈಕ್, ಅಂಕಲ್ ಸ್ಯಾಂ ಎಂದು ಬ್ರಿಟಿಷ್, ಅಮೇರಿಕಗಳಿಗೆ ಗುರುತು) ಯೂರೋಪಿನಲ್ಲಿ ಇಟಲಿ ಜರ್ಮನಿಗಳ ಮೇಲೆ ಕಣ್ಣಿಟ್ಟು, ಐರ್ಲೆಂಡಿನ ಡಿವೆಲೆರಾ ಜೊತೆಯಲ್ಲಿ ಸಂಧಾನ ನಡೆಸುತ್ತಿರುವುದರಿಂದ ಬ್ರಿಟಿಷ್ ಸಿಂಹಕ್ಕೆ ಪುರಸತ್ತಿಲ್ಲವೆಂದರೂ ಸ್ಯಾಂ ಮಾವಯ್ಯನೇಕೆ ಸುಮ್ಮನಿದ್ದಾನೆ?

ಅಬ್ಸೀನಿಯದಲ್ಲಿ ಮತ್ತೆ ಕಲಹದ ಕಾರ್ಮೋಡಗಳು ಕವರಿವೆ. ದಕ್ಷಿಣ ಆಫ್ರಿಕದಲ್ಲಿ ಯುದ್ಧ ಸಾಮಗ್ರಿಗಳನ್ನೂ ಏರೋಪ್ಲೇನ್‌ಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ; ಜರ್ಮನಿಯು ಹಿಂದೆ ತನಗಿದ್ದ ಕಾಲನಿಗಳನ್ನು ಬಿಟ್ಟುಕೊಡಬೇಕೆಂದು ಒತ್ತಾಯಪಡಿಸುತ್ತಿದೆ. ಇತ್ತ ಇಂಡಿಯ ದಕ್ಷಿಣ ಆಫ್ರಿಕಾಗಳಿಗೆ ಲವಂಗದ ಯುದ್ಧ ಮೊದಲಾಗಿದೆ.

ವಾಯವ್ಯದ ಗಡಿನಾಡುಗಳಲ್ಲಿ ಜವಾಹರ್ ಲಾಲರಿಗೆ ನಡೆದ ಸ್ವಾಗತವೂ ಅಭೂತಪೂರ್ವವಾದುದು. ಇಂಡಿಯಾ ಸರಕಾರಕ್ಕೆ ವಿರುದ್ಧವಾಗಿ ದಂಗೆಯೆದ್ದಿರುವ ಇಪಿ ಫಕೀರನು ಜವಹರರಿಗೊಂದು ಪತ್ರವನ್ನು ಬರೆದು ತನ್ನ ಹೃದಯವನ್ನು ಬಿಚ್ಚಿದ್ದಾನೆ. ಇತ್ತ ಇಂಡಿಯದಲ್ಲಿ ಕೆಲವು ಕಡೆಗಳಲ್ಲಿ ಹಿಂದೂ ಮುಸ್ಲಿಂ ಸಮಸ್ಯೆಯು ಮತ್ತೆ ಮೇಲಕ್ಕೆ ಬಂದಿದೆ. ಮುಸ್ಲಿಂ ಮುಖಂಡರು ಕಾಂಗ್ರೆಸ್ಸು ಜನ ಹಿತಕ್ಕಾಗಿ ಹುಟ್ಟಿರುವ ಸಂಸ್ಥೆಯೆಂದು ಮನಗಂಡು, ಕಾಂಗ್ರೆಸ್ಸಿನವರು ಸತ್ಯವಂತರು, ಸುಳ್ಳು ತಟವಟದವರಲ್ಲ. ಕಾಂಗ್ರೆಸ್ಸಿಗೂ ಸತ್ಯಹಿಂಸೆಗಳಿಗೂ ದೂರ ಎಂಬುದನ್ನು ಅರಿತು ಮನ ಸೋಲುತ್ತಿದ್ದಾರೆ. ಕಾಂಗ್ರೆಸ್ಸು ಪ್ರಾಂಗಳಲ್ಲೆಲ್ಲಾ ಉತ್ಸಾಹ ಶಾಂತಿಗಳು ಹೊಸ ಪ್ರಯತ್ನಗಳು ಕಂಡು ಬರುತ್ತಿವೆ. ವರ್ಷಾಂತರಗಳಿಂದ ಜನ ಹಿತಕ್ಕಾಗಿ ತಡೇಶ ಹಿತಕ್ಕಾಗಿ ಸರ್ವಸ್ವವನ್ನು ತ್ಯಾಗಮಾಡಿ ಮೆರೆದ ಧೀರರು ಇಂದು ತಮಗೆ ಸಿಕ್ಕಿರುವ ಅವಕಾಶವನ್ನು ದೇಶ ಹಿತಕ್ಕಾಗಿ ಉಪಯೋಗಿಸುವುದರಲ್ಲಿ ವಿಚಿತ್ರವೇನು?

ಇಂಡಿಯದಲ್ಲಿ ಫೆಡರೇರ್ಷ ಸ್ಥಾಪಿಸಬೇಕೆಂದು ಬ್ರಿಟಿಷರು, ಈಗ ಬಂದಿರುವ ಜಾತಿಯ ಫೆಡರೇರ್ಷ ಬೇಡ ಎಂದು ಕಾಂಗ್ರೆಸ್ಸು. ಬ್ರಿಟಿಷ್ ಸಿಂಹವು ಜಪಾನಿನ ಒತ್ತಗಳನ್ನೂ ಇಟಲಿಯ ನಿಂದೆಗಳನ್ನು ಸಹಿಸಿಕೊಂಡು, ಕುಳಿತಿರುವುದನ್ನು ನೋಡಿದರೆ, ಲಾರ್ಡ್ ಲೋಥಿಯರ್‌ರೂ ವೈಸ್‌ರಾಯರೂ ಪ್ರಜಾವರ್ಗದ ನಿಜವಾದ ಮುಖಂಡರಾದ ಮಹಾತ್ಮಾಜಿ, ರಾಜಾಜಿ, ಜವಾಹರ್, ಮುಂತಾದವರನ್ನು ಕಂಡು ದೀರ್ಘಕಾಲ ಗುಟ್ಟಾಗಿ ಮಾತು ಕಥೆಗಳನ್ನು ಆಡುತ್ತಿರುವುದನ್ನು ಗಮನಿಸಿದರೆ, ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಳಿಗಳ ಪ್ರಶಂಸೆಯು ಬರುತ್ತಿರುವುದನ್ನು ಓದಿದರೆ, ಬಹುಶಃ ಇಂಗ್ಲಿಷ್ ಜನಾಂಗವು ಇಂಡಿಯಕ್ಕೆ ಬೇಕಾಗಿರುವುದನ್ನು ಕೊಟ್ಟು ಒಲಿಸಿಕೊಳ್ಳುವ ಹಾಗೆ ಕಾಣುತ್ತದೆಯೆನ್ನಬಹುದು. ಇಂಗ್ಲಿಷರು ವ್ಯಾಪಾರಚತುರರು. ಅವರು ಯಾವಾಗಲೂ ಲಾಭದ ಮೇಲೆ ಕಣ್ಣಿಟ್ಟು ಕೆಲಸಮಾಡುವ ಬುದ್ಧಿವಂತರು. ಹಿಂದೆ ಅಮೇರಿಕದೊಡನೆ ನಡೆದ ವ್ಯವಹಾರ ಒಂದರಲ್ಲಿ ಮಾತ್ರ ಹಟಹಿಡಿದರೆ ಹೊರತು, ಮಿಕ್ಕ ಇನ್ನೆಲ್ಲಿಯೂ ಉಪಾಯದಿಂದಲೇ ಕಾರ್ಯಸಾಧನೆ ಮಾಡಿರುವ ಧೀರರು.

ಮೆಡಿಟರೇನಿಯರ್ ಮೇಲೆ ತನಗಿದ್ದ ಅಧಿಕಾರವು ಕೈತಪ್ಪಿ ಹೋಗುತ್ತಿರುವಾಗ, ಪಾಲಸ್ತೈನ್, ಅರೇಬಿಯಾಗಳಲ್ಲಿ ವಿದ್ರೋಹ ಬುದ್ಧಿಯು ಪ್ರಕಟವಾಗುತ್ತಿರುವಾಗ, ಫೆಸಿಫಿಕ್‌ನಲ್ಲಿ ಘೋರವಾದ ಯುದ್ಧವಾಗುತ್ತಿರುವಾಗ, ಬ್ರಿಟ್ ಇಂಡಿಯದೊಡನೆ ವಿರೋಧವನ್ನು ಕಟ್ಟಿಕೊಳ್ಳಲಾರದು ಎಂದು ಧೈರ್ಯವಾಗಿ ಹೇಳಬಹುದು. ಅಂತೂ ಫೆಡರೇರ್ಷನಲ್ಲಿ ಕೆಲವು ವ್ಯತ್ಯಾಸಗಳಾದರೆ ವಿಶೇಷವಿಲ್ಲ. ಆಗಬೆ ಈಗಿರುವಂತೆಯೇ ಬಂದರೆ ಮಾತ್ರ ವಿಶೇಷ.

ನೋಡುಡು.

ನ ಹಾ ಧ್ಯಾ ಯ ರಿ ಗೆ :—

# ನಾಳೆ ಮಾಡೋಣ

—ಕರು "ನಾಳೆ ಮಾಡೋಣ" ಬುದ್ಧಿಯವರು ಹಾಸಿಗೆಯಿಂದೇಳುವಾಗಲೇ ಇನ್ನೊಂದು ಘಳಿಗೆ ಬಿಟ್ಟುಕೊಂಡೆದ್ದರಾಯಿತು ಎಂದುಕೊಂಡು ಆದಷ್ಟು ಹೊತ್ತು ಹಾಸಿಗೆಯಲ್ಲಿ ಮಲಗಿರುವರು. ಕೆಲಸ ಮಾಡಬೇಕಾಗಿದ್ದಾಗ "ಮಾಡೋಣ ಏನವಸರ" ಎಂದು ಕೊಳ್ಳುತ್ತಿರುವುದು. ಇದು ಈ ಬುದ್ಧಿಯ ಹೆಗ್ಗುರುತುಗಳು. ಇಂತಹವರು ಊಟಕ್ಕೇಳುವುದು ಹೊತ್ತು; ರಾತ್ರಿ ಮಲಗುವುದು ಹೊತ್ತು; ಅಷ್ಟೇನು? ಎಲ್ಲಾದಕ್ಕೂ ಹೊತ್ತು, ಆದರೆ ಹೀಗೆ ಮಾಡುವುದರಿಂದ ಹಾನಿ ಎಂಬುದನರಿಗೆ ತಿಳಿಯದೆ ಇಲ್ಲ. ಆದರೂ ಮಾಡುತ್ತಾರೆ. ಏಕೆ?

**ಕಾರಣಗಳು :—**

ಕಷ್ಟಪಟ್ಟು ಕೆಲಸ ಮಾಡುವುದನ್ನು ಆದಷ್ಟುಮಟ್ಟಿಗೆ ತಪ್ಪಿಸಿಕೊಳ್ಳಬೇಕು. ಎಂಬುದು ಮನುಷ್ಯ ಸ್ವಭಾವ. ಈ ಸ್ವಭಾವಕ್ಕೆ ಸೋತವರು ಬಲು ಬೇಗ 'ನಾಳೆ ಮಾಡೋಣ ಬುದ್ಧಿ'ಯನ್ನು ಕಲಿಯುವರು. ಇವರು ಯಾವಾಗಲೂ ಕೆಲಸ ಮಾಡುತ್ತಿರುವರು ನಿಜ. ಆದರೆ ಯಾವ ಹೊತ್ತಿನಲ್ಲಿ ಯಾವ ಕೆಲಸ ಮಾಡಬೇಕೋ ಅದನ್ನು ಬಿಟ್ಟು ಮಿಕ್ಕೆಲ್ಲದನ್ನೂ ಮಾಡುವರು. ಊಟಮಾಡುವ ಹೊತ್ತಿನಲ್ಲಿ ನಿದ್ದೆ, ಓದುವ ಹೊತ್ತಿನಲ್ಲಿ ಆಟ, ಆಟದ ಹೊತ್ತಿನಲ್ಲಿ ಊಟ. ಹೀಗಾಗಿ ಬೆಳಗಿಂದ ಸಂಜೆವರೆಗೂ ಮೂರು ಹೊತ್ತೂ ಕೆಲಸಮಾಡಿದರೂ, ಮಾಡಬೇಕಾದ ಕೆಲಸ ಉಳಿದೇ ಹೋಗುವುದು.

ಹೀಗೆ ತಾನಾಗಿ ಮಾಡಿಕೊಂಡ ಮೋಸವು ಮಾಡಬೇಕಾದ ಕೆಲಸವನ್ನು ಉಳಿಸಿ ಉಳಿಸಿ, ಹೊರಲಾಗದ ಮೂಟೆಯನ್ನು ಮಾಡುವುದು. ಆ ಮೂಟೆಯನ್ನು ನೋಡಿ ಮನಸ್ಸು ಬೆದರುವುದು, ಆಗ ಅಯ್ಯೋ ಎಷ್ಟು ಕೆಲಸ ಮಾಡಬೇಕಪ್ಪಾ ಎನ್ನಿಸುವುದು. ತನ್ನ ಕೈಲಾಗುವುದಕ್ಕಿಂತಲೂ ಹೆಚ್ಚು ಕೆಲಸವನ್ನು ತನ್ನ ಮೇಲೆ ಹೊರಿಸಿದ್ದಾರೆಂದು ಅಕಾರಣವಾಗಿ ಇತರರ ಮೇಲೆ ಮನಸ್ಸು ರೇಗುವುದು ನಾಳೆ ಮಾಡಿದರಾಯಿತು ಎಂದು ಮೋಸಮಾಡಿದುದೂ ಮನಸ್ಸೇ! ಈಗ ನನ್ನ ತಲೆಯಮೇಲೆ ಎಷ್ಟು ಕೆಲಸ ಬಿದ್ದಿದೆಯಪ್ಪಾ ಎಂದು ರೇಗುವುದೂ ಮನಸ್ಸೇ!

"ನಾಳೆಮಾಡೋಣ ಬುದ್ಧಿ"ಯು ಆರಂಭವಾಗುವುದು ಮಕ್ಕಳಾಗಿರುವಾಗ. ಮೋಹದಿಂದ ಮುದ್ದುಮಾಡಿ ಬೆಳೆಸಿದ ಮಕ್ಕಳು ಸಾಮಾನ್ಯವಾಗಿ ಕೆಲಸಮಾಡುವ ಅಭ್ಯಾಸವಿಲ್ಲದವರು. ಅಂಥಹವರು ಕಷ್ಟಪಟ್ಟು ಕೆಲಸ ಮಾಡುವುದಕ್ಕೆ ಬದಲಾಗಿ ನಾಳೆ ಮಾಡೋಣ ಮಾಡಿದರಾಯಿತು ಎನ್ನುವುದು. ಹಾಗೆಯೇ ಮನೆಯಲ್ಲಿ ಅದು ಮಾಡಬೇಡ ಇದು ಮಾಡಬೇಡ ಎಂದು ತಡೆದು ತಡೆದು ತುಳಿದು ತುಳಿದು ಬೆಳೆಸಿದ ಮಗುವು ಯಾರಾದರೂ ಬಂದು ತನ್ನ ಕೆಲಸವನ್ನು ಮಾಡಿಕೊಡುವರು ಎಂದುಕೊಂಡು ಮಾಡುವ ಕೆಲಸವನ್ನು ಅತ್ತು ತಳ್ಳುವುದು.

ಇನ್ನು ಕೆಲವು ವೇಳೆ ಕೆಲಸ ಮಾಡುವುದಕ್ಕೆ ಬೇಕಾದ ಶಕ್ತಿ ಇಲ್ಲದಿರುವುದರಿಂದ ಹೀಗೆ ಕೆಲಸವನ್ನು ಮುಂದಕ್ಕೆ ತಳ್ಳುವ ಸ್ವಭಾವ ಬರುವುದು.

ಎಲ್ಲದಕ್ಕಿಂತಲೂ ಹೆಚ್ಚಾಗಿ ಇಂತಹ ಕೆಲಸವನ್ನು ಮಾಡಬೇಕು ಎನ್ನುವುದು ನೇರವಾಗಿ ಗೊತ್ತಿಲ್ಲದಿರುವುದರಿಂದ ಆ ಕೆಲಸ ಮಾಡಬೇಕು ಈ ಕೆಲಸ ಮಾಡಬೇಕು ಎಂದು ಕೊಳ್ಳುತ್ತಾ ಯಾವುದನ್ನೂ ಮಾಡದೆ ಹೋಗುವುದು.

**ಇದಕ್ಕೆ ಔಷಧಿ :—**

ಒಂದು ವೇಳೆ ಆರೋಗ್ಯವಿಲ್ಲದೆ ಕೆಲಸವನ್ನು ಮಾಡುವುದು, ಕಷ್ಟವಾಗಿದ್ದರೆ ಆರೋಗ್ಯವನ್ನು ಸಂಪಾದಿಸಬೇಕು. ಮತ್ತು ಕಾಲಕ್ಕೆ ಬೆಲೆಯುಂಟು ಎಂಬುದನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳಬೇಕು. "ಜೀವನವೆಂಬುದು ಹುಟ್ಟುವ ಘಳಿಗೆಯಿಂದ ಸಾಯುವ ಘಳಿಗೆವರೆಗೆ ಇರುವ ಘಳಿಗೆ ಘಳಿಗೆಗಳಮೇಲೆ ಹೋದ ಘಳಿಗೆಯು ಮತ್ತೆ ಹಿಂತಿರುಗಿ ಬರುವುದಿಲ್ಲ. ಆದುದರಿಂದ ಇರುವ ಘಳಿಗೆಯನ್ನು ಚೆನ್ನಾಗಿ ಉಪಯೋಗಿಸಬೇಕು" ಎಂಬುದನ್ನು ಮನಗಾಣಬೇಕು. ಕೆಲಸಕ್ಕೆ ಬಾರದ, ಫಲವಿಲ್ಲದ, ಎಷ್ಟೋ ಸಣ್ಣ ಕೆಲಸಗಳಲ್ಲಿ ದಿನವೆಲ್ಲವೂ ಕಳೆದುಹೋಗುವುದು. ಅಂತಹ ನಿಷ್ಫಲವಾದ ಹರಟೆ, ತಮಾಷೆ, ಮೊದಲಾದ ಕೆಲಸಗಳಲ್ಲಿ ಹೆಚ್ಚು ಕಾಲ ಕಳೆಯುವ ಅಭ್ಯಾಸವನ್ನು ಆದಷ್ಟು ಬೇಗ ತಪ್ಪಿಸಬೇಕು.

---

ಈಕೆಯು ತನ್ನ ಮಗುವಿಗಾಗಿ ಅನೇಕ ಔಷಧಗಳನ್ನು ಕೊಟ್ಟಳು. ಆದರೆ ಮಗುವಿನ ಅಜೀರ್ಣ, ಹೊಟ್ಟೆ ಉಬ್ಬರ, ಭೇದಿ ಗುಣವಾಗಲಿಲ್ಲ ಕಡೆಗೆ,

ಓಂ ಎಕ್ಸ್ಟ್ರಾಕ್ಟ್ ಒಂದು ಬಾಟ್ಲಿನಿಂದಾ ಗುಣವಾಯಿತು.

ಓಂ ಎಕ್ಸ್ಟ್ರಾಕ್ಟ್ A. ಮಕ್ಕಳಿಗೆ ಸಂಜೀವಿನಿ.

ಎಲ್ಲಾ ಷಾಪುಗಳಲ್ಲಿಯೂ ದೊರೆಯುವುದು.

ರರ್ತ ಮಿಶ್ರಿ ಡಿಪೋ, ಬೆಂಗಳೂರು ಸಿಟ್ಟ


ಶ್ರೀ ಗಜಾನನ ಪುಸ್ತಕ ಭಂಡಾರ ಹರಿಹರಪುರ ಪೋಸ್ಟ್ (ಕೊಪ್ಪ-ಕಡೂರು.) ಬಿಕ್ಕಳಿ

# ಭಕ್ತ ಭಂಡಾರಿ ವಿರುಪಣ್ಣ

(ಉಮಾಪತಿ)

ನಮ್ಮ ಕನ್ನಡ ನಾಡಿನಲ್ಲಿ ಅನೇಕಮಂದಿ ವಿಭೂತಿ ಪುರುಷರು ಆಗಿ ಹೋಗಿದ್ದಾರೆ. ಶೌರ್ಯದಿಂದ ಕೆಲವರು, ತ್ಯಾಗದಿಂದ ಕೆಲವರು, ಸ್ವಾಮಿಭಕ್ತಿಯಿಂದ ಕೆಲವರು, ದೈವ ಭಕ್ತಿಯಿಂದ ಕೆಲವರು ಅಚ್ಚಳಿಯದ ಕೀರ್ತಿಯನ್ನು ಗಳಿಸಿ ಅದ್ಯಾಪಿ ವಿಖ್ಯಾತರಾಗಿದ್ದಾರೆ. ಆಂಥವರಲ್ಲಿ ಕಲಾಭಕ್ತಿಗಳನ್ನು ಉಪಾಸನೆ ಮಾಡಿ ಸುಂದರ ದೇವಾಲಯಗಳನ್ನು ನಿರ್ಮಿಸಿದವರೂ ಹಲವರುಂಟು.

ವಿರುಪಣ್ಣ ಲೇಪಾಕ್ಷಿಯವನು; ಪೆನುಗೊಂಡೆಯ ರಾಯಭಂಡಾರಿಯಾಗಿ ಭಕ್ತ ಭಂಡಾರಿಯೂ ಆದವನು. ಲೇಪಾಕ್ಷಿಯು ಹಿಂದೂಪುರಕ್ಕೆ ಪೂರ್ವದಿಕ್ಕಿನಲ್ಲಿ ಒಂಭತ್ತು ಮೈಲಿ ದೂರವಿರುವ ಒಂದು ಗ್ರಾಮ. ಮೈಸೂರು ಸೀಮೆಯ ಪೂರ್ವಪರ್ವತ ಶ್ರೇಣಿಗಳಲ್ಲಿ ಒಂದಾದ ನಂದೀಪಶ್ರೇಣಿಯು ಈ ಗ್ರಾಮವನ್ನು ಹಾದು ಹೋಗುತ್ತದೆ. ಇಲ್ಲಿ ವಿಶಾಲವಾದ ಒಂದು ಬಂಡೆಯಿದ್ದು ಕೂರ್ಮಶೈಲವೆಂದು ಪುರಾಣಪ್ರಸಿದ್ಧವಾಗಿದೆ. ಅಗಸ್ತ್ಯ ಮಹರ್ಷಿಗಳು ಇದರಮೇಲೆ ಪಾಪನಾಶೇಶ್ವರ ರಘುನಾಥದೇವರುಗಳನ್ನು ಪ್ರತಿಷ್ಠಿಸಿರುವುದರಿಂದ ಲೇಪಾಕ್ಷಿಯು ಸ್ಕಾಂದಪುರಾಣದಲ್ಲಿ ವರ್ಣಿಸಲ್ಪಟ್ಟ ಅರುವತ್ತೆಂಟು ಶಿವಕ್ಷೇತ್ರಗಳಲ್ಲಿ ಒಂದಾಗಿದೆ.

ಶ್ರೀಮನ್ಮಹಾರಾಜಾಧಿರಾಜ, ರಾಜಪರಮೇಶ್ವರ, ಶ್ರೀ ವೀರಪ್ರತಾಪ, ಶ್ರೀ ಅಚ್ಯುತ ದೇವ ಮಹಾರಾಜರವರು ವಿಜಯನಗರದಲ್ಲಿ ಚಕ್ರವರ್ತಿಗಳಾಗಿದ್ದಾಗ ಲೇಪಾಕ್ಷಿಯ ನಂದಿ ಲಕ್ಕಶೆಟ್ಟಿಯ ಮಕ್ಕಳಾದ ವಿರುಪಣ್ಣ ವೀರಣ್ಣರೆಂಬುವರು ತಮ್ಮ ಬುದ್ಧಿಬಲ ಚಾತುರ್ಯಗಳಿಂದ ದೊಡ್ಡ ಪದವಿಗೇರಿದರು. ವಿರುಪಣ್ಣನು ಕೊನೆಗೆ ರಾಜಾನುಗ್ರಹದಿಂದ ರಾಯ ಭಂಡಾರಾಧ್ಯಕ್ಷನೂ ಆದನು.

ವಿರುಪಣ್ಣನಲ್ಲಿ ಮೊದಲಿನಿಂದಲೂ ಮಾತೃಭೂಮಿಯ ಪ್ರೇಮ, ದೈವಭಕ್ತಿ, ಸೌಂದರ್ಯೋಪಾಸನೆಗಳು ತುಂಬಿದ್ದುವು. ಇದರಿಂದ ಪುರಾಣಪ್ರಸಿದ್ಧವಾದ ತನ್ನ ಜನ್ಮ ಸ್ಥಳವನ್ನು ಗಣ್ಯವಾದ ಶಿವಕ್ಷೇತ್ರವನ್ನಾಗಿ ಮಾಡಬೇಕೆಂದು ಆಶೆ ಹುಟ್ಟಿತು. ತಾನೂ ಧನಿಕನಾಗಿ ರಾಜಭಂಡಾರವೂ ಕೈಯಲ್ಲಿದ್ದುದರಿಂದ ಪ್ರಸಿದ್ಧರಾದ ಶಿಲ್ಪಿಗಳನ್ನು ಕರೆಸಿ ಕೂರ್ಮ ಶೈಲವೆನ್ನು ಸಮನಾಗಿ ಕೆತ್ತಿಸಿ ಮೊದಲಿನಿಂದಲೂ ಇದ್ದ ಪಾಪನಾಶೇಶ್ವರ, ರಘುನಾಥ, ಸ್ಫಟಿಕಲಿಂಗ, ಪಾರ್ವತಿ, ಮುಂತಾದ ಸಣ್ಣಸಣ್ಣ ಗುಡಿಗಳನ್ನು ವಿಶಾಲವಾದ ಒಂದೇ ದೇವಾ

ಲಯದಲ್ಲಿ ಸೇರಿಸಿ ಆತನ ಕುಲದೈವವಾದ ವೀರಭದ್ರದೇವರನ್ನು ಪ್ರಧಾನ ಮೂರ್ತಿಯಾಗಿ ಪ್ರತಿಷ್ಠಿಸಿದನು.

ಗರ್ಭಗೃಹದ ಮುಂದೆ ಸುಕನಾಸಿ ರಂಗಮಂಟಪಗಳನ್ನು ಪ್ರೇಕ್ಷಕರ ತಲೆತೂಗುವ ಶಿಲ್ಪಕಲಾನೈಪುಣ್ಯದಿಂದ ಕಟ್ಟಿಸಿ ಸುತ್ತಲೂ ಸಹಸ್ರಾರು ಮಂದಿ ಯಾತ್ರಾರ್ಥಿಗಳು ಇಳಿದು ಕೊಳ್ಳಲನುಕೂಲವಾಗಿರುವಂತೆ ಮಂಟಪಗಳಿಂದ ಕೂಡಿದ ಏಳು ಪ್ರಾಕಾರಗಳನೂ ಮಾಡಿಸಿದನು. ರಂಗಮಂಟಪದ ದೊಡ್ಡ ಕಂಭವೊಂದರ ಕೆಳಗೆ ಬಟ್ಟೆಯನ್ನು ಎಳೆಯುವಂತೆ ಮಾಡಿದ್ದರಂತೆ. ಈಗ ಅದರ ಒಂದು ಮೂಲೆ ನೆಲಕ್ಕೆ ಕುಳಿತಿರುವುದು. ಈ ಕಂಭಗಳಲ್ಲಿರುವ ಕೆತ್ತನೆಯ ಕೆಲಸವು ಕಗ್ಗಲ್ಲೂ ಶಿಲ್ಪಿಗಳ ಪಾಲಿಗೆ ಮೇಣವಾಗಿತ್ತೇನೊ ಎನ್ನಿಸುವುದು. ದೇವಾಲಯದ ಹಿಂಭಾಗದಲ್ಲಿ ಶಿವಸಭೆಯೆಂದು ಕರೆಯಲ್ಪಡುವ ಕಲ್ಯಾಣಮಂಟಪವು ಅಪೂರ್ಣವಾಗಿ ಬರೀ ಸುಂದರಸ್ತಂಭಗಳು ಮಾತ್ರ ನಿಂತಿರುವುವು. ಲೇಪಾಕ್ಷಿಗೆ ಹೋದವರನ್ನು ಮೊದಲು ಆಕರ್ಷಿಸುವುದು ಮುದ್ದಿನ ಮೂಟೆಯಂತಿರುವ ಇಗ್ಗತ್ತು ಅಡಿಗಳ ಎತ್ತರ ಮೂವತ್ತು ಅಡಿಗಳ ಉದ್ದವಿರುವ ಮಲಗಿದ ಬಸವಣ್ಣ. ಅದರ ಚೆಲುವು ಆಕಾರಗಳನ್ನು ಮಿಾರಿಸಿರುವುದು ದಕ್ಷಿಣ ಇಂಡಿಯಾದಲ್ಲೇ ಇಲ್ಲವೆನ್ನುತ್ತಾರೆ.

ವಿರುಪಣ್ಣನು ತನ್ನ ಮತಾಭಿಮಾನ ದೈವಭಕ್ತಿಗಳನ್ನು ಕಲೆಯಲ್ಲಿ ರೂಪುಗೊಳಿಸಿ ಅಪರಿಮಿತ ದ್ರವ್ಯವನ್ನು ವೆಚ್ಚಮಾಡಿ ಈ ದೇವಾಲಯವನ್ನು ಕಟ್ಟಿಸಿ ದೇವರ ಪೂಜಾದಿಗಳು ಶಾಶ್ವತವಾಗಿ ನಡೆಯಲೆಂದು ಅನೇಕ ಗ್ರಾಮಗಳನ್ನೂ ಭೂಮಿಗಳನ್ನೂ ಕೊಂಡು ದೇವರ ಹೆಸರಿನಲ್ಲಿ ಧಾರೆಯೆರೆದಿದ್ದಾನೆ. ಇಂಥ ಪರಮ ಭಕ್ತನೂ, ಕಲಾಭಿಜ್ಞನೂ ಚರಿತ್ರಕಾರರ ಲೆಕ್ಕಣಿಕೆಗೆ ಸಿಕ್ಕದಿರುವುದು ಶೋಚನೀಯ ವಿಷಯ. ಅದಕ್ಕೆ ಕಾರಣವೂ ಉಂಟು. ವಿರುಪಣ್ಣನು ರಾಜಾಜ್ಞೆಯಿಲ್ಲದೆ ಭಂಡಾರದ ದ್ರವ್ಯವನ್ನು ವೆಚ್ಚಮಾಡಿ ಈ ದೇವಾಲಯವನ್ನು ಕಟ್ಟಿಸಿದನಷ್ಟೆ. ಕಲ್ಯಾಣಮಂಟಪದ ಕಂಭಗಳನ್ನು ನಿಲ್ಲಿಸಿ ತೊಲೆಗಳನ್ನು ಎತ್ತಿ ಸುತ್ತಿರುವ ಕೆಲಸದಲ್ಲಿ ಮಗ್ನನಾಗಿದ್ದಾಗ ವಿರುಪಣ್ಣನ ದುರ್ದೈವವು ಈ ಮಹಾ ಕಾರ್ಯಕ್ಕೆ ಅಡ್ಡಿಮಾಡಿ ಅತನನ್ನೂ ನಿರ್ನಾಮನನ್ನಾಗಿ ಮಾಡಿತು.

ರಾಜಭಂಡಾರದ್ರವ್ಯವು ವೆಚ್ಚವಾಗಿದೆಯೆಂಬ ವರ್ತಮಾನವು ಅಚ್ಯುತದೇವ ಮಹಾರಾಯರವರ ಕಿವಿಗೆ ಬಿದ್ದು ಅದನ್ನು ಪರೀಕ್ಷಿಸಬೇಕೆಂದು ರಾಯರು ಪಣಗೊಂಡಿಗೆ ಬಂದರು. ತಮ್ಮ ಅಪ್ಪಣೆಯಿಲ್ಲದೆ ಭಂಡಾರವನ್ನು ಬರಿದು ಮಾಡಿರುವುದನ್ನು ನೋಡಿ ರಾಯರು ಕೋಪಗೊಂಡು ವಿರುಪಣ್ಣನನ್ನು ಹಿಡಿತರಲು ಭಟರನ್ನು ಕಳುಹಿಸಿದರು. ವಿರುಪಣ್ಣನು ಕಲ್ಯಾಣಮಂಟಪವ ಬಳಿಯಲ್ಲಿ ಕಾರ್ಯಮಗ್ನನಾಗಿರುವಾಗ ಭಟರು ಬಂದು ಮುಜರೆ ಮಾಡಿ ರಾಜಾಜ್ಞೆಯನ್ನು ಕೈಗೆ ಕೊಡುತ್ತಲೇ ಅದನ್ನು ನೋಡಿ ದುಃಖಾವಮಾನಗಳಿಂದ ಜೀವದಾಶೆಯನ್ನು ತೊರೆದು ತನ್ನ ಎರಡು ಕಣ್ಣುಗಳನ್ನೂ ಕಿತ್ತು ಪಕ್ಕದ ಮಂಟಪದ ಗೊಡೆಗೆ ಎಸೆದನಂತೆ. ಇಂದಿಗೂ ಆ ಗೋಡೆಯಮೇಲೆ ರಕ್ತದ ಕಲೆಯು ಅಚ್ಚಳಿಯದೆ ನಿಂತಿದೆ. ಅಲ್ಲಿಂದ ಮುಂದೆ ಕಲ್ಯಾಣಮಂಟಪವು ಪೂರ್ಣವಾಗುವುದು ಹಾಗಿರಲಿ ವಿರು

ಪಣ್ಣನೇನಾದನೆಂಬುದೇ ತಿಳಿಯುವುದಿಲ್ಲ. ರಾಜಾಜ್ಞೆಗೆ ಬಲಿಯೇ ಆದನೋ ಆತ್ಮಹತ್ಯೆಯನ್ನೇ ಮಾಡಿಕೊಂಡನೋ ಅಂತೂ ಆತನ ಹೆಸರು ಅಳಿದು ಹೋಯಿತು.

ಅಚ್ಯುತರಾಯರೇನೋ ಆಮೇಲೆ ಲೇಪಾಕ್ಷಿಗೆ ಬಂದು ದೇವಾಲಯದ ಶಿಲ್ಪಕಲಾ ಕೌಶಲವನ್ನು ನೋಡಿ ತಲೆದೂಗಿ ವಿರುಪಣ್ಣನನ್ನು ಕೊಂಡಾಡಿ ಆತನು ಧಾರೆಯೆರೆದು ಕೊಟ್ಟಿದ್ದ ಗ್ರಾಮ ಭೂಮಿಗಳನ್ನು ದೇವರಿಗೆ ಹಾಗೆಯೇ ಉಳಿಸಿ ಹೋದರು. ಈಗ ಆ ಗ್ರಾಮಗಳೂ ಭೂಮಿಗಳೂ ಒಂದೂ ದೇವರಿಗೆ ಉಳಿಯಲಿಲ್ಲ.

ಹೀಗೆ ಭಂಡಾರಿಯಾದ ವಿರುಣ್ಣನು, ಭಕ್ತ ಭಂಡಾರಿಯೂ ಆಗಿ ಜನ್ಮಸ್ಥಳವನ್ನು ಪುಣ್ಯಕ್ಷೇತ್ರವಾಗಿಯೂ ಕಲಾಪ್ರದರ್ಶನಶಾಲೆಯವಗಿಯೂ ಮಾಡಲೆಣಿಸಿದನು. ಆತನ ಇಚ್ಛೆಯು ಪೂರೈಸಿದ್ದರೆ ಈಗ ಲೇಪಾಕ್ಷಿಯು ಕಂಚಿ, ಮಧುರೆ, ತಿರುಪತಿಗಳಂತೆ ಪ್ರಸಿದ್ಧವಾಗಿ ವಿರುಪಣ್ಣನ ಹೆಸರನ್ನು ನಾಡಿನಲ್ಲಿ ಹರಡಬಹುದಾಗಿತ್ತು. ಆದರೂ ವಿರುಪಣ್ಣನ ಹೆಸರು ಅಡಗಿದ್ದರೂ ಲೇಪಾಕ್ಷಿಯ ದೇವಾಲಯವನ್ನು ನೋಡುವುದಕ್ಕೆ ಹೋದವರ ಕಣ್ಣಿಗೆ ಕಲಾಭಕ್ತಿಗಳ ಅಭಿಜ್ಞತೆಯ ವಿರುಪಣ್ಣನ ಸೌಮ್ಯಮೂರ್ತಿಯು ಕಾಣಿಸುತ್ತದೆ. ಅಲ್ಲಿಯ ಶಿಲ್ಪಕಲೆಯನ್ನು ನೋಡಿ ಆನಂದಿಸಬೇಕಲ್ಲದೆ ಬರೆಯಲು ಭಾಷೆಯಲ್ಲಿ ಮಾತುಗಳೇ ಸಾಲವು.

ಪುರಂದರದಾಸ್ — ಕನ್ನಡ ಫಿಲ್ಮ್ ಹಾಡುಗಳು

# ನಾ ಪಾ ಸ್

## (ಕ ಥೆ)

ಚಂದನಮಲ್ ತೋಡರ್‌ಮಲ್ಲನು ನಗರದಲ್ಲೆಲ್ಲಾ ಪ್ರಸಿದ್ಧ ಸಾಹುಕಾರ. ಮಾತು ಬೆಣ್ಣೆಗಿಂತ ಮೃದು. ಮನಸ್ಸು ಕಲ್ಲಿಗಿಂತ ಕಲ್ಲು. ವಜ್ರದ ಪರೀಕ್ಷೆಯಲ್ಲಿ ತನ್ನನ್ನು ಬಿಟ್ಟರೆ ಇನ್ನಿಲ್ಲವೆಂದು ಅವನಿಗೆ ಬಲು ಸೊಕ್ಕು. ಆ ಸೊಕ್ಕೂ ಒಣಜಂಭವಲ್ಲ. ಬಹಳ ಭಾರಿಯ ವರ್ತಕರು ಉತ್ತಮ ವಜ್ರವೆಂದು ಒಪ್ಪಿಕೊಂಡು ಸಾವಿರಾರು ರೂಪಾಯಿ ಬೆಲೆ ಕೊಟ್ಟರುವ ವಜ್ರಗಳನ್ನು ಇವನು ನಾಪಾಸು ಮಾಡಿಬಿಡುವನು.

ಒಮ್ಮೆ ಕಳಿಂಗಪಟ್ಟಣದ ಮರಿಲಿಂಗಶೆಟ್ಟರು ಒಂದು ಭಾರಿಯ ವಜ್ರವನ್ನು ಕೊಂಡು ಕೊಂಡರು. ಅಗೆಲ್ಲ ಸಾಮಾನ್ಯವಾಗಿ ಹಲಗೆ ವಜ್ರಗಳೇ ಇದ್ದುದು. ಅವರಿಗೆ ಏನಾದ ರೊಂದು ಹೊಸ ತರಹ ಮಾಡಿ ಹೆಸರು ಪಡೆಯಬೇಕು ಎಂದು ಆಸೆ. ಅದರಿಂದ ಒಂದು ದಪ್ಪ ವಜ್ರವನ್ನು ತೆಗೆದುಕೊಂಡು ಅದನ್ನು ಅಂತರಾಳದ ಕಟ್ಟಡ ಕಟ್ಟಿಸಿ, ಒಂದು ಉಂಗುರ ಮಾಡಿ ಹಾಕಿಕೊಂಡರು. ವಜ್ರವು ದಪ್ಪ ಅವರೇಕಾಳಿನ ದಪ್ಪ ಇತ್ತು. ನಿರ್ಮಲವಾಗಿ ತೇಜಸ್ವಿಯಾಗಿ ಕೊಂಚ ಕೆನ್ನೀರು ಮುಕ್ಕುಳಿಸಿದಂತೆ ತೋರುತ್ತಿದ್ದು ಬಹಳ ಡಿಕಾವಾಗಿತ್ತು. ಜಪ್ಪಯ್ಯ ಎಂದರೂ ಕಾಸು ಬಿಚ್ಚದ ಪ್ರಾಣಿ ಮರಲಿಂಗ ಶೆಟ್ಟರು ಅದರಮೇಲೆ ಬಹಳ ಮೋಹ ಪಟ್ಟು ಒಂದು ಸಾವಿರರೂಪಾಯಿ ಕೊಟ್ಟಿದ್ದರು. ಅವರು ಉಂಗುರ ಹಾಕಿಕೊಂಡ ಮೊದಲು ಚಿನಿವಾರ ಕಟ್ಟೆಯಲ್ಲೆಲ್ಲ ಆ ವಜ್ರದ ಮಾತೇ! "ಶೆಟ್ಟ ಎಷ್ಟಾಗಲೀ ಬುದ್ಧಿವಂತ! ಗಿಟ್ಟಿಸಿದ!" ಎಂದು ಎಲ್ಲರಿಗೂ ಸಂತೋಷ!

ಶೆಟ್ಟರಿಗೆ ತೋಡರಮಲ್ಲನಿಂದ ಹೊಗಳಿಸಿಕೊಳ್ಳಬೇಕು ಎಂದು ಆಸೆ. ಒಂದು ದಿನ ಅದೇ ಕೆಲಸವಾಗಿ ಹೋದರು. ಏನೇನೋ ಮಾತನಾಡುತ್ತ ಉಂಗುರದ ವಜ್ರವು ಅವನ ಕಣ್ಣಿಗೆ ಬೀಳುವಂತೆ ಮಾಡಿದರು. ಆದರೆ ಅವನಿಗೆ ಅವೊತ್ತು ಇನ್ನೆಲ್ಲಿಯೋ ಲೋಭ. ಅವನು ಅಷ್ಟಾಗಿ ಗಮನಿಸಲಿಲ್ಲ.

ಇನ್ನೊಂದು ದಿನ ಶೆಟ್ಟರು ಅದೇ ಕೆಲಸವಾಗಿ ಹೋದರು: "ಸೇಟ್‌ಜೀ! ಈ ಉಂಗುರವನ್ನು ನೋಡಿ. ಕರೀದಿಗೆ ಬಂದಿದೆ" ಎಂದರು. ಸೇಟನು ಎಂದಿನಂತೆ ಬಹು ಮರ್ಯಾದೆಯಾಗಿ ಮೃದುವಾಗಿ ಮಾತನಾಡುತ್ತ ಆ ಉಂಗುರವನ್ನು ತೆಗೆದುಕೊಂಡನು. ಬರಿ ಕಣ್ಣಿಂದ ನೋಡಿದನು. ತೂಕ ಮಾಡಿದನು. ಕಣ್ಣಿಗೆ ಕನ್ನಡಿ ಹಚ್ಚಿ ನೋಡಿದನು. ಬರುಬರುತ್ತ ಅವನ ಮನಸ್ಸೂ ಬೆದರಿದಂತೆ ತೋರಿ, ಮುಖವು ಗಭೀರವಾಯಿತು. ಮತ್ತೆ ಎಲ್ಲವನ್ನೂ ತೆಗೆದಿಟ್ಟು ಬರಿ ಕಣ್ಣಿನಿಂದ ಅದನ್ನು ನಾನಾ ಮುಖವಾಗಿ ತೆಗೆಸಿ ನೋಡಿ, "ಕಟ್ಟಡದ ಕೂಲಿ ಹೋದರೆ ಹೋಯಿತು. ಇದನ್ನು ತೆಗೆಸಿ ನೋಡೋಣವೆ?" ಎಂದನು.

ಶೆಟ್ಟರು ಅವನು ಎಂತಹ ಕಲ್ಲನ್ನೂ ಅಷ್ಟು ಹೊತ್ತು ಪರೀಕ್ಷಿಸಿದುದನ್ನು ಕಂಡಿರಲಿಲ್ಲ. ಅವರಿಗಂತೂ ಪರಮ ಸಂತೋಷ. ತಾನು ಒಪ್ಪಿದ ವಜ್ರ. ಅದನ್ನು ಪರೀಕ್ಷಿಸುವುದೆಂದರೆ

ಸಾಮಾನ್ಯವೆ? ಎಂದು ಅವರಿಗೆ ಎಷ್ಟೋ ಸಂತೋಷ. ಆ ಸಂತೋಷದ ಭರದಲ್ಲಿ ಒಪ್ಪಿದರು ಕಟ್ಟಡವನ್ನು ಕತ್ತರಿಸಬಹುದೆಂದರು. ಬಂಧನದಲ್ಲಿದ್ದ ರತ್ನವು ಮತ್ತೆ ಬಿಡುಗಡೆಯನ್ನು ಪಡೆಯಿತು.

ಕಲ್ಲನ್ನು ಬೇರ್ಪಡಿಸಿ ಮಾರ್ವಾಡಿಯು ಪರೀಕ್ಷಿಸಿದನು. ಕಾಲುಗಂಟಿಯ ಹೊತ್ತು ಅದನ್ನು ಏನೇನೋ ಪರೀಕ್ಷೆ ಮಾಡಿ, ಕೊನೆಗೆ ಸೂರ್ಯನ ಎದುರಾಗಿ ಹಿಡಿದನು. ಸೂರ್ಯ ಕಿರಣಗಳಲ್ಲಿ ಹೊಳೆಯುತ್ತ ರತ್ನವು ಜೀವಜ್ಯೋತಿಯಂತೆ ಪ್ರಕಾಶನನ್ನು ಬಣ್ಣ ಬಣ್ಣ ಕಿರಣಗಳನ್ನು ಚೆಲ್ಲಿ ಮೆರೆಯಿತು ಶೆಟ್ಟರ ಆನಂದಕ್ಕೆ ಪಾರವೇ ಇಲ್ಲ.

ಅಷ್ಟು ಹೊತ್ತು ಹಾಗೆ ನೋಡಿ, ಮಾರ್ವಾಡಿಯು ಗಹಗಹಿಸಿ ನಕ್ಕನು. "ಶೆಟ್ಟಿ ಸಾಬ್! ಗಲ್ತಿ ಹೋಗಯಾ! ನಾಪಾಸ್!" ಎಂದು ಮುಂದಿಟ್ಟನು.

ಶೆಟ್ಟರಿಗೆ ರೇಗಿಹೋಯಿತು. ಅವನಿಗೆ ಒಂದೇ ಸಮನೆ ಬೈಗಳ ಅಷ್ಟೋತ್ತರವನ್ನಾ ದರೂ ಸಲ್ಲಿಸಿ ಪೂಜಿಹಾಕಿಬಿಡಬೇಕು ಎನ್ನಿಸಿತು. ಆದರೆ ಚಿನಿವಾರಕಟ್ಟೆಯಲ್ಲಿ ಹೆಸರ ಪಡೆವ ವ್ಯಾಪಾರಿ. ಸರಿಸರಿಯಾದವನು. ಸಮಯವೆಂದರೆ ಲಕ್ಷರೂಪಾಯಿ ಬೇಕಾದರೂ ಚೀಟು ಕೂಡ ಇಲ್ಲದೆ, ಮಾತು ಭಾರಿಗೆ ಕೊಡುವ ಮಿತ್ರ! ಅದರಿಂದ ಒಂದ ಕೋಪವನ್ನೆಲ್ಲ ನುಂಗಿಕೊಂಡು "ಸೇಟ್‌ಜಿ! ಅದೇಕೆ! ಹಾಗೆನ್ನುವಿರಿ. ತಂದಿರುವನನು ಬಹಳ ಹೊಗಳಿ ಕೊಂಡು ಎರಡುಸಾವಿರದ ಬೆಲೆ ಹೇಳುತ್ತಾನೆ" ಎಂದರು.

ಶೇಟ್‌ಜಿಯು ನಕ್ಕನು: "ಇದು ಜಾತಿ ಬಹಳ ಭಾರಿ. ಆದರೆ ಇದರೊಳಗೆ ಒಂದು ಮಿಷ್ಟೇಕ್ ಅದೆ. ಇಲ್ಲದಿದ್ದರೆ ನಾನು ಎರಡೂವರೆಸಾವಿರ ಕೊಡುತ್ತಿದ್ದೆ."

"ಏನು ಮಿಷ್ಟೇಕ್?"

"ಒಳಗೆ ಸಣ್ಣಗೆ ಒಡದಿದೆ"

ಶೆಟ್ಟರಿಗೆ ಏನು ಹೇಳಬೇಕೋ ತೋರದೆ ಹೋಯಿತು. ಬಾಯಿ ಸುಮ್ಮನಿದ್ದರೂ ಮನಸ್ಸು ಮಾತ್ರ, ಸೇಟನ ತಂದೆತಾಯಿ ಮೊದಲಾದ ಬಂಧುವರ್ಗಗಳನ್ನೆಲ್ಲ ಸೇರಿಸಿಕೊಂಡ ಒಂದು ಗಲಭೆಯೊಳಗಾಗಿ ಬೈಗಳ ರತ್ನಕಂಬಳಿ ನೇದುಬಿಟ್ಟಿತು. ಆ ಪರ್ವತದಷ್ಟು ಕೋಪವನ್ನೂ ತಡೆದುಕೊಂಡು "ಒಡೆದಿದೆಯೆ?" ಎಂದರು.

ಮಾರ್ವಾಡಿಯು ಈ ವೇಳೆಗೆ ಒಂದು ಸಣ್ಣ ಬೀಡಿಯನ್ನು ಹಚ್ಚಿದ್ದನು. ಆ ಬೀಡಿಯನ್ನು ಪುರಸತ್ತಾಗಿ ಸೇದಿ ಆ ಹೊಗೆಯನ್ನು ಮೇಲಕ್ಕೆ ಊದಿ ಅದನ್ನು ನೋಡುತ್ತ "ಹೋ!" ಎಂದನು. ಅವನ ಮುಖದಮೇಲೆ ಗೆಲುವಿನ ಅಹಂಭಾವದ ಸಣ್ಣ ನಗೆಯು ಮಿನುಗುತ್ತಿತ್ತು.

ಶೆಟ್ಟರಿಗೆ ಕೋಪವು ಮಿತಿಮೀರಿತು. ಮುಖದ ತೇಜಸ್ಸೆಲ್ಲ ಹೋಯಿತು. ಊರಿನ ಚಿನಿವಾರರೆಲ್ಲ ಛೇಷ್ ಛೇಷ್ ಎಂದು ಹೊಗಳಿ ತನ್ನ ಬುದ್ಧಿವಂತಿಕೆಗೆ ಕೊಟ್ಟಿರುವ ಪ್ರಶಸ್ತಿಯನ್ನು ಈ ವರದೇಶಿಯು ಬೀಡಿ ಹೊಗೆಯು ಹಾಗೆ ಹಾರಿಸುತ್ತಿದ್ದಾನೆಂದರೆ ಅವರಿಗೆ ಸಹಿಸಲಾಗುವುದೆಂತು?

"ಹಾಗಾದರೆ ನೋಡಿಬಿಡೋಣ"

"ಅಲ್‌ಬತ್‌ಸೇ!"

ಸೇಟನು ತನ್ನ ವಸ್ತ್ರದ ಕೊನೆಯಲ್ಲಿ ಆ ವಜ್ರವನ್ನು ಕಟ್ಟಿಕೊಂಡು, ಅಡಗಲ್ಲಿನ ಬಳಿಗೆ ಹೋಗಿ ಅದರ ಮೇಲಿಟ್ಟು ಸಣ್ಣ ಸುತ್ತಿಗೆಯಿಂದ ಒಂದು ಸಣ್ಣ ಏಟನ್ನು ಕೊಟ್ಟನು.

ಶೆಟ್ಟರಿಗೆ ಪಂಚಪ್ರಾಣಗಳಲ್ಲಿ ಒಂದೋ ಎರಡೋ ಮಾತ್ರ ಉಳಿದಿತ್ತು. ಸೇಟನು ವಸ್ತ್ರದ ಕೊನೆಯ ಗಂಟನ್ನು ಬಿಚ್ಚಿದನು. ವಜ್ರವು ಎರಡು ಪಾಲಾಗಿತ್ತು.

ಶೆಟ್ಟರಿಗೆ ಪ್ರಾಣಸಂಕಟವಾಗುತ್ತಿದ್ದರೂ, ಹೊರಗೆ ಅಪಾರ ಸಂತೋಷವನ್ನು ಪ್ರಕಟಿಸಿ, ಅನಂತ ಕೃತಜ್ಞತೆಯನ್ನು ಸೂಚಿಸಿ, ಒಂದು ಗಳಿಗೆ ಲೋಕಾಭಿರಾಮವಾದ ಮಾತುಗಳನ್ನು ಆಡುತ್ತ ಕುಳಿತಿದ್ದು ಹೊರಟುಬಂದರು. ಅವರು ಹಿಂತಿರುಗಿ ಬರುವಾಗ, ಅವರ ಗಿರಕಿ ಚಡಾವು ಹಜ್ಜಿ ಹಜ್ಜಿಗೂ ಗಿರ್ ಗಿರ್ ಎನ್ನುತ್ತಿದ್ದುದು ಅವರ ಮನಸ್ಸಿಗೆ ನಾಪಾಸ್! ನಾಪಾಸ್! ಎಂದಂತೆ ಬೋಧವಾಗುತ್ತಿತ್ತು.

ಸೇಟನು ಶೆಟ್ಟಯು ಹೋಗುವುದನ್ನೇ ನೋಡುತ್ತ, "ಗಲ್ತಿ ಹೋಗಯಾ! ಆ ಮಿಷ್ಪೇಕ್ ಇನ್ನು ಯಾರಿಗೂ ಮಾಲುಂ ಆಗುತ್ತಿರಲಿಲ್ಲ. ಈ ಶೆಟ್ಟ ಸಾಬಕು ಬಹಳ ಘುಸಾ ಬಂದೈತೆ!" ಎಂದು ನೊಂದುಕೊಂಡನು.

ಎರಡುಮೂರು ದಿನವಾಯಿತು. ಶೆಟ್ಟರಿಗೆ ಎಲ್ಲಿ ಕುಳಿತರೂ ಎಲ್ಲಿ ನಿಂತರೂ ಎಲ್ಲಿ ಯಾರೊಡನೆ ಮಾತನಾಡುತ್ತಿದ್ದರೂ ಅವರ ಕಿವಿಯಲ್ಲಿ "ನಾಪಾಸ್! ನಾಪಾಸ್!" ಎಂದು ಒಂದೇ ನುಡಿ.

ಎಂಟುದಿನವಾಯಿತು. ಶೆಟ್ಟರು ಊಟಮಾಡಿ ಆಗತಾನೇ ವಿಶ್ರಾಂತಿಗೆ ಮಂಚ ವನ್ನೇರಿದ್ದರು. ಒಂದು ಯೋಚನೆ ಬಂತು. ಅಕ್ಕಸಾಲೆ ವೃತ್ತ್ಯಾಚಾರಿಯನ್ನು ಕರೆಸಿದರು. ಬಾಗಿಲು ಭದ್ರವಾಗಿ ಹಾಕಿ ಅವನೊಡನೆ ಏನೇನೋ ಮಾತನಾಡಿದರು. ಅವನು ಹೊರಕ್ಕೆ ಬರುವಾಗ "ನೋಡಿಕೋ. ಒಂದು ಹಸರು ನೋಟು. ತೀರ್ತೆ?" ಎಂದುದು ಮಾತ್ರ ಇತರರಿಗೆ ಕೇಳಿಸಿತು.

ಮತ್ತೆ ಎಂಟುದಿನವಾಯಿತು. ಶೆಟ್ಟರು ವೃತ್ತ್ಯಾಚಾರಿಯನ್ನು ಕರೆದುಕೊಂಡು ಸೇಟರಂಗಡಿಗೆ ಬಂದರು. ಆ ವಜ್ರದ ಸಂಗತಿ ನಡೆದಾಗಿನಿಂದ ಸೇಟರು ಶೆಟ್ಟರ ವಿಷಯದಲ್ಲಿ ಬಲು ಎಚ್ಚರಿಕೆಯಿಂದ ನಡೆಯುತ್ತಿದ್ದಾರೆ. ಯಾವ ಮಾತನಾಡಿದರೆ ಏನು ಅನರ್ಥವೋ ಎಂದು ಅಂಜಿಕೊಂಡಂತೆ, ಶೆಟ್ಟರ ಮನಸ್ಸನ್ನು ಒಲಿಸಿಕೊಳ್ಳಲು ಸಿದ್ಧವಾಗಿರುವಂತೆ ವ್ಯವಹಾರ ಮಾಡುತ್ತಿದ್ದಾನೆ.

ಸೇಟನು ಏನೋ ಯೋಚನೆಯಲ್ಲಿದ್ದು ಇವರು ಅಂಗಡಿಯೊಳಕ್ಕೆ ಬಂದುದನ್ನು ಗಮನಿಸಲಿಲ್ಲ. ಅಂಗಡಿಯೊಳಕ್ಕೆ ಬರುತ್ತಿದ್ದ ಹಾಗೆಯೇ ಮಾತನಾಡಿಸಬೇಕಾಗಿದ್ದವನು ಅವರು ಅಂಗಡಿಯೊಳಕ್ಕೆ ಬಂದು ಒಂದು ಹಜ್ಜೆಯಿಟ್ಟಮೇಲೆ ನೋಡಿ, ತಟ್ಟನೆದ್ದು ಬಂದು ಸಲಾಂ ಮಾಡಿ ಹಸ್ತಲಾಘವನ್ನು ಕೊಟ್ಟು ಹತ್ತಿರ ಕುಳ್ಳಿರಿಸಿಕೊಂಡನು. ಮಾತುಕಥೆ ಗಳಾಯಿತು.

ಶೆಟ್ಟರು ಪುಟ್ಟಾಚಾರಿಗೆ ಸನ್ನೆ ಮಾಡಿದರು. ಪುಟ್ಟಾಚಾರಿಯು ಒಂದು ಕುಂದಣದ ವಜ್ರದುಂಗುರವನ್ನು ತೆಗೆದು ಕೊಟ್ಟನು. ಸೇಟನು ಉಂಗುರವನ್ನು ನೋಡಿ ಬೆಚ್ಚಿದನು. "ಏಸಜ್ಕ್ಯಾ!" ಎಂದುಕೊಂಡು ಮೈಯೆಲ್ಲ ಕಣ್ಣಾಗಿ ನೋಡಿದನು. "ಶೆಟ್ಟಿಸಾಬ್! ಇದು ಬಹಳ ಕೋಪಾಗಿದೆ. ಇನ್ನೂ ಒಂದು ಸಲ ದೇಖೀಂಗೆ! ಆಜ್ ನಮಗೆ ದಿಲ್ ಬರಾ ಬರಿ ಇಲ್ಲ" ಎಂದನು.

ಶೆಟ್ಟರು "ಆಗಬಹುದು. ಆದರೆ ಸೇಟ್‌ಜೀ! ಇದು ನಿಮ್ಮ ಕೈಯಲ್ಲೇ ಇರಲಿ. ಮತ್ತೆ ಬರುತ್ತೇನೆ. ನಾಳೆ ನಾನು ಊರಲ್ಲಿ ಇರುವುದಿಲ್ಲ. ನಾಡಿದ್ದು ಬರುತ್ತೇನೆ" ಎಂದು ಹೇಳಿ ಹೊರಟು ಬಂದರು.

ಸೇಟನು ಮತ್ತೆ ಅಂಗಡಿಗೆ ಬರುವನೇಳೆಗೆ ಮೂರು ಗಂಟೆಯಾಗಿದೆ. ಪೋಸ್ಟ್ ಬಂತು. ಕಾಗದವನ್ನು ಒಡೆದು ನೋಡಿ "ರಾಮ್ ಹೈ! ರಾಮ್ ಹೈ" ಎಂದು ಸಮಾಧಾನದ ನಿಟ್ಟುಸಿರುಗರೆದು ಒಂದು ಬೀಡಿ ಸೇದಿದನು. ಮನಸ್ಸು ಅತ್ತಿತ್ತ ತಿರುಗಿ ಬಂದು ಶೆಟ್ಟರು ಕೊಟ್ಟಿದ್ದ ಉಂಗುರದ ಕಡೆಗೆ ತಿರುಗಿತು.

ಸೇಟನು ಉಂಗುರವನ್ನು ನೋಡಬೇಕೆಂದು ಕೈಯೆತ್ತಿದನು. ಉಂಗುರವಿದೆ. ಉಂಗುರದಲ್ಲಿ ವಜ್ರವಿಲ್ಲ. ಸೇಟನ ಎದೆಯು ಜಾರಿತು. ತಟ್ಟನೆ ಹೃದಯವು ತನ್ನ ಸ್ಥಳವನ್ನು ಬಿಟ್ಟು ಜಾರಿ, ತಟ್ಟನೆ ಕಾಲಿಗೆ ಬಂದಂತಾಯಿತು.

ಉಂಗುರದ ಕಟ್ಟಡ ಭದ್ರವಾಗಿದೆ. ಕಟ್ಟಡ ಜಾರದೆ ವಜ್ರವು ಬೀಳುವುದು ಹೇಗೆ? ಸೇಟನು ತನ್ನ ಬುದ್ಧಿಯನ್ನೆಲ್ಲ ಖರ್ಚುಮಾಡಿದನು. ಏನೂ ತೋರಲಿಲ್ಲ. ಸೇಟನಿಗೆ ಗಾಬರಿಯಾಯಿತು: "ನಾಮ್ ಬದಲ್ ಆಗಿ ಹೋದರೆ! ಶೆಟ್ಟಿಸಾಬ್ ಪರವಾಯಿಲ್ಲ. ಸಂಜಾಯಿಸಿ ಹೇಳಬೋದು. ಆದರೆ, ಆ ಸೋಮಾರಿ ಪುಟ್ಟಾಚಾರಿ?" ವಜ್ರ ಹೋಯಿತೆಂದು ಅವನಿಗೆ ದುಃಖವಿಲ್ಲ. ವಜ್ರಕ್ಕೆ ಬೇಕಾದರೆ ಹತ್ತು ವಜ್ರ ಕೊಡುವನು. ಆದರೆ, ಹೆಸರು. ಭಾರಿ ವ್ಯಾಪಾರಿ. ತನ್ನ ಕೈಗೆ ಕೊಟ್ಟದ್ದ ವಜ್ರ ಕೊಡದೆ, ಬೇರೆ ಕೊಟ್ಟನೆಂದರೆ ಎಂತಹ ಅಪಖ್ಯಾತಿ! ಇಂತಹ ಅಪಖ್ಯಾತಿ ಬಂದಮೇಲೆ ಇದ್ದರೇನು? ಹೋದರೇನು?

ಅಲ್ಲದೆ ಕುಂದಣದ ಉಂಗರದಲ್ಲಿದ್ದ ವಜ್ರ ಹೋಗುವುದೆಲ್ಲಿಗೆ? ಹೋಗಿರುವುದು ನಿಜವಾದರೂ ನಂಬುವವರಾರು? ಹೋಗುವ ಸಂಭವವನೇ ಇಲ್ಲವಲ್ಲ! ಸೇಟನಿಗೆ ಏನು ಮಾಡಬೇಕೋ ಹೊಳೆಯಲಿಲ್ಲ.

ಒಂದು ಗಂಟೆಯಾಯಿತು. ಎರಡು ಗಂಟೆಯಾಯಿತು. ಮೂರು ಗಂಟೆಯಾಯಿತು. ಸಂಜೆ ಐದು ಗಂಟೆಯಿಂದ ಯಾರುಯಾರೋ ಬಂದಿದ್ದರು. ಬಂದವರೆಲ್ಲ ಸೇಟನ ತೇಜೋಹೀನವಾದ ಮುಖವನ್ನು ಕಂಡು ಮತ್ತೊಮ್ಮೆ ಬರುವೆನೆಂದು ಹೊರಟು ಹೋಗುವರು.

ಸಂಜೆ ಏಳುಘಂಟೆಯ ವೇಳೆಗೆ ಸೇಟನಿಗೆ ಬಾಧೆಯು ತಡೆಯಲಾರದಷ್ಟು ಆಯಿತು. ಜ್ವರ ಬಂದುಬಿಟ್ಟಿದೆ. ಕಣ್ಣು ಗಿಣ್ಣು ಎಲ್ಲ ಕೆಂಪೇರಿದೆ. ಅಸಾಧ್ಯವಾದ ತಲೆನೋವು.

ಸೇಟನು ತನ್ನ ಮುತ್ಸದ್ದಿಯನ್ನು ಕರೆದು "ಶೆಟ್ಟಿಸಾಬ್‌ಕು ಜರೂರು ಅಂತ ಬುಲಾವ್" ಎಂದನು.

ಶೆಟ್ಟರು ಬಂದರು. ಇಂದು ಅವರಿಗೆ ಮುಖದಲ್ಲಿ ಕಳೆಯೇರಿದೆ. ಸೇಟನು ಬರ ಹೇಳುತ್ತಲೂ ಎಡಹುವುದೂ ಕಾಣದೆ ಅವಸರ ಅವಸರವಾತ ಬಂದರು. ಸೇಟನ ಮುಖ ನೋಡಿ ಅವರಿಗೆ ಗಾಬರಿಯಾಯಿತು. " ಏನು! ಸೇಟ್‌ಜೀ! ಏನು ಸಮಾಚಾರ?" ಎಂದರು.

ಸೇಟನು ಕಣ್ಣಲ್ಲಿ ಬಂದಿದ್ದ ನೀರು ಅತಿ ಕಷ್ಟದಿಂದ ತಡೆದು, ಅವರ ಕೈ ಹಿಡಿದು ಕೊಂಡು, ತನ್ನ ಒಳಕೋಣೆಗೆ ಕರೆದುಕೊಂಡು ಹೋದನು: ಶೆಟ್ಟರ ಎರಡು ಕೈಗಳನ್ನೂ ಹಿಡಿದುಕೊಂಡು " ಶೆಟ್ಟಿಸಾಬ್! ಗಲ್ತಿ ಹೋಗಯಾ! ಬಚಾವ್ ಮಾಡಬೇಕು" ಎಂದನು.

" ಏನು ಗಲ್ತೀ?"

" ನೀವು ಕೊಟ್ಟ ಉಂಗುರ!....." ಮುಂದಕ್ಕೆ ಮಾತು ಹೊರಡಲಿಲ್ಲ.

ಶೆಟ್ಟಿಯೂ ಗಾಬರಿಬಿದ್ದು " ಏನು ಏನಾಯಿತು?"ಎಂದನು. ಶೆಟ್ಟಗೆ ತನ್ನ ಕೈಗಳನ್ನು ಹಿಡಿದಿರುವ ಕೈಗಳು ಜ್ವರದ ತಾಪದಿಂದ ಸುಡುತ್ತಿರುವುದು ಬೋಧೆಯಾಗುತ್ತಿದೆ ಅದರಿಂದ ಅವನು ಇನ್ನಷ್ಟು ಗಾಬರಿಯಾಗಿ " ಏನು? ಏನು?" ಎನ್ನುತ್ತಿದ್ದಾನೆ. ಸೇಟ್‌ನ ಬಹು ಕಷ್ಟಪಟ್ಟು, ಬೇಲದಕಾಯಿಗಾತ್ರದ ಕಲ್ಲು ನುಂಗುವವನಿಗೀ ಕಷ್ಟಪಟ್ಟು " ವಜ್ರ....." ಎಂದನು. ಮುಂದಕ್ಕೆ ಏನು ಮಾಡಿದರೂ ಮಾತು ಹೊರಡದೆ ಕೈಯೆ ತಾರಮ್ಮಯ್ಯ ಆಡಿತು. ಕಣ್ಣೂ ಹೊರಳಿಹೊರಳಿ ಹೊರಳಿತು. ಅಂತೂ ಶೆಟ್ಟಗೆ ಅರ್ಥ ವಾಯಿತು.

ಶೆಟ್ಟಿಯು " ಇಷ್ಟೇನೆ? ಅದಕ್ಕೆ ಇಷ್ಟು ವ್ಯಥೆಪಡಬೇಕೆ? ಸೇಟ್‌ಜೀ! ಈಗಲೀ ಚೆನ್ನಾಯಿತು. ಒಂದು ವಜ್ರ ಹೋದರೆ ನಾವು ಇಷ್ಟು ಸಂಕಟಪಡುವುದೇ? ನಾನು ನೋಡಿ ಕೊಳ್ಳುತ್ತೇನೆ. ನೀವು ಯೋಚಿಸಬೇಡಿ" ಎಂದನು.

ಸೇಟನು " ಸೋನಾರಿಗೆ ಕಳಿಸಿ. ಅವನು ಹೇಳಿದ ಮೌಲ್ ಕೊಟ್ಟುಬಿಡೋಣ" ಎಂದನು.

ಶೆಟ್ಟರಿಗೆ ಅಸಾಧ್ಯವಾದ ನಗು ಬಂತು. ಆದರೂ ತಡೆದುಕೊಂಡು, " ಖಾ ಉಂಗುರ ಇಲ್ಲಿ ಕೊಡಿ" ಎಂದನು.

ಸೇಟನು, ಹೇಳಿದ ಮಾತು ಕೇಳಲು ಸಿದ್ಧವಾಗಿರುವ ಅಂಜಿದ ಎಳೆಯ ಮಗು ನಂತೆ, ತನ್ನ ಕೈಯಲ್ಲಿದ್ದ ಹರಳಿಲ್ಲದ ಉಂಗುರವನ್ನು ತೆಗೆದು ಕೊಟ್ಟನು.

ಸೇಟನಿಗೆ ಬಂದಿದ್ದ ವಿಪರೀತ ಜ್ವರವು ಅಂಗಡಿಯನ್ನು ಬಿಟ್ಟ ಶೆಟ್ಟಿಯೊಡ ಹೊರಟು ಹೋಯಿತು.

ಮರುದಿನ ಸೇಟ್‌ಜಿಗೆ ಶೆಟ್ಟರಿಂದ ಒಂದು ಚೀಟಿ ಬಂತು. ಅದರಲ್ಲಿ ವಿವ ಹೀಗೆ ಬರೆದಿತ್ತು.

" ನಿನ್ನೆ ಕೊಟ್ಟಿದ್ದ ಉಂಗುರದ ಬಾಬತು ತಾವು ಒಂದು ಕಾಸು ಬಾಕಿ ಕೊ ಬೇಕಾಗಿದೆ. ಅದು ಆ ಉಂಗುರದಲ್ಲಿದ್ದ ಕೊಡಿಯಾಲದ ಕಲ್ಲಸ್ಕಕೆ ಹರಳಿನ ಖರೀ ಕೂಡಲೇ ಕಳಿಸುವುದು."

ಸೇಟನು ಆ ಚೀಟಿಯನು ಹತ್ತುಸಲ ಓದಿಕೊಂಡನು. ಅವನಿಗೆ ನಗುವಿನ ಮೇ ನಗುವು ಬಂದು " ಛೀ! ನಾಪಾಸ್! ನಾಪಾಸ್" ಎಂದುಕೊಂಡನು.

# ನಾನು ಓದಿದ ಪುಸ್ತಕ

**ಕಾಡುಮಲ್ಲಿಗೆ:—**

ಕ್ರೌನ್ ೮ರ ೭೨ ಪುಟಗಳು. ಬೆಲೆ ೮ ಆಣೆ. ಶ್ರೀ ಸಿ. ಕೆ. ನಾಗರಾಜರಾಯರು ಬರೆದುದು. ಶ್ರೀ ಸಿ. ಕೆ. ವೆಂಕಟರಾಮಯ್ಯನವರ ಮುನ್ನುಡಿಯಿದೆ. ಮುದ್ರಣಾದಿಗಳು ಚೆನ್ನಾಗಿವೆ. (ಸತ್ಯಶೋಧನ ಪುಸ್ತಕಾಲಯ, ಬೆಂಗಳೂರು).

ಈ ಕಥಾಸಂಗ್ರಹದಲ್ಲಿ ಐದು ಕಥೆಗಳಿವೆ. ಮೊದಲನೆಯ ಕಥೆಯು ಬೀದಿಯ ಬಿಕಾರಿಗೂ ಪ್ರಸಿದ್ಧ ಸಂಗೀತ ಭಾಗವತರಿಗೂ ಗಂಟುಬೀಳುವ ಗಾಢಸ್ನೇಹವನ್ನು ಕುರಿತುದು. (ಇದಕ್ಕೆ ಕಾಡುಮಲ್ಲಿಗೆಯೆಂಬ ಹೆಸರು ಸಾರ್ಥಕವಾಗಿದೆ.) ನಿರುದ್ಯೋಗಿಯಾದ ಗಂಡ, ಅವನ ದುಃಖವನ್ನು ಸಮಸಮನಾಗಿ ಅನುಭವಿಸುವ ಹೆಂಡತಿ, ಇಂತಹವರಲ್ಲಿ ಅಚಾತುರ್ಯದಿಂದ ನಡೆದ ವಿಷಮ ಘಟನೆಯನ್ನು ಕುರಿತುದು, ''ಇನ್ನೆಲ್ಲಿಯ ರಿಪೇರಿ'' ಎಂಬ ಎರಡನೆಯ ಕಥೆ. ಮದುವೆಯೇ ಬೇಡವೆನ್ನುತ್ತಿದ್ದ ಹುಡುಗಿಯೊಬ್ಬಳು ದೇಹವನ್ನು ನೀಗಿ ಮದುವೆಯೇ ಆಗದೆ ಹೋದ ಕಥೆ. ''ಬಿಡಿ ಹೂ'' ಪ್ರಾಣಪ್ರಿಯೆಯನ್ನು ನೀಗಿಕೊಂಡು ಹುಚ್ಚನಾದ ಸಂಗೀತ ಸಾಹಿತ್ಯ ಚಿತ್ರಕಲಾ ನಿಪುಣನೊಬ್ಬನ ಜೀವನವನ್ನು ಹಿಡಿದ ''ಅಂದಿನಿಂದ'' ಎಂಬ ಕಥೆ. ಯುದ್ಧಕ್ಕೆ ಹೋಗಿದ್ದ ವೀರನ ರಮಣಿಯು ವಂಚಿತಳಾಗಿ ಆತ್ಮಹತ್ಯ ಮಾಡಿಕೊಂಡಳೆಂಬ ''ಕಾರಣಕರ್ತರಾರು?'' ಎಂಬ ಐದನೆಯ ಕಥೆ. ಹೀಗೆ ಐದು ಕಥೆಗಳಿವೆ.

ಕಥೆಗಳೆಲ್ಲವೂ ನಮ್ಮ ಸಮಾಜದಲ್ಲಿ ನಾವು ಕಾಣುವ ಜೀವನೋದ್ಯಾನದ ಹೂಗಳು. ಚೆನ್ನಾಗಿವೆ. ವಿಷಯಗಳನ್ನು ಆರಿಸಿರುವುದೂ ಹೊಸತಾಗಿದೆ; ಮನಸ್ಸಿಗೆ ಹಿಡಿಯುವಂತಿದೆ. ಪರಿಣಾಮಕಾರಿಯಾದ ಸನ್ನಿವೇಶಗಳು: ಭಾಷೆಯು ಸರಳವಾಗಿ ಚೆನ್ನಾಗಿದ್ದು ಅಲ್ಲಲ್ಲಿ ಬಲು ಚೆನ್ನಾಗಿ ಬೆಡಗಿನಿಂದ ಮೆರೆದಿದೆ. ಈ ಕಥೆಗಾರರರಿಗೆ ಉತ್ತಮ ಸಾಹಿತಿಗಳಾಗುವ ಯೋಗವುಂಟು; ಈ ತರುಣರ ಸಾಹಿತ್ಯಭವಿಷ್ಯವು ಸುಂದರವಾದುದು ಎಂದು ದೃಢವಿಶ್ವಾಸದಿಂದ ಹೇಳಬಹುದು. ಇಂತಹವರಿಗೆ ಸರ್ವರೀತಿಯಿಂದಲೂ ಉತ್ತೇಜನ ಕೊಡಬೇಕಾದ್ದು ಸಮಾಜದ ಕರ್ತವ್ಯ.

**ಭೂವಿವರಣೆಯ ಅಭ್ಯಾಸದ ಪುಸ್ತಕ:—**

ಲೇಖಕರು:—ಎಸ್. ಶ್ರೀನಿವಾಸರಾಯರು. ಪ್ರಕಾಶಕರು:—ವೆಂಕಟೇಶ್ವರ ಪಬ್ಲಿಷಿಂಗ್ ಹೌಸ್, ಬೆಂಗಳೂರು ಸಿಟಿ. ಬೆಲೆ ೦–೨–೬.

ಪ್ರೈಮರಿ ನಾಲ್ಕನೆಯ ತರಗತಿಗಾಗಿ ಪ್ರಪಂಚ, ಮೈಸೂರು ದೇಶ, ಇಂಡಿಯಾ ಚಕ್ರಾಧಿಪತ್ಯಗಳನ್ನು ಕುರಿತು ಬರೆದ ಪುಸ್ತಕ.

ಭೂವಿವರಣೆಯೆಂದರೆ ಬೋಧಕರಿಗೂ ವಿದ್ಯಾರ್ಥಿಗಳಿಗೂ ಕಗ್ಗಲ್ಲು. ಅಂತಹ ಕಗ್ಗಲ್ಲು ಶ್ರೀ ಶ್ರೀನಿವಾಸರಾಯರ ಕೈಯಲ್ಲಿ ಜೇಡಿಮಣ್ಣಾಗಿದೆ. ಮ್ಯಾಪುಗಳು, ಅದರ ಮಗ್ಗುಲಲ್ಲಿ ಸುಲಭವಾಗಿ ಟಿಪ್ಪಣಿಗಳು, ಅದಕ್ಕಿಂತಲೂ ಸುಲಭವಾಗಿ ''ಈ ವಾಕ್ಯಗಳನ್ನು ಪೂರ್ತಿಮಾಡಿ ಬರೆಯಿರಿ'' ಎಂದು ಕೇಳಿರುವ ಪ್ರಶ್ನೆಗಳು. ವಿದ್ಯಾರ್ಥಿಗಳಿಗೂ ಬೋಧಕರಿಗೂ ಅತ್ಯಂತೋಪಯುಕ್ತವಾದ ಪುಸ್ತಕ. ಬಹುಶಃ ಇದುವರೆಗೆ ಇಂತಹ ಪುಸ್ತಕ ಬಂದಿರಲಿಲ್ಲ. ರಾಯರು ಗುರುಶಿಷ್ಯರಿಬ್ಬರಿಗೂ ಉಪಕಾರ ಮಾಡಿದ್ದಾರೆಂದು ನಿಸ್ಸಂದೇಹವಾಗಿ ಹೇಳಬಹುದು.

ದೇವುಡು.

## ಅಭ್ಯಂಗಕ್ಕೆ ಯಾವ ತೈಲ ಶ್ರೇಷ್ಠ

ಅಭ್ಯಂಗ ಮಾಡಿದ ಕೂಡಲೇ ಮನಸ್ಸಿನ ಹರ್ಷವನ್ನು—ಮೆದುಳಿಗೆ ತಂಪನ್ನೂ—
ಉಂಟುಮಾಡುವ ಸುವಾಸನೆಯಿಂದ ಕೂಡಿದ ತೈಲವು ಶ್ರೇಷ್ಠ—
ಈ ಗುಣಗಳನ್ನು ಹೊಂದಿರುವುದು.

**"ಹಿಮತೈಲ"** ಶುದ್ಧ ತಿಲತೈಲದಿಂದಲೇ ತಯಾರಿಸಲ್ಪಟ್ಟ ಈ ಈ ತೈಲದ ಒಂದೇ ಒಂದು ಔನ್ಸನ್ನು ಪರೀಕ್ಷಿಸಿ ನಮ್ಮಶ್ರಮವನ್ನು ಸಾರ್ಥಕಮಾಡಿರಿ.

## ಸುಕುಮಾರ ತೈಲ

ಬಾಣಂತಿಯರಿಗೂ, ಬಸುರು ಹೆಚ್ಚಿದ ಹಾಗೆಲ್ಲಾ ತಲೆ ಕೂಲೆಯಿಂದ ಪರಳುವವರಿಗೂ ತೈಲ ಹಚ್ಚಿ ಸ್ನಾನ ಮಾಡಿದರೆ ನೆಗಡಿಯಾಗುತ್ತೆಂಬ ಭಯಪಡುವವರಿಗೂ ಮಲೇರಿಯಾಜ್ವರ ಬಿಟ್ಟಿರುವವರಿಗೂ ಕೆಮ್ಮು—ಉಬ್ಬಸಗಳಿಂದ ನರಳುತ್ತಿರುವವರಿಗೂ ಈ ತೈಲವೇ ಶ್ರೇಷ್ಠ—ಅನುಭವಸಿದ್ಧವಾಗಿದೆ.

ಮೈಸೂರು ಸಯ್ಯಾಜಿರೋಡಿನಲ್ಲಿಯೂ—ಬೆಂಗಳೂರು ಚಿಕ್ಕಪೇಟೆಯಲ್ಲಿಯೂ
ನಮ್ಮ ಬ್ರಾಂಚುಗಳಿವೆ.

ಭಿಷಗ್ರತ್ನ ಆಯುರ್ವೇದ ವಿದ್ವಾ ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.


# ಕಥೆಗಳ ಸ್ಪರ್ಧೆ

೧. ಈ ಸ್ಪರ್ಧೆಯನ್ನು ಏರ್ಪಡಿಸಿರುವುದು ತರುಣರ ಲೇಖನಾಭಿರುಚಿಯನ್ನು ಬೆಳೆಸುವುದಕ್ಕಾಗಿ. ಆದರಿಂದ ಈ ನಮ್ಮ ಪುಸ್ತಕದ ಕಥೆಗಳ ಸ್ಪರ್ಧೆಗೆ ಸೇರುವವರು ತಮ್ಮ ಸ್ವಂತ ಕಥೆಗಳನ್ನು ಕಾಗದದ ಒಂದು ಮಗ್ಗುಲಲ್ಲಿ ಬರೆದ ಪ್ರತಿ ತಿಂಗಳ ಹದಿನೈದನೆಯ ತಾರೀಖಿನೊಳಗಾಗಿ ನಮ್ಮ ಪುಸ್ತಕದ ಕಚೇರಿಗೆ, ಒಂದು ರೂಪಾಯಿ (ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ; ಸ್ಟ್ಯಾಂಪು ಕೂಡದು) ಪ್ರವೇಶಧನ ದೊಡನೆ ಕಳುಹಿಸುವುದು.

೨. ಸ್ಪರ್ಧಿಗಾರರು ಈ ನಿಯಮಗಳನ್ನು ಗಮನಿಸತಕ್ಕದ್ದು:—(೧) ಯಾವ ಕಥೆಯೂ ಸಾವಿರ ಶಬ್ದಗಳಿಗಿಂತ ದೀರ್ಘವಾಗಿರಕೂಡದು. (ಏಳಕ್ಕಿಂತ ಹೆಚ್ಚಾದ ಅಕ್ಷರವುಳ್ಳ ಮಾತುಗಳು ಎರಡು ಮಾತುಗಳು ಎಂದು ಗಣಿಸಲಾಗುವುದು.) (೨) ಲೇಖಕರ ಹೆಸರು ವಿಳಾಸಗಳನ್ನು ಬೇರೊಂದು ಲಕ್ಕೋಟಿಯಲ್ಲಿ ಇಟ್ಟಿರತಕ್ಕದ್ದು. (೩) ನಮ್ಮ ಪುಸ್ತಕದ ಸಂಪಾದಕರ ತೀರ್ಮಾನವೇ ಕೊನೆಯಾಗಿರತಕ್ಕದ್ದು.

೩. ಗೆದ್ದ ಮೊದಲನೆಯ ಎರಡನೆಯ ಕಥೆಗಳಿಗೆ ಕ್ರಮವಾಗಿ ೫, ೩ ರೂ. ಮತ್ತು ಈ ಸ್ಪರ್ಧೆಯಲ್ಲಿ ಬಂದ ಪ್ರವೇಶಧನದ ಒಂದು ಭಾಗವನ್ನೂ ಕೊಡಲಾಗುವುದು. ಹೀಗೆ ಗೆದ್ದ ಕಥೆಗಳು ನಮ್ಮ ಪುಸ್ತಕದಲ್ಲಿ ಪ್ರಕಟವಾಗುವುವು.

ಯಥೋಚಿತ ಸಮಾಧಾನ ಬಹುಮಾನಗಳು.

ಈಗಿನ ಕಾಲದಲ್ಲಿ ನಮಗೆ ಬೇಕಾದುದೇನು ?
ಭಂಗಾರದ ಒಡವೆಯೋ ? ಶೃಂಗಾರದ ಉಡುಪೋ ?
ಕಣ, ಕಿರಿಗೆ, ಸೀರೆಗಳು.

ತಮಗೆ, ತಮ್ಮ ಮುದ್ದು ಮಕ್ಕಳಿಗೆ, ಮನೆಯ ಹಿರಿಯರಿಗೆ, ಕಿರಿಯರಿಗೆ, ತರುಣರಿಗೆ, ಸರ್ವರಿಗೂ ಒಪ್ಪುವ ಉಡುಪು.

ಈ ನೇಯಿಗೆ, ಈ ಬಣ್ಣ, ಈ ಥ ಡೂತಿ, ಈ ಮಾಲು, ಈ ಬೆಲೆಗೆ ಇನ್ನೆಲ್ಲಿಯೂ ಇಲ್ಲ.

ಶುದ್ಧ ಸ್ವದೇಶೀ !
ಶ್ರೇಷ್ಠವಾದ ಮಾಲು !!

ಶ್ರೀ ರಾಮ ಸಿಲ್ಕ್ ಥ್ರೋಯಿಂಗ್
ಫ್ಯಾಕ್ಟರಿ, ಬೆಂಗಳೂರು.

**ಫ್ಯಾಕ್ಟರಿ, ಚಾಮರಾಜಪೇಟೆ.**
**ಸೋರೂಂ, ನಗರ್ತರಪೇಟೆ.**

---

## ದಿ ಮೈಸೂರು ಓರಿಯಂಟಲ್ ಬ್ಯಾಂಕ್, ಲಿಮಿಟೆಡ್,
## ಬಳೇಪೇಟೆ. ಬೆಂಗಳೂರು ಸಿಟಿ.

ನಮ್ಮಲ್ಲಿ ಎಂಡೋಮೆಂಟ್ ಡಿಪಾಜಿಟ್ ಎಂಬ
ಹೊಸ ಜಾತಿಯ ಡಿಪಾಜಿಟ್ಟು ಆರಂಭಿಸಿದ್ದೇವೆ.
ಹಣ ಶೇಖರಿಸುವುದಕ್ಕೆ ಸುಲಭವಾದ ಮಾರ್ಗ.
ವಿವರಗಳನ್ನು ವಿಚಾರಿಸಿ.
ಬ್ರಾಂಚುಗಳು:—ಕಡೂರು, ಹಾಸನ, ಹೊಳೇನರಸೀಪುರ.

# ನ ಮ್ಮ ಪು ಸ್ತ ಕ

ಸಂಪಾದಕ:—ನರಸಿಂಹ ಶಾಸ್ತ್ರಿ ದೇವುಡು, ಎಂ.ಎ.

| ಸಂಪುಟ ೨ | ಪುಷ್ಯ ಈಶ್ವರ ೧೯೩೮ ಫೆಬ್ರುವರಿ | ಸಂಚಿಕೆ ೫ |
|---|---|---|




ಇಲ್ಲಿರುವ ಜೀವಿಗಳ ಮತ್ತು ವಸ್ತುಗಳ ಹೆಸರನ್ನು ಹೇಳು
ಮೊದಲಕ್ಷರವು ಯಾವುದು? ನೋಡು.

# చిత్రకథ





# ಕೆಟ್ಟ ಕಪಿ

ಒಬ್ಬನು ಒಂದು ಕೋತಿಯನ್ನೂ ಒಂದು ಜೊತೆ ಮೇಕೆಯನ್ನೂ ಇಟ್ಟುಕೊಂಡಿದ್ದನು. ಒಂದು ದಿನ ಒಂದು ಊರಿನಿಂದ ಇನ್ನೊಂದು ಊರಿಗೆ ಅವನು ಹೋಗಬೇಕಾಗಿ ಬಂತು. ದಾರಿಗೆ ಇರಲಿ ಎಂದು ಮೊಸರನ್ನದ ಬುತ್ತಿಯನ್ನು ಕಟ್ಟಿಕೊಂಡು ಬಂದನು.

ದಾರಿಯಲ್ಲಿ ಒಂದು ಕಡೆ ನಿಂತನು. ಮೇಕೆಗಳನ್ನೂ ಕೋತಿಯನ್ನೂ ಕಟ್ಟಿಹಾಕಿ, ಮಗ್ಗುಲಲ್ಲಿ ಕೊಂಚ ದೂರದಲ್ಲಿ ಮೊಸರನ್ನದ ಬುತ್ತಿಯನ್ನು ಇಟ್ಟು ತಾನು ಕೈಕಾಲು ತೊಳೆದು ಕೊಂಡು ಬರುವುದಕ್ಕೆಂದು ಅತ್ತಕಡೆ ಹೋದನು.

ಇತ್ತ ಕೋತಿಯು ವಾಸನೆಯಿಂದಲೇ ಬುತ್ತಿಯಲ್ಲಿ ಏನಿದೆ ಎಂಬುದನ್ನು ತಿಳಿದುಕೊಂಡಿತು. ಮೆಲ್ಲಮೆಲ್ಲಗೆ ಹತ್ತಿರಕ್ಕೆ ಹೋಗಿ, ಆ ಬುತ್ತಿಯನ್ನು ಬಿಚ್ಚಿ ಅದರಲ್ಲಿ ಇದ್ದುದನ್ನೆಲ್ಲ ಪೂರೈಸಿಬಿಟ್ಟಿತು. ತನ್ನಮೇಲೆ ತಪ್ಪು ಬರಬಾರದು ಎಂದು ಆ ಕೈಯನ್ನು ಮೇಕೆಯ ಬಾಯಿಗೆ ಒರೆಸಿ, ತಾನು ಬಂದು ತನ್ನ ಪಾಡಿಗೆ ಕುಳಿತುಕೊಂಡಿತು.

ಯಜಮಾನನು ಬಂದು ನೋಡಿದರೆ ಬುತ್ತಿಯಲ್ಲಿ ಏನೂ ಇರಲಿಲ್ಲ. ಮೇಕೆಯ ಬಾಯಿ ಮುಸರೆಯಾಗಿತ್ತು. ಮುಂದಕ್ಕೆ ಏನಾಯಿತು? ಗೊತ್ತೇ ಇದೆ.

# ಚಿತ್ರಲಿಪಿ




## ಹಿಂದಿನ ಚಿತ್ರಲಿಪಿಗೆ ಉತ್ತರ

ಒಟ್ಟಕೊನೆಗೆ ರಾಮಲಕ್ಷ್ಮಣರು ಮಾಯಾಮೃಗವನ್ನು ಕೊಂದು ಹಿಂತಿರುಗಿದರು. ಆಶ್ರಮದಲ್ಲಿ ಸೀತೆಯು ಇರಲಿಲ್ಲ. ರಾಮನು ಆಕೆಯು ಏನಾದಳೋ ಎಂದು ಬಹು ದುಃಖಪಟ್ಟನು. ಕೊನೆಗೆ ಜಟಾಯುವಿನಿಂದ ಎಲ್ಲವನ್ನೂ ಕೇಳಿ ತಿಳಿದು ಸೀತೆಯನ್ನು ಹುಡುಕಿಕೊಂಡು ಬಹು ದೂರ ಪ್ರಯಾಣ ಮಾಡಿ, ಕೊನೆಗೆ ಋಷ್ಯಮೂಕಪರ್ವತದ ಬಳಿಗೆ ಬಂದರು.

# ಚಿತ್ರದ ಒಗಟು



## ಹೋಗುವ ದಾರಿ

ಶಾಮಣ್ಣನು ತನ್ನ ತಾಯಿಯ ಬಳಿಗೆ ಹೋಗಬೇಕು. ತಾಯಿಯು ಅತ್ತ ಕಡೆಯ ಕೊನೆಯಲ್ಲಿ ತಮ್ಮ ನೆಂಟರೊಡನೆ ಕುಳಿತಿದ್ದಾಳೆ. ಈ ಮಗುವು ಅಲ್ಲಿಗೆ ಹೋಗುವುದಕ್ಕೆ ದಾರಿಯನ್ನು ತೋರಿಸಿರಾ?

# ಚಿತ್ರದ ಒಗಟು



## ಹೋಗುವ ದಾರಿ

ಶಾಮಣ್ಣನು ತನ್ನ ತಾಯಿಯ ಬಳಿಗೆ ಹೋಗಬೇಕು. ತಾಯಿಯು ಅತ್ತ ಕಡೆಯ ಕೊನೆಯಲ್ಲಿ ತಮ್ಮ ನೆಂಟರೊಡನೆ ಕುಳಿತಿದ್ದಾಳೆ. ಈ ಮಗುವು ಅಲ್ಲಿಗೆ ಹೋಗುವುದಕ್ಕೆ ದಾರಿಯನ್ನು ತೋರುವಿರಾ?

# ಚುಕ್ಕಿಯ ಚಿತ್ರ

## ನರಿ

ನರಿಯು ನಾಯಿಯ ಜಾತಿಗೆ ಸೇರಿದ ಪ್ರಾಣಿ. ಮೈಯೆಲ್ಲ—ಬಾಯಿ, ಹಲ್ಲು, ಮೂತಿ, ಮುಸುಡು, ಹೊಟ್ಟೆ, ಹಿಂಗಾಲು, ಮುಂಗಾಲು, ಎಲ್ಲವೂ—ನಾಯಿಯ ಹಾಗೇ ಇದ್ದರೂ, ಬಾಲ ಮಾತ್ರ ದಪ್ಪವಾಗಿರುತ್ತದೆ. ಕಾಲಿನಲ್ಲಿ ನಾಯಿಗಿರು ವಂತೆಯೇ ಉಗುರೂ ಉಂಟು.

ನರಿಗಳಲ್ಲಿ, ಬೆಳ್ಳಗೆ, ಬೂದಿಯಾಗಿ, ಕೆಂಪಗೆ, ಇರುವ ಬಣ್ಣಬಣ್ಣದ ನರಿಗಳುಂಟು. ನರಿಗಳು ಬಹಳ ಬುದ್ಧಿವಂತ ಪ್ರಾಣಿಗಳು ಎಂದು ಎಲ್ಲರ ನಂಬಿಕೆ. ನರಿಯಿರುವ ದೇಶಗಳಲ್ಲೆಲ್ಲ ಅದರ ಬುದ್ಧಿವಂತಿಕೆಯ ಕಥೆಗಳಿವೆ. ನಮ್ಮ ದೇಶದಲ್ಲಿ ಕರಟಕ ದಮನಕ ಎಂಬ ಎರಡು ನರಿಗಳು ಒಂದು ಸಿಂಹದ ಹತ್ತಿರ ಮಂತ್ರಿಯಾಗಿದ್ದ ಕಥೆ ಪ್ರಸಿದ್ಧವಾಗಿದೆ.

ನರಿಯು ಮಾಂಸಾಹಾರಿ. ಕೋಳಿ ಮೊದಲಾದ ಹಕ್ಕಿಗಳನ್ನೂ ಮೊಲ, ಮೇಕೆಯ ಮರಿ ಮೊದಲಾದ ಪ್ರಾಣಿಗಳನ್ನೂ ತಿನ್ನುತ್ತದೆ. ಇದು ಕಾಡಿನ ಪ್ರಾಣಿ. ಇದನ್ನು ಸಾಮಾನ್ಯವಾಗಿ ಯಾರೂ ಸಾಕುವುದಿಲ್ಲ.

# ಬಣ್ಣದ ಚಿತ್ರ



## ಶಾವಂತಿಗೆ ಹೂ

ಬಿಸಿಲು ಹೆಚ್ಚಾಗಿರುವ ದೇಶಗಳಲ್ಲಿ ಹೂಗಳೂ, ಹಕ್ಕಿಗಳೂ, ಗಿಡಗಳೂ ಹೆಚ್ಚು. ಅದರಲ್ಲಿಯೂ ನಾನಾವರ್ಣದ ಹೂಗಳ ಶಾವಂತಿಗೆಯು ಉಷ್ಣದೇಶದ ಹೂಗಳಲ್ಲಿ ಒಂದು. ಬಹು ಕಾಲದಿಂದ ಇದನ್ನು ನಮ್ಮ ದೇಶದಲ್ಲಿ ಬೆಳೆಯುತ್ತಿದ್ದಾರೆ.

ಇದರಲ್ಲಿ ಬಿಳಿ, ಕಸ್ತೂರಿ, ಕೆಂಪು, ಮೊದಲಾದ ಜಾತಿಗಳಿವೆ. ಇದರಲ್ಲಿ ಸಾವಿರಾರು ದಳಗಳು. ಇದು ಬಹು ಅಂದವಾದುದು. ಇದರಲ್ಲಿ ಸುವಾಸನೆಯೂ ಉಂಟು. ಇದರ ಸೊಪ್ಪೂ ಸುವಾಸನೆಯುಳ್ಳದು. ಗೌರಿಯ ಹಬ್ಬದಿಂದ ಹಿಡಿದು, ಸಂಕ್ರಾಂತಿಯವರೆಗೂ ಈ ಹೂವು ಇರುತ್ತದೆ. ಇದನ್ನು ತೋಟಗಳಲ್ಲಿ ಬೆಳೆಯುತ್ತಾರೆ.

ಇದರ ಎಲೆಗಳನ್ನೂ ಹೂಗಳನ್ನೂ ನಮ್ಮ ದೇಶದ ಚಿತ್ರಗಳಲ್ಲಿ ಬಹಳವಾಗಿ ಬರೆಯುತ್ತಾರೆ. ಇಂತಹ ಒಡವೆಯನ್ನೂ ಮಾಡುತ್ತಾರೆ.

# ಯಾವುದು ಯಾವುದು?



ಗುರ್ತಿಸಿ. ಇವೆಲ್ಲವೂ ಮನೆಯಲ್ಲಿ ದಿನದಿನವೂ ಬಳಕೆಯಲ್ಲಿರುವ ಪದಾರ್ಥಗಳು ಇವುಗಳ ಹೆಸರೇನು? ಇವನ್ನು ಯಾವಾಗ ಉಪಯೋಗಿಸುವರು? ಹೇಳಿ ಸೋಡೋಣ.

## ಸಣ್ಣ ಕಥೆ



ಈ ಎರಡು ಚಿತ್ರದ ಮೇಲೆ ಒಂದು ಕಥೆಯನ್ನು ಬರೆಯಿರಿ. ಅದು ಐದು ವಾಕ್ಯಗಳಿಗೆ ಮೀರಬಾರದು.

# ಮನೆಗಳು



ಈ ಚಿತ್ರವು ಮರಳುಗಾಡಿನಲ್ಲಿ ತಿರುಗುವರ ಮನೆಯ ಚಿತ್ರ. ಇದನ್ನು ಬೇಕಾದರೆ ಬಟ್ಟೆಯ ಚಪ್ಪರ ಎನ್ನಬಹುದು.

ಇದರಲ್ಲಿ ಮತ್ತೊಂದು ವಿಶೇಷವಿದೆ. ಮೂರು ಕಡೆಯೂ ಮುಚ್ಚಿದೆ. ಒಂದು ಕಡೆ ಮಾತ್ರ ತೆರೆದಿದೆ. ಏಕೆ? ಬಲ್ಲೆಯಾ? ಮರಳುಗಾಡುಗಳಲ್ಲಿ ಆಗಾಗ ಬಲವಾದ ಗಾಳಿಯು ಬೀಸುತ್ತದೆ. ಆ ಗಾಳಿಯು ಗಾಡಿ ಗಾಡಿ ಮರಳು ತಂದು ಸುರಿದು ಬಿಡುತ್ತದೆ. ಅದರಿಂದ ಅಲ್ಲಿ ಸಣ್ಣ ಗುಡಾರಗಳನ್ನು ಹಾಕಿದರೆ ಉಳಿಯುವುದೇ ಕಷ್ಟ. ಅದರಿಂದ ಹೀಗೆ ಉದ್ದವಾಗಿರುವ ಬಟ್ಟೆಯ ಚಪ್ಪರಗಳನ್ನು ಹಾಕುತ್ತಾರೆ. ಹಾಗಿದ್ದರೆ, ಒಳಗೆ, ಸಣ್ಣ ಸಣ್ಣ ಪ್ರಾಣಿಗಳೂ ಮನುಷ್ಯರೂ ಸೇರಿಕೊಳ್ಳಬಹುದು.

ಮರಳುಗಾಡುಗಳು, ಆಫ್ರಿಕಾ, ಏಷ್ಯಾಯಗಳಲ್ಲಿ ಮಾತ್ರ ಉಂಟು, ಆಫ್ರಿಕಾದಲ್ಲಿ ಉತ್ತರದಲ್ಲಿ ಈಜಿಪ್ಟಿಗೆ ಪಶ್ಚಿಮವಾಗಿ ಸಹರಾ ಎಂಬ ಭಾರಿಯ ಮರಳುಗಾಡು ಇದೆ. ಏಷ್ಯಾದಲ್ಲಿ ಅರೇಬಿಯ, ಮಧ್ಯ ಏಷ್ಯಗಳಲ್ಲಿ ಇಂತಹ ಮರಳುಗಾಡುಗಳಿವೆ. ಅಲ್ಲಿ ಹುಲ್ಲೂ ನೀರೂ ಕೂಡ ಇರುವುದಿಲ್ಲ.



# ವಿನೋದಗಣಿತ



೧. ಮರದಂಗಡಿ ಪುಟ್ಟಣ್ಣನವರು ಕಾಡಿನಿಂದ ಮರವನ್ನು ತುಂಬಿಸಿಕೊಂಡು ಬಂದರು. ಗಾಡಿ ಬಾಡಿಗೆ ೩ ರೂಪಾಯಿ ಮರಕ್ಕೆ ೧೫ ರೂಪಾಯಿ ಸುಂಕ ೨ ರೂಪಾಯಿ ಕೊಟ್ಟರು. ದಾರಿಯಲ್ಲಿ ಅವರಿಗೆ ತಿಂಡಿ ತೀರ್ಥಕ್ಕೆ ೨ ರೂಪಾಯಿ ಆಯಿತು. ಒಟ್ಟು ಆ ಮರದ ಬೆಲೆ ಎಷ್ಟು ಆಯಿತು?

೨. ಅಕ್ಕಿ, ಬೇಳೆ ಎರಡೂ ತರಬೇಕೆಂದು ರಾಮರಾಯರು ಅಂಗಡಿಗೆ ಹೋದರು. ಅಲ್ಲಿ ಪಲ್ಲಾ ಒಂದಕ್ಕೆ ೧೬ ರೂಪಾಯಂತೆ ಮುಕ್ಕಾಲು ಪಲ್ಲಾ ಅಕ್ಕಿ, ಪಲ್ಲಾ ಒಂದಕ್ಕೆ ೨೦ ರೂಪಾಯಂತೆ ಕಾಲು ಪಲ್ಲಾ ಬೇಳೆ ತಂದರು. ಎರಡೂ ಸೇರಿ ಅಂಗಡಿಯವನಿಗೆ ಅವರು ಎಷ್ಟು ರೂಪಾಯಿ ಕೊಡಬೇಕು?

೩. ದೇವರ ಪೂಜೆಗೆಂದು ಒಂದು ತಟ್ಟೆಯಲ್ಲಿ ಬಾಳೆಯಹಣ್ಣು, ತೆಂಗಿನಕಾಯಿ, ಕಿತ್ತಳೆಹಣ್ಣು ಇಟ್ಟಿದೆ. ತೆಂಗಿನಕಾಯಿನ ಎರಡರಷ್ಟು ಕಿತ್ತಳೆ ಹಣ್ಣು, ತೆಂಗಿನಕಾಯಿನ ಐದರಷ್ಟು ಬಾಳೆಯ ಹಣ್ಣು ಇವೆ. ಒಟ್ಟು ಎಂಟು ಇದ್ದರೆ ಯಾವ ಯಾವುದು ಎಷ್ಟೆಷ್ಟು ಇದೆ?



೪. ಶಾಮರಾಯನು ಈ ಊರಿನಿಂದ ಹೊರಟು ಮೈಸೂರಿಗೆ ಹೋದನು. ಅರ್ಧ ದಾರಿ ಬೈಸಿಕಲ್ ಮೇಲೆ, ಮೂರನೇ ಒಂದು ದಾರಿ ಮೋಟಾರ್ ಮೇಲೆ, ಉಳಿದ ೧೫ ಮೈಲಿ ನಡೆದು ಕೊಂಡು ಹೋದನು. ಹಾಗಾದರೆ, ಇಲ್ಲಿಂದ ಮೈಸೂರಿಗೆ ದೂರವೆಷ್ಟು?

## ಹಿಂದಿನ ಲೆಕ್ಕಗಳಿಗೆ ಉತ್ತರ

೧. ಮಲ್ಲೇಶ್ವರಕ್ಕೆ ಬಸವನಗುಡಿಯಿಂದ ಮೂರು ಮೈಲಿ.

೨. ೬ ಗೊನೆಗೆ ಒಂದಕ್ಕೆ ೧೬ರಂತೆ ಒಟ್ಟು ೯೬ ಕಾಯಿಗಳಿವೆ.

(ಈ ಸಲ ಕೊಟ್ಟಿರುವ ಲೆಕ್ಕಗಳು ಕ್ರಮವಾಗಿ ಪ್ರೈಮರಿ ೧,೨,೩,೪ ನೆಯ ತರಗತಿಗಳಿಗೆ.)

# ಆ ಕಾ ಶ ದ ಲ್ಲಿ

ಕು ಜ

ಈ ಸಲ ಕೊಟ್ಟಿರುವ ಚಿತ್ರವು ಕುಜನದು. ಕುಜ ಮಂಡಲವು ಭೂಮಂಡಲಕ್ಕಿಂತ ಚಿಕ್ಕದು. ಆದರೂ ಅದರ ಸುತ್ತಲೂ ಎರಡು ಚಂದ್ರಮಂಡಲಗಳು ಸುತ್ತುತ್ತವೆ.

ಕುಜ ಮಂಡಲದಲ್ಲಿಯೂ ಇಲ್ಲಿ ಆಗುವಂತೆಯೇ ಬೇಸಗೆ, ಚಳಿಗಾಲಗಳು ಆಗುತ್ತವೆ. ಚಳಿಗಾಲದಲ್ಲಿ ಉತ್ತರ ಧ್ರುವ ದಕ್ಷಿಣ ಧ್ರುವಗಳಲ್ಲಿ ಹಿಮವು ರಾಶಿ ರಾಶಿಯಾಗಿ ಬಿದ್ದಿದ್ದು, ಬೇಸಗೆಯು ಬರುತ್ತಲೇ ಅದೆಲ್ಲ ಕರಗಿಹೋಗುತ್ತದೆ.

ದುರ್ಬೀನಿನಲ್ಲಿ ನೋಡಿದರೆ, ಕುಜ ಗ್ರಹದಲ್ಲಿ ಧ್ರುವಗಳಿಂದ ನೇರವಾದ ಗೆರೆಗಳನ್ನು ಎಳೆದಂತೆ ಕಾಣುತ್ತದೆ. ಇವನ್ನು ವಿದ್ವಾಂಸರು "ಕಾಲುವೆಗಳು" ಎನ್ನುತ್ತಾರೆ. ಇನ್ನು ಕೆಲವರು, "ನಾವು ಅಷ್ಟು ದೂರ ನೋಡುವಾಗ, ನಮ್ಮ ಕಣ್ಣಿನ ನೋಟದಲ್ಲಿ ಹೆಚ್ಚು ಕಡಿಮೆಯಾಗಿ ಹೀಗೆ ಗೆರೆಗಳಂತೆ ಕಾಣಿಸುವುದುಂಟು. ಗೆರೆಗಳು ಅಲ್ಲಿಲ್ಲ" ಎನ್ನುತ್ತಾರೆ.

ಕುಜ ಮಂಡಲದಲ್ಲಿ ಜನಗಳು ಇದ್ದಾರೆಯಂತೆ! "ಆದರೆ ಅಲ್ಲಿ ನೀರು ಸಿಕ್ಕುವುದು ಕಷ್ಟ! ಗಾಳಿಯು ಬಲು ತೆಳು. ಇದರಿಂದ ಅವರು ಬದುಕುವುದು ಬಹು ಕಷ್ಟ! ಬರುಬರುತ್ತ ಆ ಮಂಡಲವು ನಿರ್ಜನವಾಗಿ ಹೋಗುವುದು" ಎಂದು ವಿದ್ವಾಂಸರು ಹೇಳುತ್ತಾರೆ.

# ವಿಜ್ಞಾನ ಪಂಡಿತ



## ಕಣ್ಣು

ಕಣ್ಣಿನಲ್ಲಿ ನೀರು ಬರುವುದು ಎಲ್ಲರಿಗೂ ಗೊತ್ತು. ಸಂತೋಷವಾದರೆ, ದುಃಖವಾದರೆ, ಅಂಜನ ಹಾಕಿಕೊಂಡರೆ, ಖಾರ ತಿಂದರೆ ಕಣ್ಣಿನಲ್ಲಿ ನೀರು ಧಾರಾಳವಾಗಿ ಬರುತ್ತದೆ. ಈ ನೀರು ಎಲ್ಲಿಂದ ಬರುತ್ತದೆ?

ಚಿತ್ರವನ್ನು ನೋಡು. ಇದರಲ್ಲಿ ಕಣ್ಣಿನ ಮೇಲ್ಗಡೆಯಲ್ಲಿ ಕೆಲವು ಗಂಟುಗಳಿರುವುದು ಕಂಡುಬರುತ್ತವೆ. ಇವು ಕಣ್ಣೀರನ್ನು ತಯಾರಿಸುವುವು. ಇವು ಯಾವಾಗಲೂ ಸಣ್ಣಗೆ ನೀರನ್ನು ಬಿಟ್ಟು ಕಣ್ಣನ್ನು ತೊಳೆಯುತ್ತಲೇ ಇವೆ. (ಬಾಯಲ್ಲಿ ನೀರು ಮೂರು ಹೊತ್ತೂ ಊರುವಂತೆ ಮಾಡುವ ಲಾಲಾಜಲಗ್ರಂಥಿಗಳಂತೆ.) ಸಂತೋಷವಾದಾಗ, ದುಃಖವಾದಾಗ, ಕಣ್ಣಿಗೆ ಏನಾದರೂ ಬಿದ್ದಾಗ ಅದನ್ನು ತೊಳೆಯುವುದಕ್ಕೆ, ಈ ಗಂಟುಗಳು ಹೆಚ್ಚು ನೀರನ್ನು ಬಿಡುತ್ತವೆ. ಆ ಹೆಚ್ಚು ನೀರು ಕಣ್ಣನ್ನು ತೊಳೆದುಕೊಂಡು ಈಚೆಗೆ ಸುರಿದುಹೋಗುತ್ತದೆ.

ಮನುಷ್ಯನಾಗಲೀ ಮೃಗವಾಗಲೀ ಬದುಕಿರುವವರೆಗೂ ಈ ಕಣ್ಣಿನ ಗಂಟುಗಳು ಕೆಲಸ ಮಾಡುತ್ತಲೇ ಇರುತ್ತವೆ. ಇವಕ್ಕೆ ರೋಗ ಬಂದರೆ, ಆಗ ನೀರು ಹೆಚ್ಚಾಗಿ ಸೋರುತ್ತದೆ.

# ನಿಮಗೆಗೊತ್ತೇ?

೪. ಅಂಕಿಗಳನ್ನು ಮೊದಲು ಕಂಡುಹಿಡಿದವರು ಯಾರು?

ಅಂಕಿಗಳನ್ನು ಕಂಡುಹಿಡಿದು ಅವುಗಳನ್ನು ಗಣಿತದಲ್ಲಿ ಉಪಯೋಗಿಸಿ
ವರು ಭಾರತೀಯರು ಎಂದರೆ ಇಂಡಿಯದ ನಿವಾಸಿಗಳು. ಇವರಿಂದ ಅವ
ಅರಬ್ಬಿಯವರು ಕಲಿತರು. ಅವರಿಂದ ಯೂರೋಪಿಯರ್ಯರು ಕಲಿತರು.

ಈ ಅಂಕಿಗಳನ್ನು ಕಲಿಯುವುದಕ್ಕೆ ಮೊದಲು ಯೂರೋಪಿನವರೆಲ್ಲ ರೋಮ
ನ್ನರ ಅಂಕಿಗಳನ್ನೇ ಉಪಯೋಗಿಸುತ್ತಿದ್ದರು. ರೋಮನ್ನರು ಅಂಕಿಗಳಿಗೆ ಬ
ಲಾಗಿ ಅಕ್ಷರಗಳನ್ನೇ ಬರೆಯುತ್ತಿದ್ದರು. ಅವರು ನಮ್ಮಂತೆ ದಶಕಗಳಲ್ಲಿ ಎಣಿಸ
ಏದನ್ನೇ ಇಟ್ಟುಕೊಂಡಿದ್ದರು.

ರೋಮ್ ಅಂಕಿಗಳಿವು. I (ಒಂದು) V (ಐದು) X (ಹತ್ತು) L (ಐದ
C (ನೂರು) D (ಐನೂರು) M (ಸಾವಿರ). ಸಾವಿರದಒಂಭೈನೂರ ಮೂವತ್ತೇ
ಬರೆಯಬೇಕಾದರೆ, MCMXXXVII ಎಂದು ಬರೆಯಬೇಕು. CM ಎಂದರೆ 1000
100 ಕಡಿಮೆ XXX ಎಂದರೆ ಮೂರು ಹತ್ತು ಮೂವತ್ತು V ಎಂದರೆ ಐದ
II ಎರಡು.

ಅರಾಬಿಕ್ ಅಂಕಿಗಳಿವು 1,2,3,4,5,6,7,8,9,10. ಕನ್ನಡದ ಅಂಕಿಗಳಿವು—
೧,೨,೩,೪,೫,೬,೭,೮,೯,೧೦. ದೇವನಾಗರಿಯಲ್ಲಿ ತಮಿಳಿನಲ್ಲಿ ಬೇರೆ ಬೇರೆ ಅಂ
ಗಳಿವೆ. ಇಂಡಿಯದಲ್ಲಿ ದೇವನಾಗರಿಯ ಲಿಪಿಯನ್ನೋ ಅಥವಾ ಅದರಿಂದ ಹುಟ್ಟಿ
ಇತರ ಲಿಪಿಗಳನ್ನೋ ಉಪಯೋಗಿಸುವವರೆಲ್ಲ ಈ ದೇವನಾಗರಿಯ ಅಂಕಿಗಳನ್ನೆ
ಉಪಯೋಗಿಸುತ್ತಾರೆ.

ಈಗೀಗ, ಎಲ್ಲರೂ ಅರಾಬಿಕ್ ಅಂಕಿಗಳನ್ನೇ ಉಪಯೋಗಿಸುತ್ತಾರೆ

# ಕಳ್ಳರ ಕಳ್ಳ

ತೆನ್ನಾಲಿ ರಾಮಕೃಷ್ಣನು ವಿಜಯನಗರದ ಅರಸುಗಳ ವಿನೋದಗಾರನು. ಅವನನ್ನು ಕಂಡರೆ ಅರಸರಿಗೆ ಬಹಳ ವಿಶ್ವಾಸ. ಅವನಿಗೆ ಬೇಕಾದ ಹಾಗೆ ಬಹು ಮಾನಗಳನ್ನು ಕೊಟ್ಟು ಗೌರವಿಸುತ್ತಿದ್ದರು.

ಒಂದು ಇರುಳು ಅವನ ಮನೆಗೆ ಕಳ್ಳರು ಬಿದ್ದರು. ರಾಮಕೃಷ್ಣನಿಗೆ ಕಳ್ಳರು ಬಿದ್ದಿರುವ ಸುಳಿವು ತಿಳಿಯಿತು. " ಉಪಾಯ ಮಾಡದಿದ್ದರೆ ಉಳಿಯುವಂತಿಲ್ಲ " ಎಂದುಕೊಂಡು, ಮಲಗಿದ್ದ ಹೆಂಡತಿಯನ್ನು ಎಬ್ಬಿಸಿದನು. ಕಳ್ಳರಿಗೆ ಕೇಳುವಂತೆ, "ಎಲೆ! ಎಲೆ! ಏಳು! ಮನೆಗೆ ಕಳ್ಳರು ಬಿದ್ದಿರುವ ಹಾಗೆ ಕನಸಾಯಿತು. ಊರು ತುಂಬ ಕಳ್ಳರ ಭೀತಿ. ದಿಟವಾಗಿಯೂ ಕಳ್ಳರು ಬಿದ್ದು ಇದ್ದುಬಿದ್ದುದನ್ನೆಲ್ಲ ಹೊತ್ತುಕೊಂಡು ಹೋದಾರು. ಈಗಲೇ ಜಾಗ್ರತೆಯಾಗಿರುವುದು ಒಳ್ಳೆಯದು. ಅದರಿಂದ ಇರುವ ನಗನಟ್ಟೆಲ್ಲ ಒಂದುಪೆಟ್ಟಿಗೆ ಹಾಕು. ಅದನ್ನು ತೆಗೆದುಕೊಂಡು ಹೋಗಿ ತೋಟದಲ್ಲಿರುವ ಏತದ ಭಾವಿಗೆ ಹಾಕಿರೋಣ. ಕಳ್ಳರ ಭೀತಿ ಹೋದ ಮೇಲೆ ಅದನ್ನು ತೆಗೆದು ಕೊಳ್ಳೋಣ." ಎಂದನು. ಹೆಂಡತಿಯು ಹಾಗೇ ಆಗಲೆಂದು ಒಂದು ಪೆಟ್ಟಿಗೆಯ ತುಂಬ ಏನೇನೋ ತಂದು ತುಂಬಿದಳು. ಗಂಡ ಹೆಂಡತಿ ಇಬ್ಬರೂ ಬಹು ಜೋರು

ದಿಂದ ಆ ತುಂಬಿದ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋಗಿ ತೋಟದ ಭಾವಿಗೆ ಹಾಕಿ ಬಾಗಿಲು ಭದ್ರವಾಗಿ ಹಾಕಿಕೊಂಡು ಬಂದು ಮಲಗಿದರು.

ಇದಿಷ್ಟನ್ನೂ ಕೇಳಿದ್ದ ಕಳ್ಳರು "ತಮ್ಮ ಕೆಲಸವು ಸುಲಭವಾಯಿತು" ಎಂದು ಹಿಗ್ಗಿದರು. "ಇನ್ನೇನು? ತೋಟದ ಭಾವಿಗಿಳಿಯುವುದು. ಪೆಟ್ಟಿಯನ್ನು ಎತ್ತಿ ಬಿಡುವುದು" ಎಂದು ಒಬ್ಬನು ಹೇಳಿದನು. ಇನ್ನೊಬ್ಬನು, "ಮೊಂಕೇ! ನೀನೇನು ಬಲ್ಲೆ? ಈ ಭಾವೀಲಿ ನೀರು ಸಮುದ್ರ ಇದ್ದಂಗೆ ಅದೆ. ಇಳಿಯೋಕೆ ಆಗೋಲ್ಲ?" ಎಂದನು. ಮತ್ತೊಬ್ಬನು, "ಹಾಗಾದರೆ ಸದ್ದು ಗದ್ದಲವಿಲ್ಲದೆ ಯಾತ ಎತ್ತಿ ಬಿಡೋವ, ಅದೆಷ್ಟು ಹೊತ್ತು? ನೀರು ಎತ್ತಿ ಬುಟ್ಟರೆ, ಪೆಟ್ಟಿ ಕಾಣಸತದೆ, ಎತ್ಕೊಂಡು ಬುಡೋದು" ಎಂದನು. ಅದೇ ಸರಿಯೆಂದು ಎಲ್ಲರೂ ಗೊತ್ತುಮಾಡಿ, ಏತ ಎತ್ತಲು ಹೊರಟರು.

ರಾಮಕೃಷ್ಣನೂ ಹೊಂಚು ಹಾಕಿಕೊಂಡು ಇವರೇನು ಮಾಡುವರೋ ಎಂದು ಕಾದು ಕುಳಿತಿದ್ದವನು ಇದೇ ಸಮಯ ಎಂದು ಗುದ್ದಲಿ ತೆಗೆದುಕೊಂಡು ಹೊರಟನು. ಕಳ್ಳರು ಒಂದು ಝಾವ ಹೊತ್ತು ಮೈಮುರಿದು ದುಡಿದು ನೀರೆತ್ತಿದರು. ರಾಮಕೃಷ್ಣನು ನೀರನ್ನೆಲ್ಲ ಒಂದು ತೊಟ್ಟಿ ಪೋಲಾಗದಂತೆ ತಟ್ಟತಟ್ಟನೆ ಗಿಡಗಳ ಪಾತಿಗಳಿಗೆ ತಿರುವುತ್ತಾ ಬಂದನು.

ಹೀಗೇ ಕೋಳಿಯು ಕೂಗುವವರೆಗೂ ನಡೆಯಿತು. ಕಳ್ಳರು "ಎಲ್ಲರೋ! ತಟಪಟನೆ ಮಾಡಿ! ಹೊತ್ತು ಹುಟ್ಟೋ ಹೊತ್ತಾಯಿತು" ಎಂದು ಇನ್ನೂ ಬಿರುಸಾಗಿ ದುಡಿದರು.

ಅಲ್ಲಲ್ಲಿ ಜನರು ಓಡಾಡುವ ಸದ್ದೂ ಕೇಳಿಸಿತು. ಇನ್ನು ದಿಗಿಲಿಲ್ಲವೆಂದು ನಂಬಿ ಕೆಯಾದಮೇಲೆ ರಾಮಕೃಷ್ಣನು "ಅಯ್ಯಾ ಪುಣ್ಯಾತ್ಮರಿರಾ! ನೀರೆತ್ತಿದ್ದು ಸಾಕು. ನಿಮ್ಮ ಪುಣ್ಯದಿಂದ ತೋಟಕ್ಕೆಲ್ಲ ಭರ್ತಿ ನೀರಾಯಿತು. ಇನ್ನು ಒಂದು ವಾರ ನೀರು ಕಟ್ಟಬೇಕಾಗಿಲ್ಲ" ಎಂದು ಕೂಗಿದನು.

ಕಳ್ಳರಿಗೆ ತಾವು ಪೆಚ್ಚು ಬಿದ್ದೆವೆಂದು ಆಗ ತಿಳಿಯಿತು. ಒಬ್ಬರ ಮೊಕ ಇನ್ನೊಬ್ಬರು ನೋಡಿಕೊಳ್ಳುತ್ತ ಹೇಳದೆ ಕೇಳದೆ, ಉಳಿದರೆ ಸಾಕು ಎಂದುಕೊಂಡು ಕಾಲಿಗೆ ಬುದ್ಧಿ ಹೇಳಿದರು.

ರಾಮಕೃಷ್ಣನು ನಗುತ್ತ ಮನೆಗೆ ಬಂದನು.

## ಸಣ್ಣ ಕಥೆ

೧. ಕರಡಿಯೂ ಕಪಿಯೂ ದೊಂಬರ ಆಟವನ್ನು ಆಡಿದುವು.
೨. ಕರಡಿಯು ಪುಂಗಿಯನ್ನು ಬಾರಿಸಿಕೊಂಡು ಹಾವನ್ನು ಆಡಿಸಿತು.
೩. ಕಪಿಯು ಡೋಲು ಬಾರಿಸಿತು.
೪. ನಿದ್ದೆ ಮಾಡುತ್ತ ಮಲಗಿದ್ದ ಮೊಲಕ್ಕೆ ನಿದ್ದೆ ಕೆಟ್ಟಿತು.
೫. ಅದು "ನನ್ನ ನಿದ್ದೆ ಕೆಡಿಸುವಿರಾ?" ಎಂದು ದೊಣ್ಣೆ ತೆಗೆದುಕೊಂಡು ಹೊಡೆಯುವುದಕ್ಕೆ ಬಂದಿತು.

# ಕನ್ನಡಿಗರ ಕಣಜ

" ಮಗೂ ! ಯಾರಾದರೂ ಬಂದು ಒಂದು ಕತೆ ಹೇಳಪ್ಪ !
ಒಂದು ಹಾಡು ಹೇಳಮ್ಮ " ಎಂದರೂ ಎನ್ನಿ.
ನಗಿಸಿ ಕುಣಿಸುವಂತಹ ಕತೆ, ಹಾಡು, ನಿಮಗೆ ಬರದಿದ್ದರೆ ಎಂತಹ ಅವಮಾನ !
ಆದ್ದರಿಂದ ಇವತ್ತೇ ಕನ್ನಡಿಗರ ಕಣಜದ ಮೆಂಬರಾಗಿ.
ವರ್ಷಕ್ಕೆ ಆರೇ ಆಣೆ, ತಿಂಗಳಿಗೆ ಆರೇ ಕಾಸು.
ಸೊಗಸಾದ ಕತೆ, ಹಾಡುಗಳ ಪುಸ್ತಕ ಬಿಟ್ಟ ನಾಲ್ಕು.
ಸರಸ್ವತಿ ಕಾರ್ಯಾಲಯ, ಚಾಮರಾಜಪೇಟೆ, ಬೆಂಗಳೂರು ನಗರ.

## ಕರ್ನಾಟಕ ಬುಕ್ಕ್ ಡಿಪೋ, ಗಾಳಿಗೂಡಾ, ಹೈದರಾಬಾದು. (ದಕ್ಷಿಣ)

**ನಿಜವಾದ ಕರ್ನಾಟಕ ಬಂಧುಗಳೇ,**

ಕೇವಲ ಕನ್ನಡ ವಾಙ್ಮಯವನ್ನು ಸುಲಭ ರೀತಿಯಲ್ಲಿ ತಮ್ಮೆಲ್ಲರಿಗೂ ಒದಗಿಸುವುದೇ ನಮ್ಮ ಧ್ಯೇಯ. ನಮ್ಮ ಸೇವೆಯನ್ನು ಸ್ವೀಕರಿಸಿರಿ. ನಮ್ಮಲ್ಲಿ ಕನ್ನಡ ಆಧುನಿಕ, ಪುರಾತನ ಎಲ್ಲ ಬಗೆಯ ಸಾಹಿತ್ಯದ ನಿಧಿಯ ಸಂಗ್ರಹವಿದೆ. ಪುಸ್ತಕಗಳಿಗಾಗಿ ಇಂದೇ ಬರೆಯಿರಿ.

**ಒಡೆಯರು:—ಶ್ರೀ. ಬಿ. ಜಿ. ಚಿಮ್ಮಲಗಿಯವರು.**

# ಶರಣ ಸಾಹಿತ್ಯ

## (ಸಚಿತ್ರ ಮಾಸಪತ್ರಿಕೆ)

**ಸಂಪಾದಕ:—ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿ.**

ಹಿಂದೂಧರ್ಮ, ಕನ್ನಡಸಾಹಿತ್ಯ, ಲಿಂಗವಂತ ಸಂಸ್ಕೃತಿಗಳ ಸಂಬಂಧವಾಗಿ ವಿದ್ವಾಂಸರಿಂದ ಲೇಖನಗಳು ಬರುತ್ತವೆ. ಈ ಪತ್ರಿಕೆಯ ಮುಖದಿಂದ ಕನ್ನಡ ಮತ್ತು ಸಂಸ್ಕೃತ ಪ್ರಾಚೀನ ಗ್ರಂಥ ಪ್ರಚಾರವೂ ನಡೆಯುತ್ತದೆ. ಕರ್ನಾಟಕದ ಮೂವತ್ತುಮಂದಿ ವಿದ್ವಾಂಸರು ಈ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಸೇರಿ ಇದರ ಉನ್ನತಿಗೆ ಸಹಾಯಕರಾಗಿದ್ದಾರೆ.

ವಾರ್ಷಿಕ ಚಂದಾ ರೂ. ೩—೮—೦ ಬಿಡಿ ಸಂಚಿಕೆ ೦—೫—೦.

**ವಿಳಾಸ:—ಸಂಪಾದಕ "ಶರಣ್ಯ ಸಾಹಿತ್ಯ"**
**ಶರಣ ಸಾಹಿತ್ಯ ಕಾರ್ಯಾಲಯ,**
ಮುಲ್ಲೇಶ್ವರಂ, ಬೆಂಗಳೂರು.

**RESERVED**

ದಿ ಇಂಡಿಯನ್ ಮ್ಯೂಚುಅಲ್

ಅಷ್ಯೂರೆನ್ಸ್ ಕಂಪೆನಿ,

ಮದರಾಸು.

---

ಆಡಳಿತದ ಖರ್ಚು ಅತ್ಯಲ್ಪ

ಉಳಿಯುವ ಲಾಭವೆಲ್ಲ

ಪಾಲಿಸಿದಾರರಿಗೆ.

---

ಹೆಚ್ಚು ವಿಚಾರಗಳಿಗೆ ಬರೆಯಿರಿ.

ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆ, ಬೆಂಗಳೂರು.

d & Published by Narasimha Sastry Devudu, M.A., Shankarapuram
Bangalore City. Printed at Sree Venkatadri Press, Bangalore City.

1938

ವರ್ತಕ ಮಂದಿಣ

DECEMBER 1938.

# VARTAKA DHUREENA

MONTHLY JOURNAL, UDIPI, S. INDIA.



## Maintain the Depth of your Resources

EXPERIENCE TELLS US THAT DEEP RIVERS BECOME SHALLOW BY ACCUMULATION OF SAND AND PERIODICAL DREDGING IS REQUIRED TO MAINTAIN THER DEPTH LIKEWISE, THE RESOURCES OF MANY A FAMILY GROW SHALLOW BY ACCUMULATION OF DEBTS THESE DEBTS HOWEVER IF CLEARED PERIODICALLY THE DEPTH OF THE RESOURCES CAN BE MAINTAINED CONSULT US AND WE SHALL EXPLAIN TO YOU THE VARIOUS WAYS OF CLEARING SUCH DEBTS TO LEAD A PLANNED LIFE AND MAINTAIN THE DEPTH OF THE FAMILY RESOURCES

**The Canara Industrial & Banking Syndicate Ltd.**

[illegible]

ESTD 1925

Head Office Mukunda Nivas UDIPI (S India)

MEMBER

RESERVE BANK OF INDIA

BANKERS CLEARING HOUSE BOMBAY

| | |
|---|---|
| Authorised Capital | Rs 10 00 000 |
| Issued Capital | 8 00 000 |
| Subscriped Capital | 7 74 500 |
| Paid up Capital | 3 86 880 |
| Reserves | 2 1[illegible] 7[illegible] |

***Banking Business of every description transacted***

# ಯುರೋಪಿನಿಂದ ಹೊರತಳ್ಳಲ್ಪಡುತ್ತಿರುವ ಯಹೂದಿಗಳ ಪೂರ್ವಚರಿತ್ರೆ!

## ಎರಡು ಸಾವಿರ ವರ್ಷಗಳಿಂದಲೂ ಪ್ರಪಂಚದ ಮೇಲೆ ಉಳಕೊಳ್ಳಲು ಸ್ಥಿರವಾದ ಸ್ಥಳಸಿಗದೆ ಪರಿಭ್ರಮಣ ಮಾಡುತ್ತಲೇ ಇರುವ ಜನರಿವರು.

ಹಿಟ್ಲರನು ಜರ್ಮನಿಯ ಅಧಿಕಾರ ಸೂತ್ರವನ್ನು ತನ್ನ ಕೈವಶಪಡಿಸಿಕೊಂಡಂದಿನಿಂದ ಯಹೂದಿಗಳನ್ನು ವಿರೋಧಿಸತೊಡಗಿದನು. ಯಹೂದಿಗಳ ಮೇಲಿನ ಅವನದ್ವೇಷಾಗ್ನಿಯು ಈಗ ವ್ಯಾಪಿಯಾಗಿ ಪರಿಣಮಿಸಿದೆ. ಎಲ್ಲೆಲ್ಲೂ ಯಹೂದಿಗಳ ಸೂರೆ ಸುಲಿಗೆ, ನಾನಾವಿಧ ಕಾನೂನುಗಳಿಂದ ಅವರನ್ನು ಕೈದಿಗಳನ್ನಾಗಿ ಬಂಧನದಲ್ಲಿಟ್ಟಿಕೆ, ಮೊದಲಾದ ದಬ್ಬಾಳಿಕೆಗಳು ನಡೆದವು. ಇತರ ಇತ್ತೀಚೆಗಂತೂ ಆಸ್ಟ್ರಿಯಾ ಮತ್ತು ಚೆಕೋಸ್ಲೊವೇಕಿಯಾದ ಪ್ರದೇಶಗಳು ಅವನ ವಶವಾದಂದಿನಿಂದ ಆ ಪ್ರದೇಶಗಳಲ್ಲಿರತಕ್ಕ ಯಹೂದಿಗಳಿಗೂ ಕಷ್ಟಕಾಲ ಒದಗಿರುತ್ತದೆ. ಆದರೆ, ಇದೆಲ್ಲಾ ಆಂಗ್ಲೇಯರಿಗೂ ಫ್ರೆಂಚರಿಗೂ ಸಂತೆಯಾಗದಿದ್ದರೂ, ಅವರನ್ನೇ ಹಿಟ್ಲರನು ದ್ವೇಷಭಾವದಿಂದ ಕಾಣುತ್ತಿರುವಾಗ ಅವರಿಗಾದರೂ ಹಿಟ್ಲರನು ಗಣ್ಯಮಾಡುವನೇ? ಸ್ವಿಸ್ಸಿನಲ್ಲಿ ಓರ್ವ ಜರ್ಮನರಾಯಭಾರಿಯ ಕೊಲೆ ಓರ್ವ ಯಹೂದಿ ತರುಣನಿಂದಾದುದಕ್ಕೆ ರ್ಮನಿಯೊಳಗಣ ಸಾವಿರ ಸಾವಿರ ಯಹೂದಿ ಹಿಟ್ಲರನ ಕಣಾಳದವಡೆಯಲ್ಲಿ ನುಚ್ಚು ನೂರಾದರು!

ಜರ್ಮನಿ, ಇಟಲಿ, ಆಸ್ಟ್ರಿಯಾ ಮೊದಲಾದ ದೇಶಗಳಲ್ಲೀಗ ಯಹೂದಿಯರೆಂದರೆ ನಮ್ಮಲ್ಲಿಯ ಅಸ್ಪೃಶ್ಯ ಸಮಯದ ಹಿಂದಿನ ಅಸ್ಪೃಶ್ಯರಿಗಿಂತಲೂ ಕೀಳಾಗಿರುವರು. ಎಲ್ಲೆಲ್ಲೂ ಅವರಿಗೆ ಅನಾದರ ಅಪಮಾನ!

ಇದೇ ರೀತಿ ಪೆಲಸ್ತೈನಿನಲ್ಲೂ ಅರಬರು ಯಹೂದಿಗಳನ್ನು ಓಡಿಸುವ ನಿರ್ಧಾರ ಮಾಡಿದ್ದಕ್ಕೆ ವಿರುದ್ಧ ಯುದ್ಧ ಹೂಡಿರುವರು. ಬ್ರಿಟಿಷ್ ಸರಕಾರದವರು ಅರಬರನ್ನು ಹಿಂಸಿಸಿ ಯೆಹೂದಿಗಳಿಗೆ ಒಂದು ಪ್ರಾಂತ್ಯವನ್ನಾದರೂ ಶಾಶ್ವತವಾಗಿ ಕೊಡಲು ಪ್ರಯತ್ನಿಸುತ್ತಿರುವರು.

ಯೆಹೂದಿಗಳು ಎಲ್ಲಿ ಹೋದರೂ ಯಾರಿಗೂ ಬೇಡವೆಂದಾಗಲು ಕಾರಣವೇನಿರಬಹುದು?

> **ಯಹೂದಿಗಳ ಚರಿತ್ರೆ ಪುರಾತನವಾದುದು. ಅವರ ಸಂಸ್ಕೃತಿ ೬೦೦೦ ವರ್ಷ ಹಳೆಯದು. ಜಗತ್ತಿನ ಅತ್ಯಂತ ಬುದ್ಧಿಶಾಲಿ ಜನಾಂಗಗಳಲ್ಲಿ ಅದೊಂದು. ವಿದ್ಯೆಯಲ್ಲಿ, ವಿಜ್ಞಾನದಲ್ಲಿ, ಕಲೆಯಲ್ಲಿ, ವಾಣಿಜ್ಯದಲ್ಲಿ ಯಾವ ವಿಚಾರದಲ್ಲೇ ಆಗಲಿ ಹಿಂದುಳಿದ ಜನಾಂಗವಲ್ಲ ಆದರೆ ಪ್ರಾಚೀನ ಕಾಲದಿಂದಲೂ ಯಹೂದಿಗಳು ನಿಲ್ಲಲು ನೆಲೆಯಿಲ್ಲದವರು. ದೈವೀ ಪ್ರಕೋಪವೂ ಮಾನವಿ ಪ್ರಕೋಪವೂ ಸೇರಿ ಇವರನ್ನು ಒಂದೆಡೆಯಿಂದೊಂದೆಡೆಗೆ ಅಟ್ಟುತ್ತ ಬಂದುವು. ಇಂದು ಫ್ಯಾಸಿಸ್ಟ್ ಯುರೋಪಿನ ರೋಷವು ಇವರೆಡೆಗೆ ತಿರುಗಿದೆ.**

ಇದರ ರಹಸ್ಯವನ್ನು ತಿಳಿಯಬೇಕಾದರೆ ಯೆಹೂದಿಗಳ ಮೂಲ ಚರಿತ್ರೆಯನ್ನು ಪರಿಶೀಲಿಸಬೇಕು. ಯೆಹೂದಿಗಳು ಎಲ್ಲೆಲ್ಲೂ ತಿರಸ್ಕರಿಸಲ್ಪಟ್ಟಿರುವುದಕ್ಕೆ ಹಲವರು ಹಲವು ಕಾರಣಗಳನ್ನು ಕೊಡುತ್ತಿರುವರು. ಆದರೆ ಈ ರೀತಿ ಕೊಡಲಾಗುತ್ತಿರುವ ಕಾರಣಗಳು ಆಯಾ ರಾಷ್ಟ್ರದ ಜನರಿಗೆ ಬೇಕಾಗುವ ರೀತಿಯಲ್ಲೇ ಜನರು ಕೊಡುತ್ತಿದ್ದರೆ ಅದರಲ್ಲಿ ಅಚ್ಚರಿಗೊಳ್ಳುವ ಅಂಶವೇನೂ ಇಲ್ಲ. ಈಗಿನ ಕಾಲವು ಪತ್ರಿಕೆಗಳ ಮೂಲಕ ಜನಾಂಗದ ಮತವನ್ನೇ ಬದಲಾವಣೆಗೊಳಿಸುವ ಕಾಲವಾಗಿದೆ.

ಮೂಲದಲ್ಲಿ ಯೆಹೂದಿಗಳಿಗೆ ಪೀಡೆಯುಂಟಾಗುವ ಕಾಲಕ್ಕೆ, ಬಾವಿಯ ನೀರಿಗಾಗಿಯೂ, ಕೃಷಿಕ್ಷೇತ್ರಗಳ ವಿಸೆಗಳಿಂದಲೂ ಅವರು ಪೀಡೆಗಳಿಗೊಳಗಾದರು. ಎಲ್ಲೆಲ್ಲೂ ಅವರು ಬಲು ಹೀನರಾದವರೆಂಬ ಭಾವನೆಯು ಬೆಳೆಯತೊಡಗಿತು. ಆದರೆ ನಿಜವಾಗಿಯೂ ಯೆಹೂದಿಗಳು ಆ ಕಾಲದಲ್ಲಿ, ಇತರ ಜನರು ಎಷ್ಟರಮಟ್ಟಿನ ಪಾಪ—ಪುಣ್ಯಗಳ ಮೂರ್ತಿಗಳಾಗಿದ್ದರೋ, ಅಷ್ಟೇ ಅವರೂ ಆಗಿದ್ದರು. ಆದರೂ ಜನರ ಉಸಾಟಿಕೆಯನ್ನು ಸಹಿಸಲಾರದೆ, ಅವಮಾನವನ್ನೂ ತಿರಸ್ಕಾರವನ್ನೂ ಪ್ರತಿಭಟಿಸಲು ಶಕ್ತರಾಗದೆ-ಹೆಚ್ಚಿನವರು ತಾವಿದ್ದ ಪ್ರದೇಶವನ್ನೇ ಬಿಟ್ಟು ಬಿಟ್ಟು ಬೇರೆ ಪ್ರದೇಶಗಳಿಗೆ ತೆರಳಿದರು.

ಪ್ರಾರಂಭದಿಂದಲೂ, ಅವರು ಎಲ್ಲಿದ್ದರೂ, ಎಲ್ಲಿಗೆ ಹೋದರೂ ಅಲ್ಲಿಯ ಜನರು ಯಹೂದಿಗಳನ್ನು ಕೀಳು ದೃಷ್ಟಿಯಿಂದ ಕಾಣುತ್ತಿದ್ದರು.

ಯಹೂದಿಗಳನ್ನು ತಿರಸ್ಕರಿಸುವುದರಲ್ಲಿ ಮೊದಲಾಗಿ ಹೆಸರು ಪಡೆದವನೆಂದರೆ ಮೋಜೆಸ್ ಎಂಬವನು. ಮೋಜೆಸನು ಯಹೂದಿಗಳ ಮೇಲೆ ಅಧಿಕಾರ ನಡಿಸಲು ನೈತಿಕ ದೃಷ್ಟಿಯ ಒಂದು ಕಾನೂನನ್ನು ಜ್ಯಾರಿಗೆ ತಂದನು. ನಮ್ಮ ದೇಶದಲ್ಲೂ ಅಸ್ಪೃಶ್ಯರನ್ನು ಮೂಲೆಗೊತ್ತಲು ಕೆಲವು ಪುರಾಣಗಳು ಇದೇ ರೀತಿ ಜನ್ಮವೆತ್ತಿವೆಯೆಂಬುದನ್ನು ಮರೆಯಲಾಗದು. ಮೋಜೆಸನು ತಯಾರಿಸಿದ ಆ ಕಾನೂನು ಇವತ್ತಿಗೂ ಕ್ರೈಸ್ತ ಜನರಲ್ಲಿ ವ್ಯಾಪಿಸಿದ್ದವಿದೆ. ಅದನ್ನು ಮನ್ನಿಸುವವರೂ ಇರುವರು.

### ಆರುಸಾವಿರ ವರ್ಷಗಳ ಹಿಂದಿನ ಕತೆ!

ಈಗಿನ ಕಾಲದಲ್ಲಿ ಅರಬರು ಯಹೂದಿಗಳೊಳಗೆ ತೀವ್ರ ಜಾತಿಭೇದವಿರುವುದಾದರೂ ಆ ಕಾಲದಲ್ಲಿ ಅರಬರೂ ಯಹೂದಿಗಳೂ ಧಾರ್ಮಿಕ ದೃಷ್ಟಿಯಿಂದ ಒಂದೇ ವೃಕ್ಷದ ಎರಡು ಶಾಖೆಗಳಾಗಿದ್ದರು. ಅವರ ಆಚಾರ ವಿಚಾರಗಳೂ ರೀತಿ ನೀತಿಗಳೂ, ಒಂದೇ ವಿಧವಾಗಿದ್ದವು. ಎರಡೂ ಪಂಗಡದವರು ಒಬ್ಬನೇ ದೇವನನ್ನು ಭಜಿಸುತ್ತಿದ್ದರು. ಈಗಲೂ ಭಜಿಸುತ್ತಿರುವರು.

ಯಹೂದಿಗಳ ಚರಿತ್ರೆಯನ್ನು ಬರೆಯಬೇಕಾದರೆ ಒಂದಲ್ಲ, ಎರಡಲ್ಲ, ಅವರು ಸುತ್ತಿದ ಸ್ಥಳಗಳ ಮುಖ್ಯವಾದ ೬೦ ಪರಿವರ್ತನೆಗಳ ಇತಿಹಾಸವನ್ನೇ ಬರೆಯಬೇಕಾಗುವುದು.

ಸುಮಾರು ೬ ಸಾವಿರ ವರ್ಷಗಳ ಹಿಂದಣ ಕಾಲದಲ್ಲವರು ಮಧ್ಯ ಆಸಿಯಾದ ಮೆಸಪೊ

ಎಂಬ ಪ್ರದೇಶದಲ್ಲಿ ತಮ್ಮ ಹೆಂಡರು ಮಕ್ಕಳು, ಮನೆಮಾರುಗಳಿಂದ ಕೂಡಿದವರಾಗಿ ಸುಖದಿಂದ ಕಾಲ ಕಳೆಯುತ್ತಿದ್ದರು. ಆಗ ಅಲ್ಲಿ ಸ್ವಾರಂಭದಲ್ಲಿ ಹೇಳಿದಂತೆ ಅನಾಯಕೆಯು ತಲೆದೋರಿದುದರಿಂದ ಹೆಚ್ಚಿನವರು ಅಲ್ಲಿಂದ ಹೊರಟು ಮೆಸೋಪೊ-ಟೋಮಿಯಾದ ವಿಶಾಲವಾದ ಹಾಗೂ ಫಲವತ್ತಾದ ಪ್ರದೇಶವಲ್ಲಿ ವಸತಿ ಮಾಡಿದರು.

ಆ ಕಾಲದಲ್ಲಿ ಮೆಸೋಪೊಟೋಮಿಯಾದ ಪ್ರದೇಶವಲ್ಲಿದ್ದ ಕಾಡುಜನರಲ್ಲಿ ಸೂರ್ಯಾರಾಧನೆಯು ಪ್ರಚಾರಕ್ಕೆ ಬರತೊಡಗಿತ್ತು. ಕಾರಣ ಹಿಮ ಯುಗದ ಅನಂತರ ಯಾವಾಗ ಜಲಪ್ರಲಯ ವಾಯಿತೋ, ಆಗ ಅಲ್ಲಿ ಸೂರ್ಯಾರಾಧನೆಯ ಪ್ರಭಾವ ತಲೆದೋರಿತು.ದಕ್ಷಿಣ ದಿಕ್ಕಿನ ಅಮೇರಿಕಾದ ಅಜಾಟೀಕ್ ಮಾಯನಾ, ಮತ್ತು ಇಂಕಾನ್ ಎಂಬ ಜನರು ಯಹೂದಿಗಳನ್ನು ಶೆಮ್ಮ (Shem) ಎಂಬುದಾಗಿ ಕರಿಯುತ್ತಿದ್ದರು. ಹಿಬ್ರು ಮತ್ತು ಅರಬ್ಬಿ ಭಾಷೆಗಳಲ್ಲಿ 'ಶೆಮ್' ಅಂದರೆ ಸೂರ್ಯನೆಂಬ ಅರ್ಥ.

ಜಲಪ್ರಲಯದಂತಹ ನೆರಿಹಾವಳಿಯಿಂದ ಪೀಡಿತರಾದ ಯಹೂದಿಗಳು ತಿರುಗಿ ಅಲ್ಲಿಂದ ಹೊರಟುಹೋಗಿ ಯುಕ್ರೇಟಿಸ್ ಎಂಬ ಪ್ರದೇಶದ ಖಣಿಗಳಲ್ಲಿ ವಾಸಮಾಡತೊಡಗಿದರು. ಈ ಪ್ರದೇಶವು ತುರ್ಕಸ್ಥಾನದ ಸಮೀಪವಿರುವುದರಿಂದ ಆ ಕಾಲದಲ್ಲಿ ತನ್ನ ರಾಜ್ಯಕ್ಕೆ ಸಮೀಪವಾಗಿ ಬಂದು ಕಾಯಂ ವಸತಿಮಾಡುತ್ತಿದ್ದ ಯಹೂದಿಗಳನ್ನು ತುರ್ಕರು ಓಡಿಸಿಬಿಟ್ಟರು. ಯಹೂದಿಗಳ ಮನೆ ಮಾರುಗಳು ಕೊಳ್ಳೆ ಹೊಡೆಯಲ್ಪಟ್ಟವು. ಆದರೆ ಆ ಕಾಲದಲ್ಲಿ ತುರ್ಕರು ಯಹೂದಿಗಳನ್ನು ಓಡಿಸಿದ್ದರೆಂಬುದು ನಿಜವಾದರೂ, ಅವರನ್ನು ಓಡಿಸಿದುದು ದ್ವೇಷದಿಂದಲ್ಲ. ತಮ್ಮ ರಾಜ್ಯದ ಸಮೀಪದ ಪ್ರದೇಶಕ್ಕೆ ಯಾವ ಪ್ರದೇಶದ ಜನರು ಬಂದು ನೆಲಸಿದರೂ ಅವರನ್ನವರು ಓಡಿಸದೆ ಇರುತ್ತಿದ್ದಿಲ್ಲ.

ತುರ್ಕಿಯರ ಪೀಡೆಗೊಳಗಾದ ಯಹೂದಿಗಳು ಅಲ್ಲಿಂದ ಗಂಟುಮೂಟೆಗಳನ್ನು ಕಟ್ಟಿಕೊಂಡು ಸಿರಿಯಾ, ಜೋರ್ಡನ್ ಮಕಾಲಾ-ಪ್ರದೇಶಗಳ ಖಣಿವೆಗಳಿಗೆ ಬಂದು ನೆಲಸಿಕೊಂಡರು ಈ ರೀತಿ ಅವರು ನಾಲ್ಕೂ ಕಡೆಗಳಲ್ಲಿ ಹರಡಿದಂತಾಗಿ ಉಳಿಕೊಂಡರು.

ಇದೇ ಸಂದಿಗ್ಧಕಾಲಕ್ಕೆ ಯಾ ಸ್ವಲ್ಪ ಸಮಯದ ಅನಂತರ ಪೆಲಾಸ್ವಾಯಿನಿನಲ್ಲಿ ಜ್ವಾಲಾಮುಖಿಯ ಸ್ಫೋಟವಾಯಿತು. ಅಲ್ಲಿಯ ಜ್ವಾಲಾಮುಖಿಯ ಸ್ಫೋಟದಿಂದ ಅನುವಾಸಿನ ಸ್ಥಿತಿಯೇ ಬದಲಾವಣೆ ಹೊಂದಿತು. ಅಲ್ಲಿಯ ಸಮುದ್ರವೂ ಕೂಡಾ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸರಿದಂತಾಗಿ, ಅದು ಮೃತಸಮುದ್ರವೆಂದಾಯಿತು. ಈ ದೈವೀ ಪ್ರಕೋಪದಿಂದಲೂ ತಪ್ಪಿಸಿಕೊಂಡು ಸುರಕ್ಷಿತವಾಗಿ ಉಳಿದ ಯಹೂದಿಗಳು ಅಲ್ಲಿರುವುದು ಅಪಾಯಕರವೆಂದು ಭಾವಿಸಿ ಇಜಿಪ್ತ ದೇಶಕ್ಕೆ ಪ್ರಯಾಣ ಬೆಳಸಿದರು! ಇಜಿಪ್ತ ದೇಶದಲ್ಲವರು ಕೃಷಿಮಾಡಿ ಜೀವನಕ್ಕೆ ತೊಡಗಿದರು. ಆದರೆ ಅಲ್ಪಾವಧಿಯೊಳಗೆ ಅಲ್ಲೂ ಅವರು ಪರಾಧೀನತೆಯಿಂದ ಕಾಲಹರಣಮಾಡಬೇಕಾಯಿತು. ಶೋಕೋನ ಎಂಬವರ ಅಧೀನರಾಗಿದ್ದು ಯಹೂದಿಗಳು ಕಾಲಹರಣಮಾಡಿದರು. ಇಜಿಪ್ತಿಗೆ

**ಯಹುದಿಗಳ ಬದ್ಧ ವಿರೋಧಿ ಹಿಟ್ಲರ್.**

ಬಂದಾಗ ಯಹೂದಿಗಳು ಸೂರ್ಯಭಕ್ತರಾಗಿದ್ದರು. ಆದರೆ ಒಬ್ಬನೇ ದೇವನನ್ನು ಭಜಿಸುವುದು ಸರಿಯಲ್ಲ, ಜಗತ್ತನ್ನು ಸೃಷ್ಟಿಸಿರುವ ಇತರ ಮಹಾನ್ ಶಕ್ತನೊಬ್ಬನು ಇದ್ದೇ ತೀರಬೇಕು. ಸೂರ್ಯನಿಂದ ಬರೇ ಪ್ರಕಾಶ ಮತ್ತು ಉಷ್ಣತೆ ಮಾತ್ರವೇ ಜಗತ್ತಿಗೆ ದೊರೆವುದಾಗಿ ಅವರು ಅಭಿಪ್ರಾಯಪಟ್ಟರು. ಸೂರ್ಯನೆಂದರೆ ರಾತ್ರಿ ಹೆಗಲನ್ನು ಸೂಚಿಸುವ ಒಂದು ಗಡಿಯಾರವೇ ಆಗಿರುವುದು. ದೇವರು ಪ್ರತ್ಯೇಕವಿರಬೇಕು ಎಂಬ ಹೊಸ ತತ್ವಜ್ಞಾನವನ್ನು ಅಬ್ರಹಾಮ್ ಎಂಬವನು ಪ್ರಚಾರಪಡಿಸಿದನು. ಅಬ್ರಹಾಮನ ಕಾಲದಿಂದ ಯಹೂದಿಗಳು ಏಕೇಶ್ವರವಾದಿಗಳಾದರು. ಇವರ ಈ ರೀತಿಯ ವಿಚಾರಸರಣಿಯಿಂದ ಇಜಿಪ್ತಿನವರು ಈ ಯಹೂದಿಗಳು ಕಾಡುಜನರಾಗಿರುವರೆಂದು ಯೋಚಿಸಿದರು.

### ಅಭ್ಯುದಯಕಾಲ

ಇಜಿಪ್ತಿಗೆ ಹೋಗಿ ನೆಲಸಿಕೊಂಡ ಯಹೂದಿಗಳಿಗೆ ಕೃಷಿಕರ್ಮ ಮತ್ತು ವಿಶಾಲವಾದ ಮೈದಾನು ಸ್ವರ್ಗವೆಂದರೆ ತುಂಬಾ ಸಂತೋಷ. ಶಹರುಗಳಲ್ಲಿ ಜೀವನ ನಡಿಸುವುದನ್ನವರು ತಿರಸ್ಕರಿಸುತ್ತಿದ್ದರು. ಇಜಿಪ್ತದವರಾಗ ಸ್ವಲ್ಪ ಸುಧಾರಕಜನರಾಗಿದ್ದರು. ಅಲ್ಲಿಯ ಜನರನ್ನು ಮೆಲ್ಲನೇ ಅನುಸರಿಸ ತೊಡಗಿದರು ಯಹೂದಿಗಳು, ಓದುಬರಹ, ತತ್ವಜ್ಞಾನ, ವಿಜ್ಞಾನ ಶಾಸ್ತ್ರ ನೊದಲಾದವುಗಳ ಅನುಭವವನ್ನವರು ಪಡೆದರು. ಸಂಘ ಶಕ್ತಿ ಮತ್ತು ಶಾಸನ ಪದ್ಧತಿಯ ಮಹತ್ವವು ಅವರಿಗೆ ತಿಳಿಯಿತು.ಇಜಿಪ್ತ ದೇಶದಲ್ಲಿ ಸಾಕಷ್ಟು ಸುಧಾರಣೆ ಹೊಂದಿ ಸುಜ್ಞಾನ ಪಡೆದ ಯಹೂದಿಗಳು ಅಲ್ಲಿಂದ ಹೊರಟು ಸಮೀಪದ ಪೆಲಸ್ವಾಯಿನ ಪ್ರದೇಶಕ್ಕೆ ಬಂದು ನೆಲಸಿಕೊಂಡರು. ತಿರುಗಿ ಪೆಲಸ್ವಾಯಿನಿಗೆ ಬರುವಾಗ ಅವರು ಹಿಂದಿನ ಕಾಡುಯಹೂದಿಗಳಾಗಿರದೆ, ವಿದ್ಯಾವಂತರೂ ಶಸ್ತ್ರಧಾರಿಗಳೂ ಆಗಿಬಂದಿದ್ದರು. ಯಹೂದಿಗಳು ಇಜಿಪ್ತದೊಳಗಿನ ತಮ್ಮ ನೆಲೆವೀಡುಗಳನ್ನು ಬಟ್ಟು ಪೆಲಸ್ವಾಯಿನಿಗೆ ಬರುವ ಮುಖ್ಯಕಾರಣವೆಂದರೆ, ಶಿತಾಬ ಎಂಬಲ್ಲಿ ಜ್ವಾಲಾಮುಖಿಯ ಹಾವಳಿಯು ತಲೆದೋರಿದುದು.

ಯಹೂದಿಗಳು ಜ್ವಾಲಾಮುಖಿಯ ಹಾವಳಿಯಿಂದ ಕಳವಳಗೊಂಡು ಪೆಲಸ್ವಾಯಿನಿಗೆ ಬಂದಾಗ, ಪೆಲಸ್ವಾಯಿನಿನಲ್ಲಿ ಇತರ ಜಾತಿಯ ಜನರು ಬಂದು ನೆಲಸಿಕೊಂಡಿದ್ದು, ಅವರು ಮೂರ್ತಿಪೂಜಕರಾಗಿದ್ದರು. ಮೊದಲು ಯಹೂದಿಯರಿದ್ದ ಸ್ಥಳಗಳನ್ನೆಲ್ಲಾ ಅನಂತರ ಬಂದ ಜನರು ವ್ಯಾಪಿಸಿಬಿಟ್ಟಿದ್ದರು. ತಾವಿದ್ದ ಹಿಂದಿನ ಸ್ಥಳಗಳನ್ನು ಆಕ್ರಮಿಸಲು ಯಹೂದಿಗಳು ಉಪಕ್ರಮಿಸಿದರು. ಇಸ್ತದಲ್ಲಿ ಸುಧಾರಣೆ ಹೊಂದಿ ಶಸ್ತ್ರಾಸ್ತ್ರಗಳ ಉಯೋಗವನ್ನರಿತ ಯಹೂದಿಗಳನ್ನೆದುರಿಸುವುದ ಅಲ್ಲಿದ್ದ ಮೂರ್ತಿಪೂಜಕರಿಗೆ ಸಾಧ್ಯವಾಗಹೋಯಿತು. ಇಜಿಪ್ತದಿಂದ ಪೆಲಸ್ವಾಯಿನಿ ಬರುವಾಗ ತಾವು ಯಾವುದಾದರೊಂದು ಪ್ರದೇವನ್ನು ಗೆದ್ದು ಅಲ್ಲಿರಬೇಕಾಗಿ ಯಹೂದಿಗಳು ಯೋಚಿಸಿರಲಿಲ್ಲ. ಅವರು ತಿಳುವಳಿಕೆ ಉಂಟಾದ ಜನರಾಮದದರಿಂದ ಇಜಿಪ್ತದಲ್ಲಿ ತಮ್ಮ ಮೇಲಿನಿರ್ಬಂಧಗಳು ಅವರಿಗೆ ಸಹನೆಯಾಗುತ್ತಿದ್ದಿಇಜಿಪ್ತದಲ್ಲಿದ್ದಾಗ ಯಹೂದಿಗಳು ಸಾಮಾನ್ಯವಾಗುಲಾಮರಾಗಿಯೇ ಇದ್ದರು. ಗುಲಾಮಗಿರಿಯಿಂಮುಕ್ತರಾಗುವುದೇ ಅವರ ಉದ್ದೇಶವಿದ್ದಿತು.

### ಹಿಜರತ

ಅರಬಸ್ತಾನ ಮತ್ತು ಇಜಿಪ್ತದ ಮೈದಾನಸ್ಥಳಗಳಲ್ಲಿ ನೆಲೆವೀಡುಮಾಡಿಕೊಂಡು ಅಲ್ಲಿ ಅವಬಳಲಿ ಬೆಂಡಾಗಿದ್ದರು. ಹೋದಲ್ಲೆಲ್ಲಾ ಅವತೊಂದರೆಗಳಿಗೀಡಾಗಿದ್ದರು ಅನಂತರ ಸ

ಷ್ಟೈನಿಗೆ ಬಂದರೆಂಬುದೇನೋ ನಿಜ. ಆದರೆ ಇಲ್ಲೂ ಅವರ ಮನಸ್ಸಿಗೆ ಸಮಾಧಾನವಾಗ ಲಿಲ್ಲ.

ಪೆಲಸ್ಟೈನಿಗೆ ಸಮೀಪದಲ್ಲ ಕೆಲವು ಪ್ರದೇಶ ಗಳಿದ್ದವು. ಓರಿಸಿಸ್ ಮತ್ತು ಆಯ್ಸೀಸ್, ಬ್ಯಾಲಸ ಮತ್ತು ಅಸ್ಟ್ರೋಪ ಎಂಬ ಪ್ರದೇಶಗ ಳಿಂದವರು ಆವರಿಸಲ್ಪಟ್ಟಿದ್ದರು. ರಾಜಕಾರಣ, ಮುತ್ಸದ್ದಿತನದಲ್ಲಿವರು ಮುಂದರಿದ ಕಾರಣ ಸ್ವಾತಂತ್ರ್ಯಾಪೇಕ್ಷೆಯಿಂದ ಒಂದು ಚಿಕ್ಕ ರಾಜ್ಯ ವನ್ನೇ ಸ್ಥಾಪಿಸ ಯೋಚಿಸಿದರು. ಆದರೆ ಯಹೂ ದಿಗಳು ತಮ್ಮ ಸ್ವತಂತ್ರ ರಾಜ್ಯವನ್ನು ಸ್ಥಾಪಿಸು ವಾಗ ಧೀರ್ಘವಿಚಾರ ಮಾಡದೆ ಹೋದರು. ಕಾರಣ ಪೆಲಸ್ಟೈನ್ ಎಂಬುದು ಭೌಗೋಲಿಕ ನೃಷ್ಟಿಯಿಂದ ಒಂದು ಬಿಕ್ಕಟ್ಟಿನ ಸ್ಥಳವಾಗಿದ್ದಿತು. ಪಶ್ಚಿಮ ದಿಕ್ಕಿನಲ್ಲಿ ಸಮುದ್ರ, ಪೂರ್ವ ದಿಕ್ಕಿನಲ್ಲಿ ಇಕ್ಕಟ್ಟಾದ ಸಮರಭೂಮಿ, ನಡುವಿನಲ್ಲಿ ಸಿರಿ ಯಾದ ಸುವೇಜಕಾಲುವೆಗೆ ಹೋಗುವ ದಾರಿ. ಇಷ್ಟಲ್ಲದೆ ಆಶಿಯಾ ಮತ್ತು ಆಫ್ರಿಕಾ ಖಂಡಗಳ ನ್ನು ಜೋಡಿಸುವ ಒಂದು ನೈಸರ್ಗಿಕ ಸ್ಥಳದಂತಾ ಗಿತ್ತು ಆ ಪೆಲಸ್ಟೈನ ಪ್ರದೇಶ. ಪೆಲಸ್ಟೈನ ಎಂದರೆ ಜಲಮಾರ್ಗದಿಂದಲೂ, ಸ್ಥಳಮಾರ್ಗ ವೆಂದಲೂ ಅವರಿಗೆ ಆವತ್ತು ಸಂಭವಿಸುವ ಸ್ಥಳ ವಾಗಿದ್ದಿತು. ಎರಿಸ್ಸಿಯನ್ಸ್, ಫೋನಿಸಿಯನ್ಸ್, ಗ್ರೀಕ್, ರೋಮನ್ಸ, ಸಾರಾಸೀನ್, ಮತ್ತು ತುರ್ಕಸ್ಥಾನ ಮೊದಲಾದ ಕಡೆಗಳಲ್ಲಿಯ ಜನರು ಆಫ್ರಿಕಾಕ್ಕೆ ಹೋಗುವ ನೆವದಿಂದ ಈ ಪೆಲಸ್ಟೈ ನನ್ನು ಹಾದುಹೋಗುತ್ತಿದ್ದರು. ಆಫ್ರಿಕಾಕ್ಕೆ ಹೋಗುವಾಗ ದಾರಿಯಲ್ಲಿದ್ದ ಪೆಲಸ್ಟೈನಿನ ಯಹೂದಿಗಳಿಗೆ ಕಷ್ಟಗಳುಂಟಾಗ ತೊಡಗಿತು, ಈ ರೀತಿ ಯಹೂದಿಗಳ ಕಷ್ಟಗಳು ತಪ್ಪಲಿಲ್ಲ.

ಯಹೂದಿಗಳ ಮತ್ತೊಂದು ಅವಿಚಾರವೆಂದರೆ, ಅವರ ಸಮಕಾಲದಲ್ಲಿಯೇ ಯಾವ ಗ್ರೀಕರು ಸಮುದ್ರ ಪ್ರಯಾಣದಲ್ಲಿ ತರಬೇತಿ ಹೊಂದಿ ಸುಂದರಿದರೋ, ಆ ಸಮುದ್ರಯಾನದ ವಿದ್ಯೆಯನ್ನವರು ಅಲಕ್ಷ್ಯಭಾವದಿಂದ ಅಲ್ಲಗಳೆದರು. ಸೂಮಧ್ಯಸಮುದ್ರತೀರದ ರಾಷ್ಟ್ರಗಳಾದ ಕಾಜೀಜ, ಗ್ರೀಸ, ಕ್ರೀಟ, ರೋಮ ಇತ್ಯಾದಿ ದೇಶಗಳ ನೌಕೆ ಗಳ ತಂಡಗಳು ಅತ್ತಿತ್ತ ಓಡಾಡಹತ್ತಿದಾಗ ಯಹೂದಿಗಳು ಸಮುದ್ರಯಾನದ ಅನುಭವ ವನ್ನು ಸಂಗ್ರಹಿಸದೆ ಹೋದುದರಿಂದ ತೊಂದರೆ ಪಡುವಂತಾಯಿತು. ಯಹೂದಿಗಳಿಗೆ ಸಮುದ್ರ ಯಾನವು ಮನಸ್ಸಿಗೆ ಹಿಡಿಯುತ್ತಿದ್ದಿಲ್ಲ. ಅವರು ಭೂಮಿಯ ಮೇಲೆಯೇ, ಅದರಲ್ಲೂ ವಿಶಾಲ ಪ್ರದೇಶಗಳಲ್ಲಿಯೇ ನೆಲಸಿಕೊಂಡಿರಲು ಹೆಚ್ಚಿನ ಆಸಕ್ತಿ ಪಡುತ್ತಿದ್ದರು.

ಗ್ರೀಸಿನೊಂದಿಗೆ ಯಹೂದಿಗಳಿಗೆ ಸ್ನೇಹವಿತ್ತು. ಜೆರುಸಲೇಮ ವೇಟೆಯಲ್ಲಿ ಮೆಸಿಕೋನಿಯಾದ ಒಡವೆ ವಸ್ತ್ರಗಳು ಮಾರಲ್ಪಡುತ್ತಿದ್ದವು. ಪ್ರಬಲ ನಾದ ಸಿಕಂದರ ಬಾದಶಹನು ಯಹೂದಿಗಳ ಮೇಲೆ ದಯಾಭಾವ ಉಳ್ಳವನಾಗಿದ್ದನು. ಆದರೆ ರೋಮನಗರವು ಯಾವಾಗ ಉದಯೋನ್ಮುಖ ವಾಯಿತೋ ಆಗವರ ಮನೋದಯವೂ ಬದಲಾ ವಣೆ ಹೊಂದಿತು. ಜೆರುಸಲೇಮಿನ ನಾಶವಾಯಿತು ಆ ಉತ್ಪಾತ ಕಾಲದಲ್ಲಿ ಅಳಿದುಳಿಕ ಯಹೂದಿ ಯರು ದೇಶಭ್ರಷ್ಠರಾದರು. ನಿರ್ಗತಿಕರಾದ ಯಹೂದಿಗಳು ತಿರುಗಿ ತುರ್ಕಸ್ಥಾನದ ಆಶ್ರಯಕ್ಕೆ ಹೋದರು. ಆಗಿನ ಖಲೀಫ್ ಮತ್ತು ಒಟೋ ವನ್ ಸಾಮ್ರ್ಯಾಟನ ಕೃಪಾಛತ್ರದ ಕೆಳಗವರು ಆಶ್ರಯಪಡೆದರು. ಅಲ್ಲವರ ಸ್ಥಿತಿಯು ಸುಧಾರಿ ಸದೆ ಮುಸ್ಲಿಮ್‌ರಿಗಿಂತ ಕೀಳು ತರಗತಿಯ ಜನ ರಾಗಿ ಅವರು ಕಾಲಕಳೆಯಬೇಕಾಯಿತು.

## ದೇಶ ಭ್ರಮಣ

ಜೆರುಸಲೇಮಿನಿಂದ ದೇಶಭ್ರಷ್ಠರಾಗಿ ಹೊರಬಿದ್ದ ಯಹೂದಿಗಳು ಅಂದಿನಿಂದ ಇಂದಿನವರೆಗೆ ಒಂದು ಊರಿನಿಂದ ಮತ್ತೊಂದು ಊರಿಗೂ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೂ ಎಲ್ಲಿ ಅವ ರಿಗೆ ಆಸ್ಪದ ದೊರೆಯುತ್ತಿತ್ತೋ ಅಲ್ಲಲ್ಲಿ ಪ್ರಯಾ ಣ ಬೆಳೆಸಿಕೊಂಡು ಹೋಗಿ ಭ್ರಮಿಸುತ್ತಲೇ ಇರು ವರು. ಅವರ ಸಂಖ್ಯೆಯು ಬೆಳೆಯುತ್ತಾ ಬಂ ದಂತೆ ಎಲ್ಲ ಕಡೆಗೂ ಅವರು ಚದರಿದರು. ರಶಿಯಾ, ಪೋಲೆಂಡ್, ಜರ್ಮನಿ, ಆಸ್ಟ್ರಿಯಾ, ರುಮೇನಿಯಾ, ಇಂಗ್ಲೆಂಡ್, ಇಟಲಿ ಮೊದಲಾದ ಎಲ್ಲಾ ರಾಷ್ಟ್ರಗಳಿಗೂ ಹೋಗಿ ಅವರು ನೆಲಸಿ ಕೊಂಡರು. ಆದರೆ ಅವರು ಎಲ್ಲಿ ಹೋದರೂ ಅವರ ಮೇಲಿನ ಪ್ರತೀಕಾರವು ಕಡಿಮೆಯಾಗದೆ, ಹೋದಲ್ಲೆಲ್ಲಾ ಅವರ ಮೇಲೆ ಬಹಿಷ್ಕಾರ ಬೀಳು ತ್ತಿತ್ತು. ಯಹೂದಿಗಳು ಎಷ್ಟು ರಾಜ್ಯಗಳನ್ನು ಸುತ್ತಿದರೂ ಎಲ್ಲಿಯೂ ಅವರಿಗೆ ಸ್ವತಂತ್ರವಾದ ರಾಜ್ಯವನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ.

ಅನಂತರ ೧೯೧೪ರಲ್ಲಿ ಮಹಾಯುದ್ಧವು ನಡೆ ಯಿತು. ಯುದ್ಧ ಸಮಾಪ್ತಿಯಾಗಿ ಪೆಲೆಸ್ತೈ ನನ್ನು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟತು. ಆಗ ಯಹೂದಿಗಳು ತಮ್ಮ ಮೂಲಸ್ಥಾನವಾದ ಪೆಲೆಸ್ತೈ ನನ್ನು ಸೇರಲು ಪ್ರಾರಂಭಿಸಿದರು. ಬ್ರಿಟಿಷ್ ಸರ ಕಾರದವರು ಅವರಿಗೆ ಆಶ್ರಯವನ್ನಿತ್ತರು! ಆದರೆ ಅಲ್ಲಿರತಕ್ಕ ಅರಬ್ಬರಿಗೂ ಯಹೂದಿಗಳಿಗೂ ತಿರುಗಿ ಕಚ್ಚಾಟ ಪ್ರಾರಂಭವಾಗಿರುವುದು. ಬ್ರಿಟಿ ಷರು ಅರಬರನ್ನು ಬಗ್ಗಿಸಿ ತಮ್ಮ ಅಕಾಂಕ್ಷೆಯೊಳ ಗಿಟ್ಟುಕೊಳ್ಳಲು ದಬ್ಬಾಳಿಕೆಯನ್ನು ನಡೆಸುತ್ತಿರು ವರು! ಅರಬರ ಹಿಂಸಾತ್ಮಕ ದಾಳಿಯನ್ನು ತಡೆ ಯಲು ಸಾಧ್ಯವಾಗದೆ ಅವರಿನ್ನೆಲ್ಲಾದರೂ ಹೋ ಗಲೇ ಬೇಕಾಗುವುದು. ಜರ್ಮನಿ, ಆಸ್ಟ್ರಿಯಾ, ಇಟಲಿ ಮೊದಲಾದ ಕಡೆಗಳಲ್ಲಿ ಯಹೂದಿಗಳ ಮೇಲೆ ನಡೆಯುತ್ತಿರುವ ಅಘಾತಗಳನ್ನು ನೋಡಿ ಅರಬರೂ ಯಹೂದಿಗಳನ್ನು ಪೆಲೆಸ್ತೈನಿನಿಂದ ಹೊರದಬ್ಬುವ ಧೃಢ ನಿರ್ಧಾರ ಮಾಡಿರುವರು.

ಯಾವಾಗ ಪೆಲೆಸ್ತೈನನ್ನು ಬಿಟ್ಟು ಯಹೂದಿ ಗಳು ಬೇರೆ ಕಡೆಗೆ ಹೋಗಿದ್ದರೋ ಆಗ ಅಲ್ಲಿ ಬೆರಳೆಣಿಕೆಯಷ್ಟು ಅರಬರಿದ್ದರು. ಅಲ್ಲಿದ್ದ ಅರಬರು ಯಹೂದಿಗಳ ಅಧಿಕಾರದಲ್ಲಿದ್ದರು. ಈಗ ಯಹೂ ದಿಗಳು ತಿರುಗಿ ಪೆಲೆಸ್ತೈನಿಗೆ ಹೋಗಿರುವರಾದರೂ, ಅಲ್ಲಿಯ ಸಂಪೂರ್ಣ ಅಧಿಕಾರವನ್ನು ತಮಗೇನೆ ಬಿಟ್ಟುಕೊಡಬೇಕಾಗಿ ಯಹೂದಿಗಳು ಹಠ ಸಾಧನೆ ನಡಿಸುತ್ತಿಲ್ಲ. ವಿದ್ಯೆಯಲ್ಲಿ, ಧರ್ಮದಲ್ಲಿ, ರೀತಿನೀತಿಗಳಲ್ಲಿ ಯಹೂದಿಯರೇನೂ ಅರಬರಿ ಗಿಂತ ಕಡಿಮೆಯಾಗಿಲ್ಲ. ಒಂದೇ ಧರ್ಮದ ವರು, ಒಂದೇ ಶಾಲೆಯಲ್ಲಿ ಅವರ ಮಕ್ಕಳು ವಿದ್ಯಾ ಭ್ಯಾಸ ಹೊಂದುತ್ತಿದ್ದರು. ಯಹೂದಿಗಳು ಮುಸ್ಲಿಮರಿಗಿಂತಲೂ ಚೆನ್ನಾಗಿ ಅರಬಿ ಭಾಷೆಯ ನ್ನಾಡಬಲ್ಲರು ಯಹೂದಿಗಳು ವಿದ್ಯಾಭ್ಯಾಸ ದಲ್ಲಿ ಬಹಳ ಮುಂದರಿದಿರುವರು. ಅರಬರಿಗಿಂತಲೂ ಹೆಚ್ಚಿನ ವಿದ್ವಾಂಸರು ಯಹೂದಿಯರೊಳಗಿರುವರು. ಜರ್ಮನಿ, ಇಂಗ್ಲೆಂಡ್, ಅಮೇರೀಕಾ ದೇಶದೊಳ ಗಿನ ಅನೇಕ ಯಹೂದಿಗಳು ವಿಶ್ವವ್ಯಾಪಿ ಕೀರ್ತಿ ಪಡೆದವರಿರುವರು. ಎಂತಹ ಕಷ್ಟವನ್ನಾದರೂ ಸಹಿಸುವ ಸಹನಾತೀಲತೆಯು ಯಹೂದಿಗಳಲ್ಲಿದೆ. ಇಷ್ಟೇ ಅಲ್ಲ, ವಿಜ್ಞಾನ ಶಾಸ್ತ್ರದಲ್ಲಿ ಕೆಲವು ಯಹೂದಿಯರು ಪಡೆದಿರುವ ಯಶಸ್ಸನ್ನು ನೋಡಿ ಜರ್ಮನಿ, ಇಂಗ್ಲೆಂಡಗಳಂತಹ ಪ್ರಬಲ ರಾಷ್ಟ್ರ ಗಳೂ ತಲೆದೂಗುವಂತಾಯಿತು. ವ್ಯಾಪಾರ, ಉದ್ಯಮ, ಸಾಹಸಗಳಲ್ಲಿ ಈಗಿನ ಯಹೂದಿಗಳು ಬಹು ಜಾಣರಾಗಿರುವರು. ಯಹೂದಿಗಳು ಸಂ ಪಾದಿಸಿದ ಅಪಾರ ದ್ರವ್ಯ, ಕೀರ್ತಿ, ಯಶಸ್ಸು ಇವುಗಳನ್ನು ನೋಡಿ ಯಾವ ರಾಷ್ಟ್ರಗಳು ಅವ ರನ್ನು ಹೊರದಬ್ಬಲು ಯೋಚಿಸುತ್ತಲಿವೆಯೋ, ಆ ರಾಷ್ಟ್ರಗಳಿಗದು ಸಹನೆಯಾಗುವುದಿಲ್ಲ ಯಹೂ ದಿಗಳಲ್ಲಿರತಕ್ಕ ಒಂದು ಕುಂದುಕೊರತೆಯೆಂದರೆ ಅವರು ಕ್ಷಾತ್ರತೇಜಸ್ಸುಳ್ಳವರಾಗಿಲ್ಲ! ಬುದ್ಧಿ

(ಮುಂದಿನ ಪುಟ ನೋಡಿರಿ)

# ಹಜಾಮನ ಮಂತ್ರಾಲೋಚನೆಯಿಂದ ಯುದ್ಧ ನಡಿಸುತ್ತಿರುವ ಜನರಲ್ ಫ್ರಾಂಕೋ

ಜನರಲ್ ಫ್ರಾಂಕೋ

**ಜನರಲ್ ಫ್ರಾಂಕೋನ ಜೀವವುಳಿಸುವ ಸಲುವಾಗಿಯೇ ಹಜಾಮ ಗೋಮೆರುಸನು ತನ್ನ ಬಲ ಕೈಯನ್ನು ಕಳಕೊಂಡ; ಆದ್ದರಿಂದಲೇ ಈ ಫ್ರಾಂಕೋನ ಬಲಗೈಯ್ಯಾಗಿ ಉಳಿದಿದ್ದಾನೆ. ಯಾರ ಮೇಲೂ ವಿಶ್ವಾಸವಿಡದ ಜನರಲ್ ಫ್ರಾಂಕೋ ಹಜಾಮನ ಕೈಯ್ಯಲ್ಲಿ ಜೀವ ಒತ್ತೆ ಇಡಲಿಕ್ಕೂ ಸಿದ್ಧನು!**

ಸ್ವತಂತ್ರವಾಗಿ ಯಾರಿಗೋ ಜಿಗೂ ಹೋಗದೆ, ಸುಖಶಾಂತಿಯಿಂದ ರಾಜ್ಯಭಾರ ನಡಿಸುತ್ತಿದ್ದ ಸ್ಪೇನಿನ ದೇಶವು ಈಗ ಧಗಧಗಿಸುವ ಅಗ್ನಿಕುಂಡವಾಗಿದೆ. ಪ್ರಜಾಸತ್ತೆಯ ತತ್ವಗಳಿಗನುಸಾರವಾಗಿ ರಾಜ್ಯಭಾರ ನಡಿಸುತ್ತಾ ಬರುತ್ತಿದ್ದ ಸರಕಾರದ ಅಧೀನವಾಗಿದ್ದು, ದ್ರಾಕ್ಷಾವನಗಳಲ್ಲಿ ವಿಹರಿಸುತ್ತಾ ಸುಮಧುರವಾದ ದ್ರಾಕ್ಷಾರಸ ಪಾನ ಮಾಡಿ ಆನಂದಿಸುತ್ತಿದ್ದ ಸ್ಪೇನಿನ ನವಯುವತಿಯರು, ಬಾಲಕ ಬಾಲಕಿಯರಿಂದು ಕ್ಷಣ ಕ್ಷಣಕ್ಕೂ ಮೃತ್ಯುವನ್ನು ಸ್ಮರಿಸುತ್ತಾ ಅನ್ನಾನ್ನ ನೆಂದು ಚಡಪಡಿಸುತ್ತಿರುವರು. ಸುಂದರವಾದ

(ಹಿಂದಿನ ಪುಟದಿಂದ)

ವೈಭವ, ಯುಕ್ತಿಗಳ ಪ್ರಾಬಲ್ಯವಿಂದವರು ಜಯಶೀಲರಾಗುತ್ತಾ ಬಂದಿರುವರು.

### ಯಹೂದಿಗಳ ಮೇಲಿನ ದ್ವೇಷದ ಕಾರಣ

ಯುರೋಪ ಖಂಡದಲ್ಲೀಗ ಒಟ್ಟಿಗೆ ೫೦ ಲಕ್ಷ ಯಹೂದಿಗಳಿರುವರು. ಎಲ್ಲರೂ ಭಯಗ್ರಸ್ಥರಾಗಿರುವರು. ಅವರ ಸ್ತ್ರೀಯರ ಶೀಲವು ಹರಣಗೊಳಿಸಲ್ಪಡುತ್ತಿದೆ ಸಂಪತ್ತು ಸೂರೆ ಮಾಡಲಾಗಿದೆ. ಯಹೂದಿಗಳನ್ನು ಎಲ್ಲೆಲ್ಲೂ ತಮ್ಮ ದೇಶಗಳಿಂದ ಹೊರದಬ್ಬುತ್ತಿರುವ ಮುಖ್ಯ ಕಾರಣವೆಂದರೆ, ಧರ್ಮಾಂಧತೆ. ಅವರ ಪೂರ್ವಜರಲ್ಲಿ ಯಾರೋ ಕೆಲವರು ಯೇಸುಕ್ರಿಸ್ತನನ್ನು ಶೂಲಕ್ಕೇರಿಸಿದರಂತೆ. ಅವರ ಪೂರ್ವಜರು ಮಾಡಿರುವ ಆಘೋರ ಅಪರಾಧಕ್ಕೆ ಕ್ರಿಸ್ತಶಕ ೧೯೩೬ರಲ್ಲಿ ಜೀವಂತರಾಗಿರುವ ಯಹೂದಿಗಳ ಮೇಲೆ ನಡಿಸಲಾಗುತ್ತಿರುವ ಅತ್ಯಾಚಾರವಿದು! ಕ್ರೈಸ್ತ ಧರ್ಮಾನುಯಾಯಿಗಳು ಯೇಸುಕ್ರಿಸ್ತನ ಮೇಲೆ ನಡೆದ ಅಂದಿನ ಅತ್ಯಾಚಾರಗಳ ಪರಿಮಾರ್ಜನವನ್ನು ೨೦೦೦ವರ್ಷಗಳ ಅನಂತರ ಈಗ ಸಾಧಿಸುತ್ತಿರುವರು! ಯಹೂದಿಗಳು ಇಂದಿನ ನರಯಜ್ಞದಿಂದ ಪಾರಾದರೆ ಮುಂದಕ್ಕೆ ಇದರ ಪ್ರತೀಕಾರ ಮಾಡದೆ ಇರಲಾಪರೇ?

ಕಟ್ಟಡಗಳು ಭಸ್ಮವಾದವು. ಸ್ಪೇನಿನ ಅಸಂಖ್ಯಾತ ಜನರು ಬಾಂಬಿನ ಮತ್ತು ಫಿರಂಗಿಗಳಿಂದ ಹಾರುವ ಗುಂಡುಗಳ ಸುರಿಮಳೆಯಿಂದ ಇಹಲೋಕದ ಯಾತ್ರೆಯನ್ನು ಮುಗಿಸಿದರು. ಯಾವಲ್ಲಿ ಪ್ರೇಮ ಮತ್ತು ಆನಂದವು ವಿಹರಿಸುತ್ತಿತ್ತೋ ಅಲ್ಲೀಗ ಹೃದಯವನ್ನು ಕಂಪಾಯಮಾನ ಗೊಳಿಸುವ ಆಹಾಕಾರದ ರುದ್ರಧ್ವನಿಯು ಕೇಳಬರುತ್ತಿದೆ! ಕಳೆದ ಎರಡು ವರ್ಷಗಳಿಂದ ಒಂದೇಸಮನಾಗಿ ಕಳೆಗುಂದದ ಈ ಭೀಕರ ಪರಿಸ್ಥಿತಿಯು ಮತ್ತಷ್ಟು ಉಗ್ರಸ್ವರೂಪ ತಾಳುತ್ತಾ ಅಲ್ಲೀಗ ರಕ್ತದ ಕಾಲುವೆಗಳೇ ಹರಿಯುತ್ತಿವೆ. ಇಂತಹ ಪರಿಸ್ಥಿತಿಗೆ ಮೂಲಪುರುಷನಾರು? ಅವನೆ ಜನರಲ್ ಫ್ರಾಂಕೋ.

ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಗಿಂತಲೂ ಮಿಗಿಲಾಗಿ ಜನರಲ್ ಫ್ರಾಂಕೋವಾದರೂ ಸಂಪಾದಿಸತಕ್ಕುದೇನಿದೆ? ಪ್ರಜಾಸತ್ತೆಗಾಗಿಯೇ ಸ್ಪೇನಿನ ಸರಕಾರವೂ, ಸ್ಪೇನಿಯಾರ್ಡರೆಂಬ ವೀರರೂ ಒಗ್ಗಟ್ಟಿನಿಂದ ತಮ್ಮ ಆತ್ಮಬಲಿಯನ್ನಿತ್ತು ಫ್ರಾಂಕೋವಿನ ಫಿತೂರಿಗೊಳಗಾದ ಬಂಡಗಾರರೊಡನೆ ವೀರಾವೇಶದಿಂದ ಹೋರಾಡಿ ಅವರನ್ನು ಎದುರಿಸುತ್ತಿರುವರು. ಸ್ಪೇನಿನ ಸ್ವಾತಂತ್ರ್ಯಯುದ್ಧದಿಂದಾಗಿ ಜಗತ್ತಿನ ದೃಷ್ಟಿಯು ಈಗ ಸ್ಪೇನಿನ ಕಡೆಗೆ ನಾಟಿರುವುದು. ಪ್ರಜಾಸತ್ತೆಯನ್ನು ಮಣ್ಣುಗೂಡಿಸಲು ಎರಡು ವರ್ಷಗಳಿಂದ ಹೋರಾಡುತ್ತಿರುವ ಜನರಲ್ ಫ್ರಾಂಕೋವಿನ ಜೀವನ ಚರಿತ್ರೆಯು ಇನ್ನೂ ಹೆಚ್ಚಿನವರಿಗೆ ತಿಳಿದಿಲ್ಲ. ಆ ವಿಷಯವನ್ನೇ ಈ ಲೇಖನದಲ್ಲಿ ಚುಟುಕಿನಿಂದ ನಿರೂಪಿಸಲಾಗಿದೆ.

ಜನರಲ್ ಫ್ರಾಂಕೋವಿನ "ಕ್ರಿಸ್ತ ... "ಫ್ರಾನ್ಸಿಸ್ಕೋ ಪೊಲೀನೊ ಹರ್ಮೀನ ... ಟಿಯೋಡುಲೋ" ಎಂದು. ಆದರೆ ಆ ... ಹೆಸರು ಅವನ ಆಪ್ತೇಷ್ಟರಿಗಲ್ಲದೆ, ... ಅದು ತಿಳಿದಿಲ್ಲ. ಅವನ ಪರಿಚಯ, ... ಜೀವನರಹಸ್ಯಗಳು ಯಾರಿಗೂ ಒಂದಿ... ತಿಳಿದಿಲ್ಲ. ಯುದ್ಧ ಶುರುವಾದಮೇಲೆ ... ಳ್ಳಿ ಅವನ ಹೆಸರು ಬಂಡುಗಾರ ಫ... ಎಂಬುದಾಗಿಯೂ, ಅನಂತರ ... ಫ್ರಾಂಕೋ ಎಂಬುದಾಗಿಯೂ ವ್ಯಕ್ತವಾ... ಬಂದಿರುವುದು.

### ಫ್ರಾಂಕೋವಿನ ಬಾಲವಿ...

ಜನರಲ್ ಫ್ರಾಂಕೊನು ಸಾಷಾಣ ಹ... ಮಾನವನೆಂದು ತಿಳಿಯಲಾಗಿದೆ. ಅವನ... ಣೆಯೆಂಬುದೇ ಇಲ್ಲ. ಅವನು ನಿರ್ದಯ... ಕ್ಕೆ ಅವನ ಚರಿತ್ರೆಯೇ ಸಾಕ್ಷಿಯಾಗಿದೆ. ... ಅಂತಃಕಲಹವು ಪ್ರಾರಂಭವಾದ ಮೇಲೆ... ತ್ತಿಯ ಕಡೆಯಿಂದ ಹೋರಾಡುತ್ತಿದ್ದ... ಅವನ ಬಂಧನಕ್ಕೊಳಗಾಗಿ ಕೈದಿಖಾನೆಯ... ಜನರಲ್ ಫ್ರಾಂಕೋವು ಅವರ... ಮಾಡುತ್ತಾ ಇರುವಾಗ ಅವರಲ್ಲಿ ಅವನ... ಯಾದ ಮಿತ್ರನೊಬ್ಬನು ಅವನ ದೃಷ್ಟಿಗೆ...

ಫಿಲೀಫ್" ಎಂದು ಹೆಸರನ್ನೆತ್ತಿ ಫ್ರಾಂಕೋ
ವನ ಹತ್ತಿರಕ್ಕೆ ಹೋದನು. ಆ ಕೈದಿಯು
ರ್ಚಕಿತನಾಗಿ, ತಲೆಯೆತ್ತಿ ಮೇಲಕ್ಕೆ
ದನು. ಒಬ್ಬನು ಮತ್ತೊಬ್ಬನನ್ನು
ನೋಡಿದರು. ಇಬ್ಬರದೃಷ್ಟಿಯೂ ಒಂದಾ
ಒಬ್ಬರನ್ನೊಬ್ಬರು ಚೆನ್ನಾಗಿ ಅರಿತರು.
ಸಾಂ. ಸೆಕ್ಷಿಟೋ – ಹೌದು ನಾನೇ ಫಿಲೀ
ಬಾಲವಯಸ್ಸಿನಲ್ಲಿ ಅಲ್‌ಫೆರೋಲದ ಎರ
ಆರ್ಟ್ ಸ್ಕೂಲಿನಲ್ಲಿ ಕಲಿಯುತ್ತಿದ್ದಾಗ,
ಬಂಡಖೋರ ಫ್ರಾಂಕೋವಿನ ಹೆಸರು
ಟೋ" ಎಂಬುದಾಗಿತ್ತು ಫಿಲೀಪನೂ
ಹೆಸರಿನಿಂದ ಅವನನ್ನು ಸಂಬೋಧಿಸಿದನು
ಫ್ರಾಂಕೋವು ಆ ಕೈದಿಯನ್ನು ಒಂದು ಒದಿಗೆ
ಂಡು ಹೋದನು. ಮತ್ತು ಓರ್ವ
ಕನ್ ಸೈನಿಕನ ಹತ್ತಿರ ತಮಾಶೆಯ ಮಾತು
ಡಿ ಅವನಿಂದ ಪಡಕೊಂಡ ಒಂದು ಸಿಗ
ನ್ನು ಫಿಲೀಪನಿಗೆ ಸೇದಲು ಕೊಟ್ಟನು.
ನನು ಆ ಸಿಗರೇಟನ್ನು ಸೇದಿದನು.
ಾ ತಮ್ಮ ಬಾಲವಯಸ್ಸಿನ ಸಂಗತಿಗಳನ್ನು
ಗೆತಂದು ಮನಸ್ವಿಯಾಗಿ ಮಾತನಾಡಿದರು.
ಉಪಾಧ್ಯಾಯರ ಹೆಸರನ್ನೆತ್ತಿ ಶಿಕ್ಷಣವಿಷ
ನ್ನು ವಿವರಿಸಿದರು. ಮಾತುಕತೆಗಳು
ುತ್ತಿದ್ದಾಗ ಅವರಿಬ್ಬರೂ ಅತ್ತಿತ್ತ ತಿರು
ತ್ತಿದ್ದರು. ಫಿಲೀಪನು ಸಿಗರೇಟನ್ನು
ಮುಗಿಸಿದನು. ಉಳಿದ ಆ ಚಿಕ್ಕ ತುಂಡನ್ನು
ಕೆಳಕ್ಕೆಹಾಕಿ ಕಾಲಿನಿಂದದನ್ನು ತುಳಿದನು. ಫಿಲೀ
ಪನು ಹೇಗೆ ಸಿಗರೇಟನ್ನು ಸೇದಿ ಉಳಿದ
ತುಂಡನ್ನು ಕಾಲಿನಿಂದ ತುಳಿದನೋ ಅದೇರೀತಿ
ಕೂಡಲೇ ಜನರಲ್ ಫ್ರಾಂಕೋವು ಅವನನ್ನು
ಬಂದಿಖಾನೆಗೆ ಕೊಂಡುಹೋಗಲು ತನ್ನ ಸೈನಿಕ
ರಿಗೆ ಆಜ್ಞಾಪಿಸಿದನು ನೋಡುತ್ತಿದ್ದ ಹಾಗೆಯೇ
ಫ್ರಾಂಕೋವಿನ ಸಹವಾಠಿ- ಬಾಲಮಿತ್ರನು-
ಲಷ್ಕರೀ ಸಿವಾಯಿಗಳ ಬಂದಿಯಾಗಿ ಕಾರಾಗ್ರ
ಹದ ಕೋಣೆಯನ್ನು ಸೇರಿದನು. ಅನಂತರ
ಲಷ್ಕರೀ ಕೋರ್ಟಿನ ಮುಂದೆ ಫಿಲೀಪನ ವಿಚಾ
ರಣೆ ನಡೆದು ಅವನಿಗೆ ಆಜನ್ಮ ಕೈದುಖಾನೆಯ
ಶಿಕ್ಷೆಯು ವಿಧಿಸಲ್ಪಟ್ಟಿತು.

ಮೇಲಿನ ಸಂಗತಿಯು ಸ್ಪೇನಿನ ಅಂತರ್ಯು
ದ್ಧವು ಪ್ರಾರಂಭವಾದ ಅಲ್ಪಾವಧಿಯೊಳಗೆ
ನಡೆದಿತ್ತು.

## ಫ್ರಾಂಕೋವಿನ ಗುಣಸ್ವಭಾವ ಮತ್ತು ಮಿತ್ರತ್ವ.

ಜನರಲ್ ಫ್ರಾಂಕೋವು ನೋಡಲು ಕುಳ್ಳ
ನಾಗಿದ್ದು ದೇಹದಲ್ಲಿ ಪುಷ್ಟನಾಗಿರುವನು.
ಅವನು ಗಿಡ್ಡಾದ ಮೀಸೆಗಳನ್ನು ಇಟ್ಟುಕೊಂಡಿ
ರುವನು. ಸೈನಿಕರ ಲಕ್ಷಣವೇ ಅವನಲಿಲ್ಲ.
ಅವನಿಗೆ ಚುರುಟಾಗಲೀ, ಸಿಗರೇಟಾಗಲೀ
ಸೇದುವ ಅಭ್ಯಾಸವಿಲ್ಲ! ಅವನು ಬ್ರಾಂಡಿ,
ವ್ಹಿಸ್ಕೀ ಮೊದಲಾದ ಯಾವುದೇತರದ ಅಮಲು
ಕಾರಕ ಪೇಯಗಳನ್ನು ಕುಡಿವ ಅಭ್ಯಾಸವುಳ್ಳವ
ನಲ್ಲ! ಎಷ್ಟು ಅಗತ್ಯವಿದೆಯೋ ಅಷ್ಟೇ ಮಾತು
ಗಳನ್ನಾಡುವ ಸ್ವಭಾವದವನು. ಇಡೀ ದಿವಸ
ದಲ್ಲಿ ಒಂದೇಸಲ ಹೊಟ್ಟೆತುಂಬಾ ಊಟ
ಮಾಡುವ ಅಭ್ಯಾಸ ಅವನದು. ಸೋನಾರಂಗಿ
ಗಳೆಂದರೆ ಅವನಿಗೆ ಬಹಳ ಇಷ್ಟ. ದಿವಸ
ಒಂದರ ಕನಿಷ್ಠವೆಂದರೆ ಇಪ್ಪತ್ತು ಇಪ್ಪತ್ತೈದು
ನಾರಂಗಿಗಳನ್ನಾದರೂ ತಿಂದೇತೀರಬೇಕೆಂಬ
ನಿಯಮ ಅವನದು. ಅವನು ಎಲ್ಲೆಲ್ಲಿಗೆ ಹೋಗು
ವನೋ ಅಲ್ಲಲ್ಲಿಗೆ ಅವನ ವಿಶ್ವಾಸಿಕನಾದ ನೌಕ
ರನು ಅವನ ಸಂಗಾತವೇ ನಾರಂಗಿಗಳನ್ನು
ಹೊತ್ತುಕೊಂಡು ಹೋಗುವನು. ವಿಶ್ವಾಸಿಕ
ನಾದ ಅವನ ಆ ನೌಕರನ ಹೆಸರು 'ಗೋಮೆರುರ್'
ಎಂದು. ಅವನು ಜಾತಿಯಲ್ಲಿ ಹಜಾಮನು.

ಗೋಮೆಝುನು ದಿವಸಕ್ಕೆ ಮೂರುಸಲ ತನ್ನ
ಎಡಗೈಯಿಂದ ಫ್ರಾಂಕೋವಿಗೆ ಕ್ಷೌರಮಾಡು
ತ್ತಾನೆ. ವಾರಕ್ಕೊಂದುಸಲ ತಲೆಯ ಕೂದ
ಲನ್ನು ಕತ್ತರಿಸಿ ಕ್ರೋಪ್‌ಮಾಡುತ್ತಾನೆ.
ಗೋಮೆಝುನು ಸೋನಾರಂಗಿಗಳನ್ನು ಹೊತ್ತು
ಕೊಂಡು ಫ್ರಾಂಕೋವಿನ ಒಟ್ಟಿಗೆ ತಿರುಗು
ವಂತೆಯೇ, ಕ್ಷೌರದ ಸಾಮಗ್ರಿಗಳನ್ನೂ ತನ್ನ
ಹತ್ತಿರವೇ ಇಟ್ಟುಕೊಳ್ಳುತ್ತಾನೆ. ಯುದ್ಧ
ವಿಚಾರವನ್ನು ಮಾಡುವಾಗ, ಮಂತ್ರಾಲೋಚ
ನೆಯ ಸಮಯದಲ್ಲಿ ಯಾರೂ ಇರಕೂಡದೆಂಬ


FIRM CONVICTION

EVERY AGENT OF THE CANARA MUTUAL HAS THE FIRM CONVICTION THAT HIS WORK IS A GENUINE CONTRIBUTION TO SOCIETY THE DETERMINATION AND ENTHUSIASM WHICH LEADS HIM TO SUCCESS DAILY SPRING FROM THIS FIRM CONVICTION.

HAVE YOU GOT THAT FIRM CONVICTION?

IF NOT, REPRESENT THE CANARA MUTUAL AND DO REAL SERVICE.

It is purely a Policy-holder's Company managed for their benefit.

THE CANARA MUTUAL

ASSURANCE COMPANY, LIMITED,

UDIPI, S. INDIA.

APPLICATIONS FOR AGENCIES INVITED.

ನಿಯಮವಿರುವುದಾದರೂ, ಆ ನಿಯಮವು ಗೋಮೆಝುನಿಗೆ ಲಾಗು ಆಗುವುದಿಲ್ಲ.

## ಗೋಮೇಝುನ ವೈಶಿಷ್ಟ್ಯ

ಗೋಮೆಝುನಿಗೆ ಸ್ಪೇನಿನ ಪ್ರತಿಯೊಂದು ಊರಿನ ಹಾಗೂ ಸ್ಥಳದ ಅನುಭವವಿದೆ. ಫ್ರೆಂಕೊವಿನ ಪಕ್ಷವಾಗಿ ಸಾವಿರ ಸಾವಿರ ಯೋದ್ಧರು ಹೋರಾಡುತ್ತಿರುವರಾದರೂ ಯಾರಮೇಲೂ ಅವನಿಗೆ ವಿಶ್ವಾಸವಿಲ್ಲ! ಆವನ ವಿಶ್ವಾಸದ ಮೂರ್ತಿಯೆಂದರೆ ಗೋಮೆಝ್ ಒಬ್ಬನೇ ಸರಿ! ಅನೇಕಸಲ ಬಹಿರಂಗವಾಗಿ ತನ್ನ ಜನರೊಡನೆ ಫ್ರಾಂಕೋವು ಯುದ್ಧ ವಿಚಾರ ಮಾಡುತ್ತಿರುವನಾದರೂ, ಯಾರೊಬ್ಬರಿಗೂ ಅವನು ತನ್ನ ರಹಸ್ಯಗಳನ್ನು ತಿಳಿಸುವನೆಂಬ ಮಾತೇ ಸುಳ್ಳು! ಆದರೆ ಗೋಮೆಜನಿಗೆ ತಿಳಿಸದೆ ಯಾವರಹಸ್ಯಗಳನ್ನೂ ಅವನು ಗೋಪ್ಯವಾಗಿರಿಸುವುದಿಲ್ಲ. ಅಷ್ಟೇ ಅಲ್ಲ, ಅವುಗಳ ಮುಂದಿನ ವಿಚಾರವನ್ನು ಗೋಮೆಝುನೊಡನೆಯೇ ಅವನು ಮಾಡುತ್ತಿರುವನು!

## ಜೀವ ಉಳಿಸಿದ ಮಹಾನುಭಾವ!

ಗೋಮೆಝುನು ಫ್ರಾಂಕೋವಿನ ಪ್ರಾಣವನ್ನು ಉಳಿಸಲಿಕ್ಕಾಗಿ ತನ್ನ ಪ್ರಾಣದ ಹಂಗು ತೊರೆದು ಬಲಕೈಯ್ಯನ್ನು ಶತ್ರುವಿನ ಖಡ್ಗಕ್ಕೆ ಬಲಿಕೊಟ್ಟ ವೀರನು! ಇದರಿಂದಾಗಿ ಗೋಮೆಝುನಿಗೆ ಎಡಕೈ ಒಂದೇ ಉಳಿಯಿತು. ಸ್ಪೇನಿನ ರಿಫ್ ಸರದಾರರೊಡನೆ ಹೋರಾಟ ನಡಿಯುತ್ತಿದ್ದಾಗ ಒಬ್ಬ ಬಲಿಷ್ಠನಾದ ಮೂರ ಸೈನಿಕನು ಅಕಸ್ಮಾತ್ತಾಗಿ ಫ್ರಾಂಕೋವಿನ ಮೇಲೆ ಹಲ್ಲೆನಡಿಸಿದನು. ಆ ಸಮಯದಲ್ಲ ಆ ಮೂರ ಸೈನಿಕನಿಗೂ ಫ್ರೆಂಕೊವಿಗೂ ನಡುವೆ ಅಡ್ಡವಾಗಿ ಬಂದು ಗೋಮೆಝುನು ಫ್ರಾಂಕೋವಿನ ಜೀವವನ್ನುಳಿಸಲು ಯತ್ನಿಸಿದನು. ಇದರಿಂದಾಗಿ ಆ ಮೂರ ಸೈನಿಕನ ಖಡ್ಗದ ಆಘಾತದಿಂದ ಗೋಮೆಝುನ ಬಲಗೈಯು ಭೂಗತವಾಯಿತು! ಈ ಮಹದುಪಕಾರಕ್ಕಾಗಿ ಫ್ರಾಂಕೋವು ಗೋಮೆಝುನಿಗೆ ಚಿರಋಣಿಯಾಗಿರುವನು. ಅಂದಿನಿಂದ ಫ್ರೆಂಕೋವು ಗೋಮೆಝುನನ್ನು ತನ್ನ ಅಂಗರಕ್ಷಕನನ್ನಾಗಿ ಮಾಡಿಕೊಂಡಿರುವನಲ್ಲದೆ, ಅವನಷ್ಟು ಆಪ್ತರು ತನಗೆ ಇಹಲೋಕದಲ್ಲಿ ಮತ್ತಾರೂ ಇಲ್ಲವೆಂಬುದನ್ನು ನಿರ್ಧರಿಸಿರುವನು. ಗೋಮೆಝುನ ಒಂದು ಕೈ ಕತ್ತರಿಸಿ ಹೋಗಿರುವುದಾದರೂ, ಎಡಗೈಯಿಂದವನು ಬಹಳ ನಾಜೂಕಾದ ರೀತಿಯಲ್ಲಿ ಕ್ಷೌರಮಾಡಲು ಸಮರ್ಥನಾಗಿರುವನು. ಗೋಮೆಝುನು ಜನರಲ್ ಫ್ರಾಂಕೋವಿನ ಆಪ್ತನಾದುದರಿಂದ, ಫ್ರಾಂಕೊವಿನ ಕಡೆಯವರೆಲ್ಲರಿಗೂ ಅವನು ಅತ್ಯಂತ ಪ್ರಿಯನಾಗಿರುವನು.

## ಫ್ರಾಂಕೊವಿನ ಪ್ರೇಮಸಂಬಂಧ.

ಫ್ರೆಂಕೋವಿನ ಪ್ರೇಮಕಥೆಯೂ ಬಹಳ ವಿಸ್ಮಯಕರವಾದುದು ಫ್ರಾಂಕೋವು ಸುಮಾರು ೨೦ ವರ್ಷ ವಯಸ್ಸಿನವನಾಗಿದ್ದಾಗ ಝೂಮೋರ ರೆಜಿಮೆಂಟನಲ್ಲಿ ನೌಕರನಾಗಿದ್ದನು. ಆ ಸಮಯದಲ್ಲಿ ಅವನು ಹುಡುಗಿಯರ ಶಾಲೆಯ ಜಗಲಿ ಮೇಲೆ ಕೂತು ಆ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಸ್ಪೇನಿನ ಕಾರ್ಮೆನ್ ಎಂಬ ಒಂದು ಶ್ರೀಮಂತ ಮತ್ತು ಪ್ರಸಿದ್ಧ ಮನೆತನದ ಹುಡುಗಿಯ ಮೇಲೆ ದೃಷ್ಟಿಯನ್ನಿಟ್ಟಿದ್ದನು. ಆ ಬಾಲಿಕೆಯು ೧೫ವರ್ಷ ಪ್ರಾಯದವಳಾಗಿಯೂ ಕಪ್ಪಾದ ಕಣ್ಣುಗೊಂಬೆಗಳುಳ್ಳವಳಾಗಿಯೂ, ಕೃಶ ಶರೀರ, ಸುಂದರ ಮುಖವುಳ್ಳವಳಾಗಿದ್ದು, ತಲೆಯಮೇಲಿಂದ ತೂಗಾಡುವ ವಿಕಸಿತ ಕೇಶರಾಶಿಗಳಿಂದ ಶೋಭಿಸುವ ಮೋಹಕ ಮೂರ್ತಿಯಾಗಿದ್ದಳು. ಆ ಸಮಯ ಫ್ರಾಂಕೋವು ಒಬ್ಬ ಭಿಕಾರಿಯಂತಿದ್ದನು. ಆ ಕುಮಾರಿಕೆಯು ಹೊರಗೆ ಅಡ್ಡಾಡಲು ಹೋಗುತ್ತಿದ್ದಾಗ ಅವಳ ಆರೈಕೆಗಾಗಿ ಓರ್ವ ಪ್ರೌಢಸ್ತ್ರೀಯಳು ಅವಳ ಸಮೀಪದಲ್ಲೇ ಇರುತ್ತಿದ್ದಳು. ಆ ಕುಮಾರಿಕೆಯು ಈ ಪ್ರೌಢಸ್ತ್ರೀಯಳ ಬಂಧನವನ್ನು ಉಪಾಯದಿಂದ ತಪ್ಪಿಸಿಕೊಂಡು ಹೋಗಿ ಫ್ರಾಂಕೋವಿನೊಡನೆ ರಮಿಸುತ್ತಿದ್ದಳು.

ಫ್ರಾಂಕೋವಿನ ಗುಪ್ತಪ್ರೇಮ ಸಮ್ಮಂಧವು ಈ ರೀತಿ ನಡಿಯುತ್ತಿದ್ದಾಗ, ಅವನು ಯಾವ ಮೂರ ಸೈನ್ಯದಲ್ಲಿ ನೌಕರನಾಗಿದ್ದನೋ ಆ ಸೈನ್ಯವು ಆಫ್ರಿಕಕ್ಕೆ ಹೊರಡಬೇಕಾಯಿತು. ಅಲ್ಲಿ ಅವನು ತೋರಿದ ಶೌರ್ಯ ಪರಾಕ್ರಮಗಳಿಂದ ಅವನನ್ನು ಕೆಪ್ಟನ್, ಮೇಜರ್, ಲೆಫ್ಟನೆಂಟ್, ಕರ್ನಲ್ ಮತ್ತು ಪರದೇಶದ ಸೈನ್ಯದ ಮುಖ್ಯಾಧಿಕಾರಿಯನ್ನಾಗಿ ನೇಮಿಸಲಾಯಿತು. ಯಾವ ಕಾರ್ಮೆನ್ ಕುಟುಂಬದ ಹುಡುಗಿಯ ಮೇಲೆ ದೃಷ್ಟಿಯನ್ನಿಟ್ಟು ಅವಳನ್ನು ರಹಸ್ಯವಾಗಿ ಭೇಟಿಯಾಗಿ ಅವಳೊಂದಿಗೆ ಕೂಡಿ ರಮಿಸುತ್ತಿದ್ದನೋ, ಆ ಹುಡುಗಿಗೆ ಲಗ್ನಮಾಡುವ ವಿಚಾರನಡೆದು, ಅವಳನ್ನು ಆಫ್ರಿಕದಲ್ಲಿ ಉನ್ನತ ಪದವಿಗೇರಿದ ಈ ಶೂರ ಯುವಕನಿಗೆ ಕೊಟ್ಟು ವಿವಾಹ ಮಾಡಬೇಕಾಗಿ ನಿರ್ಣಯಿಸಲಾಯಿತು. ಎರಡು ಸಲ ಫ್ರಾಂಕೋವಿನ ಲಗ್ನವನ್ನು ನಿಶ್ಚಯಿಸಲಾಯಿತು. ಆದರೆ ಆ ಸಮಯ ಫ್ರಾಂಕೋವಿಗೆ ಪರದೇಶದಲ್ಲಿ ಯುದ್ಧಕ್ಕೆ ತೆರಳಬೇಕಾದುದರಿಂದ ಆ ವಿಚಾರವು ಸಾಧ್ಯವಾಗದೆ ಹೋಯಿತು. ಉಭಯತರೊಳಗೆ ಹನ್ನೊಂದು ವರ್ಷಗಳ ಪ್ರೇಮಸಮ್ಮಂಧ ನಡೆದು ಆ ಬಳಿಕ ಅವರ ವಿವಾಹವು ನಡೆಯಿತು. ಅವರ ಲಗ್ನಕಾಲದಲ್ಲಿ ಸ್ಪೇನಿನ ಬಾದಶಹ ಅಲ್ಫಾನ್ಝೊ ಅತಿಥಿಯಾಗಿ ಹಾಜರಾಗಿದ್ದನು.

ಸ್ಪೇನಿನ ಪ್ರಜಾಸತ್ತಾತ್ಮಕ ರಾಜ್ಯಾಧಿಕಾರಿಗಳ ಫ್ರಾಂಕೋವಿನ ದುರ್ದಶೆಯ ವಾರ್ತೆಗಳನ್ನು ತಮ ಪ್ರತಿನಿಧಿಗಳ ಮೂಲಕ ವಿದೇಶಗಳಲ್ಲಿ ಪ್ರಸಾರಗೊಳಿಸುತ್ತಾ ಬರುತ್ತಿದ್ದಾಗ ಜನರಲ್ ಫ್ರಾಂಕೋವು ದಿನೇದಿನೇ ತನ್ನ ಪಕ್ಷವನ್ನು ಬಲಗೊಳಿಸುತ್ತಾ ಬಂದು ಸ್ಪೇನಿನ ಎಷ್ಟೋ ಮುಖ್ಯಪಟ್ಟಣಗಳನ್ನು ವಶಪಡಿಸಿಕೊಂಡನು. ಈಗಲಂತೂ ಇಟಲಿ, ಜರ್ಮನಿಗಳಂತಹ ಸಾಮ್ರಾಜ್ಯಸತ್ತಾಧಿಕಾರಿಗಳಾದ ಸಿ. ಮುಸಲೋನಿ ಮತ್ತು ಹೆರ ಹಿಟ್ಲರನ ಸಂಪೂರ್ಣ ಬೆಂಬಲವು ಜನರಲ್ ಫ್ರೆಂಕೋವಿಗೆ ದೊರೆತು ಈ ಈರ್ವರೂ ಫ್ರಾಂಕೋವಿನ ಸ್ನೇಹಿತರಾಗಿರುವರು. ಯುರೊಪಿನ ಈ ಉಭಯ ಮಹಾರಾಷ್ಟ್ರಗಳು ಜನರಲ್ ಫ್ರಾಂಕೋವಿನ ಬೆಂಬಲಕ್ಕಿರುವುದರಿಂದ ಸ್ಪೇನಿನ ಯುದ್ಧದಲ್ಲಿ ವಿಜಯಶ್ರೀಯು ಯಾವಪಕ್ಷಕ್ಕೆ ಒಲಿಯುವಳೆಂಬುದನ್ನು ನಿರ್ಧರಿಸುವುದು ಕಠಿಣತರ ಕಾರ್ಯವಾಗಿರುವುದು. ಅದನ್ನು ಮುಂದಿನ ಯುದ್ಧವೇ ನಿರ್ಣಯಿಸಲಿರುವುದು!


**Dr. G. B's.**
**(Medicated Snuff)**

Are you a Teacher or a Professor? An Agriculturist or a Merchant? Are you Chess Player? If you suffer from lassitude or your brain refuses to function, a pinch of Dr. G. B's medicated Snuff is what you require.

Price As. 4 per bottle Postage Extra.

**Guru Basava & Co. Ltd.,**
P.Box No. 510. Park Town, MADRAS.
S. N. Mariappah: *Managing Director.*

ಳು. ಅವರ ಗೌನುಗಳೊಳಗೆ ನಮ್ಮ
ಪುರುಷ ಕುಂಭಕರ್ಣನನ್ನು ಅಡಗಿಸಿ
ಬಿದು. ಅಷ್ಟಿದೆ ಅವರ ಅನುಕೂಲತೆ.
"ಬ್ಲೌರುಮ್" ಅಂದರೆ ಉಬ್ಬಿದ
ಳೊಳಗೆ ಏನಿಲ್ಲೆಂದರೂ ಒಂದೆರಡು ಸೂಡಿ
ಳನ್ನು ಅಡಗಿಸಿಡಬಹುದು. ಅದು ಅವರ
ಅವರ ಫೇಷನ್ನಿಗೆ ಒಂದು ರೀತಿಯೂ
ನಿಯಮವೂ ಇಲ್ಲ. ಒಬ್ಬ ಸ್ತ್ರೀಯಳಿಗ
ಗೊಂದು ಫೇಷನ್ ಆದರೆ, ಮತ್ತೊಬ್ಬಳಿಗೆ
ಕ್ಕಂದು ಫೇಷನ್. ಹೆಚ್ಚು ಅನುಕೂಲತೆ
ಯೂ, ಆಗತ್ಯವಿರುವವರೂ, ದಿವಸಕ್ಕೆ
ದು ವಿಧ ಫೇಷನುಗಳ ಗೌನುಗಳನ್ನೂ
ಬ್ಲೌಮುಗಳನ್ನೂ ಧರಿಸುತ್ತಾರೆ! ಅವರು
ಮಾಡಬಾರದ್ದಾ, ಹೇಳುವವರಾದರೂ
?

ಒ, ನಾಲ್ಕೈದು ಲೇಡಿಸ್‌ಗಳು ಒಟ್ಟಾಗಿ
ರು ಕಾರುಗಳಲ್ಲಿ ಬಂದು ಒಳಹೊಕ್ಕರೆ
ಯಾವ ಲಾರ್ಡ್ ಫೆಮಿಲಿಯವರೆಂದು ತಿಳಿ
ಊ ಕೂಡ ಕಷ್ಟವಾಗುತ್ತದೆ. ಇವರೆಲ್ಲರೂ
ಡಿಪಾರ್ಟುಮೆಂಟಿಗೆ ಹೋಗಿ, ಅಲ್ಲಿ
ಮ ತಯಾರಾಗುತ್ತಿರುವ ಗೌನುಗಳು,
ಬ್ಲೌಮುಗಳು, ಸೆಂಟ್ ಬಾಟ್ಲಿಗಳು, ಹೀಗೆ
ಎರಡಲ್ಲ ಬೇಕಾದ ಎಷ್ಟೋ ಸಾಮಾನು
ಹೊರತೆಗಿಸಿ ಪರೀಕ್ಷಿಸತೊಡಗುತ್ತಾರೆ
ಅನುಕೂಲವಾದಷ್ಟನ್ನು ಜಾರಿಸಿ ಬಿಡು
ಒಂದೆರಡು ಸಾಮಾನುಗಳನ್ನು ನೋಡಿ
ತೃಪ್ತರಾಗುವುದಿಲ್ಲ. ನೂರಾರು ಸಾಮಾನು
ಪರೀಕ್ಷಿಸಿ ಕೊನೆಗೆ ಒಂದನ್ನೂ ತೆಗೆದು
ಹೋಗುವ ರೂಢಿಯೂ ಅವರಲ್ಲಿದೆ

ಬ್ಬಳು ಒಂದುಸಲ ಬ್ಲೌರುಮುಗಳನ್ನು
ತೊಡಗಿದಳು. ಕವಾಟುಗಳಿಂದ ಬಗೆ
ಬ್ಲೌರು ಮುಗಳನ್ನೂ ಹೊರತೆಗಿಸಿ
ಂದನ್ನು ಧರಿಸಿನೋಡಿದಳು. ಹೀಗೆ
ಬ್ಲೌರುಮುಗಳನ್ನು ಧರಿಸಿ ನೋಡಿ
ವಳ ಮನಸ್ಸಿಗೆ ಅವುಗಳು ಹಿಡಿಯಲಿಲ್ಲ.
ಂದು ಕವಾಟಿನಿಂದ ಬ್ಲೌರುಮುಗಳನ್ನು
ಹೇಳದಳು. ಅವುಗಳು ಹೊರಬರು
ನಾಲ್ಕೈದು ಬ್ಲೌರುಮುಗಳನ್ನು
ಹೆಂಗಸಳು ಧರಿಸಿ ಅವುಗಳ ಮೇಲೆ
ನೆಯಿಂದ ಬರುವಾಗ ಧರಿಸಿದ ಬ್ಲೌರು
ಕೊಟ್ಟುಕೊಂಡಳು. ಅನಂತರ ತೆಗೆದ
ಮುಗಳನ್ನು ನೋಡಿ ಅವುಗಳು ಚೆನ್ನಾ
ನಡೆದು ಬಿಟ್ಟಳು! ಮೂರು ನಾಲ್ಕು

ಜನಸ್ತ್ರೀಯರು ಆ ಗಿರಾಕಿ ಹೆಂಗಸಳು ಬ್ಲೌರುಮಗಳನ್ನು ಧರಿಸುವಾಗ ಅಡ್ಡ ನಿಂತಿದ್ದರು! ಗಿರಾಕಿಗಳು ಹೊರಟು ಹೋದರು. ಮೇಜಿನ ಮೇಲಿದ್ದ ಬ್ಲೌರುಮುಗಳನ್ನು ತಿರುಗಿ ಲೆಕ್ಕಮಾಡಿ ಒಳಗಿಡಲು ನೋಡುವಾಗ ೩-೪ ಬ್ಲೌರುಮುಗಳು ಕಾಣೆಯಾಗಿದ್ದವು ಅವಳು ಪೋಲೀಸರಿಗೆ ಹೇಳಿ ಪೋಲೀಸರು ಹೊರಬರುವಷ್ಟರಲ್ಲಿ ಹೊರಗಡೆ ಕಾರೂ ಇದ್ದಿಲ್ಲ, ಹೆಂಗಸರೂ ಕಾಣೆ! ಇದೇ ರೀತಿ ಹೆಂಗಸರು "ರೇನ್‌ಕೋಟ್" "ಓವರ್ ಕೋಟ್" ಮೊದಲಾದುವನ್ನು ಧರಿಸಿ ಕಳವು ಮಾಡುತ್ತಾರೆ.

### ವ್ಯಾಪಾರದ ಸೀಝನ್

ಎಲ್ಲದಕ್ಕೂ ಒಂದು ಸೀಝನ್ ಅಂದರೆ ಭರ ಭರಾಟೆಯ ಕಾಲವಿರತ್ತದೆ. ಉದಾ: ಫಲ ವಸ್ತುಗಳ ಕಾಲ, ಬೀಜ ಬಿತ್ತುವ ಕಾಲ, ಬೆಳೆ ಕೊಯ್ಯುವ ಕಾಲ, ಜಾತ್ರೆಗಳ ಕಾಲ- ಹೀಗೆಯೇ ವ್ಯಾಪಾರವು ಜೋರಿನಿಂದ ನಡೆಯುವ ಕೆಲವು ಸಂದರ್ಭಗಳಿರುತ್ತವೆ. ಈ ರೀತಿ ಭರಭರಾಟೆಕೆಯಿಂದ ವ್ಯಾವಾರ ನಡೆಯುವ ಸಮಯ ಅಂದರೆ, ಅಲ್ಲಿ ಚಳಿ ಕಡಿಮೆಯಾಗಿ, ಹವೆ ಚೆನ್ನಾಗಿದ್ದು, ವಿಶೇಷ ಸಂಗತಿಗಳು ನಡೆಯುವ ಕಾಲ. ಕ್ರಿಸ್‌ಮಸ್, ಜಾತ್ರೆಗಳು, ಪೋಕಿ ಮಹಾರಾಜರುಗಳ ಆಗಮನ ಕಾಲ, ಇತ್ಯಾದಿ ವಿಶೇಷ ಸಂದರ್ಭಗಳಲ್ಲಿ ಅಮೀರರು, ಸರದಾರರು, ವಿಶೇಷಗಳ ಪ್ರಯಾಣಿಕರು, ಇತ್ಯಾದಿ ಜನರು ಲಂಡನ್ ಶಹರಿಗೆ ಬರುತ್ತಾರೆ ಆ ಕಾಲವಲ್ಲಿ ಲಂಡನ್ ಶಹರಿನ ಆಸು ಪಾಸುಗಳ ಜನರೂ ಅಲ್ಲಿಗೆ ಬರುತ್ತಾರೆ. ಮೈಸೂರಲ್ಲಿ ದಸರಾ ಸಮಯಕ್ಕೆ, ಮುಂಬಾಯಿಯಲ್ಲಿ ದೀಪಾವಳಿಯ ಸಮಯಕ್ಕೆ ಜನರು ಸೇರುವಂತೆ ಲಂಡನ ಶಹರಿನಲ್ಲಿ ಮೇಲೆ ಹೇಳಿದ ಪ್ರಸಂಗಗಳಲ್ಲಿ ಜನಸ್ತೋಮವು ಕಿಕ್ಕಿರಿದು ನೆರೆಯುತ್ತದೆ. ಮೊದಲೇ ೮೦ ಲಕ್ಷ ಜನಸಂಖ್ಯೆ ಇರುವ ಪಟ್ಟಣವದು- ಅದರಲ್ಲೂ ಇಂತಹ ಸಂದರ್ಭಗಳೊದಗಿದರೆ ಕಳವು ಮಾಡುವವರ ಭಾಗ್ಯೋದಯಕಾಲವದೆಂದು ಹೇಳುತ್ತಿರುವರು! ಇಂತಹ ಸಂದರ್ಭಗಳಲ್ಲೇ ಕಳವು ಮಾಡುವ "ಲೇಡಿಸ್ ಮತ್ತು ಜಂಟ್ಲಮನ್ನರು" ೬ ತಿಂಗಳು, ಒಂದು ವರ್ಷಕ್ಕೆ ಬೇಕಾಗುವಷ್ಟು ಒಡವೆ ವಸ್ತುಗಳನ್ನೂ ಅಪಹರಿಸುತ್ತಾರೆ!

### ಇಡೀ ಕುಟುಂಬದ ಸ್ತ್ರೀಯರು!

ಇಡಿಯ ಒಂದು ಕುಟುಂಬದ ಸ್ತ್ರೀಯರೂ ಒಟ್ಟಾಗಿ ಮೇಲಿನಂತೆ ಸಭ್ಯತೆಯಿಂದ ಕಳವು ಮಾಡುವದುಂಟೆಂದು ಹೇಳುತ್ತಿರುವರು ಎಂತಹ ಸುಧಾರಣೆಯ ದೇಶವಿದು! ಕಳವು ಮಾಡಲು ಹೋಗುವ ಸ್ತ್ರೀಯರಲ್ಲಿ ಹೆಚ್ಚಾಗಿ ಮೈಯ್ಯಲ್ಲಿ ತ್ರಾಣವುಳ್ಳವರೂ, ಚಲುವೆಯರೂ ಇರುವರಂತೆ ಕಾರಣ ಎಲ್ಲಾದರೂ ಕಳವು ಮಾಡುವಾಗ ಅವರನ್ನು ಹಿಡಿದು ಬಿಟ್ಟರೆ, ಕೈಹಿಡಿದ ಗುಪ್ತ ಪೋಲೀಸನನ್ನು ಕೂಡಲೇ ಅವಳು ನೆಲಕ್ಕುರುಳಿಸಲು ಸಮರ್ಥಳಿರುತ್ತಾಳೆ! ಮತ್ತು ಮಾಡಿದ ಕಳವನ್ನು ಜೀರ್ಣಿಸಿಕೊಳ್ಳಲು ಹೇಳುವ ಮಾತೆಂದರೆ, "ನಾನೇನೂ ಸ್ಟೋರು ಬಿಟ್ಟು ಹೊರಹೋಗಿಲ್ಲ. ಸಾಮಾನನ್ನು ಪರೀಕ್ಷಿಸುವಷ್ಟರಲ್ಲೇ ನನ್ನ ಮೇಲೆ ಕಳ್ಳಾಟಿಕೆಯ ಆರೋಪ ಹೊರಿಸಲು ನಾಚಿಕೆಯಾಗುವುದಿಲ್ಲವೆ? ತಾನು ಸಾಮಾನು ಹಿಡಕೊಂಡಿರುವುದು ನಿಜ. ಆದರೆ ಹಣಕೊಡುವಷ್ಟರಲ್ಲೇ ಇಷ್ಟು ಗಲಾಟೆಯೇ?" ಎಂದು ಹೇಳಿ ಬಿಡುವಳು!

### ಕ್ಲೆಪ್ಟೋಮೆನಿಯಾ!

ಸ್ಟೋರುಗಳಲ್ಲಿ ಸಾಮಾನು ಕಳವು ಮಾಡಿ ಬಂದ ಮೇಲೂ ಆ ಕಳವಿನ ಸ್ತ್ರೀಯನ್ನು ಗುಪ್ತ ಪೋಲೀಸರು ಸಾಮಾನಿನೊಂದಿಗೆ ಹಿಡಿದು ಬಿಟ್ಟರೆ ತೀರಿತೆ? ಇಲ್ಲ, ಇಲ್ಲ, ಆಗಲೂ ತಪ್ಪಿಸಿಕೊಳ್ಳಲು ಆ ಸ್ತ್ರೀಯರು ಪೂರ್ವಸಿದ್ಧತೆ ಮಾಡಿರುತ್ತಾರೆ. ಹೊರಗೆ ಬಂದ ಅರೆಕ್ಷಣದೊಳಗವರು ಪರಾಧಿಯಾಗಿ ಬಿಡುತ್ತಾರೆ. ಒಮ್ಮೆಗೆ ಪೋಲೀಸರ ಕೈಗೆ ಸಿಕ್ಕಿಬಿದ್ದರೆ, ತಪ್ಪಿಸಿಕೊಳ್ಳುವ ಉಪಾಯವೆಂದರೆ, ಕಳವು ಮಾಡಿದ ಸ್ತ್ರೀಯಳಿಗೆ "ಕ್ಲೆಪ್ಟೋಮೆನಿಯಾ" ಅಂದರೆ ಯಾವುದನ್ನಾದರೂ, ಎಲ್ಲಾದರೂ, ಯಾವಾಗಲಾದರೂ ನಾಚಿಕೆ ಪಡದೆ ಕಳವು ಮಾಡುವ ಒಂದು ರೋಗ! ಕಳವು ಮಾಡಿದ ಹೆಂಗಸಿನ ಮನೆಯವರೆಲ್ಲರೂ ಅವಳ ಆ "ಕ್ಲೆಪ್ಟೋಮೆನಿಯಾ" ರೋಗಕ್ಕೆ ಸಾಕ್ಷಿ!

ಗುಪ್ತ ಪೋಲೀಸರೂ, ವಿಜ್ಞಾನಿಗಳೂ ಇತ್ತೀಚೆಗೆ ಈ "ಕ್ಲೆಪ್ಟೋಮೆನಿಯಾ" ರೋಗವೆಂಬುದಿದೆಯೇ, ಎಂಬುದನ್ನು ಪರಿಶೋಧಿಸಿ ಇದು ಬರೇ ಠಕ್ಕು ಇಂತಹ ರೋಗವೇ ಇಲ್ಲವೆಂದು ನಿರ್ಧರಿಸಿರುವರು

ಆದರೆ ಕಳವು ಮಾಡುವ ಸ್ತ್ರೀಯರ ರೋಗ ಮಾತ್ರ ಇನ್ನೂ ಗುಣವಾಗಿಲ್ಲ. ಅವರಿಗೆ ಬೇಕಾದುದು ದೊರತ ನಿನಹೆ ಅದು ಗುಣವಾಗುವ ಹಾಗೂ ಇಲ್ಲ! ಕಳವಿನ ವ್ಯಾಧಿಯಿಂದ ನರಳುತ್ತಿರುವ ಹೆಂಗಸರೆಲ್ಲಾ "ಮಿಸ್ ಮೇಯೊಳ' ಕುಟುಂಬದವರಿರಬಹುದೆ? ಅವಳಿಗೂ ಈ ಕಳವಿನ ರೋಗದ ಸುಳಿವೇ ಗೊತ್ತಿಲ್ಲ!

———

# ವೈಜ್ಞಾನಿಕ ಆವಿಷ್ಕಾರಗಳಲ್ಲಿ ಆಕಸ್ಮಿಕತೆಯ ಪ್ರಭಾವ

**ಚಹಾದ ಕಿಟಲಿಯಿಂದ ಸ್ಟೀಮ್ ಎಂಜಿನ್ ತಯಾರಿಸಲ್ಪಟ್ಟಿತು. ಧಾತು ಯಂತ್ರದ ಆಕಸ್ಮಿಕ ಸ್ತಂಭನವು ಪ್ರಾಣಿಗಳ ನಿಯಮವನ್ನು ಕಂಡುಹಿಡಿಯಲು ಮೂಲಕಾರಣವಾಯಿತು! ಸತ್ತು ಬಿದ್ದ ಕಪ್ಪೆಯಿಂದ ವಿದ್ಯುಚ್ಛಕ್ತಿಯನ್ನು ಕಂಡು ಹಿಡಿದರು ಇತ್ಯಾದಿ, ಇತ್ಯಾದಿ ವಿಷಯಗಳು.**

ನಮ್ಮ ನಿತ್ಯನೈಮಿತ್ತಿಕ ಜೀವನದಲ್ಲಿ ಅದೃಷ್ಟದ ಒಂದು ಆಟವು ನಡೆಯುತ್ತಿರುವುದು. ಆ ಅದೃಷ್ಟದ ಆಧಾರವು ಎಂತಹ ಮಹತ್ವದ್ದೆಂಬುದನ್ನು ಈ ಕೆಳಗೆ ಕೊಟ್ಟಿರುವ ಪ್ರಕೃತದ ಜನೋಪಕಾರಿ ಸಾಧನೆಗಳನ್ನು ಸಾಧಿಸಿದ ಬಗೆಯಿಂದ ನೀವೇ ತಿಳಿಯಿರಿ! ಈ ಅದೃಷ್ಟ ದೇವತೆಯ ಪ್ರಸಾದ ಮಾತ್ರದಿಂದ ಬೀದಿಯ ಭಿಕಾರಿಯು ರಾಜ ಸಿಂಹಾಸನವನ್ನೇರುವನು. ಅಕಸ್ಮಾತ್ ಇನ್ನೊಂದು ನಿಕೃಷ್ಟ ಪರಿಹಾಸ ಮಾತ್ರದಿಂದ ಭೋಗಿಯೂ ಭಿಕಾರಿಯಾಗುವನು.

ವಿಜ್ಞಾನ ಜಗತ್ತಿನಲ್ಲಿಯೂ ಈ ಅದೃಷ್ಟದ ಸ್ವಭಾವವೇನೂ ಕಮ್ಮಿಯಾಗಿರುವುದಿಲ್ಲ. ಅದೃಷ್ಟವು ತನ್ನ ಆಕಸ್ಮಿಕ ಆವಿರ್ಭಾವದ ಮೂಲಕ ವೈಜ್ಞಾನಿಕರ ಧ್ಯಾನಮಗ್ನನೇತ್ರಯುಗಲಗಳೆದುರಲ್ಲಿ ನೂತನ ರಹಸ್ಯಗಳ ಉದ್ಘಾಟನೆಯನ್ನು ಮಾಡುತ್ತಿದೆ! ನಮಗೆ ತುಚ್ಛವಾಗಿ ಕಾಣುವ ಘಟನೆಗಳೇ ವೈಜ್ಞಾನಿಕರ ನೆದುಳನ್ನು ಕೆಣಕಿ ಅವುಗಳ ಪ್ರತಿರೂಪವಾಗಿ ಹಲವೊಂದು ರಹಸ್ಯಗಳು ಕಾರ್ಯರೂಪದಲ್ಲಿ ಮಾಡಲ್ಪಡುತ್ತವೆ!

ಸೇಬಿನ ಹಣ್ಣು ಮರದಿಂದುದುರುವದನ್ನು ಕಂಡು ನ್ಯೂಟನನ ಧ್ಯಾನವು ಅದರ ಕಡೆಗಾಕರ್ಷಿಸಲ್ಪಟ್ಟಿತು. ಅದರ ಫಲಸ್ವರೂಪದಿಂದ ಗುರುತ್ವಾಕರ್ಷಣೆಯ ಸಿದ್ಧಾಂತದ ಆವಿಷ್ಕಾರವಾಯಿತು!

### ಜಹಜು ನಿರ್ಮಾಣ!

ಆವಿಯ ಪ್ರಭಾವದಿಂದ ಚಹಾದ ಕಿಟಲಿಯು ಮುಚ್ಚಳವು ಹಾರುವುದನ್ನು ನೀವೆಲ್ಲರೂ ಕಂಡಿದ್ದೀರಿ! ಪರಂತು ಇದೇ ಸಾಮಾನ್ಯ ಘಟನೆಯಿಂದ **"ಜೇಮ್ಸ್‌ವಾಟ್"**ನು ಸ್ಟೀಮ್ ಎಂಜಿನ್ ತಯಾರಿಸಿದನು. ಈ ಸ್ಟೀಮ್ ಎಂಜಿನ್ ಮೂಲಕ ಈಗ ವಾಣಿಜ್ಯ ಕ್ಷೇತ್ರವು ಎಷ್ಟು ಮುಂದಿದೆ! ಪರಂತು ಇದರ ಮೂಲಕಾರಣ ....ಕೇವಲ ಚಹಾದ ಕಿಟಲಿಯೆಂದರೆ ನಿಮಗಾಶ್ಚರ್ಯವಾಗದಿದ್ದೀತೆ?

### ಪ್ರಾಣಿಗಳಿಗೂ ಜಡವಸ್ತುಗಳಿಗೂ ಒಂದೇ ನಿಯಮ

ಸ್ವರ್ಗೀಯ **ಆಚಾರ್ಯ ಜಗದೀಶ ಚಂದ್ರಬೋಸ್**ರವರು ಜಡ ಪದಾರ್ಥಗಳಲ್ಲಿ ಜೀವನದ ಸಂಧಾನವನ್ನು ಪ್ರಪ್ರಥಮವಾಗಿ ಕೊಂಡು, ಜಡ ಮತ್ತು ಜೀವಗಳ ಮಗ್ಗುಲಲ್ಲಿ ಯೋಗ ಸೂತ್ರವನ್ನು ಸ್ಥಾಪಿಸಿ ತನ್ನ ಈ ಮೂಲ್ಯವಾನ್ ಆವಿಷ್ಕಾರದ ಮೂಲಕ ಸಮಸ್ತ ಸಂಸಾರಿಗಳನ್ನು ಚಕಿತರನ್ನಾಗಿ ಮಾಡಿದರು. ಆದರೆ ಇವರ ಈ ಆವಿಷ್ಕಾರದ ಮೂಲವು ಅಕಸ್ಮಾತ್ ಉಂಟಾದುದು! ತಮ್ಮ ಪ್ರಯೋಗ ಶಾಲೆಯಲ್ಲಿ ಅವರು ಒಂದುದಿನ ಧಾತುಯಂತ್ರವನ್ನು ನಡಿಸುತ್ತಿದ್ದರು. ಅಕಸ್ಮಾತ್ ಆ ಯಂತ್ರವು ತನ್ನಷ್ಟಕ್ಕೆ ಅಚಲವಾಯಿತು. ಕೆಲವೇ ನಿಮಿಷಗಳಲ್ಲಿ ಪುನಃ ಪೂರ್ವಗತಿಯಿಂದ ಚಲಿಸತೊಡಗಿತು! ಧಾತುಖಂಡಗಳ ಈ ಅದ್ಭುತ ಆಚರಣೆಯನ್ನು ಕಂಡು ಅವರಿಗೆ ಈ ರೀತಿಯ ಅನುಭವವಾಯಿತು. ಜಡ ಮತ್ತು ಪ್ರಾಣಿಗಳು ಒಂದೇ ನಿಯಮದಿಂದ ನಿಯಂತ್ರಿತವಾಗುತ್ತವೆ. ಎಂದು.

### ವಿದ್ಯುತ್ ಶಕ್ತಿಯ ಜನ್ಮ ರಹಸ್ಯ

ವಿದ್ಯುತ್ ಶಕ್ತಿಯ ಜನ್ಮರಹಸ್ಯದಲ್ಲೂ ಆಕಸ್ಮಿಕತೆಯು ಹುದ್ದುಗಿದೆ! ಕಾಲೇಜ್ ಭವನದಲ್ಲಿ ಲೋಹದ ರೇಲಿಂಗ್ ಮೇಲೆ ತಾಮ್ರದ ಸರಿಗೆಯಿಂದ ಸತ್ತು ಹೋದ ಕಪ್ಪೆಯೊಂದು ನೇತಾಡುತಿತ್ತು! ವಾಯುವಿನ ತೀವ್ರ ಗತಿಯು ಸರಿಗೆಯನ್ನು ಒತ್ತುತಿತ್ತು. ಇದರಿಂದ ಸರಿಗೆಯಲ್ಲಿ ನೇತಾಡುವ ಕಪ್ಪೆಯು ಕೆಳಗಿನ ರೇಲಿಂಗ್‌ಗೆ ತಾಗುತಿತ್ತು. ಸರಿಗೆಗೂ ರೇಲಿಂಗ್‌ಗೂ ಕಪ್ಪೆಯ ಶರೀರವು ತಾಗಿದೊಡನೆ ಅದು ಮಡುಡಿಕೊಳ್ಳುತಿತ್ತು. ಭಿನ್ನವಾದೊಡನೆ ಕಪ್ಪೆಯು ಪೂರ್ವದಂತೆ ವಿಕಾಸ ಹೊಂದುತಿತ್ತು. ಇದೇ ಘಟನೆಯ ಅನುಸಂಧಾನ ಮೂಲಕ ವಿದ್ಯುತ್ ಶಕ್ತಿಯ ರಹಸ್ಯವನ್ನು ಅಧ್ಯಾಪಕ **"ಗೈಲ್‌ವೆನ್"**ರವರು ಕಂಡುಹಿಡಿದರು.

### ಎಸಿಡಿನಿಂದ ಕೃತ್ರಿಮ ನೀಲಿ

ಏವತ್ತು ವರುಷಗಳ ಪೂರ್ವದಲ್ಲಿ ಬಂಗಾಲದಲ್ಲಿ ಬಿಹಾರದಲ್ಲಿ ನೀಲಿಯ ಕೃಷಿಯು ಬಹಳ ಭರದಿಂದ ಮಾಡಲ್ಪಡುತ್ತಿತ್ತು. ಕಾರಣ ಪಾಶ್ಚಾತ್ಯ ರಾಷ್ಟ್ರಗಳು ಇದೊಂದು ನೀಲಿಯ ಬೆಳೆಗಾಗಿ ಭಾರತವನ್ನು ಆಧರಿಸಿ ನಿಲ್ಲಬೇಕಾಗಿತ್ತು. ಇದೇ ಸಮಯ ಜರ್ಮನಿಯ ವೈಜ್ಞಾನಿಕರೋರ್ವರು ಕೃತ್ರಿಮ ನೀಲಿಯ ತಯಾರಿಯಲ್ಲಿ ಮಗ್ನರಾಗಿದ್ದರು! ಪರೀಕ್ಷಾ ಪ್ರಯೋಗ ಮೂಲಕ ನೆಪ್ತಲಿನ್ ಮತ್ತು ಸಲ್ಫ್ಯುರಿಕ್ ಎಸಿಡ್ ಇವುಗಳ ಮಿಶ್ರಣ ಮಾಡಿ ಬಹುಕಾಲದ ವರೇಗೆ ಕಾಯಿಸಿದ ಮೇಲೆ ಅದರಿಂದ ಕಿಂಚಿತ್ ಮಾತ್ರ ಫೈಲಿಕ್ ಎಸಿಡ್ ಉತ್ಪನ್ನವಾಗುತ್ತದೆ. ಇದೇ ನೀಲಿ ತಯಾರಿಕೆಯ ಪ್ರಧಾನ ಸಾಮಗ್ರಿಯಾದೆ! ವೇಭಳ್‌ರೆಂಬ ವೈಜ್ಞಾನಿಕರೋರ್ವರು ಒಂದುದಿನ ನೆಪ್ತಲಿನ್ ಮತ್ತು ಸಲ್ಫ್ಯುರಿಕ್ ಎಸಿಡ್‌ಗಳನ್ನು ಕಾಯಿಸುತ್ತ, ಒಂದು ಉಷ್ಣತಾಮಾಪಕ ಯಂತ್ರದ ಮೂಲಕ ಉಷ್ಣತೆಯ ಪರೀಕ್ಷಣೆ ಮಾಡುತ್ತಿದ್ದರು! ಅಕಸ್ಮಾತ್ ಅದು ಜಿತಪ್ಪಿ ಚೂರುಚೂರಾಗಿ ಕೆಳಗೆ ಕುದಿಯುತ್ತಿರುವ ಮೇಲೆ ಹೇಳಿದ ಎಸಿಡ್‌ಗಳಲ್ಲಿ ಬಿತ್ತು. ಮತ್ತು ಆದರಲ್ಲಿನ ದ್ರವವು ಎಸಿಡ್‌ಗಳಲ್ಲಿ ಕೂಡಿಕೊಂಡಿತ್ತು ಕೂಡಲೇ ಅದರಿಂದ ನೀಲಿ ಫೈಲಿಕ್ ಎಸಿಡ್ ಉತ್ಪನ್ನವಾಯಿತು. ಆ ಕ್ರಮವೇ ಜನಜನಿತವಾಗಿ ಕೃತ್ರಿಮ ನೀಲಿಯ ತಯಾರಿಕೆಯ ಕಾರಖಾನೆಗಳು ಪಾಶ್ಚಾತ್ಯರಲ್ಲಿ ಬಹುವಾಗಿ ಹುಟ್ಟಿಕೊಂಡು, ಭಾರತದ ನೀಲಿ ವ್ಯವಸಾಯವು ಇಂದು ನಾಮಾವಶೇಷವಾಗಿದೆ.

### ಜರ್ಮನ್ ಬಣ್ಣಗಳ ಮೂಲ!

ಲಂಡನ್‌ನ ರಾಯಲ್ ಕಾಲೇಜ್ ಆಫ್ ಸಾಯನ್ಸ್‌ನಲ್ಲಿ ಹಫಸೈನ್ ಎಂಬ ಜರ್ಮನ್ ರಸಾಯನ ಶಾಸ್ತ್ರಜ್ಞರು ಅಧ್ಯಾಪಕರಾಗಿದ್ದರು! ಅವರ ಮಗನಾದ **ಪಾರ್ಕಿನ್** ಎಂಬವನು ವಿದ್ಯುತ್‌ಚ್ಛಕ್ತಿಯ ಮೂಲಕ ಕ್ವಿನಾಯಿನ್ ತಯಾರಿಸುವ ಸಾಧನದ ಪರೀಕ್ಷೆ ಮಾಡುತ್ತಿದ್ದನು! ವಿದ್ಯುಚ್ಛಕ್ತಿಯಿಂದ ಉತ್ಪನ್ನವಾಗುವ **ಎನಿಲಾಯನ್**ನನ್ನು ಪೃಕ್ರಿಯ ಮೂಲಕ ಕ್ವಿನಾಯಿನ್‌ನಲ್ಲಿ ಸೇರಿಸುವ ಸಂಭಾವನೆಯಿಂದಾದಿಯಾಗಿ ಇದು ವ್ರಾರಂಭವಾಯಿತು! ಅನ್ವೇಷಣೆ ಮಾಡು ಮಾಡುತ್ತ ಪಾರ್ಕಿನ್‌ನಿಗೆ ಕೆಸರಿನಂತಿರುವ ಒಂದು ಕಪ್ಪು ವಸ್ತುವು ದೊರೆಯಿತು! ಅದನ್ನು ಹಾಳು ಮಾಡದೇ ಪಾರ್ಕಿನ್‌ನು ಸ್ಪಿರಿಟ್‌ನಿಂದ ಅದನ್ನು ತೊಳೆದನು. ಅದು ನೋಡು ನೋಡುತ್ತ ಹಣ್ಣಾದ ಗುಳ್ಳದ ವರ್ಣಕ್ಕೆ ತಿರುಗಿತು. ಇದೇ ಸಾಧನೆಯು ಅನಂತರ ವಿವಿಧ ಬಣ್ಣಗಳ (colours) ತಯಾರಿಕೆಯ ಮೂಲ ಸೂತ್ರವಾಯಿತು!

### ಸೆಕರಿನ್ ಹೇಗುಂಟಾಯಿತು?

ರೆಮಸನ್ ಎಂಬ ಅಮೇರಿಕನ್ ವೈಜ್ಞಾನಿಕನು ವಿದ್ಯುತ್ ಶಕ್ತಿಯ ಮೂಲಕ ಸಾಧನೆಗಳನ್ನು ನಡೆಸಿ ಊಟಕ್ಕಾಗಿ ಮನೆಗೆ ಬಂದಿದ್ದನು! ಊಟ ಮಾಡುವಾಗ ಅವನಿಗೆ ಪ್ರತಿಯೊಂದು ವಸ್ತುವೂ ಸಿಹಿಯಾಗಿ ಕಂಡುಬಂತು. ಕಾರಣ ಹೇನೆಂದು ಅವನಿಗೆ ತಿಳಿಯಲಿಲ್ಲ. ಅಕಸ್ಮಾತ್ ಅವನ ಹೆಬ್ಬೆರಳು ಮಾತ್ರ ನಾಲಿಗೆಗೆ ತಾಗಿತು ಅದೂ ಸಿಹಿಯಾಗಿ ಕಂಡಿತು! ಕೈ ತೊಳೆದರೂ ಸಿಹಿ ಹೋಗಲಿಲ್ಲ. ಕೂಡಲೇ ಅವನು ತನ್ನ ನಾಲೆಗೆ ಹೋಗಿ ಪ್ರತಿಯೊಂದು ವಸ್ತುವನ್ನೂ ಪರೀಕ್ಷಿಸಿದನು. ಪರೀಕ್ಷಾನಂತರ ಅವನಿಗೆ ದೊರೆತ ವಸ್ತುವೇ **ಸೆಕರಿನ್**!

### ಎಕ್ಸ್‌ರೇಯ ಮೂಲ.

ಅಧ್ಯಾಪಕ **ರೆಂಟ್‌ಜಿನ್**ರವರು ತಮ್ಮ ಕೋಣೆಯಲ್ಲಿ ವಾಯು ಶೂನ್ಯವಾದ ನಳಿಗೆಯೊಂದರಲ್ಲಿ ವಿದ್ಯುತ್ ಪ್ರವಾಹವನ್ನು ಬಿಟ್ಟು ಯಾವುದೋ ಒಂದು ಕಾರ್ಯದ ಪರೀಕ್ಷೆ ಮಾಡುವುದರಲ್ಲಿ ತೊಡಗಿದ್ದರು! ವಿದ್ಯುತ್ ವ್ರಾವಾಹವಾಲದಲ್ಲಿ ಒಮ್ಮೊಮ್ಮೆ ಸ್ಪಾರ್ಕ್ ಹೊಡಿಯುತಿತ್ತು. ಆಗ ಅದರಲ್ಲಿ ವರ್ಣವಿವರ್ಣಗಳು ಹುಟ್ಟಿ ವಿಕೀರ್ಣವಾಗುತ್ತಿದ್ದವು! ಅದೇ ಕೋಣೆಯಲ್ಲಿ ಒಂದು ಪೆಟ್ಟಿಗೆಯಲ್ಲಿ ಎಷ್ಟೋ ಫೋಟೊ ಪ್ಲೇಟುಗಳಿಡಲ್ಪಟ್ಟಿದ್ದವು! ಅಕಸ್ಮಾತ್ ರಂಟಜೀನ್‌ರವರು ಅವನ್ನು ತೆಗೆದು ನೋಡುವಾಗ ಅವೆಲ್ಲಾ ನಷ್ಟವಾಗಿ ಹೋಗಿದ್ದುವು! ಯಾವ ತರಹದಿಂದಲೂ ಬೆಳಕು ತಾಗದೇ ಪ್ಲೇಟುಗಳು ಹಾಳಾಗಿ ಹೋದುದನ್ನು ಕಂಡು ರಂಟಜಿನ್‌ರವರು ಆಶ್ಚರ್ಯಚರಿತರಾದರು! ಬಹು ವಿಚಾರ ಮಾಡಿದಾನಂತರ ಪರೀಕ್ಷಾ ಸಮಯದಲ್ಲಿ ವಿಕೀರ್ಣವಾದ ಬೆಳಕಿನಿಂದಲೇ ಈ ಘಟನೆಯಾಯಿತೆಂಬುದನ್ನವರರಿತರು ಆ ಸಮಯ ಅವರು ಬೆಳಕಿನ ಸ್ವರೂಪವನ್ನೂ ಪ್ರಕೃತಿಯ ನಿರ್ಣಯವನ್ನೂ ಮಾಡಲಸಮರ್ಥರಾದುದರಿಂದ ಅದಕ್ಕೆ **ಎಕ್ಸ್‌ರೇ** ಎಂದು ಹೆಸರಿಟ್ಟರು

### ಎಸಿಟನೋಲಾಯಿಡ್‌ನ ಶೋಧನ!

ಇಂದು ಚಿಕಿತ್ಸಾ ಜಗತ್ತಿನಲ್ಲಿ **ಎಸಿಟನೊಲಾಯಿಡ್** ಇದು ಸರ್ವರ ಉಪಯೋಗಾರ್ಥವಾಗಿದೆ! ಪರಂತು ಇದರ ಮೂಲವು ಡಾಕ್ಟರರ ಫರಾಮೋಶಿಯಿಂದುಂಟಾಯಿತು! ಡಾಕ್ಟರ್ **ಕೈನ್**ರವರ ಒಳಿಗೆ ಚರ್ಮ ರೋಗದ ಚಿಕಿತ್ಸೆಗಾಗಿ ರೋಗಿಯೊಬ್ಬನು ಬರುತ್ತಿದ್ದ. ಅವನಿಗೆ **ನೆಪ್ತಲಿನ್**ನ ಚಿಕಿತ್ಸೆಗಾಗಿ ವ್ಯವಸ್ಥ ಮಾಡಿತ್ತು ಪರಂತು ಡಾಕ್ಟರರು ಅದನ್ನು ಕೊಡುವುದರ ಬದಲಾಗಿ ಅವನಿಗೆ ಎಸಿಟನಾಲಾಯಿಡ್‌ನ್ನು ಕಳುಹಿಸಿದರು ಪರಂತು ರೋಗಿಗೆ ಅದರಿಂದ ಗುಣವಾಯಿತು ಆದರೆ ಮತ್ತೊಮ್ಮೆ ಅವನಿಗೆ ನೆಪ್ತಲಿನ್ ಕೊಡಲಾಯಿತು. ಆದರೆ ಅದು ಫಲಕಾರಿಯಾಗಲಿಲ್ಲ ಕೊನೆಗೆ ಡಾಕ್ಟರರು ತಮ್ಮ ಸರಾಮಶಿಯನ್ನರಿತರೂ ಚರ್ಮ ರೋಗಕ್ಕೆ ಎಸಿಟನಾಲಾಯಿಡ್ ಯೋಗ್ಯವೆಂದು ಕಂಡ ಒಂತು

### ರಬ್ಬರ್ ಟಾಯರ್‌ಗಳು

ಜರ್ಮನ್ ರಸಾಯನಿಕರೂರ್ವರು ರಬ್ಬರಿಗೆ ಗಂಧಕ ಮಿಶ್ರಣ ಮಾಡಿದರೆ ಅದು ಘಟ್ಟಿಯಾಗುವುದು ಎಂಬುದಾಗಿ ಹೇಳಿದರೂ ನಾನಾ ಪ್ರಕಾರಗಳಿಂದ ಅದರ ಪರೀಕ್ಷೆ ಮಾಡಿದರೂ ಅದು ಸಫಲವಾಗಲಿಲ್ಲ. ಅಮೇರಿಕೆಯ **ಚಾರ್ಲಸ್ ಗುಡ್ ಇಯರ್** ಸಾಹೇಬರು ಒಂದು ದಿನ ರಬ್ಬರಿಗೆ ಗಂಧಕ ಮಿಶ್ರಣ ಮಾಡಿ ಪರೀಕ್ಷಿಸುತ್ತಿದ್ದರು ಪಕ್ಕನೆ ಗಂಧಕ ಮಿಶ್ರವಾದ ಈ ರಬ್ಬರು ಜಿಗಿದು ಬೆಂಕಿಗೆ ಬಿತ್ತು. ಅವರದನ್ನು ಬೆಂಕಿಯಿಂದ ಕೂಡಲೇ ತೆಗೆದರು ಕ್ಷಣ ಹೊತ್ತಿನ ಒಳಿಕ ಅದು ಕಲ್ಲಿನಂತೆ ಘಟ್ಟಿಯಾಗಿತ್ತು. ಅದರಿಂದ ಇಂದು ಕೋಟ್ಯಾಂತರ ರೂವಾಯಿಗಳನ್ನು ಗಳಿಸುತ್ತಿದ್ದಾರೆ ಪರದೇಶಿಯರು

ಇದರಂತೆಯೇ ಆಕಸ್ಮಿಕತೆಯ ಪ್ರಭಾವದಿಂದ ಜಗತ್ತಿನಲ್ಲಿ ಸಾವಿರಾರು ಸಂಗತಿಗಳು ಬೆಳಕಿಗೆ ಬಂದಿರುವವು.

---


## ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೃಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ

**ಅಮೋಘವಾದ ಮಧುರ ದ್ರವರಸಾಯನ**

ಅಲ್ಪ ಮೌಲ್ಯದಿಂದ ಒಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಲಿಪ್ಸನ್ ಬಾಟ್ಲಿಗಳು ಹೆಚ್ಚುಕಡಿಮೆ ಈ ದಿವಸಗಳೀಗ ಬರುವವು ಅಂದರೆ ಕೇವಲ ಳ ರೂಪ್ಯಗಳೀ ಬಂದು ಬಾಣಂತಿತನಕ್ಕೆ ಸಾಕಾಗುವುವು

ವಿಶೇಷ ಮಾಹಿತಿ ಬಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

**ಎಮ್. ವಿ. ಶಾಸ್ತ್ರಿ,** ಆಯುರ್ವೇದ ಭೂಷಣ, ನಂ. 15 **ಕೊಡಿಯಾಲುಬೈಲು, ದ. ಕ**

# ಪುರುಷರು ಇಷ್ಟು ನಿಷ್ಠೂರ ಪ್ರಾಣಿಗಳೆ?

## - ಪತಿದೇವರುಗಳಿಗಾಗಿ ಮೊರೆಯಿಡುತ್ತಿರುವ ಸ್ವರ್ಗೀಯ ಸುಂದರಿಯರು -

### ಪತಿಯರು ತೊರೆದು ನಿರ್ಗತಿಕರಾದ ಸ್ತ್ರೀ ಸಮಾಜ.

ಕೆವುರೂನ ಪ್ರಾಂತ್ಯಕ್ಕೆ ಸೇರಿದ ಟ್ಯಾಗರ ಪ್ರದೇಶದ ಸ್ತ್ರೀಸಮಾಜದ ಅತ್ಯದ್ಭುತ ಚರಿತ್ರೆಯೊಂದು ಇತ್ತೀಚೆಗೆ ಪ್ರಕಟವಾಗಿರುವುದು. ಜಗತ್ತಿನಲ್ಲಿ ಪುರುಷರೇ ಇಲ್ಲದ ಸ್ತ್ರೀರಾಜ್ಯ ಒಂದು ಇರಬಹುದೇ ಎಂಬ ಸಂದೇಹವೂ ಕೂಡ ನಮ್ಮಲ್ಲುಂಟಾಗಬಹುದು. ಆದರೆ ಅಮೇರಿಕಾದವರು ಕಟ್ಟರುವ ಸಮುದ್ರದೊಳಗಿನ ಪ್ರಚಂಡವಾದ ಪನಾಮಾ ಕಾಲುವೆಯ ಬಂದರಿನ ಪೂರ್ವದಿಕ್ಕಿನಲ್ಲಿರುವ ಒಂದು ಪ್ರದೇಶದಲ್ಲಿ, ನವಯೌವನ ಭರಿತರಾದ ಲಲನಾಮಣಿಯರ ಒಂದು ರಾಜ್ಯವೇ ಇರುವುದಾಗಿ ಇತ್ತೀಚೆಗಿನ ವರ್ತಮಾನಗಳಿಂದ ತಿಳಿಯಬರುತ್ತದೆ. ಈ ಪ್ರದೇಶದಲ್ಲಿರುವ ಸ್ತ್ರೀಯರಿಗೆ ಪುರುಷರ ದರ್ಶನವಾಗುವುದೆಂದರೆ ಅವರ ಸುದೈವವೆಂದೇ ಹೇಳಬೇಕು. ಒಮ್ಮೆಗೆ ಯಾವನಾದರೊಬ್ಬ ಸಾಹಸಿಕ ಪುರುಷನು ದೈವ ಯೋಗದಿಂದ ಆ ಪ್ರದೇಶಕ್ಕೆ ಕಾಲಿಟ್ಟರೆ, ಅಲ್ಲಿರ ತಕ್ಕ ಆ ಕಂದುವರ್ಣದ ಸ್ತ್ರೀಯರು ಅವನನ್ನು ಹಿಡಿದು ಹಿಂದಿರುಗದಂತೆ ಮಾಡಿಬಿಡುತ್ತಾರೆ. ಅಲ್ಲಿ ಕಲ್ಪವೃಕ್ಷಗಳ ತೋಟಗಳಿವೆ. ನೈಸರ್ಗಿಕವಾದ ಸುಂದರ ಪ್ರದೇಶವದು.

#### ರೂಪಸುಂದರಿಯರು ಚಿಂತಾಮುಕ್ತರಾಗಿಲ್ಲ.

ಈ ಪ್ರದೇಶದೊಳಗಿನ ಲಾವಣ್ಯವತಿಯರು ನೈಸರ್ಗಿಕ ಸೌಂದಯ್ಯದಿಂದ ಕೂಡಿದವರಾಗಿದ್ದು, ಚಿಂತಾವಿಹೀನೆಯರಾಗಿರುವರು. ಸುಧಾರಿತ ಜಗತ್ತಿನ ಮಾತೇ ಅವರಿಗೆ ತಿಳಿದಿಲ್ಲ. ಅವರವೇಲೆ ಟ್ಯಾಕ್ಸಿಲ್ಲ. ತೆರಿಗೆಯಿಲ್ಲ, ರಾಜಕೀಯ ಬಂಧನವಂತೂ ಇಲ್ಲವೇ ಇಲ್ಲ. ಸರಕಾರವಿದ್ದರೆತಾನೆ ರಾಜಕೀಯ ಬಂಧನ! ಮನೆಬಾಡಿಗೆ, ಗೇಣಿ ಲೇವಾದೇವಿ, ಬಡ್ಡಿ ಇವೆಲ್ಲವುಗಳನ್ನವರು ಸ್ವಪ್ನ

ಟ್ಯಾಗರ ಪ್ರದೇಶದ ರೂಪರಾಣಿಯರು.

ದಲ್ಲೂ ಕೇಳಿಲ್ಲ. ಹಣಚಲಾವಣೆಯ ಮಾತೇ ಅವರಿಗೆ ಪರಲೋಕದ ಸಂಗತಿಯಾಗಿರುವುದು. ಸೃಷ್ಟಿಕರ್ತನ ಅಗಮ್ಯಲೀಲಾಸಾಗರದಲ್ಲವರು ಸ್ವಚ್ಛಂದವೃತ್ತಿಯಿಂದ ಲೋಲಾಡುತ್ತಿರುವರು.

ಇಷ್ಟಾದರೂ ಅವರು ಪಶುಗಳಂತೆ ನಗ್ನಾವಸ್ಥೆಯಲ್ಲಿಲ್ಲ. ಅವರು ಬಟ್ಟೆಬರೆಗಳನ್ನು ಧರಿಸುತ್ತಿರುವರು. ಅವರ ಆಭರಣಗಳೆಂದರೆ ಮುತ್ತಿನ ಒಡವೆಗಳು. ಹಾರಗಳು, ಬಳೆಗಳು, ತಲೆಯ ಮೇಲೆ ಧರಿಸುವ ಹೂವುಗಳು ಎಲ್ಲವುಗಳನ್ನು ಮುತ್ತುಗಳಿಂದಲೇ ತಯಾರಿಸುತ್ತಿರುವರು. ಉತ್ಸವಕಾಲಗಳಲ್ಲಿ, ವಿಶೇಷ ದಿನಗಳಲ್ಲವರು ಹೆಚ್ಚು ಬೆಲೆಬಾಳಬಹುದಾದ ಉತ್ತಮ ವಸ್ತ್ರಾಲಂಕಾರಗಳನ್ನು ಧರಿಸುತ್ತಾರೆ. ಅವರಿಗೆ ಪರಿಮಳದ್ರವ್ಯಗಳ ಅರಿವಿದೆ. ನಾನಾರೀತಿಯ ಸುವಾಸಿಕ ಪುಷ್ಪಗಳಂತೂ ಅವರಿಗೆ ಪ್ರತಿಯವ್ವಗಳಾಗಿವೆ. ಅವುಗಳಿಂದವರು ತಮ್ಮ ಕಮನೀಯ ದೇಹವನ್ನು ಅಲಂಕರಿಸಿಕೊಳ್ಳುತ್ತಾರೆ.

ಇತರ ಅನುಕೂಲತೆಗಳಂತೆ ಅವರಿಗೆ ಆಹಾರದ ಅನುಕೂಲತೆಗಳೂ ನೈಸರ್ಗಿಕವಾಗಿವೆ. ಆಹಾರಕ್ಕಾಗಿ ಅವರು ವ್ಯಥೆಪಡಬೇಕಾಗಿಲ್ಲ. ಸಾಲ ಮಾಡಬೇಕಾಗಿಲ್ಲ, ಅಥವಾ ಅದಕ್ಕಾಗಿ ರಾತ್ರಿ ಹಗಲೂ ದಣಿದು ದುಡಿಯಬೇಕಾಗಿಲ್ಲ. ಸೃಷ್ಟಿ ಮಾತೆಯು ಒದಗಿಸುತ್ತಿರುವ ಬಗೆಬಗೆಯ ಫಲವಸ್ತುಗಳ ಸಮೃದ್ಧ ಭಂಡಾರವೇ ಅವರ ವಶವಿದೆ. ನೀರಿಗಾಗಿ ಅವರು ಭೂಮಿಯನ್ನು ತೋಡಿ ಬಾವಿ

### ರೇನೋಲ್ಡ ಟೇಬ್ಲೋನನ ರೋಮಾಂಚನಕಾರಿ ಸಾಹಸಿಕ ಪ್ರವಾಸ ವರ್ಣನೆ.

ಗಳನ್ನಾಗಲೀ, ಕೆರೆಗಳನ್ನಾಗಲೀ ಕಟ್ಟಲ್ಲ. ಮುಸಿಪಾಲಿಟಿಗಳು ನಲ್ಲಿಗಳಮೂಲಕ ಮನೆಮನೆಗಳಿ ಒದಗಿಸುತ್ತಿರುವ ಸದೋಷ ಜಲ ಪಾನದ ಸವೆಯೂ ಅವರಿಗಿಲ್ಲ! ಗಿರಿಕಂದರಗಳಿಂದ ಸುಸ್ವರದಲ್ಲಿ ಸಂಗೀತವನ್ನು ಹಾಡುತ್ತಾ ಮೇಲಿಂದ ಕೆಳಕ್ಕೆ ಹರಿಯುತ್ತಿರುವ ಅಮೃತತುಲ್ಯ ಜಲವನ್ನು ಜಗದ್ಧಾತ್ರಿಯ ಅನುಗಹ್ರದಿಂದ ಅವರಿಗೆ ದೊರೆತಿರುವುದು! ಅವರದನ್ನು ಪಾನಮಾಡುತ್ತಿರುವರು.

ಇಷ್ಟರಲ್ಲೇ ಅವರ ರೂಪಲಾವಣ್ಯಾತಿಶಯಗಳ ಕೀರ್ತಿಯು ದೇಶವಿದೇಶಗಳನ್ನು ವ್ಯಾಪಿಸಿಕೊಂಡಿರುವುದು.

ಆದರೂ ಈ ಪ್ರದೇಶದಲ್ಲಿ ಜೀವನ ನಡಿಸುತ್ತಿರುವ ಇಂದುಮುಖಿಯರು ಸುಖಿಗಳಾಗಿಲ್ಲ. ಸ್ತ್ರೀಜಾತಿಗೆ ಪತಿಗ್ಯರೂಪವಾಗಿರುವ ಪುರುಷವರ್ಗದ ಅಭಾವವು ಅವರಿಗಿರುವುದು. ನೈಸರ್ಗಿಕಾಧಿಪತಿಯಾದ ಕಾಮದೇವನು ಅವರನ್ನು ಪೀಡಿಸುತ್ತಿರುವನು! ಪ್ರೇಮದ ಹಶುನಿನಿಂದ ಆ ಶಶಿಮುಖಿಯರು ಅಹರ್ನಿಶಿ ತಳಮಳಗೊಳ್ಳುತ್ತಿರುವರು!

#### ಓರ್ವ ಪುರುಷನಿಗೆ ಹನ್ನೆರಡು ಪತ್ನಿಯರು

ಈ ವಿಚಿತ್ರ ಪ್ರದೇಶದಲ್ಲಿನ ಸ್ತ್ರೀಯು ತನ್ನ ಪತಿಯು, ಮತ್ತೊಬ್ಬಳ ಸಮಾಗಮದಲ್ಲಿದ್ದರೆ, ಅವಳ ಕುರಿತು ಅಸೂಯೆ ಪಡುವುದಿಲ್ಲ, ದ್ವೇಷಾಗ್ನಿಯಮಾತೇ ಕೇಳಬೇಡಿ. ತನ್ನ ಪತಿಯು ತನ್ನ ವಶದಲ್ಲೇ ಇರಬೇಕಾಗಿ ಯಾವಳೊಬ್ಬ ಸ್ತ್ರೀಯೂ ಸ್ವಪ್ನೇಸಿ ಎಣಿಸುವುದಿಲ್ಲ. ಯಾವನೊಬ್ಬ ಪುರುಷನಿಗೆ ಇಪ್ಪವಿದ್ದರೆ ಅವನೊಂದಿಗೆ ಒಂದು ಡಜನ್ ಪತ್ನಿಯರು ಬೇಕಾದರೂ ಕೂಡಿ ಕೊಂಡಿರಲು ಒಪ್ಪುತ್ತಾರೆ. ಪುರುಷನ ಸಮಾ

ಉಂಟಾಗುವುದೆಂದರೆ ಪದಮಭಾಗ್ಯವೆಂದು
ರು ತಿಳಿಯುತ್ತಾರೆ.
ಪುರುಷನು ಅಲ್ಲಿಗೆಹೋಗಿ ತನಗೆ ಬೇಕಾ
ಟ್ಟು ಸ್ತ್ರೀಯರನ್ನು ಮದುವೆಮಾಡಿಕೊಳ್ಳ
ಬಹುದು. ಇದಕ್ಕೆ ಯಾರೊಬ್ಬರೂ ಒಂದಿಷ್ಟು
ರಬೇಕಾಗಿಲ್ಲ. ಕಾರಣ ಒಮ್ಮೆ ಲಗ್ನಮಾಡಿ
ಂಡಮೇಲೆ ಅವರು ಹೆಂಡಿರು ಮಕ್ಕಳ
ಷಣೆಗಾಗಿ ದುಡಿಯಬೇಕಾಗಿಲ್ಲ. ಸಾಲಮಾಡ
ಕಾಗಿಲ್ಲ. ತಿರುಗಿ ಗಂಡನ ಹೊಟ್ಟೆತುಂಬಿಸುವ
ಾಬ್ದಾರಿಯನ್ನು ಆ ಸ್ತ್ರೀಯರೇ ವಹಿಸಿ
ಳ್ಳುತ್ತಾರೆ! ಅವರು ಸದಾಕಾಲ ವಿನೀತಭಾವ
ದ ಪುರುಷರ ದಾಸಿಯರಾಗಿರುತ್ತಾರೆ!
ಅಹಾ! ಇಂತಹ ಸುದೈವಿ ಪ್ರದೇಶವು ಎಲ್ಲಿರ
ಬಹುದಯ್ಯ ಎಂದು ಯೋಚಿಸಬೇಕಾಗಿಲ್ಲ. ಅದು
ಾಮಾ ಬಂದರಿನ ಪೂರ್ವದಿಕ್ಕಿಗಿರುವುದೆಂದು
ರಂಭದಲ್ಲೇ ಹೇಳಿರುವೆವು. ಇನ್ನೂ ಒಂದಿಷ್ಟು
ಪ್ರದೇಶದ ವಿವರವನ್ನು ಕೇಳಿಬಿಡಿ. ಈ
ನೆಯರಿರುವ ಪ್ರದೇಶಕ್ಕೆ "ಟ್ಯಾಗರ್
ಲ್ಯಾಂಡ್" ಅಂದರೆ ಟ್ಯಾಗರ್ ದ್ವೀಪ
ದು ಕರೆಯುತ್ತಾರೆ. ಅಮೇರಿಕಾದವರು
ರುವ ಪ್ರಚಂಡವಾದ ಪನಾಮಾ ಕಾಲಿವೆ
ಂದ ಈ ಪ್ರದೇಶಕ್ಕೆ ಹೋಗಲು ಅನುಕೂಲ
ಸ್ವಲ್ಪ ಹಿಂದಿನ ಕಾಲದವರೆಗೆ ಈ ಪ್ರದೇಶದ
ವು ಯಾರಿಗೂ ಇದ್ದಿಲ್ಲ. ಹಿಂದಕ್ಕೆ ಆ
ಪವು ಕ್ರೂರಸ್ವಭಾವದ, ಖೂನಿಮಾಡುವ,
ಳ-ಗಂಟಿತನದ ಅಗಮ್ಯ ಪ್ರದೇಶವಾಗಿತ್ತು.
ಮಯ ಅಲ್ಲಿಗೆ ಯಾವನಾದರೂ ಕಾಲಿಟ್ಟರೆ
ರ್ಧದೊಳಗವನು ಯಮನ ಅತಿಥಿಯಾಗಿ
ಗುತ್ತಿದ್ದನು. ಕಾರಣ ಆ ಜನರು ಧನು
ರಿಗಳಾಗಿದ್ದರು. ವಿಷಲೇಪನಮಾಡಿದ
ಬಾಣಗಳಿಂದವರು ಅಲ್ಲಿಗೆ ಬರುವರನ್ನು
ರ್ಧದಲ್ಲಿ ಕೊಂದೇಬಿಡುತ್ತಿದ್ದರು. ಬಿಳಿ
ಂಗವನ್ನು ಕಂಡರೆ ಈ ಜನರು ರೇಗು
ರು. ಬಿಳಿಜನರೆಂದರೆ ಅವರಿಗಷ್ಟು ದ್ವೇಷ
ು. ಆದಕಾರಣವೇ ಅವರನ್ನು ಆ ದ್ವೀಪಕ್ಕೆ
ೊಡುತ್ತಿರಲಿಲ್ಲ.

**ಓರ್ವ ಸಾಹಸಿಕನ ಅನುಭವ.**

ನ್ರಿ ಮೋರ್ಗನ್ ಎಂಬ ಒಬ್ಬ ಬಿಳಿಯವನು
ವಲಾಗಿ ಈ ಝುನಾನಾಜನರೊಂದಿಗೆ ಬಹಳ
ತ್ತಿಯಿಂದ ಸ್ನೇಹ ಬೆಳಸಿದನು. ಸ್ಫೇನಿ
ರ್ಡ ಜನರಿಂದ ಪನಾಮಾ ಪ್ರದೇಶವನ್ನು
ವಶಪಡಿಸಿಕೊಳ್ಳಲು, ಅಲ್ಲಿಯ ವೀರ
ಯ ಈ ಜನರೊಡನೆ ಸ್ನೇಹಬೆಳಸಿ ಅವರ
ನ್ನಾಗಿ

ಮಾಡಿಕೊಂಡು ತನ್ನ ಸೈನ್ಯದಲ್ಲಿ ಸೇರಿಸಿ ಕೊಂಡನು. ಕಾರಣ ಗುರಿಯಿಟ್ಟು ಹೊಡೆಯುವುದರಲ್ಲಿ ಬಿಳಿಜನರು ಇವರಷ್ಟು ಗಟ್ಟಿಗರಲ್ಲ. ಆಗ ಬಿಳಿಜನರಿಗೆ-ಬಿಲ್ಲು ಬಾಣದ ವಿದ್ಯೆಯೂ ಸರಿಯಾಗಿ ತಿಳಿದಿದ್ದಿಲ್ಲ.

**ಕಬ್ಬಿಣದ ಬದಲಾಗಿ ಮುತ್ತುಗಳು!**

ಆ ಮೇಲೆ ಸಿಂಗಲ್‌ಟನ್‌ಸ್ಮಿಥ್ ಮತ್ತು ಬ್ಲೇಕ್ ಬಿಯರ್ಡ್ ಎಂಬ ಹೆಸರಿನ ಪ್ರಸಿದ್ಧ ಖಲಾಸಿಗಳು ಈ ಪ್ರದೇಶದ ಜನರೊಂದಿಗೆ ಸ್ನೇಹಸಮ್ಮಂಧವನ್ನು ಬೆಳಸಿಕೊಂಡರು. ಈ ಸ್ಮಿಥ್ ಮತ್ತು ಬ್ಲೇಕ್ ಬಿಯರ್ಡರುಗಳು ಅಲ್ಲಿಯ ಜನರಿಗೆ ಚೂರಿ, ಕತ್ತರಿ, ಚಮಚಾ ಮೊದಲಾದ ಕಬ್ಬಿಣದ ವಸ್ತುಗಳನ್ನು ಕೊಟ್ಟು ಅವುಗಳ ಬದಲಾಗಿ ಬಂಗಾರ ಮತ್ತು ಜಾತಿ ಮುತ್ತುಗಳನ್ನು ಪಡಕೊಂಡು ಬರತೊಡಗಿದರು! ಆಗ ಅಲ್ಲಿಯ ಜನರಿಗೆ ಚಿನ್ನದ್ದಾಗಲೀ, ಮುತ್ತುಗಳದ್ದಾಗಲೀ, ವಿಶೇಷ ಮಹತ್ವವೇ ಇದ್ದಿಲ್ಲ! ಅವುಗಳಿಗೆ ಬೆಲೆಯೂ ಇದ್ದಿಲ್ಲ. ಮುತ್ತುಗಳಿಗಾಗಿ ಆ ಜನರು ಪ್ರಯಾಸ ಪಡಬೇಕಾದುದಿದ್ದಿಲ್ಲ. ಅವರ ದ್ವೀಪಗಳಲ್ಲಿ ಯಾವ ಮೂಲೆಯಲ್ಲಿ ಬೇಕಾದರೂ ಬೇಕಾದಷ್ಟು ಮುತ್ತುಗಳು ರಾಶಿರಾಶಿಯಾಗಿ ಸಿಗುತ್ತಿದ್ದವು. ಅವರು ತಮ್ಮ ನೌಕೆಗಳನ್ನು ಮುತ್ತುಗಳ ಗೊಂಚಲುಗಳಿಂದ ಶೃಂಗರಿಸುತ್ತಿದ್ದರು!

ಇವತ್ತಿಗೂ ಈ ಪ್ರದೇಶದೊಳಗಿನ ಕರೇ ವರ್ಣದವರಾದರೂ, ಅತ್ಯಂತ ಸುಂದರ ಸ್ತ್ರೀಯರು ಉತ್ಸವ ಮೊದಲಾದ ದಿನಗಳಲ್ಲಿ ಮುತ್ತುಗಳಿಂದ ಮತ್ತು ಸ್ವರ್ಣದಿಂದ ತಮ್ಮ ಶರೀರವನ್ನು ಮುಚ್ಚಿಬಿಡುತ್ತಾರೆ.

ಅಮೇರಿಕಾದವರು ಪನಾಮಾ ಕೆನಲನ್ನು (ಕಾಲುವೆಯನ್ನು) ಕಟ್ಟಿ ಮುಗಿಸಿ ಅದನ್ನು ತೆರೆಯುವ ಕಾಲಕ್ಕೆ ಮುತ್ತು, ಚಿನ್ನ, ಫಲವಸ್ತುಗಳನ್ನು ಸಂಗ್ರಹಿಸಲು ಟ್ಯಾಗರ ದ್ವೀಪಕ್ಕೆ ಹೋಗಿ ಬರುವ ವಿಚಾರ ಮಾಡಿದರು.

ಟ್ಯಾಗರ್ ಪ್ರದೇಶಕ್ಕೆ ಬಂದ ಪನಮಾದ ಬಿಳಿಜನರೊಂದಿಗೆ ಕರಿಯ ಆ ಕಾಡು ಜನರಾದರೂ, ವೀರವೃತ್ತಿಯ ಅಲ್ಲಿಯ ಆ ಪುರುಷರು ಪನಾಮಾ ಶಹರಿಗೆ ಬಂದು ವಾಸಮಾಡತೊಡಗಿದರು. ಅನಂತರ ಅಲ್ಲಿಯ ಶಹರಿನ ಸುಖೋಪಭೋಗಗಳನ್ನು ಅನುಭವಿಸುವ ವಿಚಾರದಿಂದ ಬಿಳಿಯ ಹೆಂಗಸರೊಡನೆ ವಿವಾಹಮಾಡಿಕೊಂಡು ಪನಾಮಾದಲ್ಲೇ ಇರತೊಡಗಿದರು. ಇದರ ಪರಿಣಾಮವು ಹೇಗೆ ಪರ್ಯಾವಸಾನದಲ್ಲಿ ಅಂತ್ಯಗೊಂಡಿತೆಂದರೆ, ಒಂದುಕಾಲು ಶತಮಾನದೊಳಗೆ ಟ್ಯಾಗರ್ ದ್ವೀಪದ ಎಲ್ಲಾ ಪುರುಷರೂ ತಾವಿದ್ದ

**SHORT ADVERTISEMENTS ARE PUBLISHED IN THIS COLUMN.**

**ಈ ಸ್ಥಳವು ಚಿಕ್ಕ ಜಾಹೀರಾತುಗಳಿಗಾಗಿ ದೊರೆಯುವುದು.**

**ಚಾರ್ಜು ವರ್ಷಕ್ಕೆ ರೂ. ೯.**
**ಆರು ತಿಂಗಳಿಗೆ . . ,, ೫.**
ವಿಶೇಷ ಅನುಭವ ಪತ್ರ ಮೂಲಕ.

**ಯು. ಆರ್. ಶೆಣೈ ಎಂಡ್ ಸನ್ಸ್**
**ರಥಬೀದಿ, ಮಂಗಳೂರು.**
ಬ್ರಾಂಚ್:-ಕೊಡಿಯಾಲಬೈಲು.
ಶಾಲಾ ಕೋಲೇಜು ವಿಧ್ಯಾರ್ಥಿಗಳಿಗೂ, ಇತರರಿಗೂ ಬೇಕಾಗುವ ಎಲ್ಲಾ ಬರದ ಪಾಠಪುಸ್ತಕಗಳೂ, ಹಿಂದೀ ಮತ್ತು ಸರ್ವಿಸ ಕನ್ಮೀಶನ ಪರಿಕ್ಷೆಗೆ ಬೇಕಾಗುವ ಪುಸ್ತಕಗಳೂ, ಕತೆ, ಕಾದಂಬರಿ, ವರ್ಗ ಊಳಿಗ, ಸ್ಟೇಷನರಿ, ಕಟ್ಲೆರಿ ಸಾಮಾನುಗಳೂ ರಖಂ ಮತ್ತು ಚಿಲ್ಲರೆಯಾಗಿ ಮಾರಲ್ಪಡುತ್ತವೆ.

**'ವರ್ತಕ ಧುರೀಣ'**

**ಮಾಸಪತ್ರಿಕೆಯ ವಾರ್ಷಿಕ ಚಂದಾಹಣ ಮನಿಯಾರ್ಡರ ಮೂಲಕ ರೂ. ೧-೮-೦ ಮಾತ್ರ.**
ವಿ. ಪಿ. ಕ್ರಮ ನಿಲ್ಲಿಸಲಾಗಿದೆ.

ದ್ವೀಪವನ್ನು ಬಿಟ್ಟು ಪನಾಮಾದ ಶಹರುಗಳನ್ನು ಸೇರಿದ ಕಾರಣ, ಅಲ್ಲಿರತಕ್ಕ ಸ್ತ್ರೀ ಸಮಾಜವು ಪುರುಷವಿಹೀನ ಸಮಾಜವಾಗುತ್ತಾ ಬಂದಿತು.

**ತೆಂಗಿನಕಾಯಿ ಗೆರಟೆಗಳಿಂದ ಗ್ಯಾಸ್ ಮಾಸ್ಕ್.**

ಯುದ್ಧಪ್ರಿಯ ಯುರೋಪಿನ ಜನರು ಇತ್ತೀಚೆಗೆ ತೆಂಗಿನಕಾಯಿಗಳಿಂದ ವಿಷವಾಯು ಪ್ರತಿಬಂಧಕ- ''ಗ್ಯಾಸಮಾಸ್ಕ್ಸ್'' ಎಂಬ ಮುಖವಾಡಗಳನ್ನು ತಯಾರಿಸಲು ಬರುವುದಾಗಿ ಕಂಡುಹಿಡಿದಿರುವರು. ಆದಕಾರಣ ಯುರೋಪ ಖಂಡದಲ್ಲಿ ಇವುಗಳಿಗೆ ಮಹತ್ವವುಂಟಾಗಿ, ತೆಂಗಿನಕಾಯಿ ಮರಗಳನ್ನು ಬೆಳೆಸಲು ವಿಶಾಲವಾದ ಸ್ಥಳಗಳು ಎಲ್ಲಿ ದೊರೆಯಬಹುದೆಂಬ ಶೋಧಕ್ಕೆ ತೊಡಗಿದರು. ಎಷ್ಟೋ ಜನ, ಬಿಳಿಯ ವರ್ತಕರ ದೃಷ್ಟಿಯು ಈ ಟ್ಯಾಗರ ದ್ವೀಪದ ಕಡೆಗೆ ತಿರುಗಿತು. ಆದರೆ ಅಲ್ಲಿಗೆ ಹೋಗುವವರ ಎದೆ ಅಷ್ಟೇ ಗಟ್ಟಿಯಿರಬೇಕು. ಅಲ್ಲೀಗ ಸ್ತ್ರೀಯರದೇ ಸಾಮ್ರಾಜ್ಯವಾಗಿಬಿಟ್ಟಿದೆ. ಆದಕಾರಣ ಅಷ್ಟೇ ಸಾಹಸಿಗ ವರ್ತಕನು ಮಾತ್ರ ಅಲ್ಲಿಗೆ ಹೋಗಲು ಸಮರ್ಥನಾಗುವನಲ್ಲದೆ, ಇತರರು ಹೋದರೆ ಸಜೀವವಾಗಿ ಹಿಂದಿರುಗಿ ಬರುವ ಆಶೆಯೇ ಇಲ್ಲ. ಅಲ್ಲಿಯ ಸ್ತ್ರೀಯರು ಪ್ರೇಮ ಪಿಪಾಸೆಯಿಂದ ಕಳವಳ ಪಡುತ್ತಿರುವರು. ಪುರುಷರು ತಮ್ಮ ವಶಕ್ಕೆ ಯಾವಾಗ ಸಿಗಬಹುದಾಗಿ ಕಾಯುತ್ತಿರುವರು! ಅತಿಯಾವ ಅಲ್ಲಿಗೆ ಹೋಗುವ ಧೈರ್ಯವು ಯಾವ ಸಾಹಸಿಕ ವರ್ತಕನಿಗೂ ಉಂಟಾಗುವುದಿಲ್ಲ.

**ಅತಿ ಸಾಹಸಿಕ ವರ್ತಕ.**

ಮೇಲಿನಂತಹ ಪರಿಸ್ಥಿತಿಯು ಆ ದ್ವೀಪದೊಳಗಿನದಾಗಿರುವುದಾದರೂ, ರೇನೋಲ್ಡ್ ಟಿಬ್ಲೋನ್ ಎಂಬ ಒಬ್ಬ ಅತಿ ಸಾಹಸಿಕ ವ್ಯಾಪಾರಿಯು ಸುಮಾರು ೧೦ ತಿಂಗಳ ಹಿಂದೆ ಅಲ್ಲಿಗೆ ಹೋಗಿಯೇ ಬಿಟ್ಟನು. ಅವನ ಸುದೈವವು ಒಳ್ಳೆಯದಾದ ಕಾರಣವೇ ಅವನು ಹಿಂದಿರುಗಿ ಬರಲು ಸಮರ್ಥನಾದ.

ಅವನು ತನ್ನ ಸಾಹಸಗಳ ವರ್ಣನೆಗಳನ್ನು ಹೇಳುತ್ತಾ ತಿಳಿಸುತ್ತಿರುವುದೇನೆಂದರೆ—''ನನ್ನ ಹಡಗು ಆ ಕಿನಾರೆಯಲ್ಲಿ ನಂಗರು ಹಾಕಿ ನಿಂತಿದ್ದೇ ತಡ, ಟ್ಯಾಗರ ದ್ವೀಪದ ಮೇಲಿನ ಸೌಂದರ್ಯವತಿಯರಾದ ಯುವತಿಯರ ತಂಡವು ಮಿನುಗುಗಳಂತೆ ಆ ಶಾಂತವಾದ ಸಮುದ್ರದ ನೀರಲ್ಲಿ ಈಜಾಡಿ ಹಡಗಿನ ಕಡೆಗೆ ಬರತೊಡಗಿದುದನ್ನು ಕಂಡೆನು. ನಮ್ಮ ಹಡಗಿನಲ್ಲಿದ್ದ ಖಲಾಸಿಗಳು ಸಮುದ್ರವ ಕಿನಾರೆಗೆ ಒಂದಿಳಿಯ ಬೇಕಾಗಿ ಅವರು ನಮ್ಮನ್ನು ವಿವೇಕಪೂರ್ಣ ಬುದ್ಧಿಯಿಂದ ಆಮಂತ್ರಿಸಿದರು.

**ಗಜಗಾಮಿನಿಯರ ಸಮೂಹದಲ್ಲಿ**

ಆ ಲಲನಾಮಣಿಯರ ರೂಪಲಾವಣ್ಯ, ಅವರ ಅರೆ ನಗ್ನವಾಗಿರುವ ದೇಹದ ಹೊಳಪು, ಪುಷ್ಟವಾದ ಅವರ ಶರೀರ, ನಾಗಿಣಿಯರ ಫಣಿಗಳಂತೆ ಅವರ ಕೇಶಕಲಾಪಗಳು ಮೊದಲಾದವುಗಳನ್ನು ಕಂಡು ಯಾವನಾದರೂ ಅವರನ್ನು ಮೋಹಿಸಿ ಬಿಟ್ಟರೆ ಅದರಲ್ಲಿ ಆಶ್ಚರ್ಯಪಡತಕ್ಕ ಅಂಶವೇನೂ ಇಲ್ಲ. ಹೇಗಾದರೂ ಆಗಲಿ, ಒನ್ಸ್ ಅವರಿದ್ದಲ್ಲಿಗೆ ಹೋಗಬೇಕಾಗಿ ಭಾವಿಸಿ ಧೈರ್ಯದಿಂದ ಒಬ್ಬಂಟಿಗನಾಗಿಯೇ ಅಲ್ಲಿಗೆ ಹೋದೆನು''.ರೋಮಾಂಚಕರ-ಪ್ರಣಯ ಸುಖಾನುಭವಕ್ಕಾಗಿ ರೇನೋಲ್ಡ್ ಟಿಬ್ಲೋನನು ಆ ದ್ವೀಪದ ಮೇಲೆ ಕಾಲಿಟ್ಟನು. ಅವನು ಆ ಕಿನಾರೆಯಲ್ಲಿ ಕಾಲಿಟ್ಟದ್ದೇ ತಡ, ಸುಮಾರು ೧೫-೨೦ ಜನ ಅಪ್ಸರೆಯಂತಹ ಯೌವನ ಭರಿತ ಕಾಮಿನಿಯರು ಅವನನ್ನು ಮುತ್ತಿ ಬಿಟ್ಟರು!

ಅವನನ್ನು ದೂರದಿಂದಲೇ ನೋಡಿದ ಎಷ್ಟೋ ಜನ ನವತರುಣಿಯರು ಒಡನೇ ತಮ್ಮ ಗುಡಿಸಲುಗಳಿಗೆ ಓಡಿ ಹೋಗಿ, ನಾಜೂಕಾದ ಬಟ್ಟೆಗಳನ್ನು ಧರಿಸಿ ಅಲಂಕಾರಯುಕ್ತರಾಗಿ ಅವನನ್ನು ಆಕರ್ಷಿಸಲು ಅವನಿದ್ದಲ್ಲಿಗೆ ಬಂದರು. ಕೂಡಿದ ಆ ಸ್ತ್ರೀ ಸಮೂಹದೊಳಗಿನ ಒಬ್ಬ ತರುಣಿಯು ಧಿಟ್ಟತನದಿಂದ ಸ್ಪಷ್ಟವಾಗಿ ಅವನಿಗೆ ಹೇಳಿದಳು- ''ನಮಗಾಗಿ ನೀನು ಪತಿದೇವರನ್ನು ತಂದುಕೊಡದಿದ್ದರೆ ಕಿನಾರೆಯಲ್ಲಿರುವ ಎಲ್ಲಾ ತೆಂಗಿನ ಮರಗಳ ವಂಶವನ್ನೇ ನಾವು ಸಮುದ್ರದ ಪಾಲಾ ಮಾಡಿ ಬಿಡುವೆವು''

**ಕಾಮದೇವನ ಅಲೌಕಿಕ ಶರಗಳು!**

ರೇನೋಲ್ಡ್‌ನಿಗೆ ಅವರೊಂದಿಗೆ ಕೂಡುವ ಇಚ್ಛೆ ಇದ್ದಿಲ್ಲವಾದರೂ, ಸುಂದರ ಸ್ತ್ರೀಯರ ಬಲತ್ಕಾರದಿಂದ ಅವನು ಒಂದು ದೊಡ್ಡ ಗುಡಿಸಲನ್ನು ಪ್ರವೇಶಿಸಲೇ ಬೇಕಾಯಿತು. ಅಲ್ಲಿ ವಿಲಾಸ ಪೂರಿತವಾದ ವಿಪುಲ ಸಾಮಾಗ್ರಿಯನ್ನು ಒಂದೆಡೆಯಲ್ಲಿ ಕೂಡಿಸಲಾಗಿತ್ತು. ಆಹಾರ-ಪಾನಗಳಿಗೆ ಉತ್ತಮವಾದ ವಸ್ತುಗಳಿಗೇನೂ ಅಲ್ಲಿ ಕೊರತೆ ಇದ್ದಿಲ್ಲ.

ರೇನೋಲ್ಡ್‌ನನ್ನು ಒಂದು ಬಹು ಬೆಲೆ ಬಾಳುವ ಹಾಸಿಗೆಯ ಮೇಲೆ ಕೂಡಿಸಿಟ್ಟರು. ಆ ಸಮೂಹದೊಳಗಿನ ೧೦ ಮೋಹನಾಂಗಿಯರು ಮಂದಸ್ಮಿತೆಯರಾಗಿ ಅವನ ಸಮೀಪದಲ್ಲೇ ಕುಳಿತರು. ಮತ್ತು ಸ್ವರ್ಗೀಯ ಪ್ರೇಮದಿಂದ ಅವನ ಬಾಯಿಗೆ ಆಹಾರ ಕೊಡತೊಡಗಿದರು!!

ಅವನ ಊಟ ತೀರಿದ ಮೇಲೆ ಸುಂದರಿಯರೆಲ್ಲಾ ಒಟ್ಟಾಗಿ ಗ್ರಾಮನೃತ್ಯಕ್ಕಾರಂಭಿಸಿದರು. ಆ ಸವ ಗುಡ್ಡದಾದ ಗುಡಿಸಲು ಸ್ವರ್ಗೀಯ ಸಂಗೀತಧ್ವನಿಯಿಂದ ತುಂಬಿಹೋಯಿತು.

ಈ ರೀತಿ ನಾಲ್ಕು ತಾಸುಗಳ ಕಾಲ ಕಳೆಯಿತು. ರೇನೋಲ್ಡನು ತೆಂಗಿನ ಕಾಯಿಗಳನ್ನು ಕೊಡಿರೆಂದು ಕೇಳಿದನು. ಮತ್ತು ತಾನು ಹಿಂದಿರುಗುವ ಇಚ್ಛೆಯನ್ನು ಪ್ರದರ್ಶಿಸಿದನು.

ಕೂಡಲೇ ಅವರು ತೆಂಗಿನ ಕಾಯಿಗಳಿಂದ ತುಂಬಿದ ಒಂದು ತೆಪ್ಪೆಯ ಮೇಲಕ್ಕೆ ಅವನನ್ನು ಕರೆದೊಯ್ದರು. ಮತ್ತು ಹತ್ತಿಪ್ಪತ್ತು ಬಲಿಷ್ಠರಾದ ಯುವತಿಯರು ಆ ತೆಪ್ಪವನ್ನು ಸಮುದ್ರಕ್ಕೆ ದೂಡಿ ಬಿಟ್ಟರು. ಆದರೆ ಆ ರಾಕ್ಷಸಿ ತೆಪ್ಪವು ಸ್ವೀಮರಿನಸಮೀಪಕ್ಕೆ ಹೋಗುವುದರ ಬದಲಾಗಿ ಬೇರೆ ಕಡೆಗೇನೆ ಹರಿದು ಹೋಗತೊಡಗಿತು. ಅವನು ಕರ್ತವ್ಯಮೂಢನಾಗಿ ಅದರ ಮೇಲೆಯೇ ನಿಂತು ನೋಡತೊಡಗಿದನು. ಆ ತೆಪ್ಪವು ಮುಂದಕ್ಕೆ ಕಾಣುವ ಬೆಟ್ಟದಕಡೆಗೆ ಸಾಗುತ್ತಿತ್ತು. ಬೆಟ್ಟವು ಗಿಡಮರಗಳಿಂದ ಆವರಿಸಿ ಭಯಂಕರವಾಗಿ ಕಾಣುತ್ತಿತ್ತು.

**ರಮಣನೊಂದಿಗೆ ಛಲವಿಡಿದು ಹೊರಟ ರಮಣಿಯರು**

ಅರ್ಧ ಸಮುದ್ರದಲ್ಲಿ ಆ ತೆಪ್ಪವು ಹೋದೊಡನೆ ಅದರಲ್ಲಿ ಕುಳಿತಿದ್ದ ರಮಣಿಯರು ಗಂಭೀರ ಭಾವದಿಂದ ಗದಗದನೆ ನಕ್ಕು ಬಿಟ್ಟರು. ಅವನನ್ನೇ ದಿಟ್ಟಿಸಿ ನೋಡುತ್ತಾ ಹೇಳಿದರು,- ನಾವು ನಿನ್ನನ್ನು ನಮ್ಮ ಪತಿಯನ್ನಾಗಿ ವರಿಸಿರುವೆವು. ಮತ್ತು ನಮ್ಮನ್ನು ನೀನು ನಿನ್ನ ಪತ್ನಿಯರನ್ನಾಗಿ ಮುಂದಕ್ಕೆ ಕಾಣಬರುತ್ತಿರುವ ಏಕಾಂತ ಸ್ಥಳವಾದ ಗುಡ್ಡ ಪ್ರದೇಶಕ್ಕೆ ಕರಸೊಯ್ಯುತ್ತಿರುವಿ!

ಈ ಮಾತನ್ನು ಕೇಳಿದಾಗ ರೇನೋಲ್ಡನು ಭಯಭೀತನಾಗಿ ಅವರಿಗೆ ಶರಣಾಗತನಾಗಿ ಅವರ ಮನಸ್ಸನ್ನು ಒಲಿಸಿಕೊಳ್ಳತೊಡಗಿದನು.

ಅವನ ಮಾತುಗಳಿಗೆ ಪ್ರತಿಯಾಗಿ ಉತ್ತರ ಕೊಡುವುದರ ಬದಲಾಗಿ ಒರ್ವ ಸೌಂದರ್ಯವತಿಯು ಅವನನ್ನು ಪ್ರೇಮಾತಿಶಯಗಳಿಂದ ಆಲಿಂಗಿಸಿ ಬಿಟ್ಟಳು! ಅವನ ಎರಡೂ ಕರಗಳನ್ನು ತನ್ನ ಮಸ್ತಕದ ಮೇಲಿಟ್ಟುಕೊಂಡಳು!

ತೆಪ್ಪವು ಸಮುದ್ರಕಿನಾರೆಯಲ್ಲಿ ನಿಂತಿದ್ದ ಸ್ವೀಮರಿನಿಂದ ಬಹು ದೂರಕ್ಕೆ ಹೋಗಿತ್ತು. ರೇನೋಲ್ಡನ ಮೇಲೆ ಆಲಿಂಗನದ ಮತ್ತು ಚುಂಬನದ ಸುರಿಮಳೆಗೆ ಪ್ರಾರಂಭವಾಯಿತು! ರೇನಾಲ್ಡನು ಕಂಗಾಲಾಗಿ ಬಿಟ್ಟನು!

**ತಪ್ಪಿಸಿಕೊಂಡು ಪಲಾಯಣ ಮಾಡಿದ!**

ಅಕಸ್ಮಾತ್ತಾಗಿ ರೇನೋಲ್ಡನು ಸಮುದ್ರಕ್ಕೆ ಧುಮುಕಿ ಬಿಟ್ಟು ಇಜಾಡ ತೊಡಗಿದ

(ಉಳಿದ ಪುಟ ನೋಡಿರಿ.)

# ಸಾದರ-ಸ್ವೀಕಾರ-ವಿಮರ್ಶೆ

**ಮಾಧಿ ಸಂ|ದ ಶ್ರೀಪತಿ ಪಂಚಾಂಗ:**— ಲಕರು. ಬೇಳೂರು ಶ್ರೀಪತಿ ನರಸಿಂಹ ಅಡಿಗ, ಾರಕಟ್ಟೆ

ಪಂಚಾಂಗದಲ್ಲಿ ಇತರ ಪಂಚಾಂಗಗಳಲ್ಲಿಲ್ಲದ ವು ಜ್ಯೋತಿಷ್ಯವಿಚಾರಗಳು ಕಂಡು ಬರು . ಸಂಚಾಂಗ ಕರ್ತರು ಒಂದೆರಡು ವರ್ಷ ದ ಹೆಚ್ಚಿನ ಪರಿಶ್ರಮ ಪೂರ್ವಕ ಈ ವ್ಯವ ುವನ್ನು ಪ್ರಾರಂಭಿಸಿರುವಂತೆ ಕಾಣುತ್ತದೆ. ಕಾರಣ ಉಪಯುಕ್ತವಾಗಿ ಕಂಡು ಬರುವ ತ್ಯುಪಯೋಗಿ ಪಂಚಾಂಗಕ್ಕೆ ತಕ್ಕ ವ್ಯೋತ್ಸಾ ೋರಯುವುದಾಗಿ ನಮ್ಮ ನಿರೀಕ್ಷೆ ಇದೆ.

**ೀಶಭಕ್ತ ನಾಟಕ:**— ಲೇಖಕರು. ಶ್ರೀ. ಕೆ. ಶೆಟ್ಟರು ಮತ್ತು ಪ್ರಕಾಶಕರು, ಕಿರಿಯರ ಂಚದ ತೊದಲ್ನುಡಿ ಗ್ರಂಥಮಾಲೆಯ ಸಂಪಾ ಾದ ಶ್ರೀ. ಕೆ ಹೊನ್ನಯ್ಯ ಶೆಟ್ಟರು. ಪೃಷ್ಠ ್ಯ. ೧೪೮. ಬೆಲೆ ೦—೧೦—೦.

ೀಯುತ ಕೆ. ಕಾಂತಪ್ಪ ಶೆಟ್ಟಿಯವರಿಂದ ಸಲಾಗಿರುವ ಈ ಭಾವನಾಪೂರ್ಣವಾದ ಕ್ತ ನಾಟಕಕ್ಕೆ ಕರ್ನಾಟಕದ ಪ್ರಸಿದ್ಧ ಭ. ರಂ. ರಾ ದಿವಾಕರವರು ಮುನ್ನುಡಿ ನ್ನ ಬರೆದು ಕೆಲವೇ ಮಾತುಗಳಿಂದ ಶ್ರೀ. ಕೆ. ಟ್ಟರವರ ಪರಿಶ್ರಮಗಳನ್ನು ಹೊಗಳಿರುವು ನಾವು ಸಂತೋಷ ಪಡುತ್ತಿರುವೆವು.

ಟಕ ರೂಪದಲ್ಲಿ ಬರೆದಿರುವ ಈ ಗ್ರಂಥವು ತ ಕಾಲದ ರಾಜಕೀಯ ವಿಚಾರಗಳ ಪ್ರತಿ ವಾಗಿರುವುದಲ್ಲದೆ, ರಾಷ್ಟ್ರಸೇವಾನಿರತರಾಗಿ ದ್ದರಿಯುತ್ತಿರುವ ವ್ಯಕ್ತಿಗಳಿಗೆ ಸಮಾಜದಲ್ಲಿ ುತ್ತಿರುವ ಕೃಷ್ಣಪರಂಪರೆಗಳನ್ನು ಸೂಕ್ಷ್ಮ ರೂಪಿಸಿರುವರು.

**ಂದಾದೀಪ:**—ಲೇಖಕರು. ಶ್ರೀ. ಕೊರ ಶ್ರೀನಿವಾಸರಾಯ, ಪ್ರಕಾಶಕರು. ಕಿರಿಯರ ಚದ ತೊದಲ್ನುಡಿ ಗ್ರಂಥಮಾಲೆಯ ಸಂಪಾ ದ ಶ್ರೀ. ಕೆ. ಹೊನ್ನಯ್ಯ ಶೆಟ್ಟರು ಪೃಷ್ಠ ಸಂಖ್ಯೆ ೭೯. ಬೆಲೆ ೦—೮—೦, ದಾದೀಪವು ೧೧ ಚಿಕ್ಕ ಕತೆಗಳ ಸಂಗ್ರಹ ಪ್ರಾರಂಭದ ಕತೆಯಾದ "ನಂದಾದೀಪ" ಕತೆಯ ಹೆಸರನ್ನೇ ಈ ಗ್ರಂಥಕ್ಕೆ ಕೊಡ ಕರ್ನಾಟಕದ ಸಾಮ್ಯ ಕ್ಷೇತ್ರ ದಲ್ಲಿ ನುರಿತ ಲೇಖಕರೆಂದು ಪ್ರಖ್ಯಾತಿಪಟ್ಟಿರುವ ಶ್ರೀಮಾನ್ ಕೊರಡ್ಕಲ್ ಶ್ರೀನಿವಾಸ ರಾಯರ ಕತೆಗಳು ಹೇಗಿರುತ್ತವೆಂದು ನಮ್ಮ ಪತ್ರಿಕೆಯ ವಾಚಕರಿಗೆ ನಾವು ಪ್ರತ್ಯೇಕವಾಗಿ ವಿವರಿಸಿ ಹೇಳ ಬೇಕಾಗಿಲ್ಲ ಪ್ರತ್ಯಕ್ಷವಾಗಿ ಅವರದೊಂದು ಕತೆ ಯು ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವುದ ರಿಂದ. ನಮ್ಮ ಹೃತ್ಪೂರ್ವಕವಾದ ಪ್ರಶಂಸೆಗಿಂತ ಲೂ, ವಾಚಕರೇ ಶ್ರೇಯುತರ ಕತೆಯನ್ನೋದಿ ಆನಂದಸಾಗರರಾಗರೆಂದು ನಾವು ನಂಬಿರುವೆವು.

ಮೇಲಿನ ಉತ್ತಮವಾದ ಎರಡು ಗ್ರಂಥಗ ಳನ್ನೂ ಪ್ರಕಟಿಸಿ ಕರ್ನಾಟಕ ಗ್ರಂಥ ಭಂಡಾ ರಕ್ಕೆ ವುಗಳು ನೇರುವಂತೆ ಮಾಡಿ ಕಿರಿಯರ ಪ್ರಪಂಚದ ತೊದಲ್ನುಡಿ ಗ್ರಂಥಮಾಲೆಯ ಸಂಪಾ ದಕರಾದ ಶ್ರೀ ಕೆ. ಹೊನ್ನಯ್ಯ ಶೆಟ್ಟರು ಕರ್ನಾಟ ಕಕ್ಕೆ ತಮ್ಮ ಅನೋಘ ಸೇವೆಯನ್ನು ಸಲ್ಲಿಸಿರು ವರು ತೊದಲ್ನುಡಿ ಗಂಥಮಾಲೆಯ ಪ್ರತಿಯೊಂದು ಪುಷ್ಪವು ಕರ್ನಾಟಕ ಬಂಧುಭಗಿನಿಯರ ಮನ ಸ್ಸಿಗೆ ತುಂಬಾ ಸಂತೋಷವನ್ನುಂಟು ಮಾಡಿ ಜ್ಞಾನವೃದ್ಧಿಗೆ ಸಹಕಾರಿಯಾಗುವಂತಿರುವ ಕಾರಣ ಪ್ರತಿಯೊಂದು ಗ್ರಂಥ ಸಂಗ್ರಹಾಲಯ ದಲ್ಲಿ ಇವುಗಳಿಗೆ ಯೋಗ್ಯಸ್ಥಾನ ದೊರೆಯ ಲೆಂದು ನಾವು ಹಾರೈಸುತ್ತಿರುವೆವು.

**ಇಷ್ಟೋಪದೇಶ:**—ಶ್ರೀ. ಅನಂತಕೀರ್ತಿ ಗ್ರಂಥಮಾಲೆಯ ೧೦ನೆಯ ಪುಷ್ಪ, ಶ್ರೀಮತ್ಪೂ ಜ್ಯಪಾದಾಚಾರ್ಯ ವಿರಚಿತ ವ್ಯಾಖ್ಯಾನಕಾರ ರಾದ ಆವಿ ಶ್ರೀ ಎ ಶಾಂತಿರಾಜ ಶಾಸ್ತ್ರಿಗಳವರು. ಸ್ಪಕಾಶಿಕೆ. ಶ್ರೀಮತಿ ದೇವಜಮ್ಮನವರು, ಪಣಪಿಲ, ಪೃಷ್ಠ ಸಂಖ್ಯೆ ೫೦

ಜೈನ ಸಮಾಜದ ಅಧ್ಯಾತ್ಮ ತತ್ವಗಳನ್ನು ಶುಲಭ ಶೈಲಿಯಲ್ಲಿ ಬರೆದು ಅವುಗಳನ್ನು ಮಹಾಜನರ ಮುಂದಿಟ್ಟು ಸರ್ವರೂ ಅವುಗಳನ್ನು ತಿಳಿಯಲು ಅನುಕೂಲ ಪಡಿಸಿರುವರು.

ಧಾರ್ಮಿಕ ವಿಚಾರಗಳಲ್ಲಿ ಆಸಕ್ತಿಯುಳ್ಳವರಿಗೆ ಈ ಚಿಕ್ಕ ಗ್ರಂಥವು ಸಂಗ್ರಾಹ್ಯವಾಗಿರುವುದು.

**ಸಂಯುಕ್ತ ರಾಜ್ಯಘಟನೆ:**-ಲೇಖಕ. ಮತ್ತು ಪ್ರಕಾಶಕರು ಶ್ರೀ. ಶಿವರಾಯಭೋಜ ಪ್ರಭು ಾಟೀಲ ಮಾಸ್ತರ, ಹಿರಿಯ ಬಾಗೇವಾಡಿ, ಪೃಷ್ಠ ಸಂಖ್ಯೆ ೫೬ ಬೆಲೆ ೦—೪—೦

ಆಂಗ್ಲಭಾಷೆಯಲ್ಲಿರತಕ್ಕ ಸನ್ ೧೯೩೫ನೇ ಇಸವಿಯ ಭಾರತೀಯ ನೂತನ ಸಂಯುಕ್ತ ರಾಜ್ಯ ಘಟನೆಯ ವಿಚಾರಗಳು ಕರ್ನಾಟಕದ ಜನರಿಗೆ ತಿಳಿಯಲು ಅನುಕೂಲವಾಗುವಂತೆ ಕನ್ನಡ ಭಾಷ ಯಲ್ಲವುಗಳನ್ನು ನಿರೂಪಿಸಲಾಗಿದೆ

ಹಿಂದೀ ರಾಷ್ಟ್ರೀಯಸಭೆಯವರು ಈ ಸಂಯುಕ್ತ ಘಟನೆಯು ಸದೋಷವಾಗಿರುವ ಕಾರಣ ಅದನ್ನು ಬಹಿಷ್ಕರಿಸುವ ವಿಚಾರ ಮಾಡಿರುವರು ಈ ಕುರಿತು ಪತ್ರಿಕೆಗಳಲ್ಲಿ ತುಂಬಾ ಚರ್ಚೆಗಳೂ ನಡೆಯುತ್ತಲಿವೆ. ಹಿಂದೀ ರಾಜಕೀಯ ವಿಚಾ ರಗಳನ್ನು ಅಮೂಲಾಗ್ರವಾಗಿ ತಿಳಿಯ ಬಯಸುವ ಕನ್ನಡಿಗರಿಗೆ ಈ ಚಿಕ್ಕ ಪುಸ್ತಕವು ತುಂಬಾ ಸಹಾಯಕಾರಿಯಾಗಬಹುದು

ಹಿಂದುಸ್ಥಾನದೊಳಗಿನ ವ್ರಾಂತಿಕ ಸರಕಾರ ಗಳ ಮತ್ತು ಕೇಂದ್ರ ಸರಕಾರದ ಸಮ್ಮಂಧ, ಪ್ರತಿ ಯೊಂದು ಅಸೆಂಬ್ಲಿ ಮತ್ತು ಕೌನ್ಸಿಲುಗಳ ವೆ ಂಬರ ಸಂಖ್ಯೆ, ಅವುಗಳ ಅಧಿಕಾರದ ಶೀಮೆ, ಗವರ್ನರ, ವೈಸರಾಯಿಗಳ ವಿಶೇಷಾಧಿಕಾರಗಳು ಇತ್ಯಾದಿ ಎಲ್ಲಾ ವಿಚಾರಗಳೂ ಇದರಲ್ಲಿ ಕೂಡಿವೆ ಪುಸ್ತಕವು ಸಂಗ್ರಾಹ್ಯವಿದೆ

**ಪ್ರಪಂಚದ ಭವಿಷ್ಯ:**— ಲೇಖಕರು ಶ್ರೀ ಯುತ ಬಿ ವಿ ರಾಮನ, ಸಂಪಾದಕ ಜ್ಯೋತಿಷ್ಯ ಮಾಸ ಪತ್ರಿಕೆ (Astrological magazine), ಮಲ್ಲೇಶ್ವರಂ, ಬೆಂಗಳೂರು ಪೃಷ್ಠ ಸಂಖ್ಯೆ ೬೪ ಬೆಲೆ. ೦ ೪—೦

ಈ ಪುಸ್ತಕದಲ್ಲಿ ೧೯೩೫ ಮತ್ತು ೧೯೩೦ನೇ ಇಸವಿಯ ಪ್ರಪಂಚದ ಭವಿಷ್ಯ ವಿಚಾರಗಳನ್ನು ನಿರೂಪಿಸಲಾಗಿದೆ. ಪ್ರಪಂಚದ ಭವಿಷ್ಯವೆಂದು ಹೆಸರಿಟ್ಟಿರುವ ಈ ಪುಸ್ತಕದಲ್ಲಿ ಪ್ರಪಂಚದ ರಾಜಕೀಯ ವಿಚಾರಗಳೇ ಹೆಚ್ಚಾಗಿ ಚರ್ಚಿಸಲಾ ಗಿವೆ ಆಯಾ ರಾಷ್ಟ್ರಗಳ ಮುಖಂಡರುಗಳ ಭವಿಷ್ಯ ವಿಚಾರಗಳೂ ಸ್ವಲ್ಪದರಲ್ಲಿ ಕೊಡಲಾಗಿವೆ.

ಜ್ಯೋತಿಷ್ಯ ವಿಚಾರಗಳಲ್ಲಿ ಆಸಕ್ತಿಯುಳ್ಳವರಿಗೆ ಈ ಪುಸ್ತಕವು ಸಂಗ್ರಾಹ್ಯವಿದೆ

———

# ಕೆನರಾ ಮ್ಯೂಚ್ಯುಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ

ಈ ಕಂಪೆನಿಯು ಸನ್. ೧೯೩೮ನೇ ಇಸವಿ ಸಪ್ಟಂಬರ ೩೦ಕ್ಕೆ ಅಂತ್ಯವಾಗುವ ತೃತೀಯ ವಾರ್ಷಿಕವರದಿಯನ್ನು ಆತ್ಯಾದರಪೂರ್ವಕ ಸ್ವೀಕರಿಸಿರುವೆವು.

ಈ ವರ್ಷದ ವರದಿಯಿಂದ ಪ್ರಾಮುಖ್ಯವಾಗಿ ಕಂಡುಬರುವ ಸಂಗತಿಗಳೆಂದರೆ, ಕಂಪೆನಿಯ ಉತ್ಪತ್ತಿಯು ತೃಪ್ತಿಕರವಾಗಿ ವೃದ್ಧಿಗೊಂಡಿರುವದಲ್ಲದೆ, ವೃದ್ಧಿಗನುಸಾರವಾಗಿ ಈ ಕಂಪೆನಿಯಲ್ಲಿ ವಿಮೆ ಇಳಿಸಿ ಪೋಲಿಸಿಗಳನ್ನು ಪಡೆದಿರುವವರಿಗೆ ಬೇಗನೆ ತುಂಬಾ ಲಾಂಭಾಂಶವು ದೊರೆವುದಾಗಿ ನಿರ್ದಾಕ್ಷಿಣ್ಯದಿಂದ ಹೇಳಬರುವಂತಿದೆ. ಕಾರಣ ಈ ಕಂಪೆನಿಯಲ್ಲಿ ಪ್ರತ್ಯೇಕವಾಗಿ ಪಾಲುಗಾರರಿಲ್ಲದೆ, ಸಹಕಾರತತ್ವದಲ್ಲಿ ಸ್ಥಾಪನೆಯಾಗಿರುವ ಈ ಕಂಪೆನಿಯ ಪೋಲಿಸಿದಾರರೇ ಪಾಲುಗಾರರಾಗಿದ್ದು ಕಂಪೆನಿಗೆ ಉಳಿತಾಯವಾದ ಮುನಾಫೆಯು ಬೋನಸ ರೂಪದಲ್ಲಿ ಪೊಲಿಸಿದಾರರಿಗೇನೆ ದೊರೆಯಬೇಕಾಗಿರುವುದು.

### ಮೂರನೆ ವರ್ಷದ ಸಂಕ್ಷಿಪ್ತ ವರದಿ

೧೯೩೭ನೇ ಅಕ್ಟೋಬರದಿಂದ ೩೮ನೇ ಸಪ್ಟಂಬರ ಅಂತ್ಯದೊಳಗಾಗಿ ಈ ಕಂಪೆನಿಯವರು ೧೦ ಲಕ್ಷ, ೧೩ ಸಾವಿರಕ್ಕೆ ಮೇಲ್ಪಟ್ಟ ಮೊಬಲಗಿನ ವಿಮಾಅರ್ಜಿ (ಪ್ರಪೋಜಲ್ಸ್)ಗಳನ್ನು ಸ್ವೀಕರಿಸಿ, ಅವುಗಳ ಪರಿಶೀಲನೆ ಮಾಡಿ ರೂ. ೮,೦೯,೩೫೦ರ ಮೌಲ್ಯದ ಪೊಲಿಸಿಗಳನ್ನು ತೆತ್ತಿರುವರು. ಉಳಿದ ಅರ್ಜಿಗಳು ವಿಲೆಇಡಲಾಗಿಯೆಂದು ವರದಿಯಿಂದ ತಿಳಿಯಬರುತ್ತದೆ.

ಮೇಲಿನಂತೆ ಹೊಸ ವರ್ಷದಲ್ಲಿ ತೆತ್ತ ಪೊಲಿಸಿಗಳಿಂದ ರೂ. ೪೨,೪೩೨ರಷ್ಟು ಪ್ರಿಮಿಯಮ್ ರೂಪವಾಗಿ ವಾರ್ಷಿಕ ಉತ್ಪನ್ನವು ದೊರೆವುದು. ಹಿಂದಿನ ವಾರ್ಷಿಕ ಉತ್ಪನ್ನ ರೂ. ೦೧,೨೨೮-೨-೦ ರಷ್ಟಿದ್ದು, ಈ ವರ್ಷದ ಉತ್ಪತ್ತಿ ಕೂಡಿ ಒಟ್ಟಿಗೆ ವರ್ಷ ಒಂದರ ರೂ. ೧,೦೬,೬೯೧ ೧೪-೨ ರಷ್ಟು ಉತ್ಪತ್ತಿ ಬರುವುದು. ಈ ರಕಮಿನಿಂದ ಬಡ್ಡಿ ಮತ್ತು ಇತರ ವಿಧಾನಗಳಿಂದ ರೂ. ೨,೬೨೮-೪-೧೧ ರಷ್ಟು ಹೆಚ್ಚಿನ ಉತ್ಪತ್ತಿ ಬರುವುದಾಗಿಯೂ ರಿಪೋರ್ಟಿನಲ್ಲಿ ಕಾಣಿಸಲಾಗಿದೆ.

### ವಾರಸುದಾರರಿಗೆ ತೆತ್ತ ಮೊಬಲಗು

ಈ ವರ್ಷದಲ್ಲಿ ಮೃತಪಟ್ಟ ಪೊಲಿಸಿದಾರರ ವಾರಸುದಾರರಿಂದ ರೂ. ೧೧,೧೭೮-೧-೦ ರಷ್ಟು ಹಣಕ್ಕೆ ಅರ್ಜಿಗಳು ಬಂದವು. ಅವುಗಳನ್ನ ಸರಿಯಾಗಿ ದಾಖಲೆಗಳನ್ನು ಹಾಜರುಪಡಿಸಿ ಕಂಪೆನಿಯ ನಿಯಮದಂತೆ ರುಜುವಾತು ಕೊಟ್ಟವರಿಗೆ ಕೂಡಲೆ ಹಣ ಸಲ್ಯಾಸಿ, ರುಪ್ಯಾ ೮೦೦೦ ರಷ್ಟು ವರ್ಷಾಂತ್ಯದ ಸಮಯಕ್ಕೆ ಸಲ್ಲಬೇಕಾಗಿತ್ತು. ಅನಂತರ ಬಂದ ದಾಖಲೆಗಳ ಪ್ರಕಾರ ಹಣ ಸಲ್ಯಾಸಿ ವರದಿಯನ್ನು ಪ್ರಕಟಿಸುವ ಸಮಯಕ್ಕೆ ಬರೇ ರೂ. ೨ ಸಾವಿರದಷ್ಟು ಸಲಬೇಕಾಗಿರುವುದು. ಈ ವಿಷಯಕ್ಕೆ ಡೈರೆಕ್ಟರರು ವಿಶೇಷ ಗಮನಕೊಡುತ್ತಿರುವರಾಗಿಯೂ ತಿಳಿಯಬರುತ್ತದೆ.

### ವಾರ್ಷಿಕ ಖರ್ಚು ಮತ್ತು ಧನಸಂಚಯ

ಕಂಪೆನಿಯವರು ವಸೂಲು ಮಾಡುತ್ತಿರುವ ಪ್ರಿಮಿಯಂಮಿನ ಶೇ. ೩೬.೬ ರಷ್ಟು ಮಾತ್ರ

(ಮುಂದಿನ ಪುಟ ನೋಡಿರಿ)


Every Visit is a New Delight
AT
SRI RAMAKRISHNA THEATRE, UD PI.
*Select Programmes!* *Variety Entertainments!*
at a very nominal cost!!

**SERVICE IS OUR MOTTO**

If you are indisposed, we will entertain you to ecstacy!
If your business is not paying, we will help you to sell more by exhibiting your slides!
Take our Services in Time, & get yourselves profited!

*Running Programme:* HANDS UP. (Next) DUNIYANAMANE.
*Coming:* CHEVERLOT, SANT TUKARAM, CHARLIE CHIN AT THE CIRCUS.

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ
ಪ್ರತಿಯೊಂದು ಸಂದರ್ಶನವೂ ನವೀನ ರೀತಿಯ ಆನಂದವೀಯುವುದು!
ಉತ್ಕೃಷ್ಟ ತರದ ಚಿತ್ರಪ್ರದರ್ಶನ! ವಿವಿಧ ರೀತಿಯ ಸಂತೋಷಕೂಟವನ್ನು ನೀವು ಹೊಂದಬಹುದು.... ಕೇವಲ ನಾಮಾಂಕಿತ ಖರ್ಚಿನಿಂದ

**ಸೇವೆಯೇ ನಮ್ಮ ಧ್ಯೇಯ**

ನಿನುಗೆ ಬೇಸರವಿದ್ದರೆ....ಬನ್ನಿರಿ....ನಿಮ್ಮನ್ನು ಆಹ್ಲಾದಗೊಳಿಸುವೆವು! ವ್ಯಾಪಾರದಲ್ಲಿ ಲಾಭವಿಲ್ಲವಾದರೆ....ಕೊಡಿರಿ ನಿಮ್ಮ ಸ್ಲೈಡನ್ನು....ನಿಮಗೆ ಗಿರಾಕಿಗಳು ದ್ವಿಗುಣಿತನಾಗುವಂತೆ ಸಹಾಯವನ್ನಾಡುವೆವು!
ಇಂದೇ ನಮ್ಮ ಸಹಾಯವನ್ನು ಪಡೆಯಿರಿ! ಎಂದೆಂದೂ ಲಾಭಪಡೆಯಿರಿ!

ನಡಿಯುವ ಚಿತ್ರ: ಹ್ಯಾಂಡ್ಸ್ ಅಪ್ (ಅನಂತರ) ದುನಿಯಾನಮನೆ.
ಬರುವ ಚಿತ್ರ: ಚೆವರ್‌ಲೋಟ್, ಸಂತ ತುಕಾರಾಮ, ಚಾರ್ಲಿಚಿನ್ ಎಟ್ ದಿ ಸರ್ಕಸ್.

# ಗುಡ್ಡಕ್ಕೆ ಹೆಗ್ಗುಡ್ಡ ಅಡ್ಡ ಉಂಟೇ ಉಂಟು!

ಪ್ಪನ ಕತೆ — ಮೂರನೇ ರೀಲ್

ಗುಡ್ಡಕ್ಕೆ ಹೆಗ್ಗುಡ್ಡ ಅಡ್ಡಉಂಟೇ ಒಂಬೋದು ನರ್ಸಪ್ಪನಿಗೆ ಗೊತ್ತಾದ ಕೇಳೀಂದ್ರು ನನ್ನ ಮಿತ್ರರು. ನಾನು ದೆ. ಅವರು ಹೀಗೆ ಕತೆ ಹೇಳಿದ್ರು: ಆ ನಿಮ್ಮ ಹತ್ತಿರ ಬುದ್ಧಿವಂತಿಕೆ ಟ ಮಾಡಿದಹಾಗೆ, ಬಬ್ಬು ಪೂಜಾರಿಯ ಮಾರಿಸಿದ ಹಾಗೆ ಇನ್ನೂ ನೂರಾರು ತರ ತನ್ನ ಬರಿದಾದ ಜೇಬನ್ನು ತುಂಬಿಸಿ ತ್ತಿದ್ದ. ಅವನ 'ಹಿಕ್ಮತ್' ಗುಳಿಗೆಯನ್ನು ಬಾಯಿಮುಚ್ಚಿಕೊಂಡು ಕುಳಿತುಕೊಂಡ ಬಹಳಮಂದಿ. ಶ್ರಿಂಗೇರಿ, ಕೊಪ್ಪ, ಳ್ಳಿ, ಶಿವಮೊಗ್ಗಾದ ವರೆಗೂ ಅವನ ಸವಾರಿ ತ್ತೂಂತ ಕಾಣುತ್ತೆ. ಇತ್ತ ಕಣ್ಣಾನ್ನೂ ಕಂಡಿತ್ತೂಂತ ತೋರುತ್ತೆ. ಆದರೆ ಂದು ಕಡೆಯಲ್ಲಿ ಒಂದೊಂದು ಹೆಸರಿಂದ ಕತೆ ಹೇಳುತ್ತಾರೆ. ಒಬ್ಬ ತಿಮ್ಮಪ್ಪಾಂದ್ರೆ ಂದೂರಿನವ ಮರ್ತಪ್ಪಾಂತಾನೆ. ಶ್ರಿಂಗೇರಿ ಬ್ಬರು 'ಬಸಪ್ಪಾಯೆಂಬೋವ್ನು ಹೀಗೂ ಟ್ಟು ಹೋಗಿಬಿಟ್ನಲ್ಲಾ'ಂತ ಒಂದು ದ ಕತೆ ಹೇಳಿದ್ರು. ತೀರ್ಥಳ್ಳಿಯಲ್ಲೊ ಶಾಂತಪ್ಪನ 'ಟೋಕರ್' ಮಾತ್ರೆಯನ್ನ ತೆಪ್ಪಗೆ ನುಂಗಿ ಸುಮ್ಮಗೆ ಕೂತುಕೊಳ್ಳ ಯಿತಲ್ಲಾಂತ ಒಳಗಿಂದೊಳಗೇ ಸಿಟ್ಟಿಂದ ಬುತ್ತಿದ್ರು.

ಮ್ಮೂರಿನವರು ಪರವೂರುಗಳಲ್ಲಿ ಯಾವ ಉದ್ಯೋಗಗಳಲ್ಲಿದ್ದಾರೆಂಬುದೆಲ್ಲ ನರ್ಸಪ್ಪ ಬಾಯಿಪಾಠ. ಅವರೆಂದಾದರೂ ಈ ಬಂದಿದ್ದಾಗ ಅವರಿಗೆ ಬಗ್ಗಿ ನಮಸ್ಕಾರ ಬಾಯಿಕಿಸಿದು, ಹೊಗಳಿಹಿಗ್ಗಿಸಿ, ಕರೆದ ಗೆ ಹಾಜರಾಗಿ, ಹೇಳಿದ ಕೆಲಸಕ್ಕೆ ಓಡಿ, ಕಿನ ಸಪ್ಲೈಯನ್ನೂ ಬೇಕಾದಲ್ಲಿ ಮಾಡಿ ಅವರವರಮರ್ಜಿ ಹಿಡಿದು ತನ್ನ ಗರ್ಜಿ ಕೊಳ್ಳುವ ನರ್ಸಪ್ಪನೊಡನೆ ನೀವು ಕಲ್ಕುತ್ತಾ ರ್, ಬೊಂಬಾಯಿ, ಕೊಲಂಬೋ, ಸು, ರಂಗೂನ್ ಮುಂತಾದಲ್ಲಿರುವ ನಮ್ಮ ಹೆಸರೆತ್ತಿನೋಡಿ. ಅವರ ಉದ್ಯೋಗ, ದಿ ನಂಬರ್ ಕೂಡಾ ಅಂವ ಹೇಳ್ತಾನೆ! ವಲ್ಲ, 'ಓಹೋ, ಅವರಾ? ಅವರಿಲ್ಲಿ ಮೊದಲಾಗಿ ಜನಕಳಿಸೋದು ನನಗೆ! ಯ್ಯಾ ನರ್ಸಪ್ಪಾ, ಬಾವಿಯೊಳಗಿನ ಕಪ್ಪೆಯ ಇಲ್ಲೇ ಬಿದ್ದುಕೊಂಡಿದ್ದಿಯಲ್ಲಾ! ಒಮ್ಮೆ ಬಾರಯ್ಯಾ ನಮ್ಮತ್ತಕಡೆಗೆ! ನನ್ನೊಟ್ಟಿಗೆನೆಂ ಹೊರಟು ಬಂದುಬಿಡು! ಕಾಸುಕರ್ಚಿಲ್ಲ ನಿನಗೆ! ಅಂತ ಹೇಳಿದ್ರು' ಎಂತ ಹೇಗೆ ಕೊಚ್ಚಿಕೊಳ್ಳುತ್ತಾನೆ! ಹೀಗೆ ಕೇಳಿಗುರುತ, ನೋಡಿ ಗುರುತ' ನಮಸ್ಕಾರಹಾಕಿ, ಮೂತಾಡಿ, ಸಿಂಗಲ್ ಹೊಡೆದು, ಒಡನಾಡಿ ಗುರುತಾದವರನ್ನೆಲ್ಲ ಅವರವರ ಜಗದಲ್ಲಿ ನೋಡಿ ತನ್ನ ಬುದ್ಧಿವಂತಿಕೆಹೂಡಿ ಒರಬೇಕೆಂಬ ಹೆಬ್ಬಯಕೆ ನರಸಪ್ಪನಿಗಿತ್ತು. ಅಲ್ಲಿಗೆ ಹೋದ ಮೇಲೆ ದುಡ್ಡುಬೇಕಾಗಿಲ್ಲ ಅವನಿಗೆ. ಆದರೆ ಮೊದಲಾಗಿ ಹೋಗಲಿಕ್ಕೆ ದುಡ್ಡು ಬೇಕಲ್ಲಾ? ಅದೂ ವುಕ್ಕಟೆಯಿಂದಾಗಬೇಕೆಂದು ಸಮಯ ಸಾಧಿಸುತ್ತಿದ್ದ ನರ್ಸಪ್ಪ.

ಕಳೆದ ದಶಂಬರದಲ್ಲಿ ಇಲ್ಲಿಯವರೊಬ್ಬರು ಮನ ಬಂದ - ಪಯಣದ (Go-as-you-please) ಟಿಕೇಟನ್ನು ಪಡೆದು ಸಂಚಾರಕ್ಕೆ ಹೋದರು. ಆದರೆ ಹೊರಟ ನಾಲ್ಕು ದಿನಗಳೊಳಗೇ ಅವರ ಹೆಂಡತಿಗೆ ಕಾಹಿಲೆಯೆಂದು ತಂತಿಹೋದುದರಿಂದ ಹಿಂದೆ ಬರಬೇಕಾಯಿತು. ಇನ್ನೂ ಎಂಟು ದಿನ

ಕತೆಗಾರರು
ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್
ಬೋರ್ಡ್ ಹೈಸ್ಕೂಲ್, ಉಡುಪಿ

ಗಳ ಅವಧಿಯಿತ್ತು ಆ ಟಿಕೇಟಿಗೆ. ಸುಮ್ಮನೆ ವ್ಯರ್ಥವಾಗುವ ಅದನ್ನು ನರ್ಸಪ್ಪನು ಬಗ್ಗಿದೊಂದು ನಮಸ್ಕಾರಕೊಟ್ಟು ಕೊಂಡುಕೊಂಡ. ಅನಂತರ ಎರಡೇ ಎರಡು ದಿವಸಗಳೊಳಗೆ ನರ್ಸಪ್ಪನು ಮದ್ರಾಸಿನಲ್ಲಿ! ತನಗೆ ಬಗೆಬಗೆಯ ಗುರುತವಿದ್ದವರನ್ನೆಲ್ಲ ಬೇಟಿಮಾಡಿದ. ಗುರುತವಿಲ್ಲದವರಿಗೂ ಅವರ ಇಲ್ಲಿಯ ಇಷ್ಟಮಿತ್ರ

---

(ಹಿಂದಿನ ಪುಟದಿಂದ)

ಕಂಪೆನಿಯ ಆಡಳಿತೆ ಮತ್ತು ವಹಿವಾಟುಗಳ ಬಗ್ಗೆ ಖರ್ಚು ಮಾಡಿರುವರು. ಎರಡನೇ ವರ್ಷದಲ್ಲಿ ಖರ್ಚಿನ ಪ್ರಮಾಣ ಶೇ. ೪೫೫ ರಷ್ಟಿತ್ತು ಕಳೆದ ವರ್ಷ ಸರಕಾರಿ ಭದ್ರತಾ ಪತ್ರಗಳಲ್ಲಿ ವಿನಿಯೋಗಿಸಿದ ನಿಧಿಯ ಹೊರತಾಗಿ, ಇನ್ಶೂರೆನ್ಸ್ ಆಕ್ಟಿನ ನಿಯಮಾನುಸಾರವಾಗಿ ಇಷ್ಟರವರೆಗೆ ರಿಜರ್ವ್ ಬ್ಯಾಂಕ್ ಓಫ್ ಇಂಡಿಯಾದಲ್ಲಿ ಮತ್ತಷ್ಟು ಹೆಚ್ಚಿನ ಹಣವನ್ನು ಡಿವೋಜಿಟ್ಟಾಗಿ ಕಟ್ಟಿರುವುದರಿಂದ ಪ್ರಕೃತ ರಿಜರ್ವ್ ಬ್ಯಾಂಕಿನಲ್ಲಿ ಒಟ್ಟಿಗೆ ರೂ. ೧,೧೦,೦೦೦ದಷ್ಟು ಜಮೆಯಾಗಿರುವುದು. ಇದರಿಂದ ಡೈರೆಕ್ಟರರು ತಮ್ಮ ಕಂಪೆನಿಯನ್ನು ಸರ್ವತೋಮುಖವಾಗಿ ಭದ್ರ ಪಡಿಸಿಕೊಂಡಂತಾಗಿದೆ. ಈ ವಿಚಾರವು ಅತ್ಯಂತ ತೃಪ್ತಿಕರವೂ ಅಭಿನಂದನೀಯವೂ ಆಗಿದೆ.

### ಲ್ಯಾಫ ಫಂಡು

ಮೇಲೆ ಹೇಳಿದಂತೆ ಕಳೆದ ಮೂರು ವರ್ಷಗಳಿಂದಲೂ ಮಿತವ್ಯಯದಿಂದ ಕಂಪೆನಿಯ ಆಡಳಿತೆಯನ್ನು ನಿರ್ವಹಿಸುತ್ತಾ ಬಂದಿರುವ ಕಾರಣ ಪ್ರಕೃತ ಈ ಕಂಪೆನಿಯ ಲ್ಯಾಫ ಎಶ್ಶೂರನ್ಸ್ ಫಂಡು ರೂಪ್ಯಾ ೧೦೯೩೭-೧೨-೬ ಜಮೆಯಾಗಿರುವುದುಎಲ್ಲದಕ್ಕಿಂತಲೂ ವಿಶೇಷಅಭಿನಂದನೀಯವಾದ ಸಂಗತಿಯಾಗಿದೆ. ಇದೇ ಕಾರಣದಿಂದ ವೊಲಿಸಿದಾರರಿಗೆ ಬೇಗನೆ ದೀರ್ಘ ಕಾಲದಿಂದ ಕೆಲಸ ನಿರ್ವಹಿಸುತ್ತಾ ಬಂದಿರುವ ಕೆಲವು ಹಳೇಕಂಪೆನಿಗಳಿಗಿಂತಲೂ ಹೆಚ್ಚಿನ ಲಾಭಾಂಶವು ದೊರೆಯಬಹುದಾಗಿ ಹೇಳಬರುವಂತಿದೆ.

### ಹೊಸ ಕಾನೂನಿನನ್ವಯ ವಿಶೇಷ ಸುಧಾರಣೆಗಳು

ಸನ್ ೧೯೩೬ನೇ ಹೊಸ ಇನ್ಶೂರೆನ್ಸ್ ಆಕ್ಟಿಗನುಸಾರವಾಗಿ, ಡೈರೆಕ್ಟರರುಗಳುತಮ್ಮ ಕಂಪೆನಿಯ ನಿಯಮಗಳಲ್ಲಿ (Articles of Association) ಅಗತ್ಯವೆಂದು ಕಂಡುಬಂದಂತೆ ನಿಯಮಗಳನ್ನು ಬದಲಾಯಿಸಿಕೊಂಡಿರುವರಲ್ಲದೆ ಸನ್. ೧೯೩೮ನೇ ಹೊಸತಿದ್ದುಪಡಿಗಳಿಗನುಸಾರವಾಗಿ ಯೂ, ಮುಂದಿನ೧೯೪೦ನೇಇಸವಿಯಿಂದಕಂಪೆನಿಯ ವರ್ಷಾರಂಭವು ಜನವರಿ ೧ರಿಂದಲೇ ಎಂಬುದನ್ನು ನಿರ್ಧರಿಸಿರುವರು. ಈ ಹೊಸ ಏರ್ಪಾಡಿಗಾಗಿ ಈ ವರ್ಷದ ಅಕ್ಟೋಬರದಿಂದ-ದಶಂಬರ ಅಂತ್ಯದವರೆಗಿನ ೩ ತಿಂಗಳ ಲೆಖ್ಖವನ್ನು ಪರಿಶೋಧಿಸಿ ವ್ಯವಸ್ಥೆಗೊಳಿಸಲಿರುವರು.

ಅಂತೂ ಓಡಿಟರರಿಂದ ಮಂಜೂರಾಗಿ ಪ್ರಕಟವಾಗಿರುವ ರಿಪೋರ್ಟನ್ನು ಪರಿಶೀಲಿಸುತ್ತಿರುವಾಗ ಈ ಕಂಪೆನಿಯ ಡೈರೆಕ್ಟರರು ಸ್ತುತಿಪಾತ್ರರಾಗುವ ರೀತಿಯಲ್ಲಿ ತಮ್ಮ ಕಾರ್ಯನಿರ್ವಹಿಸಿರುವುದು ಅಭಿನಂದನೀಯವು.

---

ಬಂಧುಬಾಂಧವರಲ್ಲಿ ಯಾರಾದರೊಬ್ಬಿಬ್ಬರ ಯೋಗಕ್ಷೇಮಗಳ ಕತೆಹೇಳಿ ಅವರ ಆಪ್ತಸ್ನೇಹ ತನು ತಾನೆಂದು ತನ್ನ ಪರಿಚಯ ತಾನೇ ಮಾಡಿಸಿ ಕೊಂಡ. ಹೀಗೆ ಐದುದಿನಗಳಲ್ಲೊಂದು ಇಪ್ಪತ್ತೈದು ದೊಡ್ಡ ಜನಗಳ ಸಂದರ್ಶನೆಯನ್ನು ಮಾಡದಿರಲಿಲ್ಲವೆನ್ನಿ ಹೋದಲ್ಲೆಲ್ಲ ಸಮಯ ಸಂದರ್ಭಕ್ಕೆ ತಕ್ಕಂತೆ ಚಿಕ್ಕ ದೊಡ್ಡ ಮಾತುಕತೆ ನಡೆಯಿಸಿ, ಕೊನೆಗೆ ತನ್ನ 'ತುರುಪು' ಅವರ ಮುಂದಿಡುತ್ತಿದ್ದ. ಅದು ಇಷ್ಟೇ: — 'ತಮ್ಮ ಕಾರ್ಬಾರುಗಳನ್ನೆಲ್ಲಾ ಕಣ್ಣಾರೆ ಕಂಡು ಸಂತೋಷಪಟ್ಕೊಂಡು ಊರಿಗೆಹೋಗಿ ಎಲ್ಲರಿಗೂ ಹೇಳೋಣಾ, ಈ ಊರನ್ನು ನೋಡ್ಕೊಂಡು ಹೋಗೋಣಾಂತ ಬಂದೆ. ಆದರೆ ನನ್ನ ದುರ್ದೈವ ನನ್ನಿಂದ ಮುಂದೆ ಇಲ್ಲಿ ಬಂದು ಕಾದುಕೂತಿತ್ತು! ಏನುಹೇಳ್ಲಿ! ಬಂದವ ಒಂದು ಹೋಟೆಲಿನಲ್ಲಿ ಇಳಿದೆ. ಊಟಕ್ಕೆ ಟಿಕೇಟು ತಕ್ಕೊಂಡು ಒಳಗೆ ಹೋದೆ. ಅಲ್ಲೇ ಕೋಟನ್ನು ಇಟ್ಟುಕೊಂಡಿದ್ದೆ, ಅದನ್ನು ಬಿಟ್ಟು ಹೋದ್ದೂಂದ್ರೆ ಕೈತೊಳಿಯಲಿಕ್ಕೆಮಾತ್ರ! ಹಿಂದೆಬಂದು ನೋಡಿದಾಗ ಕೋಟು ನಾನು ಮಡಚಿಟ್ಟಹಾಗೇ ಇತ್ತು. ಏನೂ ಸಂಶಯ ವಾಗಲಿಲ್ಲ ನೋಡಿ. ಹಾಗೇ ಕೋಟುಹಾಕ್ಕೊಂಡೆ. ಹೋಟೆಲ್‌ಬಿಟ್ಟು ಬೀದಿಗಿಳಿದು ಒಂದು ಬೀಡಾ ತಕ್ಕೊಂಡೆ. ದಡ್ಡು ಕೊಡೋಣಾಂತ ಒಳಗಿನ ಕಿಸೆಗೆ ಕೈಹಾಕಿನೋಡುತ್ತೇನೆ, ಜೀವಹಾರಿ ಹೋಯ್ತು! ಏನುಹೇಳ್ಲೀ! ದುಡ್ಡು, ನೋಟು, ರೈಲುಟಕೇಟು—ಗೊಯಾಜ್ಯುಪ್ಲೀಜ್ ಅಂತಾ ರಲ್ಲಾ, ಅದು—ಎಲ್ಲ ಇದ್ದ ಪ್ಯಾಕೆಟ್ಟೇ ಇಲ್ಲ. ಏನುಮಾಡ್ಲಿ! ಹೇಳ್ಲಿಕ್ಕೆ ನಾಚಿಕೆಯಾಗುತ್ತೆ, ಕೇಳ್ಲಿಕ್ಕೆ ಸಂಕೋಚವಾಗುತ್ತೆ. ಅಂತೂ ಊರು ಮನೆ ಸೇರಬೇಕಾಗಿದೆಯಲ್ಲಾ! ಒಂದು ಹನ್ನೆರಡು ರುಪ್ಯಾ ಕಡಕೊಡೋಣಾಗ್ಲಿ; ಮನೆಸೇರಿದ ಮರು ದಿನವೇ ತಮಗೆ ತಂತೀಮನಿಯಾರ್ಡರು ಮಾಡುತ್ತೇನೆ. ತಮ್ಮ ವಿಳಾಸದ ಕಾರ್ಡು ಕೊಟ್ಬಿಡಿ!" ಎಂಬ ಇದೊಂದೇ ಹಾಡನ್ನು ಚುಟುಕಾಗಿಯೋ ಉದ್ದವಾಗಿಯೋ ಬೇರೆಬೇರೆ ರಾಗದಿಂದ, ರೂಪದಿಂದ, ಹಾಡಿಹಾಡಿ ಸುಮಾರು ಮೂರುನೂರು ರೂಪಾಯಿ ಮಾಡಿಬಿಟ್ಟ ನರ್ಸಪ್ಪ.

ಇನ್ನೇನು! ನರ್ಸಪ್ಪನ ಮದ್ರಾಸುದಿಗ್ವಿಜಯ ಆದಂತೆಯೇ. ಇನ್ನು ನಾಲ್ಕೇನಾಲ್ಕು ತಾಸು ಕಳೆಯಿತೆಂದರೆ ರೈಲುಹತ್ತಿಬಿಡುತ್ತಾನೆ! ನೋಡಿ, ಮೌಂಟ್‌ರೋಡಿನ ಪಕ್ಕದಲ್ಲೊಂದು ಪಾರ್ಕಿನಲ್ಲಿ ಹೊತ್ತುಗಳೆಯುವುದಕ್ಕಾಗಿ ಕುಳಿತಿದ್ದಾನೆ. ಆ ಸುಮಾರು ಮೂರುನೂರು ರೂಪಾಯಿಗಳ ನೋಟಿನ ಲಕ್ಕೋಟೆಯು ಅವನ ಒಳಗಿನ ಶರ್ಟಿನ ಕಿಸೆಯಲ್ಲುಂಟು. ಅದೆಲ್ಲಾದರೂ ಬಗ್ಗುವಾಗ ಸುರಿದು ಕೆಳಬೀಳದಂತೆ ಜೇಬಿನ ಬಾಯಿಯು ಹೊಲಿಯಲಾಗಿದೆ. ಮೇಲೆ ಕೋಟುಹಾಕಿ ಎಳೆದು ಗುಂಡಿಸಿಕ್ಕಿಸಿದ್ದಾನೆ. ಅಲ್ಲದು ಭದ್ರವಾಗಿದ್ದರೂ ಹರೆಯದಹೆಣ್ಣಿನ ಎದೆಯಬ್ಬಿನಂತೆ ತಾನಿದ್ದ ಜಾಗವನ್ನು ಕಣ್ಣಿದ್ದವರಿಗೆ ಕುಕ್ಕಿ ತೋರಿಸುತ್ತಿದೆ. ನರ್ಸಪ್ಪನು ತನ್ನ ಬುದ್ಧಿವಂತಿಕೆಗೆ ತಾನೇ ಮೆಚ್ಚಿಮೆಚ್ಚಿ ಹಿರಿಹಿರಿ ಹಿಗ್ಗುತ್ತಿದ್ದಾನೆ. 'ಬು' ಯೊಳ್ಳರೇ ನನಗಾರುಸರೀ,‖ ಇದ್ದರೆ ಬನ್ನಿರಿ ತೋರಿಸರೀ!‖, ಎಂದು ಯಾವುದೋ ಒಂದು ನಾಟಕದ ಪಲ್ಲವಿಯು ಹಠಾತ್ತಾಗಿ ಅವನ ಬಾಯಿಗೆಬಂತು. ಅದನ್ನೇ ತಿರುತಿರುಗಿ ಹಾಡುತ್ತಿದ್ದಾನೆ!

ಅವನಿದ್ದ ಜಾಗವು ('Bus Stops Here') ಬಸ್ಸು ಇಲ್ಲಿ ನಿಲ್ಲುತ್ತದೆ ಎಂಬೊಂದು ಕಂಬದಿಂದ ದೂರವಿರಲಿಲ್ಲ. ಹೋಗುತ್ತಿದ್ದ ಬಸ್ಸೊಂದು ನಿಯಮಾನುಸಾರ ಅಲ್ಲಿ ಕ್ಷಣನಿಂತಿತು. ಕೈಯಲ್ಲೊಂದು ಪೆಟ್ಟಿಗೆಯನ್ನು ಹಿಡಿದುಕೊಂಡು ಒಬ್ಬ ಕೆಳಗಿಳಿದ. ಅದನ್ನು ಕುತ್ತಿಗೆಗೆ ತೂಗಿಸಿ ಕೊಂಡು ನರ್ಸಪ್ಪನ ಬಳಿಗೆಬಂದ. ಚೈನಾಬಜಾರದ ಕಾಲುದಾರಿಯಲ್ಲಿ ಸಂಜೆಯಹೊತ್ತು ಅಂತಹ ರನ್ನೆಷ್ಟೋ ನರ್ಸಪ್ಪ ಕಂಡಿದ್ದ. ಮಾತ್ರವಲ್ಲ, ಅವರು ಎರಡು ಎರಡು ರೂಪಾಯಿ ಬೆಲೆಹೇಳಿದ ಸರಕನ್ನು ಚರ್ಚೆಮಾಡಿಮಾಡಿ ಎರಡಾಣೆಗೆ ತೆಗೆದುಕೊಂಡಿದ್ದ. ಅಂತಹ ಸರಕು ಸಾಮಾನು ಗಳಂದು ಅವನ ಪೆಟ್ಟಿಗೆಯಲ್ಲಿದ್ದು ಊರ ಪ್ರಯಾಣವನ್ನು ಕಾದುಬಿದ್ದಿವೆ. ಹೊಟೇಲಿನಲ್ಲಿ ಇವನಿಂದಲೂ ಒಂದೆರಡು ಸಾಮಾನುಗಳನ್ನು ಅಗ್ಗದಲ್ಲಿ ಹಾರಿಸೋಣವೆಂದು ಸುಮ್ಮನೆ ಕಾಲ ಹರಣ ಮಾಡುತ್ತಿದ್ದ ನರ್ಸಪ್ಪನಿಗೆ ತೋರಿತು. ಬಂದವನ ಪೆಟ್ಟಿಗೆಯಲ್ಲಿ ಬಗೆಬಗೆಯ ಸ್ಯಾಂಪಲ್ ಸೆಂಟ್ಸು, ಸಾಬೂನು, ದೃಷ್ಟಿಚಕ್ರ, ಮಣಿಸರಕು ಮುಂತಾದುವೆಲ್ಲ ಇದ್ದವು. ನರ್ಸಪ್ಪನು ಇಂಗ್ಲಿಷು ಕನ್ನಡ ಮಲೆಯಾಳ ತಮಿಳು ತೆಲಗು ಗಳಲ್ಲಿ ತನಗೆ ಗೊತ್ತಿದ್ದ ಮಾತು ಬೆರಸಿ ಪಂಚ ಕಜ್ಜಾಯದ ಭಾಷೆಯಲ್ಲಿ ಮಾತಾಡಿದ. ಅಂತೂ ಅರ್ಥವಾಗುವಂತಿತ್ತು ಅವನೂ ಉತ್ತರ ಕೊಟ್ಟ ಆದೇ ರೀತಿಯಲ್ಲಿ. ಅವನೇನೋ ಬಹಳ ಔದಾರ್ಯದಿಂದೆಂಬಂತೆ ಹಲವು ಸ್ಯಾಂಪಲ್ ಬಾಟ್ಲಗಳನ್ನು ನರ್ಸಪ್ಪನಿಗೆ ಉಚಿತವಾಗಿಯೇ ಕೊಟ್ಟುಬಿಟ್ಟ. Adevertise our Company in your place-free, free-ಎಂದು ಕೊಟ್ಟೇಬಿಟ್ಟ. ನರ್ಸಪ್ಪನು ತಾನೊಬ್ಬ Big Kanara Merchant ಎಂಬು ಹುಂಡು ಗರ್ವಾಲಿಗೆ ಆ ಬಿಪ್ಪೆಮುಂಡೇದು ಹುಚ್ಚುಗಟ್ಟ ಸ್ಯಾಂಪಲ್ ಬಾಟ್ಲಿಗಳನ್ನು ಕೊಟ್ಟುಬಿಟ್ಟಲ್ಲಾ ಎಂದು ಹಿಗ್ಗಿದ. 'ನೇತ್ರರೋಗನಿವಾರಣೀ' ಎಂದು ಒಂದು ಪುಡಿಯಲ್ಲಿ ಗ್ಲಾಸಿನ ಕಡ್ಡಿಯನ್ನು ಅದ್ದಿ ನರ್ಸಪ್ಪನ ರೆಪ್ಪೆಗೆ ತಾಗಿಸಿದ ಆತ. ಒಂದರೆ ಕ್ಷಣ ಚುಮುಚುಮು ಎಂದಿತು ಕಣ್ಣು. ಆ ಮೇಲೆ ತಂಪುತಂಪಾಗಿ ಕಣ್ಣು ಚುರುಕಾದಂತಾಯಿತು. ಅದರದೆರಡು ಸೀಸೆಗಳನ್ನು ಕೊಂಡು ಹೋದರೆ ಊರಲ್ಲಿ ನಾಲ್ಕುಕಾಸು ಮಾಡಬಹುದೆಂದು ನರ್ಸಪ್ಪ ಬಗೆದ. ಎರಡಾಣೆ ಬಿಚ್ಚಿದ. ಆಗ ಆತ 'But look, this, much beat you become eyedoctor all eye cure One hundred rupee earn'! ಎಂದು ಮತ್ತೊಂದು ಸೀಸೆ ತೋರಿಸಿದ. ಕಣ್ಣು ಡಾಕ್ಟರ್, ನೂರುರೂಪಾಯಿ ಸಂಪಾದನೆ, ಎಂದು ಕೇಳಿದಾಗ ನರ್ಸಪ್ಪನ 'ಏ ನಿಮಿರಿತು, ಕಣ್ಣು ಅರಳತು! 'Show how use' ಅಂದ ನರ್ಸಪ್ಪ. ಎರಡು ಕಣ್ಣುಗಳ ರೆಪ್ಪೆಗಳನ್ನು ಮೇಲ್ಮಡಚಿ ಅವನ್ನು ನರ್ಸಪ್ಪನು ಹಾಗೇ ಹಿಡಿದುಕೊಳ್ಳುವಂತೆ ಹೇಳಿದ. ಒಂದಿಷ್ಟು ಮುಲಾಮನ್ನು ಸೀಸೆಯಿಂದ ತೆಗೆದು ಫಕ್ಕನೆ ಎರಡು ರೆಪ್ಪೆಗಳಿಗೂ ಸವರಿ ಅವನ್ನು ಇಳಿಸಿಬಿಟ್ಟ ಆತ. ತಗೊಳ್ಳಿ! ಉರಿಎದ್ದುಬಿಟ್ಟು ನರ್ಸಪ್ಪನಿಗೆ! ಹಿಡಿ ಮರಳು ಕಣ್ಣೊಳಗೆ ಬಿದ್ದಂತಾಯ್ತು! ಉರಿ ಉರಿ ಕಸಕಸ! 'ಹ್ಞಹ್ಞ ಹ್ಞ ಹ್ಞ! ಉಂಹ್ಞಂ ಉಂಹ್ಞಾ ಉಂಹ್ಞ! ಹ್ಞಾಂ, ಹ್ಞಿಂ, ಹ್ಞಿಂ! ಎನ್ನತೊಡಗಿದ ಉರಿತಡೆಯಲಾರದೆ, ಕಣ್ಣುತೆರೆಯಲಾರದೆ ನರ್ಸಪ್ಪ, ಮೈಯೆಲ್ಲ ನಡುಗಿಸುತ್ತ! 'Don't afraid, shut eyes. little pain, No? only five minutes! then all nice! ಎಂದು ಆತ ಒಂದೆರಡು ಮಿನಿಟು ನರ್ಸಪ್ಪನ ಎದೆ ಬೆನ್ನು ಸವರುತ್ತ ಸವರುತ್ತ ಸಮಾಧಾನಮಾಡಿ Don't afraid, Don't cry! two Minutes! only! then all right! I sitting here! Don't afraid!' ಎಂದ. ಆದರೆ "Very pain! Very pain! ಎಂದು ಕಣ್ಣು ಮುಚ್ಚಿಕೊಂಡೇ ಗುಣುಗುಟ್ಟುತ್ತಿದ್ದ ನರ್ಸಪ್ಪ. ಎರಡುಮೂರು ಮಿನಿಟು ಕಳೆಯಿತು. ಆ ಉರಿ ಉರಿ ಕಸಕಸ, ತುಸುತುಸು ಕಡಿಮೆಯಾಗಹತ್ತಿತು. ಆದರೂ ರೆಪ್ಪೆ ಎತ್ತಲಾಗಲಿಲ್ಲ. ಕಣ್ಣುತೆರೆಯಲು ಸಾಧ್ಯವಿದ್ದಿಲ್ಲ. little less! little less ಅನ್ನುತ್ತಿದ್ದ ನರ್ಸಪ್ಪ. ಆದರೆ ಅದಕ್ಕೆ

(ಒಳನೇ ಪುಟ ನೋಡಿರಿ)

# ದಕ್ಷಿಣ ಮತ್ತು ಉತ್ತರ ಕನ್ನಡಾ ಜಿಲ್ಲೆಗಳ

# ಆರ್ಥಿಕ ಸುಧಾರಣೆ!

ಒಂದರಿನ ಸುಧಾರಣೆಯ ಕುರಿತು ಮಂತ್ರಿಗಳಿಗೆ ಬಿನ್ನವಿಸಿಕೊಂಡುದಲ್ಲದೆ, ಮಾನ್ಯ ಯಾಕೂಬ್ ಹಸನರವರಿಂದ ವಲ್ಪೆ ಬಂದರನ್ನು ಕಣ್ಣಾರೆ ಕಂಡು ತನ್ನಿಂದ ಸಾಧ್ಯವಾದಷ್ಟು ಈ ವಿಷಯದಲ್ಲಿ ವ್ಯಯತ್ನಿಸುವೆನೆಂಬ ಭರವಸೆಯನ್ನಾದರೂ ಪಡೆದುದಕ್ಕೆ ಉಡುಪಿಯ ನಮ್ಮ ಬಂಧುಗಳಿಗೆ ನಾವು ಧನ್ಯವಾದಗಳನ್ನರ್ಪಿಸಬೇಕಾಗಿದೆ

ಆದರೆ ಮಂತ್ರಿಗಳೇನೋ ಉಡುಪಿಗೆ ಬಂದರು. ಇತರ ಮಂತ್ರಿಗಳಂತೆಯೇ ಇವರೂ ಮಹಾ ಜನರ ಆತಿಥ್ಯ ಸ್ವೀಕರಿಸಿದರು. ತನ್ನಿಂದ ಸಾಧ್ಯವಾದವುಗಳನ್ನು ಸಾದಿಸುವೆನೆಂಬ ಭರವಸೆಯನ್ನೂ ಸಂದರ್ಭಗಳಿಗೆ ಸರಿಯಾಗಿ ಕೊಟ್ಟರು. ಮುಂದೇನು? ನಿಜವಾಗಿಯೂ ಮಲ್ಪೆ ಬಂದರು ಒಂದಿಷ್ಟಾದರೂ ಸುಧಾರಣೆಯಾಗುವ ಸಂಭವ ವಿದೆಯೇ? ಆಶ್ವಾಸನೆಗಳ ಮೂಲಕ ಇಪ್ಪತ್ತರತನಕ ನೂರಾರು ಸಲ ಉಡುಪಿಗೆ ರೇಲ್ವೆ ಬಂದಾಯಿತು ನದಿಗಳಿಗೆ ಸೇತುವೆಗಳ ಆಶ್ವಾಸನೆಗಳೂ ಮುಗಿದವು. ಆರ್ಥಿಕ ಸುಧಾರಣೆ ಇದೇ ರೀತಿ ನಡೆಯುತ್ತಾ ಬಂದಿದೆ. ಇನ್ನೇನು ನಮಗೆ ಕಡಿಮೆ ಸ್ವರಾಜ್ಯ ಬಂದೇ ಬಂದಿರುವುದು ಬಾಗಿಲಿಗೆ! ಕರ್ನಾಟಕದಲ್ಲಿ ಈ ನಮ್ಮ ಕನ್ನಡ ಜಿಲ್ಲೆಗಳ ನೆನಪಾದರೂ ಉಳ್ಳ ಮುಂದಾಳುಗಳಿರುವರೆ? ಕರ್ನಾಟಕದಲ್ಲಿರುವಮುಂದಾಳುಗಳೆಂದರೆ ಹುಬ್ಬಳ್ಳಿ ಧಾರವಾಡ, ಬಿಜಾಪುರ ಮತ್ತು ಬೆಳಗಾಂವಿನಲ್ಲಿ ಇರುವ ಕೆಲವರೆಂದು ನಮ್ಮ ಭಾವನೆ ಪ್ರತಿಯೊಂದು ಜಿಲ್ಲೆಯ ಸ್ಥಿತಿಯೂ ನಮ್ಮ ಜಿಲ್ಲೆಯಂತೆಯೇ ಇದೆ. ಅಖಿಲ ಕರ್ನಾಟಕದಲ್ಲಿ ಕರ್ನಾಟಕವು ತನ್ನದೆಂದು ಹೇಳುವ ಓರ್ವ ಮುಂದಾಳೂ ಕಾಣಬರುವಂತಿಲ್ಲ. ಇದಕ್ಕಾಗಿ ಜನರಾದರೂ ಮುಂದಕ್ಕೆ ಧುರೀಣರನ್ನು ನುರೆತು ಈ ಎರಡು ಜಿಲ್ಲೆಗಳು ಒಂದಾಗಿ ಆರ್ಥಿಕ ಸುಧಾರಣೆಗಾಗಿ ಪ್ರಚಂಡ ಚಳವಳವನ್ನು ಹೂಡಲು ಪ್ರಾರಂಭಿಸತಕ್ಕುದು ಅಗತ್ಯವಿದೆ.

ಕೆಲವು ತಿಂಗಳ ಹಿಂದೆ ಮದ್ರಾಸ್ ಮುಖ್ಯ ಮಂತ್ರಿಗಳಾದ ಮಾನ್ಯ ಸಿ. ಆರ್ ರವರು ಮಂಗಳೂರಿಗೆ ಬಂದು ಕೊಂಗ್ರೆಸನ್ನೂ, ಪೋಲಿಸ್ ಇಲಾಖೆಯನ್ನೂ ಹೊಗಳುತ್ತಾ ಕರ್ನಾಟಕ ಏಕೀಕರಣದ ಪ್ರಶ್ನೆ ಮುಂದೆಬಂದಾಗ ದಕ್ಷಿಣ ಕನ್ನಡ ಜಿಲ್ಲೆಯು ತನ್ನ ನಾಕುಮಗಳಂತಿರುವ ಶಕುಂತಲೆಯೆಂದು ಕೊಂಡಾಡಿ ಇದನ್ನು ಮದ್ರಾಸ್ ಇಲಾಖೆಯಿಂದ ವಿಂಗಡಿಸಲು ತಾನು ಸಂತೋಷಪಡಲಾರೆನೆಂದರು ಆವರು ಏತಕ್ಕಾಗಿ ಸಂತೋಷಪಟ್ಟಾರು? ನಮ್ಮ ಜಿಲ್ಲೆಯ ಜನರಿಂದ ಅವರಿಗೆ ಏನಾದರೂ ವಿರೋಧ ನಡೆದಿದೆಯೇ? ಇದಲ್ಲದೆ ಆವರು ಮುಖ್ಯಮಂತ್ರಿಗಳಾಗಿರುವ ವರೆಗಾದರೂ ಈ ಜಿಲ್ಲೆಗಾಗಿ ಅವರು ಇತರ ಜಿಲ್ಲೆಗಳ ಉತ್ಪತ್ತಿಯಿಂದ ಚಿಕ್ಕಾಸು ಖರ್ಚುಮಾಡಬೇಕಾಗಿಲ್ಲ. ಮೇಲಾಗಿ ನಮ್ಮ ಜಿಲ್ಲೆಯ ಉತ್ಪತ್ತಿಯಿಂದ ಈ ಜಿಲ್ಲೆಯ ಖರ್ಚು ಕಳೆದು ಏನಾದರೂ ಸ್ವಲ್ಪ ಅಂಶ ಉಳಿದರೆ, ಅದನ್ನವರು ತಮ್ಮ ತಮಿಳು ನಾಡಿನ ನೈಜಪ್ರೇಮದ ಪುತ್ರಿಯಂತಿರುವ ಸೇಲಂ ಮತ್ತು ಇತರ ಜಿಲ್ಲೆಗಳ ಖರ್ಚಿಗಾಗಿ ವಿನಿಯೋಗಿಸಿಕೊಳ್ಳಲು ಹಿಂಜರಿಯಲಾರರು.

## ತುರ್ಕಿಯ ಸ್ವಾತಂತ್ರ್ಯ ವೀರ

(ಒಟನೆ ಪುಟದಿಂದ)

ಮರೆಯತಕ್ಕನಸಿದ್ದಿಲ್ಲ. ಉನ್ಮಾದ ವಿಜಯ, ಸಂತಾಪ, ಇಲ್ಲವೇ ಇನ್ನಾವ ಪ್ರಸಂಗದಲ್ಲೂ ಅವನು ಕರ್ತವ್ಯದ ನೆನಪನ್ನಿಟ್ಟುಕೊಳ್ಳುತ್ತಿದ್ದನು. ಇನ್ನು ಅವನು ವ್ಯಸನಗ್ರಸ್ಥನಾಗಿರುವಾಗ ಹೇಗೆ ಕರ್ತೃತ್ವಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಿಲ್ಲವೋ ಅಂತೆಯೇ ತನ್ನ ಮರ್ಯಾದೆಯ, ವಸ್ತುಸ್ಥಿತಿಯ, ಮತ್ತು ಧ್ಯೆಯದ ಅರಿವನ್ನು ತಿಳಿದುಕೊಂಡಿದ್ದಿಲ್ಲ. ಇನ್ನು ಮಹತ್ತರ ಪ್ರಸಂಗಗಳಲ್ಲಿ ಇಂತಹದೊಂದೊಂದು ಪ್ರಸಂಗ ಒದಗಿದರೆ ಯಾರೊಡನೆಯೂ ಮಾತೆತ್ತದೆ ಸಮಾಧಿಪಡೆದ ಸನ್ಯಾಸಿಯಂತೆ ಸುಮ್ಮನೆ ಕುಳಿತು ಬಿಡುತ್ತಿದ್ದನು. ಅವನೊಬ್ಬ ವಿಲಕ್ಷಣ ವಾಗ್ಮಿ. ಅವನೊಮ್ಮೆ ತನ್ನ ಮತ, ಧೋರಣ, ತತ್ವಜ್ಞಾನಗಳನ್ನೆಲ್ಲಾ ವಿಶದವಾಗಿ ಹೇಳಲಾರಂಭಿಸಿದನೆಂದರೆ ಅದರಲ್ಲೇ ತಲ್ಲೀನನಾಗಿಬಿಡುತ್ತಿದ್ದ. ರಾತ್ರಿ ಊಟವಾದ ಬಳಿಕ ಮಾತಾಡಲು ಪ್ರಾರಂಭಿಸಿದರೆ ಬೆಳಗಾಗುವ ತನಕ ಮಾತನಾಡುತ್ತಿದ್ದ. ಏನೂ ಬೇಸರವಿದ್ದಿಲ್ಲ. ಅವನ ಹೇಳಿಕೆಯಲ್ಲಿ ಅದೊಂದು ಬಗೆಯ ದ್ವೇಷ ಹಾಗೂ ಆನೇಶವಿದ್ದೇ ಇರುತ್ತಿತ್ತು. ಅದರಲ್ಲಿ ವಿನೋದಕ್ಕಾಸ್ಪದವಿದ್ದಿಲ್ಲ. ತನ್ನ ತತ್ವಜ್ಞಾನ ವಿಷಯಕವಾಗಿ ಮಾತೆತ್ತಿದನೆಂದರೆ ಅವನು ತನ್ನನ್ನೇ ಮರೆತುಬಿಡುತ್ತಿದ್ದ. ಇವನದೇ ಒಂದು ತತ್ವಜ್ಞಾನವಿತ್ತು. ಅದು ಮಾನವೀ ಸಂಸ್ಕೃತಿಯ ಉಗಮವು ತುರ್ಕಸ್ಥಾನದಲ್ಲಿಯೇ ಉಂಟಾಯಿತು ಎಂದು. ಇಂದಿನ ಎಲ್ಲಾ ಸುಧಾರಿತ ಮಾನವಜಾತಿಯು ತುರ್ಕಸ್ಥಾನದಿಂದಲೇ ಬಂದಿದ್ದೆಂದು ಅವನು ಹೇಳುತ್ತಿದ್ದ. ತನ್ನ ಸಾಮ್ರಾಜ್ಯದ ವೈಭವವನ್ನು ಮೆರೆಸುವ ಇಂಗ್ಲೀಷರು ಪೂರ್ವದಲ್ಲಿ ತುರುಕರಾಗಿದ್ದರಂತೆ. ಕೆಂಟ್ (*Kent*) ಈ ಹೆಸರು ಅವರಿಗನ್ವಯಿಸುವುದಂತೆ. ಉದಾಹರಣಾರ್ಥ "ತಾಶಕೆಂಟ್" (*Tashkent*) ಈ ಹೆಸರಿನಲ್ಲಿ ಅದರ ಸಾಮ್ಯ ವಿದೆಯೆನ್ನುತ್ತಿದ್ದ. ಈ ರೀತಿಯ ತನ್ನ ತತ್ವ ಜ್ಞಾನದಿಂದ ಅವನು ಹೇಳಲಾರಂಭಿಸುತ್ತಿದ್ದ. ಏನಾದರಾಗಲಿ, ತನ್ನ ರಾಷ್ಟ್ರದ ಉಜ್ವಲ ಭವಿಷ್ಯ ಕಾಲದಬಗ್ಗೆ ಅವನಿಗೆ ತುಂಬಾ ಆದರವಿತ್ತು. ತನ್ನ ಜನಾಂಗದಬಗ್ಗೆ ಅವನಿಗೆ ಅವರ್ಣನೀಯ ಅಭಿಮಾನವಿದ್ದಿತು. "ನಾನು ಎಲ್ಲಾ ರಾಷ್ಟ್ರಗಳನ್ನೂ ಅವುಗಳ ಜನತೆಯನ್ನೂ ಕಂಡಿದ್ದೇನೆ. ಆದರೆ ಅವೆಲ್ಲಗಳಿಗಿಂತ ನಮ್ಮ ರಾಷ್ಟ್ರವೇ ಎಲ್ಲದರಲ್ಲಿಯೂ ಮಿಗಿಲಾಗಿದೆ" ಎಂದು ಯಾವಾಗಲೂ ಹೇಳುತ್ತಿದ್ದ. ತುರ್ಕಸ್ಥಾನದ ಉಗಮವು ಅವನ ಪ್ರಖರ ರಾಷ್ಟ್ರಿಯತ್ವದಿಂದುಂಟಾಯಿತೇ ವಿನಹ ತತ್ವಜ್ಞಾನದ ತುಲನಾತ್ಮಕ ಅಭ್ಯಾಸದಿಂದಲ್ಲ, ಸಣ್ಣವನಾಗಿದ್ದುಸೈನಿಕ ಶಿಕ್ಷಣ ಕಾಲೇಜಿನಲ್ಲಿ ಕಲಿಯುತ್ತಿರುವಾಗ್ಯೆ ಅವನು ರಾಷ್ಟ್ರ ವಿನೋಚನಾರ್ಥವಾಗಿ "ವತನ್" ಎಂಬ ಕ್ರಾಂತಿಕಾರಕ ಸಂಸ್ಥೆಯನ್ನುಂಟುಮಾಡಿದನು. ಆಗ ರುಸ್ಸೊ, ಹ್ವಾಲ್ಟರ್, ಜಾನ್‌ಸ್ಟ್ಯೂಅರ್ಟ್‌ಮಿಲ್, ಮುಂತಾದ ಉದಾರ ಮತವಾದಿ ತತ್ವಜ್ಞರ ತತ್ವಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದನು. ಆಗ ಅವನು ರಾಷ್ಟ್ರಭಕ್ತಿಯ ವಾಗ್ಮೆಯ ಹಾಗೂ ಕಾವ್ಯಗಳನ್ನು ಬರೆಯುತ್ತಿದ್ದನು. ಕಾರ್ಯರಂಗಕ್ಕಿಳಿದ ನಂತರ ಇವೆಲ್ಲ ವಿಚಾರಗಳು ಬದಲಾಗಿ ವಾಙ್ಮಯಕ್ಕೂ ಕಾವ್ಯಕ್ಕೂ ಸಂಬಂಧವೇ ಇಲ್ಲವೆಂದು ಹೇಳಿ ಆ ಹವ್ಯಾಸವನ್ನು ಬಿಟ್ಟುಬಿಟ್ಟನು ಅದರೂ ಮೇಲಿನ ಗ್ರಂಥಕರ್ತರ ಗ್ರಂಥಗಳ ಅಧ್ಯಾಯನದಿಂದ ಬಹುಜನ ಸಮಾಜದ ಕರ್ತೃತ್ವಶಕ್ತಿಯ ಬದಲು ಅದೊಂದು ಪ್ರಕಾರದ, ವಿಶ್ವಾಸವು ಅವನ ಮನಸ್ಸಿನಲ್ಲಿ ಉತ್ಪನ್ನವಾಗಿತ್ತು. ಜನತೆಯಲ್ಲಿ, ಅದೊಂದು ಬಗೆಯ ಅತುಲನೀಯ ಪ್ರೇಮವು ಅವನಲ್ಲಿತ್ತು. ತುರ್ಕಸ್ಥಾನದ ರಾಜ್ಯ ವ್ಯವಸ್ಥೆಯ ಕೊನೆಗೆ, ಜನರ ಹಿತಾಹಿತಗಳನ್ನು ಅವರವರೇ ನೋಡಿಕೊಳ್ಳಬೇಕೆಂಬ ವಿಚಾರದಲ್ಲಿದ್ದನು. ಅಂದರೆ ಅವನು ಲೋಕಸತ್ತಾತ್ಮವಾದಿಯಾಗಿದ್ದನೆ? ಅವನ ಕರ್ತವ್ಯವನ್ನು ಕಂಡು ಹೀಗೆಹೇಳಲು ಬರುವುದಿಲ್ಲ. ಮುಸ್ತಾಫಾ ಕೆಮಾಲನ ಮನೋವೃತ್ತಿಯು ಹುಕುಂಶಾಯಿಯಾಗಿತ್ತು. ತನ್ನ ಜಾತಿಗೂ ಮತಕ್ಕೂ ವಿರೋಧದ ಗಾಳಿಯೂ ನೋಂಕಬಾರದೆಂದು ಅವನ ಮತ. ಖದಾಚಿತ್, ಅಂತಹ ಪ್ರಸಂಗಗಳು ಸಂಭವಿಸಿದರೆ ಹಿಟ್ಲರ್ ಮತ್ತು ಸ್ಟಾಲಿನ್ ಗಿಂತಲೂ ಕ್ರೂರನಾಗುತ್ತಿದ್ದನು. ಅವನ ಕಾರ್ಯಪದ್ಧತಿಗಳಲ್ಲಿ ಭಾವನೆಗಳಿಗೆ ಅವಸರವಿದ್ದಿಲ್ಲ. ಅವನು ತನ್ನ ತತ್ವಗಳನ್ನು ತಿರಸ್ಕಾರ ದೃಷ್ಟಿಯಿಂದ ಇದುವರೆಗೂ ನೋಡಿದ್ದಿಲ್ಲ ಪರಕೀಯರ ಆಕ್ರಮಣ ಹಾಗೂ ಸುಲ್ತಾನ ಶಾಹಿಯ ಬಲತ್ಕಾರ ಇವುಗಳ ಜಾಲದಿಂದ ತುರ್ಕಸ್ಥಾನವನ್ನು ತಪ್ಪಿಸಿ, ಅದನ್ನು ಆಧುನಿಕ ರಾಷ್ಟ್ರಗಳ ಪಂಕ್ತಿಯಲ್ಲಿ ತಂದು ಕುಳ್ಳಿರಿಸಬೇಕೆಂಬುದೇ ಅವನ ಧ್ಯೇಯವಾಗಿತ್ತು. ಅದನ್ನವನು ಎಂದಿಗೂ ಮರೆತಿದ್ದಿಲ್ಲ ಅವನು ಆದುನಿಕ ಮತದ ನಾಸ್ತಿಕ ಮನುಷ್ಯನಾಗಿದ್ದನು. ಕೆಲವು ವಿಷಯಗಳಲ್ಲಿ ಅವನು ದೊಡ್ಡ ಭಾವಿಕನಾಗಿದ್ದನು. ನೀವಾಗಿ ಹೇಳುವುದಾದರೆ ಈ ಅಸಾಮಾನ್ಯ ಮನುಷ್ಯನು ಕೆಲವು ವಿಷಯಗಳಲ್ಲಿ ಕೇವಲ ಸಾಮಾನ್ಯ ಮನುಷ್ಯನಾಗಿದ್ದನು- ಅವನಲ್ಲಿದ್ದ ವಿಶಿಷ್ಟ ಗುಣಗಳಿಂದಾಗಿ ಇಡೀ ತುರ್ಕಸ್ಥಾನವೇ ಅವನ ಆಜ್ಞಾಧೀನವಾಗಿತ್ತು. ಅವನಿಂದಲೇ ತುರ್ಕಸ್ಥಾನವು ಉನ್ನತಾವಸ್ಥೆಗೆ ಬಂತು. ಕಳೆದುಕೊಂಡ ತನ್ನ ಸ್ವಾತಂತ್ರ್ಯವನ್ನು ತಿರುಗಿ ಪಡೆಯಿತು. ಕೆಮಾಲನ ಕೀರ್ತಿಯು ತುರ್ಕಿಯ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವುದು.

ಗ್ರೇಹೂಲ್ಫ್.

# ತುರ್ಕಿಯ ಸ್ವಾತಂತ್ರ್ಯ ವೀರ

## ಕೆಮಾಲ್ ಅತಾತುರ್ಕನ ಅಂತರಂಗ ಬಹಿರಂಗ

## ಜೀವನ

ತುರ್ಕಸ್ಥಾನಕ್ಕೆ ನವಜೀವನವನ್ನು ಕೊಟ್ಟ ಮಾಲ್ ಅತಾತುರ್ಕನು ಸ್ವಾತಂತ್ರ್ಯವೀರನಾಗಿದ್ದನು ನಿಷ್ಪಕ್ಷವಾತಿ ಯೋಧನಾಗಿದ್ದನು. ಹಸಿವೃತ್ತಿಯವನಾಗಿದ್ದನು. ಅವನಲ್ಲಿರುವ ೋಷ ಗುಣಗಳಿಂದ ಇಂದವನು ಜನ ಪ್ರೀತಿ ನಾಗಿ ತನ್ನ ಕೀರ್ತಿಯನ್ನು ಅಮರವನ್ನಾಗಿ ಡಿ ಕೊಂಡನು. ಅವನ ಗುಣವರ್ಣನೆಗಳನ್ನು ನೇ ದಿನಗಳ ಹಿಂದೆ ಹಿಂದುಸ್ಥಾನದ ಪ್ರತಿ ಂದು ಪತ್ರಿಕೆಯೂ, ಪ್ರತಿಯೊಬ್ಬ ಧುರೀಣನೂ ನಸೋಕ್ತ ವರ್ಣಿಸಿರುವರು. ಆದರೆ ಇವರೆಲ್ಲರ ರ್ಣನೆಗಳಲ್ಲಿ ಕೆಮಾಲನು ವೀರ ಪುರುಷನಾಗಿದ್ದ ಧು ಮಾತ್ರ ಹೇಳಲಾಗಿಯದೆಯಲ್ಲದೇ ಅವ ಬ್ಬ ಸಾಮಾನ್ಯ ಪುರುಷನೂ ಆಗಿರುವ ದು ಯಾರೂ ಒತ್ತಿ ಹೇಳಲಿಲ್ಲ. ತನ್ನಂಗ ನ ವಿಶಿಷ್ಟ ಗುಣಗಳಿಂದವನು ಜನಪ್ರೀತಿಯ ರವನ್ನೇರಿ ಕುಳಿತನು. ಆದರೆ ಶಾಶ್ವತವಾಗಿ ಯೇ ಕುಳಿತುಕೊಳ್ಳುವ ಮಹತ್ವಾಕಾಂಕ್ಷಾ ನಾಗಿ ಇತರ ಹಲ ಕೆಲವು ಪ್ರಭೃತಿಗಳಂತೆ ಸ್ವೈಕಾರ್ಯಗಳನ್ನು ಮಾಡಿ ಜನರೆದುರು ಬಗನಾಗಿ ಗೋಮುಖ ವ್ಯಾಘ್ರನಂತಿರಲು ನು ಇಚ್ಛಿಸಲಿಲ್ಲ. ನಿಷ್ಪಕ್ಷವಾತಿ ಸ್ವಭಾವ ನದು. ಹಿಂದೊಂದು ಮುಂದೊಂದು ಮಾತಿನವ , ನಿಂದ್ಯಕಾರ್ಯವನ್ನು ಮಾಡುವುದಾದರೂ ೀಷ್ಯವಾಗಿ ಅವನೆಂದಿಗೂ ಮಾಡುತ್ತಿದ್ದಿಲ್ಲ. ನೆಷ್ಟು ಸುಶೀಲ ಸದ್ಗುಣಿಯೋ ಅಷ್ಟೇ ವ್ಯಸನ ಳೂ ಆಗಿದ್ದನು. ಆದರೆ ಅವನಲ್ಲಿದ್ದ ವ್ಯಸನ ಂದೆ ಇತರರ್ಯಾರೂ ಬಾಧೆಗೀಡಾಗುವಂತಿದ್ದಿಲ್ಲ ನ್ನು ತುರ್ಕಪ್ರಜೆಗಳು ಚನ್ನಾಗಿ ಮನನ ಡಿಕೊಂಡಿರುವರು. ಆ ದು ದರಿಂದಲೇ ತುರ್ಕನ ಕೀರ್ತಿಯು ದಿಗಂತವಿಶ್ರುತನಾಯಿ ು ಒಂದೊಮ್ಮೆ ಹೇಳಿದರೂ ಹೇಳಬಹುದು.

**ಮಾತೆಯ ನಿರಾಕ್ಷೇಪ ಪ್ರೇಮ.**

ಎಳು ಸಣ್ಣವಯಸಿನಲ್ಲಿಯೇ ಅವನು ಅಂಗ ಳಿಗಿನ ಶಕ್ತಿಪ್ರಭೆಯನ್ನು ತಂದೆ ತಾಯಿಗಳ ತೋರಿಸಲು ಪ್ರಾರಂಭಿಸಿದ್ದನು. ಈ ಳಕು ಸ್ವಭಾವದ ಅಶಕ್ತ ಪ್ರಕೃತಿಯನ್ನಾದ ನೇ ಒಬ್ಬ ಮಗನ ಮೇಲೆ ತಾಯಿಗೆ ಅವರ್ಣ ು ಪ್ರೇಮವಿತ್ತು. ಆದರೂ ಅದರಲ್ಲಿ ವಿಶೇಷ ೂ ಇದ್ದಿಲ್ಲ. ಆದರೆ ಎಲ್ಲಾದರೂ ತಾಯಿಯು ಸಿಟ್ಟಿಗೆದ್ದು ಬಡೆದರೆ ಮಾತ್ರ ಅತಾತುರ್ಕನು ಉರಿದು ಬೀಳುತಿದ್ದನು. ತಾಯಿಯು ಏನೂ ಕಮ್ಮಿಯವಳಾಗಿದ್ದಿಲ್ಲ. ಕರ್ತವ್ಯನಿಷ್ಠೆ ಹಾಗೂ ಕಠೋರ ನಿಶ್ಚಯ ಸ್ವಭಾವದವಳಾಗಿದ್ದಳವಳು. ಆದರೂ ಅವಳ ಈ ಸ್ವಭಾವವು ಮಗನಮೇಲೆಯೂ ಯಾವೊಂದೂ ತರದ ಬಾಧೆಗೀಡುಮಾಡಿದ್ದಿಲ್ಲ. ತಾಯಿಯ ಈ ನಿಷ್ಕಲಂಕ ಪ್ರೇಮವೆ ಅತಾತುರ್ಕ

ಕೆಮಾಲ್ ಅತಾತುರ್ಕನು.

ನಿಗೆ ಮುಂಬರಿಯಲು ಕೈಗೋಲಾಯಿತು ಕೆಮಾಲನ ಮೇಲೆ ಸ್ನೇಮವನ್ನಿಡುವ ಹಲವು ಸ್ತ್ರೀಯರನ್ನು ಅವಳು ಮನಸೋಕ್ತ ಜರೆದು ಬಿಟ್ಟಿದ್ದಳೊಮ್ಮೆ. ಕೆಮಾಲನಿಗೂ ಅವಳ ಪ್ರೇಮದ ಆತ್ಯಂತಿಕತೆಯ ಅರಿವಿತ್ತು. ಯಾರ ಟೀಕೆ ಟಪ್ಪಣಿಗಳನ್ನೂ ಸಹನಮಾಡಿಕೊಳ್ಳುವಂತನು ಕೆಮಾಲನಾಗಿದ್ದಿಲ್ಲ. ಕೆಮಾಲನು ಶಾಲೆಗೆ ಹೋಗಲು ಪ್ರಾರಂಭ ಮಾಡಿದೊಡನೆ ಅವನಲ್ಲಿನ ಬೇರೆ ಬೇರೆ ಆಶೆಗಳು ದೃಷ್ಟಿಗೆ ಬೀಳತೊಡಗಿದುವು. ಶಾಲಾ ಮಾಸ್ತರರೊಬ್ಬರು ಒಂದಿನ ಕೆಮಾಲನಿಗೆ ಚನ್ನಾಗಿ ಗದರಿಸಿ ಬಿಟ್ಟಿದ್ದರಿಂದ ತಕ್ಷಣ ಶಾಲೆಗೆ ಶರಣಚೀಟಿ ಬಿಟ್ಟು ತಂದೆ ತಾಯಿಗಳ ಮಾತನ್ನೂ ಲಕ್ಷಿಸದೆ ಸೈನ್ಯಖಾತೆಗೆ ಸೇರಿ ಬಿಟ್ಟಿದ್ದನತ. ಯಾವಾಗಲೂ ಮತ್ಸರಗ್ರಸ್ತ ಸ್ವಭಾವಿ. ಸಿಕ್ಕವರೊಡನೆ ಜಗಳವಾಡುವುದು. ಶಾಲೆಯಲ್ಲಿರುವಾಗಲೂ ಹಾಗೆ. ತನಗಿಂತ ಮೇಲೆ ಯಾರೂ ಹೋಗಲಿಕ್ಕೆ ಕೂಡದು, ಅದ್ದರಿಂದಲೇ ಹುಡುಗರೆಲ್ಲರೂ ಹೆಚ್ಚೀಕೆ ಉವಾಧ್ಯಾಯರೂ ಸಹ ಅವನನ್ನು ದ್ವೇಷಿಸುತಿದ್ದಿಲ್ಲ ಗಣಿತ ಮತ್ತು ಸೈನ್ಯ ವಿದ್ಯೆ ಇವುಗಳಲ್ಲಿ ಅವನ ಗತಿಯು ಅತೀ ವಿಲಕ್ಷಣವಾಗಿತ್ತಾದ್ದರಿಂದಲೇ, ಮಾಸ್ತರರು ಅವನನ್ನ ಶಾಲೆಯಲ್ಲಿರಗೊಟ್ಟದ್ದು ತನ್ನ ಹೆಸರಿನ ಒಬ್ಬ ಮಾಸ್ತರರನ್ನು ಒಮ್ಮೆ ಅವನು ಫಜೀತಿ ಮಾಡಿಬಿಟ್ಟದ್ದರಿಂದ ಮಾಸ್ತರರು ಅಂದಿನಿಂದ ಅವನಿಗೆ 'ಕೆಮಾಲ್' ಎಂಬ ಹೆಸರನ್ನಿಟ್ಟರು. ಅಂದಿನಿಂದ ಅವನು ಮುಸ್ತಾಫಾ ಕೆಮಾಲ್ ಎಂಬೀ ಹೆಸರಿನಿಂದ ಕರೆಯಲ್ಪಟ್ಟನು. ತನ್ನ ೧೪ನೇ ವರ್ಷದಲ್ಲೇ ಅವನು ಮದಿರಾನಕ್ಷ್ಯನಾದನು ಮತ್ತು ಮದಿರಾಕ್ಷಿಯರ ಕಡೆಗೆ ದೃಷ್ಟಿ ಬೀರಲಾರಂಭಿಸಿದನು ನೆರಮನೆಯ ಓರ್ವ ಯುವತಿಯೊಡನೆ ಅವನ ಗುಪ್ತಪ್ರೇಮ ಸಂಧಾನವು ನಡೆಯಲಾರಂಭಿಸಿತು. ಇವುಗಳು ಹೇಗಿದ್ದರೂ ತನ್ನಲ್ಲಿನ ಅಸಾಧ್ಯ ಬುದ್ಧಿಮತ್ತೆಯಿಂದ ದಿನೇ ದಿನೇ ಅವನು ವೃದ್ಧಿಂಗತನಾಗುತ್ತಾ ಹೋದನು. ಕೊನ್ಸ್ಟಾಂಟಿನೋವಲ್ ಇಲ್ಲಿನ ಸೈನ್ಯ ಕೋಲೇಜಿನಲ್ಲಿ ಇರುವಾಗ ಅವನು ತನ್ನ ಸರ್ವಮರ್ಯಾದೆಯನ್ನು ಕಳೆದುಕೊಂಡು ಬಿಟ್ಟನು. ಹೆಂಡದಂಗಡಿಯಲ್ಲಿ ಕುಳಿತು ಯಥೇಚ್ಛ ಮದಿರಾಪಾನ ಮಾಡುವುದು, ನಂತರ ಸಿಕ್ಕಿದ ಸ್ತ್ರೀಯನ್ನು ಹಿಡಿದುಕೊಂಡು ರಮಿಸುವುದು ಇವು ಅವನ ನಿತ್ಯಕರ್ಮಗಳಾಗಿದ್ದುವು. ಕೊನ್ಸ್ಟಾಂಟಿನೋವಲ್‌ನಲ್ಲಿ ಗ್ರೀಕ್ ಮತ್ತು ಅರ್ಮೇನಿಯನ್ನ ವೇಶ್ಯೆಯರು ತುಂಬಾ ಇದ್ದರು. ಜಾತಿವಂತ ವೇಶ್ಯೆಯರಂತೆಯೆ ಅವರು ರೋಗಗ್ರಸ್ಥರೂ ಅಶಕ್ತರೂ ಆಗಿದ್ದರು. ಆದರೆ ಅವನಿಗೆ ಇದರ ವಿಧಿನಿಷೇಧವಿದ್ದಿಲ್ಲ. ಸೈನ್ಯಶಿಕ್ಷಣದಿಂದ ಅವನ ಶರೀರವು ದೃಢವಾಗಿತ್ತು. ವರಂತು, ಪ್ರೇಮವೆಂಬುದರ ಅರಿವೆ ಅವನಿಗಿದ್ದಿಲ್ಲ. ಪ್ರೇಮವೆಂದರೇನೆಂಬುದನ್ನು ಆ ಸಮಯದಲ್ಲಿ ಅವನು ಮರತೇ ಬಿಟ್ಟಿದ್ದ. ಸ್ತ್ರೀಯರೆಂದರೆ ಭೋಗ್ಯ ವಸ್ತುವೆಂದು ಅವನು ಭಾವಿಸುತಿದ್ದ ಅವನ ಸ್ವಭಾವವು ಚಂಚಲವಾಗಿತ್ತಲ್ಲದೆ ಆನಂದೀಯವಾಗಿದ್ದಿಲ್ಲ ಪ್ರಣಯಾರಾಧನೆಯ ಕೋಮಲ ಮತ್ತು ಸ್ನಿಗ್ಧಶಸ್ತ್ರವು ಅವನಿಗೆ ಅವಗತವಾಗಿದ್ದಿಲ್ಲ. ಈ ದೆಸೆಯಿಂದ ಉತ್ಕೃಷ್ಟವರ್ಗದ

ಸ್ತ್ರೀಯರೊಡನೆ ವಿಶೇಷ ಬಳಕೆಯು ಅವನಿಗಿ ದ್ದಿಲ್ಲ. ಮಹಾಯುದ್ಧದಲ್ಲಿ ತುರ್ಕಸ್ಥಾನವು ಭಾಗ ವಹಿಸಿತು. ಆಗ ಅವನನ್ನು ಸೋಫಿಯಾ ಎಂ ಬಲ್ಲಿಗೆ ಕಳುಹಿಸಲಾಯಿತು. ಅಲ್ಲೂ ಅವನು ಕೇಳುತರಗತಿಯ ಸ್ತ್ರೀಯೊಡನೆಯೆ ಬೆರೆಯ ಹತ್ತಿದನು. ಉತ್ಕೃಷ್ಟವರ್ಗದ ಸ್ತ್ರೀಯರ ನೃತ್ಯಗಾನ ಮಂತಾದುವುಗಳು ಅವನಿಗೆ ಒಗ್ಗಲೇ ಇಲ್ಲ. ಅವನೂ ನೃತ್ಯವನ್ನು ಕಲಿತಿದ್ದನು, ಅದೂ ಅಷ್ಟಷ್ಟೆ. ಅವನಿಡುವ ಒರೆಕೋರೆ ಪದಕ್ಷೇಪವನ್ನು ಕಂಡು ಇತರ ಸ್ತ್ರೀಯರೆಲ್ಲರೂ ತಮಾಷೆ ಮಾಡಹತ್ತುವುದರಿಂದ ಅವನು ಅಂಥಾ ಸ್ತ್ರೀಯರ ಸಂಸರ್ಗಕ್ಕೆ ಹೋಗುವುದೇ ಇದ್ದಿಲ್ಲ. ಇದರಿಂದ ಅವನಲ್ಲಿ ರೋಗರುಜನೆಗಳ ಉದ್ಭವವಾಯಿತು. ಈ ದೆಸೆಯಿಂದ ಅವನಿಗೆ ವೇಶ್ಯೆಯರ ಮೇಲೂ ತಿರಸ್ಕಾರ ಹುಟ್ಟಿತು. ಅವನ ಮನಸ್ಸು ಮತ್ತಷ್ಟು ಚಿಂತಾಕ್ರಾಂತವಾಯಿತು. ಕೆಲಸವಿಲ್ಲದ ಸಮಯದಲ್ಲಿ ಅವನ ಮನಸ್ಸು ಉದ್ವಿಗ್ನವಾಗ ಹತ್ತಿ, ಎತ್ತಾದರತ್ತ ತಿರುಗಾಡಲು ಹೊರಟು ಹೋಗುತಿದ್ದ. ಅವನಲ್ಲಿನ ತಾರುಣ್ಯವೂ ಸರ್ವ ಉತ್ಸಾಹಗಳೂ ನಷ್ಟವಾಗುತ್ತ ಬಂದುವು. ದಿವಸದಲ್ಲಿ ವಿಚಾರಮಗ್ನ, ರಾತ್ರಿಯಲ್ಲಿ ವ್ಯಸನಾಕ್ರಾಂತ, ಇದೇ ರೀತಿಯಲ್ಲಿ ಅವನ ಆಯುಷ್ಯವು ಗತಿಸುತಲಿತ್ತು. ಮುದ್ರೋಸದಲ್ಲಿನ ಸುಲ್ತಾನನು ತನ್ನ ಆಪ್ತರಾಷ್ಟ್ರಗಳೊಡನೆ ತಕ್ರಾರು ಮಾಡಿದ ನಂತರದ ಪ್ರಸಂಗ. ಸುಲ್ತಾನನ ವಿರುದ್ಧವಾಗಿ ಬಂಡಾಯವೆಬ್ಬಿಸಲು ಅವನು ಸಿದ್ಧತೆ ಮಾಡುತಿದ್ದನು. ಇಷ್ಟರಲ್ಲಿ ಅವನ ಆಶಾಪಥದ ಮೇಲೆ ನಿರಾಶೆಯ ಕಾರ್ಗತ್ತಲೆಯು ಕವಿಯಿತು. ಅವನ ವ್ಯಸನಗಳು ಹೆಚ್ಚಾದುವು. ಸುಧಾಪಾನವು ವಿಪರೀತವಾಯಿತು. ಹಳ್ಳಿಯಲ್ಲಿ ಒಬ್ಬಂಟಿಗನಾಗಿ ಅವನು ಇರಹತ್ತಿದ. ಒರ್ವ ಸ್ತ್ರೀಯಳಾದರೂ ಅವನನ್ನು ಹುಚ್ಚನನ್ನಾಗಿ ಮಾಡಿದ್ದಿಲ್ಲ. ಸ್ವಲ್ಪ ಸಮಯದ ನಂತರ ಫಿಕ್ರೆಯೆ ಹಾನೂಮ್ ಎಂಬ ಅವನ ದೂರದ ಸಮ್ಮಂಧಿಕಳೋರ್ವಳು ಅಲ್ಲಿಗೆ ಬಂದಳು. ಕೆಮಾಲನಿಗಾಗಿ ಅವಳು ತನ್ನ ಸರ್ವಸ್ವವನ್ನೂ ಅರ್ಪಣಮಾಡಿದವಳು. ಅವನ ಚರಣದ ದಾಸಿಯಾಗುವುದಕ್ಕಿಂತ ಹೆಚ್ಚಿನ ಆಸೆ ಅವಳಿಗಿದ್ದಿಲ್ಲ. ಅವಳು ನಿಯಮಾನುಸಾರ ಅವನ ಶುಶ್ರೂಷೆಯನ್ನು ಮಾಡಿದಳು. ಪ್ರಥಮವಾಗಿ ಕೆಮಾಲನ ಕೋಣೆಯಲ್ಲಿ ವ್ಯವಸ್ಥೆಯು ಕಾಣಬಂತು. ಅವಳ ಆತ್ಮಾರ್ಪಣವು ಅಪೂರ್ವವಾಗಿತ್ತು. ಅವನ ಆಯುಷ್ಯದಲ್ಲಿ ಅದೇ ಪ್ರಥಮವಾಗಿ ಅವನ ಹೃದಯದಲ್ಲಿ ಪ್ರೇಮವು ಉದ್ಭವಿಸಿತು. ಆದರೂ ಅದು ಹೆಚ್ಚುಕಾಲ ನಿಲ್ಲಲಿಲ್ಲ. ಅವನ ದುಡುಕುವ್ಯಕ್ತಿತ್ವಕ್ಕೆ ಸಾಕಾಗುವಷ್ಟು ವ್ಯಕ್ತಿತ್ವವು ಅವಳಲ್ಲಿದ್ದಿಲ್ಲ. ಅವಳಿಂದ ಅವನಿಗೆ ಹೆಚ್ಚು ಕಷ್ಟವಾಗಿತ್ತು. ಆದರೂ ಅವಳ ಭಕ್ತಿಯು ಮಾತ್ರ ದಿನೇ ದಿನೇ ಅಧಿಕವಾಗುತ್ತಾ ಹೋಗುತಿತ್ತು. ಗ್ರಿಕ್ಕರ ಮೇಲೆ ಕೊನೆಯ ಹಲ್ಲೆಯನ್ನು ನಡೆಸಲನುವಾದ ಕೆಮಾಲನು ಒಮ್ಮೆ ಅವನ ಭೇಟಿಗಾಗಿ ಬಂದ ಒಬ್ಬ ತರುಣಿಯನ್ನು ಕಂಡನು. ಅವಳ ಕುಲಗೋತ್ರದವರಿವು ಇವನಿಗಿದಿಲ್ಲ. ಅವಳೂ ಹೇಳಲಿಲ್ಲ. ಆದರೂ, ಅವನವಳನ್ನು ತನ್ನ ಕೋಣೆಗೆ ಕರೆದನು. ಆವಳು ಕೋಣೆಗೆ ಬರುತ್ತಲೆ ವಿದ್ಯುದ್ದೀಪವನ ಪ್ರಕಾಶ ಹೊಂದಿತು. ಆ ವಿದ್ಯುತ್‌ಪ್ರಕಾಶದಲ್ಲಿ ಕೆಮಾಲನಿಗೆ ಅವಳು ಸುಂದರಳಾಗಿ ಕಂಡಳು. ಅದರೂ ಅವಳು ವೇಶ್ಯೆಯಂತಿರಲಿಲ್ಲವಾದ್ದರಿಂದ ತನ್ನ ಮನೋಕಾಮನೆಯನ್ನು ಅವಳಲ್ಲಿ ಪ್ರಕಟಗೊಳಿಸದೆ, ಕ್ಷಣಕಾಲದ ಪರಿಯಂತ ಅವಳನ್ನು ದುರ್ಲಕ್ಷ್ಯದಿಂದ ಕಂಡನು. ಸೈನ್ಯಖಾತೆಯ ಅಧಿಕಾರಿಗಳು ಅತ್ತಿತ್ತ ಹೋಗುತ್ತ ಬರುತ್ತಲಿದ್ದರು. ಅವರೊಡನೆ ವಿಚಾರ ವಿನಿಮಯ ಮಾಡುತ್ತಲಿದ್ದರು. ಅವೆಲ್ಲ ಮುಗಿದ ನಂತರ ಅವಳೊಡನೆ ಮಾತಾಡಲಾರಂಭಿಸಿದನು. ಅವಳ ಹೆಸರು ಲತೀಫಾ ಎಂದು. ಸ್ಮರ್ನಾ ನಗರದ ಪ್ರಸಿದ್ಧ ವ್ಯಾಪಾರಿಯೋರ್ವನ ಮಗಳವಳು. ಪೇರಿಸಿನಿಂದ ಉಚ್ಚ ಶಿಕ್ಷಣವನ್ನು ಪಡೆದು ಬಂದಿದ್ದಳಷ್ಟೆ. ಹತ್ತಿರದ ಬೊನೆವೊ ಎಂಬಲ್ಲಿ ಅವಳದೊಂದು ಬಂಗಲೆಯಿತ್ತು. ಆ ಬಂಗಲೆಯಲ್ಲಿ ಕೆಮಾಲನು ನಿಲ್ಲಬೇಕೆಂಬ ತನ್ನಿಚ್ಛೆಯನ್ನು ಪ್ರಕಟಗೊಳಿಸುವುದಕ್ಕಾಗಿ ಅವಳು ಬಂದಿದ್ದಳು. ಅವಳು ಯಾವಳಾದರೂ ವೈರಿಗಳ ಕಡೆಯ ಗುಪ್ತಚಾರಳಾಗಿರಬಹುದೊ ಅಥವಾ ತನ್ನ ಮೇಲೆ ವೈರಿಗಳ ಕಡೆಯಿಂದ ದ್ವೇಷಸಾಧನೆಗಾಗಿ ಬಂದವಳೊ ಎಂಬುದನ್ನು ಸಹಾ ವಿಚಾರಿಸದೆ, ಏನೂ ಹೆದರಿಕೆಯಿಲ್ಲದೆ ಕೊಡಲೆ ಅವನು ಅವಳೊಡನೆ ಅವಳ ಬಂಗಲೆಯಲ್ಲಿ ಹೋಗಿ ಇರಹತ್ತಿದನು. ಅವಳೊಬ್ಬಳು ನವಯುವತಿ. ಅವಳ ಸುಗುಣತ್ವಕ್ಕೂ ಅಪೂರ್ವ ಸೌಂದರ್ಯಕ್ಕೂ ಕೆಮಾಲನ ಮನಸ್ಸು ಸೋತಿತು. ಅವನು ಅವಳ ಪ್ರೇಮಕ್ಕಾಗಿ ಹಾತೊರೆಯುತಿದ್ದನು. ಲತೀಫಳು ಅವನ ಮನೋಭಾವನೆಯನ್ನರಿತು ಆದರಂತೆ ವರ್ತಿಸಹತ್ತಿದಳು. ಪ್ರೀತಿ, ಸ್ವರ್ಗೀಯ ಪ್ರೀತಿ ಮುಂತಾದುವುಗಳ ಅರಿವು ಉದ್ದಟಸ್ವಭಾವದ ಅವನಿಗೆಲ್ಲಿ? ಅವುಗಳ ಅಂಧಕಲ್ಪನೆಯೊಂದು ಅವನಿಗೆ ಪಾಶ್ಚಾತ್ಯ ವಾಂಗ್ಮಯದಿಂದುಂಟಾಗಿತ್ತು. ಈಗ ಮಾತ್ರ ಅವನಿಗೆ ನೈಜಪ್ರೀತಿಯ ಸಾಕ್ಷಾತ್ಕಾರವಾಯಿತು. ತನ್ನ ವ್ಯಕ್ತಿತ್ವದೊಡನೆ ಮಿಲನಹೊಂದುವ ತರುಣಿಯು ಅವನ ಸಾನ್ನಿಧ್ಯದಲ್ಲಿದ್ದಳು. ಆದರೆ ಅವನ ಪ್ರೀತಿಯ ನುಡಿಗಳಿಗೆ ಪ್ರತಿ ಪ್ರೀತಿ ನುಡಿಯನ್ನಿತ್ತು, ಆ ಮೋಹಕ ಲಲನೆಯು ಅವನಿಗೆ ತನ್ನ ಸರ್ವಸ್ವವನ್ನು ಅರ್ಪಣೆ ಮಾಡಲು ಸಿದ್ಧಳಾಗಿದ್ದಿಲ್ಲ. "ಮದುವೆ ಮಾಡಿ ಕೊಳ್ಳಿ. ನಂತರ ನಾನು ನಿಮ್ಮವಳೇ ಆಗಿರುವೆನು" ಎಂದು ಪ್ರೇಮವು ಕಾಮಕ್ಕೆ ತಿರುಗಿದಾಗ ಲತೀಫಾಳು ಮೇಲಿನ ಮಾತಿನಿಂದ ಕೆಮಾಲನನ್ನು ದೂರ ಪಡಿಸುತಿದ್ದಳು. ಕೊನೆಗೆ ಅವನು ಒಂದು ನಿರ್ಧಾರವನ್ನು ಮಾಡಿದ. ಇಂದು ಲತೀಫಾಳು ತನ್ನವಳೇ ಆಗಬೇಕೆಂಬ ಹಟತೊಟ್ಟ. ರಾತ್ರಿ ಆಯಿತು. ಶಯನಾಗ್ರಹದಲ್ಲಿ ಶಯ್ಯನ ಸಾಮಗ್ರಿಗಳು ಸುಸಜ್ಜಿತವಾಗಿದ್ದವು. ಕೆಮಾಲನ ಹೃದಯದಲ್ಲಿ ಪ್ರೀತಿಯ ಜ್ಯೋತಿಯು ಪ್ರಜ್ವಲಿಸಹತ್ತಿ ಅವನು ಆವಳನ್ನು ತನ್ನ ಬಾಹುಗಳಿಂದ ಬಂಧಿಸಿದನು. ಅಷ್ಟರಲ್ಲಿ ಅವಳು ದೂರ ಸರಿದಳು. ಮತ್ತು ಹೀಗೆಂದಳು. "ಇನ್ನೂ ನಿಮಗೆ ತಿಳಿಯುವುದಿಲ್ಲವೇಕ? ನಾನು ನಿಮ್ಮನ್ನು ಪ್ರೀತಿಸುತ್ತಿಲ್ಲ. ಅದು ಕೇವಲ ಲಗ್ನಬಂಧನದ ಸುಖಕ್ಕಾಗಿ ಅಲ್ಲದೆ ವೇಶ್ಯೆಯ ಕ್ಷಣಿಕಸುಖಕ್ಕಾಗಿ ಅಲ್ಲ. ಮದುವೆ ಮಾಡಿಕೊಳ್ಳಿ, ಅನಂತರ ನಾನು ನಿಮ್ಮವಳೇ ಆಗಿದ್ದೇನೆ" ಎಂದಳು. ಆಗ ಕೆಮಾಲನು, "ಏನು? ಮದುವೆ! ಅದೊಬ್ಬ ಗಡ್ಡದೀಕ್ಷಿತ ಖಾಜಿಯು ಉಚ್ಚರಿಸಿದ ಆ ನಾಲ್ಕು ಮಂತ್ರದಲ್ಲಿ ಇರುವುದಾದರೂ ಏನು? ತುರ್ಕ ಸ್ಥಾನವು ಸ್ವತಂತ್ರವಾಗದ ವಿನಹ ನಾನು ಮದುವೆ ಮಾಡಿಕೊಳ್ಳುವುದಿಲ್ಲವೆಂದು ಶಪಥ ಮಾಡಿದ್ದೇನೆ" ಎಂದನು. ಇದಕ್ಕೆ ಪ್ರತ್ಯುತ್ತರವಾಗಿ ಲತೀಫಾಳು "ನಾನೂ ಹಾಗೆಯೆ ಶಪಥ ಮಾಡಿದ್ದೇನೆ. ಎಂದಿನ ವರೆಗೆ ನಾನು ಮದುವೆ ಮಾಡಿಕೊಳ್ಳುವುದಿಲ್ಲವೋ ಅಂದಿನ ವರೆಗೆ ನಾನು ಪುರುಷರ ಸ್ವಾಧೀನಳಾಗಲಿಕ್ಕಿಲ್ಲ" ಹೀಗೆಂದು ಕೆಮಾಲನ ಬಾಯಿ ಮುಚ್ಚಿಸಿ ಬಿಟ್ಟಳು.

ನಿಶ್ಚಲ ಮುಖಭಾವದಿಂದ ಕ್ಷಣ ಹೊತ್ತು ಅವರೀರ್ವರೂ ಪರಸ್ಪರ ನೋಡುತ್ತಾ ನಿಂತಿದ್ದರು. ಈ ನಿರಾಕರಣವು ಅವನ ಜೀವಕ್ಕೆ ಬಂದಿತ್ತು. ಬೇಸರದಿಂದವನು ಕೂಡಲೆ ಬಂಗಲೆಯಿಂದ ಬಿಟ್ಟು ಸೈನ್ಯಖಾತೆಗೆ ಹೊರಟೇ ಬಿಟ್ಟ. ಕೆಮಾಲನ ಜೀವನದಲ್ಲಿನ ರೋಮಾಂಚಕಾರಿ ಚಮತ್ಕಾರವೆಂದರೆ ಅವನು ಎಲ್ಲದಕ್ಕಿಂತ ಮಹತ್ವದ ಮತ್ತು ನಿರ್ಣಾಯಕಯುದ್ಧದಲ್ಲಿ ಈ ನಿರಾಶೆಯ ಉತ್ತರಕ್ಷಣದಲ್ಲಿಯೇ ಜಯಿಸಿ ಬಿಟ್ಟದ್ದು ಸಂಗತಿ. ಸ್ಮರ್ನಾ ನಗರದ ಈ ಯುದ್ಧದಲ್ಲಿ ಅವನು

ನೈನ್ಯವನ್ನು ಛಿನ್ನಭಿನ್ನವನ್ನಾಗಿ ಮಾಡಿ ಒ. ಮತ್ತು ಈ ವಿಜಯದ ಅಬ್ಬರದಿಂದ ರಾಷ್ಟ್ರಗಳೊಡನೆ ತನಗೆ ಬೇಕಾದಂತೆ ಪತ್ರಗಳನ್ನು ಬರೆಯಿಸಿಕೊಂಡನು. ಈ ದ ನಂತರ ಕೆಮಾಲನ ಮನೋವೃತ್ತಿಯು ತಿರುಗಿತು. ಅವನ ಮನಸ್ಸು ಲತೀಫಾ ಧಾವಿಸುತಿತ್ತು. ಅನ್ಯ ಸ್ತ್ರೀಯರ ಕಡೆಗೆ ಮನಸ್ಸು ಓಡುತಿದ್ದಿಲ್ಲ. ವಿವಾಹ ಮಾಡಿ ವೆನೆಂಬ ಭರವಸೆಯಿತ್ತು. ಲತೀಫಾಳನ್ನು ಡಿಕ್ಕೊಳ್ಳಬೇಕೆಂದು ಅವನ ಮನಸ್ಸು ತ್ತಿತು. ಒಂದು ದಿವಸ ಸಾಯಂಕಾಲ ನೆಟ್ಟಗೆ ಲತಿಫಾಳೆಡೆಗೆ ಹೋಗಿ, ಅಧಿಕಾರ ಸ್ವರದಿಂದ ಏಳು ಈಗಿಂದೀಗಲೇ ಮಾಗಬೇಕು' ಎಂದು ಹೇಳಿ ಅವಳ ಕೈ ಹಿಡಿದುಕೊಂಡು ನೆಟ್ಟಗೆ ಒರ್ವ ಳು ಬಳಿಗೆ ಹೋಗಿ ವಿವಾಹಮಾಡಿಕೊಂಡ. ೀವೃತ್ತಿಯ ಮತ್ತು ಪಾರ್ಥಿವ ತತ್ವಜ್ಞಾ ಕೆಮಾಲನು ಲತೀಫಾಳ ಪ್ರೇಮ ಪ್ರಾಪ್ತಿ ವಿವಾಹಿತನಾದನು. ಒಂದು ವರ್ಷಪರಿ ಅವರು ಸುಖ ಸಂತೋಷಗಳ ಸೂರೆ ದರು. ಕೆಮಾಲನ ವೈವಾಹಿಕ ಸುಖದ ಮರ್ಯಾದೆಯು ಆದಕ್ಕಿಂತ ಹೆಚ್ಚಿನ ಕಾಲ ನಿಲ್ಲಲಿಲ್ಲ- ಲತೀಫಳು ವ್ಯಕ್ತಿತ್ವಶೂನ್ಯ ಸ್ತ್ರೀಯಲಾಗಿದ್ದಿಲ್ಲ. ಒಂದು ಒಂದೂವರೆ ವರ್ಷಗಳಲ್ಲಿ ಕೆಮಾಲನು ಪೂರ್ವಸ್ಥಿತಿಗಿಳಿದನು. ಅವನ ತಾಳ ತಂತ್ರಗಳೆಲ್ಲಾ ದಿಕ್ಕಾಪಾಲಾದುವು ಲತೀಫಾಳಿಗೆ ಇದನ್ನು ಸಹಿಸಲಾಗಲಿಲ್ಲ ಅವಳು ಅವನನ್ನು ಜರೆಯಹತ್ತಿದಳು. ಅದು ಉದ್ಧಟ ಸ್ವಭಾವದ ಕೆಮಾಲನಿಗೂ ಹಿಡಿಯಲಿಲ್ಲ ಈರ್ವರಲ್ಲೂ ಪರಸ್ಪರ ಘರ್ಷಣೆಗಳುಂಟಾಗಹತ್ತಿದುವು.

ಲತೀಫಳ ಲಕ್ಷ್ಯವು ಸ್ವಂತ ವೈವಾಹಿಕ ಸುಖಪೂರ್ತಿಗಾಗಿ ಮಾತ್ರವಿದ್ದಿಲ್ಲ. ಅವಳು ಪಾಶ್ಚಾತ್ಯ ವಿದ್ಯಾವಿಭೂಷಿತಳು. ಅವಳಿಗೆ ಸಮಾಜದ ಬೆಂಬಲವಿತ್ತು. ಇದರಿಂದ ಅವಳು ಸ್ತ್ರೀಸ್ವಾತಂತ್ರ್ಯಕ್ಕಾಗಿ ಚಳವಳಿ ಹೂಡಹತ್ತಿದಳು. ಕೆಮಾಲನು ಇದಕ್ಕಾಗಿ ಅವಳೆಡೆಗೆ ದುರ್ಲಕ್ಷ್ಯ ಮಾಡುತ್ತಿದ್ದನಾದರೂ, ಲತೀಫಳು ಕೆಮಾಲನ ರಾಜಕೀಯ ಕ್ಷೇತ್ರವಿಚಾರಗಳಲ್ಲೂ ಕೈಹಾಕುತ್ತಿದ್ದಳು. ಮನೆಯಲ್ಲಿ ಮಾತಾಡುವಂತೆಯೇ ಸಭೆಗಳಲ್ಲೂ ಬಾಯಿಬಿಚ್ಚಿ ಮಾತಾಡತೊಡಗಿದಳು. ಕೆಮಾಲನ ಪ್ರತಿಸ್ಪರ್ಧಿಯಾದಳವಳು. ಕೆಮಾಲನು ರೊಚ್ಚಿಗೆದ್ದನು. ಅವನ ಸಹನಶಕ್ತಿಯು ಕುಂದಿತು. ಲತೀಫಾಳೊಡನೆ ಘಟಸ್ಫೋಟ ಮಾಡಿಕೊಳ್ಳುವುದೆಂದು ಅವನೆಣಿಸಿದನು ಘಟಸ್ಫೋಟದ ಲಜ್ಜಾಸ್ಪದವನ್ನು ತಾನೇಒರದು ಸಹಿ ಮಾಡಿ ಅಮಲಿನಲ್ಲಿ ತಂದನು. ಒಂದುದಿನ ಅನಿರೀಕ್ಷಿತವಾಗಿ ಲತೀಫಳು ಕೆಮಾಲನಿಂದ ಬೇರೆಯಾಗಬೇಕಾಯಿತು ಈ ವಿರಹವೆಂದರೆ ಕೆಮಾಲನ ಆಯುಷ್ಯದೊಳಗಿನ ಒಂದು ಯೋಗಾಯೋಗವಾಗಿತ್ತು ಅವನು ಜನ್ಮತಃ ಭೈರಾಗಿದ್ದ. ವಿವಾಹ ಪಾವಿತ್ರ್ಯವನ್ನು ಕಾಪಾಡಿಕೊಳ್ಳುವುದು ಅವನ ಸ್ವಾಧೀನವಿದ್ದಿಲ್ಲ ಘಟಸ್ಫೋಟದ ನಂತರ ಅವನು ಪುನಹ ಗತ ಅವರ್ಯಾದಿತ ಜೀವನರಂಗಕ್ಕಿಳಿದನು ಸಹಕಾರಿಗಳ ಪತ್ನಿಪುತ್ರಿಯರೊಡನೆ ಪ್ರಣಯಕ್ರೀಡೆಯನ್ನಾಡಲಾರಂಭಿಸಿದನು ಕೊನೆಯ ವರೇಗೂ ಯಾರೊಬ್ಬ ಸ್ತ್ರೀಯಳೂ ಅವನನ್ನು ತನ್ನ ಕಕ್ಷೆಯೊಳಗಿರಿಸಿಕೊಳ್ಳಲು ಸಮರ್ಥಳಾಗಲಿಲ್ಲ. ಸಾಯುವ ವರೇಗೂ ಅವನೀರೀತಿಯ ಭ್ರಮರೀವೃತ್ತಿಯು ನಡೆಯುತ್ತಲೇ ಇತ್ತು. ಇನ್ನು ಇದರಲ್ಲೂ ಸಂತೋಷಜನಕ ಸಂಗತಿ ಎಂದರೆ ಎಂತಹ ವ್ಯಸನದಲ್ಲಿದ್ದರೂ ಅವನು ತನ್ನ ಕರ್ತವ್ಯವನ್ನು

(ಮುಂದೆ ಪುಟ ನೋಡಿರಿ)


# ಕಲ್ಲಂಬೆ ವ್ಯಾಸಾಚಾರ್ಯ

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.



ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳ ಪ್ರಮುಖ ವ್ಯಾಪಾರಸ್ಥರು.

ಇವರು ನಿಮಗೆ ಬೇಕಾದ ತರಹೆವಾರು ಚಿಕ್ಕ ದೊಡ್ಡ ಪಾತ್ರೆಗಳನ್ನು, ಚಿಲ್ಲರೆ ಯಾರಖುಮಾಗಿ ಒದಗಿಸುವರು. ಬೇರೆ ಅಂಗಡಿಗಳಲ್ಲಿ ಸಿಗಲಾರದ ನಮೂನೆಯ ಮ್ಹಾಲು ಇವರಲ್ಲಿ ಸಿಗುವದು. ಯಾವಾಗಲೂ ನಿರಖು ದರದಿಂದ ವ್ಯಾಪಾರ ನಡಿಸುತ್ತಿರುವ ಕಾರಣ, ಇವರ ಗಿರಾಕಿಗಳು ಸಂತುಷ್ಟರಾಗಿರುವರು. ನಿಮಗೆ ಪಾತ್ರೆಗಳ ಬಗ್ಗೆ ಯಾವ ಅನುಭವ ಬೇಕಾದರೂ, ಸ್ವತಃ ಭೇಟಿಯಾಗಿ ತಿಳಿಯಿರಿ ಯಾ ಪತ್ರಮೂಲಕ ಇವರ ಕೆಟಲಾಗನ್ನು ಪಡೆಯಿರಿ.

# ದೀಪಾವಳಿಯ ನೆನಪು

(ಒಂದು ಚಿತ್ರ)

ಬರಹಗಾರರು:
**ಶ್ರೀಮಾನ್ ಪಿ. ಎನ್. ಬನ್ನಂಜೆ ರಾಮಾಚಾರ್ಯ.**

ಅವನು ಊರು ಬಿಟ್ಟು ಆರು ವರುಷಗಳು ಸಂದಿದ್ದುವು. ಅವನೊಬ್ಬ ಮನುಷ್ಯ ಹೌದು. ಆದರೆ ಈ ಆರು ವರುಷಗಳಲ್ಲಿ ಅವನ ಎಷ್ಟಿಯ ಮನುಷ್ಯತ್ವವೆಲ್ಲ ಲೋಪವಾಗಿ ಇದೇ ಮಾನವ ಪ್ರಪಂಚದ ದ್ವೇಷ ಸಾಧನೆಯ ಕಿಚ್ಚೊಂದು ಅವನಲ್ಲಿ ಬೀಡು ಮಾಡಿತ್ತು. ಅದಕ್ಕೂ ಕಾರಣ ವಿಲ್ಲದಿಲ್ಲ. ಅವನು ಒಬ್ಬ ದೊಡ್ಡ ಸಾಹಿತಿ; ಒಳ್ಳೆಯ ಬರೆಹಗಾರ ಕೂಡ. ಉಸಿರು ಇರುವ ತನಕ ನಾಡಸೇವೆ ಮಾಡಬೇಕೆಂದೇ ಹುಟ್ಟಿ ಅವನದು. ಎಂತಹ ಸಂದರ್ಭ ಬಂದರೂ ಎದೆಕೊಟ್ಟು ನಿಲ್ಲುವ ಧೀರನವನು. ಅವನು ಸ್ವಲ್ಪ ಶ್ರೀಮಂತನೂ ಹೌದು. ಅವನ ಪ್ರತಿಭೆ-ವಿದ್ಯೆ-ಬುದ್ಧಿಗಳು ಆ ಸಿರಿತನದ ಜತೆಗೆ ಕೂಡಿ ಅವನಿಗೆ ಒಂದು ಉಚ್ಚಸ್ಥಾನವನ್ನು ಕಲ್ಪಿಸಿಕೊಟ್ಟಿದ್ದುವು. ಆ ಸಮಯದಲ್ಲಿ ಅವನಿಗೊಬ್ಬ ಗೆಳೆಯ ಸಿಕ್ಕಿದ್ದನು. ಅವನ ಹೆಸರು ನಾಥನೆಂದು. ಅವನು ಗೆಳೆಯನಾಗಿ ಸೇರುವ ಮುಂಚೆಯೇ ರಘುವು ಖ್ಯಾತನಾಗಿ ಬಿಟ್ಟಿದ್ದ. ಬೇರಾಗಿ ನಾಡು ನುಡಿಯ ಸೇವೆ ಮಾಡುವ ಉದ್ದೇಶದಿಂದ ಅದಕ್ಕೊಂದು ಸ್ವತಂತ್ರ 'ಶಕ್ತಿ'ಯನ್ನೂ ಸಂಪಾದಿಸಿಕೊಂಡಿದ್ದ. ಅವನ ಶಕ್ತಿಯು ಬೆಳೆಯುತ್ತಲಿತ್ತು. ಊರ-ಪರವೂರ ಮಹನೀಯರ ಸಹಾಯ ಸಹಾನುಭೂತಿಗಳಿಂದ ರಘುವಿನ ಸಾರಸ್ವತ ಯಜ್ಞವು ಚೆನ್ನಾಗಿ ನಡೆಯುತ್ತಿತ್ತು. ನಾಡ ನುಡಿಯ ಸೇವಕನಿಗೆ ಸಮಾಜದಲ್ಲಿರುವ ಸ್ಥಾನ ಮಾನಗಳನ್ನು ಕಂಡು ನಾಥನಿಗೂ ಹಾಗೊಂದು ಆಸೆ; ನಾನೂ ರಘುವಿನಂತಾಗಬೇಕೆಂದು. ಆ ಉದ್ದೇಶದಿಂದಲೇ ಅವನು ರಘುವಿನ ಗೆಳೆಯನಾಗಿರಲೂ ಬಹುದು.

ಇಬ್ಬರೂ ಗೆಳೆಯರು ಬಹು ಕಾಲ ಕೂಡಿಯೇ ನಡೆಯುತ್ತಿದ್ದರು. ರಘುವು ಸ್ವತಂತ್ರ ವಿಚಾರವುಳ್ಳವ. ಪರೇಂಗಿತಜ್ಞ ಕೂಡ. ಒಳ್ಳೆಯ ಗುಣನಡತೆಯುಳ್ಳವ. ಎಲ್ಲರನ್ನೂ ಸಾಮ್ಯಬುದ್ಧಿಯಿಂದ ಕಾಣುವವ. ವಿಲಕ್ಷಣ ಪ್ರತಿಭಾಶಾಲಿ. ಅವನ ಈ ಗುಣಗಳಿಗಾಗಿ ಸಿಕ್ಕಿದ ಬಹುಮಾನವು ನಾಥನಿಗೆ ದೊರೆಯುತ್ತಿದ್ದಿಲ್ಲ. ಇದನ್ನು ಕಂಡು ನಾಥನಿಂದ ಸಹಿಸಲಾಗುತ್ತಿದ್ದಿಲ್ಲ. ತಾನೂ ರಘುವಿನ ಹಾಗೇ ಮಾಡಿದರೂ ರಘುವಿನ ಸ್ಥಾನ ಮಾನಗಳು ತನಗೆ ದೊರೆಯದಿರಲು ತಾನಾಗಿ ಈರ್ಷ್ಯೆಗೆ ಮೊದಲಾಯಿತು ನಾಥನಿಗೆ. ರಘುವು ಇದನ್ನರಿಯದಿಲ್ಲ. ಮಾನವ ಹೃದಯದ ಈ ಸ್ವಭಾವಪರಿವರ್ತನೆಯ ಜಾಲವನ್ನವನು ಬೇಕಷ್ಟು ಅರಿತಿದ್ದನು. ಆದರೂ ಸುಮ್ಮಗಿದ್ದನಾತ.

ಸ್ವಾರ್ಥ-ಸ್ವಪ್ರತಿಷ್ಠೆಗೆ ಅಡ್ಡಿ ಬಂದಷ್ಟು ಕಿಚ್ಚಿನಿಂದ ರೊಚ್ಚಿಗೇಳುತ್ತಿದ್ದ ನಾಥನ ಮಾನಸಿಕ ಪ್ರವೃತ್ತಿಯು ರಘುವಿನ ಸರ್ವನಾಶದಲ್ಲಿ ತೊಡಗಿತು ಈ ಗೂಢ ಸಂಧಿಯು ರಘುವಿಗೆ ತಿಳಿದಿಲ್ಲ.

ರಘುವಿನ ದಾರಿಯಲ್ಲೆಲ್ಲ ಹಿಮಾಲಯವೋ-ಮಹಾಸಾಗರವೋ ಅಡ್ಡಾಗಿ ಬಂದಾಗಲೆಲ್ಲ ರಘು ಕಂಗಾಲಾಗುತ್ತಿದ್ದ ಮಾತ್ರ. ಇದು ನಾಥನ ಕಾರಸ್ಥಾನವೆಂದು, ಪಾಪ, ಅವನೇನು ಬಲ್ಲ?

ರಘುವು ಹೀಗೆ ಹತೋದ್ಯವನಾದಂತೆಲ್ಲ ಲೋಕದಲ್ಲಿ ಅವನನ್ನೆಲ್ಲರೂ ಛೀ ಹಾಕುವವರೇ ಆದರು. ನಾಥನ ಜಂಬುಕನೀತಿಯು ಜಯಿಸಿತು. ರಘುವಿನ ಕುರಿತು ಅವನು ಮಾಡಿದ ಅಪಪ್ರಚಾರವು ಫಲಿಸಿತು. ಆದರೆ ರಘುವು ಇನ್ನೂ ನಾಥದಲ್ಲಿ ನಂಬಿಕೆಯನ್ನಿಟ್ಟಿದ್ದ. ನಾಥನು ಹೀಗೆ ಮಾಡನೆಂದೇ ಅವನ ವಿಶ್ವಾಸ. ಆದರೆ ನಂಬಿಸಿ ನಂಬಿಸಿಯೇ ನಾಥನು ರಘುವಿನ ಕೊರಳಿಗೆ ಕೊಯಿದ. ರಘುವು ನಿರಪರಾಧಿಯಾಗಿದ್ದರೂ ಜನರ ಒಲವು ನಾಥನ ಕಡೆಗಿತ್ತು. ಕಾರಣ ರಘುವಿನ ಮೇಲ್ಕೆಯು ಲೋಕರಲ್ಲೂ ಅಸೂಯೆಯನ್ನು ಹುಟ್ಟಿಸಿತ್ತು.

ಪರಿಸ್ಥಿತಿಯು ಹೀಗೆ ಹದಗೆಡುತ್ತ ಬಂದಾಗ ರಘುವು ಬಹಳೇ ಕಳವಳಕ್ಕೊಳಗಾದನು. ಅದರ ಸೂತ್ರಧಾರಿಯು ನಾಥನೇ ಇರುವನೆಂಬುದನ್ನಂತೂ ಕೇಳಿ ಅತನೆದೆಯೊಡೆದು ಚೂರಾಯಿತು. ಅದಕ್ಕೆ ಜನರ ಬೆಂಬಲವಿದೆಯೆಂಬುದನ್ನರಿತು ಹೆಚ್ಚು ನಂತಾದನು. ಜನರೆದುರು ಏನೂ ಅರಿಯದ ಕುರಿಯ ಮುಂಡವನ್ನುರಿಸುವಂತೆ ತನ್ನ ಸ್ನೇಹಿಗೆ ಅನ್ಯಾಯವಾಗಿ ಬಲಿ ಕೊಟ್ಟ ದ್ದರ ಉದ್ದೇಶವು ಅವನಿಗೆ ತಿಳಿಯಲೇ ಇಲ್ಲ. ಹೀಗೆ ಅವನ ದಶದಿಕ್ಕುಗಳಲ್ಲಿಯೂ ಅವನ ವಿನಾಶಾ ವಾತಾವರಣವು ಹುಟ್ಟಿರುವಾಗ ಆದರೆ ನಾಥನ ಅವನಿಗೆ ಇರುವುದೇ ಕಷ್ಟವೆನಿಸಿತು; ಬಹಳೇ ಹಿಂಸೆಯೆನಿಸಿತು. ಹೀಗೆ ಪರಿಸ್ಥಿತಿಯ ಒತ್ತಾಯದಿಂದ ಅವನು ಜನ್ಮಭೂಮಿಯನ್ನು ತ್ಯಜಿಸಿ ಹೋಗಬೇಕಾಯಿತು. ಈ ಶರಣಾಗತಿಯಲ್ಲಿ ಯಾರೂ ನೊಂದುಕೊಳ್ಳಲಿಲ್ಲ! ಯಾರೇ ನೊಂದುಕೊಳ್ಳುವರು? ಹೀಗೆ ಸಾವಿರಂತ ದೂರಾಗಿ ಆರು ವರುಷಗಳು ಕಳೆದಿದ್ದುವು. ಮಾನವಹೃದಯದ ಇತಿಹಾಸವನ್ನೆಲ್ಲ ಅನುಭವಿಸಿದ ಆತ ಇದೀಗ ವಿಶ್ವವನ್ನೇ ಪ್ರತೀಕಾತ್ಮಕ ರುದ್ರಕುಂಡದಲ್ಲಿ ಕೆಡಹುವ ಹುಚ್ಚು ಕಲ್ಪನೆಗೆ ಸಿಕ್ಕಿದ್ದ. ಅದೂ ಸಹಜವೇ. ಸಾವಿರ ನೋವನ್ನು ದರೂ ಹೃದಯವು ಸಹಿಸೀತು. ಆದರೆ ಸಾವಿರ ಪಾಲಿನ ನೋವನ್ನು ಸಹಿಸುವ ಶಕ್ತಿ ಅದಕ್ಕೆಲ್ಲಿದೆ? ಅಂತಹ ಸಂದರ್ಭದಲ್ಲಿ ಅದು ನುಚ್ಚು ನೂರಾಗುವುದೇ ಸರಿ; ಅಥವಾ ಸೇಡಿನ ಕಿಚ್ಚಿನಿಂದ ಬೆಂದು ಬವಣೆ ಪಡುವುದು! ಇರಲಿ.

ಂ೦ ಂ೦ ಂ೦

ಇಂದು ದೀಪಾವಳಿ. ಅವನು ಬಂದು ಆರನೇ ವರ್ಷ ಇಂದೇ ಮುಗಿಯುವುದರಲ್ಲಿತ್ತು. ಈ ದಿನ ಅವನು ತನ್ನ ಸ್ಥಿತಿಗತಿಗಳದೊಂದು ಸಿಂಹಾವಲೋಕನ ಮಾಡಿದ. ಆರು ವರುಷಗಳ ಕೆಳಗಿನ ದೀಪಾವಳಿಯಲ್ಲಿ ಅವನಿಗೆ ಒಂದು ನೂರು ಕಡೆಯಿಂದ ಆಹ್ವಾನ ಬಂದಿತ್ತು. ಪೂಜೆಗೆ-ಸತ್ಕಾರಕ್ಕೆ-ಫಲಹಾರಕ್ಕೆ-ವಿನೋದ ಕೂಟಕ್ಕೆ-ಭಾಷಣಕ್ಕೆ-ಅಧ್ಯಕ್ಷನಾಗಲಿಕ್ಕೆ ಎಂದು! ಆಹ್ವಾನದಲ್ಲಿ ಅವನದೆಯಲ್ಲಿ ಮೂಡಿ ಮಾಯವಾಯಿತು. ಪ್ರತಿಯೊಬ್ಬರು ಆನಂದದಿಂದ ಕೂಡಿ ನಲಿದಾಡುವ ಆ ದೃಶ್ಯಸೌಂದರ್ಯದ ಅನುಭವ ಮಾಡಿಕೊಂಡನು. ಕಲೆ ತಿರುಗಿದಂತಾಯಿತು. ಅಲ್ಲೇ ಕುಳಿತನು. ಕಣ್ಣುಗಳಲ್ಲಿ ಎರಡು ತೊಟ್ಟು ನೀರು ಇಳಿಯಿತು. ಪ್ರತಿಯೊಬ್ಬರ ಮನೆಯಲ್ಲಿಯೂ ಬಂದು ಹೋಗುವ ಇವ್ವಮಿಶ್ರರೇನು? ವೈಭವದ ವೈಖರಿಯೇನು? ಹಾವಭಾವಗಳ ತೀವ್ರತೆಯೇನು? ಸಂಜೆಯ ಸಮಯಕ್ಕೆ ಸಾಲು ಸಾಲಾಗಿ ದೀವಿಗೆ ಗರ್ಭಗುಡಿಯ ಕಡೆಗೆ ಹೊರಡುವ ಸುಂದರ-ಸುರೂಪ-ಮುಗ್ಧೆಯರ ಸೊಬಗೇನು? ಬಾಲಕರಲ್ಲಿ ಬರುವ ಉತ್ಸಾಹವೇನು? ಏಕಾಂತದಲ್ಲಿ ಕಾಂತೆ ನನ್ನು ಸಂಧಿಸಿದಾಗ ನಡುಹರೆಯದ ಎಳೆ ಹುಡುಗಿಯು ತೋರುವ ಆ ಭಾವ ಸೌಭಾಗ್ಯದ

ಮಾಧುರ್ಯವೇನು? ರೈತರೆಲ್ಲ ಸಂಜೆಗೆ ಹೊಲ ನೆಲ್ಲ ಸಾಲಾಗಿ ದೀಪಾವಳಿಯನ್ನಿರಿಸುವ ಆಂದ-ಚಂದವೇನು? ..... ???

ಹೀಗೆ ಎಲ್ಲಾ ವಿಧದಿಂದಲೂ-ಎಲ್ಲ ಜನರೂ ಆನಂದಿಸುವ ಆ ದಿವ್ಯದಿನದ ಮಧುಸ್ಮೃತಿಯಿಂದ ರಘುವಿನ ಎದೆಗೆ ಈಟಿಯಿಂದ ತಿವಿದಂತಾಯಿತು. ಹಾಗೆ ಮೆಲ್ಲನೆ ಮನೆಯ ಕಡೆಗೆ ಹೊರಳಿತಾ ಮನಸ್ಸು!

ಆಂದು ದೀಪಾವಳಿ ಮುಂಜಾನೆ ತಾಯಿ ತಲೆಗೆ ಎಣ್ಣೆ ಸವರಿದ್ದು. ನಲ್ಲೆ ಮಿಯಿಸಿದ್ದು- ತಂದೆ ಹೊಸ ಬಟ್ಟೆಯನ್ನಿತ್ತದ್ದು. ತಮ್ಮ ನಲಿದು ನಲಿದು ತನ್ನನ್ನಪ್ಪಿದುದ್ದು. ತನ್ನ ಚಿಕ್ಕ ತಮ್ಮ ನೊಬ್ಬನು ಬಾಲಲೀಲೆಯಿಂದ ಮನೆಯವರನ್ನೆಲ್ಲ ಆನಂದಿಸಿದುದು ಊರವರೆಲ್ಲ ತನ್ನ ಮನೆಗೆ ಬಂದು ಲೋಕಪೂಜ್ಯ-ಯಶೋಮೂರ್ತಿ ತನ್ನ ತಂದೆಯವರನ್ನು ವಂದಿಸಿದ್ದು, ಜನರೆಲ್ಲ ತನ್ನನ್ನು ಗೌರವಿಸಿದ್ದು-ಗೆಳೆಯರೆಲ್ಲ ಸನ್ಮಾನಿಸಿದ್ದು, ಆತ್ತೆಯ ಮನೆಯವರು ಉಪಚರಿಸಿದ್ದು-ಅಂದು ರಾತ್ರಿ ಅನುಪಮ ರೂಪಿಣಿಯಾದ ತನ್ನ ಎದೆಯೊಡತಿ ಎದೆಗೆ ಆನಿಸಿ ನಿಂತು ಎಂದೂ ಮರೆಯಲಾರದ ಮಧುರ ಮುತ್ತನ್ನೊತ್ತಿದ್ದು! ..... !!

ಇದನ್ನೆಲ್ಲ ನೆನೆಸಿದಾಗ ಅವನ ನಯನಗಳಲ್ಲಿ ಬಾಷ್ಪವು ಹೊನಲಾಗಿ ಹರಿಯತೊಡಗಿತು. ವಧ್ಯೆ ತಾಯಿ ತಂದೆ-ತಮ್ಮ ತಂಗಿ-ಬಂಧು ಮಿತ್ರರು-ಜೀವನದ ಜೊತೆಗಾತಿ-ಆವರನ್ನೆಲ್ಲ ಕಾಣಬೇಕೆಂಬಾಶೆಯೊಂದು ಹುಟ್ಟಿತು. ಎದೆಯಿಂದ ಅರಳಿ ಬಂದ ಆಸೆಯದು. ಕಾಣಬೇಕು? ಹೇಗೆ? ನೂರಾರು ಮೈಲುಗಳಾಚೆ ಇವನಿಗಾಗಿ ಅವರು ಹಂಬಲಿಸುತ್ತಿರುವರು! ಇಲ್ಲಿ ಕಾಣಬೇಕೆಂದರೆ ಹೇಗೆ? ಆದರೆ ಅವನಿಗೆ ಮಾತ್ರ ಕಾಣಲೇ ಬೇಕೆಂಬಾಸೆ ಪ್ರಬಲವಾಯಿತು. ಅದನ್ನು ಹದಕ್ಕೆ ತಂದು ಕೊಳ್ಳುವುದೆಂದರೆ ಅಸಾಧ್ಯವಾದ ಮಾತಾಯಿತು! ಬಂಧುಗಳ ಮುಖ, ಇನಿಯಳ ನಗೆವೊಗ-ತಮ್ಮನ ಮುಖ, ಚಿಕ್ಕ ತಮ್ಮನ ಬಾಲಲೀಲೆ-ಪೂಜ್ಯ ತಂದೆಯವರ ಮುಖ-ಹೆತ್ತು ಹೊತ್ತು ಸಾಕಿ ಸಲಹಿದ-ತಾಯ್ಗೆ ಜೀವನದಲ್ಲಿ ಎಂದೆಂದಿಗೂ ಋಣಿಯಾಗಿಯೇ ಉಳಿಯಬೇಕಾಗಿರುವುದರಿಂದ ನಿರಂತರ ಸೇವ್ಯಳಾದ ತಾಯಿಯ ಮೊಗ-ಇವನ್ನೆಲ್ಲ ಸ್ಫೋಡನ ತವಕ ಹೆಚ್ಚಿದಂತೆ-ಅವನು ಹುಚ್ಚು ಚ್ಚಾದನು. ಎದೆಯಲ್ಲಿ ರೋದನಕ್ಕಿಟ್ಟತು. ಕಣ್ಣಿನಲ್ಲಿ ನೀರೂರಿತು. ಕಂಠ ಉಬ್ಬಿ ಬಂತು. ಬಂಧು ಬಾಂಧವರ ಸಂಬಂಧದಿಂದ ತೊರೆಯಿಸಿ ಈ ಸಡಗಾಡು ಪರಿಸ್ಥಿತಿಯಲ್ಲಿರಿಸಿದ ನಿಷ್ಠುರವಿಧಿಯನ್ನು ಮನಸಾರೆ ದೂಷಿಸಿದ. ಮಧ್ಯೆ ನಾಥನ ನೆನಪಾಯಿತು! ನಾಥ! ತನ್ನನ್ನು ಮಸಣ ಶಯ್ಯೆಯಲ್ಲಿ ಮಲಗಿಸಿ, ತಾನು ಸಂಭಾವಿತನಾಗಿ ಮೆರೆಯುವ ನಾಥ! ಅವನಿಗೆ ನೆರವಾದ ಮೂಢಮಂದಿ! ರಘುವಿನ ಕಣ್ಣುಗಳಲ್ಲಿ ಮಿಂಚು ಮಿಂಚಿತು. ಎದೆಯಲ್ಲಿ ಗುಡುಗಾಟವಾಯಿತು. ನಾಥನನ್ನು ರಘುವಿನ ಆತ್ಮವು ಕ್ರೂರವಾಗಿ ಶಪಿಸಿತು! ... .... ! .... !

ಇಷ್ಟಾಗುವಾಗ ಅವನ ಮೈಯೆಲ್ಲ ಬೆವತು ಹೋಗಿತ್ತು. ಗಲ್ಲವೆಲ್ಲ ಕಣ್ಣೀರ ಕೋಡಿಯಿಂದ ನೆನೆದು ಹೋಗಿತ್ತು. ಪ್ರಜ್ಞಾಶೂನ್ಯತೆಯ ಸೋಂಕೊಂದು ಅವರಿಸಿತ್ತು!!

ನಾಥನು ತಡೆಯಲಾರದೆ ಅಲ್ಲಿಂದೆದ್ದು ತನ್ನ ಕೋಣೆಗೆ ಹೊಕ್ಕನು-ಆದರೆ ಅವನು ಅಲ್ಲಿ ನೋಡಿದ್ದೇನು? ತನಗಾಗಿ ಅಳುತ್ತಿರುವ ತಾಯಿ-ತಂದೆ-ತಮ್ಮ-ತಂಗಿ ಬಂಧು-ಮಿತ್ರರ ಮತ್ತು ಜೀವನದ ಜತೆಗಾತಿಯ ಅಳು ಮೋರೆ! ಅವನಿಗೆ ವಿಭ್ರಮವೆನಿಸಿತು. ಕೋಣೆಯ ಸುತ್ತಲೂ ನೋಡಿದನು. ನೂರಾರು ತಾಯಿ-ತಂದೆಗಳು ನೂರಾರು ನಲ್ಲೆಯರು-ನೂರಾರು ತಮ್ಮ-ತಂಗಿಯರು-ನೂರಾರು ಬಂಧು-ಮಿತ್ರರು-ಇವನಿಗಾಗಿ ಮರುಗುತ್ತ ಇವನ ಸುತ್ತ ಸುತ್ತುತ್ತಿದ್ದರು!!!

---

(೧೭ನೆ ಪುಟದಿಂದ.)

ತಮ್ಮ ಕೈಗೆ ಸಿಕ್ಕಿದ ಶಿಖಾರಿಯು ತಪ್ಪಿ ಹೋಗುತ್ತಿದೆಯಾಗಿ ಅವನ ಹಿಂದೆಯೇ ೧೦ ಜನ ಯುವತಿಯರೂ ಸಮುದ್ರದೊಳಗೆ ಹಾರಿ ಬಿಟ್ಟರು.

ಸ್ಟೀಮರಿನ ಮೇಲಿದ್ದ ಜನರು ದೂರದಿಂದ ಸಮುದ್ರದಲ್ಲಿ ನಡೆಯುತ್ತಿದ್ದ ಈ ಕೋಲಾಹಲವನ್ನು ಕಂಡರು. ರೆನೋಲ್ಡನನ್ನು ಜೀವದಿಂದುಳಿಸಲು ಅವರು ಕೂಡಲೇ ಲೈಫ್ ಬೋಟನ್ನು ಕೆಳಕ್ಕಿಳಿಸಿ ಬಂದರು.

ಸ್ಟೀಮರಿನಿಂದ ಬಂದ ಲೈಫ್‌ಬೋಟನ್ನು ಕಂಡು ಇನ್ನು ರೇನೋಲ್ಡ್‌ನು ತಮ್ಮ ಕೈಗೆ ಸಿಗುವ ಸಂಭವವಿಲ್ಲೆಂದು ಯುವತಿಯರು ನಿರಾಶರಾಗಿ ತೆಪ್ಪೆಯನ್ನೇರಿದರು. ಮತ್ತು ತಮ್ಮ ರೋಮಾಂಚನ ಕಾರಿಯಾದ ಪ್ರೇಮಕಥನವನ್ನು ಜಗತ್ತಿಗೆ ಸಾರಿ ತಿಳಿಸೆಂದು ಅವನನ್ನು ಬಿಟ್ಟು ಬಿಟ್ಟರು!

---

ಮಿ. ಜಮದಗ್ನಿಯವರ
ರಿಪೋರ್ಟ್
ಜನವರಿಯಲ್ಲಿ ಪ್ರಕಟವಾಗುವುದು.




# BUSINESS DIRECTOR

## *Do You Wish to Expand your Business If so*

Please send us your full nan & Address not exceeding 3 lin of this column for publicatic We shall publish it either English or Canarese as you m wish.

Publication charges Rs. 3/- p year & Rs. 2/- per half ye Voucher copies sent free.

## For your Insurance nee Please consult:—

A. B. Krishna Raj,
*Organiser*, Lakshmi Insurance Co., Ltd, *for* South Kanara, Coorg & N. Mala

M. Vaman Bhat Bror.,
*Agents*, The Bombay Life Assurance Co. Ltd. Ud

The Swaraj Banking & Insurance Company, Limited, Dharw

Ananda Rao Janardhana Rao & C
Chief Agents for S. Kanara of The Un Karnataka Insurance Co., Ltd,. Ashwathapur, Post, MIJAR S. K

## Tea & Coffee Depot

**Sri Laxmi Tea & Coffee Depo**
Proprietor, R. V. Vokde
Pan-Bazar, Post--HUB

## Carpet Merchants

Rasiklal & Co..
*Carpet Merchants*,
24 Jakeria Masjid, BOMBAY N

## Wholesale & Retail Merchants,

Kalsanka Keshava Narasimha Pai
General Merchant. Temple Square U
(CONTD)

# ಹುಷಾರ್! ಇಲ್ಲಿ ಬಿಳಿಜನರಲ್ಲದೆ ಬೇರೆಯವರು ಕಾಲೂರಲಾಗದು!

## ಆಸ್ತ್ರೇಲಿಯಾದ ಮೂಲನಿವಾಸಿಗಳ ಮೇಲೆ ಬಿಳಿಜನರ ಸವಾರಿ!

ಸ್ವರಾಜ್ಯ ಮತ್ತು ಸಂರಕ್ಷಣೆಯ ಹೆಸರಲ್ಲಿ ಎಲ್ಲೆಲ್ಲೂ ಮುಂದರಿಯುತ್ತಿರುವ ಗೌರಾಂಗರು ತಮ್ಮ ದೇಶದಿಂದ ಬಹುದೂರವಿರುವ ಆಸ್ತ್ರೇಲಿಯಾದಲ್ಲಿ ಕಾಲೂರಿ; ಆ ಇಡೀ ಖಂಡವನ್ನೇ ತಮ್ಮ ವಶಪಡಿಸಿಕೊಂಡು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿ ಅದನ್ನು ಸ್ಥಿರಗೊಳಿಸಿರುವರು. ಏನೇನೂ ತೊಂದರೆಗಳಿಲ್ಲದೆ ೩೦ ಕೋಟಿ ಜನರು ಸುಖ-ಸಂತೋಷದಿಂದ ಕಾಲ ಕಳೆಯಬಹುದಾದಷ್ಟು ವಿಶಾಲವಾದ ಭೂಭಾಗದ ಮೇಲೆ ಬರೇ ೧॥ ಕೋಟಿ ಬಿಳಿ ಜನರಿದ್ದು, ಆ ವಿಶಾಲವಾದ ಭೂಭಾಗದಲ್ಲಿ ಅಲ್ಲಿಯ ಮೂಲನಿವಾಸಿಗಳು ಕಾಲೂರದಂತೆ ಅವರನ್ನು ಪರ್ವತ ಪ್ರದೇಶಗಳಿಗೆ ಅಟ್ಟಿಬಿಟ್ಟಿರುವರು. ಒಂದು ಚೌರಸ ಮೈಲು ವಿಸ್ತಾರಕ್ಕೆ ಒಬ್ಬ ಬಿಳಿ ಚರ್ಮದ ಮನುಷ್ಯನ ಪ್ರಮಾಣವಿರುವುದಾದರೂ ಅಲ್ಲಿ ಕರೇ ವರ್ಣದ ಮನುಷ್ಯರಿಗೆ ಸ್ಥಾನವೇ ಕೊಡಲಾರೆವೆಂದು ಹೇಳುತ್ತಿರುವರಿವರು. ಅಲ್ಲಿ ಮತ್ತೆನು ನಡೆಯುತ್ತಿದೆ? ಓದಿನೋಡಿ!

•

ಆಸ್ತ್ರೇಲಿಯಾದ ಸುಮಧುರ ಫಲವಸ್ತುಗಳ ಆಸ್ವಾದವನ್ನು ಪಡೆಯುತ್ತಾ ಕೃಷಿ ಉದ್ಯೋಗದಿಂದ ಜೀವನ ನಡಿಸುತ್ತಿದ್ದ ಅಲ್ಲಿಯ ಮೂಲನಿವಾಸಿಗಳನ್ನು, ಅಲ್ಲಿಗೆ ಕಾಲಿಟ್ಟ ಬಿಳಿ ಜನರು ತಮ್ಮ ಸುಧಾರಿತ ಶಸ್ತ್ರಗಳ ಸಹಾಯದಿಂದ ಅರಣ್ಯ ಪ್ರದೇಶಗಳಿಗೆ ಅಟ್ಟಿಬಿಟ್ಟರು. ತಮಗೆ ಬೇಕಾದ ಸುಂದರವಾದ ಬಂಗ್ಲೆಗಳನ್ನು ಕಟ್ಟಲು, ಹೂದೋಟಗಳನ್ನು ತಯಾರಿಸಲು ಅಲ್ಲಿಯ ಮೂಲನಿವಾಸಿಗಳ ಮನೆಮಾರುಗಳನ್ನು ಕೆಡವಿ ತಮ್ಮ ಸ್ವಾರ್ಥಸಾಧಿಸಿಕೊಂಡರು. ಮೂಲನಿವಾಸಿಗಳಾದರೂ ಬಿಳಿಯರನ್ನು ಎದುರಿಸಲು ಸಮರ್ಥರಾಗದೆ, ಮನೆಮಾರುಗಳಿಲ್ಲದ ನಿರುದ್ಯೋಗಿಗಳಾಗಿ ಆಸ್ತ್ರೇಲಿಯಾದ ಗಿರಿಗಂವ್ಹರಗಳಲ್ಲಿ ವಾಸ ಮಾಡುತ್ತಾ ತಮ್ಮ ಜೀವನ ನಡಿಸುತ್ತಿರುವರು.

### ಅಪರಾಧಿಗಳನ್ನು ಹಿಡಿಯುವ ಪಹರೆಕಾರರು!

ಪಾರವಿಲ್ಲದ ದಾರಿದ್ರ ದುಃಖ ಮತ್ತು ಮೇರೆ ಮೀರಿದ ಅವಮಾನವನ್ನು ದೂರಗೊಳಿಸಲು ಆ ಮೂಲ ನಿವಾಸಿಗಳು ವಿಶ್ವಪ್ರಯತ್ನ ನಡಿಸಿದರು. ಆದರೆ ಅವರು ಎಷ್ಟು ಹೆಚ್ಚುಹೆಚ್ಚಾಗಿ ಪ್ರಯತ್ನಿಸಿ ತೊಡಗಿದರೋ, ಅಷ್ಟೇ ವಿರುದ್ಧ ಪ್ರಮಾಣದಲ್ಲವರು ಆತ್ಮಬಲಿದಾನವಿತ್ತು ಗುಡ್ಡಕಾಡುಗಳನ್ನು ಸೇರುವಂತಾಯಿತು. ಆಸ್ತ್ರೇಲಿಯಾದ ಬಿಳಿಜನರ ವಕ್ರದೃಷ್ಟಿಗೆ ಬಲಿಬಿದ್ದಿರುವ, ಆ ದುರ್ದೈವಿ ಮಾನವ ಪ್ರಾಣಿಗಳ ಜೀವನವೀಗ ಅರಣ್ಯದೊಳಗಿನ ಮೃಗಗಳಂತಾಗಿರುವುದು. ಬಿಳಿಜನರು ಮೃಗಗಳ ಶಿಖಾರಿ ಮಾಡುವಂತೆ ಅವರನ್ನು ಹಿಂಬಾಲಿಸಿದುದರಿಂದ, ಅವರೀಗ ಆಸ್ತ್ರೇಲಿಯಾದ ಉತ್ತರ ಭಾಗದಲ್ಲಿರುವ ಅರಣ್ಯಗಳನ್ನು ಸೇರಿರುವರು. ಬಿಳಿಜನರು ಅಲ್ಲಿದ್ದ ಎಲ್ಲಾ ಮೂಲನಿವಾಸಿಗಳನ್ನು ೨೫ ಸಾವಿರ ಚೌರಸ ಮೈಲು ವಿಸ್ತಾರವಾದ ಕಾಡು, ಗುಡ್ಡ ಪ್ರದೇಶಗಳಲ್ಲಿ ಒಟ್ಟುಗೂಡಿಸಿ ಬಿಟ್ಟು, ಅಲ್ಲಿಂದವರು ಹೊರ ಬಾರದಂತೆ ಸಶಸ್ತ್ರ ಪಹರೆಗಳನ್ನಿಟ್ಟಿರುವರು! ದೊಡ್ಡದಾದ ಸಂಖ್ಯೆಯಲ್ಲಿರುವ ಅವರನ್ನು ಪ್ರತಿಬಂಧದಲ್ಲಿಡಲು ಲಕ್ಷಗಟ್ಟಲೆ ಅಥವಾ ಸಾವಿರಗಟ್ಟಲೆ ಸೈನ್ಯವನ್ನಿರಿಸದೆ ಬಲಿಷ್ಠರಾದ ಮತ್ತು ಕ್ರೂರಸ್ವಭಾವದ ೪೦ ಜನ ಕಾವಲುಗಾರರನ್ನಿಟ್ಟಿರುವರು! ಈ ನಾಲ್ವತ್ತು ಜನ ಕಾವಲುಗಾರರು ಯಾರು ಬಲ್ಲಿರಾ? ಅವರಂತೆಯೇ ಬಲಿಷ್ಠರಾಗಿದ್ದು, ಆರಿಸಿ ತೆಗೆದು ತರಬೇತಿಗೊಳಿಸಿದ ಕಾಡುಜನರು! ಈ ಪಹರೆಗಾರರು ಬಿಳಿಜನರು ಹೇಳಿದಂತೆ ಕುಣಿಯುವವರು! ಅವರಿಗಾಗಿ ತಮ್ಮ ಪ್ರಾಣವನ್ನು ಕೊಡಲೂ ಕೂಡ ಸದಾಕಾಲ ಸಿದ್ಧರಿರುವವರು. ತಮ್ಮ ಬಂಧುಬಳಗದವರಿಗೆ ದ್ರೋಹ ಮಾಡುವವರು.

ಈ ಪಹರೆಯವರೇನೂ ಸಾಮಾನ್ಯರಲ್ಲ. ಮೂಲನಿವಾಸಿಗಳಿಂದೇನಾದರೂ ಅಪರಾಧ ನಡೆಯಿತೆಂದಾದರೆ ಅವರನ್ನು ಹಿಡಿದು ದಂಡಿಸಲು ೨೫ ಸಾವಿರ ವಿಸ್ತಾರವುಳ್ಳ ಆ ಇಡಿಯ ಅರಣ್ಯ ಪ್ರದೇಶವನ್ನು ಓಡಿ, ಸುತ್ತಾಡಿ, ಗಿರಿಗಂವ್ಹರಗಳನ್ನು ಹೊಕ್ಕು ಅಪರಾಧಿಗಳನ್ನು ಹಿಡಿದು ದಂಡಿಸುವವರು. ಈ ರೀತಿ ಅವರು ಮೂಲನಿವಾಸಿಗಳ ಶೋಧಕ್ಕೆ ಹೊರಟಾಗ ಅವರಿಗೆ ಹಸಿವೆಯ ಪರಿವೆಯು ಕೂಡಾ ಇರುವುದಿಲ್ಲ. ಅಪರಾಧಿಗಳು ಸಿಗದೆ ಹೋದರೆ ಎರಡು ಮೂರು ತಿಂಗಳಾದರೂ ಸರಿಯೇ, ಅವರು ಹಿಂತಿರುಗಿ ಬರುವುದಿಲ್ಲ!

### ಪತ್ತೆಯಾಗದೆ ಹೋಯಿತು

ಕೆಲವೇ ವರ್ಷಗಳ ಹಿಂದಿನ ಮಾತಿದು. ಕಾರ್ಪೆಂಟರಿಯಾನ್ ಕೊಲ್ಲಿಯಿಂದ ಪಾರಾಗುತ್ತಿದ್ದ ಒಂದು ಮಚ್ಚೆಯು ಸಮುದ್ರದಲ್ಲಿ ಮುಳುಗಿತೆಂಬುದಾಗಿಯೂ ಮತ್ತು ಅದರಲ್ಲಿದ್ದ ಇಬ್ಬರು ಗೌರಕಾಯ ಸ್ತ್ರೀಯರು ಈಜಾಡಿ ದಡ ಸೇರಿ ತಮ್ಮ ಜೀವ ಉಳಿಸಿಕೊಂಡಾಗ, ಆ ಸ್ತ್ರೀಯರನ್ನು ಕಂಡೊಡನೆ ಆ ಪ್ರದೇಶದಲ್ಲಿದ್ದ ಕಾಡುಜನರು ಅವರನ್ನು ಎತ್ತಿಕೊಂಡು ಹೋದರೆಂಬುದಾಗಿಯೂ ಊರಲ್ಲೆಲ್ಲಾ ವರ್ತಮಾನ ಹಬ್ಬಿತು. ಆ ಸ್ತ್ರೀಯರನ್ನು ಹುಡುಕಿ ತೆಗೆಯಲು ಮೇಲೆ ಹೇಳಿದ ಪಹರೆಗಾರರು ವಿಶ್ವಪ್ರಯತ್ನ ಪಟ್ಟರು.

ಸ್ವೀಮರುಗಳ ಮೂಲಕ ಕುದುರೆಗಳನ್ನು ಕೊಂಡುಹೋಗಿ ಸಮುದ್ರ ಕಿನಾರೆಯಲ್ಲಿಳಿಸಲು ಸಾಧ್ಯವಾಗದೆ ಹೋಯಿತು. ಕಾರಣ ಆ ಸಮುದ್ರ ಕಿನಾರೆಯ ನೀರೊಳಗೆ ನೂರಾರು ಮೊಸಳೆಗಳು ಸುತ್ತುಸುತ್ತಾಗಿ ಅಲೆದಾಡುತ್ತಿದ್ದವು. ಆದರೂ ಆ ಪಹರೆಕಾರರು ತಮ್ಮ ಬಂದೂಕುಗಳಿಂದ ಆ ಮೊಸಳೆಗಳನ್ನು ಕೊಂದು, ಕುದುರೆಗಳನ್ನು ಕಿನಾರೆಗೆ ತೆಗೆದುಕೊಂಡು ಹೋದರು. ಅರಣ್ಯ, ಗುಡ್ಡ, ಬೆಟ್ಟಗಳನ್ನೂ, ಗಿರಿಗಂವ್ಹರಗಳನ್ನೂ ಬಿಡದೆ ಹುಡುಕಿದರು. ಎಲ್ಲೆಲ್ಲಿಗೆ ಹೋದರೂ ಬಿಳಿ ಸ್ತ್ರೀಯರು ಸಿಗದೆ ಹೋದರು. ಈ ರೀತಿ ಒಂದೆರಡು ತಿಂಗಳು ಶೋಧ ಮಾಡಿದರೂ ಅವರ ಮನೋದಯವು ಸಫಲವಾಗಲಿಲ್ಲ.

ಪಹರೆಕಾರರು ಹುಡುಕಾಡಲು ಬರುತ್ತಿರುವುದನ್ನು ಕಂಡು ಆ ಮೂಲನಿವಾಸಿಗಳು ಕಾಡಿನೊಳಗಿನ ಪೊದೆಗಳಲ್ಲಿ ಅಡಗಿಕೊಳ್ಳುತ್ತಿದ್ದರು. ಮತ್ತು ಎಲ್ಲಾದರೂ ಒಂದು ಖಾಲಿ ಗುಡಿಸಲಿನ ಎದುರು,

ೂರು ನಾಲ್ಕು ಜನರು ಕಾಣಿಸಿಕ್ಕಿದಾಗ ಬಿಳಿ ಸ್ತ್ರೀ
ರ ವಿಷಯ ಕೇಳಿದರೆ ಅವರು ತಮಗೇನೂ
ತ್ತಿಲ್ಲವೆಂದು ಹೇಳುತ್ತಿದ್ದರು. ಹೀಗೆ ಎಷ್ಟು
ಯಾಸ ಪಟ್ಟರೂ ಕೊನೆವರೆಗೆ ಅವರಿಂದ ಬಿಳಿ
ೀಯರ ಶೋಧವಾಗದೆ ಹೋದುದರಿಂದ ಆ
ಹರೀಕಾರರು ಮುಂದಿನ ವಿಚಾರ ಬಿಟ್ಟು ಹಿಂತಿ
ಗಿದರು.

### ಅಪರಾಧಿಗಳ ಬಂಧನ

ಆಸ್ಟ್ರೇಲಿಯದಉತ್ತರಪ್ರದೇಶವು ಎಷ್ಟು ದುರ್ಗ
ಮ್ಯವಾಗಿರುವುದೆಂದರೆ, ಆಲ್ಲಿಗೆ ಇತರರು ವಿಮಾನ
ಳ ಮೂಲಕವಲ್ಲದೆ ಕುದುರೆ, ಮೋಟಾರು
ಹಿದಲಾದ ವಾಹನಗಳ ಸಹಾಯದಿಂದ
ೋಗಲು ಸಾಧ್ಯವೇ ಇಲ್ಲ. ಕೆಲವೆಡೆಗಳಲ್ಲಿ
ಬೆಟಗಳ ಮೇಲೇರಿ ಸವಾರಿ ಮಾಡಬಹುದು.
ದರೆ ಈ ರೀತಿಯ ಪ್ರದೇಶವು ಬಹಳ ಹೆಚ್ಚಾ
ಲ್ಲ.

ಕೆಲವು ವರ್ಷಗಳ ಹಿಂದೆ ಅರಣ್ಯದೊಳಗಿನ
ನರ ಶೋಧಮಾಡಿ ಅವರ ರೀತಿನೀತಿಗಳನ್ನರಿ
ಯಲು ಹೋದ ಇಬ್ಬರು ಬಿಳಿಯ ಜನರನ್ನು ಆ
ಡು ಜನರು ಕೊಂದುಬಿಟ್ಟು, ಅವರ ಶವ
ಳನ್ನು ತುಂಡುತುಂಡಾಗಿ ಕತ್ತರಿಸಿ ಫಿಝ್ರಾ-
ಾಯ ನದಿಯ ನೀರೊಳಗಿರುವ ಮೊಸಳೆಗಳಿಗೆ
ತಣವಿತ್ತರು. ಓರ್ವ ಗೌರಕಾಯನು ಆ
ತ್ತು ಹೋದ ಜನರ ಹತ್ತಿರವಿದ್ದ ಯಾಂತ್ರಿಕ
ಪಕರಣಗಳ ಪರಿಶೋಧನೆಯಿಂದ ಖೂನಿ
ಮಾಡಿದ ಅಪರಾಧಿಯ ಹೆಸರನ್ನು ತಿಳಕೊಂಡನು.
ತ್ತು ಆ ಕಾಡು ಜನರಲ್ಲಿ ಕೆಲವರ ಸಹಾಯ
ಡೆದು ಅವರೆಲ್ಲರೂ ಅವನ ಶೋಧಕ್ಕೆ ಪ್ರಾರಂ
ಸಿದರು. ಈ ಕಾಡುಜನರು ಕೆಲವು ವಿಷಯ
ಳಲ್ಲಿ ಸುಧಾರಿತ ರಾಷ್ಟ್ರಗಳ ಗುಪ್ತ ಪೋಲೀಸರಿ
ಂತಲೂ ಚತುರರಾಗಿರುವರು. ಅವರ ಚಾತುರ್ಯ
ಂದರೆ ಕಾಡು, ಗುಡ್ಡ ಪ್ರದೇಶಗಳಿಂದ ಯಾವ
ನುಷ್ಯರು ಬೇಕಾದರೂ ಸಂಚಾರ ಮಾಡಲಿ,
ೂಮಿಯ ಮೇಲೆ ಮೂಡುವ ಅವರ ಹೆಜ್ಜೆಗಳ
ಯತಿನಿಂದಲೇ ಅವರ್ಯಾರೆಂದು ಹೇಳುವಷ್ಟು
ಾಣತನವು ಅವರಲ್ಲಿರುವುದು. ಜನ್ಮದಲ್ಲೂ
ಾಣದ ಮನುಷ್ಯರ ಪಾದಗಳ ಗುರುತುಗಳನ್ನು,
ಡೆಗವು ಎಷ್ಟು ಅಸ್ಪಷ್ಟ, ಸೂಕ್ಷ್ಮವಾಗಿ ಬೇಕಾ
ರೂ ಮೂಡಲಿ, ಅವುಗಳ ಆಧಾರದಿಂದಲೇ ಆ
ನರನ್ನು ತಪ್ಪದೆ ಹುಡುಕಿ ತೆಗೆಯುವ ಚಾತು
ರ್ಯವು ಅಲ್ಲಿಯ ಆ ಕಾಡುಜನರೆಲ್ಲರಿರುವುದು.
ಂತಹ ಕೆಲವರನ್ನು ಆ ಶೋಧಕನು ತನ್ನೊಂ
ಗೆ ಕರಕೊಂಡು ಅಪರಾಧಿಯ ಶೋಧಕ್ಕೆ
ತೊಡಗಿದ್ದನು. ಮೂರು ತಿಂಗಳ ವರೆಗೆ ಅವನು
ಶೋಧಮಾಡಿದನು. ಈ ರೀತಿ ಶೋಧ [illegible]
ಕಾಲುನಡಿಗೆಯಿಂದವನು ಸುಮಾರು ಒಂ[illegible]ರ
ಮೈಲು ಸಂಚಾರ ಮಾಡಿದನು. ಒಂದನೆ ಸಲ
ಆ ಬಿಳಿ ಮನುಷ್ಯನಿಗೆ ಕಾಡು ಜನರ ಜೊತೆ ಚಿಕ್ಕ
ಪಂಗಡಗಳೊಡನೆ ಹೋರಾಡಬೇಕಾಯಿತು.
ಅನಂತರ ಅವನು ತನ್ನ ಸಹಾಯಕರೊಂದಿಗೆ ಆ
ಜಂಗಲಿಜನರ ಗುಂಪಿನ ಮೇಲೆ ಹನ್ನೆರಡು
ಸಾರಿ ದಾಳುಮಾಡಿದನು ಮತ್ತು ಯುಕ್ತಿ
ಪ್ರಯುಕ್ತಿಗಳಿಂದ ಖೂನಿ ಮಾಡಿದ ಎಂಟು ಜನ
ಅಪರಾಧಿಗಳನ್ನು ಸೆರೆಹಿಡಿದನು. ಇವರ ಮೇಲೆ
ಖೂನಿ ಮಾಡಿದ ಆರೊಪಣೆಗಳನ್ನು ಹೊರಿಸಿ
ಕ್ರಮವಾಗಿ ತನ್ನಿ ನಡಿಸಲಾಯಿತು. ಮತ್ತವ
ರಿಗೆ ಮರಣಾಂತ್ಯದ ವರೆಗೆ ಶಿಕ್ಷೆ ವಿಧಿಸಿ ಕಾರಾ
ಗೃಹದಲ್ಲಿಟ್ಟರು.

### ಅಪರಾಧಿಗಳಿಗೆ ಉದ್ಯೋಗ.

ಆಸ್ಟ್ರೇಲಿಯದ ಮೂಲನಿವಾಸಿ ರೈತರು ಹೆಜ್ಜೆ
ಗಳನ್ನು ಗುರುತಿಸುವುದರಲ್ಲಿ ಬಹಳ ನಿಷ್ಣಾತರೆಂದು
ಮೊದಲೇ ಹೇಳಿರುವೆವು.ಅವರಿಗೆ ಈ ಶಿಕ್ಷಣವನ್ನು
ಬಾಲ್ಯದಿಂದಲೇ ಕೊಡಲಾಗುತ್ತದೆ. ಮೊದ


**ತಮ್ಮ ಮುಂದಿನ ಸುಖದುಃಖವನ್ನು ತಿಳಿಯಲು**

**ಅಪೇಕ್ಷಿಸುವಿರಾ?**

ಹಾಗಾದರೆ ಈ ದಿನವೇ ಕೆಳಗಿನ ವಿಳಾಸಕ್ಕೆ ಅವುಗಳನ್ನು ಬರೆದು ತಿಳಕೊಳ್ಳಿರಿ. ತಮ್ಮ ಜಾತಕವನ್ನು ಸ್ಪುಟ ಮಾಡಿ ಲಾಭನಷ್ಟ, ಸುಖದುಃಖ, ಸಂತತಿವಿಚಾರ, ಆಯುರ್ದಾಯ, ದೆಶಾಭುಕ್ತಿ ಫಲ ಇತ್ಯಾದಿ ವಿಷಯಗಳನ್ನು ತಿಳಿಸುವೆವು. ಇದಲ್ಲದೆ ಮಾಂತ್ರಿಕ ಸಂಬಂಧವಾದ ವಿವಿಧ ಚಿಕಿತ್ಸೆಗಳನ್ನು ಕೈಕೊಳ್ಳಲಾಗುವುದು ಜಾತಕವಿಲ್ಲದವರು ತಮ್ಮ ಜನನ ಸಮಯ, ವಾರ, ತಾರೀಕು, ತಿಂಗಳು ಮತ್ತು ಇಸವಿಯನ್ನು ತಿಳಿಸತಕ್ಕದ್ದು.

**೧ ವರ್ಷ ಫಲದ ಚಾರ್ಜು ರೂ. ೧.**
**೫ ವರ್ಷದಫಲಕ್ಕೆ ಚಾರ್ಜು ರೂ. ೪.**
**ಇಡೀ ಜೀವಮಾನದ ಫಲಕ್ಕೆ**
**ಚಾರ್ಜು ರೂ. ೨೦.**

ಜಾತಕವನ್ನು ಕಳುಹಿಸುವಾಗ ಹಣವನ್ನು ಮುಂಗಡವಾಗಿ ಮನಿಯಾರ್ಡರ್ ಮೂಲಕ ಕಳುಹಿಸತಕ್ಕದ್ದು.

ವಿಳಾಸ: —

**ದುರ್ಗಾದಾಸ ಎ. ನಾರಾಯಣ ಭಟ್.**

ಜ್ಯೋತಿಷಿ ಮತ್ತು ಮಂತ್ರವಾದಿ, ಉಡುಪಿ, ದ. ಕ.



## BUSINESS DIRECTORY

*Contd.*

M. Srinivas Padiyar, Coondapoor.
*Merchants* dealing in all sorts of Cutlery, Stationery, and Fancy goods

B. K. Padmanabha Nayak,
Dealer in all stationrey, Cutlery, Hard-ware, Glass-ware etc, P. O. Brahmavar S. K.

Karamali Kalyan. *Dealers in*
Fancy Glass-ware, Enamel-ware, Crockery ware etc
144, Chuckla St. BOMBAY 3.

M. Srinivasa Kudva & Sons, Ltd.,
*Temple* Square, Udipi.

K. Venkatesha Baliga,
General Mercant & Licensed Dealer in Ammunitions Spirits etc.
Golikatta Bazar Mangalore

Sha Tarachand Manmail,
*General Merchant,*
Naniyappa Naik Street, P. T. Madras,

Sha Motichand Ganeshmall,
*General Merchant,*
No. 4 Narayana Mudali Street Madras

Sha Bhoothajee Punamchand
*General Merchant,*
211 Chaina Bazar Raod. Madras

**Art & Photographic Studioes.**

P. Srinivas Rao,
Artist & Photographer, Udip

U. V. K. Raikar,
Engraver, Block- Maker etc. Udipi S. K

The Eastern Art Studio,
Artists & Photographers.
2128 Gunbow Street Fort **BOMBAY**

M/S Mardyadini & Co.
*Mfrs. Locks & Brass Building Fittin[illegible] Material.*-Pakki Sarai-Aligarh U. P

**Hats and caps materials.**

Naik & Co.,Hats Capsmaterials & Ready made dress suppliers, 89, Peerbho[illegible] Bldg Princes St., Bombay No. [illegible]

ಲಾಗಿ ಅವರು ತಮ್ಮ ಬಾಲಕರಿಗೆ ಪ್ರಾಣಿಗಳ ಹೆಜ್ಜೆಗಳನ್ನು ಗುರುತಿಸಲು ಕಲಿಸುತ್ತಾರೆ. ಹಾವು, ಇಲಿ, ನಾಯಿ, ಬೆಕ್ಕು, ಕಪ್ಪೆ, ವನ್ಯಮೃಗಗಳು, ಪಕ್ಷಿಗಳು ಇವುಗಳ ಹೆಜ್ಜೆಗಳ ಗುರುತನ್ನು ಮುಂದಾಗಿ ಹೇಳಿಕೊಡುತ್ತಾರೆ. ಅನಂತರ ದೊಡ್ಡ ವರಾದ ಮೇಲೆ ಅವರು ಕುದುರೆ, ಜಾನುವಾರು, ಮನುಷ್ಯರ ಹೆಜ್ಜೆಗಳನ್ನೂ ಬಹು ಸುಲಭವಾಗಿ ಗುರುತಿಸಬಲ್ಲವರಾಗುತ್ತಾರೆ ಆ ಜನರಲ್ಲಿ ಧೈರ್ಯ, ಸಾಹಸ, ಸಹನಾಶಕ್ತಿ ಬಹಳವಾಗಿದೆ.

ಆಸ್ಟ್ರೇಲಿಯದ ಬಿಳಿ ಜನರು ಈ ಕಾಡು ಜನರನ್ನು ಹಿಡಿದು ಜೈಲಿನಲ್ಲಿ ಹಾಕುವುದಿದೆ. ಅವರ ಶಿಕ್ಷೆಯ ಅವಧಿಯು ಮುಗಿದ ಮೇಲೆ ಅವರನ್ನು ತಿರುಗಿ ಕಾಡಿಗೆ ಅಟ್ಟಿಬಿಡದೆ, ಅವರನ್ನು ಹೆಜ್ಜೆಗಳನ್ನು ಗುರುತಿಸುವ ತಮ್ಮ ನೌಕರರನ್ನಾಗಿ ತಮ್ಮ ಕೆಲಸಕ್ಕೆ ಇಟ್ಟುಕೊಳ್ಳುತ್ತಾರೆ. ಖೂನಿ ಮಾಡಿದ ಆರೋಪದ ಮೇಲೆ ೧೦ವರ್ಷಗಳ ಕಾರ್ಗ್ರಹ ಶಿಕ್ಷೆಗೊಳಗಾದ ಮತ್ತು ೨ವರ್ಷಗಳೊಳಗೆ ತಪ್ಪಿಸಿಕೊಂಡ ಒಬ್ಬ ಅಪರಾಧಿಯನ್ನು ಹಿಡಿದು ಹೆಜ್ಜೆಗಳನ್ನು ಕಂಡುಹಿಡಿಯುವ ಕೆಲಸಕ್ಕೆ ನೇಮಿಸಿದ್ದರು. ಅವನ ಬುದ್ಧಿಚಾತುರ್ಯವನ್ನು ಕಂಡು ಬಿಳಿ ಜನರು ಚಕಿತರಾದರು. ಅವನು ನೂರಾರು ಜನರನ್ನು ಹೆಜ್ಜೆಗಳ ಗುರುತಿನಿಂದ ಹಿಡಿದುಕೊಟ್ಟನು. ಅವನ ಈ ಬುದ್ಧಿಚಾತುರ್ಯಗಳಿಂದ ಬೆರಗಾದ ಬಿಳಿ ಜನರು ಅವನನ್ನು ಪ್ರಸನ್ನಮಾಡಿಕೊಳ್ಳಲು ಬೇಕಾದಷ್ಟು ಪ್ರಯತ್ನಿಸುತ್ತಿದ್ದರು.!

### ಬಾದಶಾಹಿ ಮೆಡಲ್! ಬಹುಮಾನ!

ಸ್ವಲ್ಪ ಸಮಯದ ಹಿಂದೆ ಒಬ್ಬ ಜಂಗಲಿ ಮನುಷ್ಯನಿಗೆ ಅವನ ಜಾಣತನಕ್ಕಾಗಿ ಪಂಚಮ ಜೋರ್ಜ ಅಲ್ಬರ್ಟ ಮೆಡಲು ಒಂದನ್ನು ಬಹುಮಾನವಾಗಿ ಕೊಡಲಾಗಿದೆ. ಈ ಗುನ್ಹೆಗಾರನನ್ನು, ದನಗಳನ್ನೂ ಹತ್ಯಾರಗಳನ್ನೂ ಕಳವುಮಾಡಿದ ಆರೋಪದ ಮೇಲೆ ಹಿಡಿಯಲಾಗಿತ್ತು. ಅವನ ಕೈಕಾಲುಗಳಿಗೆ ಕೋಳವನ್ನು ಹಾಕಲಾಗಿದ್ದಿತು. ಬಹಳ ಜೋರಾಗಿ ಮಳೆ ಬರುತ್ತಿದ್ದ ಸಮಯವಾದುದರಿಂದ ನದಿನಾಲೆಗಳಿಗೆ ನೆರೆ ಬಂದಿತ್ತು. ಅವನನ್ನು ಸೆರೆಹಿಡಿದ ಪೋಲೀಸನು ಒಂದು ನಾಲೆಯ ಸಮೀಪದಿಂದ ಹಾದುಹೋಗುತ್ತಿದ್ದಾಗ ಮಣ್ಣು ಕುಸಿದು, ಕುದುರೆಯ ಕಾಲು ಜಾರಿ ಅದು ಬಿದ್ದಿತು. ಸವಾರನು ಕುದುರೆಯನ್ನು ಮೇಲಕ್ಕೆತ್ತಲು ಪ್ರಯತ್ನಿಸುತ್ತಿದ್ದಾಗ ಆ ಕುದುರೆಯು ಕಾಲಿನಿಂದ ಒದೆದ ಕಾರಣ ಪೋಲೀಸ ಸಿಪಾಯಿಯು ಮೂರ್ಛೆಗೊಂಡು, ಸಮೀಪದ ಪ್ರವಾಹದಲ್ಲಿ ಬಿದ್ದು ತೇಲಿ ಹೋಗತೊಡಗಿದನು. ಆಗ ಕೈಕಾಲುಗಳಲ್ಲಿ ಕೋಳವಿದ್ದರೂ, ಅಲ್ಲಿ ಅವನನ್ನು ತಡೆಯುವವರಿಲ್ಲದ ಕಾರಣ ಅವನಿಗೆ ಓಡಿ ಹೋಗಲು ಸಾಧ್ಯವಿತ್ತಾದರೂ, ಅವನು ಆ ರೀತಿ ಓಡದೆ ನೀರೊಳಗೆ ಮೂರ್ಛಾಗತನಾಗಿ ಬಿದ್ದು ತೇಲಿ ಹೋಗುತ್ತಿದ್ದ ಪೋಲೀಸನ ಪ್ರಾಣವನ್ನು ತನ್ನ ಪ್ರಾಣದಾಸೆ ಬಿಟ್ಟು ಉಳಿಸಿದನು! ಇಂತಹ ಔದಾರ್ಯ ಮತ್ತು ಶೂರತನಕ್ಕಾಗಿ ಆಸ್ಟ್ರೇಲಿಯಾದ ಸರಕಾರದವರು ಸಂತೋಷಪಟ್ಟು ಅವನಿಗೆ ಬಾದಶಾಹಿಮೆಡಲನ್ನು ಬಹುಮಾನವಾಗಿ ಕೊಟ್ಟರು. ಈ ಮಹಾಶಯನನ್ನು ಅಲ್ಲಿಯ ಸರಕಾರದವರು ಈಗಲೂ ಹೆಜ್ಜೆಯನ್ನು ಗುರುತಿಸುವ ಉದ್ಯೋಗದಲ್ಲಿ ಇಟ್ಟಿರುವರು!

### ಹೆಜ್ಜೆಗಳನ್ನು ಗುರುತಿಸುವ ಜನರ ಅದ್ಭುತ ಸ್ಮರಣಶಕ್ತಿ.

ಕೆಲವೇ ತಿಂಗಳ ಹಿಂದೆ ವಿಕ್ಟೋರಿಯಾ ನದಿ ಪ್ರದೇಶದಲ್ಲಿ ನೇಯುತ್ತಿದ್ದ ೩೦೦ ಜಾನುವಾರುಗಳನ್ನು ಮೂಲನಿವಾಸಿಗಳು ಹರಣಮಾಡಿಬಿಟ್ಟರು. ಅಪರಾಧಿಗಳನ್ನು ಹುಡುಕಿ ತೆಗೆಯುವ ಕೆಲಸವು ಬಹಳ ಬಿಕ್ಕಟ್ಟಿನದಾಗಿತ್ತು. ಹೆಜ್ಜೆಗಳನ್ನು ಗುರುತಿಸುವ ಜನರು ಆ ಜಾನುವಾರುಗಳ ಹೆಜ್ಜೆಗಳ ಶೋಧದಿಂದ ೧೫೦ ಮೈಲು ದೂರಕ್ಕೆ ಕೊಂಡುಹೋದ ಆ ಜಾನುವಾರುಗಳನ್ನು ಪತ್ತೆ ಹಚ್ಚಿಕೊಟ್ಟರು. ಪೋಲೀಸರು ಜಾನುವಾರುಗಳನ್ನು ಹುಡುಕಿಕೊಂಡು ಹೋಗಿ ೧೫೦ ಮೈಲು ದೂರವಿರುವ ಆ ಗುಡಿಸಲಿನ ಮುಂದೆ ತಲಪಿದ ಸಮಯಕ್ಕೆ, ಆ ಜಾನುವಾರುಗಳ ಮೈವೇಲಿನ ಗುರುತುಗಳನ್ನು ಬದಲಾಯಿಸ ಹತ್ತಿದ್ದರು.

ಹೆಜ್ಜೆಗಳನ್ನು ಗುರುತಿಸುವ ಈ ಜನರ ಸ್ಮರಣಶಕ್ತಿಯು ಎಷ್ಟು ಅದ್ಭುತವಾಗಿರುವುದೆಂದರೆ, ಅದನ್ನು ಕೇಳುವಾಗಲೇ ನಮಗೆ ಆಶ್ಚರ್ಯವಾಗುತ್ತದೆ. ಕಂಡರಂತೂ ಧಿಗ್ಭ್ರಮೆಗೊಳ್ಳುವಂತಾಗದಿರದು. ಒಂದು ಸಲ ಒಬ್ಬ ಪೋಲೀಸ ಸಿಪಾಯಿಯು ದಪ್ಪವಾದ ಕಾಡು ಪೊದೆಗಳಿಂದ ಹಾದು ಹೋಗುತ್ತಿದ್ದನು. ಅವನೊಂದಿಗೆ ಹೆಜ್ಜೆಗಳನ್ನು ಗುರುತಿಸುವವರಿದ್ದರು. ಆಗ ಒಬ್ಬ ಹೇಳಿದ "ಈ ಹೆಜ್ಜೆಗಳು ನನ್ನ ತಾಯಿತಂದೆಗಳವಾಗಿವೆ. ಅವರು ಇಲ್ಲಿಂದ ಸ್ವಲ್ಪ ಮುಂದಕ್ಕಿರಬೇಕು." ಆ ಹೆಜ್ಜೆ ಗುರುತಿಸುವವನು ಹೇಳಿದ ಮಾತಿನ ಅರ್ಥವು ಪೋಲೀಸನಿಗೆ ಸರಿಯಾಗಿ ತಿಳಿಯಲಿಲ್ಲ. ಆದರೆ ಸ್ವಲ್ಪ ಸಮಯದೊಳಗೆ ಪೋಲೀಸನಿಗೆ ತನ್ನ ಸಂಗಾತಿಯು ಹೇಳಿದ ಮಾತು ನಿಜವಾದುದೆಂದು ತಿಳಿಯಿತು. ಅವರು ಒಂದು ಮೈಲು ಮುಂದಕ್ಕೆ ಹೋದಾಗ ಅಲ್ಲಿ ಆ ಹೆಜ್ಜೆ ಗುರುತಿಸುವವನ ತಾಯ್ತಂದೆಯರು ತಾವು ಶಿಕಾರಿ ಮಾಡಿದ ಪ್ರಾಣಿಯ ಮಾಂಸವನ್ನು ಬೇಯಿಸಿ ಸಂತೋಷದಿಂದ ತಿಂದು ಮುಗಿಸತೊಡಗಿದ್ದರು!


## BUSINESS DIRECTORY.

*Contd.*

**Picture and Framing Works.**

The Phoenix Framing Works,
Temple square, Udipi.

**Printing Presses.**

P. Narayana Prabhu.
PRABHAKARA PRESS UDIPI.
THULUNAD PRESS UDIPI.

**Stationery Suppliers.**

Srinivasa Brothers,
Car Street, Mangalore.
Suppliers of Paper, Printing Inks, etc.

**Aerated Water Essences.**

Mody & Co.
*Manufacturers & Suppliers of*
'Viola' Brand Fruit, Essences etc.
Engineer Bldg. Princess St. BOMBAY

**Harmoniums.**

M. K. Koragappa, *Proprietor.*
Mohini Harmonium Works, Udipi.

U. Vyasa Rao's White Shop, Udipi.
*Spl. Agent for*, Orr & Son & Ganga Works
Madras & Authd. Dealer in Colambia,
Odeon, Hutchins, Records & etc

**Brokers & Commission Agents.**

Aryan Stores,
*Brokers of Cargo to & fro Ceylon,*
Hoige Bazar Mangalore.

**Pain Balm**

Amrutanjan Ltd.
Thumbuchetty Street, Madras, 7.

**Soap Manufacturers.**

The Imperial Soap Factory,
*Props:-* R. M. Mohamed Ali & Bro
P. O, Mattancherry, (Cochin.)

M. Moloobhai & Co.,
*Glassware Merchant*, 172-74, Chuckla
Street, BOMBAY No. 3.

**Boarding & Lodging Houses.**

The Udipi National Lodge,
Durgigudi, SHIMOGA.

# ಪೌರಾತ್ಯದಲ್ಲಿನ 'ಮರೂಜಾತಿ'ಯ ರಹಸ್ಯ

ಪೌರಾತ್ಯ ದೇಶಗಳಲ್ಲಿನ ವಿಚಿತ್ರ ಜನಾಂಗಗಳು

- ನಾಯಿ ಮಾಂಸ ಭಕ್ಷಕರು ಇದುವರೆಗೆ ಇಲ್ಲವೆಂದು ಭಾವಿಸಲಾಗಿತ್ತು, ಈ ಪರ್ವತ ಪ್ರದೇಶದಲ್ಲಿ ಅದನ್ನು ತಿನ್ನತಕ್ಕವರು ಇದ್ದಾರೆಂದು ತಿಳಿಯಿತು.
- ಗೋನೃತ್ಯದ ಹೆಸರಿನಲ್ಲಿ ಕುಣಿಕುಣಿದು ಸಿಕ್ಕ ಪಶುಗಳನ್ನೆಲ್ಲಾ ಕರಕರನೆ ಕಡಿಯುತ್ತಿರುವರು ಈ ಜನರು.
- ಒಂದು ಮನೆಯಿಂದ ಮತ್ತೊಂದು ಮನೆಗೆ ಒಂದು ಮೈಲು ದೂರ, ಒಂದೊಂದು ಮನೆಯಲ್ಲಿ ಅರ್ವತ್ತೈದ್ಪತ್ತು ಜನರು.
- ಸ್ನಾನದಲ್ಲಿ ಅಪ್ರೀತಿ, ಕೈಗಾರಿಕೆಯಲ್ಲಿ ಬಹಳ ಪ್ರೀತಿ, ಮೂರು ಗೇಣುದ್ದ ಬಟ್ಟೆ ಉಡುವ ಈ ಜಾತಿಯ ಸಂಪೂರ್ಣ ಆಚಾರ ವಿಚಾರಗಳನ್ನು ಅವಮೂಲಾಗ್ರವಾಗಿ ಓದಿನೋಡಿರಿ!

ಪೌರಾತ್ಯ ಚಟ್ಟಾಮದಲ್ಲಿನ ಅಧಿವಾಸಿಗಳ ವಿಚಯವು ನಿಮಗೆಲ್ಲರಿಗೂ ಅತಿ ವಿಚಿತ್ರವಾಗಿ ಂಡೀತು. ಚಾಕೂಮ, ಮೆಗ್, ಕ್ರಿಪೂರಾ, ಕಿ, ಲುಮಾಯಿ ಮುಂತಾದ ದೇಶಗಳ ಅನೇಕ ಚಿತ್ರ ಸಂಪ್ರದಾಯಗಳಂತೆ ಇವರದ್ದೂ ಒಂದು ಚಿತ್ರ ಸಂಪ್ರದಾಯವಾಗಿರುವುದು. ಇವರ ತಿಕ್ರೆಯು ಇದುವರೆಗೂ ಇತಿಹಾಸದ ಪುಟ ನ್ನಲಂಕರಿಸಿಲ್ಲ. ಆದುದರಿಂದಲೇ ಇವರು ಇಷ್ಟು ೋಪ್ಯವಾಗಿರುವದು. ಇವರನ್ನು ಮುರೂ ಜಾತಿ ುವರೆಂದು ಕರೆಯುತ್ತಾರೆ. ಇವರ ಆಚಾರವಿಚಾರ ಳನ್ನರಿಯಲು ನಿಮಗೂ ಹೆಚ್ಚಿನ ಕುತೂಹಲ ುರಬಹುದು. ಈ ಜಾತಿ ಸುಧಾರಣಾಪ್ರಕಾಶ ಂದ ಬಹಳ ದೂರವಿರುವ ಜಾತಿ. ಇಂದಿಗೂ ಕಾಗೆಯೇ ಇದೆ. ಇನ್ನು ಹೇಗೆಂದು ಮಾತ್ರ ೀಳ ಬರುವುದಿಲ್ಲ. ಕಾರಣ ಎಷ್ಟೋ ಸಂಸ್ಕೃತಿ ೀನ ಗೋಪ್ಯರಾಷ್ಟ್ರಗಳು ಈಗೀಗ ಸುಧಾ ಣೆಯ ಪಥವನ್ನು ಹಿಟ್ಟುತ್ತಲಿರುವ ವಿಷಯ ನಾವೆಲ್ಲರೂ ತಿಳಿದಿರುತ್ತೇವೆ. ಜನತಾಶಿಕ್ಷಣ ಂದರೆ ಕೆಲಸ ಏಷ್ಟೇ ವಿನಹ ಬೇರಾವ ಭಾಷಾ ಕ್ಷಣ, ವಿದ್ಯಾಭ್ಯಾಸ, ಮುಂತಾದವುಗಳ ಸುಳಿ ಲ್ಲ ಅಲ್ಲ. ಈ ದೇಶದಲ್ಲಿನ ಆಚಾರ ವಿಚಾರಗಳ ರಿವನ್ನು ಂಟುಮಾಡಿಕೊಳ್ಳಲು ಪ್ರಭೃತಿಗಳು ುಹಾಕಷ್ಟ ಪಟ್ಟರು. ಹಾಗೆಂದು ಈ ಮುರೂ ಳು ಸಾಹಸಿಗರಲ್ಲ. ಬರೇ ಒಡ್ಡರ ಜಾತಿ ಂದರೂ ಸರಿಯೆ! ಪರ ರಾಷ್ಟ್ರಗಳಲ್ಲಿನ ಪೋಲೀ ರು ಕಾರ್ಯಾಂತರದಿಂದ ಅಲ್ಲಿ ಹೋಗುವು ದುಂಟು. ಆಗ ಕಾಣಬೇಕು ಅವರ ತಮಾಷೆ. ಥೊರೆ ಬಂದಾ ಅಂದರೆ ಸರಿ, ಕೆಲವರು ಅಟ್ಟದ ಮೇಲೇ, ಕೆಲವರು ಮರಗಳ ತುದಿಯಲ್ಲಿ, ಕೆಲವರು ಪೊದೆ ಪೊದರುಗಳಲ್ಲಿ ಅಂತೂ ಒಬ್ಬನೂ ಥೊರೆಯನ್ನು ಕಾಣಲಿಕ್ಕಿಲ್ಲ. ಅಂದರೆ ಅವನ ಮೇಲೆ ದ್ವೇಷ, ಅಥವಾ ತಿರಸ್ಕಾರ ಪಟ್ಟಲ್ಲ, ಹೆದರಿಕೆಯಿಂದ! ಪ್ರತಿಹಿಂಸೆಯ ನಿವೃತ್ತಿಸಹಿತ ಮಾನವನ ನಿಷ್ಕೂರ ಭಾವಗಳ ಹತ್ಯಮಾಡಲೂ ಹಿಂಜರಿಯದವರಿವರು! ಪೃಭೃತಿಗಳು ಇವರನ್ನು ಸಂಸ್ಕೃತರನ್ನಾಗಿ ಮಾಡಲು ಬಹು ಪ್ರಯತ್ನ ಪಟ್ಟರು- "ಮೊದಲನೇ ತರಗತಿಯಿಂದ ನಾಲ್ಕನೇ ತರಗತಿಯ ವರೆಗಿನ ಸಾಧಾರಣ ಶಿಕ್ಷಣದ ಶಾಲೆಗಳನ್ನು ತೆರೆದರು. ಹುಡುಗರೇನೋ ಬಂದರು. ಅದೂ ಅತೀ ಪ್ರಯಾಸದಿಂದ. ನಾಲ್ಕು ವರ್ಷ ಒಂದೇ ಸವನೆ ಮಾಸ್ತರರು ಗಂಟಲು ಒಡೆದು ಹೋಗುವವರೇಗೂ ಕಿರುಚಿಕೊಂಡರೂ ಒಬ್ಬನೂ ಮೊದಲನೇ ತರಗತಿಯಿಂದ ಎರಡನೇ ಯದಕ್ಕೆ ಕಾಲಿಡಲಿಲ್ಲ. ಝೂನ್ ಎಂಬೊಂದು ಪದಾರ್ಥ ಮತ್ತು ಚಹಾ ಇವೆರಡರಿಂದ ಅವರ ಜೀವನ ನಿರ್ವಾಹಣ. ಹೆಂಗಸರೆಲ್ಲರೂ ದುಡಿಯುವವರು! ಪುರುಷರು ಸುಮ್ಮನೇ ಕೂತರೂ ಅಡ್ಡಿಯಿಲ್ಲ, ಕೇಳುವವರಿಲ್ಲ. ನದೀ ನೀರಿಗಾಗಿ ಹೆಂಗಸರು ಅರ್ಧ ಮೈಲಿಯಷ್ಟು ದೂರ ಹೋಗಬೇಕು. ಅಲ್ಲಿಂದ ನೀರನ್ನೂ ಬರಬರುತ್ತ ಕಟ್ಟಿಗೆಯನ್ನೂ ತಂದು ಅಡಿಗೆ ಮಾಡಬೇಕು. ಮೇಲೆ ಮಕ್ಕಳನ್ನು ಪೋಷಿಸಬೇಕು! ಇವೆಲ್ಲವನ್ನೂ ಚಾಚೂ ತಪ್ಪದೇ ಅವರು ಮಾಡುತ್ತಾರೆ! ಅವರ ಮನೆಗಳೆಂದರೆ ಸಣ್ಣ ಪುಟ್ಟ ಗುಡಿಸಲುಗಳಲ್ಲ. ವಿಶಾಲವಾದ ಗುಡಿಸಲುಗಳು. ಅಂದರೆ ಅಂತಹದೇ ಒಂದು ಪೇಟೆಯಲ್ಲಿದ್ದರೆ ಮಾಸಿಕ ನಾಲ್ವತ್ತೈವತ್ತು ರೂಪ್ಯಾ ಬಾಡಿಗೆ ತೆರುವಂತಹುದು. ಎಲ್ಲದಕ್ಕಿಂತ ಆಶ್ಚರ್ಯವೆಂದರೆ ಇವೆಲ್ಲ ಮನೆಗಳಿರುವುದು ಗಿರಿಗಳ ಮೇಲೆ. ಬಯಲು ಪ್ರದೇಶಗಳಲ್ಲಿ ಬಾಳಕ ಕಮ್ಮಿ. ಅದರಲ್ಲೂ, ಒಂದು ಮನೆಯಿಂದ ಮತ್ತೊಂದು ಮನೆಗೆ ಕನಿಷ್ಟಪಕ್ಷ ಎಳೆಂಟು ಫರ್ಲಾಂಗ್ ದೂರ. ಹಾಗೆಂದು ಒಂದೊಂದು ಮನೆಯಲ್ಲಿರುವ ಜನ ಸಾಧಾರಣ ಅರ್ವತ್ತೈವತ್ತು ಮಂದಿ. ಆ ಗಿರಿಗಳಲ್ಲಿನ ಅಂಕುಡೊಂಕು ಕಾಲುಹಾದಿಯ ಮೂಲಕ ಆ ಕಠಿಣ ಕಾನನದಿಂದ ಬಯಲು ಪ್ರದೇಶಕ್ಕೆ ಇಳಿದು ಬಂದು ನೀರನ್ನೂ ಕಟ್ಟಿಗೆಯನ್ನೂ ದಿನನಿತ್ಯ ತೆಗೆದುಕೊಂಡು ಹೋಗುವುದು ಸರಿಪಾಠ ಹೆಂಗಸರದು. ಇಲ್ಲಿಯವರಾಗಿದ್ದರೆ ಆ ಸ್ಥಿತಿಯಲ್ಲಿ ಗಂಡನನ್ನು ಯಾವ ರೀತಿ ಮಾಡುತ್ತಿದ್ದರೋ ಏನೊ? ಹೆಚ್ಚಿನ ನೀರಿನ ಅವಶ್ಯಕತೆ ಅವರಿಗಿಲ್ಲ. ಪಾಕಕ್ಕೆ ಬೇಕಾಗುವಷ್ಟು ಮಾತ್ರ. ಮತ್ತೆ ಸ್ನಾನಗೀನಕ್ಕೆ....ಮಾಡುವುದೇ ಇಲ್ಲ. ಸ್ನಾನದ ಅವಶ್ಯಕತೆ ಅವರಿಗೆ ಹೆಚ್ಚಿಗಿಲ್ಲ. ಒಂದುವೇಳೆ ಮೈ ತುಂಬಾ ಕೆಸರುಗಿಸರಾದರೆ ಹೋದ, ಮುಳುಗಿದ ಬಂದ. ತೀರಿತು ಅವರ ಸ್ನಾನ! ಹೆಂಗಸರೂ ಪುರುಷರನ್ನು ಬಿಟ್ಟಿಲ್ಲ. ಸ್ತ್ರೀಯರ ಉಡಿಗೆ ತೊಡಿಗೆಗಳಂತೂ ಇತ್ತೀಚೆಗಿನ ಪದ್ಧತಿಗನುಸಾರವಾಗಿವೆ ಎಂದು ಹೇಳಬಹುದು. ಹೇಗೆಂಬಿರಾ? ಇತ್ತೀಚೆಗಿನ ವಸ್ತ್ರಗಳನ್ನು ಮೈ ತುಂಬಾ ಹಾಕಿಕೊಂಡರೂ ದೇಹ ಪ್ರದರ್ಶನವಾಗುತ್ತದೆ. ಅದೇ ರೀತಿ ಅವರು ಮೈ ತುಂಬಾ ಒಟ್ಟೆ ಹಾಕಿಕೊಳ್ಳದೆ, ಕೇವಲ ಒಂದು ಮುಕ್ಕಾಲು ಫೂಟಿನ ವಸ್ತ್ರವನ್ನು ಸೊಂಟಕ್ಕೆ ಸುತ್ತಿ ತಮ್ಮ ದೇಹ ಪ್ರದರ್ಶನ ಮಾಡುತ್ತಾರೆ! ಇನ್ನು ಉದ್ದವಾಗಿ ಬಂದ ಕೇಶಪಾಶಗಳನ್ನು ಹಾಗೆಯೇ ಬಿಡದೆ ಮುಡಿಯನ್ನು ಕಟ್ಟದೆ, ಹಗ್ಗ ಸುತ್ತಿಕೊಂಡ ಹಾಗೆ ತಲೆ ತುಂಬ ಸುತ್ತಿಕೊಳ್ಳುತ್ತಾರೆ. ಮತ್ತು ನಮ್ಮಲ್ಲಿನ ಪವನಿನ ಸರದಂತಿರುವ ಆದೊಂದು ಬಗೆಯ ಸರವನ್ನು ಉದ್ದವಾಗಿ ಕುತ್ತಿಗೆಗೆ ಹಾಕಿಕೊಳ್ಳುತ್ತಾರೆ. ಇದಿಷ್ಟರ ವಿನಹ ಬೇರಾವ ಆಭರಣವೂ ಅವರಿಗಿಲ್ಲ. ಅಪರಿಚಿತ ಯುವಕರಾರಾದರೂ ಈ ಸ್ತ್ರೀಯರೊಡನೆ ಒಬ್ಬೊಬ್ಬರಾಗಿ ಒಂದು ಮನೆಯಿಂದ ಮತ್ತೊಂದು ಮನೆಗೆ ಯಾವ ಆತಂಕವಿಲ್ಲದೆ ಹೋಗಬಹುದು.

ಆದರೆ. ಆ ಯುವಕನು ಮರೂ ಜಾತಿಯವನೇ ಆಗಬೇಕು. ಅನ್ಯ ಜಾತಿಯವನಾದರೆ ಅದು ಸಹ ಆಗಲಿಕ್ಕಿಲ್ಲ. ಅವರಲ್ಲಿ ಕುಸಂಸ್ಕಾರಗಳು ಹಲವಿನೆ. ಪರಸ್ಪರ ಕಲಹಗಳುಂಟಾದಲ್ಲಿ ಹೆಂಗಸರು ಆ ಜನ್ಮದಲ್ಲಿ ಪುರುಷರೊಡನೆ ರಾಜೀ ಮಾಡಿ ಕೊಳ್ಳತಕ್ಕವರಲ್ಲ ಅಂತಹ ಹಠ ಸ್ವಭಾವಿಗಳು. ಒಮ್ಮೊಮ್ಮೆ ಇಂತಹ ಸಂದರ್ಭಗಳಲ್ಲಿ ರಾಜೀ ಮಾಡಿಕೊಳ್ಳಬೇಸುಗ, ಚರ್ಮವೇಳುವ ಪರಿಯಂತ ಹೆಂಗಸರಿಗೆ ಹೊಡಿಯುವುದೂ ಉಂಟು. ಗಂಡಸರು ಹೆಂಗಸರಂತೆ ನಮ್ಮಲ್ಲಿಯವರು ಕಾಟಾ ಹೊಡೆಯುವಂತೆ ಮೂರುವರೆ ಗೇಣು ಬಟ್ಟೆಯುಟ್ಟು ಸಿಲ್ಕಿನ ಕೋಟನಂತಿರುವ ಅಂಗಿಯನ್ನು ಹಾಕಿಕೊಳ್ಳುತ್ತಾರೆ. ಮತ್ತು ತಲೆಗೆ ಉದ್ದವಾದ ಫೇಟಾ ಸುತ್ತಿಕೊಳ್ಳುತ್ತಾರೆ. ಈ ದೇಶದಲ್ಲಿ ಪ್ರಶಿಯೋರ್ವ ಸ್ತ್ರೀ ಪುರುಷರು ನಿರೋಗಿಗಳಾಗಿದ್ದು, ಧೃಢಕಾಯರಾಗಿದ್ದಾರೆ. ವೈಶಿಷ್ಟ್ಯವೇನೆಂದರೆ ಇವರಲ್ಲಿ ಕೆಳಭಾಗವು ಗಿಡ್ಡ. ಮೇಲ್ಭಾಗವು ಉದ್ದ. ಇವರಲ್ಲಿ ಬಹು ಸುಂದರವಾಗಿ ಕಥೆಗಳನ್ನು ಕಲ್ಪಿಸಿ ಹೇಳತಕ್ಕವರು ಬಹಳ ಹೆಚ್ಚು. ಭಾಷೆಯು ಬಹು ನಮ್ರ. ಮೆಲ್ಲಗೆ ಮಾತಾಡತಕ್ಕವರು. ಶಾಂತ ಪ್ರಕೃತಿ. ಫಕ್ಕನೆ ಇವರಲ್ಲಿ ಜಗಳವಾದರೂ ಅದು ಗಂಭೀರ ತರವಾದ ಜಗಳವೇ ವಿನಹ ಸಿಕ್ಕಾಬಟ್ಟೆ ಬೈದು ಕೊಂಡು, ಹೊಡೆದು ಬಡೆದುಕೊಂಡು, ಮಾಡುವ ಜಗಳವಲ್ಲ.. ಒಂದು ವೇಳೆ ಹೊಡೆವ ಬಡೆವ ಜಗಳವು ಉಂಟಾದರೆ, ವಿಕ್ಕವರೆಲ್ಲ ಸೇರಿ ಇಬ್ಬರನ್ನೂ ಒಂದೊಂದು ದಿಕ್ಕಿಗೆ ಒಬ್ಬನಂತೆ ಬಹು ದೂರಕ್ಕೆ ಓಡಿಸಿ ಬಿಡುತ್ತಾರೆ. ಇವರಲ್ಲಿ ನೃತ್ಯದ ಹುಚ್ಚು ಬಹಳ ಜನರಿಗಿದೆ. ಇವರ ನರ್ತನಗಳಲ್ಲಿ ಪ್ರಧಾನ ನೃತ್ಯವೆಂದರೆ ಗೋನೃತ್ಯ. ಈ ನೃತ್ಯಕಾಲದಲ್ಲಿ ಎಮ್ಮೆ, ದನ, ಕೋಣ ಮುಂತಾದುವುಗಳನ್ನು ಕರಕರನೆ ಕಡಿದು ಬಿಡುತ್ತಾರೆ. ಈ ಗೋಹತ್ಯಾ ಕಾಂಡದ ಹೆಸರೇ ಗೋನೃತ್ಯ. ಈ ನೃತ್ಯವಾಗುವ ಒಂದು ದಿನದ ಮುಂಚೆ ವಧ್ಯಪಶುಗಳನ್ನು ಚೆನ್ನಾಗಿ ಸ್ನಾನ ಮಾಡಿಸಿ ಕಾಡು ಹೂಗಳ ಮಾಲೆಯನ್ನು ಅವುಗಳ ಕೊರಳಿಗೆ ಹಾಕಿ, ಇದ್ದ ಗಿರಿಗಳನ್ನೆಲ್ಲಾ ಸುತ್ತ ಬಿಡುತ್ತಾರೆ. ಇವೆಲ್ಲಾ ಪದ್ಧತಿಗಳು ಹೆಚ್ಚಾಗಿ ಅವಿವಾಹಿತ ಸ್ತ್ರೀಯರ ಕೈಯಿಂದಲೇ ಆಗಬೇಕೆಂದು ನಿಯಮವಿದೆ. ನೃತ್ಯದ ದಿನ ಕುಮಾರಿಕೆಯರೆಲ್ಲಾ ಶೃಂಗರಿಸಿಕೊಂಡು ವಧ್ಯಸ್ಥಾನದ ನಡುವೆ ಪಶುಗಳೊಂದಿಗೆ ನಿಲ್ಲಬೇಕು. ಈ ಸಮಯದಲ್ಲಿ ಒಬ್ಬೊಬ್ಬನು ಒಬ್ಬೊಬ್ಬಳೊಡನೆ ತಮಗಿಷ್ಟ ಬಂದಂತೆ ಕುಣಿಯಬಹುದು. ನೃತ್ಯ ವಾರಂಭವಾಗುವಾಗ ಪ್ರಥಮತ ಹುಡುಗಿಯರೇ ಕುಣಿಯುತ್ತಾರೆ. ಅನಂತರ ಪುರುಷರು ಮಾತ್ರ. ಕೊನೆಗೆ ಎಲ್ಲರೂ ಒಟ್ಟಾಗಿ. ಈ ಸಮಯ ಅದೊಂದು ನಿಚಿತ್ರಧ್ವನಿಯನ್ನು ಕೊಡುವ ಕೊಂಬಿನಂತಿರುವ ವಾದ್ಯವನ್ನು ಬಾರಿಸುತ್ತಲೇ ಇರುತ್ತಾರೆ ಅಲ್ಲದೆ ಇವರಲ್ಲಿನ ಇನ್ನೊಂದು ನಿಯಮವೇನೆಂದರೆ ವಿವಾಹಿತಸ್ತ್ರೀಯರು ಈ ಕೂಟದಲ್ಲಿ ಸೇರಬಾರದು. ಪುರುಷರಿಗೆ ಯಾವ ನಿಯಮವೂ ಇಲ್ಲ. ಈಡೀರಾತ್ರಿ ಒಂದು ದಳವಾದನಂತರ ಮತ್ತೊಂದು ದಳ. ಹೀಗೆ ಕುಣಿಯುತ್ತಲೇ ಇರಬೇಕು. ನಾಟ್ಯ ಮುಗಿದ ನಂತರ ಧರ್ಮಗುರುವು ವಧ್ಯ ಪಶುಗಳನ್ನು ನಿರ್ದಾಕ್ಷಿಣ್ಯ


## ವರ್ತಕ ವ್ಯವಹಾರ ಕೋಶ

**ಆಯುರ್ವೇದ ಔಷಧಾಲಯಗಳು.**

ಪಂಡಿತ ಎಸ್. ವಾದಿರಾಜ ಉಪಾಧ್ಯ,
ಕೃಷ್ಣಾನಂದ ಆಯುರ್ವೇದ ವೈದ್ಯಶಾಲಾ.
ಶಾಸ್ತ್ರೋಕ್ತ ಸರ್ವವಿಧ ಅರಿಷ್ಟಾಸವ ಘೃತ, ತೈಲ ಮಾತ್ರಾ ಲೇಹ್ಯಾದಿಗಳನ್ನು ಬಳಕೆಗೆ ಎದ್ದ ಗೊಳಿಸುವವರು.
ಉಡುಪಿ, ದ. ಕ.

ಕೆ. ಆರ್. ಪ್ರಭು, ಪ್ರೊಪ್ರೈಟರ್,
ಸ್ವದೇಶಿ ಔಷಧ ಭಂಡಾರ, ಕುಂಜಾಲು.
ಪೋಸ್ಟು — ಬ್ರಹ್ಮಾವರ, ದ. ಕ.

ವೈದ್ಯ ಕೆ. ರಾಮ ಬಲ್ಯಾಯ,
ಜ್ಯೋತಿಷ್ಯ ಮತ್ತು ವೈದ್ಯ,
ಅತಿ ಕಡಿಮೆ ದರದಲ್ಲಿ ಜಾತಕ ಶುದ್ಧಮಾಡಿಕೊಡುವವರು
ಮಂಗಳಪೇಟೆ, ಸುರತ್ಕಲ್ ಪೋಸ್ಟ್, (ದ. ಕ.)

**ಸ್ಟೇಶನರಿ ಮತ್ತು ಭಂಗಾರದ ಗಿಲ್ಟಿನ ಆಭರಣಗಳ ವ್ಯಾಪಾರಸ್ಥರು.**

ಪಾಡಿಗಾರು ಗೋವಿಂದಾಚಾರ್ಯ,
ನ್ಯೂ ಸ್ಟೇಶನರಿ ಮಾರ್ಟ್, ರಥಬೀದಿ ಉಡುಪಿ

**ಚಿನ್ನ, ಬೆಳ್ಳಿ ಮತ್ತು ನವರತ್ನಗಳ ವ್ಯಾಪಾರಸ್ಥರು.**

ಯು. ವೆಂಕಟೇಶ ಕೃಷ್ಣ ಭಟ್, ಸರಾಫ್,
ಜುವೆಲರ್ ಮತ್ತು ಕಮಿಶನ್ ಏಜಂಟ್,
ಕೆಂಕಪೇಟೆ, ಉಡುಪಿ.

[ರಿಜಿಸ್ಟರ್ಡ್]

# ಚಕ್ರಬಿಂದು

[REGISTERED]

# SPLEEN & LIVER ENLARGEMENT

CURE FOR CHILDREN.

# "ಲಿವರ್ ಕ್ಯೂರ್"

**ಮಕ್ಕಳ ಮರಣವನ್ನು ತಪ್ಪಿಸುವುದು:—** ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಅಜೀರ್ಣ, ಭೇದಿ, ಮಲಬದ್ಧತೆ, ಹಸುರು ನರಗಳು, ಕಾಮಾಲೆ, ಮೈ ಕೈ ಬಾವು, ಕ್ಷೀಣತ್ವಗಳಲ್ಲಿ ಒಂದೇ ವಾರದಲ್ಲಿ ಅತ್ಯಾಶ್ಚರ್ಯಕರವಾದ ಗುಣ ಕೊಡುವುದು.

**ವರ್ಷಗಟ್ಟಲೆ ಔಷಧವನ್ನು ಕುಡಿಸಿ ವ್ಯರ್ಥಪಡಬೇಡಿರಿ.** **ಪ್ರಧಾನ ವೈದ್ಯರು:- ಡಾ| ಎ. ಎನ್. ಶ್ರೀನಿವಾಸರಾವ್,**
**ಬೆಂಗಳೂರು:**
**ಸಿಟಿ ಜನರಲ್ ಮೆಡಿಕಲ್ ಏಜನ್ಸಿ.**

ಯಂ. ವಿ. ಪ್ರಾಸಾದಿಕ ಔಷಧಾಲಯ, ಶಿವಮೊಗ್ಗ,

ಕಡಿದುಬಿಡುತ್ತಾನೆ. ಇಲ್ಲಿಗೆ ನೃತ್ಯವು
ಂತಾಯಿತು. ಈ ರೀತಿ ಮಾಡುವುದರಿಂದ
ಪುಣ್ಯ ಸಂಪಾದನೆಯಾಗುವುದೆಂದು ಆವ
ದೃಢ ವಿಶ್ವಾಸ. ಹತ್ಯಾಕಾಂಡದಂತ್ಯ
ಒಂದು ನಾಯಿ ಮತ್ತೊಂದು ಕೋಳಿ
ಜೀವವನ್ನು ತೆಗೆದುಬಿಡುತ್ತಾರೆ. ಈ
ವು ಯಾವ ಕಾರಣಕ್ಕಾಗಿ ಮಾಡುವು
ನರ ಬಗ್ಗೆ ಅವರಲ್ಲೊಂದು ದಂತ
ಪ್ರಚಲಿತವಾಗಿದೆ. ಪ್ರಾಚೀನ ಕಾಲದ
ಸಮಯ ಮರೂವು ಜಾತಿಯ ದೇವನು
ತಿಯ ಸಮ್ಮಂಧವಾಗಿ ಒಂದು ಗ್ರಂಥ
ಆವರೆಡೆಗೆ ಕಳುಹಿಸಿ ಕೊಟ್ಟನಂತೆ.
ತ್ತಾ ಅ ಧರ್ಮಗ್ರಂಥಕ್ಕೆ ಬಹಳ
ಾರಿಕ ಉಂಟಾಯಿತಂತೆ. ಎಲ್ಲೆಲ್ಲಿಯೂ
ಹಾಲೇ ಸಿಕ್ಕಲಿಲ್ಲವಂತೆ. ಕೊನೆಗದು
ುಡಿದು ತನ್ನ ಕ್ಷುಧೆಯನ್ನು ಆರಿಸಿ
ತಂತೆ. ಆದರಿಂದ ಈ ಮರೂ ಜಾತಿಯು
ಗೊಂಡು, ಪಶುಜಾತಿಯ ಮೇಲೆ ಪ್ರತೀ
ಮಾಡಿತಂತೆ. ಹುರಿಯರಿಂದ ಉಂಟಾದ
ಯಮವನ್ನು ಅವರ ವಂಶದವರು ಇಂದಿಗೂ
ವಿವರಿಸಿದ ನೃತ್ಯದ ಹೆಸರಲ್ಲಿ ಗೋವುಗಳ
ುವ ತಮ್ಮ ದ್ವೇಷವನ್ನು ಸಾಧಿಸಿಕೊಳ್ಳು
ಗ್ರಹಸ್ಥನಾದ ಪ್ರತಿಯೊಬ್ಬನೂ ಈ
ಮನ್ನು ನಿಷ್ಠೆಯಿಂದ ಆಚರಿಸಿಲಿಕ್ಕೆ ಬೇಕು.
ನ ವಾಡಿಕೆಯಂತೆ ತಿನ್ನುವ ಅಥವಾ
ದ ಹೊಂದಿದ ಜನರು ತಿನ್ನುವ ಮಾಂಸ
ಪೇಯಗಳನ್ನು ಅಲ್ಲಯವರು ತಿನ್ನುವು
ಆದರೆ ನಾಯಿ ಮಾಂಸಭಕ್ಷಕರು ಇರ
ವೆಂದೇ ಇದು ವರೆಗೆ ಭಾವಿಸಲಾಗಿತ್ತು.
ಈಗ ಅದು ಸುಳ್ಳಾಯಿತು. ಈ ಜಾತಿಗೆ
ಮಾಂಸವೆಂದರೆ ಬಹಳ ಪ್ರೀತಿ. ಅದ
ಈ ಜಾತಿಯ ಪ್ರತಿಯೊಂದು ಮನೆಯಲ್ಲಿ
ಕಷ್ಟ ಏಳೆಂಟು ನಾಯಿಗಳನ್ನಾದರೂ
ಹುದು. ಎಲ್ಲರಿಗೂ ತಂಬಾಕು ಸೇದುವ
ಥವಿದೆ. ಹೆಂಗಸರೆಲ್ಲರೂ ನೂಲು ತೆಗೆದು
ತಮ್ಮ ಸಂಸಾರಗಳಿಗೆ ಸಾಕಾಗುವಷ್ಟು
ುನ್ನು ತಾವೇ ನೂತುಕೊಳ್ಳುತ್ತಾರೆ.
ಹೂಗಳನ್ನು ಮುಡಿದು ಕೊಳ್ಳುವುದೆಂದರೆ
ಬಹಳ ಪ್ರೀತಿ. ಎಲ್ಲರೂ ಸ್ವಾವಲಂಬಿ
ಅವರವರ ಆಹಾರ ಸಾಮಾಗ್ರಿಗಳು
ಬೆಳೆಯಿಸಲ್ಪಡುತ್ತವೆ. ಅನ್ನ, ಮಾಂಸ
ಮುಂತಾದುವೆ ಅವರ ಆಹಾರ. ಪ್ರತಿಯೊಬ್ಬರೂ
ದಿನಕ್ಕೆ ಮೂರು ಬಾರಿ ಊಟ ಮಾಡುತ್ತಾರೆ.
ಸಾಯಂಕಾಲ ಹೊತ್ತು ನೂಲುತ್ತಾರೆ. ರಾತ್ರಿ
ಊಟವಾದ ಬಳಿಕ ನೂಲಲು ಕೂತುಕೊಳ್ಳು
ತ್ತಾರೆ. ಸ್ತ್ರಿ ಪುರುಷರೆಲ್ಲರೂ ಸಮಯವನ್ನು
ದುರುಪಯೋಗಗೊಳಿಸುವುದಿಲ್ಲ. ಶಿಲ್ಪ ಮತ್ತು
ಶಿಲ್ಪಿಗಳು ಈ ಜಾತಿಯಲ್ಲಿ ಬಹಳ ಕಮ್ಮಿ. ಬೇಕಾ
ದಷ್ಟು ಶಿಲ್ಪಿಕಲೆಯ ಚಿತ್ರಗಳು ಅಲ್ಲಿ ಕಾಣಸಿಗು
ತ್ತವೆ. ಆದರೆ ಅವರಲ್ಲಿ ಅದಕ್ಕೆ ಮೌಲ್ಯವಿಲ್ಲ.
ಅವುಗಳ ನಿಜವಾದ ಪ್ರಯೋಜನವನ್ನು ನಾವು
ಹೊಂದ ಬಹುದಾಗಿದ್ದರೆ ಈ ಜಾತಿಯ ಇಡೀ
ಇತಿಹಾಸವನ್ನೆ ಬರೆಯಬಹುದಾಗಿತ್ತು. ಇತರ
ಈ ಜಾತಿಯು ದೇಶಗಳು ಸುಧಾರಣೆ ಹೊಂದಿದಂತೆ
ಇದೂ ಆದಷ್ಟು ಬೇಗನೆ ಸುಧಾರಣೆಗೆ ಬರಬಹು
ದೆಂದು ಊಹಿಸಬಹುದು.

---


**SUKHANIVAS,**

**UDIPI.**

**BRANCH:**

**Jedigudde, MANGALORE.**

# ಸುಖ ನಿವಾಸ

ವಿದ್ಯಾರ್ಥಿಗಳ, ಉದ್ಯೋಗಸ್ಥರ ಮತ್ತು ಪ್ರಯಾಣಿಕರ, ಊಟ, ವಸತಿಗಳಿಗಾಗಿ ವಿದ್ಯುದ್ದೀಪಗಳ ಅನುಕೂಲತೆ ಇರುವ ಶುಚಿಯಾದ ಕಟ್ಟಡಗಳಲ್ಲಿ ಆರೋಗ್ಯದಾಯಕ ಮತ್ತು ರುಚಿಕರವಾದ ಭೋಜನವು ತಕ್ಕ ಸಮಯಗಳಲ್ಲಿ ದೊರೆಯುವ ಯೋಗ್ಯ ಅನುಕೂಲತೆಗಳನ್ನು ಮಂಗಳೂರಿನ ಜೇಡಿಗುಡ್ಡೆಯಲ್ಲಿರುವ ಭವನದಲ್ಲೂ ಉಡುಪಿಯಲ್ಲೂ, ಮಾಡಲಾಗಿವೆ.

**ಯಾವಾಗಲೂ ತಮಗೆ ಸುಸ್ವಾಗತವು ದೊರೆವುದು.**

ಪ್ರೊಪ್ರೈಟರ್ಸ್-

**ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್ಸ್.**


## ವರ್ತಕ ವ್ಯವಹಾರ ಕೋಶ

(ಮುಂದರಿದ್ದು)

**ರಖಂ ಮತ್ತು ಚಿಲ್ಲರೆ ಸಾತ್ರೆ ವ್ಯಾಪಾರಸ್ಥರು.**

ಪದಮಪ್ಪಾ ಧರ್ಮಪ್ಪಾ ಗೋಗಿ,
ಭಾಂಡೇದ ವ್ಯಾಪಾರಿ, ಕಂಚಗಾರಗಲ್ಲಿ, ಹುಬ್ಬಳ್ಳಿ.

---

**ಉತ್ತಮವಾದ ಉಪಹಾರ, ಭೋಜನ ಮತ್ತು ವಸತಿ ಗೃಹಗಳು.**

**ಉಡುಪಿ ಹೋಟೇಲ್.**
ಮಾಲಕ - ಬಿ. ಗುಂಡಾಚಾರ್, ವಿಶಾಖಪಟ್ಟಣ.

**ಭುವನೇಶ್ವರಿ ರೆಸ್ಟೋರೆಂಟ್,**
ಮಾಲಕ: ನೆಲ್ಲಿಕಟ್ಟೆ ರಾಮಕೃಷ್ಣರಾವ್, ಸವದತ್ತಿ

**ಯು. ಕೆ. ಪದ್ಮನಾಭಾಚಾರ್ ಮತ್ತು ಕೃಷ್ಣಾಚಾರ್,** ಪ್ರೊಪ್ರೈಟರ್ಸ್, ಉಡುಪಿ ಹೋಟೆಲ್, ಫ್ಲೋಟ್ಸ್, ಕರ್ನೂಲ್.

**ಉಡುಪಿ ಹೋಟೆಲ್.**
ಮಾಲಕ--ಶ್ರೀನಿವಾಸ ರಾವ್ ಸುಬ್ಬರಾವ್ ವೈದ್ಯ,
ಕುಮಟಾ, ಉತ್ತರ ಕನ್ನಡ ಜಿಲ್ಲೆ.

---

**ನ್ಯೂಸ್ ಪೇಪರ್ ಏಜಂಟ್.**
ಎಸ್. ಗೋಪಾಲ ನಾಯಕ್,
ನ್ಯೂಸ್ ಪೇಪರ್ ಏಜಂಟ್, ಉಡುಪಿ.

---

**ನೋಪು ಮತ್ತು ಫರ್ನೀಚರ್.**
ಟಿ. ವಿಠಲ್ ಶೆಟ್ಟಿ, ಟಿಂಬರ್ ಮರ್ಚಂಟ್,
ಸುರತ್ಕಲ್ ದ. ಕ.
ಕಟ್ಟೋಣಗಳಿಗೆ ಬೇಕಾದ ಮೋಪು, ಆಫೀಸು ಅಂಗಡಿಗಳಿಗೆ ಬೇಕಾದ ವಿವಿಧ ಫರ್ನಿಚರನ್ನೂ ಕಂಟ್ರಾಕ್ಟ್ ಮೂಲಕ ಒದಗಿಸುವವರು.

---

**ರಖಂ ಜವುಳಿ ವ್ಯಾಪಾರಸ್ಥರು.**
ನಾಗೇಂದ್ರಸಾ ಬಾಲುಸಾ ಮೋಹರವಾಡೆ,
ಕ್ಲೋತ್ ಮರ್ಚಂಟ್ಸ್ ಎಂಡ್ ಕಮಿಷನ್ ಏಜಂಟ್ಸ್,
ಅರಳಿಕಟ್ಟೆಗಲ್ಲಿ, ಹುಬ್ಬಳ್ಳಿ.

---

**ಟೈಲರಿಂಗ್ ಶೋಪ್.**
ದಿ. ನೆಶನಲ್ ಟೈಲರಿಂಗ್ ಶೋಪ್,
ನಂ. 59 ಗೋಗಾ ಸ್ಟ್ರೀಟ್ ಫೋರ್ಟ್ ಮುಂಬಯಿ,
ಸೂಟು, ಕೋಟು, ಕರ್ಟು, ಮೊದಲಾದ ವಿವಿಧ ಪೋಷಾಕನ್ನು ತಯಾರಿಸುವವರು.

# ಸುಳ್ಳು ದೇವರ ಕಳ್ಳ ಪೂಜಾರಿ

## ಸ್ಟೇಲಿನನ ದೂತ ನಿಕೋಲಾಯ್ ಯಝೋವ್

ರಶಿಯಾದ ಸರ್ವಾಧಿಕಾರಿ ಸ್ಟಾಲಿನನಿಗೆ ಅಧಿಕಾರ ಬಂದುದು ಸರ್ವಸಮ್ಮತಿಯಿಂದಲ್ಲ; ವಿರೋಧಿಗಳೊಡನೆ ಹೋರಾಡಿ ಗೆದ್ದುದರಿಂದಲೇ. ಅಂದಿನಿಂದ ಇಂದಿನ ವರೆಗೂ ಅವನಿಗೆ ವೈರಿಗಳಿದ್ದೇ ಇದ್ದಾರೆ. 'ಯಾರಿದ್ದಾರೆ-ಹೇಗಿದ್ದಾರೆ?' ಎಂದವರ ಪತ್ತೆ ಹಚ್ಚಿ ಹಿಡಿದು ಕೊಲ್ಲಲು ತನ್ನ ನಂಬಿಗೆಯ ಯಝೋವನಿಗೆ ಸರ್ವಾಧಿಕಾರವಿತ್ತಿದ್ದಾನೆ. ಯಝೋವನಲ್ಲಿ ತಾರತಮ್ಯ ಜ್ಞಾನವಿಲ್ಲ, ಚುರುಕು ಬುದ್ಧಿಯಿಲ್ಲ. ತನ್ನ ಮನಸ್ಸಿಗೆ ತೋರಿದವರನ್ನು ತೋಫಿನ ಬಾಯಿಗೆ ಕೊಡಲು ತಡೆಯೂ ಇಲ್ಲ! ರಷ್ಯದ ಮಹಾ ಮಹಾ ರಾಷ್ಟ್ರ ಪ್ರೇಮಿಗಳ ನರಯಜ್ಞ ನಡೆದುದು ಹೀಗೆಯೇ!

ನಿಕೋಲಾಯ ಯಝೋವನ ಹೆಸರೆತ್ತಿದರೆ ಇಡೀ ಸೊವಿಯೇಟ್ ರಶಿಯಾವೀಗ ಗಡಗಡನೆ ನಡುಗುತ್ತದೆ ಅವನೀಗ ರಶಿಯಾದ ಪೋಲೀಸ ಖಾತೆಯ ಮುಖ್ಯಾಧಿಕಾರಿಯಾಗಿರುವನು. ರಶಿಯಾದ ರಾಜಕೀಯ ಕ್ಷಿತಿಜದಲ್ಲವನು ಮೆರೆಯುತ್ತಿರುವನು. ಕಾರಣ ಈಗಿನ ಸ್ಟಾಲೀನ್ ಸರಕಾರದ ಬದ್ಧವಿರೋಧಿಗಳ ಪತ್ತೆ ಹಚ್ಚುವಿಕೆ, ವಿರೋಧಿಗಳನ್ನು ಸೆರೆಹಿಡಿದು ಅವರ ವಿಚಾರಣೆ ನಡಿಸುವಿಕೆ ಮತ್ತು ಶತ್ರುಗಳನ್ನು ಫಿರಂಗಿಗಳ ಬಾಯಿಗೆ ಆಹುತಿಯಾಗಿಕೊಟ್ಟು ಅವರ ಸಂಹಾರ ಮಾಡುವ ಸರ್ವಾಧಿಕಾರವು ನಿಕೋಲಾಯ್ ಯಝೋವಾನಿಗೆ ಕೊಡಲಾಗಿದೆ. ಯಝೋವಾನೇನೂ ಸಾಮಾನ್ಯ ವ್ಯಕ್ತಿಯಲ್ಲ. ಅವನು ಒಳ್ಳೆಯ ಚಲಾಕಿಯವನೂ, ವಿಶ್ವಾಸಘಾತಕಿಯೂ ಆಗಿರುವನು ರಶಿಯಾದ ಜನರು ಅವನನ್ನು ಸಾಕ್ಷಾತ್ ಮೃತ್ಯುವೆಂದೇ ಭಾವಿಸುತ್ತಿರುವರು ಉಗ್ರವಾದ ಅವನ ಕಣ್ಣು ಮತ್ತು ಮುಖ ನೋಡುವಾಗ ಸಾಮಾನ್ಯಜನರ ಕೈಕಾಲು ನಡುಗುತ್ತವೆ ನಿಜವಾಗಿಯೂ ಅವನು ರಶಿಯಾದೊಳಗಿನ ಈಗಿನ ವಿರೋಧಿ ಪಕ್ಷದ ಯಮನೇ ಆಗಿರುವನು.

ಈ ನಿಕೋಲಾಯ ಯಝೋವನು ಇಷ್ಟರ ತನಕ ನೂರಾರು ಸ್ಟೇಲಿನ ವಿರೋಧಿ ರಶಿಯಾದ ದೇಶಭಕ್ತರನ್ನು ಕೊಂದು ಸ್ಟೇಲಿನನ ಮೆಚ್ಚುಗೆಗೆ ಪಾತ್ರನಾಗಿರುವನು.

### ನಿಕೋಲಾಯ ಯಝೋವನ ಪ್ರತಾಪ.

ರಶಿಯಾದ ಒಳ ಆಡಳಿತೆಯ ಮುಖ್ಯಮಂತ್ರಿಯಾಗಿಯೂ, ಗುಪ್ತ ಪೋಲೀಸ ಖಾತೆಯ ಸರ್ವಾಧಿಕಾರಿಯಾಗಿಯೂ ಸ್ಟೇಲಿನನಿಂದ ನೇಮಕ ಹೊಂದುವ ವರೆಗೆ, ರಶಿಯಾದಲ್ಲಿ ಯಾರೊಬ್ಬರಿಗೂ ಅವನ ಹೆಸರು ತಿಳಿದಿದ್ದಿಲ್ಲ. ಆದರೂ ಮೋಸ್ಕೊ ಶಹರಿನ ಲೇನಿನ್‌ಗ್ರೇಡ್ ಬೊಲ್ಶೇವಿಕ್ ಪಾರ್ಟಿಯ ಮುಖ್ಯಸ್ಥನೆಂದು ಕೆಲವರು ಅವನನ್ನು ಅರಿತಿದ್ದರು. ಆದರೆ ರಶಿಯಾದಲ್ಲೀಗ ಅವನ ಹೆಸರು ಕೇಳದ ವ್ಯಕ್ತಿಯೇ ಇಲ್ಲ ರಶಿಯಾದ ಸರಕಾರಪಕ್ಷದ ಪತ್ರಿಕೆಗಳಿಗೆ ಯಝೋವಾನನ್ನು ಹೊಗಳುವ ದೊಂದೇ ಕೆಲಸ ಅವನ ಗುಣಾತಿಶಯಗಳನ್ನು ಕವಿತಾರೂಪದಲ್ಲಿ ಪತ್ರಿಕೆಗಳಲ್ಲಿ ಪ್ರಕಟಿಸಿ ಅಲ್ಲಿಯ ಕವಿಗಳೂ, ಜನರೂ ಅತನ ಪ್ರೀತಿಗಳಿಸಲು ಅಹಮಹಿಕೆಯಿಂದ ವೇಚಾಡುತ್ತಿರುವರು ಅವನ ವಿಚಾರವಾಗಿ ಮನಸ್ಸಿನಲ್ಲಿ ಒಂದಿಷ್ಟು ಪೂಜ್ಯ ಭಾವವಿಲ್ಲದಿದ್ದರೂ, ಅಧಿಕಾರ ದರ್ಪಕ್ಕೆ ಅಲ್ಲಿಯ ಜನರು ನಿರುವಾಯವಾಗಿ ತಲೆಬಾಗಲೇ ಬೇಕಾಗಿರುವುದು! ಯಾವ ವಾರ್ಟಿಯ ಜನರೇ ಆಗಲಿ, ಅವರ ಅಧಿಕಾರಕ್ಕೆ ಪಾಪದ ಜನರು ತಲೆಬಾಗಲೇ ಬೇಕಾದ ಸ್ಥಿತಿಯು ಎಲ್ಲೆಲ್ಲೂ ಕಂಡುಬರುತ್ತಿದೆ. ಆದುದರಿಂದಲೇ ರಶಿಯಾದ ಪ್ರಜಾಜನರು ಈ ಯಝೋವಾ ರಕ್ಕಸನನ್ನು ನರಪುಂಗವ, ಮಹಾ ವೀರ, ರಶಿಯಾದ ಉದ್ಧಾರಕ, ಮಹಾತ್ಮನೆಂದು ಹೊಗಳುತ್ತಿರುವರು ಹಾಗೆ ಹೊಗಳದೆ ಹೋದರೆ ಅವರಿಗೆ ಗತಿಯೇ ಇಲ್ಲ. ಎಲ್ಲಾ ಕಡೆಗಳಲ್ಲೂ ಅವನ ಗುಪ್ತ ಹೇರರಿರುವರು. ಎಲ್ಲೆಲ್ಲೂ ಅವನ ಹೆಸರಿಗೆ ಮನ್ನಣೆಯಿದೆ ಅವನ ಪಾರ್ಟಿಯು ಬಲವಾಗಿದೆ ಹಿಂದೆ ಸರಕಾರದ ವಿರೋಧಿಗಳಾಗಿದ್ದವರು ಇಂದು ಈ ಯಝೋವಾ ಮಹಾತ್ಮನ ಪಾರ್ಟಿಯ ಮುಂದಾಳುಗಳಾಗಿ ಯಾರು ಮೊದಲು ತನುಮನಧನಗಳನ್ನರ್ಪಿಸಿ ರಶಿಯಾದಲ್ಲಿ ಕ್ರಾಂತಿಯನ್ನುಂಟುಮಾಡಿ ರಶಿಯಾಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟರೋ ಆ ದೇಶಭಕ್ತರನ್ನು, ಈಗಿನ ಸ್ಟೇಲಿನ ದಲ್ಲಾಳಿಯ ಕಪಟ ದೇಶಭಕ್ತರು ಗುಂಡಿನೇಟಿಗೆ ಆಹುತಿಯಾಗಿ ಕೊಡುತ್ತಿರುವರು.

### ಯಝೋವನ ಪೂರ್ವಚರಿತ್ರೆ.

ಸನ್ ೧೯೧೭ರ ವರೆಗೆ ನಿಕೋಲಾಯ ಯಝೋವನಿಗೆ ಯಾವ ಅಧಿಕಾರವೂ ಇದ್ದಿಲ್ಲ. ಅವನನ್ನು ಕೇಳುವವರೂ ಇದ್ದಿಲ್ಲ. ಆ ಸಮಯ ಇವನು ಯುಟಲೋವಾದ ಜ್ವಾಲಾಗ್ರಾಹಿ ಮದ್ದಿನ ಕಾರ್ಖಾನೆಯೊಂದರಲ್ಲಿ ಕಸಗುಡಿಸುವ ಮತ್ತು ಪೇದೆ ಕೆಲಸಮಾಡುವ ಹುಡುಗನಾಗಿದ್ದನು. ೨೦ ವರ್ಷ ವ್ಯಾಯದಲ್ಲಿ ಇವನನ್ನು ಕೆಲಸಕಲಿಯುವ ಉಮೇದ್ವಾರನೆಂದು ದಾಖಲುಮಾಡಿಕೊಂಡರು. ಆ ಸಮಯದಲ್ಲೇ ಅವನು ಹಳ್ಳಿಯ ಜನರನ್ನು ಧಿಕ್ಕರಿಸುತ್ತಿದ್ದನು. ಯಾರೊಡನೆಯೂ ಕೂಡಿ ಪ್ರೇಮಾತಿಶಯಗಳಿಂದ ನಡಿಯುತ್ತಿದ್ದಿಲ್ಲ

### ಬೊಲ್ಶೇವಿಕ ಪಕ್ಷದಲ್ಲಿ.

ಸನ್ ೧೯೧೭ರಲ್ಲಿ ರಶಿಯಾದಲ್ಲಿ ಕ್ರಾಂತಿಯೂಟಾಗುವ ಕಾಲದಲ್ಲಿ ಅವನು ಬೊಲ್ಶೇವಿಕ್ ಪಕ್ಷಕ್ಕೆ ಸೇರಿದನು. ಅಂದಿನಿಂದ ಅವನು ಉಗ್ರ ಬೊಲ್ಶೇವಿಕ ಮತವಾದಿಯಾದನು. ಚಿಕ್ಕಂದಿನಿಂದಲೇ ಅವನು ದರಿದ್ರನಾಗಿದ್ದು ಕೂಲಿ ಕೆಲಸಮಾಡುವ ಪ್ರಸಂಗವು ಅವನ ಪಾಲಿಗೆ ಬಂದಕಾರಣ, ಅವನು ಕ್ರಾಂತಿಕಾರಕ ಬೊಲ್ಶೇವಿಕ ಪಕ್ಷಕ್ಕೆ ಸೇರಿದುದರಲ್ಲಿ ಆಶ್ಚರ್ಯವಿಲ್ಲ. ಅಕ್ಟೋಬರ ತಿಂಗಳಲ್ಲಿ ಕ್ರಾಂತಿಯಾಗಿ ಸರಕಾರದ ಬದಲಾವಣೆಯಾಗುವ ಕಾಲಕ್ಕೆ ಒಳ್ಳೆಯ ಬುದ್ಧಿಶಾಲಿಗಳಾದ ಮಜೂರರು ಒಳ್ಳೆಯ ಸ್ಥಾನಮಾನಗಳನ್ನು ಪಡೆದರು. ಇದೇ ಸಮಯದಲ್ಲಿ ಮಜೂರರೊಳಗಿನ ವೊರೋಸ್ಲೋವ್, ಟೋಮಸ್ಕಿ, ಸ್ಮಿರ್ನೋವ ಮತ್ತು ಪೆತುಕಿಡ್ಜ್ ಮೊದಲಾದವರು ಪ್ರಸಿದ್ಧಿಗೆ ಬಂದರು. ಆದರೆ ನಿಕೋಲಾಯ ಯಝೋವನಲ್ಲಿ ಇಂತಹ ಬುದ್ಧಿ

ಚಾತುರ್ಯವಾಗಲಿ, ಗುಣಾತಿಶಯಗಳಾಗಲೀ ಇಲ್ಲದೆ ಹೋದುದರಿಂದ ಅವನು ಪ್ರತಿಭಾಶಾಲಿಯಾಗದೆ, ಮೊದಲಿನಂತೆಯೇ ಉಳಿದನು. ಯಝೋವನ ಭಾಗ್ಯೋದಯವು ಸ್ಟೇಲಿನನು ಅಧಿಕಾರಕ್ಕೆ ಬಂದ ನಂತರವಾಯಿತು. ಅವನು ಸ್ಟೇಲಿನನ ಕಾಲವಲ್ಲಾದರೂ ಮುಂದೆ ಬಂದುದು ಬುದ್ಧಿಸಾಮರ್ಥ್ಯದಿಂದಲ್ಲ. ಸ್ಟೇಲಿನನು ಹೇಳಿದ ಕೆಲಸಗಳನ್ನು ಬಹಳ ಶ್ರದ್ಧೆಯಿಂದ ಮಾಡುತ್ತಿದ್ದನೆಂಬುದರಿಂದ ಅವನಿಗೆ ಒಂದಿಷ್ಟು ಹೆಚ್ಚಿನ ಅಧಿಕಾರ ದೊರೆಯಿತು.

ಸನ್ ೧೯೧೭ರಲ್ಲಿ ಯಝೋವನಿಗೆ ೨೩ ವರ್ಷ ಪ್ರಾಯವಾಗಿತ್ತು. ಆಗವನು ಪೆಟ್ರೋಗ್ರಾಡ್ ಗ್ಯಾರಿಸನಿನಲ್ಲಿ ಇತರ ಬೊಲ್ಶೇವಿಕ ಸಿಪಾಯಿಗಳಂತೆಯೇ ಓರ್ವ ಸಿಪಾಯಿಯಾಗಿದ್ದನು. ರಶಿಯಾದಲ್ಲಿ ಕ್ರಾಂತಿಯ ಅನಂತರ ಅಂತರ್ಯುದ್ಧ ಮತ್ತು ವಿಷಮ ಪರಿಸ್ಥಿತಿಯು ಪ್ರಾಪ್ತವಾದಾಗ ರಶಿಯಾದ ಗುಪ್ತ ಪೋಲೀಸ ಖಾತೆಯ, ಅಂದರೆ ಜಿ. ಪಿ. ಯು. ಡಿಪಾರ್ಟಮೆಂಟಿನ, ಕೆಂಪು ಸೇನೆಯ ಕಮಾಂಡರನಾದನು. ಆ ಸಮಯ ರಶಿಯಾದಲ್ಲಿ ಪ್ರಬಲವಾದ ವಿರೋಧಿ ಪಕ್ಷವೊಂದಿತ್ತು. ಆ ಪಕ್ಷದವರನ್ನು ಹುಡುಕಿ ತೆಗೆದು ಬಂದಿಖಾನೆಯೊಳಗಿರಿಸುವ ಕೆಲಸವು ಈ ಗುಪ್ತ ಪೋಲೀಸಖಾತೆಗೆ ಒಪ್ಪಿಸಲಾಗಿತ್ತು. ಆದರೆ ಈ ಡಿಪಾರ್ಟಮೆಂಟಿನಲ್ಲಿ ಅವನ ಕೆಲಸವು ತೃಪ್ತಿಕರವಾಗಿ ಕಂಡುಬಾರದ ಕಾರಣ ಮತ್ತು ಮೋಸ್ಕೋದ ಪಾರ್ಟಿಯವರು ಅವನನ್ನು ನಿರುಪಯೋಗಿಯೆಂದು ಅಭಿಪ್ರಾಯಪಟ್ಟುದರಿಂದ, ಅವನನ್ನು ತುರ್ಕಸ್ತಾನಕ್ಕೆ ಕಳುಹಿಸಿಬಿಟ್ಟರು. ತುರ್ಕಸ್ತಾನದಲ್ಲಿ ರಶಿಯಾದ ವಿರೋಧವಾಗಿ ಆ ಸಮಯ ಗುಪ್ತವಾದ ಕಾರಸ್ಥಾನಗಳು ನಡೆಯುತ್ತಿದ್ದವು.

### ಅನವರ ಪಾಷಾನ ಅಡಳಿತ.

ನಿಕೋಲಾಯ ಯಝೋವನನ್ನು ತುರ್ಕಸ್ತಾನಕ್ಕೆ ಕಳುಹಿಸುವ ಕಾಲಕ್ಕೆ, ತುರ್ಕಸ್ತಾನವು ಅನ್ವರ ಪಾಷಾನ ಆಡಳಿತಕ್ಕೆ ಒಳಪಟ್ಟಿತ್ತು. ಬೊಲ್ಶೇವಿಕ್ ಚಳವಳಿಕ್ಕೆ ವಿರೋಧವಾಗಿ ಅವನು ಸುಸಂಘಟಿತನಾಗುತ್ತಿದ್ದನು. ಬೊಲ್ಶೇವಿಕ್ ವಿರೋಧಿಯಾದ ಅನ್ವರ ಪಾಷಾನನ್ನೂ, ಅವನ ಸಂಗಡಿಗರನ್ನೂ ನಿಕೋಲಾಯಿಯು ತನ್ನ ಸಾಹಸದಿಂದ ಯಮಸದನಕ್ಕೆ ಕಳುಹಿಸಿಬಿಟ್ಟನು.

### ಲೇನಿನನ ಮರಣದ ಅನಂತರ.

ಸನ್ ೧೯೨೩ರಲ್ಲಿ ರಶಿಯಾದ ಕ್ರಾಂತಿಕಾರರ ಮುಂದಾಳುವಾದ ಲೇನಿನನು ಮರಣಪಟ್ಟನು. ಅನಂತರ ರಶಿಯಾದ ಮುಂದಾಳುಗಳೊಳಗೆ ತೀವ್ರ ವಿರೋಧವುಂಟಾಯಿತು. ಸ್ಟೇಲಿನನು–ಝಿನೋವ್ಯಿಫ್ ಮತ್ತು ಟ್ರೊಟ್ಸ್ಕಿಯವರನ್ನು ವಿರೋಧಿಸಿದನು. ಅವರಿಬ್ಬರೂ ಒಂದಾಗಿ ಸ್ಟೇಲಿನನನ್ನು ವಿರೋಧಿಸಿದರು. ಈ ಸಮಯದಲ್ಲಿ ತನ್ನ ಪಕ್ಷವನ್ನು ಬಲಗೊಳಿಸಲು ಸ್ಟೇಲಿನನು ಹೊರ ಪ್ರಾಂತ್ಯಗಳಲ್ಲಿದ್ದ ಎಲ್ಲಾ ಬೊಲ್ಶೇವಿಕರನ್ನು ಮೋಸ್ಕೋವಿಗೆ ಕರೆದನು. ಬಂದವರಿಗೆಲ್ಲಾ ದೊಡ್ಡ ದೊಡ್ಡ ಅಧಿಕಾರದ ಸ್ಥಾನಗಳನ್ನು ಕೊಟ್ಟನು. ಆಗ ಸ್ಟೇಲಿನನಿಗೆ ನಿಕೋಲಾಯ ಯಝೋವನ ನೆನಪಾಯಿತು. ಕೂಡಲೇ ಅವನನ್ನು ಮೋಸ್ಕೋ ಪಟ್ಟಣಕ್ಕೆ ಕರಿಸಿ ೧೯೨೭ರಲ್ಲಿ ಅವನನ್ನು ಕಮ್ಯೂನಿಸ್ಟ ಪಕ್ಷದ ಮಧ್ಯವರ್ತಿ ಕಮಿಟಿಯ ಸದಸ್ಯನನ್ನಾಗಿ ಮಾಡಿದನು. ಮತ್ತು ರಹಸ್ಯವಾಗಿ ತನ್ನ ವಿರೋಧಿಗಳನ್ನು ತೀರಿಸಿಬಿಡಲು ಹೇಳಿದನು. ಮಧ್ಯವರ್ತಿ ಕಮಿಟಿಯ ಸದಸ್ಯರೆಲ್ಲರೂ ನಿಕೋಲಾಯಿಯು ಚುರುಕು ಬುದ್ಧಿಯವನಲ್ಲವೆಂಬುದನ್ನು ತಿಳಿದಿದ್ದರಾದರೂ, ಸ್ಟೇಲಿನನ ಆಜ್ಞೆಯನ್ನು ಪಾಲಿಸುವುದರಲ್ಲಿ ಅವನು ಎಂತಹ ಸಾಹಸಕಾರ್ಯಗಳನ್ನಾದರೂ ಮಾಡಲು ಸಮರ್ಥನೆಂಬುದನ್ನು ಬಲ್ಲವರಾಗಿದ್ದರು. ಮೊದಲೇ ಈ ನಿಕೋಲಾಯ ಯಝೋವನು ಟ್ರೊಟ್ಸ್ಕಿ, ಮೊಲೋಗೇವ, ಮೆಝೋಲಿನ ಮೊದಲಾದವರನ್ನೂ, ಇತರ ಅಧಿಕಾರಿಗಳನ್ನೂ ದ್ವೇಷಬುದ್ಧಿಯಿಂದ ಕಾಣುತ್ತಿದ್ದ. ಅದರಲ್ಲೂ ಅವರ ಗತಿ ತೀರಿಸಿಬಿಡಲು ಇವನಿಗೆ ಗುಪ್ತ ಪೋಲೀಸ ಖಾತೆಯ ಸರ್ವಾಧಿಕಾರಿಯನ್ನಾಗಿ ಮಾಡಿದುದರಿಂದ ಇವನ ದ್ವೇಷಕ್ಕೆ ನೆರೆಬಂದಂತಾಯಿತು. ಆ ಸಮಯದಿಂದ ಇವನು ಸ್ಟೇಲಿನ ವಿರೋಧಿಗಳನ್ನು ನಿರ್ನಾಮಗೊಳಿಸಲು ತೊಡಗಿದ. ಒಂದಿಷ್ಟು ಸಂಶಯ ಬಂದರೆ ಸಾಕು, ಅವರು ಕೊನೆಗೆ ಸ್ಟೇಲಿನನ ಪಕ್ಷದವರೇ ಆಗಲಿ, ವಿರುದ್ಧ ಪಕ್ಷದವರೆಂದು ಗುಂಡಿಕ್ಕಿ ಕೊಲ್ಲಲು ಹಿಂಜರಿಯುಯುತ್ತಿದ್ದಿಲ್ಲ. ಇವನ ಈ ರೀತಿಯ ದ್ವೇಷಸಾಧನೆಗಳನ್ನು ಕಂಡು ಜನರು ಇವನನ್ನು "ಸ್ಟೇಲಿನನ ಬ್ಲಡ್ ಹೌಂಡ್" ಅಂದರೆ ಸ್ಟೇಲಿನನ ಶಿಕಾರಿನಾಯಿಯೆಂದು ಕರೆಯ ತೊಡಗಿದರು! ನಿಜವಾಗಿಯೂ ಅವನು ಸ್ಟೇಲಿನನ ಶಿಕಾರೀ ನಾಯಿಯಂತಿರುವನು. ನಿಕೋಲಾಯ ಯಝೋವನು ತನ್ನ ಅಧಿಕಾರ ದರ್ಪದಿಂದ ಒಳ್ಳೆಯದು ಕೆಟ್ಟದೆಂಬ ಭೇದವನ್ನೆಣಿಸದೆ, ದೇಶದ ವಿದ್ವಾಂಸರನ್ನೂ, ತನ್ನ ಮತ್ತು ಸ್ಟೇಲಿನನ ದಾರಿಗೆ ಬರುತ್ತಿದ್ದ ಮತ್ತು ಬರಬಹುದಾದ ಎಲ್ಲಾ ದೇಶಭಕ್ತರನ್ನೂ ಒಬ್ಬರ ಹಿಂದೆ ಒಬ್ಬರನ್ನು ಹಿಡಿದು ಗುಂಡಿನ ಬಾಯಿಗೆ ಆಹುತಿಯಾಗಿ ಕೊಟ್ಟನು. ರಶಿಯಾದ ಅಂತಃಸ್ಥಿತಿಯು ಈಗ ಬಹಳ ಬಿಕ್ಕಟ್ಟಿನದಾಗಿರುವುದು. ಸ್ಟೇಲಿನ ಮತ್ತು ಯಝೋವನ ವಿರೋಧಿಗಳು ಈಗಲೂ ಗುಪ್ತವಾಗಿರುವರು. ಅವರು ಸ್ಟೇಲಿನನಿಗಿಂತಲೂ ಮುಂದಾಗಿ ಈ ಶಿಕಾರಿನಾಯಿಯಂತಿರುವ ಯಝೋವನ ಪ್ರಾಣಹರಣಮಾಡಲು ಸುಸಂಧಿಯನ್ನು ಕಾಯುತ್ತಿರುವರು. ರಶಿಯಾವು ಈಗ ಶಾಂತವಾಗಿರುವುದಾಗಿ ಕಂಡುಬರುತ್ತಿರುವುದಾದರೂ, ಅಲ್ಲಿ ಯಾವಾಗ ಜ್ವಾಲಾಮುಖಿಯ ಸ್ಫೋಟವಾಗಬಹುದೆಂಬುದನ್ನು ಯಾರಿಂದಲೂ ಹೇಳಬರುವಂತಿಲ್ಲ. ಅಂತೂ ಸ್ಟೇಲಿನ ಮತ್ತು ಯಝೋವಾರ ಅಧಿಕಾರವು ಬೇಗನೆ ಕೊನೆಗೊಳ್ಳುವ ಸಂಭವವಿದೆ!

---

## ಲೇಖಕರಿಗೆ ವಿನಂತಿ.

ಕರ್ನಾಟಕದ ಯಾವ ಭಾಗದಿಂದಲೂ ಬರಬಹುದಾದ ಉತ್ತಮ ಲೇಖನಗಳಿಗೆ ಯಾವಾಗಲೂ ಸ್ವಾಗತವಿದೆ.

**ಆದರೆ ಬೆಳಗಾಂವ್, ಧಾರವಾಡ, ಬಿಜಾಪುರ ಕಡೆಯ ಜನರ ಬರಹವು ನಮ್ಮ ಕಂಪೋಜಿಟರುಗಳಿಗೆ ತಿಳಿಯುವಂತೆ ಸ್ಪಷ್ಟವಾಗಿರತಕ್ಕದ್ದು.**

ಲೇಖನವಾಗಲೀ, ಕತೆಗಳಾಗಲಿ ಸ್ವತಂತ್ರವಾಗಿರಬೇಕು. ಅನುವಾದಿಸಿದುದಾದರೆ ಆ ರೀತಿ ತಿಳಿಸಬೇಕು. ಅದಲ್ಲದೆ ಲೇಖನವು ಫುಲ್‌ಸ್ಕೇಪ್ ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಡತಕ್ಕದ್ದು. ಎರಡೂ ಯಾ ಮೂರು ಪುಟಗಳಿಗೆ ಮಿಗಾರಲಾಗದು.

ಪ್ರಕಟಣೆಗೆ ಯೋಗ್ಯವಲ್ಲದ ಲೇಖನಗಳು ತಿರಸ್ಕರಿಸಲ್ಪಡುವವು,

**ಕರ್ನಾಟಕದೊಳಗಿನ ವಿದ್ವಾಂಸರು ಜನತಾಸೇವೆಯ ಮಹತ್ಕಾರ್ಯದಲ್ಲಿ ನೆರವಾಗಬೇಕಾಗಿ ನಮ್ಮ ವಿನಂತಿ.**

**ಸಂಪಾದಕ, ವ. ಧು.**

# ರಾಮಾಚಾರ್ರ ತಾಂಡವ ನೃತ್ಯ

**ಸುಬ್ಬಮ್ಮನ ತಲೆ ಮುಂಡನವಾಗಿ ೨೦ ವರುಷಗಳಾದರೂ ಆ ತಲೆಯೊಳಗೆ ಆ ನೋವು ಈಗಲೂ ಇರಬೇಕೆ? ಈ ಸಂಗತಿ ರಾವಮಾಚಾರ್ರನು ಬಲ್ಲರು? ಅವರು ಸುಬ್ಬಮ್ಮನಂತಹ ಎಷ್ಟೋ ಬಾಲೆಯರ ಮುಂಡನ ಮಾಡಿಸಿದವರು. ಮೊನ್ನೆ ತುಂಗಮ್ಮನ ಜುಟ್ಟಿಗೆ ಕೈ ಹಾಕಿದಾಗ– ಜುಟ್ಟಿಗೆ ಜುಟ್ಟೇ ಆಚಾರ್ರ ಹಿಡಿಯೊಳಗೆ ಬಂದು ಅದರ ಮೂಲಸ್ಥಳವು ಹೊಸ ಮಡಿಕೆಯಂತಾದಾಗ ಆಚಾರ್ರಿಗೆ ತಿಳಿಯಿತದರ ನೋವು!**

ಲೇಖಕರು:
**ಶ್ರೀ. ಕಟೆಪಾಡಿ ಶ್ರೀನಿವಾಸ ಶೆಣೈ**
ಅಧ್ಯಾಪಕ, ಕಾರ್ಕಳ.

ರಾಮಾಚಾರ್ರು ಕಡು ಸನಾತನಿಗಳು. ಹಿಂದಿನವರು ಯಾವ ಪ್ರಕಾರ ನಡಕೊಂಡು ಬಂದಿದ್ದಾರೋ ಹಾಗೆ ಇಂದಿನವರ ನಡವಳಿಕೆ ಇರಬೇಕೆಂಬುದು ಅವರ ಮಾತು. ಇದನ್ನೆ ಅವರು– ಮನೆ, ಮಠ, ದೇವಸ್ಥಾನ, ಮಂದಿರ–ಹೋದಲ್ಲಿ ಹೇಳುತ್ತಿದ್ದರು. ಯಾರು ಏನಾದರೂ ತಮ್ಮ ಹಿತಕ್ಕೆ ಭಂಗಬರಬಾರದೆಂಬುದು ಅವರ ಆಸೆ ಆಗಿದ್ದಿತು.

ತಮ್ಮ ಹಿತ ಎಂದರೆ ಸಮಾಜದ ಹಿತ ಆಥವಾ ಸನಾತನಿಗಳ ಹಿತ ಎಂದು ಅರ್ಥ ಮಾಡಬಾರದು. ರಾಮಾಚಾರ್ರಿಗೆ ಸಮಾಜ ಹಿತದ ಕೊಡನೆಯೂ ಇದ್ದಿಲ್ಲ; ಸನಾತನಿಗಳ ಹಿತದ ಗೊಡನೆಯೂ ಇದ್ದಿಲ್ಲ. ಸುಧಾರಕರ ಕಡೆಗೆ ಅವರು ಕಣ್ಣೆತ್ತಿ ಕೂಡ ನೋಡುತಿದ್ದಿಲ್ಲ. ಅವರಿಗೆ ತಮ್ಮ ಹಿತವೆಂದರೆ ಕೇವಲ ಅವರ ಹಿತ—ಎಂದರೆ ರಾಮಾಚಾರ್ರ ಹಿತ ಮಾತ್ರ ಇದ್ದಿತು. ಆದ್ದರಿಂದಲೇ ಅವರು ಆ ಕಡು ಸನಾತನಿಗಳೆಂಬವರ ಪ್ರತಿನಿಧಿಗಳಾಗಿ ಆ ಊರಿನಲ್ಲಿ ಪ್ರಸಿದ್ಧರಾಗಿದ್ದರು.

ರಾಮಾಚಾರ್ರೆಂದರೆ ಎಲ್ಲರಿಗೂ ಭಯ. ಮಕ್ಕಳಂತೂ 'ಗುಮ್ಮ' ಎಂದರೆ ಅವರೇ ಎಂದು ತಿಳಿಕೊಂಡಿದ್ದರು. ಹುಲ್ಲುಕಡ್ಡಿಗಳಂಥ ಎರಡು ಕಾಲುಗಳ ಮೇಲೆ ಗುಡಾಣದಂಥ ಹೊಟ್ಟೆಯ ಆ ಅದ್ಭುತ ಶರೀರವನ್ನು ಕಂಡು ಯಾರಿಗಾದರೂ ಹೆದರಿಕೆ ಆಗುವಂತಿತ್ತು. ಆದರೆ ಆ ಊರ ವಿವಾಹಿತ ಹೆಣ್ಣು ಮಕ್ಕಳಿಗೆ ಆಗುವ ಭಯವು ಬೇರೆ ಪ್ರಕಾರದ್ದು. ವಿವಾಹಿತ ತರುಣನು ಎಲ್ಲಿಯಾದರೂ ಕಾಯಲೆ ಬಿದ್ದರೆ ರಾಮಾಚಾರ್ರ ಭೂತವು ಬಂದು ಆತನ ಹೆಂಡತಿಯ ಮುಂದೆ ಸುಳಿಯುತಿತ್ತು. ವಿಧವಾಸ್ತ್ರೀಯರ ಭವಿಷ್ಯ ನಿರ್ಮಾಣ ಮಾಡುವವರೇ ರಾಮಾಚಾರ್ರು. ಆದ ಕಾರಣ ಅವರು ಹಗಲು ರಾತ್ರಿ ರಾಮಾಚಾರ್ರನ್ನು ನೆನೆನೆನೆದು ಮೈತೆಗೆಯುತಿದ್ದರು.

ಆ ಊರಲ್ಲಿ ಯಾವಾತನು ಕಾಯಲೆ ಬಿದ್ದರೂ ರಾಮಾಚಾರ್ರ ಸವಾರಿ ಅಲ್ಲಿಗೆ ಬಂದೇ ಬರುತಿತ್ತು. ಆ ಬಗ್ಗೆ ರಾಮಾಚಾರ್ರಿಗೆ ಆಮಂತ್ರಣದ ಅಗತ್ಯ ವಿರಲಿಲ್ಲ. ಹೇಳಿ ಕಳುಹಿಸುವ ಆವಶ್ಯಕತೆ ಇರಲಿಲ್ಲ. ಸುದ್ದಿ ಕೇಳಿಯೇ– ಅವರು ಚಿತ್ತೈಸುತಿದ್ದರು. ಬಂದವರೇ ತಮ್ಮ ರಾಮಾಯಣವನ್ನು ಆರಂಭಿಸುತಿದ್ದರು. 'ಹೆಣ್ಣು ಮಕ್ಕಳಿಗೆ ಗಂಡಂದಿರೇ ಇಹ ದೈವ, ಅವರೇ ಅವರ ಪರದೈವ. ಗಂಡ ಹೋದ ಮೇಲೆ ಅವರ ಬಾಳು ಹಾಳು; ರೂಪಲಾವಣ್ಯ, ಶೃಂಗಾರ, ಅಲಂಕಾರ ಎಲ್ಲಾ ವ್ಯರ್ಥ. ಆದ್ದರಿಂದ ಗಂಡ ಹೋದ ಮೇಲೆ ಹೆಣ್ಣು ಮಕ್ಕಳು ಮುಂಡನ ಮಾಡಿಸಿಕೊಳ್ಳಬೇಕು. ತಮ್ಮ ಚಿನ್ನಾಭರಣಗಳನ್ನು ಬ್ರಾಹ್ಮಣರಿಗೆ ದಾನ ಕೊಡಬೇಕು, ಆಗ ಅವರಿಗೆ ತೃಪ್ತಿ, ನಿಮಗೆ ಪುಣ್ಯ, ಸಮಾಜಕ್ಕೆ ಸುಖ...

ಎಲ್ಲರೂ ಆಚಾರ್ರ ಈ ಮಾತುಗಳನ್ನು ಕೇಳುತಿದ್ದರು. ಅವರ ಸ್ವಾರಸ್ಯದ ಮಾತುಗಳನ್ನು ಕೇಳಿ ಹಲ್ಲು ಕಡಿಯುತಿದ್ದರು. ಆದರೆ ಅವರನ್ನು ವಿರೋಧಿಸುವ ಸಾಹಸ ಯಾರಿಗೂ ಬರುತ್ತಿರಲಿ
ಯಾಕೆಂದರೆ ಅವರೆಲ್ಲ ಒಂದೇ ಮಾರ್ಗದ ಸ
ಕರು. ಎಷ್ಟೋಮಂದಿ ಅಬೋಧ ಬಾಲಿ
ಯರು, ನವತರುಣಿಯರು ರಾಮಾಚಾರ್ರ-ಆ
ಸಮಾಜದ ಸ್ವಾರ್ಥಕ್ಕೆ ಬಲಿಯಾದರು. ಪ್ರತಿ
ಮಾತೆಯು ಗಂಡಂದಿರನ್ನು ಅವರ ವಗ್ಗು ಲಿ
ಸೆಳಕೊಂಡಿದ್ದಳಾದರೂ, ಅವರ ರೂಪು ಲಾವಣ
ಶೃಂಗಾರ ಅಲಂಕಾರಗಳನ್ನು ಸೆಳಕೊಳ್ಳುವಷ
ಅವಳು ನಿರ್ದಯಿಯಾಗಿರಲಿಲ್ಲ. ಆದರೆ ರಾಮ
ಚಾರ್ರು ಅದನ್ನೂ ಮಾಡಿ ಪೂರೈಸುತಿದ್ದರು.

೨

ರಾಮಾಚಾರ್ರು ಈಗ ೬೦ ವರ್ಷದ ಮುದ
ರಾಗಿದ್ದಾರೆ. ಅವರಾಕೆ ತುಂಗಮ್ಮನಿಗೂ ೫
ವರ್ಷ ಕಡಿಮೆಯಿಲ್ಲ. ಅವರಿಗೆ ಅಷ್ಟಾ
ವಾಗಲೂ ಸಂತಾನ ಮಾತ್ರ ಆಗಿರಲಿಲ್ಲ. ಆ ಕಾರಣ
ಮನೆಯಲ್ಲಿ ಇಬ್ಬರೇ ಇಬ್ಬರಾಗಿ ವಾಸಿಸುತಿದ್ದರು.

ರಾಮಾಚಾರ್ರಿಗೆ ಈಗ ಏನೂ ಕೊಡುವದಿ
ಏನೂ ರುಚಿಸುವದಿಲ್ಲ. ಮೊದಲು ಅಮಾವಾಸ್ಯೆ
ಹುಣ್ಣಿಮೆಗೊಮ್ಮೆ ಮನೆಯಲ್ಲಿ ಅಡುಗೆಯಾ
ತಿದ್ದುದಾದರೆ ಈಗ ಅದೂ ನಿಲ್ಲುತ್ತ ಬಂದಿತು
ಎಲ್ಲಿ ಶ್ರಾದ್ಧ, ಎಲ್ಲಿ ೧೦–೧೫, ಅಲ್ಲೇ ರಾಮಾ
ಚಾರ್ರ ಜೀವನವಾಗುತಿತ್ತು. ಅಗ್ರಸಾಲೆಯ
ಊಟ, ಚಂದ್ರಸಾಲೆಯಲ್ಲಿ ನಿದ್ದೆ ಎಂಬ ಹಾ
ಅವರ ಕಾಲಕ್ಷೇಪವಾಗುತಿತ್ತು.

ಮೊನ್ನೆ ಅವರು ಸುಬ್ಬಮ್ಮನ ಮನೆಯ ಶ್ರಾದ್ಧ
ಕಾರ್ಯವನ್ನು ತೀರಿಸಿ ಸಾಯಂಕಾಲ ೫ ಘಂಟೆಯ
ಹೊತ್ತಿಗೆ ಮನೆ ಮೆಟ್ಟಲು ಹತ್ತುತ್ತಲೇ—
'ತುಂಗೂ, ತುಂಗೂ' ಎಂದು ಕರೆದರು. ಮದು
ನಿಗೆ ಏನು ಪ್ರಾಣ ಹೋಯಿತೋ ಎಂದು ಅವ
ಹೊರಗೆ ಬಂದಳು. 'ನೋಡು, ತುಂಗೂ, ಇವತ್ತು
ಸುಬ್ಬಮ್ಮನ ಮನೆಯ ಶ್ರಾದ್ಧಕ್ಕೆ ಪತ್ರೋಡೆ
ಮಾಡಿದ್ದರು. ಬಹಳ ಚೆನ್ನಾಗಿತ್ತು. ಬಹಳ ರುಚಿ
ಯಾಗಿತ್ತು. ನೋಡು, ನಿನಗೂ ಒಂದು ತುಂಡ
ತಂದಿದ್ದೇನೆ. ತಿಂದು ನೋಡು. ನಾಳೆ ಎಲ್ಲಿಗೂ
ಹೋಗುವದಿಲ್ಲ. ಮನೆಯಲ್ಲೇ ಅಡುಗೆ ಮಾಡು
ಎಲೆ ತಂದಿದ್ದೇನೆ. ಪತ್ರೋಡೆ ಮಾಡ

ಸುಬ್ಬಮ್ಮನ ಪತ್ರೋಡೆಯ ಹಾಗೇ ಆಗಬೇಕು. ಗೊತ್ತಾಯಿತೆ?' ಎಂದರು.

ತುಂಗಮ್ಮ ಪತ್ರೋಡೆಯ ಒಂದು ತುಂಡನ್ನು ಬಾಯಿಗಿಟ್ಟಳು. ನಿಜವಾಗಿಯೂ ಬಹಳ ರುಚಿಯಾಗಿತ್ತು. ಅವಳು ತಲೆ ಆಡಿಸಿದಳು. ಮತ್ತೆ ಸ್ವಲ್ಪ ಆಲೋಚನೆಗಿಟ್ಟುತು. ತುಂಗಮ್ಮ ಉಂಡಾಡಿ ಭಟ್ಟರ ಮಗಳು; ರಾಮಾಚಾರ್ರ ಹೆಂಡತಿ, ಅಡುಗೆ ಕ್ರಮಗಳನ್ನು ಅವಳು ಕಲಿತೇ ಇರಲಿಲ್ಲ. ಹೇಳಿದಳು-'ಪತ್ರೋಡೆ ಹೇಗೆ ಮಾಡುವದು?'

'ಗೊತ್ತಿಲ್ಲವೆ? ನಿನ್ನ ಜನ್ಮ ಎಲ್ಲಾ ವ್ಯರ್ಥ, ಸುಬ್ಬಮ್ಮನ ಹತ್ತಿರ ಕೇಳು. ಅವಳಿಗೆ ಎಲ್ಲಾ ಗೊತ್ತುಂಟು, ಹೋಗಿ-ಕೇಳಿ ಬಾ' ಎಂದು ಹೇಳಿ ಆಚಾರ್ರು ತಾವು ತಂದ ಕೆಸು-ಎಲೆಯ ಕಟ್ಟನ್ನು ನೆಲದಮೇಲೆ ಬಿಡಿಸಿ ಅದನ್ನು ನೋಡ ತೊಡಗಿದರು.

ಶ

ಬೆಳಗ್ಗೆ ಎಂಟು ಘಂಟೆ ಸಮಯ ಆಗಿದ್ದಿರ ಬಹುದು. ಸುಬ್ಬಮ್ಮ ಮನೆಕೆಲಸ ತೀರಿಸಿ ಜಾವಡಿಗೆ ಬರುವಾಗ ಮಗು ದೊಡ್ಡ ಕನ್ನಡಿಯೊಂದಿಗೆ ಆಡುತಿತ್ತು. ಬಿದ್ದು ಚೂರಾಗಲಿಕ್ಕಿದ್ದ ಆ ಕನ್ನಡಿಯನ್ನು ಕೈಗೆ ಎತ್ತಿಕೊಳ್ಳುವಷ್ಟಕ್ಕೆ ತುಂಗಮ್ಮ ಬಂದು-'ಸುಬ್ಬಮ್ಮಾ, ಆಚಾರ್ರಿಗೆ ಪತ್ರೋಡೆ ಆಸೆ ಆಗಿದೆ. ಅದನ್ನು ಹೇಗೆ ಮಾಡುವದು, ಸುಬ್ಬಮ್ಮಾ?' ಎಂದು ಕೇಳಿದಳು.

ಕೈಯ್ಯಲ್ಲಿದ್ದ ಕನ್ನಡಿಯನ್ನು ಗೋಡೆಗೆ ತೂಗಾಡಿಸುವಾಗ ಸುಬ್ಬಮ್ಮನ ದೃಷ್ಟಿ ಕನ್ನಡಿಯ ಮೇಲೆ ಬಿದ್ದಿತು. ಅದರಲ್ಲಿ ತನ್ನ ಮುಖವನ್ನು ನೋಡುತ್ತಲೇ ೨೦ ವರ್ಷದ ಹಿಂದಿನ ಘಟನೆಗಳು ಸರಸರನೆ ಅವಳ ಸ್ಮರಣೆಗೆ ಬಂದುವು. ಆಗ ತಾನು ರೂಪವತಿಯೂ ಲಾವಣ್ಯವತಿಯೂ ಆದ ಹುಡುಗಿಯಾಗಿದ್ದುದು, ೧೫ ವರ್ಷವಾಗುವಾಗ ತನಗೆ ಮದುವೆಯಾದ್ದು, ಒಂದು ವರ್ಷದಲ್ಲಿ ಪತಿಯು ಕಾಯಲೆಯಾಗಿ ತೀರಿ ಹೋದ್ದು, ರಾಮಾಚಾರ್ರು ಬಂದು ತನ್ನ ತಲೆಯ ಮುಂಡನ ಮಾಡಿಸಿದ್ದು, ಅವರು ತನಗೆ ಕೆಂಪು ಸೀರೆ ಉಡಲಿಕ್ಕೆ ಕೊಡಿಸಿದ್ದು, ತನ್ನ ಚಿನ್ನಾಭರಣ ದಾನ ತೆಗೆದುಕೊಂಡದ್ದು, ಎಲ್ಲಾ ಅವಳ ನೆನಪಿಗೆ ಬಂದು, ಅವಳಿಗೆ ಏನೋ ಏನೋ ಆಯಿತು ಕಂಠವು ಬಿಗಿದು ಬಂತು. ಹೊಟ್ಟೆ ತುಂಬಿ ಬಂತು. ರಾಮಾಚಾರ್ರ ಮೇಲಿದ್ದ ತಿರಸ್ಕಾರವು ಈಗ ಪ್ರತೀಕಾರದ ರೂಪವನ್ನು ತಾಳಿತು. ಹೃದಯದಲ್ಲಿ ಸಣ್ಣದಾಗಿ ಹೊಗೆಯಾಡುತಿದ್ದ ಕಿಡಿಯು ಪ್ರಜ್ವಲಿಸಿ ಉರಿಯ ತೊಡಗಿತು ಅವಳು ಹೇಳಿದಳು-

'ತುಂಗಮ್ಮಾ! ಪತ್ರೋಡೆ ಮಾಡುವದು ಸುಲಭವಲ್ಲ, ಅದಕ್ಕೆ ಒಳ್ಳೆ ಅಭ್ಯಾಸಬೇಕು ಹದಕೆಟ್ಟರೆ ರುಚಿಯಾಗುವದಿಲ್ಲ. ಆದರೂ ಹೇಳ-ತ್ತೇನೆ ಕೇಳು, ಒಂದು ಅರ್ಧ ಪಾವು ಅಕ್ಕಿ ತೆಗೆದುಕೊಂಡು ಅದಕ್ಕೆ ಎರಡು ಸೌರು ಮೆಣಸು ಹಾಕಿ ಚೆನ್ನಾಗಿ ಅರೆಯಬೇಕು. ಉಪ್ಪು ಹುಳಿ, ಬೆಲ್ಲ ತೆಂಗಿನಕಾಯಿ ಯಾವುದೂ ಹಾಕಬಾರದು. ಆ ಮೇಲೆ ಎಲೆಗಳನ್ನು ತೆಗೆದುಕೊಂಡು ದಪ್ಪ ದಪ್ಪ ಮಸಾಲೆ ಹಚ್ಚಿ ಎಲೆಗಳನ್ನು ಸುರಳಿ ಸುತ್ತಿ ಬೇಯಿಸಲಿಕ್ಕೆ ಇಡಬೇಕು. ನಂತರ ಇಗೋ, ಈ ಸಾಬೂನಿನಿಂದ ಚೆನ್ನಾಗಿ ತಲೆ ತಿಕ್ಕಿಕೊಂಡು ಸ್ನಾನಮಾಡಿ ಬರುವ ಹೊತ್ತಿಗೆ ಪತ್ರೋಡೆ ಬೇಯುತ್ತದೆ. ಅದನ್ನು ಬಿಸಿ ಬಿಸಿ ಇರುವಾಗಲೇ ಆಚಾರ್ರಿಗೂ ಕೊಡು, ನೀನೂ ತಿನ್ನು' ಎಂದು ಹೇಳಿ ಒಂದು ಸಾಬೂನನ್ನು ತುಂಗಮ್ಮನ ಕೈಗೆ ಕೊಟ್ಟಳು.

ಳ

ಸುಬ್ಬಮ್ಮ ಹೇಳಿದ ಹಾಗೆಯೇ ಪತ್ರೋಡೆ ಬೆಂದಿತು. ತುಂಗಮ್ಮ ತಲೆಗೆ ಸಾಬೂನು ಹಾಕಿ ಸ್ನಾನ ಮಾಡಿಯೂ ಬಂದಳು. ಮಲಗಿದ್ದ ಆಚಾರ್ರನ್ನು ಎಬ್ಬಿಸಿ ಊಟಕ್ಕೆ ಕರೆದಳು. ಆಚಾರ್ರು ಬಂದು ಊಟಕ್ಕೆ ಕೂತುಕೊಂಡರು. ತುಂಗಮ್ಮ ಬಿಸಿ ಬಿಸಿ ಪತ್ರೋಡೆಯ ಒಂದು ತುಂಡನ್ನು ಎಲೆ ಮೇಲೆ ಹಾಕಿದಳು.

ಪತ್ರೋಡೆಯ ತುಂಡನ್ನು ಬಾಯಿಗೆ ಇಡುತ್ತಲೇ ಆಚಾರ್ರ ಬಾಯಿ ಸುಟ್ಟು ಹೋಯಿತು ಕಾರ ನೆತ್ತಿಗೇರಿತು. ಕಿವಿಗ ಗುರ್ರೆಂದುವು ಕಣ್ಣುಗಳಿಂದ ನೀರಿಳಿಯಿತು. ಅವರು ಕಿಡಿ ಕಿಡಿಯಾಗಿ-'ಎಲೇ, ಎಲೇ, ಇದೆಂಥ ಪತ್ರೋಡೆ...?' ಎನ್ನುತ್ತ ಎದ್ದು ನಿಂತರು.

ಆಚಾರ್ರ ಅವತಾರವನ್ನು ನೋಡಿ ತುಂಗಮ್ಮ ಬೆಚ್ಚಿಬಿದ್ದಳು. 'ಏನಾಗಿದೆ, ಏನಾಗಿದೆ?' ಎಂದು ಅವಳು ಮೆಲ್ಲಗೆ ಕೇಳಿದಳು. 'ಏನಾಗಿದೆ? ನಿನ್ನ ಕರ್ಮ. ಪತ್ರೋಡೆ ತಿನ್ನಲಿಕ್ಕಾಗುವದಿಲ್ಲ, ಬಾಯಿ ಉರಿಯುತ್ತದೆ' ಎಂದವರು ಸಿಟ್ಟಿನಿಂದ ಸಂತಪ್ತರಾಗಿ ತುಂಗಮ್ಮನ ಜುಟ್ಟಿಗೆ ಕೈ ಹಾಕಿದರು. ಅಯ್ಯಪ್ಪಾ! ಎಂಥ ಅದ್ಭುತ!! ತುಂಗಮ್ಮನು ಬೋಳು ತಲೆಯ ಮುಂಡೆಯಾಗಿ ನಿಂತಿದ್ದಳು ಅವಳ ತಲೆ ಕೂದಲುಗಳೆಲ್ಲ ಆಚಾರ್ರ ಕೈಗೆ ಬಂದಿದ್ದುವು ಕೂದಲು ಉದುರಿಸುವ ಬಾದಶಾಹಿ ಸಾಬೂನಿನ ಪ್ರತಾಪ!!

ಈಗಂತೂ ಆಚಾರ್ರು ಉನ್ಮತ್ತರಾಗಿ ತಾಂಡವ ನೃತ್ಯಕ್ಕೆ ಆರಂಭಿಸಿದರು. ತುಂಗಮ್ಮ-'ಆದೇಕೆ ಹಾಗೆ ಮಾಡುತ್ತೀರಿ? ಸುಬ್ಬಮ್ಮ ಹೇಳಿದ ಹಾಗೆ ಮಾಡಿದೆ. ನನ್ನದೇನು ತಪ್ಪು?' ಎಂದಳು. ಆಚಾರ್ರು ಮೂಲೆಯಲ್ಲಿದ್ದ ಕಸಬರಿಗೆ ತೆಗೆದುಕೊಂಡು ಬಂದರು. ಆದರೆ ತುಂಗಮ್ಮ ಅದರ ಎದುರಾಗಲಿಲ್ಲ. ಅವಳು ಸುಬ್ಬಮ್ಮನನ್ನು ಕರತರಲಿಕ್ಕೆ ಹಿಂಬಾಗಿಲಿನಿಂದ ಹೊರಟು ಹೋಗಿದ್ದಳು.

ಈಗ ಆಚಾರ್ರಿಗೆ ಸ್ವಲ್ಪ ಸ್ವಲ್ಪ ಅರ್ಥವಾಗ ತೊಡಗಿತು ಬಾಲವಿತಂತುಗಳ ಶಿರೋಮುಂಡನ ಮಾಡಿದರೆ ಆ ವಿತಂತುಗಳಿಗೆ ಯಾವ ಪ್ರಕಾರ ನೋವಾಗುತ್ತದೆ; ಅವರ ಗಂಡಂದಿರಿಗೆ, ಬಂಧು ಬಾಂಧವರಿಗೆ ಯಾವ ಪ್ರಕಾರ ವೇದನೆಯಾಗುತ್ತದೆ, ಎಂಬುದು ಮೆಲ್ಲಮೆಲ್ಲಗೆ ತಿಳಿಯ ಹತ್ತಿತು ಕೊನೆಗೆ ತಾನು ಸುಬ್ಬಮ್ಮನ ಮುಂಡನ ಮಾಡಿಸುತಿದ್ದಾಗ ಅವಳು ಅವರನ್ನು ಯಾವ ಪ್ರಕಾರ ಕಣ್ಣು ತೆರಳಿಸಿ ನೋಡುತ್ತಿದ್ದಳು ಎಂಬ ಆ ೨೦ ವರ್ಷಗಳ ಹಿಂದಿನ ದೃಶ್ಯವೂ ಈಗ ಅವರ ಕಣ್ಣಮುಂದಾಯಿತ. ತುಂಗಮ್ಮನ ತಲೆ ಬೋಳು ಆಗಲಿಕ್ಕೆ ಸುಬ್ಬಮ್ಮನ ಮಾಟವೇ ಕಾರಣವಾಗಿತ್ತೆಂಬುದೂ ಅವರಿಗೆ ಗೊತ್ತಾಯಿತು. 'ಸೇಡು ತೀರಿಸಿಕೊಳ್ಳುವದಾಗಿದ್ದರೂ, ಹೀಗೆ ತೀರಿಸಿಕೊಳ್ಳಬೇಕಾಗಿತ್ತೇ?' ಎಂದು ಆಚಾರ್ರು ಉರಿಕಾರುತ್ತ ಸುಬ್ಬಮ್ಮನ ಮನೆ ಕಡೆಗೆ ಓಡಿ ಹೋದರು.

ಆದರೆ ಅಲ್ಲಿ ಮನೆ ಖಾಲಿ ಆಗಿತ್ತು. ಆ ದಿನ ೯ ಘಂಟೆಯ ಮೈಲಿಗೇ ಸುಬ್ಬಮ್ಮ ಮಕ್ಕಳು ಮರಿಗಳನ್ನು ಕರಕೊಂಡು ಎಲ್ಲಿಗೋ ಬಿಡಾರ ಸಾಗಿಸಿದ್ದಳು!

---


**A Boon to Females!**

**UTERINE Elixir:**-a marvellous remedy for any type of menstrual disorder in ladies Agents wanted on commission basis

*Apply to —*

**M. D. VORA & Co.,**

*Suppliers of drugs, patent medicine and sickroom requisites*

**Princess street, Bombay 2**

# ವಿಶ್ವದ ಮೂಲ ಕಂಡು ಹಿಡಿಯುವ ಸಾಹಸ!

## ನಭೋ ಮಂಡಲದೊಳಗಿನ ಸಪ್ತ ಕಿರಣಗಳ ಪರಿಶೋಧನೆ!!

ಬಹಳ ದಿನಗಳಿಂದ ಜನರು ಪೃಥ್ವಿಯ ವಾಯು ಮಂಡಲದ ಮುಂದಿನ ನಿತಾಂತವು ಶೂನ್ಯವಾಗಿದೆ ಎಂದು ಹೇಳುತ್ತಾರೆ ನಿಜ. ಸಾವಿರಾರು ಮೈಲುಗಳ ಪರ್ಯಂತ ಯಾ ಅದಕ್ಕಿಂತ ಮುಂದೆ ಹಾರಿದರೆ ಗ್ರಹ ಅಥವಾ ನಕ್ಷತ್ರವು ನಮಗೆ ಸಿಗುವುದು. ಇದೇ ಧೋರಣೆಯಿಂದ ಗಣಿತಜ್ಞರು ಗಗನ ಮಂಡಲದ ನಕ್ಷತ್ರಗಳ ಮತ್ತು ಗ್ರಹಗಳ ಗತಿಯ ವಿಷಯಕವಾಗಿ ಲೆಕ್ಕಮಾಡಿರುವರು ಮತ್ತು ಅವರ ಹೇಳಿಕೆ ಏನೆಂದರೆ ಗ್ರಹಗಳ ಮತ್ತು ನಕ್ಷತ್ರಗಳ ನಡುವೆ ಸಂಪೂರ್ಣ ರಿಕ್ತದೇಶ (Vacuum)ವಿದೆ ಎಂದು. ಗಣಿತಜ್ಞರ ಈ ಲೆಕ್ಕವನ್ನು ಆಧಾರವಾಗಿಟ್ಟುಕೊಂಡು ಇಂದಿಗೂ ಎಷ್ಟೋ ಮಂದಿ ವೈಜ್ಞಾನಿಕರು ನಭೋಮಂಡಲದಲ್ಲಿ ಅನುಸಂಧಾನ ನಡಿಸುತ್ತಿರುವರು. ವಾಯು ಮಾನವು ಹೆಚ್ಚೆಂದರೆ ಆರೇಳು ಮೈಲುಗಳ ಎತ್ತರದಲ್ಲಿ ಹಾರಬಲ್ಲುದಲ್ಲದೇ ಅದಕ್ಕಿಂತ ಹೆಚ್ಚಿನ ಎತ್ತರದಲ್ಲಿ ಹಾರಲು ಶಕ್ತವಾಗಲಿಲ್ಲ. ಪರಂತು ಬೆಲೂನುಗಳಂತೆ ಇರುವ ಗುಬ್ಬಾರಿಗಳು ವಿಮಾನಕ್ಕಿಂತಲೂ ಎತ್ತರ ಹಾರುತ್ತವೆ. ಈ ಅನುಸಂಧಾನಗಳಲ್ಲಿ ಪ್ರೊಫೆಸರ್ ಪಿಕಾರ್ಡ್‌ರವರ ಸಾಹಸವು ಅತ್ಯಂತ ಶ್ಲಾಘನೀಯವಾಗಿದೆ. ಧಾತುವಿನ ಗೋಳದೊಳಗೆ ಕುಳಿತುಕೊಂಡು ಗುಬ್ಬಾರಿಗಳ ಸಹಾಯದಿಂದ ಪಿಕಾರ್ಡ್‌ರವರು ಹತ್ತು ಮೈಲುಗಳ ಅಂತರದಲ್ಲಿ ೧೩ ಘಂಟೆಗಳ ಪರ್ಯಂತ ಹಾರುತ್ತ ಕುಳಿತುಬಿಟ್ಟಿದ್ದರು. ಧಾತುವಿನ ಗೋಳದೊಳಗೆ ಬೇಕಾಗುವಂತಹಯಂತ್ರಗಳನ್ನೂ ಇನ್ನಿತರ ಉಪಕರಣಗಳನ್ನೂ ಇಟ್ಟುಕೊಂಡಿದ್ದರು. ರಷಿಯಾದಲ್ಲಿ ಮಿಸ್ ಗುಬ್ಬಾರಳು ೫೬ ಮೈಲುಗಳ ತನಕ ಹಾರಿದ್ದಳು. ಈ ಅಭಿಯಾನಗಳ ಮೂಲಕ ಊರ್ಧ್ವಾಕಾಶದ ವಾಯುವಿನ ಉಷ್ಣತಾಮಾನ, ಅದರ ಘನತೆ ಮತ್ತು ಅಲ್ಲಿನ ಗ್ಯಾಸ್- ಇವೆಲ್ಲವನ್ನು ಈಗಾಗಲೇ ವೈಜ್ಞಾನಿಕರು ಅರಿತುಕೊಂಡಿದ್ದಾರೆ. ಈ ಹಿಂದೆ ಜನರು ಮನುಷ್ಯನು ಹೇಗೆ ಹೇಗೆ ಮೇಲೇರುವನೋ ಹಾಗೆ ಹಾಗೆ ವಾಯುಮಂಡಲದ ತಾಪಕ್ರಮವು ಕಮ್ಮಿಯಾಗುತ್ತ ಬರುತ್ತದೆ; ಮುಂದೆ ಹೋಗುತ್ತಾ ಹೋಗುತ್ತ ಗಾಳಿಯೇ ಇಲ್ಲವಾಗಿ ಮನುಷ್ಯನು ನಾಯಲೂ ಬಹುದು ಎಂದು ಹೇಳುತ್ತಿದ್ದರು. ಆದರೆ ಮೇಲೆ ಉಲ್ಲೇಖಿಸಿದ ಅನುಸಂಧಾನಗಳಿಂದ ಅದು ಸುಳ್ಳೆಂದು ಸ್ಪಷ್ಟವಾಗುತ್ತದೆ. ಮೇಲಕ್ಕೇರಿದಂತೆ ಮೇಲಿನ ವಾಯುವಿನ ತಾವಕ್ರಮಕ್ಕಿಂತ ಕೆಳಗಿನ ವಾಯುವೇ ಮನುಷ್ಯನಿಗೆ ಬೇಕಾಗುತ್ತದೆ ಅಂತ ಮೇಲಕ್ಕೇರಿದವರ ಅಂಬೋಣ.

ಶಬ್ದತರಂಗಗಳು ಕೂಡ ವಾಯುವಿನ ಉಷ್ಣತಾಮಾನದಿಂದ ಪ್ರಭಾವಿತವಾಗುತ್ತವೆ ಶಬ್ದತರಂಗಗಳ ಸಂಬಂಧವಾಗಿ ನಡೆಸಿದ ಅನುಸಂಧಾನಗಳಿಂದ ಅದು ನಿಜವೆಂದು ಕಂಡುಬಂದಿದೆ ವಾಸ್ತವವಾಗಿಯೂ ಮೇಲಿನ ವಾಯುಸ್ತರದ ಉಷ್ಣತೆಯು ಒಮ್ಮಿಂದೊಮ್ಮೆಗೆ ವ್ಯಭಾವಿತವಾಗುತ್ತದೆಂಬ ಮಾತು ಇದರಿಂದಲೂ ಸತ್ಯವಾಯಿತು. ಏಕಾಏಕಿಯಾಗಿ ತಾಪಕ್ರಮವು ಪ್ರಭಾವಿತವಾಗುವುದರ ದ್ಯೋತಕವು ಅಂತರಿಕ್ಷವು ರಿಕ್ತವಾಗಿಲ್ಲ ವೆಂದು ತೋರಿಸಿಕೊಡುತ್ತದೆ ಈ ಸೂತ್ರಗಳನ್ನು ತೆಗೆದುಕೊಂಡು ವೈಜ್ಞಾನಿಕರು ಊರ್ಧ್ವಾಕಾಶ ಸಂಬಂಧದ ಪ್ರಯೋಗಗಳನ್ನು ಅನೇಲೆ ಮನೋಯೋಗ ಪೂರ್ವಕ ಮಾಡತೊಡಗಿದರು. ನೂತನವಾದ ವಸ್ತುವೊಂದನ್ನು ಹಿಡಿತದಲ್ಲಿಟ್ಟುಕೊಳ್ಳಲು ವ್ಯಯತ್ನಕ್ಕಾರಂಭ ಮಾಡಿದರು.

ದಪ್ಪಗಾಜಿನ ಒಂದು ತ್ರಿಕೋಣದ ಮೇಲೆ ಬಿದ್ದಶ್ವೇತಪ್ರಕಾಶವು ಅದರಿಂದ ಹೊರಬಿದ್ದಾಗ ಹೇಗೆ ಇಂದ್ರಧನುಸ್ಸಿನಂತೆ ನಾನಾ ವರ್ಣಗಳನ್ನು ತಾಳುವುದು ಎಂಬುದನ್ನು ನಾವೂ ಕಂಡಿದ್ದೇವೆ. ಭೌತಿಕ ವಿಜ್ಞಾನವು ನಮಗೆ ಇದನ್ನು ತೋರಿಸಿಕೊಡುತ್ತದೆ. ಏನೆಂದರೆ ಯಾವುದಾದರೊಂದು ವಸ್ತುವು ಗೇಸಿನ ರೂಪದಲ್ಲಿದ್ದು ದಾಹಕವಾಗಿದ್ದರೆ ಅದರಿಂದ ಹೊರ ಬರುವ ಪ್ರಕಾಶರಶ್ಮಿಗಳ ವಿಶ್ಲೇಷಣ ಮಾಡಿದನಂತರ ಕೇವಲ ಇಂದ್ರನ ಧನುಸ್ಸಿನ ವರ್ಣವೇಕೆ ಅದಕ್ಕಿಂತಲೂ ಹೆಚ್ಚಿನ ಥಳಥಳಿಕೆಯ ವರ್ಣವು ನಮಗೆ ಕಾಣುತ್ತದೆ ಭಿನ್ನಭಿನ್ನ ತತ್ವಗಳಿಗನುಸಾರವಾಗಿ ಆ ತತ್ವಗಳು ಭಿನ್ನವಾಗುತ್ತವೆ. ಆರ್ಥಾತ್ ಯಾವನಾದರೊಬ್ಬ ಪರಿಚಯದ ಮನುಷ್ಯನ ಸ್ವರವನ್ನು ಕೇಳಿ ನಾವು ಹೇಗೆ ಅವನನ್ನು ಗುರುತಿಸುವೆವೋ ಅಂತೆಯೇ ವೈಜ್ಞಾನಿಕರು ಈ ರೇಖೆಗಳ ಮನನ ಮಾಡಿ ನಮಗೆ ಈ ಪದಾರ್ಥದಿಂದ ಈ ರೀತಿಯ ರಶ್ಮಿ ಹೊರಬಿದ್ದೀತು ಮತ್ತು ಇದರಲ್ಲಿ ಇಂತಹದೆ ತತ್ವವಿದೆ ಎಂಬುದನ್ನು ಸುಲಭವಾಗಿ ತೋರಿಕೊಡಬಲ್ಲರು. ಈ ಅನುಮಾನದ ಸಹಾಯದಿಂದ ಪ್ರಯೋಗ ಶಾಲೆಯಲ್ಲಿ ಕುಳಿತ ವೈಜ್ಞಾನಿಕನು ನಮಗೆ ಈಗ ಚಂದ್ರಮನಿಂದ ಇಂತಹ ರಶ್ಮಿ ಹೊರಬೀಳುತ್ತದೆ. ಈಗ ಸೂರ್ಯನಿಂದ ಇಂತಹ ರಶ್ಮಿ ಬೀಳುತ್ತದೆ. ಅದರಲ್ಲಿ ಈ ತತ್ವವಿದೆ- ಇತ್ಯಾದಿಗಳನ್ನೆಲ್ಲಾ ಹೇಳಬಲ್ಲನು, ಮಾತ್ರವಲ್ಲ ಯಾವ ಗ್ರಹಗಳಲ್ಲಿ ಯಾವ ನಕ್ಷತ್ರದಲ್ಲಿ ಯಾವ ವಾಯು ಇದೆ. ಎಂಬುದನ್ನು ತಿಳಿಸುತ್ತಾನೆ.

ಒಂದು ವೇಳೆ ಉಜ್ವಲ ರಶ್ಮಿಗಳು ಯಾವುದಾದರೊಂದು ತತ್ವದ ಶೀತಲ ವಾಷ್ಪಮಂಡಲದ ಮೂಲಕ ಬಿದ್ದರೆ ಅದನ್ನು ವಿಶ್ಲೇಷಣದ ನಂತರ ರಶ್ಮಿ-ಚಿತ್ರದಲ್ಲಿ ಥಳಥಳಿಸುವ ರೇಖೆಗಳ ಬದಲು ಕಪ್ಪು ರಶ್ಮಿಗಳನ್ನು ಕೂಡಿಸುತ್ತಾರೆ. ಎಲ್ಲಿ ಝಗಝಗಿಸುವ ರೇಖೆಗಳು ಪ್ರಜ್ವಲಿತ ಗ್ಯೇಸಿಗೆ ಕಾರಣವಾಗುತ್ತವೋ ಅಲ್ಲಿಯೇ ಈ ರೇಖೆಗಳು ಹುಟ್ಟುತ್ತವೆ.

### ಕೊಸ್ಮಿಕ್ ಗ್ಯಾಸ್

ಈ ಪ್ರಯೋಗಗಳ ನಡುವೆ ಅಮೇರಿಕದ ಬಾ
ಪ್ರಸಿದ್ಧ ವೈಜ್ಞಾನಿಕನು ದೂರದೇಶಗಳ ತಂ
ಯಿಂದ ಯಾವ ಪ್ರಕಾಶವು ಅಲ್ಲಿ ಬೀಳುವುದೋ
ಅದರ ವಿಶ್ಲೇಷಣ ಮಾಡಿದ ಬಳಿಕ ಅದರಿಂ
ಹೊರಬಿದ್ದ ಕೆಲವು ಕಪ್ಪುರೇಖೆಗಳಿಂದ ಎಲ್ಲ
ರಶ್ಮಿಗಳನ್ನು ಒಂದುಗೂಡಿಸಬಹುದು ಎಂ
ಕಂಡುಹಿಡಿದಿರುವನು. ಪೃಥ್ವಿಯ ವಾಯುಮಂ
ಲದ ನಾಲ್ಕೂ ನಿಟ್ಟಿನಲ್ಲಿ ತುಂಬಿಕೊಂಡಿರು

ಬಾಷ್ಪಮಂಡಲಗಳಿಂದ ಅಂತಹ ರೇಖೆಗಳು ಉತ್ಪನ್ನವಾಗುವವೆಂದು ನಿಸ್ಸಂದೇಹವಾಗಿ ವೈಜ್ಞಾನಿಕರು ಹೇಳುತ್ತಾರೆ. ಈ ಕ್ಷೇತ್ರದಲ್ಲಿ ವಿಸ್ತೃತವಾಗಿ ಅನುಸಂಧಾನ ನಡಿಸಿದ ಬಳಿಕ ವೈಜ್ಞಾನಿಕರು ಕಂಡುಹಿಡಿದಿರುವರೇನೆಂದರೆ ಈ ಕೋಸ್ಮಿಕ ಗ್ಯಾಸ್‌ಗಳು ವಾಯಮಂಡಲದ ಮುಂದಿರುವ ರಿಕ್ತದೇಶದಲ್ಲಿ ಸಮಾನರೂಪದಿಂದಿವೆ ಎಂದು. ತಾರೆಯು ಎಷ್ಟೇ ದೂರವಿದ್ದರೂ ಅದರಲ್ಲಿನ ಕಪ್ಪುರಶ್ಮಿ ಚಿತ್ರವು ಅದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ನಕ್ಷತ್ರಕ್ಕೂ ಭೂಮಿಗೂ ನಡುವಿನ ಪ್ರದೇಶದಲ್ಲೆಲ್ಲಾ ಈ ಕೋಸ್ಮಿಕ ಗ್ಯಾಸ್‌ಗಳು ತುಂಬಿರುತ್ತವೆ. ಹಿಂದಿನ ಕಾಲದವರು ಹೇಳುವಷ್ಟು ತಾಪಕ್ರಮವು ರಿಕ್ತ ಪ್ರದೇಶದಲ್ಲಿ ಕಮ್ಮಿಯಾಗಿಲ್ಲ. ಇದಕ್ಕೆ ಈ ಕೋಸ್ಮಿಕ ಗ್ಯಾಸುಗಳೇ ಕಾರಣ. ಸೂರ್ಯನ ಪ್ರಕಾಶ ರಶ್ಮಿಗಳು ಕೋಸ್ಮಿಕ ಗ್ಯಾಸಿನ ಅಣುಗಳ ಮೇಲೆ ಬೀಳುತ್ತವೆ ಆ ಅಣುಗಳು ಪ್ರಕಾಶ ಪುಂಜವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುತ್ತವೆ. ಈ ಪರಿಸ್ಥಿತಿಯಲ್ಲಿ ಆ ಅಣುವಿನ ಒಂದನೆಯ ಪರಮಾಣುವು (Electron) ಉತ್ತೇಜಿತವಾಗಿ ತೀವ್ರಗತಿಯಿಂದ ಹೊರಬೀಳುತ್ತದೆ. ಅದೇ ಪರಮಾಣುವು ಮತ್ತಾವುದಾದರೂ ಅಣುವಿಗೆ ತಾಗಿದರೆ ಅದರ ಗತಿಯೂ ಹಾಗೆಯೇ ಆಗುತ್ತದೆ. ಹೀಗೆ ಪರಸ್ಪರ ಘರ್ಷಣದಿಂದ ಈ ಪರಮಾಣುಗಳೆಲ್ಲಾ ತೀವ್ರಗತಿಯನ್ನು ಹೊಂದುತ್ತವೆ. ಮತ್ತು ವಿಜ್ಞಾನದ ಇದೊಂದು ಸ್ಪಷ್ಟ ಸಿದ್ಧಾಂತವೇನೆಂದರೆ ಗ್ಯಾಸುಗಳ ತಾಪಕ್ರಮವು ಮೇಲಿನ ಆ ಗ್ಯಾಸ್ ಅಣುಗಳ ಗತಿಯ ಮೇಲೆ ನಿರ್ಭರವಾಗಿದೆ. ಒಂದುವೇಳೆ ಗತಿಯ, ಹೆಚ್ಚಾದರೆ ತಾಪಕ್ರಮವೂ ಹೆಚ್ಚಾಗುತ್ತದೆ. ಇದರ ಮೇಲಿನಿಂದ ಆಕಾಶವನ್ನೇರಲು ತಾಪಕ್ರಮವು ಜಾಸ್ತಿಯಾಗಬೇಕು. ತಾಪಕ್ರಮವು ಜಾಸ್ತಿಯಾಗಬೇಕಾದರೆ ಅಣುಗಳ ಘರ್ಷಣ ತೀವ್ರಗತಿಯದಾಗಿರಬೇಕು ಎಂಬುದನ್ನು ತಿಳಿಯಬಹುದು. ಕೊಸ್ಮಿಕ್ ಗ್ಯಾಸ್‌ಗಳ ಸೂಕ್ಷ್ಮ ನಿರೀಕ್ಷಣೆ ಮಾಡಿ ನೋಡಿದಾಗ ಇದರಲ್ಲಿನ ತತ್ವವನ್ನು ಪೃಥ್ವಿಯ ಮೇಲೂ ಉಪಯೋಗಿಸಿಕೊಳ್ಳಬಹುದು ಎಂದು ಸ್ಪಷ್ಟವಾಗುತ್ತದೆ. ಉಪ್ಪು ಸಾಧಾರಣ ವಾಯು ಇವುಗಳ ತತ್ವವು ಕೊಸ್ಮಿಕ್ ಗ್ಯಾಸುಗಳಲ್ಲಿ ಮಿಲನವಾಗುತ್ತದೆ ಕೆಲವು ವೇಳೆ ಗಗನಮಂಡಲದಲ್ಲಿ ಕೋಸ್ಮಿಕ್ ಗ್ಯಾಸುಗಳ ಒಂದು ನಿಕೃಷ್ಟ ಛಾಯೆಯು ವಸರಿಸಿರುತ್ತದೆ. ಇವುಗಳ ಈ ಪ್ರಕಾಶದಿಂದ ಗಗನಮಂಡಲವು ನಿಸ್ಪಷ್ಟವಾಗಿ ಕಾಣುತ್ತದೆ ಪ್ರಯೋಗಶಾಲೆಯಲ್ಲಿ ಅತಿ ದೊಡ್ಡ ವೈಕುಮ್ (Vacuum) ಉತ್ಪನ್ನ ಮಾಡಿದ ನಂತರವೂ ಹಲವು ಗೇಸ್ ಅಣುಗಳು ಬಾಕಿ ಉಳಿಯುತ್ತವೆ. ಯದ್ಯಪಿ ಪೂರ್ಣ ವೈಕುಮ್ ಇಲ್ಲಿಯೂ ಇಲ್ಲದಿದ್ದರೂ ಗಗನಮಂಡಲದ ವೈಕುಮ್ ಪ್ರಯೋಗ ಶಾಲೆಯ ವೈಕುಮ್‌ಕ್ಕಿಂತ ಅಧಿಕ ಶುದ್ಧವಾಗಿರುತ್ತದೆ. ಪರಂತು ಇಡೀ ವಿಶ್ವದಲ್ಲಿನ ಕೋಸ್ಮಿಕ್ ಗೇಸುಗಳನ್ನು ಏಕತ್ರೀಕರಿಸಿದರೂ ವಿಶ್ವದ ಎಲ್ಲದಕ್ಕಿಂತ ಉತ್ತಮ ಪದಾರ್ಥಗಳ ⅓ನೇ ಅಂಶವನ್ನು ನೋಡಲು ಶಕ್ತರಾಗುತ್ತೀವ

ಈ ವಿಶ್ವವ್ಯಾಪಿ ಗ್ಯಾಸು ಎಲ್ಲಿಂದ ಹುಟ್ಟಿತು ಎಂಬ ವಿಚಾರವೊಂದು ಮನಸ್ಸಿನಲ್ಲಿ ಹೊಳೆಯುತ್ತದೆ. ಜ್ಯೋತಿಷ್ಯಜ್ಞರ ಮತವೇನೆಂದರೆ ವಿಶ್ವ ನಿರ್ಮಾಣದ ನಂತರ ತತ್ವಗಳ ಸಮೂಹವೆಲ್ಲಾ ಕೋಸ್ಮಿಕ್ ಗ್ಯಾಸುಗಳ ರೂಪದಿಂದ ಚಿಲ್ಲಿಬಿಡಲ್ಪಟ್ಟಿದೆ ಎಂದಿದೆ ಸೃಷ್ಟಿಯ ಆದಿಯಲ್ಲಿ ವಿಶ್ವದ ಎಲ್ಲ ಪದಾರ್ಥಗಳು (Matter) ಈ ಕೋಸ್ಮಿಕ್ ಗ್ಯಾಸಿನ ರೂಪದಿಂದಿದ್ದವು ಇದರಿಂದ ಗ್ರಹ ಮತ್ತು ಉಪಗ್ರಹಗಳ ನಿರ್ಮಾಣವಾಯಿತು ಎಂದು ಜ್ಯೋತಿಷ್ಯರ ಮತ.

## ಕೋಸ್ಮಿಕ್ ರಶ್ಮಿಗಳು

ಬಿಹಿರ್ಜಗತ್ತಿನ ಎಲ್ಲದಕ್ಕಿಂತ ಶಕ್ತಿಶಾಲಿ ಸಂದೇಶವಾಹಕ ರಶ್ಮಿಗಳೆಂದರೆ ಇವೇ ಕೋಸ್ಮಿಕ್ ರಶ್ಮಿಗಳು. ಈ ರಶ್ಮಿಗಳು ಎಕ್ಸ್‌ರೇಗಿಂತಲೂ ತೀಕ್ಷ್ಣಮಾದುವುಗಳು. ಎಂಟು ಪೀಟು ದಪ್ಪದ ಕಬ್ಬಿಣದೊಳಕ್ಕೂ ಇವು ಪ್ರವೇಶಮಾಡುತ್ತವೆ. ಆಕಾಶದಲ್ಲಿ ಮೇಲಕ್ಕೇರಿದಂತೆ ಈ ರಶ್ಮಿಗಳು ನಮಗೆ ಸಿಗುವವು ಹೆಚ್ಚಾಗುವು, ನೀರಿನೊಳಗೆ ಅಂದರೆ ಎಲ್ಲೆ ಬೆಳಕು ಮುಟ್ಟುವುದಿಲ್ಲವೋ ಅಲ್ಲಿಯವರೆಗೂ ಈ ರಶ್ಮಿಗಳು ನೀರನ್ನು ಭೇದಿಸಿ ಪ್ರವೇಶ ಮಾಡುತ್ತವೆ. ಅಂದನುಮೇಲೆ ಈ ರಶ್ಮಿಯ ತೀಕ್ಷ್ಣತ್ವವು ಎಷ್ಟಿದೆ ಎಂಬುದನ್ನು ಯೋಚಿಸಬಹುದು

ಈ ರಶ್ಮಿಗಳು ಬಾಹ್ಯ ಪ್ರದೇಶಗಳಿಂದ ಪೃಥ್ವಿಯ ವಾಯುಮಂಡಲದಲ್ಲಿ ಕೂಡಿಕೊಳ್ಳುತ್ತವೆ ಎಂದು ವೈಜ್ಞಾನಿಕರು ಹೇಳುತ್ತಾರೆ ಪರಂತು ಅದು ಎಲ್ಲಿಂದ ಬರುತ್ತದೆ? ಎಷ್ಟು ದೂರದಿಂದ ಬರುತ್ತದೆ? ಎಂಬುದನ್ನು ತಿಳಿಸಲು ಮಾತ್ರ ಇದು ವರೆಗೂ ವೈಜ್ಞಾನಿಕರಿಗೆ ಸಾಧ್ಯವಾಗಲಿಲ್ಲ ಕೆಲವರು ಈ ರಶ್ಮಿಗಳು ನಕ್ಷತ್ರಗಳಿಂದ ಬರುತ್ತವೆಯಂದು ಹೇಳುತ್ತಾರೆ. ಈ ಮಾತು ಸುಳ್ಳೆಂದೂ ನಕ್ಷತ್ರಗಳಿಗೂ ಈ ರಶ್ಮಿಗಳಿಗೂ ಯಾವ ಸಂಬಂಧವೂ ಇಲ್ಲವೆಂದೂ ಪ್ರೊಫೆಸರ್ ಮಿಲ್ಲಿಕನ್‌ರವರು ತೋರಿಸಿಕೊಟ್ಟಿದ್ದಾರೆ ಈ ರಶ್ಮಿಗಳು ಅನುಸಂಧಾನ ದ್ವಾರಾ ವಿದ್ಯುತ್ಕಣಗಳಂತಿವೆಯೆಂದು ತಿಳಿದು ಕೊಳ್ಳಲಾಯಿತು. ಆದರೂ ಅದರ ಪ್ರಾರಂಭವಾವುದು ತ್ಕಣದಂತಿದ್ದು ಆ ನಂತರ ಭಿನ್ನವಾಗುತ್ತದ್ದಾದ್ದರಿಂದ ಮೇಲೆ ಉಲ್ಲೇಖಿಸಿದ ಅನುಸಂಧಾನವನ್ನು ಧೃಢೀಕರಿಸಬರುವುದಿಲ್ಲ ಅಲ್ಲದೆ ಇತ್ತೀಚೆಗೆ ಮಾಡಿದ ಇದರ ಪರೀಕ್ಷಾಕಾಲದಲ್ಲಿ ಪ್ರಾರಂಭದಲ್ಲಿ ಈ ಕೋಸ್ಮಿಕ ರಶ್ಮಿಗಳು ಪ್ರಕಾಶ ಕಿರಣಗಳ ರೂಪದಲ್ಲಿ ಬಾಹ್ಯ ಪ್ರದೇಶಗಳಿಂದ ಪೃಥ್ವಿಯ ವಾಯುಮಂಡಲದಲ್ಲಿ ನೀರಿಕೊಳ್ಳುತ್ತವೆ. ಮತ್ತು ಪುನಹ ವಾಯುವಿನ ಅವಯವಗಳಿಂದ ಬೇರ್ಪಟ್ಟು ಆ ಅವಯವಗಳಲ್ಲಿನ ವಿದ್ಯುತ್ಕಣಗಳನ್ನು ಬೇರ್ಪಡಿಸಿ ಬಿಡುತ್ತವೆ ಎಂದು ನಿರ್ಧಾರ ಮಾಡಿದ್ದಾರೆ. ಮಿಲ್ಲಿಕನ್‌ರವರು ಸಹ ಸತ್ಯವೆಂದು ಹೇಳಿದ್ದಾರೆ ಈ ಮತದನುಸಾರವಾಗಿ ನಕ್ಷತ್ರಗಳ ಮಗ್ಗುಲವು ದೇಶದ ಅನುಕೂಲವ ಸ್ಥಿತಿಗನುಸಾರವಾಗಿ ಪದಾರ್ಥಗಳು ನಷ್ಟ ಹೊಂದುತ್ತವೆ. ಆಯಿನ್‌ಸ್ಟಾಯಿನ್‌ರವರ ಸಿದ್ಧಾಂತದನುಸಾರ ನಷ್ಟ ಹೊಂದಿದ ಪದಾರ್ಥಗಳು ಪ್ರಕಾಶ ಕಿರಣಗಳಲ್ಲಿ ಪರಿವರ್ತನ ಹೊಂದುತ್ತವೆ ಇದೇ ರೀತಿ ಕೋಸ್ಮಿಕ್ ರಶ್ಮಿಗಳು ಅನಂತರ ಅಂತರಿಕ್ಷದಲ್ಲಿ ಪ್ರತಿಕ್ಷಣವೂ ಹುಟ್ಟಿಕೊಳ್ಳುತ್ತವೆ ಕೋಸ್ಮಿಕ್ ರಶ್ಮಿಗಳಲ್ಲಿ ಅಪರಿಮಿತ ಶಕ್ತಿ ಭಂಡಾರವಿದೆ ಒಂದು ವೇಳೆ ಈ ಕೋಸ್ಮಿಕ್ ರಶ್ಮಿಗಳನ್ನ ವೈಜ್ಞಾನಿಕರು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಸಮರ್ಥರಾದರೆ ಮುಂದೆ ಒಂದು ತತ್ವವನ್ನು ಮತ್ತೊಂದು ತತ್ವದಲ್ಲಿ ಪರಿವರ್ತಿಸಲು ಏನೂ ಕಷ್ಟವಾಗಲಾರದು ಕಬ್ಬಿಣವನ್ನಾಗಲೀ ತಾಂಬ್ರವನ್ನಾಗಲೀ ಈ ರಶ್ಮಿಗಳ ಪ್ರಯೋಗದಿಂದ ಚಿನ್ನದಂತೆ ಮಾರ್ಪಡಿಸಬಹುದು

ಏನಾದರಾಗಲೀ ಈ ರಶ್ಮಿಗಳು ಅನಂತ ದೂರವಿರುವ ಆಕಾಶದಿಂದಲಾ ಬರುವದೆಂಬುದು ಖಂಡಿತ ಯಾವ ಸಮಯದಲ್ಲಿ ಜಗತ್ತಿನ ಪ್ರಾದುರ್ಭವವಾಯಿತೋ ಅಂದಿನಿಂದ ಈ ರಶ್ಮಿಗಳು ಹುಟ್ಟುತ್ತಲೇ ಇವೆ. ಅದರಿಂದ ಆ ಕಿರಣಗಳಿಗೆ ಭೂಮಿಯನ್ನು ಮುಟ್ಟಲು ಮಾತ್ರ ಕೋಟ್ಯಾಂತರ ವರ್ಷಗಳು ಬೇಕಾಗುವುವು ಇವುಗಳ ನಿಂ ಪೂರ್ಣ ಮನನವನ್ನು ವೈಜ್ಞಾನಿಕರು ಮಾಡಿಕೊಂಡಲ್ಲ ಒಗತ್ತಿನ ಪ್ರಾರಂಭಿಕ ಚರಿತ್ರೆಯ ಪ್ರಥಮ ಪುಟವನ್ನು ಕೂಡಾ ಅವರು ಕಂಡು ಹಿಡಿಯಬಲ್ಲರೆಂಬುದು ನಿರ್ವಾದದ ಮಾತು.

**ಮುಂದಿನ ಸಲ**
**ಪ್ರಸರಣ ಶೀಲ ಜಗತ್ತು**

# BHUVANENDRA PRODUCTS LTD.
## KATAPADI, S. Kanara.

## ತಮ್ಮ ಆರೋಗ್ಯ ಲಾಭಕ್ಕಾಗಿ - - - - -

ಉತ್ತಮವಾದ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳನ್ನು ಚುನಾಯಿಸುವುದರಿಂದಲೆ
ಮುಂದಿನ ಕಾಲಾಪವ್ಯಯ, ಕಷ್ಟ ನಷ್ಟಗಳನ್ನು ತಪ್ಪಿಸಿಕೊಂಡು
ಶ್ರೇಯಸ್ಸನ್ನು ಪಡೆಯಲು ಸಾಧ್ಯವಿದೆ!

**ಅದಕ್ಕಾಗಿಯೇ ಯಾವಾಗಲೂ ಅನುಭವಸಿದ್ಧವಾದ ಔಷಧಗಳನ್ನೇ**
**ಮರೆಯದೆ ಉಪಯೋಗಿಸಿಕೊಳ್ಳಿರಿ!**

ಭುವನೇಂದ್ರ ಸಂಸ್ಥೆಯ **50** ವರ್ಷಗಳಿಗೆ ಮೇಲ್ಪಟ್ಟ ಅನುಭವೀಕವಾದ ಔಷಧಗಳ
ಎಲಾ ಕಡೆಗಳಲ್ಲೂ ಮಾರಲ್ಪಡುವ ಏರ್ಪಾಡು ಮಾಡಲಾಗಿದೆ.

ಚಂದ್ರಮಸ್—**ವಾಂತಿಭೇದಿ, ಅಜೀರ್ಣ, ಹೊಟ್ಟೆನೋವು, ಹಲ್ಲುನೋವು ಇತ್ಯಾದಿಗಳಿಗೆ.**

ಗರ್ಭಪಾಲ—**ಗರ್ಭಾಶಯದ ಅಶಕ್ತತೆ, ಗರ್ಭಶೂಲ ಇತ್ಯಾದಿಗಳಿಗೆ.**

ಕೃಷ್ಣಾರಕ್—**ಕೆಜ್ಜಿ, ಕುಷ್ಠ, ಶ್ವಾಸಕಾಸ, ಉಪದಂಶ, ರಕ್ತದೋಷ ಇತ್ಯಾದಿಗಳಿಗೆ.**

ಚಿತ್ರಕ **ಮುಕ್ಕಳ ಗ್ರಹಣಿ, ಅತಿಸಾರ, ಅಗ್ನಿಮಾಂದ್ಯ ಇತ್ಯಾದಿಗಳಿಗೆ.**

ಭುವನಾಂಜನ—**ಎಲ್ಲಾ ತರದ ನೋವು—ವೇದನೆಗಳಿಗೆ.**

ತಾರಾಂಜನ—**ಸಕಲವಿಧ ನೇತ್ರರೋಗಗಳಿಗೆ, ಶ್ರೇಷ್ಠವಾದುದು.**

ಇತರ ಔಷಧಗಳ ವಿವರಕ್ಕೆ ಕೆಟಲಾಗನ್ನು ತರಿಸಿಕೊಂಡು ನೋಡಿರಿ.

*Use Always Bhuvanendra Products-*

**Bhuvanendra Leads & others follow!**

# ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದಕ್ಷಿಣ ಕನ್ನಡ.

— ಆಂಗ್ಲ ಗ್ರಂಥಾಧಾರದಿಂದ —

# ಸ್ವಪ್ನ ಫಲ

## Interpretations of Dreams

ಲೇಖಕರು
ಶ್ರೀ. ಆರ್. ಎಸ್. ಭಾರಧ್ವಾಜ

(ಕೆಳದ [illegible] ಬರ ತಿಂಗಳ [illegible] ಮುಂದುವರಿದ [illegible])

**ಸ್ವಪ್ನದಲ್ಲಿ—**

ಮಲಿನವಸ್ತ್ರ ಧರಿಸಿದ್ದರೆ = ಸಂಬಂಧಿಕರಲ್ಲಿ ಯಾರಾದರೂ ಸತ್ತವರ್ತಮಾನ ಕೇಳುವಿಕೆ.

ಸೊಂಟದಲ್ಲಿ ಹಳೆಯಪಟ್ಟೆ ಧರಿಸಿಕೊಂಡರೆ = ಕಷ್ಟಗಳು, ತೊಂದರೆಗಳುಂಟಾಗುವವು.

ಸೊಂಟದಲ್ಲಿ ಹೊಸಪಟ್ಟೆ ಧರಿಸಿಕೊಂಡರೆ = ಕೀರ್ತಿ, ಸಂಪದಾಭಿವೃದ್ಧಿ.

ಘಂಟೆ ಬಾರಿಸಿದುದನ್ನು ಕೇಳಿದರೆ = ಶುಭ ವರ್ತಮಾನ ಕೇಳಬರುವುದು.

ಬೇರೆಯವರ ರುಂಡ ಕಡಿದುದನ್ನು ಕಂಡರೆ = ಸೌಭಾಗ್ಯ.

ಸ್ವಂತ ರುಂಡ ಕಡಿದುದನ್ನು ಕಂಡರೆ = ವಿನಾಶ.

ವೃಕ್ಷಗಳ ಬೇರುಗಳನ್ನು ಕಂಡರೆ = ಸುಖ ಸಮೃದ್ಧಿ.

ವೃಕ್ಷಗಳ ಬೇರುಗಳನ್ನು ಬುಡಮೇಲಾಗಿ ಕಂಡರೆ = ಅಪಾಯ.

ಅರಳಿದ ಗುಲಾಬಿ ಹೂವನ್ನು ಕೊಯ್ದರೆ = ಬೇಗನೇ ವಿವಾಹ-ಇಲ್ಲದಿದ್ದರೆ ಇತರ ವಿಧಾನದಿಂದ ಸ್ತ್ರೀಸುಖ.

ಬೆಂಕಿಯಿಂದ ಯಾ ಬಿಸಿನೀರಿನಿಂದ ಮೈ ಸುಟ್ಟರೆ = ಎಲ್ಲಾವಿಧಾನಗಳಿಂದ ನಷ್ಟ, ಕಷ್ಟಗಳು.

ಯಾವುದಾದರೂ ವಸ್ತುವಿನ ಅಭಾವ ಕಂಡರೆ = ಆ ವಸ್ತುವು ಸಮೃದ್ಧಿಯಾಗುವುದು.

ಶಾಲೆಗೆಹೋದರೆ = ಒಳ್ಳೇ ಮರ್ಯಾದೆಯಿಂದ ಜೀವನ.

ಇತರರನ್ನು ಬೈದರೆ = ದುಃಖವ್ರಾಪ್ತವಾಗುವುದು.

ಚೇಳನ್ನು ಕಂಡರೆ = ಜಯ.

ಚೇಳ ಕಡಿದರೆ = ದುಷ್ಟ ಜನರಿಂದ ಪೀಡೆ.

ತನ್ನ ಮೈತುಂಬಾ ಗಾಯವಾದುದನ್ನು ಕಂಡರೆ = ಹಣದ ತೊಂದರೆ ಪರಿಹಾರ.

ತನ್ನ ಗುಟ್ಟನ್ನು ಇತರರಿಗೆ ಹೇಳಿದರೆ = ಶತ್ರುಗಳಿಂದ ತೀವ್ರ ವಿರೋಧ.

ಇತರರ ಗುಟ್ಟನ್ನು ತಿಳಕೊಂಡರೆ = ಕಲಹ ಪ್ರಾಪ್ತಿ.

ಕುಟುಂಬದವರಿಂದ ಯಾ ಸ್ನೇಹಿತರಿಂದ ದೂರವಾದರೆ = ಹೆಚ್ಚು ಸ್ನೇಹಿತರ ಲಾಭ ಯಾ ಮಕ್ಕಳು ಹುಟ್ಟುವರು.

ನೌಕರನನ್ನು ಕೆಲಸಕ್ಕೆ ಇಟ್ಟುಕೊಂಡರೆ = ತೊಂದರೆ, ತೊಡಕುಗಳ ಸೂಚನೆ

ಹೊಸಬಟ್ಟೆಗಳನ್ನು ಹೊಲಿದರೆ = ಅಜಾಗ್ರತೆ-ಅವಸರದಿಂದ ಕಾರ್ಯಮಾಡಬಾರದೆಂಬ ಸೂಚನೆ

ಹಳೆಯ ಬಟ್ಟೆಗಳನ್ನು ಹೊಲಿದರೆ = ಕೈಕೊಂಡ ಕಾರ್ಯ ಜಯ, ಅಭಿವೃದ್ಧಿ.

ಸ್ವತಃ ಕ್ಷೌರಮಾಡಿಕೊಂಡರೆ, ಯಾ ಮಾಡಿಸಿಕೊಂಡರೆ = ದ್ರವ್ಯಲಾಭ.

ಕುರಿಗಳು ಮೇಯುವುದನ್ನು ಕಂಡರೆ = ದ್ರವ್ಯಲಾಭದ ಸೂಚನೆ.

ಕುರುಬನನ್ನು ಕಂಡರೆ = ಪ್ರತಿಬಂಧ ಉಂಟಾಗುವುದು. ಅಪಾಯ.

ಕಣ್ಣೆದುರಿಗೆ ಗೋಡೆ, ಅಗಳು ಕಂಡರೆ = ಯಾವ ವಿಚಾರದಲ್ಲಿ ಮುಂದರಿಯುಬೇಕಾಗಿದೆಯೋ ಅದಕ್ಕೆ ತಡೆಯುಂಟಾಗುವುದು.

ಯುದ್ಧದಲ್ಲಿ ಭಾಗವಹಿಸುವಿಕೆ = ದೂರದರ್ಶಿತ್ವದಿಂದ ಜಯವಾಗುವುದು.

ಸ್ನಾನಮಾಡುವಾಗ ಮೈಉಜ್ಜುವಿಕೆ = ಹೊಸ ಊರು, ಸ್ಥಳಗಳನ್ನು ಸಂದರ್ಶಿಸುವ ಯೋಗ.

ಗಡಿಯಾರದಲ್ಲಿ ಗಂಟೆನೋಡುವಿಕೆ = ತೊಂದರೆಗೆ ಕಾರಣ.

ಆಳವಾಗಿರುವ ನೀರನ್ನು ಕಾಲುನಡಿಗೆಯಿಂದ ದಾಟುವಿಕೆ = ದೈವ ಸಹಾಯವಿದೆಯೆಂಬ ಕುರುಹು.

ನೀರನ್ನು ಕುಡಿಯುವುದು = ತೊಂದರೆ ಲಕ್ಷಣ.

ಬಹಳ ಶ್ರಮಪಡುವಿಕೆ, ದೇಹಾಯಾಸ = ಸುಖ ಜೀವನದ ಸೂಚನೆ.

ನಿಧಿ ದೊರೆತರೆ = ದಾರಿದ್ರ್ಯ.

ಬಾವಿಯಲ್ಲಿ ಸ್ವತಃ ಹಾರಿದರೆ = ಪರರ ಸಹಾಯ ದೊರೆವುದು.

ಬಾವಿಯಿಂದ ನೀರು ಸೇದಿದರೆ = ಪರರಿಗೆ ಸಹಾಯಮಾಡುವ ಯೋಗ

ಉಣ್ಣೆಯನ್ನು ನೇಯುವಿಕೆ ಯಾ ನೇಯುವುದನ್ನು ಕಾಣುವಿಕೆ = ಮಹಾ ಆನಂದ, ದ್ರವ್ಯಲಾಭ ಇಲ್ಲವೆ ಮದುವೆ ಮೊದಲಾದ ಶುಭಯೋಗ

ತಾನು ಸ್ವತ ಕಷ್ಟಪಟ್ಟು ಕೆಲಸಮಾಡುವುದನ್ನು ಕಂಡರೆ = ಕೈಗಾರಿಕೆ, ಉದ್ಯಮಗಳಲ್ಲಿ ಜಯ.

ಸ್ಟೀಮರು ಮುಳುಗುವುದನ್ನು ಯಾ ಬಂಡೆಕಲ್ಲಿಗೆ ಅಪ್ಪಳಿಸುವದನ್ನು ಕಂಡರೆ = ಕುಟುಂಬದವರಿಂದ ಯಾ ನೆಂಬರಿಂದ ಕಷ್ಟ.

ಒರವಣಿಗೆಯ ಕೆಲಸಮಾಡಿದರೆ = ಆರೋಗ್ಯಲಾಭ.

ವಿಹಾರ ನೌಕೆಯಲ್ಲಿ ಪ್ರಯಾಣ = ಉದ್ಯಮಗಳಲ್ಲಿ ವೃದ್ಧಿಯಾಗುತ್ತಾ ಹೋಗುವುದು

ನೂಲುವುದು = ಅವಮಾನ ಉಂಟಾಗುವುದು.

ತನ್ನ ಕಾರುಣ್ಯವನ್ನು ಕಾಣುವುದು = ನಿಶ್ಚಯವಾಗಿಯೂ ಅನಾರೋಗ್ಯ ಮತ್ತು ಕಷ್ಟ.

ಕಾಹಿಲೆಯಲ್ಲಿಬಿದ್ದುವಿಲ್‌ನಾಮೆ ಬರೆದಿಟ್ಟರೆ = ಬೇಗನೆ ರೋಗ ಪರಿಹಾರ. ರೋಗವಿಲ್ಲದವರಿಗೆ ಜಯ.

ಯಾವುದಾದರೂ ಚಕ್ರವು ತಿರುಗುವುದನ್ನು ಕಂಡರೆ = ದುಃಖದ ಹಿಂದೆ ಸುಖ, ಸುಖದ ಅನಂತರ ದುಃಖ ಹೀಗೆಯೇ ನಡೆವುದು

ತನ್ನ ಸ್ವಂತ ಮನೆಗೆ ಸುಣ್ಣ ಬಳಿದರೆ ಯಾ ಅದನ್ನು ಕಂಡರೆ = ಸಾಲ ಉಂಟಾಗುವುದು.

ಕೊಡೆಕ್ರಯಕ್ಕೆ ಪಡಕೊಂಡರೆ = ಮಹಾಭಯ.

,, ಬೇರೆಯವರಿಗೆ ಕೊಟ್ಟರೆ = ,, ನಿವಾರಣೆ

,, ಬಿಡಿಸಿ ಹಡಕೊಂಡರೆ = ಸಂತೋಷ.

ತಾನು ಸ್ವತಃ ನಗ್ನವಾಗಿದ್ದುದನ್ನು ಕಂಡರೆ = ದುಂದುಗಾರಿಕೆಯ ವೆಚ್ಚ ಯಾ ಇತರರ ಗುಟ್ಟು ತಿಳಿಯುವುದು.

ದಾಕು ಹಾಕಿಸಿಕೊಂಡರೆ = ರೋಗ ನಿವಾರಣೆ.

ಬಿಸಿನೀರಿನ ಆವಿಕಂಡರೆ = ಶತ್ರುಗಳಿಂದ ಪೀಡೆ.

ವಯಸ್ಸಾದವರನ್ನು, ಹಿರಿಯರನ್ನು ಸಂದರ್ಶಿಸಿದರೆ = ವ್ಯಾವಾರ ಯಾ ಕೈಕೊಂಡ ಕೆಲಸದಲ್ಲಿ ನಷ್ಟ.

ತಿಂದ ಆಹಾರ ವಾಂತಿಮಾಡಿದರೆ = ಎಲ್ಲಾ ವಿಷಯಗಳಲ್ಲೂ ಜಯ

ಆಯುಧ ಧಾರಿಯನ್ನು ಕಂಡರೆ = ಶುಭ

[ಸಶೇಷ]

# SUPPLY AGENCY LIMITED

## UDIPI

HEAD OFFICE:
**BOBBARYA JUNCTION, UDIPI.**

FINANCE DEPARTMENT:
**VYASA BHAVANAM, UDIPI.**

Authorised Capital: Rs. 1,00,000.

Paid up Capital: ,, 30,460.

RATES OF INTEREST FOR

FIXED DEPOSITS

| | | |
|---|---|---|
| 4 TO 6 MONTHS | — | 4 PER CENT |
| 7 .. 11 .. | — | 5 .. |
| 12 .. 18 .. | — | 6 .. |

SPECIAL RATES WILL BE QUOTED ON APPLICATION FOR FIXED DEPOSITS OF TWO YEARS AND ABOVE

OUR SPECIAL SCHEMES
OF
DEPOSIT

DEENABANDHUNIDHI
INDUSTRIAL DEPOSITS
INDUSTRIAL CASH CERTIFICATES
SAVE AS YOU PLEASE
ANTARANGA DEPOSITS

*For Particulars write to the Manager:*

FINANCE DEPARTMENT,
*SUPPLY AGENCY LIMITED.*
"VYASA BHAVANAM"
CAR-STREET, ***UDIPI.***

(1941)

ಸುದರ್ಶನ 1887

# SUDARSHANA

ನವಂಬರ್ 1941




ರಾಜಧಾನಿಯ ಪ್ರಸಿದ್ಧ ಮಾಸಪತ್ರಿಕೆ.

**THE ONLY LEADING MONTHLY OF MYSORE.**

ಸಭವಿಷ್ಯ, ಪ್ರಸಿದ್ಧಲೇಖನಗಳು,
ಆರೋಗ್ಯ, ಇತ್ಯಾದಿ, ಇತ್ಯಾದಿ.

Presented by:-
T Chandraraja Shetty.
SIDDAKATTE, S. K.

॥ ಓಂ ॥

# 'ಸಾಹಿತ್ಯ' ಎಂದರೇನು?

ಸಾಹಿತ್ಯವು ಜನಗಳ ಸ್ವತ್ತು. ಅದು ಒಟ್ಟಿನ ಅಥವಾ ಅನೇಕರ ಕಷ್ಟಾರ್ಜಿತವಾದ, ಸ್ವಂತವಾದ ಸ್ವತ್ತಾಗಿದ್ದರೂ, ಅವರ ಅಂದರೆ ಕಷ್ಟಪಟ್ಟು ಸಂಪಾದಿಸಿದವರ ಉಪಯೋಗಕ್ಕಾಗಿಯೇ ಅಲ್ಲ; ಜವಾನನಾದಿಯಾಗಿ ದಿವಾನನವರೆಗೂ ಸಧ್ಯರೂ ಅದನ್ನು ಉಪಯೋಗಿಸಿಕೊಂಡು ಸುಖಾನುಭವಿಗಳಾಗಲಿ; ಮತ್ತು ಶಕ್ತಿಯಿದ್ದರೆ ಅದನ್ನು ಇನ್ನೂ 'ಅಭಿವೃದ್ಧಿಪಡಿಸಲಿ' ಎಂಬ ಉದಾರತೆಯಿಂದ ಹುಡುಕಿ ಕೂಡಿಟ್ಟ ಸ್ವತ್ತು. ಇಂತಹ ಸ್ವತ್ತನ್ನು ಒಂದು ಜನಾಂಗದವರೇ ಆಗಲಿ ಅಥವಾ ಒಂದು ತರ ಗತಿಯವರೇ ಆಗಲಿ ಉಪಯೋಗಿಸಿಕೊಳ್ಳಲು ಅಧಿಕಾರವಿದ್ದೂ, ಅದನ್ನು ಇತರರು ಉಪಯೋಗಿಸಕೂಡದೆಂದು ನಿಷೇಧಿಸಿದರೆ, ಲೋಕೋಪಕಾರಿಯಾದ ಕರ್ತೃವಿಗೆ ಕೃತಜ್ಞತೆಯನ್ನು ಅರ್ಪಿಸುವುದರ ಬದಲು ಕೃತಘ್ನತೆಯನ್ನು ಅರ್ಪಿಸಿದಂತಾಗುತ್ತಲ್ಲವೆ? ಕರ್ತೃವೇನೋ ಉಚ್ಚತರಗತಿಗೆ ಸೇರಿದವನಾದರೆ, ಅವನಲ್ಲಿ ಉಚ್ಚತರಗತಿಗೆ ತಕ್ಕಂತೆ ಒಂದೇ ತರಹದ ಭಾವೋದ್ರೇಕವಾಗುವುದು ಸಹಜ. ಆದಕಾರಣ ಅವನು ಸಂದರ್ಭ ಒದಗಿದಾಗ ಜವಾನನಂತೆಯೂ, ದಿವಾನನಂತೆಯೂ, ರಾಜನಂತೆಯೂ, ಇನ್ನೂ ಹೆಚ್ಚಿನದಾಗಿ ತತ್ತ್ವಜ್ಞಾನಿಯಂತೆಯೂ ಎಲ್ಲರ ಮನಸ್ಸನ್ನೂ ಆಕರ್ಷಿಸಬಲ್ಲ ಮಹಾವ್ಯಕ್ತಿ. ಅಂಥ ಮಹಾವ್ಯಕ್ತಿಯಾದರೂ ಹುಟ್ಟಿದಾಗಲೇ ಅಥವಾ ತಾಯಿ ಗರ್ಭದಿಂದ ತನ್ನ ಅಂಗಾಂಗಗಳನ್ನು ಪುಷ್ಟಿಸಿಕೊಳ್ಳುವಂತೆ ತನ್ನ ಮೆದಳನ್ನೂ ಉತ್ತಮಗೊಳಿಸಿ, ಬುದ್ಧಿಯನ್ನು "ತಾತನಂತೆ' ಬಳೆಯಿಸಿಕೊಂಡು ಬಂದವನಲ್ಲವಷ್ಟೆ? ಅವನು ಭಾವಿ ತಾತ ಇರಬಹುದು, ತಾತನಲ್ಲ.

ಲೋಕದಲ್ಲಿ ಅನೇಕತರಹ ಪ್ರಾಣಿಗಳಿವೆ. ಮನುಷ್ಯನು ಒಂದು **ಮಾತಾಡುವ ಪ್ರಾಣಿ.** ಈ ಮಾತಾಡುವ 'ಪ್ರಾಣಿ (ಮನುಷ್ಯ) ಗಳೆಲ್ಲವೂ ಹೊರನೋಟದಿಂದ ಒಂದೇ ತರಗತಿಗೆ ಸೇರಿದ್ದರೂ, ಅವುಗಳ ಮನೋವ್ಯಾಪಾರವು ಬೇರೆ ಬೇರೆಯಾಗಿರುತ್ತದೆ; ಅಭಿರುಚಿಯೂ ಭಿನ್ನ ಭಿನ್ನವಾಗಿರುತ್ತದೆ. ಈ ವಿಷಯವು 'ಲೋಕೋ ಭಿನ್ನರುಚಿಃ" ಎಂಬ ಆರ್ಯೋಕ್ತಿಯಿಂದ ಸ್ಪಷ್ಟಪಡುತ್ತದೆ. ಆದಕಾರಣ ಕವಿಯಾದ ಮನುಷ್ಯನು ತನ್ನ ಬಾಲ್ಯಕಾಲದಿಂದ ತಾನು ಗ್ರಂಥವನ್ನು ಬರೆಯಲುದ್ಯೋಗಿಸುವವರೆಗೆ ತನ್ನ ಬುದ್ಧಿಶಕ್ತಿಯು ಹೇಗೆ ಹೇಗೆ ಬಳೆಯಿತೆಂದೂ, ಕಾಲಕ್ಕೆ

ತಕ್ಕಂತೆ ಮನುಷ್ಯನು ವಿಧಿಯಿಲ್ಲದೆ ಬದಲಾವಣೆಯಾಗತಕ್ಕವನೆಂದೂ, ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಒಂದು ಪಕ್ಷ ವ್ಯವಹಾರವಾದರೆ, ಸತ್ಯ ಅಹಿಂಸೆಗಳ ಕಡೆಗೆಯೇ ನಮ್ಮ ದೃಷ್ಟಿಯಿದ್ದರೆ ಮನುಷ್ಯತ್ವ ಉಳಿಯುವುದೆಂದೂ, ಮನುಷ್ಯನು ಅಪೂರ್ಣತೆಯಿಂದ ಪೂರ್ಣತೆಯನ್ನು ಈ ರೀತಿಯಾಗಿ ಹೊಂದಬಹುದೆಂದೂ ಕಾರ್ಯತಃ ತೋರಿಸಿಕೊಡುತ್ತಾನೆ. ಇದು "ರವಿಕಾಣದ್ದನ್ನು ಕವಿಕಂಡ" ಎಂಬ ನಾಣ್ನುಡಿಯಿಂದಲೂ ವ್ಯಕ್ತಪಡುತ್ತದೆ.

ಇಂಥ ಲೋಕೋಪಕಾರಿಯಾದ ಕರ್ತೃವು (ಕವಿಯು) ಈ ಎಲ್ಲಾ ಮನುಷ್ಯರ ಮನೋವ್ಯಾಪಾರದ ಸಾಮಾನ್ಯತೆಯನ್ನು ತನ್ನ ಬುದ್ಧಿ ಸಾಥ್ರ್ಯದಿಂದ ಅರಿತು, ಸರ್ವರಿಗೂ ಆನಂದದಾಯಕವಾದ—ಅಂದರೆ ಜವಾನನಿಂದ ದಿವಾನನವರೆಗೂ ಇರುವ ಮಾನಸಿಕ ಕ್ರಿಯೆಗಳ ವಿಚಾರವನ್ನು ಸೂಕ್ಷ್ಮವಾಗಿ ಊಹಿಸಿ, ವಿಚಾರಿಸಿ, ತನ್ನ ಸ್ವಂತ ಅನುಭವವೆಂಬ ಒರೆಗಲ್ಲಿನ ಸಹಾಯದಿಂದ ವಿಮರ್ಶಿಸಿ, ಬರೆದಿಡುತ್ತಾನೆ. ಆದುದರಿಂದ ಈ ಲೋಕದಲ್ಲಿ ನಮ್ಮ ದೃಷ್ಟಿಗೆ ಬೀಳುವ ಅತ್ಯಂತ ಸಣ್ಣದೂ (ಜವಾನ) ಅತ್ಯಂತ ದೊಡ್ಡದೂ (ದಿವಾನ) ಇವೆರಡರ ವ್ಯತ್ಯಾಸವನ್ನು ವಚನತಃ ಕಾರ್ಯತಃ ಅವರ ಬಾಯಿಯಿಂದಲೇ ಹೇಳಿಸಿ, ಅವರವರ ಯೋಗ್ಯತೆಯನ್ನು ನಾವು, ಅವನು, ದೇಶ, ಕಾಲ, ವರ್ತಮಾನ, ಸಂದರ್ಭ, ಉಚಿತಗಳೆಂಬ ಪಂಚಾಂಗದಿಂದ ದಿಗ್ಬಂದಿಸಿ ಉಪಯೋಗಿಸಿದ ಅಚೇತನವಾದ ಶಬ್ದಪ್ರಯೋಗದಿಂದ ಸುಲಭವಾಗಿ ತಿಳಿದುಕೊಳ್ಳುವಂತೆ ನೆಯ್ಯುತ್ತಾನೆ. ಇದರಿಂದ ನಾವು "ಎಲ್ಲಾ ಮಾನಸಿಕ ವ್ಯಾಪಾರಗಳ ಅಥವಾ ಭಾವಗಳ ಮಿಲನವೇ" ಮಿಶ್ರ (ಜೋಚೌ) ತಿಂಡಿಯಂತೆ ಎಲ್ಲರಿಗೂ ಸಂತೋಷದಾಯಕವಾಗಿದೆ. ಇದು "ಸಹಿತಸ್ಯಭಾವಃ ಸಾಹಿತ್ಯಂ" ಎಂಬ ಸೂತ್ರದಿಂದ ದೃಢಪಡುತ್ತದೆ. ಶಬ್ದಗಳು ಅಚೇತನಗಳಾದರೂ, ಸರಿಯಾದ ಜೋಡನೆಯಿಂದ, ಸರ್ವಭಾವಗಳನ್ನು ಸಂದರ್ಭಕ್ಕೆ ತಕ್ಕಂತೆ ಉದ್ರೇಕಗೊಳಿಸುತ್ತವೆ. ಶಬ್ದಗಳನ್ನು ಒಂದು ಅಪೂರ್ವವಾಗಿ ಅಕ್ಕರೆಯಿಂದ ನೆಯ್ದರೆ ಅದರಿಂದ ಒಂದು ರಸವು ಉತ್ಪತ್ತಿಯಾಗುವುದು ಸಹಜವಲ್ಲವೆ? ಬೇಳೆ, ಉಪ್ಪು, ಮೆಣಸಿನಕಾಯಿ, ತೆಂಗಿನಕಾಯಿಗಳೇ ಮೊದಲಾದ ಸಾಹಿತ್ಯಗಳನ್ನು ಸರಿಯಾದ ರೀತಿಯಲ್ಲಿ ಬೆರಸಿ, ಕ್ರಮವರಿತು ಬೇಯಿಸುವುದರಿಂದ, ಒಂದೊಂದು ವಸ್ತುವೂ ಸ್ವಭಾವಿಕವಾಗಿ ಬೇರೆ ಬೇರೆ ರುಚಿವುಳ್ಳವುಗಳಾಗಿದ್ದರೂ, ಇವೆಲ್ಲಕ್ಕೂ ಭಿನ್ನವಾದ ರುಚಿಯು ಕೊನೆಯಲ್ಲಿ ವೇದ್ಯವಾಗುವುದಿಲ್ಲವೆ? ಹಾಗೆಯೇ ಅಚೇತನಗಳಾದ ಶಬ್ದಗಳೂ ಬೇರೆ ಬೇರೆಯಾದ ಭಾವೋದ್ರೇಕಗಳಿಗೆ ಸಹಾಯವಾದರೂ, ಅವುಗಳ ಮಿಲನದಿಂದ ಅವುಗಳ ಸ್ವಭಾವ

ವಕ್ಕೆ ಭಿನ್ನವಾದ ಭಾವವುಂಟಾಗುತ್ತೆ. ಆದ್ದರಿಂದ ಉತ್ತಮಸಾಹಿತ್ಯವು ಹೊರನೋಟಕ್ಕೆ ಒಂದರ್ಥಕೊಟ್ಟರೂ, ಒಳರ್ಥವೂ ಬೇರೆ, ಸಂದರ್ಭೋಚಿತವಾದ ಅರ್ಥವೂ ಬೇರೆ.

ಕವಿಯು ಹುಟ್ಟಿದಾಗಲೇ ಕವಿಯೆಂದು ಕರೆಯಲ್ಪಡುವುದಿಲ್ಲವೆಂದು **ಮೊದಲೇ** ಹೇಳಿದೆ. ರಾಜರು ತಮ್ಮ ಖಡ್ಗಸಹಾಯದಿಂದ ಎಲ್ಲರನ್ನೂ ತಮ್ಮ ಅಧೀನಮಾಡಿಕೊಂಡರೆ, ಕವಿಗಳು ತಮ್ಮ ವಾಗ್ಬಾಣಗಳಿಂದ ಎಲ್ಲರನ್ನೂ ಅಧೀನಮಾಡಿಕೊಳ್ಳುತ್ತಾರೆ. ಜನಗಳು ರಾಜನಿಗೆ ಜೀವಭಯದಿಂದ ಅಧೀನವಾದರೆ, ಕವಿಗೆ ಜನಗಳು ಆತ್ಮಪ್ರೀತಿಯಿಂದ ಅಧೀನತೆಯನ್ನು ಒಪ್ಪಿಕೊಳ್ಳುತ್ತಾರೆ. ಯಾಕೆಂದರೆ ಕವಿಗಳು ಜೀವನದ ಚಿತ್ರನನ್ನು ಚಿತ್ರಿಸಿ, ಕೊನೆಯಲ್ಲಿ ಜೀವನದ ಪರಮೋದ್ದೇಶವನ್ನು ತೋರಿಸಿಕೊಡುತ್ತಾರೆ; ರಾಜರಾದರೋ ತಮ್ಮ ಪರಾಶ್ರಂಖಲೆಯನ್ನು ಭದ್ರಪಡಿಸುತ್ತಾ, ಸಾರವಾದ ಜೀವನವನ್ನು ಅಸಾರವಾಗಿ ಮಾಡುತ್ತಾರೆ. ಇದು ' Kings bed is not rose bed ' ಎಂಬುವುದರಿಂದ ವ್ಯಕ್ತಪಡುತ್ತದೆ. ಕವಿಯು ಮೊದಲು ಅಪೂರ್ಣವಾಗಿ ತೋರುವ ಜೀವನವನ್ನು ಹೇಗೆ ತಮ್ಮ ತಮ್ಮ ಕರ್ತವ್ಯಗಳಿಂದ ಪೂರ್ಣವಾಗಿ ಮಾಡಬಹುದಾದ ಮಾರ್ಗವನ್ನು ತೋರಿಸುತ್ತಾನೆ. ಈ ಮಾರ್ಗವು ನಮಗೆ ನಂಬಿಕೆಯಾಗುವಂತೆ ಮೊದಲು ನಮ್ಮ ಜೀವನವನ್ನು (ನಮ್ಮ ಸದ್ಯ ಸ್ಥಿತಿಯನ್ನು) ಅನುಭವಮಾಡಿಕೊಡುತ್ತಾನೆ. ಧರ್ಮಸಂಕಟದಿಂದ ನಮ್ಮ ಜೀವನವು ಒಮ್ಮೆ ಮಾರ್ಪಡುತ್ತದೆಯಾದರೂ, ನಮ್ಮ ಕಟ್ಟಕಡೆ ಧ್ಯೇಯವು ಉತ್ತಮತರಹದ್ದಾಗಿರಬೇಕೆಂದು ತಿಳಿಸುತ್ತದೆ. ಮೇಲಾಗಿ ಪರರಿಗೆ ಮನ, ವಚನ, ಕಾಯದಿಂದಲೂ ತೊಂದರೆಯಾಗಕೂಡದೆಂದೂ, ಎಲ್ಲರಿಗೂ ' ಶುದ್ಧವಾದ ನೀರಿನಂತೆ ' ತಂಪನ್ನುಂಟು ಮಾಡತಕ್ಕದ್ದೆಂದೂ ತಿಳಿಸುತ್ತದೆ. ಆಕಾರಣ ಸಾಹಿತ್ಯಕ್ಕೆ ಧರ್ಮವೇ ಆಡಿಗಲ್ಲು; ಧರ್ಮೋದ್ಧಾರಕ್ಕಾಗಿಯೇ ಸಾಹಿತ್ಯೋದ್ಧಾರವಾದುದು. ಸಾಹಿತ್ಯೋದ್ಧಾರವಾದರೆ, ಪರೋಕ್ಷತಃ ಧರ್ಮೋದ್ಧಾರವಾದಹಾಗಾಯಿತು. ಆದ್ದರಿಂದ ಸಾಹಿತ್ಯವು **ಪಂಡಿತ ಪಾಮರ ರಂಜನೆಯಾಗಿದೆ.** ಈ ಕಾರಣಗಳಿಂದ ಪಂಪನು ತನ್ನ ಆದಿಪುರಾಣದಲ್ಲಿ **ಕಾವ್ಯಧರ್ಮವನ್ನೂ, ಧರ್ಮವನ್ನೂ** ಹೇಳಿ, ತನ್ನ ವಿಕ್ರಮಾರ್ಜುನಚರಿತೆಯಲ್ಲಿ ಲೌಕಿಕ ಧರ್ಮವನ್ನು ತಿಳಿಸಿ, ಕವಿಚಕ್ರವರ್ತಿಯಾಗಿ, ' ಸಂಸಾರ ಸಾರೋದಯ ' ಎಂಬ ಬಿರುದಾಂಕಿತನಾಗಿ ಲೋಕೋಪಕಾರಮಾಡಿದ್ದಾನೆ.

**S. N. ಭುಜಬಲಯ್ಯ.**

# ಪ್ರೇಮ ಸ್ವಯಂವರ

(ಬರೆದವರು—**ಕುಮಾರಿ ಶಾಂತ**)

ಮೋಹನನ ಮಗಳಾದ ಕುಮಾರಿಯು ದಿನದಿನಕ್ಕೂ ವಿದ್ಯಾಭ್ಯಾಸದಲ್ಲಿ ಪ್ರವೀಣಳಾಗುತ್ತಾ ಬಂದಳು. ಇದರಿಂದ ತಂದೆಯಾದ ಮೋಹನನಿಗೆ ಸಂತೋಷವುಂಟಾಗಿ ಮಗಳಿಗೆ ಯಾವ ವಿಧದಲ್ಲಿಯೂ ಕೊರತೆಯಿಲ್ಲದಂತೆ ಮಾಡಿಸಿದ್ದನು.

ಮಗಳಿಗೆ ಸಂಗೀತ ಶಾಸ್ತ್ರವನ್ನು ಕಲಿಸುವುದಕ್ಕೆ ತನ್ನ ಸ್ನೇಹಿತರಾದ ಆಚಾರ್ಯರನ್ನು ಗೊತ್ತುಮಾಡಿದನು. ಇದರಿಂದ ಕುಮಾರಿಯು ಇನ್ನೂ ಅಭಿವೃದ್ಧಿ ಹೊಂದುತ್ತಿದ್ದಳು.

ಹೀಗಿರುವಾಗ ಆಚಾರ್ಯರ ಮಕ್ಕಳಾದ ಸುರೇಂದ್ರನೂ ಮತ್ತು ರಮಾಪತಿಯೂ ಒಂದು ದಿನ ಕುಮಾರಿಯನ್ನು ಅಕಸ್ಮಾತ್ತಾಗಿ ನೋಡಿದರು. ಇದರಿಂದ ಕುಮಾರಿಯು ಸುರೇಂದ್ರನನ್ನು ಮೋಹಿಸಿದಳು. ಒಂದು ದಿನ ಆಚಾರ್ಯರು ಖಾಯಿಲೇ ಬಿದ್ದರು. ಆದ್ದರಿಂದ ಸಂಗೀತವನ್ನು ತಿಳಿದಿದ್ದ ಆಚಾರ್ಯರ ಮಕ್ಕಳಾದ ಸುರೇಂದ್ರನು ಕುಮಾರಿಗೆ ಪಾಠ ಹೇಳುವುದಕ್ಕೆ ಬಂದನು. ಹೀಗೆ ನಿತ್ಯವೂ ಬರಲು ಮೊದಲಾದುದರಿಂದ ಇಬ್ಬರಿಗೂ ಪ್ರೇಮವು ಬೆಳೆಯಲು ಪ್ರಾರಂಭವಾಯಿತು.

ಮೋಹನನಾದರೋ ತನ್ನ ಮಗಳಿಗೆ ತಕ್ಕವರನು ಸಿಕ್ಕದಿದ್ದರಿಂದ ಚಿಂತಾಕ್ರಾಂತನಾಗಿರಲು, ಸುರೇಂದ್ರನನ್ನು ನೋಡಿ ತನ್ನ ಮಗಳಿಗೆ ಈತನೇ ಸರಿಯಾದ ವರನೆಂದು ನಿಶ್ಚಯಿಸಿ, ಆಚಾರ್ಯರ ಅನುಮತಿಯಂತೆ ಒಳ್ಳೆಯ ಶುಭ ಲಗ್ನದಲ್ಲಿ ವಿವಾಹವನ್ನು ನೆರವೇರಿಸಿದರು. ಸ್ವಲ್ಪ ದಿನಗಳನಂತರ ಸುರೇಂದ್ರನು ಅಕಸ್ಮಾತ್ತಾಗಿ ತನ್ನ ಸ್ವಂತ ಕೆಲಸಕ್ಕಾಗಿ ಬೇರೆ ಊರಿಗೆ ಹೋಗಬೇಕಾಗಿ ಬಂದಿತು. ಒಬ್ಬರಿಗೊಬ್ಬರು ಅಗಲಿರಲಾರದೆ ಬಹಳ ಸಂತಾಪಪಟ್ಟರು. ಇದನ್ನು ನೋಡಿ ರಮಾಪತಿಯು ಸಂತೋಷಪಟ್ಟನು. ಏಕೆಂದರೆ ಸುರೇಂದ್ರನನ್ನು ಕಂಡರೆ ರಮಾಪತಿಗೆ ಒಳಗೆ ಆಗುತ್ತಿರಲಿಲ್ಲ. ಅಲ್ಲದೆ ಕುಮಾರಿಯನ್ನು ಅಪಹರಿಸಬೇಕೆಂದಿದ್ದನು. ಆದರೆ ದೈವವು ಸುರೇಂದ್ರನಿಗೆ ಸಹಾಯಮಾಡಿತ್ತು.

ಸುರೇಂದ್ರನು ಹೋದ ಕೆಲವು ದಿನಗಳನಂತರ ಕುಮಾರಿಯು ಚಿಂತಾಕ್ರಾಂತಳಾಗಿ ಒಂದು ದಿನ ತನ್ನ ಕೊಠಡಿಯಲ್ಲಿ ನಿದ್ರಿಸುತ್ತಿದ್ದಳು. ಆಗ ಸುಮಾರು 12 ಘಂ.

(೯ ನೇ ಪುಟವನ್ನು ನೋಡಿರಿ)

# ಪ್ರಜಾಪ್ರತಿನಿಧಿಸಭೆ

---

ಸಭೆಯ 7 ನೇ ದಿನ ಪ್ರಶ್ನೋತ್ತರಗಳಲ್ಲಿ ವೃತ್ತಪತ್ರಿಕೆಗೆ ಸಂಬಂಧಪಟ್ಟ ಪ್ರಶ್ನೋತ್ತರುಗಳು ನಡೆದವು. ವ್ಯವಹಾರವು ರಸವತ್ತಾಗಿತ್ತು. ಮೈಸೂರು ಸಂಸ್ಥಾನದಲ್ಲಿ ೯೪ ವೃತ್ತಪತ್ರಿಕೆಗಳಿವೆಯೆಂದು ಸೆಕ್ರಟೆರಿಯವರು ಹೇಳಿದರು. "ಸಹಾಯವು ವೃತ್ತಪತ್ರಗಳಿಗೆ ಜಾಹಿರಾತಿನ ರೂಪದಲ್ಲಿ ಕೊಡುತ್ತಿವೆ. ಹೊರಗಿನ ಪತ್ರಿಕೆಗಳ ಪ್ರತಿನಿಧಿಗಳಿಗೆ ಅವರ ಕೆಲಸಕ್ಕೋಸ್ಕರ ಕೆಲವು ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ" ಎಂದೂ ಹೇಳಿದರು.

ಚಾಮರಾಜನಗರದ ಶ್ರೀ॥ ವೆಂಕಟನಾಗಪ್ಪಶೆಟ್ಟರು ಪತ್ರಿಕೆಗಳ ಪಟ್ಟಿಯಲ್ಲಿ "ಮೈಸೂರು ವೈಶ್ಯ ಪತ್ರಿಕೆ ಮತ್ತು ಸುದರ್ಶನ" ಪತ್ರಿಕೆಯನ್ನು ಸೇರಿಸದಿರಲು ಕಾರಣವನ್ನು ಕೇಳಲು, "ವೈಶ್ಯ ಪತ್ರಿಕೆಯು ಹೊಸದಾಗಿ ಪ್ರಾರಂಭವಾದುದೆಂದೂ ಸೇರಿಸದಿರುವುದು ತಮ್ಮ ಲೋಪ" ವೆಂದೂ ಹೇಳಿದರು. ವೈಶ್ಯ ಪತ್ರಿಕೆಯು ಇತ್ತೀಚಿನದಿರಬಹುದು ಆದರೆ ರಿಜಸ್ಟ್ರೇರ್ಡ ಆಗಿಲ್ಲವೇ? ಅದು ಲಿಸ್ಟಿನಲ್ಲಿ ಬರಲಿಲ್ಲವೇಕೆ? ಸುದರ್ಶನವು ಮೈಸೂರು ನಗರದಲ್ಲಿಯೇ ಮೂರು ವರ್ಷದಿಂದಲೂ ನಡೆಯುತ್ತಿದ್ದು ಅನೇಕ ವ್ಯವಹಾರಗಳಲ್ಲಿ ಗೌರ್ನಮೆಂಟ್ ಸೆಕ್ರಟೆರಿಯವರು ಮತ್ತು ಪಬ್ಲಿಸಿಟಿ ಆಫೀಸರೊಡನೆ ಸಂಬಂಧವನ್ನಿಟ್ಟುಕೊಂಡಿದ್ದರೂ ಸಹಾಯಮಾಡುವ ಮಾತಂತಿರಲಿ ಪತ್ರಿಕೆಗಳ ಪಟ್ಟಿಯಲ್ಲೂ ಸೇರಿಸದಿರುವದಂದರೆ ಆಶ್ಚರ್ಯಕರವಾದ ಮಾತಲ್ಲವೇ?

ಹೊರಗಿನ ಪತ್ರಿಕಾಪ್ರತಿನಿಧಿಗಳಿಗೆ ಸಹಾಯ ಸೌಕರ್ಯಗಳನ್ನು ಸರ್ಕಾರವು ಉದಾರವಾಗಿ ನೀಡುತ್ತಿದೆ ಎಂಬುದು ಸೆಕ್ರೆಟೆರಿಯವರಿತ್ತ ಅಂಕಿಅಂಕಗಳಿಂದ ವ್ಯಕ್ತವಾಗುತ್ತದೆ. (ಸಂಸ್ಥಾನ ಪತ್ರಿಕೆಗಳಿಗೆ ೧೫೯೦೦ ರೂ, ಹೊರಗಿನ ಪತ್ರಿಕೆಗಳಿಗೆ ೩೯೦೦೦ ರೂ, ಬೆಲೆಯ ಜಾಹಿರಾತುಗಳು ಈ ವರ್ಷದಲ್ಲಿ ಕೊಡಲಾಗಿದೆ) ಜಾಹಿರಾತಿನರೂಪದಿಂದ ಹೊರಗಿನ ಪತ್ರಿಕೆಗಳಿಗೆ ಒಂದಕ್ಕೆರಡರಷ್ಟು ಸಹಾಯವಾಗಿದೆ. ಸರ್ಕಾರವು ಯಾವ ಪತ್ರಿಕೆಗೂ ಅಸಹಾಯವಾಗಲಾಗದೆಂಬುದನ್ನು ಮಾತ್ರ ಹೇಳುತ್ತದೆ. ಆ ಭಾವವನ್ನು ಸಂಸ್ಥಾನದ ಪತ್ರಿಕೆಗಳಿಗೆ ಸ್ವಲ್ಪ ಉದಾರವಾಗಿ ವ್ಯಕ್ತಪಡಿಸಲಾಗದೇಕೆ? ವೃತ್ತಪತ್ರಿಕೆಗಳಂದರೆ ದೇಶದ ಮುನ್ನಡೆಗೆ ಕಾರಣಗಳಲ್ಲವೇ? ದೇಶಹಿತ ದೃಷ್ಟಿಯಿಂದ ಭೇದಭಾವವಿಲ್ಲದೇ ಎಲ್ಲಾ ಪತ್ರಿಕೆಗಳೂ ಯೋಗ್ಯರೀತಿಯಿಂದ

ನಡೆಯಲು ಮಾಡಬಹುದಾದ ಸಹಾಯಗಳನ್ನು ಮಾಡಿ ಅವುಗಳು ಮುಂದೆ ಬಂದ ಪ್ರಭು ಮತ್ತು ಪ್ರಜೆಗಳ ಸೇವೆಯನ್ನು ಮಾಡುವಂತೆ ಸೌಕರ್ಯಗಳನ್ನು ಕಲ್ಪಿಸ ವುದು ಸರ್ಕಾರದ ಕರ್ತವ್ಯವಲ್ಲವೇ ?

ಹೊರಗಿನ ಪತ್ರಿಕೆಗಳ ಪ್ರತಿನಿಧಿಗಳಿಗೂ ಸಹಾಯ, ಪತ್ರಿಕೆಗಳಿಗೂ ಸಹಾಯ ಸಂಸ್ಥಾನದ ಪತ್ರಿಕೆಗಳಿಗೆ ಸಹಾಯವೇ ದುರ್ಲಭ. ವ್ಯಾಪಾರಿಕ ದೃಷ್ಟಿಯಿಂದ ಪತ್ರಿಕೆ ಗಳಿಗೆ ಸಹಾಯ ಮಾಡುವುದು ನ್ಯಾಯವೆನ್ನುವುದಾದರೂ ಪ್ರತಿನಿಧಿಗಳಿಗೆ ಸಹಾಯ ಮಾಡಬೇಕಾದುದೇಕೆ ? ಸಂಸ್ಥಾನದ ಪತ್ರಿಕೆಗಳಿಗೆ ಸಹಾಯವಿಲ್ಲದೇ ತೊಂದರೆಗೀಡಾ ಗಿರುವಾಗ ಹೊರಗಿನವರಿಗೆ ಉದಾರ ಸಹಾಯ. " ಮನೆ ಮಕ್ಕಳಿಗೆ ರೊಟ್ಟಿ ತುಣ ಕಿಲ್ಲದಿದ್ದರೂ ಬಂದವರಿಗೆ ಒಬ್ಬಟ್ಟು ತುಪ್ಪ " ಹೊರಗಿನವರು ಹೊರಗೇ ! ಒಳಗಿ ವರೇ ಎಂದಿದ್ದರೂ ನಮ್ಮವರು !! ಸರ್ಕಾರವು ಇನ್ನಾದರೂ ಸಂಸ್ಥಾನದ ಪತ್ರಿಕೆ ಳಿಗೆ ಬೇಕಾವ ಸಾಧ್ಯವಿರುವ ಸಹಾಯಗಳನ್ನು ಕಲ್ಪಿಸಿ ವೃತ್ತಪತ್ರಿಕೆಗಳ ಮುನ್ನಡೆ ಯಲ್ಲಿ ಸಹಕರಿಸುವರೇ ?

ಪಾನನಿರೋಧವನ್ನು ಸರ್ಕಾರವು ಬಲಾತ್ಕಾರವಾಗಿ ನಿಲ್ಲಿಸಬೇಕೆಂದೂ ಶೇಂ ಮಾರಾಟವನ್ನು ಸರ್ಕಾರದವರು ನಿಲ್ಲಿಸಬೇಕೆಂದೂ ಸದಸ್ಯರೊಬ್ಬರು ಕೇಳಿದುದಕ್ಕೆ ಶಾಖಾ ಮಂತ್ರಿಗಳು " ಕುಡಿಯತಕ್ಕವರೇ ಸೇರಿ ಅದನ್ನು ತಡೆಯಲು ಏರ್ಪಾಡ ಮಾಡಿಕೊಳ್ಳಬೇಕೆಂದೂ ಸರ್ಕಾರವೂ ಬೇಕಾದ ಕಾರ್ಯಗಳನ್ನು ಮಾಡುತ್ತದೆ ಎಂದು ಹೇಳಿದರು. " ತಲೆ ಹೊಡಿಯುವವನಲ್ಲಿ ತಲೆ ಹುಣ್ಣಿಗೆ ಔಷಧಿ ಕೇಳಿದರು ಎಂಬತೆ ತಮ್ಮನ್ನೂ ತಮ್ಮ ಹೆಂಡಿರು ಮಕ್ಕಳ ಗತಿಯನ್ನೂ ಅರಿಯದೆ ಕುಡಿದು ಸರ್ ನಾಶ ಹೊಂದುತ್ತಿರುವವರು ಇದನ್ನು ಬಿಡಲು ಅವರೇ ಸೇರಿ ಪ್ರಯತ್ನಿಸುತ್ತಾರೆಂಬುದ ಬಯಲಾಸೆಯಲ್ಲವೇ ? ಅಧಿಕಾಂಶ ಜನಸಮೂಹವನ್ನು ದೀನದರಿದ್ರತೆಗೀಡುಮಾ ಪಾತಾಳಕ್ಕೆ ತಳ್ಳುತ್ತಿರುವೀ ಕುಡಿತವು ನಿರ್ನಾಮವಾಗಬೇಕಾದರೆ ಶೇಂದಿಯ ಉತ್ಪತ್ತಿಯು ಸಂಪೂರ್ಣ ಅಡಗಬೇಕು ಮತ್ತು ಅದರ ಮಾರಾಟವು ನಿಲ್ಲಬೇಕು. ಅಂದ ಮಾತ್ರ ನಮ್ಮ ಸಂಸ್ಥಾನದ ಮಾದರಿಸಂಸ್ಥಾನತ್ವವು ಸಾರ್ಥಕವಾಗುತ್ತದೆಂದೂ ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಪ್ರಯತ್ನಪಟ್ಟು ಜನಹಿತವನ್ನ ಕಲ್ಪಿಸುವರೆಂದು ನಂಬೋಣವೆ ?

ಶ್ರೀ ಪಿ. ವಿ. ಕೆ. ಮೂರ್ತಿಯವರ ಆತ್ಮಹತ್ಯ ಪ್ರಕರಣವನ್ನು ಕುರಿತು ಬಿ ಬಿಸಿಯಾಗಿ ಚರ್ಚೆಗಳು ನಡೆದುವು. ಅಧಿಕಾರಿಗಳು ಆ ವಿಷಯದಲ್ಲಿ ಯಾವ

ವಾದ ಕಾರ್ಯಕ್ರಮವೂ ಆವಶ್ಯಕವೆಂದು ಕಂಡು ಬಂದಿಲ್ಲವಾಗಿ ಸರ್ಕಾರವು ತಾಟಸ್ಥ್ಯವನ್ನು ವಹಿಸಿರುವುದಾಗಿಯೂ, ಅವರ ಬಂಧುವರ್ಗವೇ ಮೊದಲಾದವರಿಗೆ ತಕ್ಕ ಸಮಾಧಾನವನ್ನು ಹಿಂದೆಯೇ ಕೊಟ್ಟಿರುವುದಾಗಿಯೂ ಹೇಳಿದರು" ಅವರ ಕೊನೆಯ ಕಾಗದಗಳ ವಿಷಯದಲ್ಲಿ ಚರ್ಚೆಯಾಗಿ "ಅಷ್ಟುಮಾತ್ರಕ್ಕೇ ಪ್ರಾಧಾನ್ಯಕೊಟ್ಟು ಕಾರ್ಯವನ್ನು ನಡಸಲು ಸಾಧ್ಯವಿಲ್ಲವೆಂದೂ, ವಿಮರ್ಶೆಗೆ ಸಾಕಾದಷ್ಟು ಕಾರಣಗಳಿಲ್ಲದುದರಿಂದ ಅದಕ್ಕಾಗಿ ಕಮಿಟಿಯನ್ನು ಏರ್ಪಡಿಸುವ ಆವಶ್ಯಕವಿಲ್ಲ" ಎಂದೂ ಹೇಳಿದರು. ಈ ವಿಷಯವು ಸಂಸ್ಥಾನದಲ್ಲೆಲ್ಲಾ ಅಶಾಂತಿಯನ್ನುಂಟುಮಾಡಿರುವ ಕಾರಣ ಸರ್ಕಾರದವರು ಇದರ ಕಾರಣವನ್ನು ಕೂಲಂಕಷವಾಗಿ ವಿಚಾರಮಾಡಲು ಸಮಿತಿಯೊಂದನ್ನೇರ್ಪಡಿಸಿ ವಿಷಯವನ್ನು ವಿಮರ್ಶಿಸಿ ಹೊರಹಾಕಿದರೆ ಬಾಧಕವೇನು? ಜನಗಳ ಮಾನಸಿಕ ಸಂದೇಹವು ಶಾಂತವಾಗುತ್ತದೆಯಾಗಿ ಸಾಧಕವಲ್ಲದೇ ಬಾಧಕವೇನೂ ಇಲ್ಲ. ಸರ್ಕಾರದವರು ಆಲೋಚಿಸಿ ಇದಕ್ಕಾಗಿ ಸಮಿತಿಯೊಂದನ್ನೇರ್ಪಡಿಸಲೆಂದು ನಮ್ಮ ಸಲಹೆ.

ಸಂಸ್ಥಾನದ ಎಲ್ಲಾ ಪಾಠಶಾಲೆಗಳಿಗೂ ಒಬ್ಬೊಬ್ಬ ಹಿಂದಿ ಉಪಾಧ್ಯಾರನ್ನು ಮಾಡಬೇಕೆಂಬ ಪ್ರಶ್ನೆಗೆ "ಆವಶ್ಯಕವಿದ್ದೆಡೆಯಲ್ಲಿ ಕೊಟ್ಟಿರುವುದಾಗಿಯೂ ಎಲ್ಲಾ ಸ್ಕೂಲಿಗೂ ಕೊಡುವುದರಿಂದ ಪ್ರಯೋಜನವೇನೂ ಕಂಡುಬರುವುದಿಲ್ಲವೆಂದೂ ಬೇಕಾದವರು ಕೇಳಿಕೊಂಡಲ್ಲಿ ಕೊಡುವುದಾಗಿಯೂ" ವಿದ್ಯಾ ಮಂತ್ರಿಗಳು ಹೇಳಿದರು. ಹಿಂದೀ ರಾಷ್ಟ್ರವು ವಿಶಾಲವಿದ್ದು ಹಿಂದಿಯು ಇಗ್ಲೀಷಿನಂತೆ ರಾಷ್ಟ್ರಭಾಷೆಯಾಗಲು ಯೋಗ್ಯವಿರುವುದರಿಂದ ಅದಕ್ಕಾಗಿ ಈಗಿಗಿಂತಲೂ ಹೆಚ್ಚಾದ ಪ್ರೋತ್ಸಾಹದ ಆವಶ್ಯಕತೆ ಇರುತ್ತದೆಯಾಗಿ ಅತ್ತ ಸ್ವಲ್ಪ ಗಮನಕೊಡುವುದು ಆವಶ್ಯಕ.

ಒತ್ತಾಯದ ಪ್ರಾಥಮಿಕ ವಿದ್ಯಾಭ್ಯಾಸವು ಅನಾವಶ್ಯಕವೆಂದು ವಿದ್ಯಾ ಮಂತ್ರಿಗಳು ಹೇಳಿದರು. ಆದರೆ ಇನ್ನೂ ಅಕ್ಷರಪ್ರಚಾರದ ಆವಶ್ಯಕತೆಯು ಅಧಿಕವಿರುತ್ತದೆ. ಸಂಸ್ಥಾನದ ಜನಗಣನೆಯ ದೃಷ್ಟಿಯಿಂದ ಪ್ರಾಥಮಿಕ ವಿದ್ಯಾಭ್ಯಾಸವು ಸಾಕಷ್ಟಿರುವುದಿಲ್ಲ. ಪ್ರೌಢವಿದ್ಯಾಭ್ಯಾಸಕ್ಕೆ ಒತ್ತಾಯದ ಆವಶ್ಯಕತೆ ಇಲ್ಲದಿರುವಂತೆ ಬಾಲ್ಯವಿದ್ಯಾಭ್ಯಾಸಕ್ಕೆ ಒತ್ತಾಯವಿಲ್ಲದಿರುವಲ್ಲಿ ಸಾಕಷ್ಟು ಉಪಕಾರವಾಗಲಾರದು. ಆರೋಗ್ಯದಾಯಕವಾದ ಔಷಧಿಯನ್ನು ಬಲಾತ್ಕಾರವಾಗಿಯೇ ಕುಡಿಸಬೇಕಾಗುತ್ತದೆ. ಒತ್ತಾಯದಿಂದ ಉಪಕಾರವಿರುವ ಸಂಭವದಿಂದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಒತ್ತಾಯವಿರುವುದು ಅತ್ಯಾವಶ್ಯಕ.

ಅಧಿಕಾರಿಗಳಿಗೆ ಎಕ್ಸ್‌ಟೆಂಷನ್ ಕೊಡುವುದು ಯೋಗ್ಯಶಕ್ತರು ದೊರಕದಿರುವಲ್ಲಿ ಒಂದು ಭಾಗದಲ್ಲಿ ಯುಕ್ತವಾಗಬಹುದು; ಆದರೆ ಶಕ್ತರಾದ ಸ್ವದೇಶೀಯರಿದ್ದೂ ನಿಯಮಿತವಾದ ವಯಸ್ಸು ಮೀರಿದ ಪರದೇಶೀಯರಿಗೆ ಜೀವನದಾನವು ಅಯುಕ್ತವಾಗದಿರದು. ಅದರಲ್ಲೂ ನಮ್ಮ ದೇಶೀಯರನ್ನು ನೀತಿಬಾಹಿರದೃಷ್ಟಿಯಿಂದ ನೋಡುತ್ತಿರುವವರಿಗೆ ನಮ್ಮ ಪ್ರಜೆಗಳ ಕಷ್ಟಾರ್ಜಿತವಾದ ದ್ರವ್ಯವನ್ನು ಹೆಚ್ಚಾಗಿ ವ್ಯಯಮಾಡುವುದು ಮತ್ತೂ ಅಸಮಾಧಾನಕರ. ಅವರಿಗಿಂತಲೂ ಕಡಿಮೆ ಸಂಬಳವನ್ನು ತೆಗೆದುಕೊಂಡು ದೇಶಹಿತಕ್ಕಾಗಿಯೇ ಕೆಲಸಮಾಡುವ ಶಕ್ತರು ನಮ್ಮಲ್ಲಿಯೇ ದೊರಕುವಾಗ ನಮ್ಮ ದೇಶೀಯರಿಗೆ ದೊರಕದಿರುವ ಅನೇಕ ಎಕ್ಸ್‌ಟೆಂಷನ್‌ಗಳು ವಿದೇಶೀಯರಿಗೆ ನಮ್ಮ ಪ್ರಜೆಗಳು ಮತ್ತು ಸಂಸ್ಥಾನದಮೇಲೆ ಏನೇನೂ ಗೌರವ ವಾತ್ಸಲ್ಯವಿಲ್ಲದೆ ಕೇವಲ ದುಡ್ಡನ್ನು ಗಳಿಸುವವರಿಗೆ ಸಿಕ್ಕುತ್ತಿರುವುದು ಶೋಚನೀಯಾಂಶವು ಸರಿ. ಇದರ ಚರ್ಚೆಗೆ ಅವಕಾಶವು ದೊರಕದಿದ್ದುದರಿಂದ ಕಾಂಗ್ರೆಸ್ ಪಕ್ಷದವರು ಮತ್ತು ಸ್ವತಂತ್ರ ಪಕ್ಷದ ಕೆಲವರೂ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುವುದಕ್ಕಾಗಿ ಹತ್ತು ನಿಮಿಷಕಾಲ ಸಭಾಪರಿತ್ಯಾಗಮಾಡಿದ್ದರು.

---

(೫ ನೇ ಪುಟದಿಂದ)

ಇರಬಹುದು, ಆಗ ರಮಾಪತಿಯು ಅವಳ ಕೊಠಡಿಯನ್ನು ಪ್ರವೇಶಿಸಿ ಕುಮಾರಿಯನ್ನು ಬಲಾತ್ಕರಿಸಲು ಹೋದನು, ಆದ್ದರಿಂದ ಕುಮಾರಿಗೆ ಬಹಳ ಕೋಪವುಂಟಾಯಿತು. ತನ್ನ ಕೋಪವನ್ನು ಹೊರಬೀಳಿಸದೇ, ಆತನಿಗೆ ಎಷ್ಟೆಷ್ಟೋ ನೀತಿಯನ್ನು ಹೇಳಿದಳು. ಆದರೂ ಆತನು ಬಲಾತ್ಕರಿಸಲು, ತನ್ನಲ್ಲಿದ್ದ ಬಾಕುವಿನಿಂದ ಬಹಳ ಚಮತ್ಕಾರದಿಂದ ಆತನನ್ನು ತಿವಿದು ಕೊಂದಳು. ಇದರಿಂದ ಆಚಾರ್ಯರಿಗೆ ವ್ಯಸನವೇನೂ ಉಂಟಾಗಲಿಲ್ಲ.

ಇತ್ತ ಸುರೇಂದ್ರನು ತನ್ನ ಕೊಠಡಿಯಲ್ಲಿ ಚಿಂತಾಕ್ರಾಂತನಾಗಿ ಒಂದು ವರ್ತಮಾನ ಪತ್ರಿಕೆಯನ್ನು ಓದುತ್ತಿದ್ದು ಅದರಲ್ಲಿ ಒಂದುಕಡೆ "ಭೀಕರ ಕೊಲೆ" ಕುಮಾರಿಯ ಸಾಹಸ! ಎಂದು ವಿವರವನ್ನೆಲ್ಲಾ ಬರೆದಿತ್ತು.

ಆಗ ಸುರೇಂದ್ರನು ತಕ್ಷಣವೇ ತನ್ನ ಊರಿಗೆ ಬಂದು ಎಲ್ಲವನ್ನೂ ವಿಚಾರಿಸಿ ಕುಮಾರಿಯ ಸಾಹಸಕ್ಕೆ ಮೆಚ್ಚಿದನು. ಆಂದಿನಿಂದ ಅವರಿಬ್ಬರೂ ಸುಖವಾಗಿ ಸಂಸಾರಮಾಡುತ್ತಿದ್ದರು.

ಇದಲ್ಲವೇ ಪ್ರೇಮ ಸ್ವಯಂವರ.

# ಆರೋಗ್ಯ

## ಸಂಧಿವಾತ ಅಥವ ಕೀಲುವಾಯು

ಸಂಧಿವಾತವೆಂದೂ ಕೀಲುವಾಯುವೆಂದೂ ಸಾಮಾನ್ಯವಾಗಿ ಹೇಳಲ್ಪಡುವ ರೋಗವನ್ನು ಆಯುರ್ವೇದಿಗಳು ಆಮವಾತವೆನ್ನುವರು. ಇದು ಬಹಳ ಕಾಲದಿಂದಲೂ ಜನಗಳನ್ನು ಪೀಡಿಸುತ್ತಿರುವ ರೋಗ. ಈ ರೋಗವು ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲಿಯೂ ಇರುತ್ತದೆ. ಈಗ ಐವತ್ತು ವರ್ಷಗಳಿಂದ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಈ ರೋಗದಿಂದ ಬಾಧೆಪಡುತ್ತಿರುವವರ ಸಂಖ್ಯೆಯು ಮೇಲೆ ಮೇಲೆ ಹೆಚ್ಚುತ್ತಿದೆಯೆಂದು ವೈದ್ಯ ಇಲಾಖೆಯವರ ಪ್ರಕಟಣೆಗಳಿಂದ ತಿಳಿದು ಬರುತ್ತದೆ. ಈ ಕಾಲದಲ್ಲಿ ಈ ವ್ಯಾಧಿಯು ಹೀಗೆ ಹೆಚ್ಚಲು ಕಾರಣವನ್ನು ಮುಂದೆ ಹೇಳಲಾಗುವುದು. ಎತ್ತರ-ಕುಳ್ಳ, ಧನಿಕ-ದರಿದ್ರ, ಬಲಿಷ್ಠ-ಅಬಲ, ಯುವಕ-ವೃದ್ಧ, ಗಂಡು-ಹೆಣ್ಣು, ಎಂಬ ಭೇದವಿಲ್ಲದೇ ಮನುಷ್ಯಸಾಮಾನ್ಯವೂ ಈ ರೋಗಕ್ಕೀಡಾಗಬಹುದು.

### ಇದರಿಂದಾಗುವ ಅವಸ್ಥೆ

ಆಮವಾತಕ್ಕೀಡಾದವರು ತಡೆಯಲಾಗದ ಹೊಟ್ಟಿನೋವನ್ನು ಹೊಂದುವುದಲ್ಲದೇ ತಮ್ಮ ಜೀವನಕ್ಕೆ ಕಾರಣವಾದ ಕೆಲಸಗಳನ್ನು ಮಾಡಲಾರದೇ ವಾರಕ್ಕೊಂದು ಬಾರಿಯೋ ಅಥವ ತಿಂಗಳಿಗೊಂದು ಬಾರಿಯೋ ಬರುವ ವೇದನೆಯನ್ನು ಸಹಿಸಬೇಕಾಗುತ್ತದೆ. "ಓರಿಯಂಟಲ್ ವಾಚ್‌ಮ್ಯಾ" ಎಂಬ ಪತ್ರಿಕೆಯ ಒಂದು ಪ್ರಕಟಣೆಯು ಹೀಗೆ ಹೇಳುತ್ತದೆ—

"ಗ್ರೇಟ್ ಬಿಟನ್ನಿನಲ್ಲಿ ಮಾತ್ರ ಐದು ಮಿಲಿಯ್ಯ ಅಂದರೆ ೫೦ ಲಕ್ಷ ವಾರದ ಸಂಬಳದ ಕೂಲಿಯಾಳುಗಳು ಈ ರೋಗಕ್ಕಾಗಿ ಪ್ರಾಣವನ್ನು ಕಳದುಕೊಳ್ಳುತ್ತಾರೆ. ಅಲ್ಲಿರುವ ಕೆಲಸಗಾರರಲ್ಲಿ ಆರನೇ ಒಂದು ಭಾಗಕ್ಕೆ ಕಡಿಮೆ ಇಲ್ಲದೆ ಆಮವಾತ (ರೂಮ್ಯಾಟಿಸಂ) ವೆಂಬ ರೋಗಕ್ಕೀಡಾಗಿ ಜೀವನದಲ್ಲೇ ದುಃಖಿಗಳಾಗಿ ಅನೇಕ ವಿಧವಾದ ಕಷ್ಟಗಳಿಗೀಡಾಗಿರುತ್ತಾರೆ. ಸ್ವತಂತ್ರಜೀವನವನ್ನು ನಡಸುವ ಅನೇಕ ಸಾವಿರ ಜನಗಳು ಈ ವ್ಯಾಧಿಯಿಂದ ಪೀಡಿಸಲ್ಪಡುತ್ತಿರುವರು. ಆದರೆ ಅವರ ಸಂಖ್ಯೆಯನ್ನು ಇದರೊಡನೆ ಸೇರಿಸಿರುವುದಿಲ್ಲ. ಗಂಧಕ ಮೊದಲಾದ ಧಾತುಗಳಿಂದ ಕೂಡಿದ ಪರ್ವತಗಳಿಂದ ಬರುವ ಝರಿಗಳಲ್ಲಿ ಸ್ನಾನಮಾಡುವುದರಿಂದ ಈ ರೋಗವು ದೂರವಾಗುತ್ತದೆಂದು

ಅನೇಕರು ಪ್ರಯತ್ನಮಾಡಿ ಏನೂ ಫಲವಾಗದೇ ಹಿಂತಿರುಗಿದುದನ್ನು ನೋಡಿರುತ್ತೇವೆ. ೧೯೩೯ನೇ ವರ್ಷದಲ್ಲಿ ಆ ದೇಶದ ಪ್ರಧಾನ ವೈದ್ಯಾಧಿಕಾರಿಗಳು ಹೊರಗೆಡವಿದ ವಾರ್ಷಿಕ ರಿಪೋರ್ಟಿನಲ್ಲಿ ಈ ವ್ಯಾಧಿಗೆ 'ವಾರ್ಕ್ಸಿಸೀರಂ' ಎಂಬ ಔಷಧ ಪ್ರಯೋಗದಿಂದ ಹೆಚ್ಚು ಲಾಭವೇನೂ ಆಗಿಲ್ಲವೆಂದು ಸೂಚಿಸಲ್ಪಟ್ಟಿರುತ್ತದೆ. ಆದುದರಿಂದ ಈ ವ್ಯಾಧಿಯುಳ್ಳವರು ಆಹಾರ ವಿಷಯದಲ್ಲಿ ಹೆಚ್ಚು ಎಚ್ಚರಿಕೆಯನ್ನು ತೆಗೆದುಕೊಳ್ಳದಿರುವಲ್ಲಿ ಈ ಸಂಧಿವಾತ (ರೊಮಾಟಿಸಂ) ವನ್ನು ತಡೆಯುವುದಾಗಲಿ ನಾಶಪಡಿಸುವುದಾಗಲಿ ಅಸಾಧ್ಯವೆಂಬುದು ಆಧುನಿಕ ಪರಿಶೋಧನೆಗಳಿಂದ ತಿಳಿದು ಬಂದಿರುತ್ತದೆ.

## ಕಾರಣವೇನು?

ಆಮವಾತಕ್ಕೆ ಆಮದೋಷವೆನ್ನುವ ಒಂದು ಬಗೆಯ ವಿಷವು ಪ್ರಧಾನಕಾರಣವು. ಆ ವಿಷವು ಪರಿಮಿತಿ ಇಲ್ಲದೇ ಅಕಾಲದಲ್ಲಿ ಭುಜಿಸುವ ಆಹಾರವು ಚನ್ನಾಗಿ ಜೀರ್ಣವಾಗದೆಯೋ, ಅಥವ ಅಶುದ್ಧ ಆಹಾರವು ಹೊಟ್ಟೆಯಲ್ಲಿ ಸೇರಿ ವಿಷರೂಪವಾಗಿ ಪರಿಣಮಿಸಿ ಜೀರ್ಣಕಾರಿ ಅವಯವಗಳಿಂದ ಹುಟ್ಟುವ ಶರೀರಕ್ಕೆ ವಿರೋಧವನ್ನುಂಟುಮಾಡುವ ಒಂದು ವಿಧವಾದ ವಸ್ತು.

" ಅವಿಪಕ್ವಮಸಂಯುಕ್ತಂ ದುರ್ಗಂಧಂ ಬಹುಪಿಚ್ಛಿಲಮ್
ಸದನಂ ಸರ್ವಗಾತ್ರಾಣಾಂ ಆಮ ಇತ್ಯಭಿದೀಯತೇ ॥ "

ಭುಂಜಿಸಿದ ಅಶುದ್ಧ ಆಹಾರದ ಕೆಲವು ಭಾಗವು ಜೀರ್ಣವಾಗದೇ ನಿಂತ ಹೋಗುವುದು; ಆದುದರಿಂದ ಒಂದು ವಿಧವಾಗಿ ಹೊಟ್ಟೆಯಲ್ಲಿ ಊರಿ ಕಮರುದೇಗನ್ನುಂಟುಮಾಡಿ ದುರ್ನಾತವುಂಟಾಗುವುದು. ರಕ್ತವಾಗಲು ಯೋಗ್ಯವಾದ ರಸರೂಪವಾಗಿ ಪರಿಣಮಿಸದೇ ಕಶ್ಮಲವಾಗಿಯೇ ಇರುವುದು; ಅದು ಶರೀರದ ಎಲ್ಲಾ ಅವಯವಗಳಿಗೂ ಪೋಷಣೆಗೆ ಬದಲಾಗಿ ಕೆಡುಕನ್ನೇ ಮಾಡುವುದು. ಈ ವಿಷವನ್ನೇ ಆಮವೆನ್ನುವರು. ಎಂಬುವದಾಗಿ ಆಮದೋಷವನ್ನು ಶಾಸ್ತ್ರದಲ್ಲಿ ವಿವರಿಸಿರುವರು.

ಈ ವಿಷವು ದೇಹದ ಅವಯವಗಳಲೆಲ್ಲಾ ಸೇರುವುದರಿಂದ ಅವುಗಳನ್ನು ಹೊರಗೆಹಾಕಲು ಶರೀರದ ಅಂತರವಯವಗಳು ಶಕ್ತಿ ಮೀರಿ ಕೆಲಸಮಾಡುತ್ತವೆಯಾಗಿಯೂ, ಹಾಗೆ ಬಲಾತ್ಕಾರವಾಗಿ ಕೆಲಸಮಾಡುವುದರಿಂದಲೂ ಅಲ್ಲಲ್ಲಿ ಸುಡುವುದು ಹೊಡೆತಉಂಟಾಗಿ ಹೆಚ್ಚು ಹಿಂಸೆಯನ್ನುಂಟುಮಾಡುವ ಸಂಧಿವಾತ (ಆಮವಾತ) ವೆಂಬ ರೋಗವುಂಟಾಗುತ್ತದೆ. ಈ ರೋಗವು ಕೆಲವು ಅವಯವಗಳಲ್ಲಿ ಸಾಕ್ಷಾತ್ತಾಗಿ

ಹೊಡೆತ ಊದು ಮೊದಲಾದ್ದನ್ನುಂಟುಮಾಡುವುದಲ್ಲದೇ, ಮೂತ್ರಮಾರ್ಗವೇ ಮೊದಲಾದ ಅವಯವಗಳ ಕೆಲಸಕ್ಕೆ ತಡೆಯನ್ನುಂಟುಮಾಡಿ ದೇಹದಲ್ಲಿ ಹುಟ್ಟಿದ ಕಲ್ಮಶಗಳು ಆಗಾಗ ಹೊರಬೀಳಲು ಅವಕಾಶವಿಲ್ಲದಂತೆ ಮಾಡಿ ಈ ರೋಗವನ್ನು ಶರೀರದಲ್ಲಿ ಹೆಚ್ಚಿಸುತ್ತದೆ. ಈ ವಿಧವಾದ ಹೊಡೆತ ಮೊದಲಾದ ವೇದನೆಗಳು ಅಲ್ಲಲ್ಲಿ ತೋರಿದಾಗ ಅದನ್ನು ಹೋಗಲಾಡಿಸಲು ತೈಲ ಮೊದಲಾದವುಗಳನ್ನು ಉಪಯೋಗಿಸುವುದು ಉಚಿತವಲ್ಲ.

## ಪರಿಹಾರವೇನು ?

ಈ ವ್ಯಾಧಿಯಿಂದ ಪೀಡಿತರಾದವರು ಮೊದಲು ಮಾಡಬೇಕಾದ ಕರ್ತವ್ಯವಂದರೆ ಆಮದೋಷವನ್ನು ವೃದ್ಧಿಪಡಿಸುವ ಆಹಾರವನ್ನು ಸಂಪೂರ್ಣವಾಗಿ ಪರಿತ್ಯಜಿಸಬೇಕು. ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಮಿತವಾಗಿ ಭುಜಿಸಬೇಕು.

ಮೊದಲೇ ಶರೀರದಲ್ಲಿ ಸೇರಿರುವ ಆಮವಿಷವನ್ನು ಕಡಿಮೆಮಾಡುವುದಕ್ಕೂ, ಮುಂದೆ ಆ ವಿಷವು ಶರೀರದಲ್ಲಿ ಸೇರದಿರುವುದಕ್ಕೂ, ಬೆಮರು ಮತ್ತು ಮೂತ್ರ ಮೊದಲಾದವುಗಳ ಮೂಲಕ ವಿಷವಸ್ತುಗಳು ಆಗಾಗ ಹೊರಬೀಳಲು ಬೇಕಾದ ಅನುಕೂಲ್ಯಗಳನ್ನು ಕಲ್ಪಿಸುವುದಕ್ಕೂ, ಆಹಾರಕ್ರಮವನ್ನು ಯೋಗ್ಯರೀತಿಯಿಂದ ಸರಿಪಡಿಸುವುದೇ ಈ ವ್ಯಾಧಿಯ ಪ್ರಥಮಚಿಕಿತ್ಸೆಯು. "ಪ್ರಾಣಿಸಂಬಂಧವಾದ ಮಾಂಸ ಮತ್ಸ್ಯ ಮೊದಲಾದ ಎಲ್ಲಾ ವಸ್ತುಗಳೂ ಈ ರೋಗವನ್ನು ಹೆಚ್ಚಿಸತಕ್ಕವುಗಳಾದುದರಿಂದ ಈ ರೋಗಿಗಳು ಅವುಗಳ ಸೇವನೆಯನ್ನು ಸಂಪೂರ್ಣವಾಗಿ ಬಿಡಬೇಕು" ಎಂಬುದಾಗಿ ಡಾ। ಆರ್ಥರ್ ಮಿಲ್‌ವಾರ್ಡ್ ಎಂಬುವರು ಹೇಳುತ್ತಾರೆ. ಮಲಬದ್ಧತೆಯು ಸ್ವಲ್ಪವೇ ಉಂಟಾದರೂ ಈ ರೋಗವು ಹೆಚ್ಚುತ್ತದೆಯಾಗಿ ಈ ರೋಗವುಳ್ಳವರು ಮತ್ಸ್ಯಾದಿಗಳ ಸೇವನೆಯನ್ನು ಸಂಪೂರ್ಣವಾಗಿ ತೊರೆಯಬೇಕು. ಕಾಣ, ಮಾಂಸ ಮತ್ತು ಮೀನುಗಳು ಮಲಬದ್ಧತೆಯನ್ನುಂಟುಮಾಡುತ್ತವೆಯೆಂದು ವಸ್ತುಪರಿಶೋಧಕರು ನಿಶ್ಚಯಿಸಿರುತ್ತಾರೆ.

## ಮಲಬದ್ಧವು ಹಾನಿಕರ

ಮನುಷ್ಯಸಾಮಾನ್ಯಕ್ಕೂ ಮಲಬಂಧವು ಹಾನಿಯನ್ನುಂಟುಮಾಡುತ್ತದೆ. ಅದರಲ್ಲೂ ಈ ವ್ಯಾಧಿಯುಳ್ಳವರಿಗೆ ಮಲಬಂಧವು ಬಹಳ ಕೆಡಕು. ಮಲಕೋಶವೆಂಬ ಕರುಳಿನ ಕೆಳಭಾಗದಲ್ಲಿ ಹಳೆಯ ಮಲವು ಸೇರುತ್ತಾಬಂದರೆ, ಅದರಲ್ಲಿರುವ ವಿಷವಸ್ತುಗಳನ್ನೂ ಅಪಾನವಾಯುವಿನಲ್ಲಿರುವ ವಿಷವಸ್ತುಗಳನ್ನೂ ಶರೀರದಲ್ಲಿರುವ ಧಾತು

ಗಳು ಸೆಳೆದುಕೊಳ್ಳುತ್ತವೆ. ಆ ವಿಷವು ಶರೀರದಲ್ಲಿ ಹೆಚ್ಚು ಹೆಚ್ಚು ಸೇರಿದಂತೆಲ್ಲಾ ಆಮವಿಷವು ಹೆಚ್ಚಿ ಆಮವಾತ ರೋಗವನ್ನೂ, ತಲೆನೋವು ಮೊದಲಾದ ಅನೇಕ ರೋಗಗಳನ್ನೂ ಹೆಚ್ಚಿಸುತ್ತದೆ. ಮಲಬದ್ಧತೆಯನ್ನು ಪರಿಹರಿಸಲು ಪ್ರತಿಯೊಬ್ಬರೂ ಆಹಾರ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕು. ಹೊಸಅಕ್ಕಿ, ಚನ್ನಾಗಿ ಮೇಲಿನ ಸಣ್ಣತೌಡನ್ನು ತೆಗೆದ ಹೊಳಪಾದ ಅಕ್ಕಿ, ಚನ್ನಾಗಿ ತೊಳಸಿ ಬಿಳುಪಾದ ಗೋಧಿ ಮತ್ತು ಗೋಧಿಹಿಟ್ಟು, ಜೋಳ, ಅವರೆ, ಕಡಲೆ, ಬಿಳೀಗೋಧಿಯರೊಟ್ಟಿ, ಆಲೂ ಗೆಡ್ಡೆ, ಮೊದಲಾದವುಗಳನ್ನು ಈ ರೋಗವುಳ್ಳವರು ಸೇವಿಸಲಾಗದು. ಈ ವಸ್ತು ಗಳು ಮಲಬಂಧವನ್ನು ವೃದ್ಧಿಮಾಡುತ್ತವೆ. ಇವುಗಳಲ್ಲಿ ದೇಹಪೋಷಣೆಗೆ ಆವಶ್ಯಕ ವಾದ ಸತ್ವಗಳು ಹೆಚ್ಚಾಗಿಲ್ಲದಿರುವುದಲ್ಲದೇ, ರಕ್ತದಲ್ಲಿ ಸೇರಬಹುದಾದ ಆಮದೋಷ ವನ್ನು ಪರಿಹರಿಸುವ ಉಪ್ಪು ಮೊದಲಾದ ವಸ್ತುಗಳ ಉತ್ತಮ ಗುಣಗಳನ್ನೂ ಅಪ್ರ ಯೋಜಕವನ್ನಾಗಿ ಮಾಡುತ್ತದೆ.

## ಉಪಯೋಗಿಸತಕ್ಕವುಗಳು

ಕೆರುಕುಸಾಲೆಸೊಪ್ಪು, ಚಿಕ್ಕಿಸೊಪ್ಪು, ಮೆಂತ್ಯದಸೊಪ್ಪು, ವಾತನಾರಾ ಯಣಸೊಪ್ಪು, ಮೊದಲಾದ ಹಸಿಸೊಪ್ಪುಗಳು; ಎಳಿಬದನೆಕಾಯಿ, ಬೆಂಡೆ, ಹಾಗಲ, ನುಗ್ಗೆಕಾಯಿ, ಮೂಲಂಗಿ, ಎಲೆಚಪ್ಪರದವರೆ ಮೊದಲಾದ ತರಕಾರಿಗಳೂ, ಹೆಸರು, ಜವೆಗೋಧಿ, ಕುಸಲಕ್ಕಿ, ಬಿಳಿಗೋಧಿ ಮೊದಲಾದ ಧಾನ್ಯಗಳು, ಹಸುವಿನ ಹಾಲು, ಸಿಹಿಮಜ್ಜಿಗೆ, ಅನ್ನವನ್ನು ನೆನೆಯಿಟ್ಟ ಅನ್ನದ ತಿಳಿ ಎಂಬ ನೀರು, ಅನ್ನದ ಗಂಜಿ, ಮೊದಲಾದ ಪಾನೀಯಗಳೂ ಈ ಸಂಧಿವಾತ ರೋಗವುಳ್ಳವರಿಗೆ ಹೆಚ್ಚು ಉಪ ಕಾರಿಗಳಿರುವುವು.

## ನಾಶಪಡಿಸುವ ಉಪಾಯಗಳು

ಆಮವಾತ ರೋಗಿಗಳು ಸುಲಭವಾಗಿ ಜೀರ್ಣವಾಗುವ ಆಹಾರಗಳನ್ನು ಸೇವಿ ಸಬೇಕು. ಬಿಸಿನೀರನ್ನು ಬೇಕಾದಷ್ಟು ಸೇವಿಸಬಹುದು. ಹೆಚ್ಚು ನೀರು ಕುಡಿಯು ವುದರಿಂದ ಧಾತುಗಳಲ್ಲಿ ಸೇರಿರುವ ವಿಷವಸ್ತುಗಳು ನೀರಿನಿಂದ ಕರಗಿಸಲ್ಪಟ್ಟು ಹೊರ ಬೀಳಲು ಅವಕಾಶವಾಗುತ್ತದೆ. ಬಾಳೆಹಣ್ಣನ್ನು ಬಿಟ್ಟು ಉಳಿದ ಎಲ್ಲಾ ಹಣ್ಣು ಗಳನ್ನೂ ಆಗಾಗ ಸೇವಿಸುವುದರಿಂದ ಬಹಳ ಉಪಕಾರವಾಗತ್ತದೆ. ಒಳ್ಳೆ ಗಾಳಿಯಲ್ಲಿ ಸಂಚಾರಮಾಡುವುದೂ, ಒಳ್ಳೇ ಬೆಳಕು ಗಾಳಿ ಇರುವೆಡೆಯಲ್ಲಿ ವಾಸಿಸುವುದೂ, ಊದು ಮತ್ತು ಹೊಡೆತವು ಇರುವ ವೇಳೆಯಲ್ಲಿ ತಂಪಾದೆಡೆಯಲ್ಲಿ ಏಳದೇ, ಮಲ

# ವಿಚಿತ್ರವಿಶ್ವ

## ೧೯೦ ಲಕ್ಷ ಕ್ಯಾಮರಾಗಳು

ಅಮೇರಿಕದವರಿಗೆ ಅತ್ಯಂತಪ್ರಿಯವಾದ ವಸ್ತುಗಳು ಐದೆಂದು ಒಂದು ಅಮೆರಿಕ ಪತ್ರಿಕೆಯು ಹೇಳುತ್ತದೆ. ೧ ಫೋಟೋ ತೆಗೆಯುವದು. ೨ ತಲೆಚೀಟಿಗಳು. ೩ ಸಂಗೀತ. ೪ ಬೊಂಬೆಗಳನ್ನು ಮಾಡುವುದು. ೫ ಮನೆ ಕೈಗಾರಿಕೆ.

೧೯೪೦ ರಲ್ಲಿ ೧೯೦ ಲಕ್ಷ ಫೋಟೋ ತೆಗೆಯುವವರು ಸ್ಟಿಲ್ ಪಟಗಳನ್ನು ತೆಗೆಯಲು ೬ ಕೋಟಿ ಸಾರಿ ಕ್ಯಾಮರಾವನ್ನು ಉಪಯೋಗಿಸಿರುತ್ತಾರೆ. ಕ್ಯಾಮರಾಕ್ಕೆ ಬೇಕಾದ ಫಿಲಂ ಮತ್ತು ಇತರ ಸಾಮಾನುಗಳನ್ನು ಕೊಳ್ಳಲು ೧೦ ಕೋಟಿ ಡಾಲರ್‌ಗಳನ್ನು ಖರ್ಚುಮಾಡಿರುವರು. ೫೦ ಲಕ್ಷ ಜನಗಳು ಅಮೆಚೂರ್ ಮೂವಿಯನ್ನು ಮಾಡತಕ್ಕವರಿರುತ್ತಾರೆ.

## ಅಲ್ಬೇನಿಯಾದಲ್ಲಿ ಅತಿಥಿಸತ್ಕಾರ ಮಲೆನಾಡಿನ ರೀತಿ

ಅಲ್ಬೇನಿಯಾದಲ್ಲಿ ಒಬ್ಬರ ಮನೆಗೊಬ್ಬರು ಬಂದರೆ ಕಾಫಿಯನ್ನು ಕೊಡುವ ಪದ್ಧತಿಯಿದೆ. ಅದನ್ನು ಬಂದವರೂ ತಡೆಯಲಾಗದು. ಅವರು ತಿರಸ್ಕರಿಸಿದರೆ ಮನೆಯವರಿಗೆ ಅಪಮಾನವಾಡಿದಂತಾಗುತ್ತವೆ. ಅವರಿಗೆ ಮೋಸವನ್ನು ಮಾಡಿದಂತೆಯೂ ಭಾವಿಸಲಾಗುತ್ತದಂತೆ.

ಒಬ್ಬರು ಮತ್ತೊಬ್ಬರ ಶಿಶುವನ್ನು ಕೊಂದರೆಂದಿಟ್ಟುಕೊಳ್ಳೋಣ. ಕೊಂದವರು ಯಾರ ಮಗುವನ್ನು ಕೊಂದರೋ ಅವರ ಮನೆಯಲ್ಲಿಯೇ ಇದ್ದುಬಿಟ್ಟರೆ ಅವರನ್ನು ಪೋಲೀಸಿನ ವಶಕ್ಕೆ ಕೊಡುವುದಿಲ್ಲ. ಕೂಡಲೇ ಮುಯ್ಯಿಗೆ ಮುಯ್ಯಿ ಮಾಡುವಂತಿಲ್ಲ. ಕೊಂದವರಿಗೆ ಆರು ವಾರದವರೆಗೆ ಬೇಕಾದ ಉಪಚಾರಗಳನ್ನು ಮಾಡಬೇಕು. ನಂತರ ಅವರು ಕಾಯಿದೆಯಂತೆ ಹೊರಗಾಗಬೇಕು. ಆ ಮೇಲೆ ಅವರನ್ನು ಬೆನ್ನುಕಡೆಯಿಂದ ಸುಟ್ಟು ಕೊಲ್ಲಬೇಕು. ಇದೇ ಅವರ ಪದ್ಧತಿ. ಅವರು ಮನೆಯನ್ನು ಬಿಟ್ಟು ಹೊರಗೆ ಹೋಗುವವರೆಗೆ ಏನೂ ಮಾಡಕೂಡದು. ಹಾಗೆ ಮಾಡುವುದು ಅವರ ಉದಾರತೆಗೆ ಭಂಗತರುತ್ತದೆಂದು ಅವರ ಭಾವನೆ. ಜೋಕ್ ರಾಜರು "ರಾಣಿ ಜೊರಾಲ್ವೈ ಎಂಬುವವರ ನಿಜವಾದ ಕಥೆ" ಎನ್ನುವ ಗ್ರಂಥದಲ್ಲಿ ಅಂಡಾಯ್ನೆಟ್ ಸಿನೆಯ್‌ಮೇರ್ಸಿ ಎಂಬುವವರು ಇದನ್ನು ಹೇಳಿರುವರು.

# ಧರ್ಮ

(ಮುಂದುವರಿದುದು)

ಮೂಲತತ್ವಗಳು ಜೀವ (ಆತ್ಮ) ಅಜೀವ (ಪ್ರಕೃತಿ) ಎಂದೆರಡು ವಿಧವಾಗಿರುವುದು. ಪ್ರತಿಯೊಂದು ಪ್ರಾಣಿಯಲ್ಲಿಯೂ ಇರುವ ಜ್ಞಾನ, ದರ್ಶನ, ಆನಂದ, ಅಥವ ಚೇತನಾಮಯವಾದ ವಸ್ತುವೇ ಆತ್ಮನು. ಇದು ಸುಃಖ ದುಃಖಾನುಭವಶಕ್ತಿಯುಳ್ಳದು. ಇದು ಶರೀರ ಮತ್ತು ಇಂದ್ರಿಯಗಳಿಂದ ಭಿನ್ನವಿದ್ದು "ನಾನು" ಎಂಬ ಶಬ್ದದ ಮೂಲಕ ಪ್ರತಿವ್ಯಕ್ತಿಗಳಿಂದಲೂ ಸ್ಫುಟವಾಗಿ ತಿಳಿಯಲ್ಪಡುತ್ತದೆ. ಯಾವುದರಲ್ಲಿ ಮೇಲುದ ಹರಿಸಿದ ಚೈತನ್ಯ ಅಥವ ತಿಳಿಯುವ ಶಕ್ತಿ ಇಲ್ಲವೋ ಅದು ಅಜೀವವು. [ಅಜೀವ ದ್ರವ್ಯವು ಪುದ್ಗಲ (Matter) ಧರ್ಮ (ಗತಿಗೆ ಸಹಕಾರಿ) ಅಧರ್ಮ (ಸ್ಥಿತಿಗೆ ಸಹಕಾರಿ) ಆಕಾಶ, ಕಾಲ, ಎಂದು ಐದು ವಿಧವಾಗಿರುವುದು. ಈ ಐದು ಅಜೀವದ್ರವ್ಯಗಳೂ ಜೀವದ್ರವ್ಯವೂ ಸೇರಿ ಆರು ದ್ರವ್ಯಗಳೂ ಎಂದೂ ಉತ್ಪತ್ತಿಯನ್ನಾಗಲಿ ನಾಶವನ್ನಾಗಲಿ ಹೊಂದುವಂತಿಲ್ಲ. ಅನಾಯಿಂದಲೂ ಇವೆ, ಅನಂತಕಾಲದವರೆಗೂ ಇರುವವು. ಸಂಸಾರಿಜೀವನೂ ಅಜೀವದಲ್ಲಿ ಸೇರಿರುವ ಪುದ್ಗಲ (ಕರ್ಮ) ಪರಮಾಣುವೂ ಅನಾದಿಕಾಲದಿಂದ ಸೇರಿರುವವು. ಈ ಕಾರಣದಿಂದಲೇ ಆತ್ಮನು ಜನ್ಮ ಮರಣಾದಿ ದುಃಖಗಳನ್ನನುಭವಿಸುತ್ತಾ ಹೊಸ ಹೊಸ ಶರೀರಗಳನ್ನು ಪಡೆಯುತ್ತಾ ನಾನಾ ಯೋನಿಗಳಲ್ಲಿ ಸುತ್ತುತ್ತಿರುವನು. ಶರೀರ, ಮನ ಅಥವ ವಚನಗಳಲ್ಲಿ ಚಲನ ವಲನ, ಆಲೋಚನೆ ಮತ್ತು ವಚನ ರೂಪ ಕ್ರಿಯೆಯುಂಟಾಗುತ್ತದೆಯೋ ಆವಾಗ ಶರೀರಾದಿಗಳೊಡನೆ ಸಂಬಂಧಿತನಾಗಿರುವ ಆತ್ಮನಲ್ಲಿಯೂ ಈ ಚಲನವಲನಾದಿ ಕ್ರಿಯೆಗಳುಂಟಾಗುತ್ತವೆ. ಆತ್ಮ ಮತ್ತು ಶರೀರ ಸಂಬಂಧವಾದ ಚಲನಾದಿಗಳು ಆಕಾಶದಲ್ಲಿ ಸರ್ವತ್ರವ್ಯಾಪಿಸಿರುವ ಪುದ್ಗಲ ಪರಮಾಣುಗಳ ಮೇಲೆಯೂ ತನ್ನ ಪ್ರಭಾವವನ್ನು ಬೀರುತ್ತದೆ. ಆತ್ಮನು ರಾಗ, ದ್ವೇಷ, ಮೋಹ, ಕ್ರೋಧಾದಿ ವಿಕಾರಗಳೊಡನೆ ಸಂಬಂಧವನ್ನು ಹೊಂದಿದೊಡನೇ ವಿದ್ಯುಚ್ಛಕ್ತಿಯಂತೆ ಆತ್ಮನಲ್ಲಿ ಒಂದು ವಿಧವಾದ ಆಕರ್ಷಣ ಶಕ್ತಿಯುಂಟಾಗಿ ಪುದ್ಗಲ ಪರಮಾಣುಗಳು ನಾಲ್ಕೂ ಕಡೆಯಿಂದ ಆಕರ್ಷಿಸಲ್ಪಟ್ಟು ಆತ್ಮನೆಡೆಗೆ ಬರುವುದಕ್ಕೂ ಬಂಧವಾಗುವುದಕ್ಕೂ ತೊಡಗುತ್ತವೆ. ಕ್ರೋಧಾದಿಭಾವಗಳ ಪ್ರಭಾವವು ಆ ಪರಮಾಣುಗಳ ಮೇಲುಂಟಾಗಿ ಅವುಗಳು ತಮ್ಮ ತೀವ್ರ ಮತ್ತು ಮಂದ ಪ್ರಭಾವಗಳ ಮೂಲಕ ಆತ್ಮನಿಗೆ ಸುಖದುಃಖಾದಿಗಳನ್ನುಂಟು ಮಾಡುವ ಶಕ್ತಿಯನ್ನು ಹೊಂದಿ ಕಾಲಾಂತರದಲ್ಲಿ ಸುಖದುಃಖಗಳನ್ನುಂಟುಮಾಡಲು

ತೊಡಗುತ್ತವೆ. ಆದುದರಿಂದಲೇ ಅವುಗಳು "ಕರ್ಮ" ವೆಂದು ಹೇಳಲ್ಪಡುತ್ತವೆ. ಕಾರಣ ಅವುಗಳನ್ನು ಆತ್ಮನು ತನ್ನ ಭಾವಗಳ ಮೂಲಕ ಮಾಡಿರುತ್ತಾನೆ, ಮತ್ತು ಅವುಗಳಿಗೆ ಸುಖದುಃಖಾದಿಗಳನ್ನುಂಟುಮಾಡುವ ಶಕ್ತಿಯು ಆತ್ಮನ ಭಾವಗಳ ಶಕ್ತಿ ವಿಶೇಷದಿಂದುಂಟಾಗಿರುತ್ತದೆ. ಈ ಕರ್ಮವನ್ನೇ ಭಾಗ್ಯ, ವಿಧಾತೃ, ದೈವ, ಅದೃಷ್ಟ, ಬ್ರಹ್ಮ, ಇತ್ಯಾದಿ ಅನೇಕ ನಾಮಗಳಿಂದ ಆಹ್ವಾನಿಸುತ್ತಾರೆ. ಇಂದಿನ "ಕರ್ಮ" ವು ನಾಳೆ ಅಥವ ತನ್ನ ಕಾಲದಲ್ಲಿ ಸುಖದುಃಖಾದಿರೂಪಫಲವನ್ನು ಕೊಟ್ಟು ನಾಶವಾದರೆ ಆಗ ಆತ್ಮನಲ್ಲುಂಟಾದ ಭಾವವಿಶೇಷದಿಂದ ಪುನಃ ಹೊಸ ಹೊಸ ಕರ್ಮಗಳು ಬಂಧವಾಗುತ್ತವೆ. ಹೀಗೆ ಅನಾದಿಕಾಲದಿಂದಲೂ ಕರ್ಮ ಮತ್ತು ಕರ್ಮಫಲಗಳ ಸಂಬಂಧವು "ಬೀಜಾಂಕುರ" ನ್ಯಾಯದಿಂದ ಪರಸ್ಪರ ಕೂಡಿಬರುತ್ತಿದೆ. ಆತ್ಮನು ರಾಗದ್ವೇಷಾದಿಗಳಿಗೆ ವಶನಾಗದೇ ಸಮತಾಭಾವದೊಡನೆ ಕೂಡಿ, ಯಾವುಗಳ ವಿಕಾರದಿಂದ ಕರ್ಮವು ಬರುತ್ತದೆಯೋ ಅಂತಹ ಮನ, ವಚನ, ಕಾಯಗಳನ್ನು ವಶಪಡಿಸಿಕೊಳ್ಳುವುದಾದರೆ ಹೊಸ ಹೊಸ ಕರ್ಮಗಳ ಬರುವಿಕೆಯು ತಾನೇ ತಾನಾಗಿ ನಿಂತು ಹೋಗುವುದು. ಆತ್ಮಧ್ಯಾನ ತಪಶ್ಚರಣಾದಿಗಳ ಮೂಲಕ ಪೂರ್ವಬದ್ಧವಾದ ಕರ್ಮಗಳು ಫಲವನ್ನು ಕೊಡದೆಯೇ ಆತ್ಮನಿಂದ ಬೇರ್ಪಡಿಸುತ್ತಾ ಬದ್ಧವಾದೆಲ್ಲವನ್ನೂ ಸಂಪೂರ್ಣವಾಗಿ ನಾಶಮಾಡುವುದಾದರೆ ಆತ್ಮನು ತನ್ನ ಸ್ವಾಭಾವಿಕವೂ ನಿಜವೂ ಆದ ಚಿದಾನಂದಮಯತ್ವವನ್ನು ಪಡದು ಮೊದಲು ಜೀವನ್ಮುಕ್ತನೂ ನಂತರ ಶರೀರಾದಿಗಳಿಂದ ಬಿಡಲ್ಪಟ್ಟ ಸಂಪೂರ್ಣ ಮುಕ್ತನೂ ಆಗುವನು. ಗಣಿಯಿಂದ ತೆಗೆಯಲ್ಪಟ್ಟ ಚಿನ್ನವು ಕಲ್ಲು ಕಿಟ್ಟ ಮೊದಲಾದುವುಗಳಿಂದ ಕೂಡಿದ್ದು ವಿವೇಕಿಗಳು ಅದನ್ನು ಶುದ್ಧಿ ಮಾಡುವುದರ ಮೂಲಕ ಚಿನ್ನವನ್ನು ತೆಗೆಯುತ್ತಾರೆಯೋ ಹಾಗೆಯೇ ಸಂಸಾರಿಜೀವಗಳು ಅನಾದಿಕಾಲದಿಂದಲೂ ಕರ್ಮಮಲದಿಂದ ಕೂಡಿರುವರು. ಆದರೆ ಆತ್ಮಧ್ಯಾನ ತಪಸ್ಸು ಮೊದಲಾದ ಕ್ರಿಯೆಗಳ ಮೂಲಕ ಕರ್ಮಕಲಂಕವನ್ನು ದೂರಮಾಡಿ ತಮ್ಮ ಸಹಜವೂ ಪವಿತ್ರವೂ ಆದ ಸ್ವಭಾವವನ್ನು ಪಡದು ಸಂಪೂರ್ಣ ಸುಖಿಗಳಾಗುತ್ತಾರೆ.

ಕರ್ಮ ಪರಮಾಣುಗಳು ಆತ್ಮನತ್ತ ಆಕರ್ಷಿಸಲ್ಪಡುವಿಕೆಯು ಜೀವ ಮತ್ತು ಅಜೀವತತ್ವವಲ್ಲದೇ ಮೂರನೆಯದಾದ **"ಆಸ್ರವ"** ತತ್ವವು. ಆತ್ಮಕರ್ಮಗಳ ಪರಸ್ಪರ ಸೇರುವಿಕೆಯು ನಾಲ್ಕನೆಯದಾದ "ಬಂಧ" ತತ್ವವು. ಶುದ್ಧಭಾವಗಳು ಅಥವ ಕ್ರಿಯಾವಿಶೇಷಗಳ ಮೂಲಕ ಹೊಸಕರ್ಮಗಳು ಬಾರದಂತೆ ತಡೆಯುವುದು ಐದನೆಯದಾದ **"ಸಂವರ"** ತತ್ವವು. ಪೂರ್ವಬದ್ಧವಾದ ಕರ್ಮಗಳನ್ನು ಕ್ರಮ ಕ್ರಮವಾಗಿ ಆತ್ಮನಿಂದ ಬೇರ್ಪಡಿಸುವಿಕೆಯು ಆರನೆಯ **"ನಿರ್ಜರಾ"** ತತ್ವವು.

ಅಖಿಲ ಕರ್ನಾಟಕ ಆದಿಪಂಪ ಮಹಾಕವಿ

# ಸ್ಮಾರಕೋತ್ಸವ ಮಂಡಲ, ಲಕ್ಷ್ಮೇಶ್ವರ

ಸಾವಿರ ವರುಷದ ಪುಣ್ಯ ಸ್ಮರಣೆಗಾಗಿ

**ಸಮಸ್ತ ಕನ್ನಡಿಗರಲ್ಲಿ ಸಪ್ರೇಮ ಪ್ರಾರ್ಥನೆ.**

ಡಿಸೆಂಬರ ಕೊನೆಯ ವಾರದಲ್ಲಿ ನಡೆಯುವ ಉತ್ಸವಕ್ಕೆ ನೆರವಾಗಲು
ಸವಿನಯ ವಿಜ್ಞಾಪನೆ.

---

ಇದೇ ಶಾ|| ಶಕೆ ೧೮೬೩ ಕಾರ್ತಿಕ ಶು|| ೫ ಗೆ **ಆದಿಪಂಪ** ಮಹಾಕವಿಯು ನ್ನ ಅಮರವಾದ ಮಹಾಕಾವ್ಯ **'ವಿಕ್ರಮಾರ್ಜುನ ವಿಜಯ'** (ಪಂಪಭಾರತ) ವನ್ನು ಬರೆದು ಮುಗಿಸಿ ಸಾವಿರ ವರ್ಷಗಳು ಸಂದವು. **ಈ** ನಿಮಿತ್ತದಿಂದ **ಈ** ವರ್ಷ ಎಂದರೆ ಕ್ರಿ. ಶಕೆ **೧೯೪೧** ರಲ್ಲಿ ಕನ್ನಡ ಕವಿಕುಲ ತಿಲಕನಾದ **ಆದಿಪಂಪನ** ಗ್ರಂಥ ರಚನೆಯ ಸಹಸ್ರ ಸಾಂವತ್ಸರಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ **ಆ** ಮಹಾ ಕವಿಯ ಪವಿತ್ರ ನಾಮಸ್ಮರಣೆಗೆ ಒಪ್ಪುವಂತೆ ಸಮಸ್ತ ಕನ್ನಡಿಗರು ಆಚರಿಸಬೇಕೆಂದು ಕಳೆದ ವರ್ಷದ ಸಾಹಿತ್ಯ ಸಮ್ಮೇಲನದಲ್ಲಿ ನಿರ್ಣಯವಾದ ಮೇರೆಗೆ, **ಈ**ಗಾಗಲೇ ನ್ಯಾಯಾಧೀಶ ಮ. ರಾ. ರಾ. ಶ್ರೀ **ಹುಕ್ಕೋಳಿಕರವರ** ಅಧ್ಯಕ್ಷತೆಯಲ್ಲಿ ಸ್ಮಾರಕೋ ತ್ಸವ ಮಂಡಲವು ಏರ್ಪಟ್ಟು ಅದರ ಶಾಖೆಗಳು ಹುಬ್ಬಳ್ಳಿಯಲ್ಲಿಯೂ, ಲಕ್ಷ್ಮೇಶ್ವರ ದಲ್ಲಿಯೂ ಇದ್ದು ಕಾರ್ಯಕ್ಕೆ ಪ್ರಾರಂಭವಾದುದು. ಪತ್ರಿಕೆಗಳ ಮುಖಾಂತರ ಕನ್ನ ಡಿಗರೆಲ್ಲರಿಗೂ ತಿಳಿದ ಮಾತಾಗಿದೆ.

ಉತ್ಸವವು **ಪಂಪ** ಮಹಾಕವಿಗೆ ಆಶ್ರಯವಿತ್ತ ಅರಿಕೇಸರಿ ಮಹಾರಾಜನ ನೆಲೆವೀಡಾದ **ಪುಲಿಗೆರೆ** ಎಂದರೆ ಲಕ್ಷ್ಮೇಶ್ವರದಲ್ಲಿ ಜರುಗಬೇಕಾದ ಸ್ಮಾರಕೋತ್ಸವ ಮಂಡಲದವರು ನಿರ್ಣಯಿಸಿದ್ದಾರೆ. ಮೊನ್ನಿನ ನಾಡಹಬ್ಬ ಉತ್ಸವದಲ್ಲಿ ಹುಬ್ಬಳ್ಳಿ, ವಿಜಾಪೂರ ಮೊದಲಾದ ನಗರಗಳ ಮಹಾಜನರು **ಪಂಪ** ದಿನವನ್ನಾಚರಿಸಿ ಲಕ್ಷ್ಮೇ ಶ್ವರದಲ್ಲಿ ನಡೆಯಲಿರುವ ಅಖಿಲ ಕರ್ನಾಟಕ **ಪಂಪೋತ್ಸವಕ್ಕೆ** ಬೆಂಬಲವನ್ನಿತ್ತಿ ದ್ದಾರೆ. ಕನ್ನಡನಾಡಿನ ಎಂಟೂ ದಿಕ್ಕುಗಳ ಬಾಂಧವರ ಹೃತ್ಪೂರ್ವಕ ಸಹಾಯ ದಿಂದ **ಈ** ಉತ್ಸವವನ್ನು ಅತ್ಯಂತ ಯಶಸ್ವಯಾಗಿ ನೆರವೇರಿಸುವುದಕ್ಕೋಸ್ಕರ ಮೊನ್ನಿನ ವಿಜಯದಶಮಿಯ ಶುಭಮುಹೂರ್ತದಲ್ಲಿ ಲಕ್ಷ್ಮೇಶ್ವರದಲ್ಲಿ ಮ. ರಾ. ರಾ.

ಶ್ರೀ **ತಟ್ಟು ಬಶೆಟ್ಟೆಪ್ಪನವರ** ಕಾರ್ಯಾಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದು ಏರ್ಪಟ್ಟು ಉತ್ಸವದ ಸಿದ್ಧತೆಯ ಕಾರ್ಯವು ಉತ್ಸಾಹದಿಂದ ಸಾಗಿದೆ.

ಉತ್ಸವಕ್ಕೆ ಸಕಲರೀತಿಯಿಂದಲೂ ಸಹಕಾರ ನೀಡುವೆನೆಂದು **ಕನ್ನಡ ಸಾಹಿತ್ಯ** ಪರಿಷತ್ತಿನ ಉಪಾಧ್ಯಕ್ಷರಾದ ಸನ್ಮಾನ್ಯ ಶ್ರೀ **ಬಿ. ಎಂ. ಶ್ರೀಕಂಠಯ್ಯನವರೂ ಕರ್ನಾಟಕ** ಕಾಲಪುರೋಹಿತರಾದ **ಶ್ರೀ ಆಲೂರ ವೆಂಕಟರಾಯರೂ** ಶುಭಾಶೀ ರ್ವಾದ ಮಾಡಿದ್ದಾರೆ. ಇಷ್ಟರಲ್ಲಿ ಉತ್ಸವಕ್ಕಾಗಿ ದ್ರವ್ಯಸಂಗ್ರಹದ ಕಾರ್ಯವನ್ನು ಸ್ವಾಗತ ಸಮಿತಿಯವರು ಪ್ರಾರಂಭಿಸಿದ್ದು ಕೆಲವು ದಿನಗಳಲ್ಲಿಯೇ ಆ ಸಮಿತಿಯ ಸದ ಸ್ಯರು ಅಖಿಲಕರ್ನಾಟಕ ಪ್ರವಾಸವನ್ನೂ ಕೈಕೊಳ್ಳುವವರಿದ್ದಾರೆ. ಆ ಕಾಲಕ್ಕೆ ಕನ್ನ ಡಿಗರೆಲ್ಲರೂ ಕೊಡುಗೈಯಿಂದ ನೆರವಾಗಬೇಕೆಂದು ಕಳಕಳಿಯ ಬೇಡಿಕೆ.

ಸ್ಮಾರಕೋತ್ಸವ ಮಂಡಲದವರು **"ಪಂಪಯುಗ"** ಎಂಬ ಗ್ರಂಥವನ್ನು ಆ ಮಹಾಕವಿಯ ಕಾವ್ಯಗಳ ರಸಾಸ್ವಾದನೆ ಹಾಗು **ಪಂಪ** ಕಾಲದ ಅಭ್ಯಾಸ ವಿಮ ರ್ಶೆಗಳಿಂದ ಕೂಡಿದುದಾಗಿ ಅಖಿಲ ಕರ್ನಾಟಕದ ವಿದ್ವಾಂಸರ ಪ್ರಾತಿನಿಧಿಕ ಶ್ರೇಷ್ಠ ಗ್ರಂಥವಾಗುವಂತೆ ಪ್ರಕಾಶನಗೊಳಿಸಬೇಕೆಂದೂ ನಿಶ್ಚಯಿಸಿದ್ದು ಹುಬ್ಬಳ್ಳಿಯ ಸ್ಮಾರಕ ಗ್ರಂಥ ಸಮಿತಿಯವರು ಆನಿಮಿತ್ತದಲ್ಲಿ ಲೇಖನ ಸಂಗ್ರಹದ ಕಾರ್ಯವನ್ನು ಈಗಾ ಗಲೇ ನಡೆಯಿಸಿದ್ದಾರೆ. ಸಾಧ್ಯವಾದರೆ ಉತ್ಸವದ ಕಾಲಕ್ಕೇನೇ ಆ ಗ್ರಂಥದ ಪ್ರಕಾ ಶನವಾಗಬಹುದು; ಕನಿಷ್ಠಪಕ್ಷಕ್ಕೆ ಹಸ್ತಪ್ರತಿಯ ಪ್ರದರ್ಶನವಾದರೂ ಜರುಗಿ ಮುಂದೆ ಸ್ವಲ್ಪೇ ಅವಧಿಯಲ್ಲಿ ಅಚ್ಚಾಗಿ ಅದು ಹೊರಬೀಳುವದು.

ಉತ್ಸವವು ಡಿಸೆಂಬರ ತಿಂಗಳ ಕೊನೆಯವಾರದ ಪ್ರಾರಂಭದ ದಿನಗಳಲ್ಲಿ ನಡೆ ಯುವುದು. ನಿಶ್ಚಿತದಿನಗಳನ್ನು ಸಕಾಲಕ್ಕೆ ಮುಂಚಿತವಾಗಿ ತಿಳಿಸಲಾಗುವದು. ಹೈದ್ರಾಬಾದಿನಲ್ಲಿ ನಡೆಯುವ ಈ ವರ್ಷದ ಸಾಹಿತ್ಯ ಸಮ್ಮೇಲನಕ್ಕೆ ಹೋಗುವ ಪ್ರತಿನಿಧಿಗಳೆಲ್ಲರೂ ಈ ಉತ್ಸವವನ್ನು **ಪುಲಿಗೆರೆಯಲ್ಲಿ** ಸಾಂಗಗೊಳಿಸಿ ಮುಂದೆ ಪ್ರಯಾಣ ಬೆಳಿಸುವಂತೆ ಅನುಕೂಲತೆಯನ್ನು ಮಾಡಲಾಗುವದು.

ಲಕ್ಷ್ಮೇಶ್ವರದಲ್ಲಿ ಜರಗುವ ಈ ಮಹೋತ್ಸವಕ್ಕೆ ಕನ್ನಡನಾಡಿನ ನಾನಾ ಭಾಗ ಗಳಿಂದಲೂ ಪ್ರತಿನಿಧಿಗಳು ಬರಬೇಕೆಂದು ಸಪ್ರೇಮ ಪ್ರಾರ್ಥನೆಯುಂಟು. ಬರಲಿರು ವವರೆಲ್ಲರೂ ಮುಂಚಿತವಾಗಿ ಸ್ವಾಗತಸಮಿತಿಯ ಕಾರ್ಯಾಧ್ಯಕ್ಷರಿಗೆ ದಯವಿಟ್ಟು ತಿಳಿಸಬೇಕೆಂದು ಸವಿನಯ ವಿಜ್ಞಾಪನೆ; ಎಂದರೆ ಬಂದ ಎಲ್ಲ ಅತಿಥಿಗಳಿಗೂ ತಕ್ಕ ಆದರೋಪಚಾರಗಳನ್ನು ಮಾಡಲು ಸ್ವಾಗತಸಮಿತಿಯವರಿಗೆ ಅನುಕೂಲವಾಗುವದು.

**ಕನ್ನಡಿಗರು ಅನೇಕ ರೀತಿಯಿಂದ ಈ ಉತ್ಸವಕ್ಕೆ ನೆರವಾಗಬಹುದು.**

೧. ಈ ಬಿನ್ನಹವನ್ನು ಲಾಲಿಸಿ ಪಂಪ ಪ್ರೇಮಿಗಳಾದ ಎಲ್ಲ ಬಾಂಧವರು ತಾವಿದ್ದಲ್ಲಿಂದಲೇ ಸಾಧ್ಯವಾದಷ್ಟು ಧನಸಹಾಯವನ್ನು ಕೆಳಗಿನ ವಿಳಾಸಕ್ಕೆ ದಯವಿಟ್ಟು ಕಳಿಸಬೇಕು.

೨. ಸ್ವಾಗತ ಸಮಿತಿಯವರು ಆಮಂತ್ರಣಕೊಡಲು ಆಯಾ ಊರುಗಳಿಗೆ ಬಂದಾಗ ಸಾಧ್ಯವಾದ ಎಲ್ಲಾ ರೀತಿಯಿಂದ ದಯವಿಟ್ಟು ನೆರವಾಗಬೇಕು.

೩. **"ಪಂಪ ಪ್ರಶಸ್ತಿ"** ಗ್ರಂಥಕ್ಕೆ ಒಪ್ಪುವ ಅಭ್ಯಾಸಪೂರ್ಣ ಲೇಖನಗಳನ್ನು ಬರೆದು **ಆದಿಪಂಪ ಸ್ಮಾರಕ ಗ್ರಂಥ ಸಮಿತಿ ಮಿತ್ರ ಮಂಡಲ ಹುಬ್ಬಳ್ಳಿ** ಅಥವಾ **ಆದಿಪಂಪ ಮಹಾಕವಿ ಸ್ಮಾರಕೋತ್ಸವ ಮಂಡಲ ಲಕ್ಷ್ಮೇಶ್ವರ** ಈ ವಿಳಾಸಕ್ಕೆ ಕಳಿಸಬೇಕು.

೪. ಉತ್ಸವಕ್ಕೆ ಇಷ್ಟಮಿತ್ರರೊಡನೆ ಸ್ವತಃ ಬಂದು ಭಾಗವಹಿಸಬೇಕು.

೫. ಕಾರ್ತಿಕ ಶು|| ೫ (ತಾ|| ೨೫-೧೦-೧೯೪೧) ಕ್ಕೆ ಕನ್ನಡನಾಡಿನ **ಎಲ್ಲ** ಊರು **"ಪಂಪದಿನ"** ವೆಂದು ಆಚರಿಸಿ ಧನಸಂಗ್ರಹವನ್ನು **ಲಕ್ಷ್ಮೇಶ್ವರದ** ಕೇಂದ್ರ ಸಂಸ್ಥೆಗೆ ಕಳಿಸಿ ಈ ಮಹೋತ್ಸವಕ್ಕೆ ಬೆಂಬಲವನ್ನೀಯಬೇಕು.

ಪತ್ರವ್ಯವಹಾರವನ್ನು "ಕಾರ್ಯದರ್ಶಿಗಳು, ಆದಿಪಂಪ ಮಹಾಕವಿ ಸ್ಮಾರಕೋತ್ಸವ, **ಲಕ್ಷ್ಮೇಶ್ವರ** (ಜಿಲ್ಲಾ-ಧಾರವಾಡ" ಈ ವಿಳಾಸದೊಡನೆ ಹಾಗು ಹಣದ ವ್ಯವಹಾರವನ್ನು "ಕೋಶಾಧೀಶರು, ಆದಿಪಂಪ ಮಹಾಕವಿ ಸ್ಮಾರಕೋತ್ಸವ ಮಂಡಲ **ಲಕ್ಷ್ಮೇಶ್ವರ** (ಜಿಲ್ಲಾ ಧಾರವಾಡ)" ಈ ವಿಳಾಸದೊಡನೆ ಮಾಡಬೇಕೆಂದು ಕನ್ನಡಿಗರಲ್ಲಿ ಬಿನ್ನಹವಿದೆ.

**ಆದಿಪಂಪ** ಮಹಾಕವಿಯ ಈ ಸಹಸ್ರ ಸಾಂವತ್ಸರಿಕೋತ್ಸವವನ್ನು ಸಾಂಗಗೊಳಿಸುವುದರಲ್ಲಿ ಕನ್ನಡನಾಡಿನ ಸಮಸ್ತ ಸಹೋದರ ಸಹೋದರಿಯರು ಉತ್ಸವ ಮಂಡಲದ ಸ್ವಾಗತಸಮಿತಿಗೆ ಸಕಲ ರೀತಿಯಿಂದಲೂ ಸಹಾಯ ನೀಡಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತೇವೆ.

ತಮ್ಮ,

ಬಸೆಟ್ಟೆಪ್ಪಾ ತಟ್ಟಿ,

ಕಾರ್ಯಾಧ್ಯಕ್ಷ ಸ್ವಾಗತ ಸಮಿತಿ

**ಆದಿಪಂಪ ಮಹಾಕವಿ ಸ್ಮಾರಕೋತ್ಸವ ಮಂಡಲ.**

# ಕಾರ್ಯಕಾರಿ ಮಂಡಲ

## ಕೋಶಾಧೀಶ

ಶ್ರೀ ಚನಬಸಯ್ಯನವರು, ಬಾಳೀಹಳ್ಳಿಮಠ.

## ಪಂಪಕವಿ ಸ್ಮಾರಕ ಸಮಿತಿ

ಶ್ರೀ ಫಕ್ಕೀರಯ್ಯನವರು, ಪುರಾಣಿಕಮಠ. ರಾ. ರಾ. ವೀರಪ್ಪಾ ಫೊಂಗಡಿ

ರಾ. ರಾ. ಬಸವಣ್ಣೆಪ್ಪಾ ಕೊಟಗಿ ,, ಕೆ. ಬಿ. ಅಭ್ಯಂಕರ ವಕೀಲ

,, ಬಸಪ್ಪಾ ಕಲ್ಲೂರ ,, ಗುರಪ್ಪನವರು ಶೆಟ್ರ ಶಿಗ್ಲಿ

,, ಬಶೆಟ್ಟೆಪ್ಪಾ ಮುದಗಲ್ಲ ,, ದುಂಡಪ್ಪಾ ಅಮರಶೆಟ್ಟಿ

ಶ್ರೀ ಗದಿಗೆಯ್ಯಾ ಹಾಲೇವಾಡಿಮಠ

## ಪ್ರಕಟನಾ ವ ಪ್ರಸಾರ ಸಮಿತಿ

Mr. ಎಚ್. ಬ್ಲಿ. ಗಾಡಗೋಳಿ ವಕೀಲ ರಾ. ರಾ. ನಾಗರಾಜಪ್ಪಾ ಫೊಂಗಡಿ

,, ಎನ್. ಎಚ್. ಕೊಪ್ಪರ ವಕೀಲ ,, ರಾಯಪ್ಪಾ ಬರಿಗಾಲಿ

,, ಅಮರಪ್ಪನವರು ಹುಲಗೂರ ಶಿಗ್ಲಿ ,, ತೋಟಪ್ಪಾ ಗಡ್ಡಿ

,, ಪಂಚಪ್ಪಾ ಮಾನ್ವಿ

## ಕಾರ್ಯದರ್ಶಿಗಳು

Mr. ಪೂಜಾರ ವಕೀಲ ಶ್ರೀ ಶಿವಮೂರ್ತಿಯ್ಯಾ ಗಡ್ಡದ್ದೇವರಮಠ

,, ತೊರಗಲ್ಲ ಮಾಸ್ತರ


## ಆರೋಗ್ಯ

ಇರುವುದೂ, ಸರಿಯಾದ ವೈದ್ಯರುಗಳಿಂದ ಅದಕ್ಕೆ ಯೋಗ್ಯಚಿಕಿತ್ಸೆಯನ್ನು ಮಾಡಿಸುವುದೂ, ಆಪುದೋಷವನ್ನು ಬೇರುಸಹಿತ ಪರಿಹರಿಸಲು ಮಾಡಬೇಕಾದ ಉಪಾಯಗಳವು.

# ಲಕ್ಷ್ಮೇಶ್ವರ

ಈ ಊರಿನ ಜೈನತರುಣ ಸಂಘದ ಆಶ್ರಯದಲ್ಲಿ ಕಾರ್ತಿಕ ಶುದ್ಧ ಪಂಚಮಿಯ ದಿವಸ ಆದಿಪಂಪ ಮಹಾಕವಿಯ ದಿನಾಚರಣೆಯು ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ಊರಿನಲ್ಲಿ ಇನ್ನೆರಡು ತಿಂಗಳಲ್ಲಿ ನಡೆಯಲಿರುವ ಆದಿಪಂಪ ಮಹಾಕವಿಯ ಸ್ಮಾರಕೋತ್ಸವದ ಕಮಿಟಿಯವರು ಸಹಕರಿಸಿದ್ದರಿಂದ ಈ ಉತ್ಸವಕ್ಕೆ ಮತ್ತಷ್ಟು ಕಳೆಕಟ್ಟಿತು.

ಸಂಜೆ ಐದು ಘಂಟೆಗೆ ಸರಿಯಾಗಿ ಅತ್ಯಂತ ಸುಂದರವಾಗಿ ಅಲಂಕರಿಸಿದ ಪಲ್ಲಕ್ಕಿಯಲ್ಲಿ ಪಂಪಮಹಾಕವಿಯ ಲೋಕಪೂಜ್ಯವಾದ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನವಿಜಯ' ಪುಸ್ತಕಗಳನ್ನಿಟ್ಟು, ಊರಿನ ಪ್ರಮುಖಬೀದಿಗಳಲ್ಲಿ ಉತ್ಸವವು ಸಾಗಿ, ಕಡೆಯಲ್ಲಿ ಅತಿ ಪುರಾತನವೂ ಮತ್ತು ಶಿಲ್ಪಕಲೆಗೆ ಆವಾಸಸ್ಥಾನವೂ ಆಗಿರುವ ಸಹಸ್ರಕೂಟ ಜಿನಮಂದಿರದ ಹೊರಅಂಗಳದಲ್ಲಿ ಸಭೆಸೇರಿತು.

ಸಭೆಗೆ ಇದೇ ಊರಿನ ಜನಾನುರಾಗಿಗಳೂ, ಕನ್ನಡ ಸಾಹಿತ್ಯ ಪ್ರೇಮಿಗಳೂ ಶ್ರೀಮಂತರೂ ಮತ್ತು ತರುಣರೂ ಆದ ಶ್ರೀಯುತ ಬಶೆಟ್ಟೆಪ್ಪ ತಟ್ಟೆ ಇವರು ಅಧ್ಯಕ್ಷತೆ ವಹಿಸಿದ್ದರು.

ಅನಂತರ ಶ್ರೀಯುತರುಗಳಾದ, ಕೊಪ್ಪರ ವಕೀಲ, ಪೂಜಾರ ವಕೀಲ, ಎಸ್. ಬಿ. ನಾಭಿರಾಜಯ್ಯ, ಮತ್ತು ಪಾಯಪ್ಪ ಮಾಸ್ತರು ಹೂಲಿ ಇವರು ಪಂಪ ಮಹಾಕವಿಯ ಜೀವನ, ಕಾಲ, ಮತ್ತು ಅವನ ಕವಿತಾಶಕ್ತಿ ಮೊದಲಾದವುಗಳ ವಿಚಾರವಾಗಿ ಭಾಷಣಗಳನ್ನು ಮಾಡಿದರು. ಸಭೆಯಲ್ಲಿ ಈ ಊರಿನ ಸಾಹಿತ್ಯ ಪ್ರೇಮಿಗಳೂ, ಜನಾನುರಾಗಿಗಳೂ ಆಗಿದ್ದ ಶ್ರೀಯುತ ದೊಡ್ಡಬಸಪ್ಪನವರು ತಟ್ಟೆ ಇವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸುವ, ಮತ್ತು ಮುಂದೆ ಮಾಡಬೇಕೆಂದು ಕೈಕೊಂಡಿರುವ ಸ್ಮಾರಕೋತ್ಸವಕ್ಕೆ ತನು-ಮನ-ಮತ್ತು ಮುಖ್ಯವಾಗಿ ಧನಸಹಾಯವನ್ನು ಪುರಜನರು ನೀಡಬೇಕೆಂದೂ ಠರಾವುಗಳು ಪಾಸಾದವು. ಅಧ್ಯಕ್ಷರ ಉಪಸಂಹಾರ ಭಾಷಣವಾದ ನಂತರ ಸಭೆಯು ಜಯಜಯಕಾರಗಳೊಡನೆ ಮುಕ್ತಾಯವಾಯಿತು.

ಇದೇ ಕಾರ್ಯಕ್ರಮದ ಅಂಗವಾಗಿ ಜೈನತರುಣ ಸಂಘದವರು ಒಂದು ವಾಚನಾಲಯವನ್ನು ಪ್ರಾರಂಭಮಾಡಿದರು. ಈ ವಾಚನಾಲಯಕ್ಕೆ "ಶ್ರೀದೇವೇಂದ್ರಕೀರ್ತಿ

ವಾಚನಾಲಯ" ಎಂದು ಸುನಾಮವನ್ನಿಟ್ಟರು. ಇದರ ಉದ್ಘಾಟನ ಸಮಾರಂಭವನ್ನು, ಶ್ರೀಮಂತ ಬಳೆಟ್ಟಿಪ್ಪನವರು ತಟ್ಟಿ ಇವರು ಸಂಘದ ನಮ್ರಕೋರಿಕೆಯನ್ನು ಮನ್ನಿಸಿ, ತಮ್ಮ ಅಮೃತ ಹಸ್ತದಿಂದ ಮಾಡಿದರು

**ಬುಜಬಲ್ಲೆಪ್ಪಾ ರಾಯಪ್ಪಾ ಬರಿಗಾಲಿ,**
ಸೆಕ್ರೆಟರಿ
ದಿ ಜೈನತರುಣ ಸಂಘ, ಲಕ್ಷ್ಮೇಶ್ವರ.

ಲಕ್ಷ್ಮೇಶ್ವರ
ತಾ|| ೨೬—೧೦—೪೧.

# ಸಂಸಾರವೂ ಸಂಗೀತವೂ

ಲೇಖಕರು—**ಕು|| ಸೌ|| ಸಾವಿತ್ರಿಬಾಯಿ, ಮ|| ಕಸ್ತೂರಿ**
ಹುಬ್ಬಳ್ಳಿ ಭಾರತ ಸಂಗೀತ ಕಲೋದ್ಧಾರಕ ಶಾಲಾ ಶಿಕ್ಷಿಕೆಯರು.

ನಾವು ನಡೆಸುವ ಸಂಸಾರವು ಸಂಗೀತಕ್ಕಿರುವ ರಾಗ ಲೀಲ ಲಯ ಗತಿಗಳ ಸಂಬಂಧವು ಹ್ಯಾಗೋ ಹಾಗೆಯೇ ನಮ್ಮ ಸಂಸಾರಕ್ಕೂ ರಾಗವೂ ಬೇಕು. ಲೀಲವೂ ಬೇಕು. ಲಯಗತಿಗಳು ಬೇಕು. ಇವು ಇರುವದರಿಂದಲೇ ನಡೆಯುವ ಸಂಸಾರ ರಥದ ಚಕ್ರವು ಬದಲಿಸಲಾರವು, ಅಂತೆಯೇ ಹಿಂದಿನ ಕಾಲದಿಂದಲೂ ಇಂದಿನ ನಮ್ಮಗಳಿಗೆ ಏನಿದೆ, ತಾಳವು ಇಲ್ಲಾ ಮೇಳವು ಇಲ್ಲಾ ಇವರ ಸಂಸಾರಕ್ಕೆ ಎಂಬ ನಾನ್ನುಡಿ ನಾವೆಲ್ಲರೂ ಎದುರಿಸಿ ನಿಂತಿದ್ದೇವಲ್ಲವೇ? ನಾವು ನಮ್ಮ ಗಂಡಂದಿರೊಡನೆ (ಮೇಳ) ಜತೆಯಿಂದಿದ್ದರು ನಮ್ಮಿಬ್ಬರಲ್ಲಿ ಇರುವ ತಾಳವು ಒಂದೇ ಇದ್ದರೆ ಮಾತ್ರ ಕೈತಾಲವು (ಚಪ್ಪಾಳ) ಒಂದೇ ಕಾಲದಲ್ಲಿ ಹಾಕಿದರೆ, ಒಂದಕ್ಕೆರಡು ಚಪ್ಪಾಳ ಹೊಡೆತವು ಎಷ್ಟು ರಮ್ಯವಾಗುವದೊ, ಆದೆ ಚಪ್ಪಾಳೆಯನ್ನು ನಾನೊಬ್ಬಳೆ ಹೊಡೆದನಂತರ ಇನ್ನೊಂದು ಚಪ್ಪಾಳೆ ಬಿದ್ದದ್ದಾದರೆ ಅದೆಷ್ಟು ವಿಕೃತಹೊಂದುನೋಡಿರಿ ಅದರಂತೆಯೇ ಸಂಸಾರದಲ್ಲಿ ಗಂಡನ ಅಭಿಪ್ರಾಯಕ್ಕೂ ಹೆಂಡತಿಯ ಅಭಿಪ್ರಾಯಕ್ಕೂ ಚಪ್ಪಾಳೆ ಹೊಡೆದ ಹಾಗೆ ಒಂದೇ ತಾಳವು ಅರ್ಥಾತ್ (ಒಂದೇ ವಿಚಾರವು) ಬೇಕು. ಅಂದರೆ ಮಾತ್ರ ಸಂಗೀತಕ್ಕಿರುವ ತಾಳಮೇಳಗಳಂತೆ ಗಂಡಹೆಂಡರಲ್ಲಿ ತಾಳು ಮೇಳುಗಳಿದ್ದರೆ ಮೇಲಿನ ಉದಾಹರಣೆಯಂತೆ ಸಂಸಾರವು ಸಾಂಗವಾಗಿ ನಡೆಯುವುದರಲ್ಲಿ ಸಂಶಯವೇನು? ಇಲ್ಲದಿದ್ದರೆ ಒಂದು ರಾಗಕ್ಕೆ ಬೇರೊಂದು ರಾಗದ ಸ್ವರವನ್ನು ಜೋಡಿಸಿದರೆ. ಅಥವಾ ಒಂದು ತಾಳ ನುಡಿಸುವಾಗ್ಗೆ ಬೇರೊಂದು ತಾಳದ ಬೋಲನು ನುಡಿ

ಸಿದರೆ ಕೇಳುವ ರಸಿಕ ಜನರಿಗೆ ಎಷ್ಟು ಅರುಚಿಯಾಗುವದೋ ಅದರಷ್ಟೇ ಗಂಡ
ಹೆಂಡರಲ್ಲಿ ಇರುವ ಅಭಿಪ್ರಾಯ ವಿಚಾರಗಳು ಬದಲಿಸಿದರೆ ಅವರ ಮುಖ ಅತ್ತ
ಇವರ ಮುಖ ಇತ್ತ ಆಗುವದನ್ನು ನಾವು ಪ್ರತಿನಿತ್ಯದಲ್ಲಿಯೂ ನೋಡುತ್ತಿರುತ್ತೇವೆ.
ನಾವು ನಮ್ಮ ಮನೆಯಲ್ಲಿ ಪ್ರತಿನಿತ್ಯದಲ್ಲಿಯೂ ಕಸ ಮುಸುರೆ ಮೊದಲಾದ ಕೆಲಸ
ಗಳನ್ನು ನಡೆಸುವಾಗ್ಗೆ ಬಾಯನ್ನು ಬಂದಿಟ್ಟು ಕೈಯ್ಯನು ನಡಿಸುವದು ಅಥವಾ ಕೈಗ
ಳನ್ನು ಬಂದಿಟ್ಟು ಭೂಮಿಗೂ ಆಕಾಶಕ್ಕೂ ಅಳತೆಯಿಲ್ಲದಂತೆ ಅವಾಚ್ಯಭಾಷಣದಿಂದ
ಬಾಯನ್ನು ಹರಿಬಿಟ್ಟು ಕಡೆಗೆ ತನ್ನಷ್ಟಕ್ಕೆ ತಾನೆ ಮೈಮರೆತು ಬಿಡುವ ಸ್ವಭಾವವು
ನಮ್ಮ ಸ್ತ್ರೀ ಸಮಾಜದಲ್ಲಿ ಸೇರಿರುವದರಿಂದಲೂ ಮನೆಯಲ್ಲಿ ನಡೆಸುವ ಕಾರ್ಯಕಲಾ
ಪಗಳನ್ನು ತಿಳಿಯದೆ ಬೇಸತ್ತು ದೇವರ ದರ್ಶನಕ್ಕೆಂದು ಶಾಂತಮಯವಾದ ಸ್ಥಾನವಾದ
ದೇವಸ್ಥಾನಕ್ಕೆ ಹೋದರೂ ಮನೆಯಲ್ಲಿಯೇ ಮನಸ್ಸಿನಲ್ಲಿ ಸೇರಿರುವ ದುಷ್ಟ ವಿಚಾರ
ಗಳ ಪ್ರಚಾರವನ್ನು ಮಾಡಿ ಅಶಾಂತಿಯನ್ನುಂಟುಮಾಡುತ್ತಿರುವದರಿಂದ ನಮ್ಮೆಲ್ಲರಿಗೂ
ಬಡಕು ಬಾಯಿಯವರೆಂದೂ ಸ್ತ್ರೀ ಬುದ್ಧಿಯು ಮೊಣಕಾಲು ಕೆಳಗೆಂಬ ನಾಣ್ನುಡಿಗಳು
ಬಂದಿದೆಯಲ್ಲವೇ ? ನಿಜ ಈ ಬಿರುದಿಗೆ ನಾವುಗಳು ಯೋಗ್ಯರೆಂದು ಒಪ್ಪಲೇಬೇಕು
ನಮ್ಮ ಸ್ತ್ರೀ ಸಮಾಜದಲ್ಲಿ ಸೇರಿರುವ ಕೆಟ್ಟ ತಪ್ಪುಗಳಾದರೂ ಬಹಳ ಉಂಟು
ಇವನ್ನು ಸ್ತ್ರೀ ಸಮಾಜದವರು ತಿದ್ದಿಕೊಳ್ಳುವದರಿಂದ ಸ್ತ್ರೀ ಜನಾಂಗವು ಮುಂದೆ
ಮುಂದೆ ಬರುವ ವಿಷಯದಲ್ಲಿ ಸಂಶಯವೇನು ?

ನಾವು ಕಲಿಯಬೇಕಾದ ಪ್ರತಿಯೊಂದು ಕಲೆಗಳು ನಮ್ಮ ಸಂಸಾರಕ್ಕೆ ಆಧಾರ
ಸ್ತಂಭವಾಗಿರುತ್ತದೆ. ಅಂತೆ ಇಂದಿನ ಹಲಕೆಲವು ಸ್ತ್ರೀಯರಲ್ಲಿ ಕಲೆಯ ಚೈತನ್ಯವು
ಹುಟ್ಟುತ್ತಲಿದೆ. ಎಲ್ಲಾ ಕಲೆಗಳಲ್ಲಿ ಸಂಗೀತ ಕಲೆಯು ಬಹು ರಸಭರಿತವಾದದ್ದೂ
ಆಲ್ಲದೆ ಆತ್ಮೋನ್ನತಿಗೆ ಕಾರಣಭೂತವಾಗಿಯೂ ಆದುದರಿಂದ ನಾವು ತುಚ್ಛೀಕರಿಸಿರು
ವದರಿಂದಲೇ ಉದರಂಭರಣೆಗಾಗಿ ಪರಿತಪಿಸುತ್ತಿರುವ ವೇಶ್ಯಾಸ್ತ್ರೀಯರನ್ನು ಸೇರಿದೆ
ನಮ್ಮಾ ಪವಿತ್ರನಾಡಿನಲ್ಲಿ ವೇಶ್ಯೆಯರಾಗಬೇಕಾದರೂ ನಮ್ಮಲ್ಲಿರುವ ಅಲ್ಪವಿದ್ಯಾಭ್ಯಾಸ
ತನದಿಂದ ಹುಟ್ಟಿರುವ ನಿರುದ್ಯೋಗತನವೇ ಮುಖ್ಯಕಾರಣವೆಂದು ಹೇಳಬಹುದು

ಇನ್ನಾದರೂ ನಮ್ಮ ಕರ್ನಾಟಕದ ಕೆಚ್ಚೆದೆಯ ತರುಣಿಯರು ತಮ್ಮ ಅಭ್ಯಾಸ
ಮುಗಿಸಿ ತಮ್ಮ ಬಿಡುವೇಳೆಯನ್ನು ಹರಟೆಯಲ್ಲಿ ಕಳೆಯದೆ ಸಂಗೀತ ಕಲೆಯನ್ನ
ಅಭ್ಯಾಸಿಸಿ ವಿದ್ಯಾವತಿಯರಾಗಿ ಸುವಿಚಾರವಂತೆಯರಾಗಿ ಆದರ್ಶಪತ್ನಿಯರು ಆದರ್ಶ
ಮಾತೆಯರೂ ಆಗಿ ಸುವಿಚಾರ ಸಂಪನ್ನರಾದ ದಯಾಧರ್ಮದ ಆಧಾರಸ್ತಂಭರಾಗು

ಪ್ರಜಾಕೋಟಿಯನ್ನು ಹೆತ್ತು ತಮ್ಮ ಕರ್ತವ್ಯಕರ್ಮದಿಂದ ಧರ್ಮಪ್ರಭಾವನೆಯನ್ನು ಮಾಡುವಿರೆಂದು ನನ್ನ ಅಕ್ಕ ತಂಗಿಯರಲ್ಲಿ ಪ್ರಾರ್ಥನೆ. ನನ್ನ ಲೇಖಕ್ಕೆ ವಿರಾಮವನ್ನು ಕೊಟ್ಟು ಸಮಯಸಿಕ್ಕಾಗ ಮತ್ತೊಮ್ಮೆ ತಮ್ಮೆದುರಿಗೆ ಕಾಣಿಸಿಕೊಳ್ಳುವ ಶಕ್ತಿಸಾಹಸ ಗಳನ್ನಿತ್ತು ಕಾಪಾಡಲೆಂದು ಶ್ರೀಭಗವಂತನಲ್ಲಿ ಪ್ರಾರ್ಥನೆ. ವಿರಾಮವನ್ನು ಹೊಂದ ಲಿಚ್ಛಿಸುತ್ತೇನೆ.

## ಬೆಂಗಳೂರು

ಶನಿವಾರ ಬೆಳಿಗ್ಗೆ ೮ ರಿಂದ ೧೦ ಘಂಟೆಯವರೆಗೆ ಫ್ರೇಮಾ ಮೆಡಿಕಲ್ ಹಾಲ್‌ನಲ್ಲಿ ಶ್ರೀಮಾ ಪಂಡೀತ ತಾರನಾಥಜೀಯವರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯ ಭಾರತ ಸಂಗೀತ ಕಲೋದ್ಧಾರಕ ಶಾಲಾ ಒಡೆಯರು ಶ್ರೀಮಾ ಗಾನವಿನೋದಿ ಎಂ. ಎನ್. ಕಸ್ತೂರಿ ಇವರು ಹಾರ್ಮೋನಿಯಂ ಜಲತರಂಗ ಸಬ್‌ಮರ್ಜಿ ವಾದ್ಯ ಗಳನ್ನು ರಮ್ಯವಾಗಿ ಬಾರಿಸಿ ಭಕ್ತಿಯ ಗೀತೆಗಳಾದ ಶ್ರೀ ಬಸವೇಶ್ವರರ ವಚನಗಳನ್ನು ಹಾಡಿದರು. ಕುಮಾರಿ ಗಾನಮಂಜರಿ ರಂಗಪ್ರಭೆಯ ಗಾಯನ ಸೌ॥ ಸಾವಿತ್ರಿಬಾಯಿ ಕಸ್ತೂರಿಯವರ ಗಾಯನವಾಯಿತು. ಕುಮಾರಿಯು ಗಾಯನದಲ್ಲಿ ಇನ್ನೂ ಹೆಚ್ಚಾಗಿ ಮುಂದೊರೆಯಲು ಬಹುಮಾನ ಪುರಸ್ಕರ ವ್ರೇಮಾ ವಿದ್ಯಾರ್ಥಿಗಳಿಂದ ೧೦ ರೂಪಾ ಯಿಗಳು ಕೊಡಲ್ಪಟ್ಟವು. ಅಧ್ಯಕ್ಷರು ಕಸ್ತೂರಿಯವರ ಸಂಗೀತ ಕಲಾ ನೈಪುಣ್ಯ ಯ ಸೇವೆಯ ಕಾರ್ಯಕಲಾಪಗಳನ್ನು ತಿಳಿದು ತುಂಬಾ ಸಂತೋಷಪಟ್ಟವರಾಗಿ ಕಸ್ತೂರಿ ಯವರು ಇದಕ್ಕೂ ಹೆಚ್ಚಿನ ಸೇವೆಯನ್ನು ಸಲ್ಲಿಸಲೋಸುಗ ಇವರಿಗೆ ಚಿನ್ನದ ನಕ್ಷತ್ರ ಪದಕವನ್ನು ಕೊಟ್ಟು ಆಶೀರ್ವದಿಸಿದರು.

ಇದೇ ದಿವಸ ಸಂಜೆ ೬ ಘಂಟೆಯಿಂದಾ ೮ ಘಂಟೆಯವರೆಗೆ ಅಖಿಲ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶ್ರೀಮಾ ಬೆನಗಲ್ ರಾಮರಾಯರು, ಬಿ.ಎ.,ಎಲ್.ಎಲ್.ಬಿ., ಇವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಸಂಗೀತಶಾಲೆಯವರ ಹಾರ್ಮೋನಿಯಂ ತಬಲಾ, ಜಲತರಂಗ ಮುಖ್ಯವಾದ್ಯ ಸಬ್‌ಮರ್ಜಿ ಗಾಯನ ನಡೆಯಿತು. ನಂತರ ಕಸ್ತೂರಿ ಯವರು ಹಿಂದುಸ್ಥಾನಿ ಕರ್ನಾಟಕಿ ಸಂಗೀತದಲ್ಲಿರುವ ಬದಲಾವಣೆಯನ್ನು ಕುರಿತು ಭಾಷಣ ಮಾಡಿದರು. ಈ ಸಂಗೀತ ಸಭೆಗೆ ವೇಳೆಗೆ ಸರಿಯಾಗಿ ಪರಿಷತ್ತಿನ ಪ್ರಮುಖರು ಊರ ಪ್ರಮುಖರು ಸಂಗೀತ ವಿದ್ವಾಂಸರು ಕಿಕ್ಕಿರಿದು ಕೂಡಿದ್ದರು.

ಹಿಂದುಸ್ಥಾನಿ ಗಾಯನ ಪದ್ಧತಿಯಲ್ಲಿ ಕನ್ನಡ ಗೀತೆಗಳನ್ನು ಹಾಡಿದ ಸಂಗೀತ
ಕಚೇರಿಯನ್ನು ಕೂಡಿದ ಸಭಿಕರು ಶಾಂತಚಿತ್ತದಿಂದ ಕೇಳಿದರೆಂದು ತಿಳಿಸಲು ನನಗೂ
ಸಂತೋಷ. ಕಡೆಗೆ ಸಂಗೀತಗಾರರಿಗೆಲ್ಲ ಹೂಮಾಲೆಯನ್ನರ್ಪಿಸಿ ಸಭೆಯು ಮಂಗಳ
ವಾಯಿತು.

ಇದಕ್ಕು ಮುಂಚಿನ ದಿನಗಳಲ್ಲಿ ಕಸ್ತೂರಿಯವರ ಸಂಗೀತ ಕಚೇರಿಯು
ಶ್ರೀಮತ್ ಶಂಕ್ರೆಪ್ಪಾ ಫಿಡ್ಲ್ ವಿದ್ವಾನ್ ಇವರ ಸಂಗೀತ ಕ್ಲಾಸಿನಲ್ಲಿಯು ಅಲ್ಲದೆ ಇನ್ನೂ
೨-೩ ಕಡೆಯಲ್ಲಿಯು ಸುಶ್ರಾವ್ಯವಾಗಿ ನಡೆದವು ಅಲ್ಲದೆ ಇನ್ನೂ ಆಮಂತ್ರಣಗಳು
ಇದ್ದರೂ ಕೂಡಾ ಕಸ್ತೂರಿಯವರಿಗೆ ವೇಳೆಯಿರದೆ ರವಿವಾರ ಹುಬ್ಬಳ್ಳಿಗೆ ಹೊರಟ
ರೆಂದು ತಿಳಿಸಲು ನನಗೆ ತುಂಬಾ ಸಂತೋಷವು.

ತಾ|| 26—10—41, ಸಂಗೀತ ವಿದ್ಯಾರ್ಥಿ,
ಬೆಂಗಳೂರು. **ಬಿ. ವಾಯ್. ರಂಗನಾಥ.**

## ಮೈಸೂರು

### ಶ್ರೀ ಎಂ. ಎಲ್. ಜೈನ ಬೋರ್ಡಿಂಗದಲ್ಲಿ

ಮಂಗಳವಾರ ರಾತ್ರಿ ೬ ಘಂಟೆಯಿಂದ ಶ್ರೀ ಪದ್ಮಾವತಿದೇವಿಯ ಅಲಂಕಾರ
ಮಹೋತ್ಸವ ಪೂಜಾ ನಡೆದು ನಂತರ ಹುಬ್ಬಳ್ಳಿಯ ಚಂದ್ರನಾಥ ಸಂಗೀತ ಸೇವಾ
ಸಮಾಜದ ಸಂಚಾಲಕರು ಗಾನವಿನೋದಿ ಎಂ. ಎನ್. ಕಸ್ತೂರಿಯವರು ತಮ್ಮ
ಧರ್ಮಪತ್ನಿ ಕುಂ|| ಸೌ|| ಸಾವಿತ್ರಿಬಾಯಿ ಕುಮಾರಿ ಗಾನಮಂಜರಿ ರಂಗಪ್ರಭೆ
ಮುಂತಾದ ವಿದ್ಯಾರ್ಥಿಗಳೊಡಗೂಡಿ ಶ್ರೀ ಭಗವಾನ ಆದಿನಾಥ ತೀರ್ಥಂಕರರ ಗೀತೆ
ಗಳನ್ನು ಹಾಡಿ ಹಾರ್ಮೋನಿಯಂ ಜಲತರಂಗ ಮುಂತಾದ ವಾದ್ಯಗಳನ್ನು ಬಾರಿಸಿ
ಕೂಡಿದ ಯಾತ್ರಿಕ ಬಂಧು ಭಗಿನಿಯರಿಗೆ ಆನಂದವನ್ನುಂಟುಮಾಡಿದರು. ಕಡೆಗೆ
ಶ್ರೀದೇವಿಯ ಪ್ರಸಾದ ಪಡೆದು ಮಂಗಳಗೀತೆಯಿಂದ ಸಂಗೀತ ಸಭೆಯನ್ನು ಸಮಾಪ್ತಿ
ಗೊಳಿಸಿದರು. **ಪ್ರತ್ಯಕ್ಷ ಸಂಗೀತಪ್ರೇಮಿ.**

---

## ವಿಹಾರ

ಸ್ವಸ್ತಿಶ್ರೀ ೧೦೫ ಐಲಕ ಕುಲಭೂಷಣಸ್ವಾಮಿಗಳವರು ಮತ್ತು ಸ್ವಸ್ತಿಶ್ರೀ
೧೦೫ ಐಲಕ ಅಕಲಂಕಸ್ವಾಮಿಗಳವರೂ ಹಾಸನದಲ್ಲಿ ತಮ್ಮ ಚಾತುರ್ಮಾಸ್ಯ ನಿಯ
ಮವನ್ನು ಮುಗಿಸಿಕೊಂಡು ಮೂಡಬಿದರೆ ಮೊದಲಾದ ಕ್ಷೇತ್ರಗಳ ಯಾತ್ರೆಯ
ನಿಮಿತ್ತ ತಾ|| ೧೭-೧೧-೪೧ ನೇ ಶುಕ್ರವಾರ ವಿಹಾರ ಹೊರಡುತ್ತಾರೆ. ಯಾತ್ರೆ
ಮಾಡುವವರಿಗೆ ಸುಸಮಯ. ದೇವಸೇವೆ ಗುರುಸೇವೆಯು ಕೂಡ ದೊರೆತಂತಾಗುತ್ತೆ
ಯಾಗಿ ಭಕ್ತರು ತೊರೆಗೊಳ್ಳಬೇಕು. ಹಾಸನದಿಂದ ಸುಮಾರು ಮೂರು ನಾಲ್ಕು
ಗಾಡಿ ಜನಗಳು ಹೊರಡುತ್ತಾರೆ. (ಸಂ. ಸು.)

# ಬೆಳಕು

ದೀಪಾವಳಿ ಸಂಚಿಕೆ, ೧೯೪೯



ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ

# ನಮ್ಮ ಮಾತು

" ಬೆಳಕು " ಹುಟ್ಟಿ ಏಳು ವರ್ಷಗಳಾಯಿತು. ಇಂದು ಎಂಟನೆಯ ವರ್ಷದ ಮೊದಲು. ಹುಟ್ಟುಹಬ್ಬದ ಸಂತೋಷದ, ಪವಿತ್ರದಿನ ಇದು. ಜಗತ್ತಿನಲ್ಲಿ ಬೆಳಕಿಗೆ ದೊರೆತಿರುವ ಹೆಸರು ಶಾಶ್ವತವಾದುದು. ಎಲ್ಲ ನಶ್ವರ; ಆದರೆ " ಬೆಳಕು " ಮಾತ್ರ ಶಾಶ್ವತ. ಹಾಗಾದರೆ, ಬೆಳಕೆಂದರೇನು? ಅದೇ ಜ್ಞಾನ, ಅರಿವು; ತಿಳಿವಳಿಕೆ.

ಪ್ರಪಂಚದ ಇತರ ದೇಶಗಳ ಜನರು ಬಹಳ ತಿಳಿವಳಿಕೆಯುಳ್ಳವರು. ಹೆಚ್ಚು ಓದಿದ್ದಾರೆ; ಅನೇಕ ವಿಷಯಗಳಲ್ಲಿ ನಮಗೂ ಅವರಿಗೂ ಅಜಗಜಾಂತರ. ವಿಜ್ಞಾನ, ಕಲೆ, ಸಾಹಿತ್ಯ—ಎಲ್ಲದರಲ್ಲಿಯೂ ಮುಂದಿದ್ದಾರೆ.

ಒಂದಾನೊಂದು ಕಾಲದಲ್ಲಿ ನಾವೂ ಬಹಳ ಮುಂದಿದ್ದೆವು. ನಾಡಿನ ದುರ್ದೈವ. ಏನೇನೋ ತೊಂದರೆಗಳ ಮುಂದು ಹಿಂದೆ ಬಿದ್ದೆವು. ಚಿಂತೆಯಿಲ್ಲ; ಮುಂದುವರಿಯಲು ಹಟ ತೊಟ್ಟರೆ ಅದೆಷ್ಟರ ಮಾತು?

ಹಾಗಾದರೆ ಮುಂದುವರಿಯುವುದೆಂತು? ನಾವು ಬೆಳಕನ್ನು ಕಾಣಬೇಕು, ಅಂದರೆ ತಿಳಿವನ್ನು ಸಂಪಾದಿಸಬೇಕು. ನಮ್ಮಲ್ಲಿ ಬಹಳ ಜನ ವಿದ್ಯಾಹೀನರು. ಅವರೆಲ್ಲರೂ ವಿದ್ಯಾವಂತರಾಗಬೇಕು. ಏಕೆಂದರೆ, ಜ್ಞಾನಕ್ಕೆ ಸಮಾನವಾದುದ ಜಗತ್ತಿನಲ್ಲಿ ಇಲ್ಲವೆಂದು ತಿಳಿದವರು ಹೇಳಿದ್ದಾರೆ. ಇದು ಸತ್ಯವಾದ ಮಾತು, ಅದೇ ನಿತ್ಯ.

ನಿಮಗಾಗಿ ದುಡಿಯುತ್ತಿರುವ " ಬೆಳಕು " ಇನ್ನೂ ಶಿಶು. ನಿಮ್ಮೆಲ್ಲರ ಹರಕೆ, ಆಶೀರ್ವಾದಗಳಿಂದ ಇಷ್ಟು ಯಶಸ್ವಿಯಾಗಿ ದುಡಿಯುತ್ತಿದೆ; ತನ್ನ ಅಳಿಲು ಸೇವೆಯನ್ನು ಸಲ್ಲಿಸುತ್ತಿದೆ.

ನಿಮ್ಮ ಹರಕೆಗಳು ಇನ್ನೂ ಸಾವಿರಪಾಲು " ಬೆಳಕು "ವಿನ ಮೇಲೆ ಸುರಿಯಲಿ. ಅದು ಚಿರವಾಗಿ ಬೆಳಗಿ ನಾಡನ್ನು ಬೆಳಗಿಸಲಿ.

" ಜ್ಞಾನವೇ ಜ್ಯೋತಿ "

—ಸಂಪಾದಕ.

# ಸಂದೇಶಗಳು

ಏಳು ವರ್ಷಗಳ ಹಿಂದೆ 'ಬೆಳಕು' ಪತ್ರಿಕೆಯು ದೀಪಾವಳಿಯ ದಿನವೇ ಆರಂಭ ನಾಯಿತು. ಇದು ಉಚಿತವೇ. ಈ ವರ್ಷ

ದೀಪಾವಳಿಗೆ, ಈ ಪತ್ರಿಕೆಯು ತನ್ನ ಎಂಟನೆಯ ವರ್ಷದಲ್ಲಿ ಕಾಲಿಡುವುದರಿಂದ ಒಂದು ವಿಶೇಷ ಸಂಚಿಕೆಯನ್ನು ಹೊರಡಿಸಲಿರುವುದು ಸೂಕ್ತ ನಾಗಿಯೇ ಇದೆ.

ಈ ಏಳು ವರ್ಷಗಳಲ್ಲಿ ಪತ್ರಿಕೆಯು, ಅಜ್ಞಾನದ ಕತ್ತಲೆಯಲ್ಲಿ ತಡವರಿಸುತ್ತಿದ್ದ ಸಾವಿರಾರು ಜನರಿಗೆ ಅರಿವಿನ ಬೆಳಕನ್ನು ನೀಡುವ ಉಪಯುಕ್ತ ಕಾರ್ಯದಲ್ಲಿ ಕ್ರಮವಾಗಿ ಮುಂದುವರಿದಿದೆ.

ನಾವು ದೀಪಾವಳಿ ಹಬ್ಬವನ್ನು ಆಚರಿಸುತ್ತಿರುವವರೆಗೂ, ಈ ಕಾರ್ಯವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಇದು ನಡೆಸಿಕೊಂಡು ಬರುತ್ತಿರಲಿ.

—ಕೆ. ಚೆಂಗಲರಾಯ ರೆಡ್ಡಿ.

ಪ್ರಿಯ ಸ್ನೇಹಿತರೆ,

ಹತ್ತನೆಯ ತಾರೀಕಿನ ನಿಮ್ಮ ಪತ್ರ ತಲಪಿತು. 'ಬೆಳಕು' ಪತ್ರಿಕೆಗೆ ಏಳು ವರ್ಷ ತುಂಬಿದ

ನೆನಪಿಗಾಗಿ ಒಂದು ವಿಶೇಷ ಸಂಚಿಕೆಯನ್ನು ಹೊರಡಿಸುವುದನ್ನು ತಿಳಿದು ನನಗೆ ಸಂತೋಷವಾಗಿದೆ.

ತಮ್ಮ ಪತ್ರಿಕೆಯು, ವಯಸ್ಕರಲ್ಲಿ ಅಕ್ಷರಜ್ಞಾನವನ್ನು ಬೆಳೆಸಲು ಮಾಡುತ್ತಿರುವ ಸೇವೆಯನ್ನು ನಾನು ಬಹಳ ಮೆಚ್ಚುತ್ತೇನೆ.

ನಿಮ್ಮ ಪ್ರಯತ್ನವು ಜಯಪ್ರದವಾಗಲಿ. ನಿಮ್ಮ ಪತ್ರಿಕೆಯು ಬಹುಕಾಲ ಉಪಯುಕ್ತವಾದ ಸೇವೆಯನ್ನು ಸಲ್ಲಿಸಲೆಂದು ನಾನು ಹಾರೈಸುತ್ತೇನೆ.

—ಕೆ. ಟಿ. ಭಾಷ್ಯಂ.

ಕರ್ನಾಟಕ ಒಕ್ಕಲತನದ ಪ್ರದರ್ಶನಾಂಕ.

**Karnataka Agricultural Exbition Number 1938.**

# ಕಥಾಕುಂಜ

**Kathakunja Kannada,** ಸಣ್ಣ ಕತೆಗಳ ಮಾಸಪತ್ರಿಕೆ. **Monthaly Magazine.**

1938

636

ಹಿಜ್ ಎಕ್ಸಲನ್ಸಿ ಸರ ರೋಜರ ಲಮ್ಲೆ, ಜಿ. ಸಿ. ಆಯ್. ಇ, ಡಿ. ಎಲ್.
ಪ್ರದರ್ಶನದ ಅಧ್ಯಕ್ಷರು.

FAPER EXHIBITION
...ALLI 677624,
Karnataka State INDIA

ಲೆ. ಹೀಜ ಹಾಯನೇಸ ಶ್ರೀಮಂತ ಸರ
ಅಪ್ಪಾಸಾಹೇಬ ಪಟವರ್ಧನ ಸಾಂಗಲಿ
ಕೇ. ಸೀ. ಆಯ್. ಈ.
ಉಪಾಧ್ಯಕ್ಷ.

Approved by The Director of Public Instruction, in Mysore State, for the Reading Rooms of High and Middle Schools. In T. B. C. No. 221 of 1933-34 dated 5-9-34.

ಕಥಾಕುಂಜ ಗ್ರಂಥ-
ಭಾಂಡಾರ ಬೆಳಗಾವಿ.
ನಮ್ಮಲ್ಲಿ ಕನ್ನಡ ನಾಡಿನ ಹಳೆ ಹೊಸ ಸಾಹಿತ್ಯದ ಎಲ್ಲ ಬಗೆಯ ಗ್ರಂಥಗಳು ಯೋಗ್ಯ ಬೆಲೆಗೆ ಸಿಗುತ್ತವೆ.
ಜಿಲ್ಲೆಗೆ ಒಂದೇ ಕನ್ನಡ ಗ್ರಂಥ ಭಾಂಡಾರ.

# ಕಥಾಕುಂಜ

ಉತ್ತಮ ವರ್ಗದ ಮಾಸಪತ್ರಿಕೆ.

ಕಥಾಕುಂಜದ
ವಾರ್ಷಿಕ ವರ್ಗಣಿ.
ಸ್ಥಳಿಕರಿಗೆ ೧-೮-೦
ಪರಸ್ಥಳಿಕರಿಗೆ ೧-೧೪-೦
ಶಾಲೆ ಕಾಲೇಜು
ಲೈಬ್ರರಿಗಳಿಗೆ ೨-೧೪-೦
ಸಹಾಯಕರಿಗೆ ೫-೦-೦
ಪೋಷಕರಿಗೆ ೧೦-೦-೦
ಆಜೀವಚಂದಾದಾರರಿಗೆ ೫೦-೦-೦

ಸಂಪಾದಕರು:—ಪ್ಯಾಟಿ ಶಾಮರಾಯರು. Editor—Pyati Shamarao.

ವರ್ಷ ೪. | ಬೆಳಗಾವಿ—ಫೆಬ್ರುವರಿ—೧೯೩೫. | ಸಂಚಿಕೆ ೦

## ಕನ್ನಡಿಗನ ಕರ್ತವ್ಯಗಳಲ್ಲಿ ಕೆಲವು

೧. ಮನೆಯ ಒಳಗೂ ಹೊರಗೂ ಸಾಧ್ಯವಾದ ಮಟ್ಟಿಗೆ ಕನ್ನಡವನ್ನೇ ಬಳಸುವುದು.

೨. ಕಾಗದಪತ್ರಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡದಲ್ಲೇ ಬರೆಯುವುದು.

೩. ಮನೆಯವರಿಗೆ ಆಗಾಗ ಕನ್ನಡ ಸಾಹಿತ್ಯದ ಒಳ್ಳೆಯ ಗ್ರಂಥಗಳನ್ನು ಓದಿ ಹೇಳುವುದು.

೪. ಮನೆಯಲ್ಲಿ ಹೆಂಗಸರೂ ಮಕ್ಕಳೂ ಓದಲು ಬಯಸುವ ಕನ್ನಡ ಪುಸ್ತಕಗಳನ್ನೂ ಕನ್ನಡ ಪತ್ರಿಕೆಗಳನ್ನೂ ಅಸಡ್ಡೆಮಾಡದೆ ತಂದು ಕೊಡುವುದು.

೫. ಮದುವೆ ಮುಂಜಿ ಮೊದಲಾದುವುಗಳಲ್ಲಿ ಕನ್ನಡ ಪುಸ್ತಕಗಳನ್ನು ಉಡುಗೊರೆಯಾಗಿ ಓದಿಸುವ ಪದ್ಧತಿಯನ್ನು ಬಳಕೆಗೆ ತರುವುದು.

೬. ತಿಂಗಳಿಗೊಂದು ಬಾರಿಯಾದರೂ ಪುಸ್ತಕದ ಅಂಗಡಿಗೆ ಹೋಗಿ, "ಕನ್ನಡದಲ್ಲಿ ಹೊಸ ಪುಸ್ತಕ ಯಾವುದು ಬಂದಿದೆ?" ಎಂದು ವಿಚಾರಿಸುವುದು, ಇಷ್ಟ ಬಂದದ್ದನ್ನು ಕೊಂಡು ಓದುವುದು.

೭. 'ಕನ್ನಡದ ಏಳಿಗೆಗೆ ನಾನು ಏನು ಮಾಡಬಹುದು?' ಎಂದು ದಿವಸಕ್ಕೆ ಏದು ನಿಮಿಷವಾದರೂ ಶ್ರದ್ಧೆಯಿಂದ ಆಲೋಚಿಸುವುದು.

೮. ಈ 'ಕೈಪಿಡಿ' ಯನ್ನು ಎಸೆದುಬಿಡದೆ ಮಿತ್ರ ವರ್ಗಕ್ಕೂ ತೋರಿಸುವುದು.

## ಕನ್ನಡ ನುಡಿ.

ಮೊದಲು ತಾಯ ಹಾಲ ಕುಡಿದು,
ಲಲ್ಲೆಯಿಂದ ತೊದಲಿ ನುಡಿದು,
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು—
ನಲ್ಲೆಯೊಲವ ತೆರೆದು ತಂದ
ಮಾತದಾವುದು—

ಸವಿಯ ಹಾಡ, ಕಥೆಯ, ಕಟ್ಟ,
ಕಿವಿಯಲೆರೆದು, ಕರುಳ ತಟ್ಟ,
ನಮ್ಮ ಜನರು, ನಮ್ಮ ನಾಡು,
ಎನಿಸಿತಾವುದು—
ನಮ್ಮ ಕವಿಗಳೆಂಬ ಕೋಡು
ತಲೆಗದಾವುದು—
"ಕನ್ನಡ ನುಡಿ!"

# ಕರ್ನಾಟಕ ಒಕ್ಕಲತನದ ಪ್ರದರ್ಶನ, ಬೆಳಗಾವಿ.

ಜನವರಿ ೧೯೩೮.

ಮುಂಬಯಿ ಇಲಾಖೆಯಲ್ಲಿ ಪುಣೆ ಮತ್ತು ಅಹಮದಾಬಾದ ಪಟ್ಟಣಗಳಲ್ಲಿ ಅನುಕ್ರಮವಾಗಿ ೧೯೩೬, ೧೯೩೭ನೇ ಇಸವಿಗಳಲ್ಲಿ ೧ನೆಯ ಹಾಗು ೨ನೆಯ ಒಕ್ಕಲತನದ ಪ್ರದರ್ಶನಗಳು ನೆರವೇರಿದ ನಂತರ ಆರ್ಥಿಕ ಮಂದತೆಯ ದೆಶೆಯಿಂದ ಕಳೆದ ೧೦ ವರುಷಗಳಲ್ಲಿ ೩ನೆಯ ಪ್ರದರ್ಶನವನ್ನು ನೆರೆಯಿಸುವ ವಿಚಾರವು ಫಲದ್ರೂಪವಾಗಿರಲಿಲ್ಲ. ಆದರೆ ಇಂಥ ಪ್ರದರ್ಶನಗಳನ್ನು ಒಕ್ಕಲತನವೇ ಮುಖ್ಯವಾದ ಉದ್ಯೋಗವಾಗಿರುವ ನಮ್ಮ ದೇಶದಲ್ಲಿ ಆಗಾಗ್ಗೆ ನೆರೆಯಿಸುವದು ಅವಶ್ಯವಾಗಿರುವುದೆಂಬದರ ಅರಿಕೆಯು ಎಲ್ಲರಿಗೂ ಇದ್ದು ದರಿಂದಲೂ ಕರ್ನಾಟಕದ ವಿಭಾಗದಲ್ಲಿ ಇದುವರೆಗೂ ಇಂಥ ಪ್ರದರ್ಶನವು ಜರುಗದಿದ್ದುದರಿಂದ ಈ ವಿಭಾಗದಲ್ಲಿ ಒಂದು ಒಕ್ಕಲತನದ ಪ್ರದರ್ಶನವನ್ನು ಕೂಡಿಸುವುದು ಅವಶ್ಯವೆಂದು ತೋರಿದ್ದರಿಂದಲೂ, ತಡವಾಗಿಯೇ ಆಗಲೊಲ್ಲದ್ದೇಕೆ, ಇದೀಗ ಬೆಳಗಾವಿಯಲ್ಲಿ ಕರ್ನಾಟಕ ಒಕ್ಕಲತನದ ಪ್ರದರ್ಶನವು ಜರಗುವ ಸುಯೋಗವು ಬಂದೊದಗಿತು.

ಕರ್ನಾಟಕ ಭಾಗದಲ್ಲಿ ಒಂದು ಒಕ್ಕಲತನದ ಪ್ರದರ್ಶನವನ್ನು ಏರ್ಪಡಿಸಬೇಕೆಂಬ ವಿಚಾರವು ಮೊಟ್ಟ ಮೊದಲು ದಕ್ಷಿಣಭಾಗದ ಕಮಿಶನರರಾದ ಮೆ|| ಜಿ ಎ. ಮದನ ಸಾಹೇಬರವರ ಅಧ್ಯಕ್ಷತೆಯಲ್ಲಿ ತಾ. ೧೦-೩-೧೯೩೭ನೇ ದಿವಸ ನೆರೆದ ಕರ್ನಾಟಕ ಜಿಲ್ಲೆಗಳ ಮುಖಂಡರ ಮತ್ತು ಅಧಿಕಾರಿಗಳ ಸಭೆಯಲ್ಲಿ ಮೂರ್ತಸ್ವರೂಪವನ್ನು ತಾಳಿ ಬೆಳಗಾವಿಯಲ್ಲಿ ಲಕ್ಷ್ಮೀ ಹದ್ದಿನಲ್ಲಿರುವ " ರಾಣೀ ಬಗೀಚ " ವೆಂಬ ಹೆಸರಿನ ೪೨ ಎಕರೆಯ ಜಾಗೆಯಲ್ಲಿ ಪ್ರದರ್ಶನವನ್ನು ನೆರವೇರಿಸಬೇಕೆಂಬದು ಗೊತ್ತಾಯಿತು. ಆಗಲೇ ವಿವಿಧ ಕಮೀಟಿಗಳು ನಿಯಮಿಸಲ್ಪಟ್ಟು ಪ್ರದರ್ಶನದ ಕೆಲಸದ ' ಓಂ ' ಕಾರವು ಪ್ರಾರಂಭವಾಯಿತು. ಮುಂದೆ ಮುಂಬಯಿ ಇಲಾಖೆಯ ಗವ್ಹರ್ನರರಾದ ನೇಕನಾಮದಾರ ಸರ್ ರೋಜರ ಲಮ್ಲೆ ಸಾಹೇಬರು ಪ್ರದರ್ಶನದ ಅಧ್ಯಕ್ಷರಾಗಲಿಕ್ಕೂ, ಮುಂಬಯಿ ಇಲಾಖೆಯ ಕಂದಾಯ ಮಂತ್ರಿಗಳಾದ ನಾಮದಾರ ಮುರಾರಜಿ ದೇಸಾಯಿಯರು ಉಪಾಧ್ಯಕ್ಷರಾಗಲಿಕ್ಕೂ ಒಪ್ಪಿದ ಮೇಲಂತೂ ಪ್ರದರ್ಶನದ ಕೆಲಸಕ್ಕೆ ಒಳ್ಳೇ ಕಳೆಯೇರಿದಂತಾಯಿತು. ಕರ್ನಾಟಕದಲ್ಲಿ ಜರಗಲಿದ್ದ ಈ ಪ್ರದರ್ಶನದ ಕೆಲಸಕ್ಕೆ ಕರ್ನಾಟಕ ಸಿಂಹರು--ದೇ. ಭ. ದೇಶಪಾಂಡೆ ಗಂಗಾಧರರಾಯರ-ಮನಃಪೂರ್ವಕವಾದ ಬೆಂಬಲವೂ ದೊರೆತಿತು. ಇತರ ಸ್ಥಾನಿಕ ಕಾಂಗ್ರೆಸ ಮುಖಂಡರಾದ ಪೋತದಾರ ಭೀಮರಾಯರು, ಜೋಶಿ ನಾರಾಯಣರಾಯರು, ಮುಂತಾದವರೆಲ್ಲರೂ ಆಸ್ಥೆಯುಕ್ತವಾದ ಸಹಾನುಭೂತಿಯನ್ನು ತೋರಿಸಿದರು. ಆಯಿತು. ಮೆ|| ಮದನ ಸಾಹೇಬರು ಪ್ರದರ್ಶನದ ಚೇಅರಮನ್ನರೂ, ದಕ್ಷಿಣ ಭಾಗದ ಆಗ್ರಿಕಲ್ಚರಲ್ ಡೆಪ್ಯೂಟಿ ಡಾಯರೆಕ್ಟರರಾದ ರಾವಬಹಾದ್ದೂರ ಎಸ್. ಎಸ್. ಸಾಲೀಮಠ ಸಾಹೇಬರು ಜನರಲ್ ಸೆಕ್ರೆಟರಿಗಳಾಗಿಯೂ ರಾವಸಾಹೇಬ ವಾಮನರಾವ ದೇಸಾಯಿಯವರು ಸಹಕಾರ್ಯದರ್ಶಿಗಳಾಗಿಯೂ ನಿಯಮಿಸಲ್ಪಟ್ಟು ಕಾರ್ಯವು ಸಾಂಗವಾಗಿ ಸಾಗಹತ್ತಿತು.

ಆದರೆ, ಮೇಲೆ ಹೇಳಿದ ' ರಾಣೀಬಗೀಚ 'ದ ಸ್ಥಳವು ಒಂದು ಒಳ್ಳೇ ಸುಸಜ್ಜಿತವಾದ ವಿಸ್ತೀರ್ಣವಾದ ಹೂದೋಟವೆಂದು ಮಾತ್ರ ತಿಳಿದು ನೀವು ಮೋಸ ಹೋಗಬೇಡಿರಿ. ಒಂದಾನೊಂದು ಕಾಲದಲ್ಲಿ ಅದೊಂದು ಪೂದೋಟದ ಸ್ಥಳವಾಗಿರಬಹುದೆಂಬದನ್ನು ಅಲ್ಲಿಯ ಕೆಲವು ಹೂವಿನ ಗಿಡಗಳಿಲ್ಲದ ಕುಂಡೇಗಳು, ಹೂವಿನ ಗಿಡಗಳಿಗೆ ನೀರು ಹಾಕುವದಕ್ಕಾಗಿ ನೀರನ್ನು ಸಂಗ್ರಹಿಸುವದಕ್ಕಾಗಿ ಕಟ್ಟಿಸಿದ ಸಣ್ಣ ಸಣ್ಣ ಹೊಂಡಗಳು, ತೀರ ಅವ್ಯವಸ್ಥೆಯಲ್ಲಿದ್ದ ಒಂದೆರಡು ಬಾವಿಗಳು, ಒಂದೆರಡು

ಹಳೆ ಕಬ್ಬಿಣ ಬಾಕುಗಳನ್ನೊಳಗೊಂಡ ಒಂದು ಮಧ್ಯವರ್ತಿ ವಿಶ್ರಾಮಗೃಹ, ಎತ್ತರವಾಗಿ ಬೆಳೆದ ಕೆಲವು ಓಕ ಗಿಡಗಳು, ಇವೇ ಕೆಲವು ಕುರುಹುಗಳಿಂದ ಕಂಡು ಕೊಳ್ಳಬಹುದು ಎತ್ತ ನೋಡಿದತ್ತ ಕಸ, ಗೊಬ್ಬರ, ಎತ್ತರವಾಗಿ ಬೆಳೆದ ಹುಲ್ಲು; ಇದ್ದ ಸ್ಥಳವೂ ಸಹ ಸಮ ಉಳಿದಿಲ್ಲ ಅಲ್ಲಲ್ಲಿ ತಗ್ಗು ದಿನ್ನೆಗಳು. ಇಂಥ ದುರ್ಗಮವಾದ ಸ್ಥಳವನ್ನು ಅಲ್ಪಾವಕಾಶದಲ್ಲಿಯೇ ಫಲವತ್ತಾದ ಭೂಮಿಯನ್ನಾಗಿ ಪರಿಣಮಿಸಿ ಕಬ್ಬು, ಬತ್ತ, ಹತ್ತಿ, ತಂಬಾಕ, ಅನೇಕ ಪ್ರಕಾರವ ಕಾಯಿಪಲ್ಲೆಯ ಗಿಡಗಳು, ಬೇರೆ ಬೇರೆ ನಮೂನೆಯ ಹಣ್ಣಿನ ಗಿಡಗಳು ಇತ್ಯಾದಿಗಳನ್ನೆಲ್ಲ ಬೆಳೆಯಿಸಿ ಒಕ್ಕಲತನದ ಪ್ರದರ್ಶನವನ್ನು ನೆರೆಯಿಸಲು ಸಾಧ್ಯವಾದೀತೇ ಎಂಬ ಶಂಕೆಯು ಪ್ರತಿಯೊಬ್ಬರನ್ನು ಮುಗ್ಧಗೊಳಿಸದೆ ಬಿಡಲಿಲ್ಲ. ಆದರೆ ಕರ್ನಾಟಿಗರ ಸಾಹಸದ ಯಕ್ಷಿಣೀ ಕಾಂಡದ ಪ್ರಭಾವದಿಂದ ಆ ದುರ್ಗಮವಾದ ಸ್ಥಳವು ಇದೀಗ ಅತ್ಯಂತ ಮನೋಹರವಾಗಿದೆ. ಮೊದಲು ಆ ಸ್ಥಿತಿಯಲ್ಲಿದ್ದ ಈ ಸ್ಥಳವನ್ನು ನೋಡಿದವನಿಗೆ ಆದೇ ಸ್ಥಳವು ಇದು ಅಹುದೇ ಎಂದು ಕೆಲಹೊತ್ತು ಭ್ರಾಂತ ಚಿತ್ತನಾಗದೆ ಇರಲಾರನು.

ಹೀಗೆ ಅಲ್ಪಾವಧಿಯಲ್ಲಿಯೇ, ಸಂಬಂಧಿಸಿದ ಅಧಿಕಾರಿಗಳ ದಕ್ಷತೆಯಿಂದಲೂ ಜನತೆಯ ಬೆಂಬಲದಿಂದಲೂ ಅಲ್ಪಾವಧಿಯಲ್ಲಿಯೇ ಪ್ರದರ್ಶನದ ಸ್ಥಳವು ಅಚ್ಚುಕಟ್ಟಾಗಿಯೂ ರಮಣೀಯವಾಗಿಯೂ ಸಜ್ಜುಗೊಳಿಸಲ್ಪಟ್ಟಿತು.

ಕರ್ನಾಟಕದ ಧಾರವಾಡ, ವಿಜಾಪೂರ, ಕಾರವಾರ ಮತ್ತು ಬೆಳಗಾವಿ ಜಿಲ್ಲೆಯ ರೈತರಿಗೂ ಇತರ ಮಧ್ಯಮ ವರ್ಗದ ಸ್ವತಂತ್ರ ಜನರಿಗೂ ಪ್ರದರ್ಶನವನ್ನು ನೋಡಲಿಕ್ಕೆ ಬರುವದಕ್ಕೆ ಅನುಕೂಲ ಮಾಡಿಕೊಡುವದಕ್ಕಾಗಿ ಒಂದು ಪ್ರೇಕ್ಷಕರ ಸಮಿತಿಯೊಂದನ್ನು ನಿಯಮಿಸಿದ್ದು ಅದಕ್ಕೆ ಅಸಿಸ್ಟಂಟ ಕಮೀಶನರರಾದ ಮೆ|| ಪಿ. ಎಲ್. ಬೆಣ್ಣಿ ಸಾಹೇಬರು ಅಧ್ಯಕ್ಷರಿರುವರು. ಈ ಸಮಿತಿಯ ಸೆಕ್ರೆಟರಿಗಳಾದ ಮಿ. ಎಂ ಪಿ. ವಾಲಿ ಚೀಫ ಆಫೀಸರ, ಡಿ. ಲೋ. ಬೋರ್ಡ ಬೆಳಗಾವಿ ಮತ್ತು ಮಿ. ಡಿ. ಎಮ್. ಕುಲಕರ್ಣಿ. ಅ್ಯಗ್ರಿಕಲ್ಚರಲ್ ಆರ್ಗನಾಯಿಜರ, ಬೆಳಗಾವಿ, ಇವರ ಸಹಾಯದಿಂದ ಮೆ|| ಬೆಣ್ಣಿ ಸಾಹೇಬರು ಪ್ರೇಕ್ಷಕರ ಸಲುವಾಗಿ ಒಳ್ಳೇ ಜೊಕ್ಕಾದ ವ್ಯವಸ್ಥೆಯನ್ನು ಮಾಡಿಸಿದ್ದರು. ವನಿತಾ ವಿದ್ಯಾಲಯದ ಲೇಡಿ ಸುಪರಿಂಟೆಂಡಂಟರೂ, ಬೆನಸ್ಕಿಥ ಹಾಯಸ್ಕೂಲಿನ ಹೆಡ್‌ಮಾಸ್ತರರೂ, ಸರದಾರ ಹೈಸ್ಕೂಲಿನ ಹೆಡ್‌ಮಾಸ್ತರರೂ ಲಿಂಗರಾಜ ಕಾಲೇಜದ ಪ್ರಿನ್ಸಿಪಾಲರೂ ಸಮಿತಿಯವರ ವತಿಯಿಂದ ಸಿದ ಇಮಾರತುಗಳಲ್ಲಿ ಪ್ರೇಕ್ಷಕರಿಗಾಗಿ ವ್ಯವಸ್ಥೆ ಮಾಡಿಸಿದ್ದರು. ಎಲ್ಲ ಸ್ಥಳಗಳಲ್ಲಿಯೂ ಗುಡಾರಗಳು ಹಾಕಲ್ಪಟ್ಟಿದ್ದುವು. ದೀಪದ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯು ಪ್ರೇಕ್ಷಕರಿಗೆ ಪುಕ್ಕಟೆಯಾಗಿ ಮಾಡಲಾಗಿತ್ತು. ಬೆಳಗಾವಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀಯುತ ಎಸ್. ಎನ್. ಅಂಗಡಿಯವರು ಪ್ರೇಕ್ಷಕರಿಗೆ ನೀರನ್ನು ಪೂರೈಸುವದಕ್ಕಾಗಿ ೧೬ ನೀರಿನ ಟಾಕಿಗಳನ್ನು ಪೂರೈಸಿದ್ದರು. ಮೇಲೆ ಹೇಳಿದ ಎಲ್ಲ ಇಮಾರತುಗಳಲ್ಲಿಯೂ ಮತ್ತು ಇಡೀ ಬೆಳಗಾವಿ ಶಹರದಲ್ಲಿಯೂ ಆರೋಗ್ಯತೆಯ ವ್ಯವಸ್ಥೆಯನ್ನು ಒಳ್ಳೇ ಚನ್ನಾಗಿ ಇಡಿಸಿದುದಕ್ಕಾಗಿ ಬೆಳಗಾವಿ ಮ್ಯುನಸಿಪಾಲಟಿಯ ಅಧಿಕಾರಿಗಳು ಅಭಿನಂದನೀಯರಾಗಿರುವರು. ಪ್ರೇಕ್ಷಕ ಸಮಿತಿಯ ವತಿಯಿಂದ ಪ್ರೇಕ್ಷಕರಾಗಿ ದಿನಾಲು ೨೦೦೦ ಪ್ರೇಕ್ಷಕರಿಗೆ ಇಳಿದುಕೊಳ್ಳವ ವ್ಯವಸ್ಥೆಯು ಮಾಡಲ್ಪಟ್ಟಿದ್ದಿತು. ಇದೆಲ್ಲಜೆ ಪ್ರದರ್ಶನ ಭಾಗಕ್ಕೆ ಸಮೀಪದಲ್ಲಿರುವ ಮಿಶನ್ ಹೈಸ್ಕೂಲು ಮತ್ತು ವನಿತಾ ವಿದ್ಯಾಲಯಗಳ ಮಧ್ಯಂತರದಲ್ಲಿಯೇ ಈ ಸಮಿತಿಯವರು ಒಂದು ಉತ್ತಮವಾದ ಭೋಜನಗೃಹದ ವ್ಯವಸ್ಥೆಯನ್ನು ಮಾಡಿ ಅದರಲ್ಲಿ ಉತ್ತಮವೂ ಆರೋಗ್ಯಕರವೂ ಆದ ಊಟವು ತೀರ ಸ್ವಲ್ಪ ದರಕ್ಕೆ ದೊರೆಯುಂತೆ ಏರ್ಪಡಿಸಿದ್ದರು. ಧಾರವಾಡ, ವಿಜಾಪೂರ, ಕಾರವಾರ ಜಿಲ್ಲೆಗಳ ಜನರೂ, ರಾಮದುರ್ಗ, ಮುಧೋಳ, ಕೊಲ್ಹಾಪುರ, ಸಾಂಗಲಿ, ಜತ್ತ, ಸಾವಂತವಾಡಿ ಮೊದಲಾದ ಸಂಸ್ಥಾನಗಳ ಜನರೂ, ಪ್ರೇಕ್ಷಕರೂ, ಒದಗಿಸಿಕೊಟ್ಟ ಅನುಕೂಲತೆಗಳ ಲಾಭವನ್ನು ಪಡೆದು ಸಂತುಷ್ಟ ಚಿತ್ತರಾದರು. ಪ್ರೇಕ್ಷಕ ಸಮಿತಿಯ ಕೆಲಸವು ಒಳ್ಳೇ ಸುವ್ಯವಸ್ಥಿತವಾಗಿದ್ದಿತೆಂದು ಜನರು ಅನ್ನುತ್ತಿದ್ದರು.

ಜನವರಿ ೧೬ನೆಯ ತಾರೀಖು. ಮುಂಬಯಿ ಇಲಾಖೆಯ ನೇಕನಾಮದಾರ ಗವ್ಹರ್ನರ ಸಾಹೇಬರವರಿಂದ ಪ್ರದರ್ಶನದ ಉದ್ಘಾಟನವಾಗುವ ಸಮಾರಂಭದ ದಿವಸವು. ೧೬ನೇ ತಾರೀಖಿನಿಂದಲೇ ಪ್ರೇಕ್ಷಕ ಜನರ ಸಮುದಾಯವು ತಂಡೋಪತಂಡವಾಗಿ ನಿಯೋಜಿತ ಸ್ಥಳಗಳಿಗೆ ಬಂದು ಇಳಿದುಕೊಳ್ಳಹತ್ತಿತ್ತು. ಬೆಳಗಾವಿಯು ಜನ ಸಂಧಣಿಯಿಂದ ಒಳ್ಳೇ ಗಜ ಬಿಜಿ. ಖಾನಾವಳಿ, ಚಹ

ದಂಗಡಿ, ಸ್ಟೇಶನರಿ ಅಂಗಡಿ, ಜವಳಿಯ ಅಂಗಡಿ, ಮುಂತಾದವುಗಳ ಮಾಲಕರು ತಮಗೆ ಲಕ್ಷ್ಮಿಯು ಒಲಿಯುವ ಪ್ರಸಂಗವು ಬಂತೆಂದು ಹರ್ಷವದನರಾದರು. ೧೭ನೆಯ ತಾರಿಖೀನ ದಿವಸ ಮಧ್ಯಾಹ್ನ ೪॥ ಘಂಟೆಗೆ ಗವ್ಹರ್ನರ ಸಾಹೇಬರು ಪ್ರದರ್ಶನದ ಸ್ಥಳಕ್ಕೆ ಆಗಮಿಸಿದರು ಪ್ರದರ್ಶನದ ಉಪಾಧ್ಯಕ್ಷರಾದ ಕಂದಾಯ ಮಂತ್ರಿಗಳಾದ ನಾ.ಮುರಾರಜಿ ದೇಸಾಯಿಯವರು ಒಂದು ಪುಟ್ಟವಾದ ಪ್ರಾಸ್ತಾವಿಕ ಭಾಷಣವನ್ನು ಮಾಡಿ ಗವ್ಹರ್ನರ ಸಾಹೇಬರಿಗೆ ಪ್ರದರ್ಶನದ ಉದ್ಘಾಟನವನ್ನು ಮಾಡಲು ಕೇಳಿಕೊಂಡರು. ಮಂತ್ರಿವರ್ಯರ ಹಾಗೂ ಗವ್ಹರ್ನರ ಸಾಹೇಬರ ಭಾಷಣಗಳ ಸಾರಾಂಶವನ್ನು ಇದರಡಿಯಲ್ಲಿ ಕೊಟ್ಟಿದೆ.

# ಕರ್ನಾಟಕ ಒಕ್ಕಲತನ ಪ್ರದರ್ಶನದ ಪ್ರಾರಂಭೋತ್ಸವ

## ನಾ. ಮುರಾರಜಿ ಮತ್ತು ಸರ್ ಲಮ್ಲೆಯವರ ಭಾಷಣ.

ಈ ಹೊತ್ತು ಸಂಜೆಯ ೪-೪೫ಕ್ಕೆ ರಾಣೇಬಗೀಜೆಯ ಭವ್ಯವಾದ ಪಟಾಂಗಣದಲ್ಲಿ ಮುಂಬಯಿ ಇಲಾಖೆಯ ಗವ್ಹರ್ನರರಾದ ಸರ್ ಲಮ್ಲೆಯವರು ಕರ್ನಾಟಕ ಒಕ್ಕಲತನ ಪ್ರದರ್ಶನದ ಉದ್ಘಾಟನ ಸಮಾರಂಭವನ್ನು ನೆರವೇರಿಸಿದರು. ಕರ್ನಾಟಕದಿಂದಷ್ಟೇ ಅಲ್ಲದೆ ಪರಪ್ರಾಂತಗಳಿಂದಲೂ ಅನೇಕ ಮಹನೀಯರು ಈ ಸಮಾರಂಭಕ್ಕೆ ಆಮಂತ್ರಿತರಾಗಿ ಬಂದಿದ್ದರು. ವೇದಿಕೆಯ ಮೇಲೆ ಪ್ರದರ್ಶನದ ಉಪಾಧ್ಯಕ್ಷರಾದ ನಾ. ಮುರಾರಜಿ ದೇಸಾಯಿ, ರಾಜೇಸಾಹೇಬ ಸಾಂಗಲಿ, ರಾಜೇಸಾಹೇಬ ಜಮಖಂಡಿ, ರಾಜೇಸಾಹೇಬ ಮಿರಜಿ (ಸೀನಿಯರ), ಕುರಂದವಾಡ (ಜ್ಯೂನಿಯರ) ಚೀಫ ಸಾಹೇಬರು, ರಾಮದುರ್ಗದ ಚೀಫ ಸಾಹೇಬರು, ಕಮೀಶನರ, ಕಲೆಕ್ಟರ, ಕುರುಂದವಾಡ್ ಸೀನಿಯರ ರಾಣೇಸಾಹೇಬರೇ ಮೊದಲಾದ ಸಂಸ್ಥಾನಿಕರು ಕುಳಿತಿದ್ದರು. ಎದುರಿಗೆ ಮೊದಲನೆಯ ಸಾಲಿನಲ್ಲಿ ಶ್ರೀಯುತರಾದ ಗಂಗಾಧರರಾವ ದೇಶಪಾಂಡೆ, ನಾರಾಯಣರಾವ ಜೋಶಿ, ವಿಶ್ವನಾಥರಾವ ಜೋಗ, ಭೀಮರಾವ ಪೋತದಾರ, ಅಂಗಡಿ ಮೊದಲಾದವರು ಇತರ ದೊಡ್ಡ ದೊಡ್ಡ ಸರಕಾರಿ ಅಧಿಕಾರಿಗಳೊಡನೆ ಕುಳಿತಿದ್ದರು.

### ಮುರಾರಜಿಯವರ ಆಗಮನ.

ನಾ. ಮುರಾರಜಿ ದೇಸಾಯಿಯರು ಬಂದಕೂಡಲೆ ಮಿಲಿಟರಿ ಬ್ಯಾಂಡು ಸುರುವಾಯಿತು. ಜನರೆಲ್ಲ ಮಹಾತ್ಮಾ ಗಾಂಧೀಕಿಜಯ ಎಂದು ಜಯಘೋಷಿಸಿ ಅವರನ್ನು ಸ್ವಾಗತಿಸಿದರು.

### ಗವರ್ನರ ದಂಪತಿಗಳು.

ಸರಿಯಾಗಿ ೪-೪೦ಕ್ಕೆ ಗವ್ಹರ್ನರರು ಲೇಡಿ ಲಮ್ಲೆ ಮತ್ತು ಎ. ಡಿ. ಸಿ. ಯರೊಡನೆ ಸಭಾಸ್ಥಾನಕ್ಕೆ ಆಗಮಿಸಿದರು. ಜನರೆಲ್ಲರೂ ಎದ್ದುನಿಂತು ಅವರನ್ನು ಸ್ವಾಗತಿಸಿದರು. ಎಲ್ಲರಿಗೂ ಕೇಳಿಸಲೆಂದು ಧ್ವನಿವಾಹಕದ ವ್ಯವಸ್ಥೆ ಮಾಡಲಾಗಿತ್ತು. ಸುಮಾರು ೨-೩ ಸಾವಿರ ಜನರು ನೆರೆದಿದ್ದರು. ಸಭಾಸ್ಥಾನದ ಹೊರಗಿನ ಕಮಾನಿನ ಮೇಲೆ ಯುನಿಯನ್ ಜಾಕ್ ಮತ್ತು ಖಾದಿ ಹಾಗು ಗ್ರಾಮೋದ್ಯೋಗ ಪ್ರದರ್ಶನದ ವಿಭಾಗದಲ್ಲಿ ಮೂರು ಬಣ್ಣದ ರಾಷ್ಟ್ರೀಯ ಧ್ವಜಗಳು ಕಂಗೊಳಿಸುತ್ತಿದ್ದವು.

ಮೊದಲು ಉಪಾಧ್ಯಕ್ಷರಾದ ನಾ. ಮುರಾರಜಿಯವರು ಗವ್ಹರ್ನರರಿಗೆ ಪ್ರದರ್ಶನವನ್ನು ತೆರೆಯಲು ವಿನಂತಿ ಮಾಡಿಕೊಳ್ಳುವಾಗ ಒಂದು ಚಿಕ್ಕ ಭಾಷಣಮಾಡಿದರು. ಅದೇನೆಂದರೆ—

ಕಾಂಗ್ರೆಸದವರು ಮಂತ್ರಿಪದ ಸ್ವೀಕರಿಸಿದ ಕೂಡಲೆ ನಮ್ಮಲ್ಲಿ ಕೆಲವರು ಪ್ರದರ್ಶನವನ್ನು ನಿಲ್ಲಿಸಿಬಿಡಬೇಕೆಂಬ ಅಭಿಪ್ರಾಯವುಳ್ಳವರಿದ್ದರು. ಆದರೆ ನಾನು ಅದನ್ನು ವಿರೋಧಿಸಿ ಪ್ರದರ್ಶನಗಳಿಂದ ರೈತರಿಗೆ ಕಲ್ಯಾಣವಾಗುತ್ತದೆ. ಅದರ ಉಪಯೋಗವನ್ನು ಮಾಡಿಕೊಳ್ಳುವದು ಜನರ ಕೈಯಲ್ಲಿದೆ. ಸುಧಾರಿಸಿದ ಉಪಾಯಗಳನ್ನು

ರೈತರಿಗೆ ಅವನ ಅಳವಿನಲ್ಲಿಯೇ ಆಗುವಂತೆ ಕಲಿಸುವದು ನಮ್ಮ ಕರ್ತವ್ಯವಿದೆ.

ನಾವು ಕೆವಲ ಹಳ್ಳಿಯವರದೇ ಚಿಂತೆ ಮಾಡುತ್ತೇವೆಂದು ಅನ್ನುತ್ತಾರೆ. ಇದು ನಿಜವಿದೆ. ಹಿಂದುಸ್ಥಾನದಲ್ಲಿ ನೂರಕ್ಕೆ ೭೦ ರಷ್ಟು ಜನರು ಒಕ್ಕಲತನದ ಮೇಲೆ ಅವಲಂಬಿಸಿದವರಿದ್ದಾರೆ. ಅವರು ಬಹಳ ನಿಕೃಷ್ಟ ವಸ್ಥೆಯಲ್ಲಿರುವರೆಂಬದಕ್ಕೆ ಮತಭೇದವೇ ಇಲ್ಲ. ಈ ಕಾಲಕ್ಕೆ ಅವರಿಗೆ ಸಹಾಯ ಮಾಡದಿದ್ದರೆ ಅವರನ್ನು ಮೊದಲಿನ ಸ್ಥಿತಿಗೆ ತರಲು ದುಸ್ಸಾಧ್ಯವಾಗುವದು. ಮೇಲಾಗಿ ಈಗಿನ ಸರಕಾರದ ಕಂದಾಯದ ಬಹು ದೊಡ್ಡ ಭಾಗವು ಹಳ್ಳಿಗಳಿಂದಲೇ ಬರುತ್ತದೆ ಹೀಗಿದ್ದೂ ಇಷ್ಟು ದಿವಸಗಳ ವರೆಗೆ ಪಟ್ಟಣಗಳಿಗೆ ಹೆಚ್ಚು ಖರ್ಚು ಮಾಡುತ್ತ ಬಂದಿದ್ದಾರೆ. ಈಗ ನಾವು ಹಳ್ಳಿಗಳ ಕಡೆಗೆ ಹೆಚ್ಚು ಲಕ್ಷ ಕೊಡಲೇಬೇಕಾಗಿದೆ. ಈ ಪ್ರದರ್ಶನವನ್ನು ನೋಡಲು ಬಂದ ರೈತರು ಏನಾದರೂ ಹೆಚ್ಚಿಗೆ ಕಲಿತು ಹೋದಾರೆಂದು ಆಶಿಸಿ ನೇ. ನಾ. ಗವ್ಹರ್ನರಸಾಹೇಬರಿಗೆ ಪ್ರದರ್ಶನವನ್ನು ತೆರೆಯಲು ವಿನಂತಿ ಮಾಡಿಕೊಳ್ಳುತ್ತೇನೆ.

### ನೇ. ನಾ. ಗವ್ಹರ್ನರರು.

ನೇ. ನಾ. ಗವ್ಹರ್ನರಸಾಹೇಬರು ಪ್ರದರ್ಶನವನ್ನು ತೆರೆಯುತ್ತ ಈ ರೀತಿ ಹೇಳಿದರು—

ಈ ಪ್ರದರ್ಶನವು ನಮ್ಮ ಇಲಾಖೆಯ ದಕ್ಷಿಣಭಾಗದಲ್ಲಿ ಇದೇ ಮೊದಲನೆಯದು. ಇದರಲ್ಲಿ ಎರಡು ದೊಡ್ಡ ಭಾಗಗಳಿದ್ದು ಮೊದಲನೆಯದು ಪ್ರಾಯೋಗಿಕ ಮತ್ತು ಕೃಷಿಕ. ಇದನ್ನು ನೋಡಿದವರಿಗೆ ಚನ್ನಾಗಿ ಬೋಧವಾಗುವಂತಿದೆ. ನಾನು ಇದೀಗ ನೋಡಿ ಬಂದಿದ್ದೇನೆ ಈಭಾಗದಲ್ಲಿ ಪೂರ್ವಭಾಗದ ಎರಿ ಭೂಮಿಯವರು ಎಷ್ಟೋ ತಿಳಿದುಕೊಳ್ಳುವಂತಿದೆ. ಇನ್ನು ಪಶ್ಚಿಮಭಾಗದ್ದು ಗುಡ್ಡಗಾಡು ಹೊಲದವರು ಹೆಂದಿ ಮೊದಲಾದ ಕಾಮೃಗಗಳಿಂದ ರಕ್ಷಿಸಿಕೊಳ್ಳಲು ಹೇಗೆ ಬಲೆಗಳಹಾಕತಕ್ಕದ್ದು ಮೊದಲಾದದ್ದನ್ನು ಕಾಣಬಹುದು.

ಈ ಪ್ರದರ್ಶನದ ಯಶಸ್ಸಿಗೆ ಸರಕಾರಿ ಜನರ ಸರಕಾರೇತರ ಜನರೂ ಮನಮುಟ್ಟಿ ಸಹಾಯ ಮಾಡಿ ಕಾರಣವಾಗಿದೆ. ಅವರಿಗೆ ನನ್ನ ಅಭಿನಂದನೆಗಳು ಎಂ ಹೇಳಿ ಪ್ರದರ್ಶನದ ಉದ್ಘಾಟನವಾಯಿತೆಂದು ಜಾಹಿ ಮಾಡಿ ತಮ್ಮ ಭಾಷಣ ಮುಗಿಸಿದರು.

ಆ ನಂತರ ಶ್ರೀ. ನಿರಡಿಯವರು ಅವರ ಭಾಷಣ ಅನುವಾದವನ್ನು ಕನ್ನಡದಲ್ಲಿ ಓದಿ ಹೇಳಿದರು. ಮೇಲೆ ಪ್ರಮುಖ ಜನರ ಪರಿಚಯ ಮಾಡಿಕೊಂ ಎಲ್ಲರೂ ಪ್ರದರ್ಶನವನ್ನು ನೋಡಲು ಹೋದರ ನೇ. ನಾ. ಗವ್ಹರ್ನರಸಾಹೇಬರು ಖಾದಿ ಮತ್ತು ಗ್ರಾಮೆ. ದ್ಯೋಗ ಪ್ರದರ್ಶನಕ್ಕೆ ಹೋಗಲಿಲ್ಲ. ನಾ. ಮುಧಾ ದೇಸಾಯಿಯವರು ಮಾತ್ರ ಪ್ರತಿಯೊಂದು ಕಡೆಗೆ ತಿ ಗಾಡಿ ಎಲ್ಲವನ್ನು ವಿಚಾರಿಸಿಕೊಂಡು ಹೋದರು. ಪ್ರಾ ಪ್ರದರ್ಶನದಲ್ಲಿ ಕರ್ನಾಟಕದಲ್ಲಿಯ ಗದ್ವಾಲದ ಧೋ ರವನ್ನು ಕೊಂಡುಕೊಂಡದ್ದಲ್ಲದೆ ಬೆಳಗಾವಿಯಲ್ಲಿ ಯಂ ಯವರು ತಯಾರಿಸುತ್ತಿರುವ ಶುದ್ಧ ಸ್ವದೇಶಿರ ಫೌಂಟನ್‌ಪೆನ್ನು ಕೊಂಡುಕೊಂಡರು.

### ಕರ್ನಾಟಕ ನಕಾಶೆಯ ಸಮರ್ಪಣೆ.

ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಲೆಗ ನಕಾಶೆಯನ್ನು ರೇಶಿಮೆಯ್ವವಸ್ತ್ರದ ಮೇಲೆ ಏರೋಗ್ರಾ ದಿಂದ ಶ್ರೀ. ತೆಂಡೂಲಕರರು ತಯಾರಿಸಿದ್ದನ್ನು ಶ್ರೀ ವ್ಹಿ. ಎಸ್. ಕುಲಕರ್ಣಿ ಕಾರ್ಯದರ್ಶಿಗಳು ನ ದೇಸಾಯಿಯವರಿಗೆ ಕೊಟ್ಟರು. ರಾತ್ರಿ ಗಾಡಿಯಿಂ ಮಂತ್ರಿಗಳು ಮುಂಬಯಿಗೆ ಹೋದರು.

---

ಕಥಾಕುಂಜದ ಚಂದಾಹಣ ಕೂಡಲೇ ಕಳಿಸಿರಿ!

# ಕರ್ನಾಟಕ ಒಕ್ಕಲತನದ ಪ್ರದರ್ಶನದಲ್ಲಿಯ ಒಕ್ಕಲಿಗನ ಅನುಭವ

**ಬಸಪ್ಪ:**—ಏನೋ ಕಲ್ಲಾ ನಿನ್ನಿನ ದಿವಸ ನೀನು ಬೆಳಗಾವಿಯಲ್ಲಿಯ ಶೇತ್ಕಿ ಪ್ರದರ್ಶನವನ್ನು ನೋಡಲು ಹೋಗಿದ್ದಿಯಂತೆ. ಅಲ್ಲಿ ಏನೇನು ನೋಡಿದಿಯೋ ?

**ಕಲ್ಲ:**—ಅಲ್ಲಿ ಏನದೆಯೆಂಬದನ್ನು ಸ್ವಲ್ಪದರಲ್ಲಿ ಹೇಳಲು ಶಕ್ಯವಿಲ್ಲ. ಅದನ್ನು ಕೇವಲ ನೋಡುತ್ತ ಹೋದರೆ ಏನೂ ತಿಳಿಯದು. ಅಲ್ಲಿ ಅಭ್ಯಾಸ ಮಾಡುವವ ನಿಗೆ ನಿದಾನ ಎರಡು ಮೂರು ಸಾರೆ ಸೂಕ್ಷ್ಮರೀತಿಯಿಂದ ನೋಡಿದರೆ ರೈತನ ಕಲ್ಯಾಣದ್ದು ಬೇಕಾದಷ್ಟಿದೆ. ಇದ ನ್ನೇನು ಮೊದಲಿನ ಸರಕಾರದವರು ಮಾಡಿದ್ದಾರೆಯೋ? ಇದು ಕಾಂಗ್ರೆಸ ಸರಕಾರದ ನೇತೃತ್ವದ ಕೆಳಗೆ ನಡೆದಿದೆ ಗೊತ್ತಿಲ್ಲವೇ? ಖಾದಿಯ ಭಾಗದಲ್ಲಿ ದೊಡ್ಡದೊಂದು ಮೂರು ಬಣ್ಣದ ನಿಶಾನೆಯು ಕಂಗೊಳಿಸುತ್ತದೆ. ಅದರ ಭಾರವೆಲ್ಲ ನಮ್ಮ ಕಾಂಗ್ರೆಸ ಮುಂದಾಳುಗಳ ಮೇಲೆಯೇ. ಧಮ್ಮ. ದೇ. ಭ. ಹಣಮಂತರಾವ ಕೌಜಲಗಿಯವರ ನೇತೃತ್ವದ ಕೆಳಗೆ ಶ್ರೀ. ವಾಮನರಾವ ಬಿದರಿಯವರು ಹಗಲು ರಾತ್ರಿ ದುಡಿದು ಆ ಭಾಗದ ಏರ್ಪಾಡು ಮಾಡಿ ದ್ದಾರಂತೆ!

ಅದರಂತೆ ರಾ. ಬ. ಸಾಲೀಮಠಸಾಹೇಬರೂ ತಮ್ಮ ಸಹಕಾರಿಗಳೊಡನೆ ಇತರ ಔದ್ಯೋಗಿಕ, ಒಕ್ಕಲತನ ಖಾತೆಯವರ ಸಹಾಯದಿಂದ ಎಲ್ಲ ಕೆಲಸವನ್ನು ಮಾಡಿ ದ್ದಾರೆ. ಇದಲ್ಲದೆ ನಾ. ಮುರಾರಜಿಯವರು ಮೊದಲನೇ ದಿವಸ ಪ್ರಾರಂಭೋತ್ಸವದ ಕಾಲಕ್ಕೆ ಹಿಂದಿನ ಪ್ರದರ್ಶನ ಗಳು ಏನೇ ಆಗಿದ್ದರೂ ಈ ಪ್ರದರ್ಶನವನ್ನು ರೈತರಿಗೆ ಒಳ್ಳೇ ಹಿತಕಾರಿಯಾಗುವಂತೆ ಮಾಡಿಯೇ ತೋರಿಸುತ್ತೇ ವೆಂದು ಹೇಳಿದ್ದು ಅಕ್ಷರಶಃ ನಿಜವದೆ. ಪ್ರತಿಯೊಂದು ಸ್ಟಾಲಿನ ಮೇಲೆ ತಿಳಿಸಿ ಹೇಳುವವರೆಲ್ಲ ರೈತರು ಸುಶಿ ಕ್ಷಿತರು ಅಶಿಕ್ಷಿತರೆನ್ನದೆ ತಮ್ಮ ಯಾವತ್ತೂ ಕೆಲಸಗಳ ಬಗ್ಗೆ ಚನ್ನಾಗಿ ತಿಳಿಸಿ ಹೇಳುತ್ತಿದ್ದರು. ಯಾರಾದರೇನು ಮೇಲಿನವರು ಹೇಳಿದ ಮೇಲೆ ತಿಳಿಸಿ ಹೇಳಬೇಡವೇ !

**ಬಸಪ್ಪ:**—ಹಾಗಾದರೆ ಆ ಪ್ರದರ್ಶನದ ಬಗ್ಗೆ ನೀನು ಏನೇನು ನೋಡಿಬಂದಿ ? ಅದರಲ್ಲಿ ರೈತರಿಗೆ ಉಪಯೋಗ ಗಳೆಷ್ಟು ಎಂಬದನ್ನು ಸ್ವಲ್ಪದರಲ್ಲಿಯೇ ಹೇಳುತ್ತೀಯಾ?

ಕಲ್ಲಪ್ಪ—ಕೇಳು ಹಾಗಾದರೆ, ಈ ಪ್ರದರ್ಶನವನ್ನು ಬೆಳಗಾವಿಯ ಲಷ್ಕರ ಹದ್ದಿಯಲ್ಲಿ ರಾಣೀ ತೋಟವಿದೆ ಯಲ್ಲ, ಅಲ್ಲಿ ಮತ್ತು ಅದರ ಎದುರಿಗಿನ ಸರಕಾರಿ ದನಗಳ ಡೇರಿಯ ಬಾಜುಕ್ಕೆ ಹೊಂದಿದ ವಿಸ್ತಾರವಾದ ಸ್ಥಳದಲ್ಲಿ ಮಂಡಿಸಿದ್ದಾರೆ. ನಡುವೆ ಬೀದಿಯ ಮೇಲೆ ಚಚ್ಚೌಕ ಮಂಟಪ ಹಾಕಿದ್ದು ಅಲ್ಲಿಯೇ ಪ್ರದರ್ಶನದ ಹೆಬ್ಬಾಗಿಲ ವದೆ. ಅದರ ಮೇಲೆ ನಮ್ಮ ಜೀವಾಳವಾದ ಎತ್ತು ಆಕಳಗಳ ಚಿತ್ರಗಳಿದ್ದು ಎಡಬಲಕ್ಕೆ ಒಕ್ಕಲಗಿತ್ತಿಯ ಮತ್ತು ಒಕ್ಕಲಿಗನ ಚಿತ್ರಗಳಿವೆ. ನಡುವೆ ಹಿಂದಮಾತೆಯ ಚಿತ್ರವಿದ್ದು ಮೇಲೆ ನಮ್ಮ ಬಾದಶಹಾ ಸರಕಾರದ ಗುರುತು ಇದೆ.

ಈ ಬಾಗಿಲದಿಂದಲೇ ಒಳಗೆ ಹೋದೆವು. ನಾವು ಮೊದಲೇ ಸರಕಾರದವರಿಂದ ಪಾಸು ತಕ್ಕೊಂಡದ್ದರಿಂದ ನಮಗೆ ತಿಕೀಟು ಕೇಳಲಿಲ್ಲ. ಉಳಿದವರಿಗೆ ಒಳಗೆ ಹೋಗಬೇಕಾ ದರೆ ೪ ದುಡ್ಡು ರೊಕ್ಕಾ ಕೊಟ್ಟು ಹೋಗಬೇಕಾಗು ತ್ತಿತ್ತು. ಇದೇನು ದೊಡ್ಡ ಹಣಾ ಅಲ್ಲಾ ಆದರೆ ಪುಕ್ಕಟೆ ಇಟ್ಟರೆ ಸಿಕ್ಕವರು ಸಿಕ್ಕಷ್ಟು ಸಾರೆ ಹೋಗಿ ಗದ್ದಲ ಹಾಕುತ್ತಾರೆಂದು ಇಟ್ಟಿದ್ದರಂತೆ. ಆದರೆ ನಾವು ಸರಕಾರೀ ಪಾಸು ತಕ್ಕೊಂಡದ್ದರಿಂದ ನಮಗೆ ಎರಡು ದಿವಸ ಬೇಕಾದಷ್ಟು ಸಾರೆ ನೋಡಿ ಬಂದು ಅದರ ಟಪ್ಪಣಿ ತೆಗೆದುಕೊಳ್ಳಲು ಸಹಾಯವಾಯಿತು. ಇಲ್ಲದಿ ದ್ದರೆ, ಒಮ್ಮೇ ನೋಡಿದರೆ ಏನೂ ತಿಳಿಯುವದಿಲ್ಲ ಮತ್ತು ಅವನ್ನು ನೆನಪಿನಲ್ಲಿಡಲು ಸಹ ಶಕ್ಯವಿಲ್ಲ ನೋಡು.

ಅಲ್ಲಿಂದ ನಾವು ಮೊದಲು ಎಡಗಡೆಗೆ ಅಂದರೆ ಆ. ಭಾಗದಲ್ಲಿ ನೋಡಲು ಹೋದೆವು. ಅಲ್ಲಿ ಹೋದ ಕೂಡಲೇ ಮೊದಲು ನಮ್ಮ ಪ್ರೀತಿಯ ದನಗಳ ಹಿಂಡು ಕಂಡಿತು. ಅಲ್ಲಿ ಕೃಷ್ಣಾ ತೀರದ ದನಕರುಗಳೂ ಅಮೃತ ಮಹಾಲ ದನಕರುಗಳೂ ಖಿಲಾರಿ ದನಗಳೂ ಆನೆ ಯಂತಹ ದೊಡ್ಡ ದೊಡ್ಡ ಕೋಣಗಳೂ ಎಮ್ಮೆಗಳೂ ಕಾಣಿಸುತ್ತಿದ್ದವು. ಅವನ್ನು ನೋಡಿದರೇನೇ ತಿಳಿಯುವ ದಲ್ಲದೆ ಕೇವಲ ವರ್ಣನೆಯಿಂದ ಮಾತ್ರ ನಿನಗೆ ತಿಳಿಸು

ವದು ಕಠಿಣ. ಇನ್ನೊಂದು ಹೆಚ್ಚಿನ ಮಾತೆಂದರೆ ಕರೀ ಹೊಳೆಯ ಹೋರಿ ಸಾಕಿದ್ದಕ್ಕೆ ನಮ್ಮ ಬೆಳಗಾವಿ ಹತ್ತರ ಇದ್ದ ಕುಡಚಿಯವನಿಗೇ ಮೊದಲನೇ ನಂಬರ ಸಿಕ್ಕಿತಂತೆ. ಏನು ಎತ್ತೆಪಾ ಅದು. ಹಿಡಿದರೆ ಮಾಸಬೇಕು ನೋಡು! ಇದರ ಹೊರತು ಕೊಲ್ಹಾಪೂರ ಮತ್ತು ಸಾಂಗಲೀ ಸರಕಾರದವರು ಕಳಿಸಿದ ದನಗಳು ನೋಡುವಂತಿದ್ದವು. ಅದನ್ನು ನೋಡಿಕೊಂಡು ಮುಂದೆ ಬಲ ಗಡೆಗೆ ಹೋದರೆ ನಾಯಿಯ ಪ್ರದರ್ಶನವಿತ್ತು. ಅಲ್ಲಿ ಬೇಟೆಯ ನಾಯಿ, ಸಾಕುನಾಯಿ ಕಾವಲ ನಾಯಿ ಮೊದಲಾದ ೩-೪ ತರದ ನೂರಾರು ನಾಯಿಗಳಿದ್ದವು. ಅವುಗಳಲ್ಲಿ ೨೬ ನಾಯಿಗಳಿಗೆ ಇನಾಂ ಕೊಟ್ಟರಂತೆ. ಅದರ ಹತ್ತಿರವೇ ತಾತ್ಪೂರ್ತಿಕ ದವಾಖಾನೆ ಇತ್ತು.

## ಬೆಳೆಗಳ ಮೇಲಾಟದ ವಿಭಾಗ.

ಮುಂದೆ ಬೆಳೆಗಳ ಮೇಲಾಟದ ಭಾಗವನ್ನು ನೋಡಲು ಹೋದೆವು. ಇಲ್ಲಿ ನಮ್ಮ ಕರ್ನಾಟಕದಲ್ಲಿ ಹುಟ್ಟುವ ಯಾವತ್ತೂ ತರದ ತೋಟದಲ್ಲಿ ಬೆಳೆಯುವ ಭಾಗ ಒತ್ತಟ್ಟಿಗೆ ಮತ್ತು ಹೊಲದಲ್ಲಿ ಬೆಳೆಯುವ ಭಾಗ ಒತ್ತಟ್ಟಿಗೆ ಇಟ್ಟಿದ್ದರು. ಎಲ್ಲ ಧಾನ್ಯಗಳನ್ನೂ ಮುಚ್ಚಳಗಳಲ್ಲಿ ಹಾಕಿ ಚಂದಾಗಿ ಸಾಲು ಸಾಲಾಗಿ ಇಟ್ಟಿದ್ದರು. ಅಲ್ಲಿದ್ದ ಜೋಳದ, ಬತ್ತದ ರಾಗಿಯತೆನೆಗಳನ್ನು ನೋಡಿದರೆ ಬೊಟ್ಟು ಕಚ್ಚುವಂತಹವಿದ್ದವು. ನಿಪ್ಪಾಣಿಯ ಕಬ್ಬಂತೂ ತಂಬೂದ ಮೇಲೆ ೨ ಮಳಾಹಾಯ್ದಿತ್ತು ನೋಡು. ಕುಂಬಳಕಾಯಿಯಂತೂ ಒಂದು ಹರವಿಯಷ್ಟು ಇತ್ತು. ಜನರ ಗದ್ದಲ ಹೇಳುವದೆಂದರೆ ಏನು ಹೇಳಲಿ! ಬಾಯಲ್ಲಿ ಕೆಂದೂಳಿನ ಎಲ್ಲ ಸಂಣ ಸೂಸ ಮಂಣೇ ಬರುತ್ತಿತ್ತು. ದಿನಾಲು ೨-೩ ಸಾರೆ ನೀರು ಮೋಟಾರದಿಂದ ಹಾಕಿದರೂ ಜನ ಬಹಳಾದ್ದರಿಂದ ಮತ್ತೆ ಹುಡಿಯಾಗುತ್ತಿತ್ತು. ಅಷ್ಟರಲ್ಲಿ ಧೂಳಿನಿಂದ ನೀರಡಿಕೆಯಾಯಿತು. ಅಲ್ಲಿಯೇ ಸಮೀಪದಲ್ಲಿದ್ದ ನಳಕ್ಕೆ ಹೋಗಿ ನೀರು ಕುಡಿದೆವು.

## ಹೊಲದ ಸುಧಾರಣೆಯ ವಿಭಾಗ.

ಹೊಲಕ್ಕೆ ಹೇಗೆ ಒಡ್ಡು ಹಾಕಬೇಕು ಎಂಬದನ್ನು ನೋಡುವದಕ್ಕಾಗಿ ಅಲ್ಲಿ ಹೋದೆವು. ಅಲ್ಲಿ ಬೇರೆ ಬೇರೆ ತರದ ೯ ನಕಾಶಗಳನ್ನು ಕಟ್ಟೆಯ ಮೇಲೆ ಮಣ್ಣಿನಿಂದ ಮಾಡಿದ್ದರು. ಅದರಲ್ಲಿ ೮ ಒಕ್ಕಲತನಕ್ಕೆ ಸಂಬಂಧಿಸಿದವಿದ್ದು ೯ನೆಯದು ನಮ್ಮ ಮುಂಬಯಿ ಪ್ರಾಂತದಲ್ಲಿಯ ಕರ್ನಾಟಕ ಜಿಲ್ಲೆಗಳನ್ನು ಅವುಗಳ ನೆಲವು ಎತ್ತರವಿದ್ದ ಹಾಗೆ ಗುಡ್ಡಗಳನ್ನು ಮಾಡಿ ತೋರಿಸಿದ್ದರು. ಏನು ಹೇಳಲಿ ಇದನ್ನು ಯಾರಮಾಡಿದ್ದರೆಂದರೆ ನಮ್ಮ ಗೋಕಾಕ ಬೆಟಗೇರಿಯ ಹುದ್ದಾರ ಗೋಪಾಳರಾಯರು. ಅಲ್ಲಿ ಮಾತ್ರ ನಮಗೆ ಹೊಲ ಸುಧಾರಣೆಯನ್ನು ಹೇಗೆ ಮಾಡಬೇಕು. ಒಡ್ಡು ಹೇಗೆ ಹಾಕಬೇಕು ಹೊಳೆ ಹೇಗೆ ತರುಬಿ ನೆಲಮಾಡಿಕೊಳ್ಳಬೇಕು ಎಂಬದನ್ನು ಚನ್ನಾಗಿ ತಿಳಿಸಿದ್ದರು. ಮುಂದೆ ಬರಲು, ಅಲ್ಲಿ ಒಕ್ಕಲತನಕ್ಕೆ ಬೇಕಾಗುವ ಯಂತ್ರಸಾಮಗ್ರಿಗಳನ್ನಿಟ್ಟಿದ್ದರು. ಅದರಲ್ಲಿ ನೀರಿನ ಪಂಪು, ಹೆಂಟೆಕೊಡ್ಡ, ಗಾಳೀಬೀಸುವ ಯಂತ್ರ ಮೊದಲಾದವುಗಳಿದ್ದವು. ಈ ಭಾಗದಲ್ಲಿ ನಮಗೆ ಒಳ್ಳೇ ಉಪಯೋಗದ್ದೆಂದರೆ ಗುಂಡು ಹಾಕಿದ (ಬಾಲ್‌ಬೇ ಅರಿಂಗ) ಜಕಡಿಯ ಗಾಲಿ. ಅದು ಒಮ್ಮೆ ಕೈಹಚ್ಚಿದರೆ ೫-೬ ಸುತ್ತು ಸುತ್ತಿರುಗುತ್ತಿತ್ತು.

ಇಲ್ಲಿಂದ ಮುಂದೆ ಬಂದ ಮೇಲೆ ಜೋಳ ತುಳಿಸುವ ಕಣವಿತ್ತು. ಅಲ್ಲಿ ಜೋಳದ ತೆನೆಗಳನ್ನು ದನಗಳಿಂದ ತುಳಿಸದೇ ಒಂದು ಉಳುಕಿ ಹಂತಿ ಎಳಿಸುತ್ತಿದ್ದರು. ಅದರ ಹತ್ತಿರವೇ ಹೊಲದಲ್ಲಿ ಕಟ್ಟುವ ಮಾದರಿಯ ಮನೆಗಳನ್ನು ಕಟ್ಟಿದ್ದರು. ಅದರ ಹಿಂಬದಿಯಿಂದ ಹಾಯ್ದು ಕಬ್ಬಿನ ತೋಟದ ಕಡೆಗೆ ಹೋದೆವು. ಅಲ್ಲಿ ಬೇರೆ ಬೇರೆ ಜಾತಿಯ ಕಬ್ಬುಗಳನ್ನು ಹಚ್ಚಿದ್ದರು. ಅದರಸಂಗಡಲೇ ತೋಟದಲ್ಲಿ ಬೆಳೆಸಲು ಬರುವ ಅಲ್ಲ, (ಖಾರಗೆಣಸು) ಅರಿಶಿಣ, ಕ್ಯಾಬೀಜ, ನೌಲಕೋಲು, ಬಟಾಟೆ, ಮೂಲಂಗಿ ಮೊದಲಾದವುಗಳನ್ನು ಹಚ್ಚಿದ್ದರು. ಅವನ್ನೇನು ಹೇಳಬೇಕು ಬೆಳಗಾವಿಯ ಬೆಳೆಗಳೇ ಅವು! ಒಳ್ಳೇ ಅಂದವಾಗಿ ಬೆಳೆದಿದ್ದವು! ಅದರ ಹತ್ತಿರವೇ ಕಬ್ಬಿನ ರಸವನ್ನು ತೆಗೆಯುವ ಎರಡು ಗಾಣಗಳೂ ರಸವನ್ನು ಕುದಿಸುವದಕ್ಕಾಗಿ ಕಟ್ಟಿದ ಸುಧಾರಿಸಿದ ಒಲೆಯೂ ಇದ್ದವಲ್ಲದೇ ಅಲ್ಲಿಯೇ ಸಕ್ಕರೆಯನ್ನು ಮಾಡುವ ಯಂತ್ರವನ್ನು ಸಹ ಇಟ್ಟು ಸಕ್ಕರೆಯನ್ನು ಮಾಡಿ ತೋರಿಸುತ್ತಿದ್ದರು.

## ಸಸ್ಯಶಾಸ್ತ್ರ ಸಂಶೋಧನೆ.

ಅಲ್ಲಿಂದ ತಿರುಗಿ ಬರುವಾಗ ಸಸ್ಯಶಾಸ್ತ್ರ ಸಂಶೋಧನೆಯವರ ಭಾಗವಿತ್ತು. ಅಲ್ಲಿ ಬೀಜಗಳನ್ನು ಹೇಗೆ ತವಾಸ ಮಾಡಬೇಕು ಮತ್ತು ಹೊಲಗಳಿಗೆ ಯಾವತರದ ಬೇಲಿ

740

ಶ್ರೀ ಗಜಾನನ ಪುಸ್ತಕ ಭಂಡಾರ
ಹರಿಹರಪುರ ಪೋಸ್ಟ್
(ಕೊಪ್ಪ ಕಡೂರು)
ಬಿ ಸ ಳಿ

೧೯೩೮ ಜೂನ್. ಸಂಚಿಕೆ ೨.

# ರವೀಂದ್ರನಾಥ ಠಾಕೂರ್

ಉತ್ತು ನೇಗಿಲಿನಿಂದ ಸಾಹಿತ್ಯತೋಟವನು-
ತರುಗುಲ್ಮ ಲತೆಗಳಿಂ ಸಿಂಗರಿಸಿದೆಯೊ, ಬಂಧು.
ಗಣ್ಯ ನೋಬಲ್ ಪಾರಿತೋಷ ಮಿಸುನಿಯ ತಂದು,
ವಂಗ ವಾಣಿಯ ಮುಡಿಗೆ ತೊಡಿಸಿದೆ ಕಿರೀಟವನು,
ನಿನ್ನ ಕಾವ್ಯಾಮೃತದ ಎದೆಹೊಬ್ಬದೂಟವನು
ಸವಿದಿಳೆಯೆ ನಮ್ಮ ಹೊಗಳಿತೊ ಮಾನ್ಯ. ಭಾರತಿಯೆ
ಪುಣ್ಯ ಗಭ್ಯದ ಹಿರಿಮೆ ನಿನ್ನಂಥ ಕವಿ ಪತಿಯ
ಬಹುಕಾಲದಿಂದ ಗೊನೆ ಬಿಡಲಿಲ್ಲ. ಹೇ ರವಿಯೆ,
ನಿನ್ನ ಹೃದಯದ ಸೊಬಗಿಗೆಣೆಯಾಗಿರುವುದೊಡಲು
ರನ್ನದುದರದ ರಮ್ಯ ಕಡಲಂತೆ. ಓ ಕವಿಯೆ,
ಯಂತ್ರಯುಗದೆಮ್ಮ ಮತಿ ನೈಷಮ್ಯದಿಂ ಕೆಡಲು
ವಿಶ್ವ ಮೈತ್ರಿಯ ಪಥವ ತೋರಿದೈ. ಗರಿಬಿಡಲು
ಆತ್ಮ ಶಿಖಿ, ನಾಡ ಪ್ರತಿನಿಧಿಯಾಯ್ತು ನಿನ್ನ ನಲ್ನಾಡು.
ತಬ್ಬುತಿವೆ ನಿನ್ನ ಪುಣ್ಯಾಶ್ರಮದಿ ಪಡುವ ಮೇಣ್ನಾಡು.

ಶ್ರೀ॥ ಮೂರ್ತಿ, ಎಂ.ಎ., ಬಿ.ಎ

# ಸಂಸಾರಿಯ ಸುಖದ ಬೆಲೆ

[ಶ್ರೀ ॥ 'ಆನಂದಕಂದ' ಧಾರವಾಡ]

೨

ನೆಟ್ಟಿಯ ಮನೆ ಸುಲಿಗೆಯಾಯ್ತು
ಮನೆಯಲ್ಲಿದ್ದುದೆಲ್ಲ ಹೋಯ್ತು
ಬಡಿದುಕೊಂಡು ಅತ್ತ ನೆಟ್ಟಿ ಬಾಯ್ಗೆ ಡೊಳ್ಳಿಗೆ
ನಡೆದನಂದೆ ನಗರ ಬಿಟ್ಟು ತನ್ನ ಹಳ್ಳಿಗೆ !

'ಬಸ್ಸು'ಗಳಲಿ ಅಂದು ಜಿದ್ದು;
ನೆಟ್ಟಿಬರಲು ತಟ್ಟನೆದ್ದು-
ಓಡಿ ಬಳಿಗೆ ಹೋದನೊಬ್ಬ 'ಬಸ್ಸೆಜಂಟ
ಕಾಡಿ ಕಾಡಿ ಕೊನೆಗೆ ಸೆಳೆದ ಕೈಯ ಗಂಟ

೩

ಐದಾಣೆಯ ದರವು ಗೊತ್ತು
ನೆಟ್ಟಿ ಅಂದು ಅರ್ಧ ತೆತ್ತು
ಹತ್ತುಬಿಲ್ಲಿ ಉಳಿದುವೆಂದು ಹಿಗ್ಗ ತಳೆದನು.
ಕಳೆದ ಹಣದ ವ್ಯಥೆಯ ಗಳಿಗೆ ಮರೆತೆ ಕುಳಿತನು

---

# ಜಾ ತಿ

[ಶ್ರೀ॥ ಮೂರ್ತಿ ಎಂ.ಎ., ಬಿ ಟಿ.]

ನೋಡೆನಿತು ಕೀಳಾಗಿ ಕಾಣುತಿಹುದೀ ಮಂದಿ
ನಮ್ಮ ಹರಿಜನ ಬಂಧುಗಳನಿಂದು ಹೇ ಮಿತ್ರ.
ಇವರ ಪಾಲಿಗೆ ಹರಿಜನರು ಹೊಲಸೊಳಿಹ ಹಂದಿ.
ನರನ ಮುಟ್ಟದಿರೆಂಬ ಮಾತಿದೇನು ವಿಚಿತ್ರ !
ಸೋದರರು ದೇವ ದರ್ಶನಕೆಂದು ಬೇಗುಲಕೆ
ಬರಲೀಂ ? ಕಳಂಕ ಬಹುದಂತೆ ಮಂದಿಯ ಕಲಕೆ !
ನಮ್ಮ ಮತವಿಂತು ನಾರುವ ಕೆಸರ ಕೆರೆಯಾಯ್ತೆ !
ಜಗವೆಲ್ಲ ಒಂದೆಂಬ ತತ್ತ್ವವೇಂ ಮರೆಯಾಯ್ತೆ !
ತಿಳಿದು ನೋಡಲು, ಗೆಳೆಯ, ಏನಿಹುದು ಜಾತಿಯಲಿ ?
ಸಕಲವೂ ನಿಂತಿಹುದು ಮಾನವನ ನೀತಿಯಲಿ.
ಕೋಗಿಲೆಯನಾದರಿಪುದದರ ಸವಿ ಕಲಿಗಾಗಿ.
ಗುಣವ ಗಣಿಸದ ಹುಟ್ಟನಿಂದಳೆಯುವುದ ನೀಗಿ
ಇನ್ನಾದರೂ ಮಂಕುಜನ ನಡುವುದೇ ಖೇದ ?
ಸಮತೆ ಭಾವವು ಬರಲಿ. ಸಾಕು ನಮಗೀ ಭೇದ.

---

740

# ತುರ್ಕಸ್ತಾನದ ಸ್ತ್ರೀಯರು

[ಶ್ರೀಮತಿ ಶಾಂತಾಬಾಯಿ ಮಾಳವಾಡ, ಧಾರವಾಡ.]

ಹೊಂದುವುದು ಮಾನವನ ಸ್ವಭಾವ. ಲದಿಂದಲೂ ಇಂದಿನ ವರೆಗೆ ಮನುಷ್ಯ-ರಿವರ್ತನೆಗಳಾಗುತ್ತ ಬಂದಿವೆ. ಈಗಲೂ ಮಾಜದಲ್ಲಿ ಅನೇಕ ಬದಲಾವಣೆಗಳೂ ೂ ಆಗುತ್ತಲಿವೆ. ಮನುಷ್ಯ ಸಮಾಜದ ಗವಾದ ಸ್ತ್ರೀ ಸಮಾಜದಲ್ಲಿಯೂ ಅನೇಕ ಳು ಕಾಣಬರತೊಡಗಿವೆ. ಆದರೆ ಹಿಂದೂ-ಅದರಲ್ಲೂ ಕರ್ನಾಟಕದಲ್ಲಿ--ಸುಧಾರಣೆಯು ಕಂಡುಬರುವುದಿಲ್ಲ. ಇದಕ್ಕೆ ಕಾರಣ-ನಾವು ಕೂಪ-ಮಂಡೂಕ ವೃತ್ತಿಯವರಾಗಿ ಯಿಲ್ಲದೆ ಇರುವವರಾಗಿದ್ದೇವೆ. ಜಗತ್ತಿನ ಸ್ಥಿರೆದು ನೋಡುತ್ತಿರುವುದಿಲ್ಲ. ಸ್ತ್ರೀಯರು ಯಾವ ರೀತಿ ಸುಧಾರಣೆ ಹೊಂದುತ್ತಿರುವ-ಅವರಿಗೆ ಗೊತ್ತಾಗುವುದು. ನಾವು ಯಾವ ಸುಧಾರಣೆ ಹೊಂದಬೇಕಾಗಿದೆಯೆನ್ನುವುದೂ ಲ್ಲದು. ಉದಾಹರಣಾರ್ಥವಾಗಿ ತುರ್ಕಸ್ತಾನದ ಕಡೆಗೆ ನಾವು ನೋಡೋಣ.

ತ್ತನೆಯ ಶತಮಾನದ ಪ್ರಾರಂಭದ ವರೆಗೆ ನದ ಸ್ತ್ರೀಯರನ್ನು ನೋಡುವುದು ದುರ್ಲಭ-ತು. ಪರಿಚಯ ಮಾಡಿಕೊಳ್ಳುವ ಮಾತಂತೂ ಉಳಿಯಿತು. ಅವರು ಹೆಚ್ಚು ಕಾಲ ಮನೆ-ಯೇ ಇರುತ್ತಿದ್ದರು. ಮನೆಯಿಂದ ಎಲ್ಲಿಗಾದರೂ ಹೋಗಬೇಕಾದುದು ಇದ್ದಲ್ಲಿ ಮುಖದ ಮುಂದೆ ಯನ್ನು ಇಳಿಬಿಟ್ಟುಕೊಂಡಾಗಲೀ ಪೂರ್ತಿಯಾಗಿ ಂತೆ ಮುಸುಕನ್ನು ಹಾಕಿಕೊಂಡಾಗಲೀ ಗಬೇಕಾಗುತ್ತಿದ್ದಿತು. ಸ್ತ್ರೀಯರು ಎಲ್ಲಿ ಕನ್ನು ತೆರೆದು ನೋಡುವರೋ ಎಂದು ಒಬ್ಬ ನು ಅವರ ಬೆನ್ನು ಬೀಳುತ್ತಿದ್ದನು. ದಾರಿಯಲ್ಲಿ ಪುರುಷನೊಂದಿಗೆ ಮಾತನಾಡುವುದಂತೂ ಸಾಧ್ಯವೇ ಇರಲಿಲ್ಲ.

ಸ್ತ್ರೀಯರೂ ಮಾನವರು. ಜಗತ್ತನ್ನು ನೋಡ-ಬೇಕೆಂಬ ಆಸೆಯು ಅವರಿಗೂ ಇದೆ. ಈ ಮುಸುಕಿನ ರೀತಿಯನ್ನು ಕಿತ್ತು ಹಾಕಬೇಕೆಂಬ ಆಕಾಂಕ್ಷೆಯು ತುರ್ಕಸ್ತಾನದ ಸ್ತ್ರೀಯರಲ್ಲಿ ಮೂಡಿದ ಮೇಲೆ ಅವರು ಕಾರ್ಯಪ್ರವೃತ್ತರಾದರು. ಮುಸುಕಿನ ಪದ್ಧತಿಯನ್ನು ಕಿತ್ತುಹಾಕಿದರು. ದಿನದಿನಕ್ಕೆ ಅವರಲ್ಲಿ ವಿಚಾರಕ್ರಾಂತಿ ಯುಂಟಾಗಿ ರಾಜಕ್ರಾಂತಿಯೂ ಆಯಿತು. ೧೯೦೮ರಲ್ಲಿ ಸುಲ್ತಾನ್ ಅಬ್ದುಲ್ ಹಮಿದನನ್ನು ಪದಚ್ಯುತ ಮಾಡಿ ಪ್ರಜಾಧಿಕಾರವು ಪ್ರಾರಂಭವಾದ ಮೇಲೆ ತುರ್ಕಸ್ತಾನದ ಸ್ತ್ರೀಯರಲ್ಲಿ ಮತ್ತಿಷ್ಟು ಜಾಗೃತಿಯು ಆಗಲಾರಂಭಿಸಿತು. ಅನೇಕ ಸ್ತ್ರೀ ಲೇಖಿಕೆಯರ ಜನ್ಮವೂ ಆಯಿತು. ಸ್ತ್ರೀಯರು ಸಾಮಾಜಿಕ ಕ್ಷೇತ್ರ-ಗಳಲ್ಲಿಯೂ ರಾಜಕೀಯ ಕ್ಷೇತ್ರಗಳಲ್ಲಿಯೂ ಭಾಗ-ವಹಿಸಲಾರಂಭಿಸಿದರು.

೧೯೧೧ರಲ್ಲಿ ಕಾನಸ್ಟಂಟಿನೋಪಲಿನಲ್ಲಿ ಮೊದಲನೆಯ ನೆಶನಲ್ ಕ್ಲಬ್ ಎಂಬುದೊಂದು ಸಂಸ್ಥೆಯು ಸ್ಥಾಪಿಸಲ್ಪಟ್ಟಿತು, ಅದಕ್ಕೆ ಹಾಲಿದೆ ಎದಿಬ್ ಹನುಮಳು ಸದಸ್ಯಳಾದಳು. ಈಕೆಯು ತುರ್ಕಸ್ತಾನದ ಸೇವೆಯನ್ನು ಅಷ್ಟಿಷ್ಟು ಮಾಡಲಿಲ್ಲ. ಈಕೆಯನ್ನು ಕೆಲವರು ತುರ್ಕ-ಸ್ತಾನದ ಸ್ವಾತಂತ್ರ್ಯವೇವಿಯೆಂದು ಭಾವಿಸುವರು.

೧೯೧೯ರಲ್ಲಿ ಲೇಡೀಜ್ ಕ್ಲಬ್ ಪ್ರಾರಂಭವಾಯಿತು. ಅದು ಸ್ತ್ರೀಯರಲ್ಲಿ ವಿಶೇಷ ಜಾಗೃತಿಯನ್ನುಂಟು-ಮಾಡಿತು. ಅವರ ಕಾರ್ಯದ ಫಲವಾಗಿಯೆ ಎನ್ನ-ಬಹುದು—ತುರ್ಕಸ್ತಾನದ ಸ್ತ್ರೀಯರು ಅವೇ ವರ್ಷ ನಡೆದ ಬಾಲ್ಕನ್ ಯುದ್ಧದಲ್ಲಿ ನರ್ಸುಗಳಾಗಿ ಕಾರ್ಯ-

740

# ಚಿತ್ರ

ಶ್ರೀ ಗಜಾನನ ಪುಸ್ತಕ ಭಂಡಾರ
ಹರಿಹರಪುರ ಪೋಸ್ಟ್
(ಕೊಪ್ಪ-ಕಡೂರು.)
ಬಿಕ್ಕಳಿ

೧೦. ಸಂಚಿಕೆ ೨.
೧೯೩೮ ಜೂನ್.

## ರವೀಂದ್ರನಾಥ ಠಾಕೂರ್

ಉತ್ತು ನೇಗಿಲಿನಿಂದ ಸಾಹಿತ್ಯತೋಟವನು.
ತರುಗುಲ್ಮ ಲತೆಗಳಿಂ ಸಿಂಗರಿಸಿದೆಯೊ, ಬಂಧು.
ಗಣ್ಯ ನೋಬಲ್ ಪಾರಿತೋಷ ಮಿಸುನಿಯ ತಂದು,
ವಂಗ ವಾಣಿಯ ಮುಡಿಗೆ ತೊಡಿಸಿದೆ ಕಿರೀಟವನು,
ನಿನ್ನ ಕಾವ್ಯಾಮೃತದ ಎದೆಹಬ್ಬದೂಟವನು
ಸವಿದಿಳೆಯೆ ನಮ್ಮ ಹೊಗಳಿತೊ ಮಾನ್ಯ. ಭಾರತಿಯ
ಪುಣ್ಯ ಗಭ್ಯದ ಹಿರಿಮೆ ನಿನ್ನಂಥ ಕವಿ ಪತಿಯ
ಬಹುಕಾಲದಿಂದ ಗೊನೆ ಬಿಡಲಿಲ್ಲ. ಹೇ ರವಿಯೆ,
ನಿನ್ನ ಹೃದಯದ ಸೊಬಗಿಗೆಣೆಯಾಗಿರುವುದೊಡಲು
ರನ್ನದುದರದ ರಮ್ಯ ಕಡಲಂತೆ. ಓ ಕವಿಯೆ,
ಯಂತ್ರಯುಗದೆಮ್ಮ ಮತಿ ವೈಷಮ್ಯದಿಂ ಕೆಡಲು
ವಿಶ್ವ ಮೈತ್ರಿಯ ಪಥವ ತೋರಿದೈ. ಗರಿಬಿಡಲು
ಆತ್ಮ ಶಿಖಿ, ನಾಡ ಪ್ರತಿನಿಧಿಯಾಯ್ತು ನಿನ್ನ ನಲ್ವಾಡು.
ತಬ್ಬುತಿವೆ ನಿನ್ನ ಪುಣ್ಯಾಶ್ರಮದಿ ಪಡುವು ಮೇಣ್ಮೂಡು.

ಶ್ರೀ॥ ಮೂರ್ತಿ, ಎಂ.ಎ., ಬಿ.ಟಿ.

# ಸಂಸಾರಿಯ ಸುಖದ ಬೆಲೆ

[ಶ್ರೀ ॥ '**ಆನಂದಕಂದ**':ಧಾರವಾಡ.]

೨

ನೆಟ್ಟಿಯ ಮನೆ ನುಲಿಗೆಯಾಯ್ತು
ಮನೆಯಲ್ಲಿದ್ದುದೆಲ್ಲ ಹೋಯ್ತು
ಬಡಿದುಕೊಂಡು ಅತ್ತ ನೆಟ್ಟಿ ಬಾಯ್ಗೆ ಡೊಳ್ಳಿಗೆ
ನಡೆದನಂದೆ ನಗರ ಬಿಟ್ಟು ತನ್ನ ಹಳ್ಳಿಗೆ !

'ಬಸ್ಸು'ಗಳಲಿ ಅಂದು ಜಿದ್ದು;
ನೆಟ್ಟಿಬರಲು ತಟ್ಟನೆದ್ದು-
ಓಡಿ ಬಳಿಗೆ ಹೋದನೊಬ್ಬ 'ಬಸ್ಸ್ಜಂಟ'ನು
ಕಾಡಿ ಕಾಡಿ ಕೊನೆಗೆ ಸೆಳೆದ ಕೈಯ ಗಂಟನು.

೩

ಐದಾಣೆಯ ದರವು ಗೊತ್ತು
ನೆಟ್ಟಿ ಅಂದು ಅರ್ಧ ತೆತ್ತು
ಹತ್ತುಬಿಲ್ಲಿ ಉಳಿದುವೆಂದು ಹಿಗ್ಗ ತಳೆದನು.
ಕಳೆದ ಹಣದ ವ್ಯಥೆಯ ಗಳಿಗೆ ಮರೆತೆ ಕುಳಿತನು.

---

# ಜಾ ತಿ

[ಶ್ರೀ॥ **ಮೂರ್ತಿ** ಎಂ.ಎ., ಬಿ. ಟಿ.]

ನೋಡಿನಿತು ಕ್ಷೇಳಾಗಿ ಕಾಣುತಿಹುದೀ ಮಂದಿ
ನಮ್ಮ ಹರಿಜನ ಬಂಧುಗಳನಿಂದು ಹೇ ಮಿತ್ರ.
ಇವರ ವಾಲಿಗೆ ಹರಿಜನರು ಹೊಲಸೊಳಿಹ ಹಂದಿ.
ನರನ ಮುಟ್ಟದಿರೆಂಬ ಮಾತಿದೇನು ವಿಚಿತ್ರ !
ಸೋದರರು ದೇವ ದರ್ಶನಕೆಂದು ದೇಗುಲಕೆ
ಬರಲೇಂ ? ಕಳಂಕ ಬಹುದಂತೆ ಮಂದಿಯ ಕಲಕೆ !
ನಮ್ಮ ಮತವಿಂತು ನಾರುವ ಕೆಸರ ಕೆರೆಯಾಯ್ತೆ !
ಜಗವೆಲ್ಲ ಒಂದೆಂಬ ತತ್ತ್ವವೇಂ ಮರೆಯಾಯ್ತೆ !
ತಿಳಿದು ನೋಡಲು, ಗೆಳೆಯ, ಏನಿಹುದು ಜಾತಿಯಲಿ
ಸಕಲವೂ ನಿಂತಿಹುದು ಮಾನವನ ನೀತಿಯಲಿ.
ಕೋಗಿಲೆಯನಾದರಿಪುದದರ ಸವಿ ಕಲೆಗಾಗಿ.
ಗುಣವ ಗಣಿಸದ ಹುಟ್ಟಿನಿಂದಳೆಯುವುದ ನೀಗಿ
ಇನ್ನಾದರೂ ಮಂಕುಜನ ನಡುವುದೇ ಖೇದ ?
ಸಮತೆ ಭಾವವು ಬರಲಿ. ಸಾಕು ನಮಗೀ ಭೇದ.

---

740

# ತುರ್ಕಸ್ತಾನದ ಸ್ತ್ರೀಯರು

[ಶ್ರೀಮತಿ ಶಾಂತಾಬಾಯಿ ಮಾಳವಾಡ, ಧಾರವಾಡ.]

ರ್ಸನೆ ಹೊಂದುವುದು ಮಾನವನ ಸ್ವಭಾವ. ಕಾಲದಿಂದಲೂ ಇಂದಿನ ವರೆಗೆ ಮನುಷ್ಯ-ಕ ಪರಿವರ್ತನೆಗಳಾಗುತ್ತ ಬಂದಿವೆ. ಈಗಲೂ ಸಮಾಜದಲ್ಲಿ ಅನೇಕ ಬದಲಾವಣೆಗಳೂ ಗಳೂ ಆಗುತ್ತಲಿವೆ. ಮನುಷ್ಯ ಸಮಾಜದ ಂಗವಾದ ಸ್ತ್ರೀ ಸಮಾಜದಲ್ಲಿಯೂ ಅನೇಕ ನೆಗಳು ಕಾಣಬರತೊಡಗಿವೆ. ಆದರೆ ಹಿಂದೂ--ಅದರಲ್ಲೂ ಕರ್ನಾಟಕದಲ್ಲಿ--ಸುಧಾರಣೆಯು ನು ಕಂಡುಬರುವುದಿಲ್ಲ. ಇದಕ್ಕೆ ಕಾರಣ-ಾ ನಾವು ಕೂಪ-ಮಂಡೂಕ ವೃತ್ತಿಯವರಾಗಿ ಯಿಲ್ಲದೆ ಇರುವವರಾಗಿದ್ದೇವೆ. ಜಗತ್ತಿನ ಣ್ಣೆರೆದು ನೋಡುತ್ತಿರುವುದಿಲ್ಲ. ಸ್ತ್ರೀಯರು ರೆ ಯಾವ ರೀತಿ ಸುಧಾರಣೆ ಹೊಂದುತ್ತಿರುವ-ಅವರಿಗೆ ಗೊತ್ತಾಗುವುದು. ನಾವು ಯಾವ ಾ ಸುಧಾರಣೆ ಹೊಂದಬೇಕಾಗಿದೆಯೆನ್ನುವುದೂ ುದು. ಉದಾಹರಣಾರ್ಥವಾಗಿ ತುರ್ಕಸ್ತಾನದ ಕಡೆಗೆ ನಾವು ನೋಡೋಣ.

ತ್ತನೆಯ ಶತಮಾನದ ಪ್ರಾರಂಭದ ವರೆಗೆ ನದ ಸ್ತ್ರೀಯರನ್ನು ನೋಡುವುದು ದುರ್ಲಭ-ು. ಪರಿಚಯ ಮಾಡಿಕೊಳ್ಳುವ ಮಾತಂತೂ ುಳಿಯಿತು. ಅವರು ಹೆಚ್ಚು ಕಾಲ ಮನೆ-ೇ ಇರುತ್ತಿದ್ದರು. ಮನೆಯಿಂದ ಎಲ್ಲಿಗಾದರೂ ಹೋಗಬೇಕಾದುದು ಇದ್ದಲ್ಲಿ ಮುಖದ ಮುಂದೆ ನ್ನು ಇಳಿಬಿಟ್ಟುಕೊಂಡಾಗಲೇ ಪೂರ್ತಿಯಾಗಿ ಕೆ. ಮುಸುಕನ್ನು ಹಾಕಿಕೊಂಡಾಗಲೇ ಬೇಕಾಗುತ್ತಿದ್ದಿತು. ಸ್ತ್ರೀಯರು ಎಲ್ಲಿ ನ್ನು ತೆರೆದು ನೋಡುವರೋ ಎಂದು ಒಬ್ಬ ಅವರ ಬೆನ್ನು ಬೀಳುತ್ತಿದ್ದನು. ದಾರಿಯಲ್ಲಿ ಪುರುಷನೊಂದಿಗೆ ಮಾತನಾಡುವುದಂತೂ ಸಾಧ್ಯವೆ ಇರಲಿಲ್ಲ.

ಸ್ತ್ರೀಯರೂ ಮಾನವರು. ಜಗತ್ತನ್ನು ನೋಡ ಬೇಕೆಂಬ ಆಸೆಯು ಅವರಿಗೂ ಇದೆ. ಈ ಮುಸುಕಿನ ರೀತಿಯನ್ನು ಕಿತ್ತು ಹಾಕಬೇಕೆಂಬ ಆಕಾಂಕ್ಷೆಯ ತುರ್ಕಸ್ತಾನದ ಸ್ತ್ರೀಯರಲ್ಲಿ ಮೂಡಿದ ಮೇಲೆ ಅವರ ಕಾರ್ಯಪ್ರವೃತ್ತರಾದರು. ಮುಸುಕಿನ ಪದ್ಧತಿಯನ್ನು ಕಿತ್ತುಹಾಕಿದರು. ದಿನದಿನಕ್ಕೆ ಅವರಲ್ಲಿ ವಿಚಾರಕ್ರಾಂ ಯುಂಟಾಗಿ ರಾಜಕ್ರಾಂತಿಯೂ ಆಯಿತು. ೧೯೦೮ರಲ್ಲಿ ಸುಲ್ತಾನ್ ಅಬ್ದುಲ್ ಹಮಿದನನ್ನು ಪದಚ್ಯುತ ಮಾಡಿ ಪ್ರಜಾಧಿಕಾರವು ಪ್ರಾರಂಭವಾದ ಮೇಲೆ ತುರ್ಕಸ್ತಾನದ ಸ್ತ್ರೀಯರಲ್ಲಿ ಮತ್ತಿಷ್ಟು ಜಾಗೃತಿಯ ಆಗಲಾರಂಭಿಸಿತು. ಅನೇಕ ಸ್ತ್ರೀ ಲೇಖಿಕೆಯ ಜನ್ಮವೂ ಆಯಿತು. ಸ್ತ್ರೀಯರು ಸಾಮಾಜಿಕ ಕ್ಷೇತ್ರ ಗಳಲ್ಲಿಯೂ ರಾಜಕೀಯ ಕ್ಷೇತ್ರಗಳಲ್ಲಿಯೂ ಭಾಗ ವಹಿಸಲಾರಂಭಿಸಿದರು.

೧೯೧೧ರಲ್ಲಿ ಕಾನಸ್ಟಂಟಿನೋಪಲಿನಲ್ಲಿ ಮೊದಲನೆಯ ನೇಶನಲ್ ಕ್ಲಬ್ ಎಂಬುದೊಂದು ಸಂಸ್ಥೆಯು ಸ್ಥಾಪಿಸ ಲ್ಪಟ್ಟಿತು, ಅದಕ್ಕೆ ಹಾಲಿದೆ ಎದಿಬ್ ಹನುಮಳ ಸದಸ್ಯಳಾದಳು. ಈಕೆಯು ತುರ್ಕಸ್ತಾನದ ಸೇವೆಯನ್ನು ಅಷ್ಟಿಷ್ಟು ಮಾಡಲಿಲ್ಲ. ಈಕೆಯನ್ನು ಕೆಲವರು ತುರ್ಕ ಸ್ತಾನದ ಸ್ವಾತಂತ್ರ್ಯದೇವಿಯೆಂದು ಭಾವಿಸುವರು.

೧೯೧೭ರಲ್ಲಿ ಲೇಡೀಜ್ ಕ್ಲಬ್ ಪ್ರಾರಂಭವಾಯಿತ. ಅದು ಸ್ತ್ರೀಯರಲ್ಲಿ ವಿಶೇಷ ಜಾಗೃತಿಯನ್ನುಂಟು ಮಾಡಿತು. ಅದರ ಕಾರ್ಯದ ಫಲವಾಗಿಯೆ ಎನ್ನ ಬಹುದು—ತುರ್ಕಸ್ತಾನದ ಸ್ತ್ರೀಯರು ಅವೇ ವರ್ಷ ನಡೆದ ಬಾಲ್ಕನ್ ಯುದ್ಧದಲ್ಲಿ ನರ್ಸುಗಳಾಗಿ ಕಾರ್ಯ

ಮಾಡಿದರು. ಸ್ತ್ರೀಯರು ಯುದ್ಧದಲ್ಲಿ ಭಾಗವಹಿಸಿದ್ದು ತುರ್ಕಸ್ತಾನದ ಇತಿಹಾಸದಲ್ಲಿ ಮೊದಲನೆಯ ಉದಾಹರಣೆಯೆಂದು ನಿರಾತಂಕವಾಗಿ ಹೇಳಬಹುದು.

೧೯೧೩ ರಲ್ಲಿ ನಾಕಿ ಹನೂಮ ಎಂಬಾಕೆಯು ಮಂತ್ರಿಯಾಗಿಯೂ ಹಾಲಿದೆ ಎದಿಬ್ ಹನೂಮಳು ಇನಸ್ಪೆಕ್ಟರ್ ಜನರಲ್ ಆಫ್ ಸ್ಕೂಲ್ಸ್ ಆಗಿಯೂ ನಿಯಮಿಸಲ್ಪಟ್ಟರು.

ಇವೆಲ್ಲ ಸಂಗತಿಗಳಿಂದ ನಮಗೆ ಹಿಂದುಳಿದ ತುರ್ಕಸ್ತಾನದ ಸ್ತ್ರೀಯರು ಭರದಿಂದ ಮುಂದುವರಿಯಲಾರಂಭಿಸಿದರೆಂಬುದು ತಿಳಿಯುವುದು. ಸ್ತ್ರೀಯರಲ್ಲಿ ಸಾಕಷ್ಟು ಸುಧಾರಣೆಯೂ ಆಗಿದ್ದಿತು. ಅಂತೆಯೆ ಮಹಾಯುದ್ಧದ ಕಾಲದಲ್ಲೂ ತುರ್ಕೀ ಸ್ತ್ರೀಯರು ನರ್ಸುಗಳಾಗಿ ಕಾರ್ಯಮಾಡಿ ತಮ್ಮ ಸೇವೆಯನ್ನು ನಾಡಿಗಾಗಿ ಅರ್ಪಿಸಿದರು. ಇಷ್ಟೇ ಅಲ್ಲ ಗ್ರೀಸ್ ಹಾಗೂ ತುರ್ಕಸ್ತಾನದ ನಡುವೆ ನಡೆದ ಯುದ್ಧದಲ್ಲಿ ಸ್ತ್ರೀಯರು ಸೈನಿಕರಾಗಿ ಯುದ್ಧವನ್ನೂ ಮಾಡಿದರು. ಕೇವಲ ಸ್ವಲ್ಪ ವರುಷಗಳ ಅವಧಿಯಲ್ಲಿ ತುರ್ಕೀ ಸ್ತ್ರೀಯರಲ್ಲಿ ಉಂಟಾದ ಈ ವಿಲಕ್ಷಣ ಜಾಗ್ರತಿಯು ಅನುಕರಣೀಯವೂ ಪ್ರಶಂಸನೀಯವೂ ಆಗಿದೆಯಲ್ಲವೆ?

೧೯೨೨ ರಲ್ಲಿ ತುರ್ಕಸ್ತಾನದಲ್ಲಿ ಅರಸೊತ್ತಿಗೆಯು ಹೋಗಿ ರಾಷ್ಟ್ರೀಯ ಸರಕಾರವು ಅಸ್ತಿತ್ವದಲ್ಲಿ ಬಂದಿತು. ಅಂದಿನಿಂದ ತುರ್ಕಸ್ತಾನದ ಸ್ತ್ರೀಯರ ಜೀವನದಲ್ಲಿ ಹೊಸದೊಂದು ಇತಿಹಾಸವು ಪ್ರಾರಂಭವಾಯಿತೆಂದು ಹೇಳಬಹುದು. ಪರದಾ ಮತ್ತು ಬಹುಪತ್ನಿತ್ವದ ದುಷ್ಪದ್ಧತಿಗಳೂ ಮಾಯವಾದುವು. ಸ್ತ್ರೀಯರ ಮದುವೆಯ ವಯಸ್ಸು ೧೦ ಇದ್ದುದು ೧೭ ಕ್ಕೆ ಏರಿತು. ಹಾಗೂ ಮದುವೆಯ ಪೂರ್ವದಲ್ಲಿ ವಧೂವರರ ಆರೋಗ್ಯವನ್ನು ಪರೀಕ್ಷಿಸಬೇಕೆಂದು ಕಾನೂನು ಜಾರಿಗೆ ಬಂದಿತು. ಸ್ತ್ರೀಯರು ಪಾರ್ಲಿಮೆಂಟಿನ ಸದಸ್ಯರೂ ಆಗಲಾರಂಭಿಸಿದರು. ಡಾಕ್ಟರ್, ಜಡ್ಜಿ, ನಟಿ, ನೋಟಾರ್ ಡ್ರೈವರ್ ಆಗಿಯೂ ತೊಡಗಿದರು. ಸ್ತ್ರೀಯರಿಗೂ ಉಳಿದ ಸೈನಿಕ ಶಿಕ್ಷಣವೂ ಕೊಡಲ್ಪಡುತ್ತದೆ. ಮೇಲೆಯೂ ಸ್ತ್ರೀಯರು ತಮಗೆ ಬೇಕಾ... ನವನ್ನು ಮಾಡಬಹುದು. ಅಲ್ಲದೆ ಗಂಡ ಊರಿನಲ್ಲಿಯೇ ಹೆಂಡತಿಗೆ ನೌಕರಿಯನ್ನು ಅವಕಾಶವನ್ನು ಕಲ್ಪಿಸಿಕೊಡಬೇಕೆಂಬ ಕ ಮೊನ್ನೆ ಮೊನ್ನೆ ಪಾಸು ಮಾಡಿಸಲ್ಪಟ್ಟಿದೆ.

ಪ್ರಪಂಚದಲ್ಲಿ ಇವೊತ್ತು ಸೌಂದರ್ಯದ ನಡೆಯುತ್ತಿದೆ. ಪ್ರತಿವರ್ಷ ಅದರಲ್ಲಿ ಪ ರಾಷ್ಟ್ರದ ಸುಂದರಿಯರೂ ಭಾಗವಹಿಸಿ ಯಾಗುತ್ತಿದ್ದಾರೆ. ತುರ್ಕೀ ಸ್ತ್ರೀಯರೂ ಭಾಗವಹಿಸುತ್ತಿದ್ದಾರೆ. ಒಬ್ಬಳು ಸೌಂ ಸ್ಪರ್ಧೆಯಲ್ಲಿ ಬಹುಮಾನವನ್ನು ಪಡೆದಳು. ಒಬ್ಬ ಆಂಗ್ಲ ಮಹಿಳೆಯು ತುರ್ಕೀ ಸ್ತ್ರೀ ಕೋಮಲ ಸ್ವಭಾವ-ಗಾಂಭೀರ್ಯಗಳೀ ಹೇಳಿರುವುದು ಸೋಜಿಗವಾಗಿದೆ!

ಈ ಪ್ರಕಾರವಾಗಿ ಸ್ತ್ರೀಯರು ಜೀವ ಯೊಂದು ಕ್ಷೇತ್ರದಲ್ಲಿಯೂ ಪ್ರಗತಿಯನ್ನು ತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ ಅಲ್ಲಿ ಸರಿಸಮಾನವಾದ ಹಕ್ಕು ಬಾಧ್ಯತೆಗಳು ಸಿಕ್ಕಿವೆ. ಆದುದರಿಂದ ಅತ್ಯಂತ ದವರು ಎಂದೆನಿಸಿಕೊಂಡ ತುರ್ಕಸ್ತಾನದ ಯರು ಜಾಗ್ರತರಾಗಿ ಪ್ರಗತಿಪರ ಸೇವೆಯನ್ನು ಸಲ್ಲಿಸುತ್ತ ಇವೊತ್ತು ನಮಗೆ ಪ್ರಾಯರಾಗಿ ನಿಂತಿದ್ದಾರೆ. ಅವರನ್ನು ಕಂ ಸ್ತ್ರೀಯರು ತಮ್ಮ ಸ್ಥಿತಿಗತಿ ವಾತಾವರಣಕ್ಕೆ ವಾಗಿ ಹಿಂಬಾಲಿಸಲಾರರೆ? ವಿದ್ಯಾವತಿಯರಾ ಶಾರೀರಕ ದೃಷ್ಟಿಯಿಂದ ಅಬಲೆಯರಲ್ಲವೆಂಬುದನ್ನು ಕೊಡಲಾರರೆ?

——:o:——

# ಅವಳೆಲ್ಲಿ ?

—ಸಾರಸ ಕತೆಯೊಂದರ ಆಧಾರದಿಂದ—

[ಶ್ರೀ. ಗುರುನಾಥ ಜೋಶಿ.]

★

ನ ಇನ್ನೂ ಚಿಕ್ಕವನಿದ್ದೆ. ಸುಮಾರು ಎಂಟು ವರ್ಷವಿರಬಹುದು. ಒಂದು ದಿವಸದ ಮಾತು. ಶಾಲೆಯಲ್ಲಿ ನಾನು ಆಡುತ್ತಿದ್ದೆ. ಆಷ್ಟರಲ್ಲಿ ನಾನು "ಅಮ್ಮಾ! ಅಯ್ಯೋ ಅಮ್ಮಾ! ನನ್ನ ನನ್ನ ಹೃದಯದ ಹೂವು! ಅಯ್ಯೋ ನಾನೀಗ ಮಾಡಲಿ? ಎಲ್ಲಿಗೆ ಹೋಗಲಿ? ನನ್ನನ್ನು ಕೇಳುವರು ಇನ್ನು?" ನನ್ನ ತಾಯಿ ಕೆಲಸದಲ್ಲಿ ತೊಡಗಿದ್ದಳು. ಅವಳು ಒಂದುಸಲ ನನ್ನ ಕಡೆಗೆ ನೋಡಿ ಮತ್ತೆ ಕೆಲಸಕ್ಕೆ ತೊಡಗಿದಳು. ನನ್ನ ಅಳುವಿಕೆ ನಡೆದೇ ಇತ್ತು. ನಾನು ನಿಂತಲ್ಲಿಯೇ ಶೋಕಭರದಿಂದ ಬಿಟ್ಟೆ. ತಾಯಿಗೆ ನಾನು ಬಿದ್ದಿದ್ದರ ಶಬ್ದವು ಕೇಳಿತು. ಗಾಬರಿಯಾಗಿ ಓಡಿಬಂದಳು. ನನ್ನನ್ನು ಎತ್ತಿಕೊಂಡು ಎದೆಗೆ ಅವಚಿಕೊಂಡಳು. ನನ್ನ ತಲೆಯಮೇಲೆ ಕೈಯಾಡಿಸುತ್ತ ಅತ್ಯಂತ ವಾತ್ಸಲ್ಯದಿಂದ ಕೇಳಿದಳು "ಮಗೂ, ಏನಾಯಿತು? ಈವಾಗ ತನಕ ಆಡುತ್ತಿದ್ದೆ. ಅಕಸ್ಮಾತ್ತಾಗಿ ಯಾರ ದೃಷ್ಟಿ ಬಿತ್ತು ನಿನಗೆ?" ನನ್ನ ಅಳುವು ನಿಲ್ಲುತ್ತಿರಲೇ ಇಲ್ಲ. ಅಳಿಕೆಗೆ ಆರಂಭವಾಗಿದ್ದಿತು. ನನ್ನನ್ನು ಸುಮ್ಮನಾ ಗಿಸುವ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ಮನೆಯವರು ಯಾವುದೋ ಒಂದು ಭೂತ ಮೈಸೇರಿದೆಯೆಂದು ನಿರ್ಣಯ ಹೇಳಿಬಿಟ್ಟರು. ಮಾಟಮಾಯ ಮಾಡಿಸ ತೊಡಗಿದರು. ಹನುಮಂತ ದೇವರಿಗೆ ನಡೆದುಕೊಳ್ಳ ಬೇಕೆಂದು ಹೇಳಿದರು. ಅವರಂತೆಯೇ ಮಾಡಿದೆ. ಎಲ್ಲವೂ ನಿಷ್ಫಲನಾಯಿತ.. ಅಕ್ಕಪಕ್ಕದವರೆಲ್ಲರೂ ಬಂದು ನನ್ನನ್ನ ಸುತ್ತುಗಟ್ಟಿ ನೋಡತೊಡಗಿದರು. ಆದರೆ ಅವರಿಂದೇನೂ ಉಪಾಯ ಮಾಡಲಾಗಲಿಲ್ಲ. ಅವರೂ ಏನನ್ನೋ ಮಾಡುತ್ತ ನಿಂತಿದ್ದರು. ನನ್ನ ಬೈದಡವುತ್ತಿದ್ದರು ಕೆಲವರು. ಏಕೆಂದರೆ ನಾನೆಲ್ಲರಿಗೂ ಬೇಕಾದ ಹುಡುಗನಾಗಿದ್ದೆ. ಆದಕಾರಣ ನಾನು ಅಳುವುದನ್ನು ಕಂಡು ಎಲ್ಲರೂ ದುಃಖಪಡುತ್ತಿದ್ದರು; ಅದರ ಕಾರಣವನ್ನು ತಿಳಿಯಲೆತ್ನಿಸುತ್ತಿದ್ದರು; ಅತ್ತು ಅತ್ತು ನನ್ನ ಕಣ್ಣುಗಳು ಉಬ್ಬಿದ್ದುವು; ಕೊನೆಗೆ ಅತ್ತು ಅತ್ತು ನಿದ್ರೆ ಬಂದಿತು. ಮುಂಜಾನೆ ಎದ್ದೆ. ಕಣ್ಣುಗಳು ಉಬ್ಬಿದ್ದುವು ಹಾಗೇ ಇದ್ದುವು. ಗಲ್ಲಗಳು ಒಳಸಿಕ್ಕಿದ್ದುವು. ತಾಯಿ ನನ್ನ ಮುಖಕ್ಕೆ ಮುದ್ದಿಟ್ಟು ತಲೆಯಮೇಲೆ ಕೈಯಾಡಿಸುತ್ತ ಎಂದಳು "ಮಗೂ, ನಿನ್ನೆ ನಿನಗೇನಾಗಿತ್ತು? ನಿನ್ನ ದೆಸೆಯಿಂದ ನಿನ್ನೆ ಅಡಿಗೆಯನ್ನೂ ಮಾಡಲಿಲ್ಲ. ಸ್ವಲ್ಪ ಊಟಮಾಡು ನಡೆ."

ನಾನು ಒಂದುಸಿರು ಬಿಟ್ಟು "ಅಣ್ಣ" ಎಂದು ಅಳಲಾರಂಭಿಸಿದೆ. ಜನರಿಗೆ ಸ್ವಲ್ಪ ನನ್ನ ಅಳುವಿನ ಕಾರಣದ ಸುಳಿವು ಗೊತ್ತಾಯಿತು. ನನ್ನ ಅಣ್ಣ ಎರಡು ಮೂರು ವರ್ಷ ನನಗಿಂತ ದೊಡ್ಡವನಿರಬಹುದು. ಅವನನ್ನು ಹುಡುಕತೊಡಗಿದರು. ಮನೆಯೆಲ್ಲವನ್ನೂ ಹುಡುಕಿದರು. ಆದರೆ ಎಲ್ಲವೂ ವ್ಯರ್ಥ. ಇದುವರೆಗೆ ಒಬ್ಬನಿದ್ದೆ, ಈಗ ಇಬ್ಬರ ಚಿಂತೆ ಸುರುವಾಯಿತು. ಕೊನೆಗೆ—ಎಲ್ಲಾ ಹುಡುಕಿ ಆದ ಮೇಲೆ ನನ್ನ ಅಣ್ಣ ಮಿಠಾಯಿಗಾರನ ಅಂಗಡಿಯಲ್ಲಿ ಅವಿತುಕೊಂಡು ಕೂತಿದ್ದವನು ಹೊರಬಿದ್ದ! ಆಗ ತಾಯಿ ನಾನು ಸುಮ್ಮನಾಗುವೆನೆಂದು ತಿಳಿದುಕೊಂಡಳು. ನನ್ನನ್ನು ಹತ್ತರ ಕರೆದುಕೊಂಡು ನನ್ನ ಹೆಸರು ಕೇಳಿದ. ನಾನು ಹೇಳಿದೆ. ಅವನೂ ಗಾಬರಿಯಾಗಿ ಅಳತೊಡಗಿದ. ಊರೆಲ್ಲ ಈ ಸುದ್ದಿ ಹರಡಿತು. ನಾವು ಇಬ್ಬರೂ ಅಳುವುದರ ಕಾರಣವು ಯಾರಿಗೂ ಗೊತ್ತಾಗಲೊಲ್ಲದು. ಯಾವುದೋ ಭೂತಪಿಶಾಚದ ಬಾಧೆಯಿರಬಹುದೆಂದರು.

ಮನೆಯವರು ಬಹಳ ದುಃಖಿತರಾಗಿದ್ದರು. ಅಸ
ಹಾಯರಾಗಿದ್ದರು. ಎಲ್ಲರ ಮನದಲ್ಲೂ ಒಂದೇ
ಮಾತಿದ್ದಿತು. ನನ್ನದೊಂದು ಚಿಕ್ಕ ತೋಟವಿದ್ದಿತು.
ಅದರಲ್ಲಿ ನಾನು ಹತ್ತಿ, ಗೋಧಿ, ಗೋವಿನ ಜೋಳವನ್ನು
ಬಿತ್ತಿದ್ದೆ. ನನ್ನ ತೋಟದಲ್ಲಿಯ ಬೆಳೆಯನ್ನು ನಾನು
ಬಹುವಾಗಿ ಪ್ರೀತಿಸುತ್ತಿದ್ದೆ. ಅದಕ್ಕಾಗಿ ನನ್ನ ತಾಯಿ
ನನ್ನನ್ನು ಸೊಂಟದ ಮೇಲೆ ಕುಳ್ಳಿರಿಸಿಕೊಂಡು
ತೋಟದ ಕಡೆಗೆ ಹೊರಟಳು. ಅವಳು ತೋಟದ ಬಳಿ
ಹಾರಿದಂತೆ ನನ್ನ ಅಳುವು ಇಮ್ಮಡಿಸುತ್ತಿದ್ದಿತು. ಅಲ್ಲಿಗೆ
ಹೋದೊಡನೆ ಎಲ್ಲದರ ರಹಸ್ಯವು ಹೊರಬಿದ್ದಿತು.
ಎಲ್ಲವೂ ತಿಳಿದು ಬಂದಿತು. ನನ್ನ ಅಣ್ಣ ನನ್ನ ಹತ್ತಿಯ
ಗಿಡವೊಂದನ್ನು ಕಿತ್ತಿದ್ದ. ಅಲ್ಲಿ ಅವನ ಹೆಜ್ಜೆಗಳು
ಮೂಡಿದ್ದುವು. ನಾನು ತಾಯಿಯ ಸೊಂಟದಿಂದ ಇಳ
ಿವನೆ ಆ ಗಿಡದ ಕಡೆಗೆ ಓಡಿದೆ. ಅದನ್ನು ಎದೆಗಪ್ಪಿ
ಕೊಂಡು ಪುನಃ ಅಳತೊಡಗಿದೆ—" ನನ್ನ ಮಗೂ, ನನ್ನ
ಹೃದಯದ ಹೂವೆ, ನಾನೆಲ್ಲಿಗೆ ಹೋಗಲಿ ? ನಾನೇನು
ಮಾಡಲಿ ? " ತಾಯಿಯು ಇದನ್ನು ಕೇಳಿ ಒಂದೇ
ಸಮನೆ ನಗಲಾರಂಭಿಸಿದಳು. ಆಗಾಗ್ಗೆ ನನ್ನ ಹಣೆಯನ್ನು
ಮುದ್ದಿಸತೊಡಗಿದಳು. ಅವಳ ನಗುವು ನಿಲ್ಲುತ್ತಿರಲೇ
ಇಲ್ಲ.

೨

ನಾನೊಬ್ಬ ಪ್ರಸಿದ್ಧ ಡಾಕ್ಟರನಾದೆ. ಮಹಾನಗರದ
ಸಿದ್ಧಾರಿಯ ಬಳಿಯಲ್ಲಿ ನನ್ನ ಭವ್ಯ ಅರಮನೆಯಂತಹ
ಮನೆಯು ಕಾಣುತ್ತಿರುವುದು. ಬಡವರಿಗೆ ನನ್ನ ಬಳಿ
ಸ್ಥಾನವಿರಲಿಲ್ಲ. ನನಗೆ ಬಡತನವೆಂದರೇನೆಂಬುದೂ
ತಿಳಿಯುತ್ತಿರಲಿಲ್ಲ. ನನ್ನ ಕನ್ಸಲ್ಟೇಶನ್ನಿನ ಫೀಜೇ ೬೪ ರೂ.
ಇದೆ. ಇದಕ್ಕೂ ಕಡಮೆ ಕೊಡಬೇಕೆನ್ನುವವರೊಡನೆ
ನಾನು ಮಾತನಾಡುವುದಿಲ್ಲ. ನಮ್ಮ ಪ್ರಾಂತ್ಯದಲ್ಲಿ
ನಾನೇ ದೊಡ್ಡ ಡಾಕ್ಟರು. ಇಷ್ಟಾದರೂ ನನ್ನ ಬಳಿಗೆ
ನಾವಿರಾರು ಜನರು ಬರುತ್ತಾರೆ. ನನ್ನ ಮನೆಯ ಎದು
ರಿಗೆ ಯಾವಾಗಲೂ ಐದಾರು ಕಾರುಗಳು ನಿಂತೇ
ಇರುತ್ತವೆ.

ಇವೊತ್ತು ನಮ್ಮ ಮನೆಗೆ ರೋಗಿಗಳು ಹೆಚ್ಚಾಗಿ
ಬಂದಿಲ್ಲ. ನಾನು ಕುಳಿತುಕೊಂಡು ವೃತ್ತಪತ್ರಿಕೆ
ಯೊಂದನ್ನು ಓದುತ್ತಿದ್ದೆ. ನನ್ನ ಅಸಿಸ್ಟೆಂಟರು ಬಂದು
ಒಬ್ಬ ಹೆಂಗಸು ನಿಮ್ಮನ್ನು ಕಾಣಲು ಬಂದಿ
ಹೇಳಿದರು. " ಫೀಸ್ ಕೊಟ್ಟಳೆ ? " ಎಂ
" ಹೂಂ " ಎಂದು ಹೇಳಿದರು. ನಾ
ಅವಳನ್ನು ಕಳಿಸಬೇಕೆಂದು ಹೇಳಿದೆ. ಅ
ಯನ್ನು ಕಳಿಸಿದರು. ಅವಳು ಯಾರು ? ಹ
ಯನ್ನುಟ್ಟುಕೊಂಡ ಒಬ್ಬ ಯುವತಿ. ಅವಳ
ಲಾವಣ್ಯವಿದ್ದಿತು, ಕಾಂತಿಯಿದ್ದಿತು. ನನ್ನ
ಶಬ್ದಗಳು ತಾವಾಗಿಯೆ ಹೊರಬಿದ್ದುವು " ೧
ರೂಪಾಯಿಗಳನ್ನು ಕೊಟ್ಟಿರಾ ? ಇಷ್ಟು
ನಿಮ್ಮ ಬಳಿ ಹೇಗೆ ಬಂದುವು ? "

ಅವಳು ಅಳುತ್ತ " ಡಾಕ್ಟರ್, ನನ್ನ
ಬಹಳ ಕಾಯಿಲೆ. ಅವಳಿಗೇನಾಗಿದೆಯೊ ?
ದಿನಗಳಾದುವು ಇವೊತ್ತಿಗೆ, ಕಣ್ಣೇ ತೆರೆದಿಲ್ಲ
ಸಲ ಹಾಲು ಕುಡಿಸುತ್ತೇನೆ. ಆದರೂ ದಿನ
ಕೊರಗುತ್ತಿದ್ದಾಳೆ. ಈಗ ಅವಳಲ್ಲಿ ಏನೂ ೪
ಡಾಕ್ಟರರೆ ! ಅವಳನ್ನು ಬದುಕಿಸಿರಿ ಡಾಕ್ಟರರೆ "
ರೋದನ ಬೆರೆತ ದನಿಯಿಂದ ಉಸುರಿದಳು
ಕಾಲುಗಳ ಮೇಲೆ ಬಿದ್ದಳು. ನಾನು ನನ್ನ ಪಾದ
ಹಿಂದಕ್ಕೆ ಸರಿಸುತ್ತ " ನೀವು ಬಹಳ ಬಡವ
ಕಾಣುತ್ತೀರಿ. ನಿಮ್ಮ ಮಗಳ ಕಾಹಿಲೆಯು ಹಳೆ
ಎಂದೆ.

" ಇಲ್ಲ ಸರ್. ದೇವರಾಣೆಯಾಗಿಯೂ ಹಡಿ
ದಿನಗಳ ಹಿಂದೆ ಚೆನ್ನಾಗಿ ಆಡುತ್ತಿದ್ದಳು.
ಇವೊತ್ತು ಅದ್ಹೇಗೋ ಆಗಿದ್ದಾಳೆ ! "

ವೃತ್ತಪತ್ರವನ್ನು ಮೇಜಿನ ಮೇಲಿಟ್ಟು
ಹುಡುಗಿಯನ್ನು ನೋಡಿದೆ. ಅವಳ ಕಣ್ಣುಗಳು
ಗಿದ್ದುವು. ಅವಳನ್ನು ಬ್ರಹ್ಮನೂ ಗುಣಪಡಿಸು
ಲಿಲ್ಲ. ಅವಳ ಶರೀರವೆಲ್ಲ ಕಪ್ಪಾಗಿದ್ದಿತು. ಹ್ಮ
ಸ್ಪಂದನವನ್ನು ನೋಡಿದೆ. ಅದೂ ನಿಲ್ಲುವುದರಲ್ಲಿ
ನಾನು ನನ್ನ ಅಸಿಸ್ಟೆಂಟನಿಗೆ ಬಹಳ ಹೆಚ್ಚು ಉಣ್ಣೆ
ರಿಂದ ಈ ಗತಿಯಾಗಿದೆಯೆಂದು ಹೇಳಿದೆ. ನಾನ
ತೊಳೆದುಕೊಳ್ಳುತ್ತ ಯುವತಿಯ ಮುಖದ
ನೋಡಿದೆ. ಆಸೆ-ಭಯಗಳು ಒಟ್ಟು ಸೇರಿದ್ದು
ಒಂದು ವಿಚಾರವು ಬರುತ್ತಿದ್ದಿತು. ಇನ್ನೊಂದು ಅ

ನ್ದಿತು. ನಾನು ಕುರ್ಚಿಯ ಮೇಲೆ ಕುಳಿತು
ಕೆಡುಕು ತಿಳಿದು ಕೊಳ್ಳಬೇಡಿ. ನಿಮ್ಮ
ುದುಕುವುದು ಅಸಂಭವ; ಬದುಕಿ ಉಳಿದರೂ
? ಕುರುಡೆಯಾಗಿ ಉಳಿಯುವಳು" ಎಂದೆ.
ಾತುಗಳು ಮುಗಿಯುವ ಮೊದಲೇ ಯುವ
ಖ್ಖಿಗಳು ನೀರುತುಂಬಿದುವು. ಅವು ಗಲ್ಲಗಳ
ಧಾರೆಯಾಗಿ ಹರಿಯತೊಡಗಿದವು. ನನಗೆ
ುಬನಿ ನೋಡುವುದು ಹೊಸತಲ್ಲ. ನೂರಾರು
ಅಳುವುದನ್ನು ನಾನು ಕಂಡಿದ್ದೇನೆ. ನಾನು
ದಲ್ಲಿ ತೊಡಗಿದೆ. ಅವಳು ಅಲ್ಲಿಂದ ಮೆಲ್ಲನೆ
ು. ಆದರೆ ಅದೇಕೋ ಈಸಲ ನನ್ನ ಮನಸ್ಸಿ
ಮ್ಮದಿಯುಳಿಯಲಿಲ್ಲ. ಆಗಾಗ್ಗೆ ಆ ಯುವತಿಯ
ನ್ನ ಕಣ್ಣುಗಳೆದುರಿಗೆ ನಲಿಯತೊಡಗಿತು.
ನಸ್ಸು ಆಗಾಗ್ಗೆ ಹೇಳುತ್ತಿದ್ದಿತು "ಮಗೂ,
ಮಗೂ, ನನ್ನ ಹೃದಯದ ಹೂವೆ! ಅಯ್ಯೋ
ಏನು ಮಾಡಲಿ?"

ು ಎದ್ದು ನನ್ನ ಅಸಿಸ್ಟೆಂಟರ ರೂಮಿಗೆ ಹೋದೆ.
ಅವಳ ವಿಚಾರವಾಗಿ ಮಾತುಕತೆ ನಡೆಯಿತು.
ವಳು ಬಹಳ ಬಡವೆಯೆಂದು ಗೊತ್ತಾಯಿತು.
ವನ್ನೂ ಮಾರಿ ನನಗೆ ೬೪ ರೂಪಾಯಿಗಳನ್ನು
ಳು. ಒಂದು ಕ್ಷಣದ ನನ್ನ ದುಡಿಮೆಗೆ ಅದೆಲ್ಲ
ನ್ನ ಕೊಟ್ಟು ಅವಳು ಹೊರಟು ಹೋದಳು.
ನು ನನ್ನನ್ನೆ ಬಯ್ದುಕೊಳ್ಳತೊಡಗಿದೆ. ನನಗೆ
ೀಲೆಯೇ ಕೋಪ ಬಂದಿದ್ದಿತು. ಅವಳು ಪಟ್ಟ
ನೆನಹು ಬರುತ್ತಿದ್ದಿತು. ನಾನು ಇಷ್ಟೇಕೆ
ತುಟ್ಟಿಯಾಗಿದ್ದೇನೆ? ನನ್ನ ಒಂದು ಕ್ಷಣದ ಪರಿಶ್ರಮಕ್ಕಾಗಿ
ಎಷ್ಟೋ ಜನರು ತಮ್ಮ ಸರ್ವಸ್ವವನ್ನೂ ಕಳೆದುಕೊಳ್ಳ
ಬೇಕಾಗುವುದಲ್ಲವೆ? ಅಂತಿಮ ಸಮಯದಲ್ಲಿ ಡಾಕ್ಟರರ
ದರ್ಶನವನ್ನು ಪಡೆಯದೆ ಸಾಯುವವರು ಅದೆಷ್ಟೋ
ಜನಗಳಿದಾರೆ ಅಲ್ಲವೆ? ಹೀಗೆ ಅದೆಷ್ಟೋ ವಿಚಾರಗಳಲ್ಲಿ
ನಾನು ಆದಿನ ಮಗ್ನನಾಗಿದ್ದೆ. ಊಟದ ಹೊತ್ತಿಗೆ
ಊಟಕ್ಕಾಗಿ ಹೋದೆ. ಊಟವೇ ಹೋಗಲಿಲ್ಲ.
ನಾಲ್ಕೈದು ತುತ್ತು ತಿಂದು ಎದ್ದೆ. ಆ ತಂಗಿಯು
ಇನ್ನೊಮ್ಮೆ ನನಗೆ ನೋಡಲು ದೊರಿತರೆ ಎಷ್ಟು
ಚೆನ್ನಾದೀತು ಎಂಬ ವಿಚಾರವೇ ಬರುತ್ತಿದ್ದಿತು.

೩

ಈಗ ನಾನು ಪ್ರಾಕ್ಟೀಸ್ ಬಿಟ್ಟುಬಿಟ್ಟಿದ್ದೇನೆ. ಹಳ್ಳಿ
ಹಳ್ಳಿ, ಕೇರಿ ಕೇರಿ ಅಲೆದಾಡುತ್ತಿದ್ದೇನೆ. ಮೊದಲು
ದೊಡ್ಡ ದೊಡ್ಡ ಮನುಷ್ಯರು ನನ್ನ ಹತ್ತರ ಬರುತ್ತಿ
ದ್ದರು. ಈಗ ನಾನು ಮನೆಮನೆಗೆ ಹೋಗುತ್ತಿದ್ದೇನೆ.
ಅವಳಲ್ಲಿ ಕ್ಷಮೆ ಬೇಡಿಕೊಳ್ಳಬೇಕೆನ್ನುತ್ತೇನೆ ಅವಳ
ದರ್ಶನವಾದರೆ! ಅಂಥ ದೇವಿಯರ ಸೇವೆಯಲ್ಲಿಯೆ ಈಗ
ನನ್ನ ಜೀವನವು ಕಳೆಯುತ್ತಲಿದೆ. ಆದರೂ ಮನಸ್ಸಿಗೆ
ಸಂತೋಷವಿಲ್ಲ. ಮನದಲ್ಲೊಂದು ಮನೀಪೆಯಿದೆ.
ಅದು ಕೊನೆಗಾಣುವುದೋ ಇಲ್ಲವೋ! ಇದೆಲ್ಲವನ್ನೂ
ನಾನು ಬರೆಯುತ್ತಿರುವುದು ಅವಳ ವಿಳಾಸವನ್ನು ತಿಳಿದು
ಕೊಳ್ಳುವುದಕ್ಕಾಗಿ. ಯಾರಿಗಾದರೂ ಗೊತ್ತಿದ್ದರೆ ಹೇಳಿ.
ಜೀವನದ ಇವೆರಡೂ ಘಟನೆಗಳಲ್ಲಿ ಏನು ಸಂಬಂಧ
ವಿದೆಯೋ ನನಗೆ ಗೊತ್ತಿಲ್ಲ. ಆದರೆ ಇಷ್ಟುಮಾತ್ರ
ನಿಜ—ನನಗೆ ಎರಡೂ ಸಂಗತಿಗಳು ನೆನಪಿಗೆ ಬರುತ್ತವೆ.
ಆಗ ನಾನು "ಅವಳೆಲ್ಲಿ?" ಎಂದು ಕೂಗುತ್ತೇನೆ -

---

## ನನ್ನ ಹಕ್ಕಿ ಹಾರಿಹೋಯಿತು!

ಸಂಧ್ಯಾರಾಗದ ನನ್ನ ಹಕ್ಕಿ ಹಾರಿಹೋಯಿತು. ಅತೀತದ ನೆನಹು ಕೊಡುವ, ಕಾತರವನ್ನು ಹುಟ್ಟಿಸುವ,
ಲ್ಲಿ ಕನಸುಗಳನ್ನು ತುಂಬುವ ಅದರ ಆಕುಲಗಾನವನ್ನು ನಾನು ಕೇಳದೆ ಹೋದೆ!

ಆ ನನ್ನ ಚಿಕ್ಕ ಹಕ್ಕಿ ಹಾರಿಹೋಯಿತು .. . .. ನನ್ನ ಚೈತನ್ಯಕ್ಕೆ ಪೆಟ್ಟು ತಗಲಿತೆ? ನನ್ನ ಕಲ್ಪನೆಯು
ಾಯಿತೆ? ನನ್ನ ಜೀವನದಲ್ಲಿ ಅನುರಾಗವಿಲ್ಲದಾಯಿತೆ?

ಹೇಮಂತದಲ್ಲಿ ಅದು ಬರುತ್ತಿದ್ದಿತು ಮತ್ತು ಹಾಗೆಯೆ ಹಾಡಿ ಹಾರಿಹೋಗುತ್ತಿದ್ದಿತು.....

ಅವರ ಅವ್ವೆತ್ತು ಅದನ್ನು ಚಳಿಯಿಂದ ರಕ್ಷಿಸುವುದಕ್ಕಾಗಿ ಕಂಟಿಯ ಮೇಲೆ ನನ್ನ ರೇಷ್ಮೆಯ ಶಾಲನ್ನು
ು, ಅಯ್ಯೋ ಅವರ ಹೊಳಪು ಆ ನನ್ನ ಹಕ್ಕಿಯ ಕಣ್ಣು ಕುಕ್ಕಿಸಿತಲ್ಲ ..... ... ...ನನ್ನ ಹಕ್ಕಿ ಹಿಂತಿರುಗಿ
ರಲ್ಲ . ಮನದಣಿಯೆ ನಾನದನ ಇಂಪಾದ ಗಾನವನು ಕೇಳದೆ ಹೋದೆ!

ಆ ನನ್ನ ಹಕ್ಕಿಯು ಕ್ಷಿತಿಜದ ಆಚೆಯಲ್ಲಿ ಎಲ್ಲಿ ಮರೆಯಾಗಿ ಹೋಯಿತು? —**ದಿನೇಶನಂದಿನಿ.**

ಆಗಸ್ಟ್ ೧೯೩೯ ಸ್ಪರ್ಧೆಯ ಫಲಿತಾಂಶಗಳು !




# ಗೋಪಾಲ

# GOPALA



# ವಿನಂತಿ

**ಚಂದಾದಾರರಲ್ಲಿ**.—ಗೋಪಾಲ ಪ್ರತಿ ತಿಂಗಳೂ ಒಂದನೇ ತಾರೀಖು ಪ್ರಕಟವಾಗುತ್ತೆ. ಚಂದಾ ಅಂಚೆವೆಚ್ಚ ಸೇರಿ ವರ್ಷಕ್ಕೆ ಒಂದು ರೂವಾಯಿ. ಬಿಡಿ ಸಂಚಿಕೆ ಒಂದಾಣೆ. ಯಾವ ತಿಂಗಳಿನಿಂದಲಾದರೂ ಚಂದಾದಾರರಾಗಬಹುದು. ಚಂದಾ ಹಣವನ್ನು ಮನಿಯಾರ್ಡರು ಅಥವಾ ಪೋಸ್ಟಲ್ ಆರ್ಡರ್‌ಮೂಲಕ ಕಳುಹಿಸಬೇಕು. **ವಿ ಪಿ. ಕಳುಹಿಸುವುದಿಲ್ಲ.** ಪತ್ರಿಕೆಯು 5ನೇ ತಾರೀಖಿನೊಳಗೆ ಚಂದಾದಾರರ ಕೈಸೇರದಿದ್ದರೆ ಕೂಡಲೇ ತಮ್ಮ ಊರಿನ ಪೋಸ್ಟ್ ಆಫೀಸಿನಲ್ಲಿ ವಿಚಾರಿಸಬೇಕು.

**ವಿಜಂಟಿರಲ್ಲಿ**:—ಆಯಾ ತಿಂಗಳು 15ನೇ ತಾರೀಖಿನೊಳಗೆ ವಿಜಂಟಿರುಗಳು ಮುಂದಿನ ಸಂಚಿಕೆ ಕಾಪಿಗಳು ಎಷ್ಟು ಬೇಕೆಂಬುದನ್ನು ತಿಳಿಸಬೇಕು. ಮುಂಚಿತವಾಗಿ ತಿಳಿಸದಿದ್ದರೆ ಬೇಕಾದಷ್ಟು ಕಾಪಿಗಳು ಸಿಕ್ಕದೆ ನಿರಾಶರಾಗಬೇಕಾಗುವುದು. ಮಿಕ್ಕ ವಿವರಗಳಿಗೆ ದಯವಿಟ್ಟು ನಮ್ಮ ಆಫೀಸಿಗೆ ಬರೆಯಿರಿ.

**ಜಾಹೀರಾತುದಾರರಲ್ಲಿ**:—ಗೋಪಾಲನನ್ನು ಸಾವಿರಾರು ಜನರು ಪ್ರತಿ ತಿಂಗಳೂ ಕುತೂಹಲದಿಂದ ಓದುವರು. ಗೋಪಾಲನು ತಲುಪದ ಊರೇ ಇಲ್ಲ. ಜಾಹೀರಾತು ಪ್ರಕಟಿಸಲು ಅತ್ಯುತ್ತಮವಾದ ಪತ್ರಿಕೆ. ಗೋಪಾಲನ ಮಿತ್ರರಿಗೆ ನಿಮ್ಮ ವ್ಯಾಪಾರದ ವಿವರಗಳನ್ನು ತಿಳಿಸಿದರೆ ಖಂಡಿತ ಲಾಭವುಂಟು! ಬರಿಯೊಗಿ ಜಾಹೀರಾತು ಪ್ರಕಟಿಸಿದರೆ ಸಂಪೂರ್ಣ ಫಲ ದೊರೆಯುವುದರಲ್ಲಿ ಸಂದೇಹವಿಲ್ಲ. ಜಾಹೀರಾತುಗಳು ನಮ್ಮ ಆಫೀಸನ್ನು 15ನೇ ತಾರೀಖಿನೊಳಗಾಗಿ ಮುಟ್ಟಬೇಕು. ಮಿಕ್ಕ ವಿವರಗಳಿಗೆ ದಯವಿಟ್ಟು ನಮ್ಮ ಆಫೀಸಿಗೆ ಬರೆಯಿರಿ.

**ಲೇಖಕರಲ್ಲಿ**:—ನಮ್ಮ ವಾಚಕ ಮಹಾಶಯರ ರುಚಿಗೆ ತಕ್ಕಂತೆ **ಸ್ವಂತವಾಗಿ** ಬರೆದು ಕತೆ, ಕವನ, ಏಕಾಂಕ ನಾಟಕ, ಲೇಖನಗಳನ್ನು ಯಾರಾದರೂ ಕಳುಹಿಸಬಹುದು. ಸಾಧ್ಯವಾದಷ್ಟು ಚುಟ್ಟಿಗೆ ಲೇಖನಗಳು ಚಿತ್ರದಾಗಿರಬೇಕು. ಕಾಗದದ ಒಂದೇ ಕಡೆ ಸ್ಪಷ್ಟವಾಗಿ ಮಸಿಯಲ್ಲಿ ಬರೆದು ಲೇಖನಗಳನ್ನು ಕಳುಹಿಸಬೇಕು. **ಎಂದು ಸಲ ಪ್ರಕಟಿಸಿದ ಮತ್ತು ಹೆಸರು ವಿಳಾಸಗಳಿಲ್ಲದ ಲೇಖನಗಳನ್ನು ಅಂಗೀಕರಿಸುವುದಿಲ್ಲ.** ಲೇಖನಗಳನ್ನು ತಿದ್ದಿ ಪ್ರಕಟಿಸಲು ಸಂಪಾದಕರಿಗೆ ಹಕ್ಕುಂಟು. ಪ್ರಕಟಿಸಿದ ಲೇಖನಗಳ ಎಲ್ಲ ಹಕ್ಕುಗಳು ಗೋಪಾಲನಿಗೆ ಸೇರಿದ್ದು. ಅಸ್ವೀಕೃತವಾದ ಲೇಖನಗಳನ್ನು ಹಿಂದಕ್ಕೆ ಕಳುಹಿಸಲು ಸಾಧ್ಯವಿಲ್ಲದ್ದರಿಂದ ಲೇಖಕರು ತಮ್ಮ ಲೇಖನಗಳ ನಕಲನ್ನಿಟ್ಟುಕೊಳ್ಳಬೇಕಾಗಿ ಕೋರಿಕೆ.

**ಎಲ್ಲರಿಗೂ**:—ಎಲ್ಲಾ ಪತ್ರವ್ಯವಹಾರವನ್ನು ನ್ಯೂ ಟ್ರೇಡಿಂಗ್ ಹೋಂ, ಪ್ರಕಾಶಕರು, ಗೋಪಾಲ, ಮಲ್ಲೇಶ್ವರಂ, ಬೆಂಗಳೂರು ಎಂಬ ವಿಳಾಸಕ್ಕೆ ಕಳುಹಿಸಬೇಕು. ಮನಿಯಾರ್ಡರ್, ಪೋಸ್ಟಲ್ ಆರ್ಡರ್, ಚೆಕ್ಕುಗಳನ್ನು ನ್ಯೂ ಟ್ರೇಡಿಂಗ್ ಹೋಂ ಎಂಬ ಹೆಸರಿಗೆ ಬರೆಯಬೇಕು.


# Gopala

(The Leading Anglo-Kannada Monthly)

Good Stories, Articles, Humour, Ladies Page, Silver Screen, Children's Corner, 'No entrance fee' Honest Competitions, Lucky Number Scheme & one art plate are the regular features.

FORTY-EIGHT PAGES.
of interesting matter in every issue.

Single copy: One Anna
Annual Subscription: Re. One

Contributions are welcome.

Agents Wanted in unrepresented areas on attractive terms.

Best medium for Advertising.

*Full particulars from:—*

## The New Trading Home

Publishers—"GOPALA"
Malleswaram P. O. Bangalore.



GOPALA ಸಂಪಾದಕರು:—ಕೆ. ಎಸ್. ನರಸಿಂಹಯ್ಯ. ಗೋಪಾಲ

ಸಂಪುಟ ೧] 1939ನೇ ಇಸವಿ ಆಗಸ್ಟ್ [ಸಂಚಿಕೆ ೩

# ಅಮೃತ ವಚನ

ದಾನಮಾಡಬೇಕೆಂಬ ಉದ್ದೇಶದಿಂದ ಸರಿಯಾದ ಕಾಲದಲ್ಲಿ ಸರಿಯಾದ ಸ್ಥಳದಲ್ಲಿ ಯೋಗ್ಯನಾದಂತಹವನಿಗೆ ದಾನಮಾಡಿ ಇದಕ್ಕೆ ಪ್ರತಿಫಲವನ್ನಪೇಕ್ಷಿಸದಿದ್ದಲ್ಲಿ ಅಂತಹ ದಾನವೇ ಸಾತ್ವಿಕ ದಾನವೆಂದು ಹೇಳಲ್ಪಡುವುದು.

ಪ್ರತಿಫಲಾಪೇಕ್ಷೆಯಿಂದಲೂ, ಇಷ್ಟವಿಲ್ಲದೆಯೂ, ಉದಾಸೀನದಿಂದಲೂ ಮಾಡುವ ದಾನವು ಕೇವಲ ರಾಜಸಿಕ ದಾನವೆಂದು ಹೇಳಲ್ಪಡುವುದು.

ಅನರ್ಹನಾದವನಿಗೂ, ಅಯೋಗ್ಯವಾದಂತಹ ಸ್ಥಳ ಮತ್ತು ಕಾಲದಲ್ಲಿಯೂ, ಅಗೌರವತೆಯಿಂದಲೂ, ತುಚ್ಛ ಭಾವನೆಯಿಂದಲೂ ಮಾಡುವ ದಾನವು ತಾಮಸಿಕ ದಾನವೆಂದು ಹೇಳಲ್ಪಡುವುದು.

ವಿಶ್ವಾಸರಾಹಿತ್ಯರಾಗಿ ಕೊಡುವ ಯಾವುದೇ ದಾನವಾಗಲೀ, ಮಾಡುವ ಯಾವುದೇ ತಪಸ್ಸೇ ಯಾಗಲೀ, ಅಥವಾ ಇನ್ನಾವುದೇ ಕಾರ್ಯವಾಗಲೀ ಅವೆಲ್ಲವೂ 'ಅಸತ್' ಎಂದು ಕರೆಯಲ್ಪಡುವವು ಅವೆಲ್ಲವೂ ಅಪ್ರಯೋಜಕವಾದುವು. ಇಹದಲ್ಲಾಗಲೀ ಪರದಲ್ಲಾಗಲೀ ಅದು ಶೂನ್ಯವೇ ಆಗುವುದು.

—ಗೀತಾ

# ವಿಚಾರ ವಾಹಿನಿ

WORLD NEWS PAPER EXHIBITION
MEGARAVALLI 577 524
Shimoga Dist, Karanataka State, INDIA

## ಕೆಲವು ಮುಖ್ಯ ವಿಷಯಗಳು.

**ಹಳ್ಳಿಯ ಆರ್ಥಿಕ ವಿಚಾರಣೆ.**

ಶ್ರೀ ಡಿ. ಕೃಷ್ಣ ಐಯಂಗಾರ್.

**ಯುವಕರು 'ನಿರಂಕುಶಮತಿ'ಗಳಾಗಬೇಕು.**

ಶ್ರೀ ಕೆ. ವಿ. ಪುಟ್ಟಪ್ಪ.

**ರಾಕ್ಷಸನ ಮುದ್ರಿಕೆ.**

ಶ್ರೀ ತೀ. ನಂ. ಶ್ರೀಕಂಠಯ್ಯ.

**ವೈರಾಗ್ಯದ ಮಹಿಮೆ.**

ಶ್ರೀ ಕೆ. ವಿ

ಸಂಪಾದಕ:

**ಕೂಡಲಿ ಚಿದಂಬರಂ**

ಬಿ. ಎ., ಎಲ್‌ಎಲ್. ಬಿ.

ಸಂಚಿಕೆ

# ವಿಷಯ ಸೂಚಿಕೆ


| | | | ಪುಟ |
|---|---|---|---|
| ೧. | ಆನಂದಮಯ ಈ ಜಗಹೃದಯ | ಶ್ರೀಮಾನ್ ಕೆ. ವಿ. ಪುಟ್ಟಪ್ಪ, ಎಂ. ಎ. | ೧೨೯ |
| ೨. | ಕೊಳಲುಲಿ | ,, ಪು. ತಿ. ನರಸಿಂಹಾಚಾರ್, ಬಿ.ಎ. | ೧೩೦ |
| ೩. | ಯುವಕರು 'ನಿರಂಕುಶಮತಿ'ಗಳಾಗಬೇಕು | ,, ಕೆ. ವಿ. ಪುಟ್ಟಪ್ಪ, ಎಂ. ಎ. | ೧೩೧ |
| ೪. | ಹಳ್ಳಿಯ ಆರ್ಥಿಕ ವಿಚಾರಣೆ | ,, ಡಿ. ಕೃಷ್ಣ ಐಯಂಗಾರ್, ಎಂ. ಎ. | ೧೪೧ |
| ೫. | ನೈರಾಗ್ಯದ ಮಹಿಮೆ (ಸಣ್ಣ ಕಥೆ) | ,, ಕೆ. ವಿ. ಪುಟ್ಟಪ್ಪ, ಎಂ. ಎ. | ೧೪೮ |
| ೬. | ರಾಕ್ಷಸನ ಮುದ್ರಿಕೆ (ನಾಟಕ) | ,, ತೀ. ನಂ. ಶ್ರೀಕಂಠಯ್ಯ, ಎಂ. ಎ. | ೧೫೫ |
| ೭. | ಸಾದರ ಸ್ವೀಕಾರ | | ೧೭೧ |
| ೮. | ವಿಚಾರ ವಾಹಿನಿ | | ೧೭೬ |


ಮ್ಯೂನಿಕ್ಕಿನ ಒಪ್ಪಂದ ಮತ್ತು ಮಧ್ಯಯೂರೋಪಿನಲ್ಲಿ ಜರ್ಮನಿಗೆ ಉಂಟಾಗಿರುವ ಅನುಕೂಲ ಪರಿಸ್ಥಿತಿಗಳು—ಕರ್ನಾಟಕ ಏಕೀಕರಣ—ಕರ್ನಾಟಕದಲ್ಲಿ ಆರ್ಥಿಕ ಚಳವಳಿ ನಡೆಯಬೇಕು—ಕನ್ನಡ ನುಡಿ ಬಿಟ್ಟರೆ ಕನ್ನಡನಾಡು ಬಿಟ್ಟಂತೆ; ಭಾಷೆಗೇಡಿ ದೇಶಗೇಡಿ—ಹೈದರಾಬಾದಿನಲ್ಲಿ ನಾಗರಿಕ ಹಕ್ಕುಗಳು—ಜನಸಾಮಾನ್ಯದಲ್ಲಿ ಜ್ಞಾನವನ್ನು ಹರಡಿದರೆ ಸಾಕೆ? ಅಥವಾ ಅವರಿಗೆ ಓದುಬರಹ ಕಲಿಸಬೇಕೆ?—ಅಡಿಗೆಯ ಮನೆಯ ದಾಸ್ಯ—ಅತ್ಯಂತ ಪ್ರಾಚೀನ ಕನ್ನಡ ಶಾಸನ—ಕಾಂಗ್ರೆಸಿನಲ್ಲಿಯೂ ಕೋಮುವಾರು ಭಾವನೆಯೆ? ಐಕಮತ್ಯವಿಲ್ಲದೆ ಸ್ವಾತಂತ್ರ್ಯವಿಲ್ಲ—ಪ್ರತ್ಯೇಕ ಚುನಾವಣಾ ಕ್ಷೇತ್ರಗಳು—ಕಲೆಯ ಕೊಲೆ—ಶ್ರೀ 'ಸಂಸ'ರು—ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು—ಮೈಸೂರು ವಿಶ್ವವಿದ್ಯಾನಿಲಯದ ಧ್ಯೇಯಗಳು—ಪ್ರೌಢವಿದ್ಯಾಭ್ಯಾಸದ ಸಮಸ್ಯೆ—ಕನ್ನಡನಾಡಿನಲ್ಲಿ ಒಳ ವ್ಯಾಪಾರದ ಸೌಕರ್ಯಗಳು—1938ರಲ್ಲಿ ಪ್ರಕಟವಾದ ಗ್ರಂಥಗಳು—ಅಖಿಲ ಕರ್ನಾಟಕ ಮಕ್ಕಳ ಕೂಟ—ಸಂಸ್ಥಾನಾಧೀಶರಿಗೆ ವೈಸರಾಯರ ಬುದ್ಧಿವಾದ.



# ವಿಚಾರ ವಾಹಿನಿ

ಸಂಪುಟ ೧ ● ಮಾರ್ಚಿ ೧೯೩೯ ● ಸಂಚಿಕೆ ೩

## ಆನಂದಮಯ ಈ ಜಗಹೃದಯ

ಆನಂದಮಯ ಈ ಜಗಹೃದಯ:
ಎತಕೆ ಭಯ? ಮಾಣೊ!
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ!

ಬಿಸಿಲಿದು ಬರಿ ಬಿಸಲಲ್ಲವೊ,
ಸೂರ್ಯನ ಕೈಪೆ ಕಾಣೊ!
ಸೂರ್ಯನು ಬರಿ ರವಿಯಲ್ಲವೊ:
ಆ ಭ್ರಾಂತಿಯ ಮಾಣೊ!

ರವಿವದನನೆ ಶಿವಸದನವೊ:
ಬರಿ ಕಣ್ಣದು ಮಣ್ಣೊ!
ಶಿವನಿಲ್ಲಡೆ ಸೌಂದರ್ಯವೆ?
ಶವಮುಖದಾ ಕಣ್ಣೊ!

ಉದಯದೋಳೇನ್? ಹೃದಯವ ಕಾಣ್!
ಅದೆ ಅಮೃತದ ಹಣ್ಣೊ!
ಶಿವ ಕಾಣದೆ ಕವಿ ಕುರುಡನೊ:
ಶಿವ ಕಾವ್ಯದ ಕಣ್ಣೊ!

—ಕೆ. ವಿ. ಪುಟ್ಟಪ್ಪ.

# ಕೊಳಲುಲಿವು

ಆವನೀ ಉನ್ಮತ್ತ — ಈ ಸರಿಯ ಹೊತ್ತಿನೊಳು
ಕೊಳಲ ಬಾರಿಸಿ ಮಧುರ ರಾಗವನು ರಚಿಪನಿಂತೆ
ಕರಿ ಮುಗಿಲ ಬಲೆಯೊಳಗೆ ಬೆರೆ ಸಿಲುಕಿ ನೋಯುತಿದೆ
ಗಾಳಿ ಬಾನಲೆಯುತಿದೆ ಕಾಳೆಯದ ಭೂತದಂತೆ —

ಈಗಿತ್ತ ಆಗತ್ತ ಕಿವಿಯಾಚೆ ದೂರತ್ತ
ಮುಗಿಲ ಮರೆ ಜೊನ್ನದಿಂ ಬೂದಾದ ರಜನಿ ಪಥದಿ.
ತರಳ ಮುರಲೀನಾದವಿದನೆಲರು ಒಯ್ಯುತಿದೆ
ಬಾಲಕೃಷ್ಣನ ತೃಣಾವರ್ತನಂದೊಯ್ದು ತೆರದಿ —

ಏನು ಜೋದ್ಯವಿದವ್ವ — ತಾಮಸಿಯ ಕಾಳೆದೆಯೊ-
ಳನುರಾಗವುದಿಸಿದೊಲು ತಿಂಗಳನ ಬೆಳಕಿದಾಯ್ತು!
ಎಲರ ನಡೆ ಹಗುರಾಯ್ತು ಬನದ ಬಗೆ ಬೇರಾಯ್ತು
ಆಸೆ ಮುಗಿದೆನ್ನೆದೆಗೆ ಭಾವದಾವೇಗವಾಯ್ತು!

ಆವನೀ ಮಾಯಾವಿ — ಇಂತು ಸಮರಾತ್ರಿಯೊಳು
ಕೊಳಲ ಬಾರಿಸುತಿರುಳ ಮೌನತೆಯ ವ್ಯಥಿಪನಿಂತೆ —
ಬೆಳಕಿರುಳ ಮುದ್ದಿಸಿದೆ ಜಗ ಸೊಗದಿ ನಿದ್ದಿಸಿದೆ
ಗಾಳಿ ಬಾಂದೊಟ್ಟಿಲೊಳು ಪವಡಿಸಿದೆ ಹಸುಳೆಯಂತೆ!

— ಪು. ತಿ. ನ.

# ಯುವಕರು 'ನಿರಂಕುಶಮತಿ'ಗಳಾಗಬೇಕು

**ಅಮೃತ ಪುತ್ರರಲ್ಲಿ ವಿಜ್ಞಾಪನೆ—**

ಮಿತ್ರರೇ, ನಿಮ್ಮ ಮುಂದೆ ನಿಂತು, ನನ್ನ ಕೆಲವು ಅಭಿಪ್ರಾಯಗಳನ್ನು ಪ್ರಕಾಶಪಡಿಸಲು ಅವಕಾಶ ಕಲ್ಪಿಸಿಕೊಟ್ಟುದಕ್ಕಾಗಿ ನಾನು ನಿಮ್ಮೆಲ್ಲರನ್ನು ಮನಮುಟ್ಟಿ ವಂದಿಸುತ್ತೇನೆ.

ನನ್ನ ಅಭಿಪ್ರಾಯಗಳು ಕೆಲವರಿಗೆ ರುಚಿಸದಿರಬಹುದು, ಮತ್ತೆ ಕೆಲವರಿಗೆ ಕ್ರಾಂತಿಕಾರಿಗಳಾಗಿ ತೋರಬಹುದು. ಆದರೂ ನನ್ನ ಮನಸ್ಸಿನಲ್ಲಿ ಯಾರನ್ನಾದರೂ ನೋಯಿಸಬೇಕೆಂಬ ಇಚ್ಛೆ ಲವಲೇಶವೂ ಇಲ್ಲ. ಅಲ್ಲದೆ, ನಾನು ಹೇಳಲಿರುವ ಅಭಿಪ್ರಾಯಗಳು ಅಲ್ಪಾಲೋಚನೆಯಿಂದಾಗಲಿ, ಉದ್ರೇಕದ ಬುದ್ಧಿಯಿಂದಾಗಲಿ, ಅನುದಾರತೆಯಿಂದಾಗಲಿ, ಪ್ರತಿಹಿಂಸಾಭಾವದಿಂದಾಗಲಿ ಬಂದುವಲ್ಲ; ಬಹುಕಾಲದ ದೀರ್ಘ ಮಂಥನದಿಂದ, ಪ್ರಶಾಂತ ಧ್ಯಾನದಿಂದ, ಅನ್ಯಾಯಗಳನ್ನೂ ಅವಿವೇಕಗಳನ್ನೂ ಅಜ್ಞಾನಜನ್ಯವಾದ ಕ್ರೂರ ವರ್ತನೆಗಳನ್ನೂ ಕಂಡಾಗ ಮೂಡಿದ ಸಾತ್ವಿಕ ಕ್ರೋಧದಿಂದ, ನಮ್ಮ ದೇಶ, ನಮ್ಮ ನಾಡು, ನಮ್ಮ ಭಾಷೆ, ನಮ್ಮ ಸಂಸ್ಕೃತಿ. ನಮ್ಮ ಸ್ಥಿತಿಗತಿಗಳು ಉಚ್ಛ್ರಾಯವಾಗಬೇಕೆಂಬ ಹಂಬಲದಿಂದ ಮೂಡಿದುವಾಗಿವೆ. ಆದಕಾರಣ ತಾಳ್ಮೆಯಿಂದ ಆಲಿಸಿ, ವಿವೇಕದಿಂದ ಭಾವಿಸಿ, ವಿಮರ್ಶಬುದ್ಧಿಯಿಂದ ಪರೀಕ್ಷಿಸಿ, ಒಪ್ಪಿಗೆಯಾದುದನ್ನು ಸ್ವೀಕರಿಸಿ, ತಪ್ಪುಗಳನ್ನು ತಿದ್ದಿಕೊಳ್ಳಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ.

ನಾನಿಲ್ಲಿ ಗುರುಸ್ಥಾನದಲ್ಲಿ ನಿಂತಿಲ್ಲ; ನೀವೂ ಶಿಷ್ಯಸ್ಥಾನದಲ್ಲಿ ಕುಳಿತಿಲ್ಲ. ನಾನು ಉಪದೇಶ ಮಾಡುತ್ತಿಲ್ಲ; ವಿಜ್ಞಾಪಿಸುತ್ತಿದ್ದೇನೆ. ನನ್ನಂತೆಯೇ ನಿಮ್ಮಲ್ಲಿ ಅನೇಕರು ಜಿಜ್ಞಾಸೆ ಮಾಡಿರಬಹುದು. ಹಾಗಿದ್ದರೆ ನಮ್ಮ ಅಭಿಪ್ರಾಯಗಳು ಘರ್ಷಿಸದೆ ಮೃದುವಾಗಿ ಹೊಂದಿಕೊಳ್ಳುತ್ತವೆ. ಜಿಜ್ಞಾಸೆ ಮಾಡದೆ ಇದ್ದವರಿಗೆ ಜಿಜ್ಞಾಸೆ ಮಾಡಲು ಭಾವಾವಕಾಶಗಳು ದೊರೆಯುತ್ತವೆ. ಆದ್ದರಿಂದ ಯಾರೊಬ್ಬರೂ ನನ್ನ ಮಾತುಗಳನ್ನು ಪಚನಮಾಡದೆ ನುಂಗದಿರಲಿ; ಮತಿಯ ಒರೆಗಲ್ಲಿಗೆ ಹಚ್ಚದೆ ಸ್ವೀಕರಿಸದಿರಲಿ; ಧೀರವಾಗಿ ವಿಮರ್ಶಿಸದೆ ಒಪ್ಪದಿರಲಿ. ಆದರೆ ಪಕ್ಷಪಾತವಿಲ್ಲದೆ ಕಿವಿಗೊಟ್ಟು ಮಾತ್ರ ಕೇಳಿ.

ಯುವಕರು ನಿರಂಕುಶಮತಿಗಳಾಗಬೇಕು. ನಿರಂಕುಶಮತಿತ್ವ ಎಂದರೆ ನಿರಂಕುಶ ಪ್ರಭುತ್ವದಂತೆ ಎಂದು ತಿಳಿಯಬಾರದು. ನಿರಂಕುಶ ಪ್ರಭುತ್ವದ ಲಕ್ಷಣವೆಂದರೆ ವಿವೇಕಹೀನವಾದ ಸ್ವಚ್ಛಂದ ವರ್ತನೆ. ಸಂಯಮಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶ ಮತಿ.

ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ಕೈದೀವಿಗೆ. ಮತಿಯ ದೆಸೆಯಿಂದಲೇ, ಪ್ರಾಣಿಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ. ಮತಿಯ ಕೃಪಾಮಹಿಮೆಯಿಂದಲೇ ನಾವು ಮನುಷ್ಯತ್ವದಿಂದ ದೇವತ್ವಕ್ಕೆ ಏರಬೇಕಾಗಿದೆ. ಮತಿ ಮನುಷ್ಯತ್ವದ ಹಕ್ಕು. ಆ ಹಕ್ಕನ್ನು ಬಿಟ್ಟವನು ಮನುಷ್ಯತ್ವವನ್ನೇ ಕಳೆದುಕೊಳ್ಳುತ್ತಾನೆ. ಆದ್ದರಿಂದ, ಸಹೋದರರೇ, ಮತಿ ನಿಮ್ಮ ನಚ್ಚಿನ ರತ್ನದೀವಿಗೆಯಾಗಲಿ.

ಸ್ವಲ್ಪವಾಗಿಯೋ ಹೆಚ್ಚಾಗಿಯೋ ಮತಿ ಮನುಷ್ಯರೆಲ್ಲರಲ್ಲಿಯೂ ಇರುತ್ತದೆ. ಆದರೆ ಈಗೇನಾಗಿದೆ ಅದರ ಗತಿ ? ಮೌಢ್ಯದಿಂದಲೂ ಮತಾಚಾರಗಳಿಂದಲೂ ಸಮಾಜಭೀತಿಯಿಂದಲೂ ರಾಜಭಯದಿಂದಲೂ ಸ್ವರ್ಗ ನರಕ ದೇವಾನುದೇವತೆಗಳ ಮೋಹ ಮಾಯೆಗಳಿಂದಲೂ ಅದು ಸತ್ವ ರಹಿತವಾಗಿದೆ; ಕಾಂತಿಹೀನವಾಗಿದೆ. ಚಕ್ರವರ್ತಿಯಂತೆ ಸಿಂಹಾಸನದಲ್ಲಿ ಮಂಡಿಸಬೇಕಾದುದು

ತೊತ್ತಾಗಿ ಕಾಲೊತ್ತಬೇಕಾಗಿದೆ. ಎಂದರೆ ಮತಿಗೆ ಅಂಕುಶಗಳು ಅತಿಯಾಗಿ ಹೋಗಿ ಅದರ ಜೀವನವೇ ನಿಸ್ತೇಜವಾಗಿದೆ. ಯುವಕ ಮಿತ್ರರೇ, ಅಧೋಗತಿಗಿಳಿದಿರುವ ನಮ್ಮ ಮತಿಯನ್ನು ಮತ್ತೆ ಆಕಾಶಕ್ಕೆತ್ತಬೇಕು.

ಮತಿಯನ್ನು ನಿಸ್ತೇಜಗೈದಿರುವ ಕೆಲವು ಅಂಕುಶಗಳನ್ನು ವಿವರಿಸುತ್ತೇನೆ. ಸಾವಧಾನದಿಂದ ಕೇಳಿ.

ಮತವು ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ. ಪರಮ ಶಾಂತಿಯೂ ಪರಮಾನಂದವೂ ಆಗಿರುವ ಪರಮೇಶ್ವರನನ್ನು ಪಡೆಯಲೆಂದು ಜೀವವು ಮಾಡುವ ಪ್ರಯತ್ನವೇ ಮತದ ನಿಜಾವಸ್ಥೆ. ಆದರೆ ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹವು ಬರಿಯ ಸಾಮಾಜಿಕವಾದ ಕಟ್ಟು ಕಟ್ಟಳೆಗಳ ಕಚ್ಚಾಟವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನಮಾಡದಿರುವುದು; ನಾಮ ಹಾಕಿಕೊಳ್ಳುವುದು, ವಿಭೂತಿ ಹೆಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು; ಕೆಲವರನ್ನು ಸಾರ್ವಜನಿಕವಾದ ಭಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನಗಳಿಗೆ ಸೇರಿಸದಿರುವುದು; ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತುಮಾರು ಮಾತ್ರ ಬರಗೊಡಿಸುವುದು; ಹಾಗೆ ಬರಗೊಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು; ಇತ್ಯಾದಿ ನೂರಾರು ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ಆಚಾರ ವ್ಯವಹಾರ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಉಪನಿಷತ್ತು, ಭಗವದ್ಗೀತೆ ಮತ್ತು ಮಹಾ ವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತಸಂದೇಶವು ಅರಣ್ಯರೋದನವಾಗಿದೆ.

ಆದರೆ ಇನ್ನು ಹೆಚ್ಚು ಕಾಲ ಆ ಅಮೃತಸಂದೇಶಕ್ಕೆ ಕಿವುಡಾಗಿರಲಾರೆವು. ಹಾಗಿದ್ದರೆ ನಮಗೂ ನಮ್ಮ ಸಂಸ್ಕೃತಿಗೂ ಮರಣವೇ ಗತಿಯಾಗುತ್ತದೆ. ಯುವಕರಾದವರು ಎಚ್ಚತ್ತುಕೊಂಡು ದೀರ್ಘ ದೃಷ್ಟಿಯಿಂದಲೂ ವಿಶಾಲ ಹೃದಯದಿಂದಲೂ ಸನಾತನವಾದರೂ ಚಿರ ನವೀನವಾದ ಆತ್ಮನ ಚಿರಂತನ 'ದರ್ಶನ'ವನ್ನು ಪಡೆದು ತಮ್ಮನ್ನೂ ದೇಶವನ್ನೂ ಉದ್ಧಾರ ಮಾಡಿಕೊಳ್ಳಬೇಕಾಗಿದೆ.

ಸರ್ವ ಮತಗಳಿಗಿಂತಲೂ ಶುದ್ಧ ಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ಆ ಗುರು, ಈ ಆಚಾರ್ಯ, ಆ ಧರ್ಮಶಾಸ್ತ್ರ, ಈ ಮನುಸ್ಮೃತಿ ಮೊದಲಾದುವು ಏನೇ ಹೇಳಲಿ ಎಲ್ಲವನ್ನೂ ವಿಮರ್ಶಿಸುವ ಪರೀಕ್ಷಿಸುವ, ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ. ಈಶ್ವರನು ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ. ಮತಿಯನ್ನು ತಿರಸ್ಕರಿಸಿದರೆ ಈಶ್ವರನ ಜ್ಯೋತಿಯನ್ನು ತಿರಸ್ಕರಿಸಿದಂತಾಗುತ್ತದೆ. ಅಂಥವನೇ ನಿಜವಾಗಿಯೂ ನಾಸ್ತಿಕನು. ಮೌಢ್ಯವೇ ಈಶ್ವರನಿಂದೆ. ಯಾವ ರೂಪದಲ್ಲಿಯೇ ಆಗಲಿ ಯಾವ ವೇಷದಲ್ಲಿಯೇ ಆಗಲಿ ತಿಳಿದೂ ತಿಳಿದೂ ಮೂಢತನವನ್ನು ಆರಾಧಿಸಿ ಬೋಧಿಸಿ ಲಾಭ ಪಡೆಯುತ್ತ ನೆಮ್ಮದಿಯಾಗಿರುವವನು ಪಾಷಂಡಿಯಾಗುತ್ತಾನೆ.

ಚತುರ್ಮುಖ ಬ್ರಹ್ಮನೇ ಸಾಕ್ಷಾತ್ತಾಗಿ ಬಂದು, ನಾನೀಗ ನಿನ್ನೊಡನೆ ಮಾತಾಡುತ್ತಿರುವಂತೆ, ಋಷಿಗಳಿಗೆ ವೇದಗಳನ್ನು ಉಪನ್ಯಾಸಿಸಿದನು ಎಂದು ಹೇಳಿದರೆ ಕಣ್ಣು ಮುಚ್ಚಿಕೊಂಡು ನಂಬಬೇಡಿ. ಯಾವ ಕಾಲದಲ್ಲಿಯೋ ಯಾವ ಸಮಾಜಕ್ಕಾಗಿಯೋ ಮನು ಬರೆದಿಟ್ಟ ಕಟ್ಟಳೆಗಳು ಇಂದಿಗೂ ನಮ್ಮನ್ನಾಳಬೇಕೆಂದು ಹೇಳಿದರೆ ತಲೆದೂಗಿಬಿಡಬೇಡಿ. ಆಗಿನ ಮನು ಪವಿತ್ರನಾದರೆ ಈಗಿನ ಮಹಾತ್ಮಾ ಗಾಂಧಿ ಪವಿತ್ರನಲ್ಲವೆ? ನಂಬುಗೆ ಪುರಾತನವಾದ ಮಾತ್ರಕ್ಕೆ ಸತ್ಯವಾದುದೆಂದು

ಭಾವಿಸಬೇಡಿ. ವಿಜ್ಞಾನಪ್ರಪಂಚದಲ್ಲಿ ಹೊಸದಾಗಿ ಕಂಡುಹಿಡಿದ ಸತ್ಯಗಳು ಹಳೆಯ ಅರ್ಧ ಸತ್ಯಗಳಿಗಿಂತಲೂ ಮಾನ್ಯವಾಗುವುದಾದರೆ ಧರ್ಮಪ್ರಪಂಚದಲ್ಲೇಕೆ ಹಾಗಾಗಬಾರದು ? ವೇದವು ಅನಾದಿಯಾದರೆ ಅನಂತವೂ ಆಗಿರುವುದಿಲ್ಲವೆ? ವೇದವು ಪೂರೈಸಿದ ಗ್ರಂಥವಲ್ಲ; ವೇದದ ಕಟ್ಟಕಡೆಯ ಅಧ್ಯಾಯವು ಅಂದಿಗೇ ಮುಗಿದಿಲ್ಲ. ಅದು ಇಂದಿಗೂ ನಾಳೆಗೂ ಮುಂದುವರಿಯುತ್ತದೆ. ಹಾಗೆಯೇ ಋಷಿಗಳೂ ಆಚಾರ್ಯರೂ ಅಂದಿಗೇ ಪೂರೈಸಿಲ್ಲ, ಕೊನೆಗಂಡಿಲ್ಲ; ಇಂದಿಗೂ ನಾಳೆಗೂ ಬರುತ್ತಲೇ ಇರುತ್ತಾರೆ. ಆದ್ದರಿಂದ ಹೊಸ ಋಷಿಗಳ ಹೊಸ ವೇದವಾಕ್ಯಗಳನ್ನು ಕಿವಿಗೊಟ್ಟು ಕೇಳಿ. ಸಂಕುಚಿತ ಬುದ್ಧಿಯನ್ನು ದೂರ ಮಾಡಿ. ಹೃದಯಜೀವನವು ಹಳೆಯ ನೀರಿನ ಕೊಳಕು ಕೊಳವಾಗದಿರಲಿ; ಯಾವಾಗಲೂ ಹೊಸ ನೀರು ಬಂದು ಹರಿಯುತ್ತಿರುವ ಸ್ವಚ್ಛ ಸಲಿಲಸ್ರೋತವಾಗಿರಲಿ.

ಮಹನೀಯರೇ, ಕೆಲವು ಉದಾಹರಣೆಗಳನ್ನು ತೆಗೆದುಕೊಂಡರೆ ನನ್ನ ಆಶಯವು ನಿಮಗಿನ್ನೂ ಸ್ಪಷ್ಟವಾಗುತ್ತದೆ. ಅಸ್ಪುಟವಾಗಿ ಅನಿರ್ದಿಷ್ಟವಾಗಿ ನಿರಾಕಾರವಾಗಿ ತತ್ತ್ವಪ್ರತಿಪಾದನೆ ಮಾಡುವುದಕ್ಕಿಂತ ದೃಷ್ಟಾಂತಗಳನ್ನೂ ನಿದರ್ಶನಗಳನ್ನೂ ತೆಗೆದುಕೊಂಡು ಭಾವವನ್ನು ವಿವರಿಸುವುದು ಮೇಲು.

ಮತಭ್ರಾಂತಿಯೂ ಮೌಢ್ಯವೂ ವೈಜ್ಞಾನಿಕ ಪ್ರಗತಿಗೆ ಹೇಗೆ ಮಹಾಕಂಟಕಗಳಾದುವು ಎಂಬುದಕ್ಕೆ ಪಾಶ್ಚಾತ್ಯ ದೇಶಗಳ ಕ್ರೈಸ್ತ ಧರ್ಮಚರಿತ್ರೆಯಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಅದರಲ್ಲಿ ಒಂದು– ಸುಪ್ರಸಿದ್ಧ ವಿಜ್ಞಾನಿಯಾಗಿದ್ದ ಗ್ಯಾಲಿಲಿಯೋ ಎಂಬಾತನನ್ನು ಕುರಿತದ್ದು. ಕ್ರೈಸ್ತರಿಗೆ ಬೈಬಲ್ ಪರಮ ಪ್ರಮಾಣವಾದ ಪವಿತ್ರ ಗ್ರಂಥ, ಹಿಂದೂಗಳಿಗೆ ವೇದಗಳಿರುವಂತೆ. ಆದ್ದರಿಂದ ಕ್ರೈಸ್ತ ಪುರೋಹಿತರೂ ಗುರುಗಳೂ ಭಕ್ತ ಜನರೂ ಬೈಬಲ್ಲಿಗೆ ವ್ಯತಿರಿಕ್ತವಾದುದೆಲ್ಲ ಪಾಷಂಡಮತವೆಂದು ಸಾರಿ, ಅಂತಹ ದುರ್ಮತಕ್ಕೆ ಕಾರಣರಾದವರನ್ನು ಜೀವಸಹಿತವಾಗಿ ಸುಡುವುದೇ ಮೊದಲಾದ ಶಿಕ್ಷೆಗಳಿಗೆ ಗುರಿಮಾಡುತ್ತಿದ್ದರು. ಎಷ್ಟೋ ಜನ ಸಾತ್ತ್ವಿಕ ಜೀವಿಗಳೂ ಮೇಧಾವಿಗಳೂ ಆದ ಸತ್ಯಾರಾಧಕರು ಬೈಬಲ್ಲಿಗೂ ಮತ್ತು ಕ್ರೈಸ್ತ ಗುರುಸಂಪ್ರದಾಯಕ್ಕೂ ವ್ಯತಿರಿಕ್ತವಾದ ಖಗೋಲಶಾಸ್ತ್ರ, ಜೀವಶಾಸ್ತ್ರ ಮತ್ತು ಭೌತಶಾಸ್ತ್ರಗಳ ಅಮೂಲ್ಯ ಸತ್ಯಗಳನ್ನು ಕಂಡುಹಿಡಿದು ಹೇಳಿದುದರ ಫಲವಾಗಿ ಆ ಪುರೋಹಿತರ ಕ್ರೋಧಾಗ್ನಿಗೆ ಸಿಕ್ಕಿ ಭಸ್ಮೀಭೂತರಾಗಬೇಕಾಯಿತು.

ಗ್ಯಾಲಿಲಿಯೋ ಎಂಬಾತನು ದೂರದರ್ಶಕ ಯಂತ್ರವನ್ನು ಕಂಡುಹಿಡಿದು, ಗ್ರಹ ಚಂದ್ರ ತಾರೆಗಳನ್ನು ನೋಡಿ ಪರೀಕ್ಷಿಸಿದುದರ ಫಲರೂಪವಾಗಿ ಭೂಮಿ ಇತರ ಗ್ರಹಗಳಂತೆ ಸೂರ್ಯನ ಸುತ್ತ ಸುತ್ತುತ್ತದೆ ಎಂದು ಪ್ರಯೋಗಪೂರ್ವಕವಾಗಿ ಸಿದ್ಧಾಂತ ಮಾಡಿದನು. ಆದರೆ ಕ್ರೈಸ್ತ ಸಂಪ್ರದಾಯಕ್ಕನುಸಾರವಾಗಿ ಭೂಮಿ ಜಗತ್ತಿನ ಕೇಂದ್ರಸ್ಥಾನ; ಸೂರ್ಯ ನಕ್ಷತ್ರಗಳೆಲ್ಲ ಭೂಮಿಯ ಸುತ್ತ ಸುತ್ತುತ್ತವೆ. ಆದ್ದರಿಂದಲೇ ಕ್ರೈಸ್ತ ಗುರುಗಳು ಗ್ಯಾಲಿಲಿಯೊವನ್ನು ಪಾಷಂಡಿಯೆಂದು ಸಾರಿ ವಿಚಾರಣೆಗೆ ಒಳಪಡಿಸಿದರು. ಮುಟ್ಠಾಳರೆಲ್ಲ ಸೇರಿ ಮೇಧಾವಿಯನ್ನು ಕುರಿತು ಹೀಗೆ ಹೇಳಿದರು: "ನಮ್ಮ ಪವಿತ್ರ ಧರ್ಮಶಾಸ್ತ್ರವು ಭೂಮಿಯೇ ವಿಶ್ವದ ಕೇಂದ್ರವೆಂದು ಹೇಳುತ್ತದೆ. ಸೂರ್ಯ ಚಂದ್ರ ನಕ್ಷತ್ರಗಳೆಲ್ಲ ತನ್ನ ಮಕ್ಕಳಾದ ಮನುಷ್ಯರ ಪ್ರಯೋಜನಕ್ಕಾಗಿ ದೇವರು ಆಕಾಶದಲ್ಲಿಟ್ಟಿರುವ ಅಲಂಕಾರ ದೀಪಗಳು, ಅವು ಭೂಮಿಯ ಸುತ್ತ ಸುತ್ತುತ್ತವೆ. ಭೂಮಿ ತನಗಿಂತಲೂ ಬಹುಪಾಲು ದೊಡ್ಡದಾಗಿರುವ ಸೂರ್ಯನ ಸುತ್ತಲೂ ಸುತ್ತುವ ಅನೇಕ ಗ್ರಹಗಳಲ್ಲಿ ಒಂದು ಸಣ್ಣ ಯಃಕಶ್ಚಿತ ಗ್ರಹಮಾತ್ರವೆಂದು ಸಿದ್ಧಾಂತಮಾಡಿ ನಮ್ಮನ್ನು ಸೃಷ್ಟಿಸಿದ ಕರುಣಾಮಯನಾದ ಸೃಷ್ಟಿಕರ್ತನಿಗೂ, ಆತನ ವಾಣಿಗೂ ಆತನ ಭಕ್ತರಿಗೂ ಅವಮಾನಮಾಡಿದ್ದೀಯೆ. ಅಲ್ಲದೆ ನೀನು ಹೇಳುವುದು ಬೈಬಲ್ಲಿಗೆ ವ್ಯತಿರಿಕ್ತವಾದುದರಿಂದ ಅದು ಸುಳ್ಳು. ನಿನ್ನ ಸಿದ್ಧಾಂತವನ್ನು ವಾಪಸು ತೆಗೆದುಕೊಂಡು

ನಮ್ಮ ಪವಿತ್ರ ಮತವು ಹೇಳುವ ಸಿದ್ಧಾಂತವನ್ನು ಒಪ್ಪಿಕೊಳ್ಳದಿದ್ದರೆ ಪವಿತ್ರ ಮತದ ಉದ್ಧಾರಕ್ಕಾಗಿಯೂ ಬೈಬಲ್ಲಿನ ಗೌರವಾರ್ಥವಾಗಿಯೂ ಪಾಷಂಡಿಗಳಿಗೆ ಭೀತಿ ಹುಟ್ಟಿಸುವ ನಿಲುವಾಗಿಯೂ ಸೃಷ್ಟಿಕರ್ತನ ಮಹಿಮೆ ಪೂಜೆಗಳಿಗಾಗಿಯೂ ನಿನ್ನ ಆತ್ಮದ ಪ್ರಾಯಶ್ಚಿತ್ತ ಮತ್ತು ಮೋಕ್ಷಾರ್ಥವಾಗಿಯೂ ನಿನ್ನನ್ನು ಜೀವಸಹಿತವಾಗಿ ಸುಡುತ್ತೇವೆ! ಹೇಳು! ಸುಳ್ಳು ಸಿದ್ಧಾಂತವನ್ನು ವಾಪಸು ತೆಗೆದುಕೊಳ್ಳುತ್ತೀಯೋ? ಜೀವಸಹಿತವಾಗಿ ಸುಡಿಸಿಕೊಳ್ಳುತ್ತೀಯೋ?"

ಗ್ಯಾಲಿಲಿಯೋಗೆ ಚಿನ್ನಾಗಿ ಗೊತ್ತು--ತನ್ನ ಸಿದ್ಧಾಂತವೇ ಸರಿ ಎಂದು. ಆದರೆ ವಾಪಸು ತೆಗೆದುಕೊಳ್ಳದಿದ್ದರೆ ಹಿಂದೆ ಕೆಲವರನ್ನು ಸುಟ್ಟ ಹಾಗೆ ತನ್ನನ್ನು ಸುಡುತ್ತಾರೆ ಎಂದೂ ಆತನಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ಆ ಮುಟ್ಠಾಳರ ತೃಪ್ತಿಗಾಗಿ ತನ್ನ ಸಿದ್ಧಾಂತವನ್ನು ವಾಪಸು ತೆಗೆದುಕೊಂಡು, ಅವರ ಸಿದ್ಧಾಂತವೇ ಸರಿಯೆಂದು ಒಪ್ಪಿ ಬಿಡುಗಡೆ ಪಡೆದನು. ಆದರೆ ಕೋರ್ಟಿನಿಂದ ಹೊರಗೆ ಬರುವಾಗ ತನ್ನಷ್ಟಕ್ಕೆ ತಾನೇ "ನಾನು ನೋಪಿಗೆ ಹೆದರಿ ವಾಪಸು ತೆಗೆದುಕೊಂಡರೇ ನಾಯಿತು--ಭೂಮಿ ಸೂರ್ಯನ ಸುತ್ತ ಸುತ್ತಿಯೇ ಸುತ್ತುತ್ತದೆ" ಎಂದುಕೊಂಡನಂತೆ. ಹೀಗೆ ಮತಿಹೀನವಾದ ಮತವು ಜ್ಞಾನದ ಪ್ರಗತಿಗೆ ಅಡಚಣೆಯಾಗಿರುವುದಕ್ಕೆ ಸಾವಿರಾರು ನಿದರ್ಶನಗಳು ಹಿಂದೆಯೂ ಸಿಕ್ಕುತ್ತವೆ; ಇಂದೂ ದೊರೆಯುತ್ತವೆ.

ಕೆಲವು ತಿಂಗಳ ಹಿಂದೆ ಪತ್ರಿಕೆಯೊಂದರಲ್ಲಿ ಯಾರೋ ಒಬ್ಬರಿಗೆ ಯಾವುದೋ ದೇವತೆ ಯಾವುದೋ ತೋಟದಲ್ಲಿ ಕಾಣಿಸಿಕೊಂಡಂತೆಯೂ ಆ ದೇವತೆ "ಎಲ್ಲರೂ ಇಂತಿಷ್ಟು ದಿನಗಳ ಒಳಗಾಗಿ ಉಗಾದಿ ಹಬ್ಬವನ್ನು ಮಾಡದಿದ್ದರೆ ಮನೆಮನೆಗೂ ಒಂದೊಂದು ಜೀವವನ್ನು ಅಪಹರಿಸುತ್ತೇನೆ" ಎಂದು ಹೇಳಿದ ಹಾಗೂ ಪ್ರಕಟವಾಗಿದ್ದಿತು. ಮಾಡಬೇಕಾದ ನೈವೇದ್ಯಗಳ ವಿವರವೂ ಪ್ರಮಾಣವೂ ಕೂಡ ಅಚ್ಚಾಗಿತ್ತು. ಅನೇಕರು ಹೆದರಿಯೇ ಹಬ್ಬಮಾಡಿಕೊಂಡು ತಿಂದರು. ಹಬ್ಬಮಾಡಿಕೊಂಡು ತಿಂದುದರಿಂದ ಅಪಾಯವೇನಿಲ್ಲ. ಆದರೆ ಅಂತಹ ಮೂಢ ಭಾವಗಳ ಪ್ರಚಾರ ದುಷ್ಪರಿಣಾಮಕಾರಿಯಾದುದಲ್ಲವೇ? ಅದರಲ್ಲಿಯೂ ಹಳ್ಳಿಗಳಲ್ಲಿ ಪತ್ರಿಕೆಗಳೆಂದರೆ ವೇದವಾಕ್ಯವಾಗಿವೆ. ಪತ್ರಿಕೆಗಳಲ್ಲಿ ಬಂದಿದೆ ಎಂದರೆ ಏನನ್ನು ಬೇಕಾದರೂ ನಂಬುತ್ತಾರೆ. ವೇದ ಧರ್ಮಶಾಸ್ತ್ರಗಳಲ್ಲಿ ಹೇಳಿದೆ ಎಂದರೆ ಎಂತಹ ಕ್ರೌರ್ಯವನ್ನಾದರೂ ಸರಿ ಎಂದು ನಂಬುವಂತೆ! ಅಚ್ಚಿನಲ್ಲಿ ಅವರಿಗಷ್ಟು ಗೌರವ; ನಮಗೆ ಸಂಸ್ಕೃತ ಶ್ಲೋಕಗಳಲ್ಲಿರುವಂತೆ. ದುಡ್ಡುಕೊಟ್ಟರೆ ಸರಿ 'ಮೊಲಕ್ಕೆ ಮೂರು ಕೊಂಬುಗಳಿವೆ; ಆ ಕೊಂಬುಗಳ ತುದಿಯಲ್ಲಿ ಕಣ್ಣುಗಳಿವೆ' ಎಂದು ಬೇಕಾದರೂ ಅಚ್ಚು ಮಾಡುತ್ತಾರೆ ಎಂಬ ಸಂಗತಿ, ಪಾಪ, ಆ ಹಳ್ಳಿಗರಿಗೇನು ಗೊತ್ತು?

ಹಾಗೆಯೇ ಪರ್ಜನ್ಯ ಜಪಮಾಡಿ ಮಳೆಬರಿಸಿದರು ಎಂಬುವ ವಿಷಯ. ಅದನ್ನು ಕುರಿತು ಎಷ್ಟು ಮಂದಿ ನಿಷ್ಪಕ್ಷಪಾತವಾಗಿ ಧೀರ ಮತಿಯಿಂದ ಆಲೋಚಿಸಿದ್ದಾರೆ? ಸಹರಾ ಮರುಭೂಮಿಗೆ ಪುರೋಹಿತರನ್ನು ಕಳುಹಿಸಿ ಪರ್ಜನ್ಯ ಜಪಮಾಡಿಸಿದರೆ ಮಳೆಬಂದು ಅದು ಫಲವಾಗುತ್ತದೆಯೆ? ಆಗುತ್ತದೆ ಎಂದು ನಿರ್ಣಯವಾಗುವ ವರೆಗೆ ನಂಬುಗೆ ಕುರುಡಲ್ಲವೆ? ಹೃತ್ಪೂರ್ವಕವಾದ ಪ್ರಾರ್ಥನೆಯಿಂದ ಪ್ರಕೃತಿ ನಿಯಮಗಳು ಮನಕರಗುತ್ತವೆಯೆ? ಒಂದು ವೇಳೆ ಕರಗುವುದಾದರೂ ರೈತಾದಿ ಜನಗಳು ಮನೆಮನೆಯಲ್ಲಿಯೂ ಮೂರುಹೊತ್ತೂ 'ಭಗವಂತ, ಮಳೆಯನ್ನು ನಿಲ್ಲಿಸು' ಎಂದು ಬೇಡುವ ಆರ್ತ ಧ್ವನಿಗಿಂತಲೂ ದುಡ್ಡುಕೊಟ್ಟು ಮಾಡಿಸುವ ಜಪಕ್ಕೆ ಜಗಚ್ಚಕ್ತಿ ಹೆಚ್ಚಾಗಿ ಕೃಪೆದೋರುತ್ತದೆಯೆ? ಯುವಕರೆಲ್ಲರೂ ಇಂತಹ ಪ್ರಶ್ನೆಗಳನ್ನು ಧೀರತನಾಗಿ ಕೇಳಿಕೊಳ್ಳಬೇಕು. ಧೀರವಾದ ಉತ್ತರಗಳನ್ನು ಕಂಡುಹಿಡಿದುಕೊಳ್ಳಬೇಕು.

ಏಕೆಂದರೆ ಇಂದು ಪರ್ಜನ್ಯ ಜಪಮಾಡಿ ಮಳೆಬರಿಸಿದವರು ನಾಳೆ ರಾಮಧ್ಯಾನಮಾಡಿ ಪ್ಲೇಗು ಓಡಿಸಲಾರರೆ ಎಂದು ಮೂಢರು ಆ ರೋಗಕ್ಕೆ ಬೇಕಾಗುವ ವೈದ್ಯಕಾರ್ಯಗಳನ್ನು ಮಾಡದೆ ನಾಶ

ವಾಗಬಹುದೇನು! ಅಂತಹ ಮೌಢ್ಯದಿಂದ ನಾಶವಾಗುತ್ತಿರುವುದನ್ನು ನಾವು ಕಣ್ಣಾರೆ ಕಾಣಬಹುದು. ಉದ್ದೇಶವು ಎಷ್ಟೇ ಶ್ಲಾಘ್ಯವಾಗಲಿ ಆದು ತಿಳಿವಳಿಕೆಯಿಂದ ಕೂಡಿರದಿದ್ದರೆ ಅಪಾಯವಾಗುತ್ತದೆ. ಒಂದು ಪಟ್ಟಣದಲ್ಲಿ ಸಿಡುಬು ರೋಗವು ತಲೆದೋರಿ ಎಲ್ಲೆಲ್ಲಿಯೂ ಜನರು ಸಾಯುತ್ತಿದ್ದರಂತೆ. ಆ ನಗರದ ದೊಡ್ಡ ಪಾದ್ರಿ ಸಿಡುಬಿನ ರೋಗವನ್ನು ಓಡಿಸುವುದಕ್ಕೆಂತ ಜನರನ್ನೆಲ್ಲ ಚರ್ಚಿನಲ್ಲಿ ಒಟ್ಟು ಗೂಡಿಸಿ ದೇವರ ಪ್ರಾರ್ಥನೆ ಮಾಡಿಸಿದನಂತೆ. ಆದರೆ ಆ ಗುಂಪಿನಲ್ಲಿ ಸಿಡುಬಿನ ಸೋಂಕು ತಗುಲಿ ದವರು ಇದ್ದುದರಿಂದ ಜನರು ಸಿಡುಬಿನಿಂದ ತಮ್ಮನ್ನು ಪಾರುಮಾಡು ಎಂದು ದೇವರನ್ನು ಬೇಡುತ್ತಿ ದ್ದಾಗಲೇ ಆ ಭಯಂಕರ ರೋಗವು ನೆರೆದವರಲ್ಲಿ ಒಬ್ಬರಿಂದೊಬ್ಬರಿಗೆ ಹರಡುತ್ತಿತ್ತು. ಇಲ್ಲಿ ಪಾದ್ರಿಯ ಮತ್ತು ಜನಗಳ ಉದ್ದೇಶಗಳು ಸದ್ಭಾವದಿಂದ ಕೂಡಿದ್ದರೂ ಅವರಲ್ಲಿ ಸಿಡುಬಿನ ರೋಗದ ವಿಚಾರವಾಗಿದ್ದ ಅಜ್ಞಾನ ಸದುದ್ದೇಶವೇ ಭಯಂಕರ ವ್ಯಾಪಾರಕ್ಕೆ ಕಾರಣವಾಗುವಂತೆ ಮಾಡಿತು. ಅಂತಹ ಅನಾಹುತಗಳಿಂದ ಜನರನ್ನು ಪಾರುಮಾಡಬೇಕಾದರೆ ಅವರ ಕೈಗೆ ಮತಿಯ ದೀವಿಗೆಯನ್ನು ಕೊಡಬೇಕು. ಅವರಲ್ಲಿ ಪರೀಕ್ಷಿಸುವ ಬುದ್ಧಿಯೂ ವಿಮರ್ಶಿಸುವ ಧೈರ್ಯವೂ ಉದ್ಭವಿಸುವಂತೆ ಮಾಡಬೇಕು. ''ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಂ ಮನ್ಯಮಾನಾಃ| ದಂದ್ರಮ್ಯ ಮಾಣಾಃ ಪರಿಯಂತಿ ಮೂಢಾ ಅಂಧೇನೈವ ನೀಯಮಾನಾ ಯಥಾಂಧಾಃ||- ಅವಿದ್ಯೆಯ ಮಧ್ಯೆ ಬಿದ್ದುಕೊಂಡಿದ್ದರೂ ತಾವು ಬುದ್ಧಿವಂತರೆಂದೂ ಪಂಡಿತರೆಂದೂ ಭ್ರಮಿಸಿ, ಕುರುಡರಿಂದ ನಡೆಯಿಸಲ್ಪಡುವ ಕುರುಡರಂತೆ, ಅಜ್ಞಾನಿಗಳು ಕಷ್ಟಕ್ಕೀಡಾಗಿ ತೊಳಲುತ್ತಾರೆ" ಎಂದು ಹೇಳುವ ಉಪನಿಷತ್ತಿನ ಎಚ್ಚರಿಕೆಗೆ ಕಿವಿಗೊಡಬೇಕು.

ಹಾಗೆಯೇ 'ದೇವಾಲಯಪ್ರವೇಶ'ದ ಪ್ರಶ್ನೆ- ಮುಂತಾದುವುಗಳನ್ನೂ ಕೆಚ್ಚಿನಿಂದ ಮತಿಯ ಒರೆಗಲ್ಲಿಗೆ ಹಚ್ಚಿನೋಡಬೇಕು. ಮೊನ್ನೆ ಪತ್ರಿಕೆಗಳಲ್ಲಿ ನಾನು ಓದಿದೆ: ಒಬ್ಬರು ಕೃತವಿದ್ಯರಾದ ಗೌರವಸ್ಥರು ದೇವಾಲಯಕ್ಕೆ ಹೋಗಿಬಂದುದಕ್ಕೆ ಪ್ರತಿಯಾಗಿ ಸಂಪ್ರೋಕ್ಷಣೆಗೆ ಜುಲುಮಾನೆ ಕೊಡಬೇಕಾಗಿ ಬಂದಿತಂತೆ. ಕಾರಣ, ಅವರು ಅಸ್ಪೃಶ್ಯರ ಜಾತಿಗೆ ಸೇರಿದವರಂತೆ. ಅವರಿ ಗಿಂತಲೂ ಮೂಢರೂ ಕೊಳಕರೂ ದುಷ್ಟರೂ ರೋಗಿಗಳೂ ದುರಾಚಾರಿಗಳೂ ಆದ 'ಸ್ಪೃಶ್ಯ' ರೆಂದೆನಿಸಿಕೊಂಡವರು ಗುಡಿಯೊಳಗೆ ಹೋದರೆ ಮೈಲಿಗೆಯಾಗುವುದಿಲ್ಲವಂತೆ! 'ಸ್ಪೃಶ್ಯ' ಯುವಕರು ತಮ್ಮ ಸಹೋದರನಿಗಾದ ಅವಮಾನವು ತಮ್ಮದೆಂದು ಭಾವಿಸಿ ದೇವಾಲಯಗಳಿಗೆ ಹೋಗುವುದನ್ನೇ ಬಿಟ್ಟು, ಹೊರಗಡೆ, ಪ್ರಕೃತಿಸೌಂದರ್ಯದಲ್ಲಿ, ಉದಯಿಸುವ ಸೂರ್ಯನಲ್ಲಿ, ಸಾಹಿತ್ಯದಲ್ಲಿ, ಸಂಸ್ಕೃತಿ ಯಲ್ಲಿ, ದರಿದ್ರನಾರಾಯಣನ ಸೇವೆಯಲ್ಲಿ ತಮ್ಮ ದೇವಾಲಯಗಳನ್ನು ಕಟ್ಟಿಕೊಂಡು, ಮತದ ಅನೌ ದಾರ್ಯವನ್ನು ಮುರಿಯಬೇಕು. ಅಸ್ಪೃಶ್ಯಯುವಕರಾದವರಿಗೆ ನನ್ನದೊಂದು ಬಿನ್ನಹ. ನೀವು ಅವ ಮಾನಮಾಡಿಸಿಕೊಂಡು ದೇವಾಲಯಕ್ಕೆ ಹೋಗದಿದ್ದರೆ ಏನಾಗುತ್ತದೆ? ಗುಡಿಯ ಕಲ್ಲಿನಲ್ಲಿ ದೇವ ರಿದ್ದಾನೆ ಎಂಬ ಭ್ರಾಂತಿ ನಿಮಗೇಕೆ? 'ಪ್ರಭುಲಿಂಗಲೀಲೆ'ಯಲ್ಲಿ ಸತ್ಯಸಾಕ್ಷಾತ್ಕಾರದ ಕಾರ್ಯವನ್ನು ಬಿಟ್ಟು ಕೀರ್ತಿಪೂಜಾಲಾಭದಾಶೆಗೆ ದೇವಸ್ಥಾನವನ್ನು ಕಟ್ಟಿಸುತ್ತಿದ್ದ ಸಿದ್ಧರಾಮನನ್ನು ಕುರಿತು ಅಲ್ಲಮನು—

ಸಕಲ ಕಲ್ಲನು ಕಡಿದು, ಕಲ್ಲಿಗೆ
ಶಿಖರ ದೇಗುಲವೆಂದು ಮಾಡಿಸಿ,
ಮಕರಿಸುವರಿವರೊಡ್ಡರಲ್ಲದೆ ಸಿದ್ಧರಲ್ಲ–

ಎಂದಿದ್ದಾನೆ. ಒಡ್ಡತನದ ಕೆಲಸವನ್ನು ನಾವೇಕೆ ಮಾಡಬೇಕು! ಗುಡಿಯೊಳಗೆ ಹೋಗಿ ಮತದ ಮೌಢ್ಯಕ್ಕೂ ಪುರೋಹಿತರ ಸುಲಿಗೆಗೂ ಒಳಗಾಗುವುದಕ್ಕಿಂತ ದೂರವಾಗಿದ್ದು ಕೊಂಡು ಹೃದಯ ದೇಗುಲದಲ್ಲಿಯೇ ಈಶ್ವರನನ್ನು ಇನ್ನಷ್ಟು ಅತಿಶಯವಾದ ಭಾವ ಭಕ್ತಿಯಿಂದ ಪೂಜಿಸಬಾರದೆ? ಅಸ್ಪೃಶ್ಯರನ್ನು ದೇವಾಲಯಗಳಿಗೆ ಪ್ರವೇಶಮಾಡಲು ಬಿಡಬೇಕೆಂದು ಹೇಳುತ್ತಿರುವುದು ಉಚ್ಚ

ವರ್ಗದ ಹಿಂದುಗಳ ಪರಿಶುದ್ಧತೆಗಾಗಿ ಮತ್ತು ದೃಷ್ಟಿವೈಶಾಲ್ಯ ಸಾಧನೆಗಾಗಿಯೇ ಹೊರತು ಹರಿಜನರ ಮೋಕ್ಷಕ್ಕಾಗಿಯಲ್ಲ. ಹೊರಗಡೆಯ ಸುಂದರ ಪ್ರಕೃತಿಮಯ ಜಗತ್ತೂ, ಅಂತರಂಗದ ದಿವ್ಯ ಭಾವಗಳ ಪ್ರಸಂಚವೂ, ಸರ್ವರಿಗೂ ಸುಲಭವಾದ ಮಹಾ ಪುರುಷರ ಕೃತಿಗಳಲ್ಲಿರುವ ಮಹಾ ದಾಲೋಚನೆಗಳೂ ನಮಗೆ ದೇವಸ್ಥಾನ, ಪೂಜೆ, ಗುರು, ಮಂತ್ರ ಇವುಗಳೆಲ್ಲವೂ ಆಗಲಿ! ಪ್ರಯತ್ನಿಸುವವರಿಗೆಲ್ಲ ಆ 'ದರ್ಶನ' ಲಭಿಸುವುದರಲ್ಲಿ ಸಂದೇಹವಿಲ್ಲ. ಅದು ಸಿದ್ಧಿಸುವ ವರೆಗೂ ನಮಗಾಗಲಿ ನಮ್ಮ ದೇಶಕ್ಕಾಗಲಿ ಮೋಕ್ಷವಿಲ್ಲ; ಸುಖವಿಲ್ಲ; ಶಾಂತಿಯಿಲ್ಲ; ದಾಸ್ಯದಿಂದ ಬಿಡುಗಡೆಯಿಲ್ಲ.

ಆದ್ದರಿಂದ ಯುವಕ ಸಹೋದರರೇ, ಯಾವ ಒಂದು ಸಂಪ್ರದಾಯದ ಸಂಕೋಚಕ್ಕೂ ಸಿಕ್ಕಿ ಕೊಳ್ಳಬಾರದು. ಯಾವ ಒಂದು ಪಂಥದ ಇಕ್ಕಟ್ಟಿಗೂ ಒಳಗಾಗಬಾರದು. ಸರ್ವ ಧರ್ಮಗಳ ಸಾರವಾದ ಉದಾರ 'ದರ್ಶನ'ವೊಂದನ್ನು ಕಂಡು ಕಟ್ಟಿಕೊಂಡು ಬಾಳಬೇಕು. ಜಾತಿ, ಮತ, ದೇಶ, ಕಾಲಗಳ ಭೇದವಿಲ್ಲದೆ ಎಲ್ಲ ಮಹಾಪುರುಷರ ಜ್ಞಾನಗಂಗೆಗಳ ಮಂಗಳ ಸಂಗಮದಲ್ಲಿ ತೀರ್ಥಸ್ನಾನ ಮಾಡಿ ಪೂರ್ಣ ಜೀವನವನ್ನು ಪೂರ್ಣವಾಗಿ ಅನುಭವಿಸಬೇಕು.

ಸೋದರರೇ, ಅಂತಹ 'ದರ್ಶನ'ದ ಸಂಪಾದನೆ ಅಷ್ಟೇನೂ ದುಸ್ಸಾಧ್ಯವಲ್ಲ. ಮತಭ್ರಾಂತಿಯನ್ನು ಬಿಟ್ಟು, ಮತಿಯ ದೀವಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಹೊರಡುವ ಸರ್ವರಿಗೂ ಅದು ಸುಲಭಸಾಧ್ಯ.

ಆ 'ದರ್ಶನ'ವನ್ನು ಪಡೆದ ಮೇಲೆ ನಮಗೆ ದೇವಸ್ಥಾನಗಳ ಆವಶ್ಯಕತೆ ಇರುವುದಿಲ್ಲ. ದೇವ ದೇವನ ಶರೀರರೂಪಿಯಾದ ಜಗತ್ತೆಲ್ಲವೂ ದೇವಸ್ಥಾನವಾಗುತ್ತದೆ. ಅಸ್ಪೃಶ್ಯರೆಂದು ಪರಿಗಣಿತರಾಗಿರುವ ಈಶ್ವರಶಿಶುಗಳು ಕಲ್ಲು ಕಟ್ಟಡದ ದೇವಸ್ಥಾನಗಳಿಗೆ ಹೋಗಿ, ಆ ಮೇಲೆ, ಭಕ್ತಿಪ್ರದರ್ಶನ ಮಾಡಿದ ಪಾಪಕ್ಕೆ ಸಂಪ್ರೋಕ್ಷಣೆಗಾಗಿ ಜುಲ್ಮಾನೆ ಕೊಡುವುದೂ ತಪ್ಪುತ್ತದೆ.

ಇಂತಹ ದಿವ್ಯ 'ದರ್ಶನ'ದ ಪ್ರಾಪ್ತಿಗಾಗಿ ನಮಗೆ ಬೇಕಾಗುವ ಧೀರ, ಸ್ವತಂತ್ರ, ಉದಾರ, ಪ್ರತಿಭಾಪೂರ್ಣವಾದ ಬುದ್ಧಿಯನ್ನೇ ನಾನು 'ನಿರಂಕುಶ ಮತಿ' ಎಂದು ಕರೆದಿದ್ದೇನೆ. ಆದ್ದರಿಂದ ತಮ್ಮ ಮತ್ತು ಜಗತ್ತಿನ ಶ್ರೇಯಸ್ಸನ್ನು ಕೋರುವ ಯುವಕರೆಲ್ಲರೂ ನಿರಂಕುಶಮತಿಗಳಾಗಬೇಕು.

ನಿರಂಕುಶಮತಿಗಳಾಗಬೇಕಾದರೆ ದಾಸ್ಯಬುದ್ಧಿ ತೊಲಗಬೇಕು; ದಾಸ್ಯಬುದ್ಧಿ ತೊಲಗಬೇಕಾದರೆ ಸ್ವತಂತ್ರವಾಗಿ ಜೀವಿಸಲು ಪ್ರಯತ್ನಿಸಬೇಕು; ಎಂದರೆ ಸ್ವಾವಲಂಬನ ಬೇಕು; ಎಂದರೆ ಇನ್ನೊಬ್ಬರ ಕೈ ಹಾರೈಸಿ ಹೊಟ್ಟೆ ಹೊರೆಯುವುದು ತಪ್ಪಬೇಕು. ಮುಚ್ಚುಮರೆಯಿಲ್ಲದೆ ಬಿಚ್ಚಿ ಹೇಳುವುದಾದರೆ, ಸಂಪತ್ತು ಬೇಕು; ಹಣ ಬೇಕು; ಉದ್ಯೋಗ ಬೇಕು. ಮಿತ್ರರೇ ನಾನು ಒಪ್ಪಿಕೊಳ್ಳುತ್ತೇನೆ: ಈ ಸಮಸ್ಯೆಯು ನಿಜವಾಗಿಯೂ ಕಗ್ಗಂಟಾಗಿದೆ. ಆ ಸಮಸ್ಯೆಯನ್ನು ಪರಿಹರಿಸಲಿಂದೇ ದೇಶದ ನಾಯಕರೆಲ್ಲರೂ ಕಷ್ಟಪಡುತ್ತಿದ್ದಾರೆ. ಆಶಾಬುದ್ಧಿಯಿಂದ ಅವರ ಉದ್ಯಮದಲ್ಲಿ ನಾವೂ ಭಾಗಿಗಳಾಗಿ, ಇಂದಿನ ತಪಸ್ಸು ಮುಂದಿನ ಸತ್ಫಲಕ್ಕೆ ಮಾರ್ಗವೆಂದು ಶ್ರದ್ಧೆಯಿಂದ ಮುಂದುವರಿಯಬೇಕಾಗಿದೆ. ಸಮಸ್ಯೆಯ ಅಗಾಧತೆ ನಮ್ಮ ಮುಂದಿರುವ ಸಾಹಸದ ಆಳ ಅಗಲಗಳನ್ನು ಸೂಚಿಸುತ್ತದೆ.

ಆದರೂ ಪಾರಾಗಲು ಕೆಲವು ಸೂಚನೆಗಳನ್ನು ಕೊಡಬಹುದು. ಹೀಗೆಯೇ ಮಾಡಿ ಎಂದು ಇತಿವಿಧಿಗಳನ್ನು ಸೂಚಿಸುವುದು ಕಷ್ಟಸಾಧ್ಯವಾದರೂ ಹೀಗೆ ಮಾಡದಿದ್ದರೆ ಒಂದಿಷ್ಟು ಲೇಸಾಗಬಹುದೆಂದು ನೀತಿವಿಧಾನವನ್ನಾದರೂ ಹೇಳಲು ಸಾಧ್ಯ.

ಕೃತವಿದ್ಯರಾದ ಯುವಕರು ನಾಗರಿಕತೆಯ ಮೆರುಗಿಗೆ ಮನಸೋತು ಪಟ್ಟಣಗಳನ್ನು ಸೇರುತ್ತಿದ್ದಾರೆ. ಅಲ್ಲಿಯೂ ಕೂಡ ಅವರು ಕೈಕೊಳ್ಳುವ ವೃತ್ತಿ ಸ್ವಲ್ಪ ಹೆಚ್ಚು ಕಡಿಮೆ 'ಉತ್ಪತ್ತಿ

ಕಾರಕ'ವಾಗಿರುವುದಿಲ್ಲ; 'ಸಂಗ್ರಹಕಾರಕ'ವಾಗಿರುತ್ತದೆ. ಹಾಗೆ ಮಾಡುವುದರಿಂದ ಹಲಕೆಲವರಿಗೆ ಅವರವರ ಮಟ್ಟಿಗೆ ನೆಮ್ಮದಿಯಾಗಬಹುದು. ಆದರೆ ಎಲ್ಲರೂ ಎಷ್ಟು ಕಾಲ ತಾನೇ ಸಂಪತ್ತನ್ನು ಸೃಷ್ಟಿಸದೆ ಸಂಗ್ರಹಿಸುತ್ತಲೇ ಹೋಗಲಾಗುತ್ತದೆ? ಆದ್ದರಿಂದ ಮೇಧಾವಿಗಳಾದ ಯುವಕರು ತಮಗೆ ನವನಾಗರಿಕತೆಯ ಮಾಯಾಸ್ಥಿತ ರುಚಿ ದೊರಕೊಳ್ಳದಿದ್ದರೂ ಚಿಂತೆಯಿಲ್ಲ, ಎಂದುಕೊಂಡು ಗ್ರಾಮಗಳಲ್ಲಿಯೇ ನಿಂತು ಜನರ ಆಧ್ಯಾತ್ಮಿಕ ಅಜ್ಞಾನವನ್ನೂ ಆಧಿದೈವಿಕ ಮೌಢ್ಯವನ್ನೂ ಆಧಿಭೌತಿಕ ಕಷ್ಟ ನಷ್ಟಗಳನ್ನೂ ಪರಿಹರಿಸಲು ಪ್ರಯತ್ನಿಸುವ ತಪಸ್ಸನ್ನು ಕೈಕೊಳ್ಳಬೇಕು.

ಮತದ ಹೆಸರಿನಲ್ಲಿ, ಸಮಾಜದ ಕಟ್ಟುಕಟ್ಟಳೆಗಳ ಹೆಸರಿನಲ್ಲಿ, ನೆವ್ವ ಪಿಶಾಚಿ ಗ್ರಹಗಳ ಹೆಸರಿನಲ್ಲಿ, ಮಾಮೂಲುಗಳ ಹೆಸರಿನಲ್ಲಿ ದುರ್ವ್ಯಯವಾಗುತ್ತಿರುವ ಸಂಪತ್ತನ್ನು ತಡೆಗಟ್ಟಿ, ಅದನ್ನು ಹೆಚ್ಚು ಅವಶ್ಯಕವಾಗಿರುವ ಮತ್ತು ಹೆಚ್ಚು ಉಪಯೋಗಕರವಾಗಿರುವ ಜೀವನಪಥಗಳಲ್ಲಿ ವಿನಿಯೋಗಿಸುವಂತೆ ಮಾಡಬೇಕು.

ಯುವಕರು ವೇಷ ಭೂಷಣಗಳಲ್ಲಿ ಅತಿ ಹೋಕಿಗೆ ಹೋಗದೆ ಸರಳ ಸಾಧಾರಣವಾಗಿದ್ದರೆ ಸ್ವಲ್ಪವಾದರೂ ಉಳಿತಾಯವಾಗುತ್ತದೆ. ಅಲ್ಲದೆ ಹೋಕಿ ಮಾಡಲೆಂದು ಮದುವೆ ಮಾಡಿಕೊಂಡು ಮೂವಂದಿರ ಮೂಲಧನಕ್ಕೆ ಬಾಯಿ ಬಾಯಿ ಬಿಡುವುದೂ ತಪ್ಪುತ್ತದೆ.

ಯುವಕನು ಸಂಪಾದನೆ ಮಾಡುವ ಸಾಮರ್ಥ್ಯವನ್ನು ಪಡೆಯುವ ಮೊದಲೆ ಮದುವೆ ಮಾಡಿಕೊಂಡಲ್ಲಿ ಒಡನೆಯೇ ಚತುಷ್ಪಾದಿಯಾಗುತ್ತಾನೆ. ಅವನ ಸ್ವತಂತ್ರ ಬುದ್ಧಿ, ನಿರಂಕುಶ ಮತಿ ಎಲ್ಲವೂ ಮಣ್ಣುಗೂಡುತ್ತವೆ. ಅವರಿವರ ಕೈ ಹಾರೈಸಿ ನಾಲ್ಕು ಕಾಸು ಸಂಪಾದನೆಗಾಗಿ ಅವರಿವರನ್ನು ಓಲಗಿಸಿ, ಅಧಿಕಾರಿಗಳ ಅಥವಾ ಸಾಹುಕಾರರ ಕಾಲುಬಳಿ ಮೂಲಗಿಸಿ, ತನ್ನಲ್ಲಿರುವ ದಿವ್ಯಾತ್ಮವನ್ನು ಸಂಪೂರ್ಣವಾಗಿ ಅವಮಾನಪಡಿಸುತ್ತಾನೆ. ಆತನ ತಾರುಣ್ಯದ 'ದರ್ಶನ' ಜ್ಯೋತಿ ಸಾಂಸಾರಿಕ ಜೀವನದ ದಾಸ್ಯದಲ್ಲಿ, ಕೋಟಲೆಯಲ್ಲಿ, ಕಷ್ಟದಲ್ಲಿ, ಧೂಳಿಧೂಮಗಳಲ್ಲಿ ನಂದಿಹೋಗುತ್ತದೆ, ಅಥವಾ ನಂದಿಹೋಗುವಷ್ಟರ ಮಟ್ಟಿಗೆ ಮಾಸಿಹೋಗುತ್ತದೆ. ಕಡೆಕಡೆಗೆ ಅನೀತಿ ಕೂಡ ಹೀನವಾಗಿ ತೋರುವುದಿಲ್ಲ. ಅವನ ಔದಾರ್ಯದ ವಲಯವು ಬರಬರುತ್ತಾ ಕಿರಿದಾಗಿ, ಕಡೆಗೆ ತಾನು, ತನ್ನ ಹೆಂಡತಿ, ತನ್ನ ಮಗು ಮೂವರನ್ನು ಮಾತ್ರ ಸುತ್ತುವರಿಯುತ್ತದೆ. ಅವರಿಗಾಗಿ ಏನನ್ನು ಬೇಕಾದರೂ ಮಾಡಲು ಹೇಸುವುದಿಲ್ಲ. ಹಾಗಾಗುವವರು ದೇಶದ ಪ್ರಗತಿಗೆ ಕಂಟಕಪ್ರಾಯರಾಗುತ್ತಾರೆ. ಆದ್ದರಿಂದ ಮಿತ್ರರೇ, ನಿಮ್ಮ ಕಾಲ ಮೇಲೆ ನೀವು ನೆಮ್ಮದಿಯಾಗಿ ನಿಲ್ಲುವ ಶಕ್ತಿ ಬರುವ ಮೊದಲು ಮದುವೆಯಾಗಬೇಡಿ; ಆತ್ಮಕ್ಕೆ ಅಗೌರವವನ್ನೂ ಮನಸ್ಸಿಗೆ ಯಾತನೆಯನ್ನೂ ದೇಶಕ್ಕೆ ಹಾನಿಯನ್ನೂ ತರಬೇಡಿ.

ಅದಕ್ಕೆ ಬದಲು ವೈವಾಹಿಕ ಜೀವನವನ್ನು ಸಾಂಗವಾಗಿ ನಡೆಸಲು ತಕ್ಕ ಸಂಪತ್ತೂ ಸಾಮರ್ಥ್ಯವೂ ಲಭಿಸುವ ತನಕ ಬ್ರಹ್ಮಚಾರಿಗಳಾಗಿದ್ದುಕೊಂಡು ದೇಶಕ್ಕೆ ಹಿತಕರವಾದ ಕಾರ್ಯಗಳನ್ನು ಮಾಡುತ್ತಿರಬಹುದು. ಭೀಷ್ಮನು ಬ್ರಹ್ಮಚಾರಿಯಾಗಿದ್ದನು; ಹನುಮಂತನು ಬ್ರಹ್ಮಚಾರಿಯಾಗಿದ್ದನು. ಅವರೆಲ್ಲರೂ ಮಹತ್ಕಾರ್ಯಗಳನ್ನು ಸಾಧಿಸಿದರು. ಇಂದಿನ ಮನಃಶಾಸ್ತ್ರವೂ ಕೂಡ ಬ್ರಹ್ಮಚರ್ಯದಿಂದ ತೇಜಸ್ಸು ಓಜಸ್ಸುಗಳೂ ದರ್ಪ ಬಲ ಅಧಿಕಾರಗಳೂ ಲಭಿಸುತ್ತವೆ ಎಂದು ಹೇಳುತ್ತಿದೆ. "ನಾಯಮಾತ್ಮಾ ಬಲಹೀನೇನ ಲಭ್ಯಃ"

ದೇಶವು ಸರ್ವತೋಮುಖವಾಗಿ ಎಚ್ಚರಗೊಳ್ಳುತ್ತಿರುವ ಕಾಲವಿದು. ಎಲ್ಲೆಲ್ಲಿಯೂ ಎಲ್ಲ ಶಾಖೆಗಳಲ್ಲಿಯೂ ಕೆಲಸಗಾರರು ಬೇಕಾಗಿದೆ. ಸಂಘಬದ್ಧರಾಗಿಯೋ, ಸಂಸ್ಥೆಗಳಿಗೆ ಸದಸ್ಯರಾಗಿಯೋ, ಅಥವಾ ವ್ಯಕ್ತಿಶಃವಾಗಿಯೋ ಎಲ್ಲರೂ ಕಾರ್ಯೋನ್ಮುಖರಾಗಬೇಕು. ಆ ಕಾರ್ಯಗಳ ರೀತಿ ನೀತಿ ವಲಯ ವಿಸ್ತಾರಗಳನ್ನು ಯಾರೊಬ್ಬರೂ ನಿಷ್ಕರ್ಷಿಸಿ ಹೇಳಲಾರರು. ಆಯಾ ಸನ್ನಿವೇಶಕ್ಕೆ

ತಕ್ಕಂತೆ ಅವರವರ ಮನೋಧರ್ಮ ಆತ್ಮಾನುಭವ ಅಭಿರುಚಿ ಉದ್ದೇಶಗಳಿಗೆ ತಕ್ಕಂತೆ ಕಾರ್ಯಾರಂಭ ಮಾಡಬೇಕು. ಮೈಸೂರು ಪಟ್ಟಣದಲ್ಲಿರುವ ಯುವಕರು ಕೈಕೊಳ್ಳಬೇಕಾಗಿರುವ ಕಾರ್ಯದ ಸ್ವಭಾವ ರೀತಿ ನೀತಿ ವಲಯಗಳು ಶ್ರೀರಂಗಪಟ್ಟಣಕ್ಕೆ ಹೊಂದದಿರಬಹುದು; ಶ್ರೀರಂಗಪಟ್ಟಣಕ್ಕೆ ಹೊಂದುವ ಕಾರ್ಯಗಳು ಪಕ್ಕದ ಹಳ್ಳಿಗೆ ಹೊಂದದಿರಬಹುದು. ಹಳ್ಳಿಗಳಲ್ಲಿ ನೈರ್ಮಲ್ಯ ವಿದ್ಯಾಪ್ರಚಾರಗಳು ಬೇಕಾಗುವಂತೆ ಪಟ್ಟಣಗಳಲ್ಲಿ ಬಹುಶಃ ಅನೌದಾರ್ಯ ಮತಭ್ರಾಂತಿಗಳನ್ನು ಪರಿಹಾರ ಮಾಡುವ ಬೋಧಪ್ರದ ಕಾರ್ಯಗಳು ಬೇಕಾಗಬಹುದು. ಆದ್ದರಿಂದ ಮಿತ್ರರೇ, ನೂತನ ಭಾರತ ರಾಷ್ಟ್ರಭವನ ನಿರ್ಮಾಣಕಾರ್ಯದಲ್ಲಿ ನಮ್ಮಲ್ಲಿ ಪ್ರತಿಯೊಬ್ಬರಿಗೂ ಗೌರವಪೂರ್ಣವಾದ ಸ್ಥಾನವಿದೆ. ಪ್ರತಿಯೊಬ್ಬರ ಸಾಹಸಕ್ಕೂ ಅವಕಾಶವಿದೆ.

ಆದರೆ ಇಲ್ಲಿ ಒಂದು ಎಚ್ಚರಿಕೆಯ ಮಾತನ್ನು ಹೇಳಿ ಮುಂದುವರಿಯಬೇಕಾಗಿದೆ.

ನಮ್ಮಲ್ಲಿ ಅನೇಕರು ಸದ್ಯಃ ಫಲಾಕಾಂಕ್ಷಿಗಳು. ದೀರ್ಘಕಾಲ ಸಾಧನೆ ಮಾಡುವ ತಾಳ್ಮೆಯಿಲ್ಲ. ದೃಢ ಚಿತ್ತವಿಲ್ಲ. ಸತ್ಕರ್ಮವು ಸತ್ಫಲವನ್ನು ತಂದೇ ತರುತ್ತದೆ ಎಂಬ ಶ್ರದ್ಧೆಯಿಲ್ಲ. ಗೀತೆಯಲ್ಲಿ ಶ್ರೀ ಕೃಷ್ಣನು "ಪಾರ್ಥ, ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ | ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ || ೬-೪೦ || –ವೃಥಾನಂದನನೇ, ಇಹದಲ್ಲಿಯಾಗಲಿ ಪರದಲ್ಲಿಯಾಗಲಿ ಅವನಿಗೆ ವಿನಾಶವಿಲ್ಲ. ಎಳ್ಳನಿತಾದರೂ ಆಗಲಿ ಒಳ್ಳೆಯದನ್ನು ಮಾಡಿದವನಿಗೆ ದುರ್ಗತಿಯಿಲ್ಲ" ಎಂದು ಆಘೋಷಿಸಿದ್ದಾನೆ. ಮಹಾಫಲಕ್ಕೆ ಹೆಚ್ಚು ಕಾಲವೂ ಹೆಚ್ಚು ಸಾಧನೆಯೂ ಬೇಕಾಗುತ್ತವೆ. ಆದ್ದರಿಂದ ಅಲ್ಪಕಾಲದಲ್ಲಿ ಫಲ ಲಭಿಸದಿದ್ದರೆ ಹತಾಶರಾಗದೆ ಮುಂದುವರಿಯುವ ಉಕ್ಕಿನಂತಹ ಚಿತ್ತದಾರ್ಢ್ಯವನ್ನು ನಾವು ಸಂಪಾದಿಸಬೇಕು. ನಮ್ಮ ಉತ್ಸಾಹವು ಹುಲ್ಲಿನ ಬೆಂಕಿಯಾಗಬಾರದು; ಕಲ್ಲಿದ್ದಲ ಕಾವಾಗಬೇಕು.

ಸದ್ಯಃ ಫಲಾಕಾಂಕ್ಷೆಗಿಂತಲೂ ಕೀರ್ತಿಮೋಹದಿಂದ ಹೆಚ್ಚು ಅನಾಪತ್ತಿವಾಗುತ್ತದೆ! 'ಕೀರ್ತಿ ಮಹಾಪುರುಷರಲ್ಲಿರುವ ಕಟ್ಟಕಡೆಯ ದೌರ್ಬಲ್ಯ' ಎಂಬುದಾಗಿ ಒಂದು ಸುಭಾಷಿತವಿದೆ. ಮಹಾಪುರುಷರಾದವರೇ ಈ ಯಶೋಲೋಭಕ್ಕೊಳಗಾದ ಮೇಲೆ ಸಾಮಾನ್ಯರ ಗತಿಯೇನು? ಆದರೂ ಮಹಾಪುರುಷರಲ್ಲಿರುವ ದೌರ್ಬಲ್ಯವನ್ನು ಸಾಮಾನ್ಯರೂ ಪೋಷಿಸಬೇಕೆಂಬ ನಿಯಮವಿಲ್ಲ. ಮಹಾಪುರುಷರಿಗೆ ಬಂದೊದಗುವ ಕೀರ್ತಿಯ ಪ್ರಭಾವದಿಂದಲೇ ಅದರ ಲೋಭವನ್ನು ಗೆಲ್ಲಲು ಅವರಿಂದ ಸಾಧ್ಯವಾಗದಿರಬಹುದು ನಮಗೆ ಅದರ ಅಭಾವವೇ ಅದರ ಲೋಭದಿಂದ ಪಾರಾಗಲು ಸಹಾಯವಾಗುತ್ತದೆ. ಮಂದಿಯ ಕೈ ಚಪ್ಪಾಳೆ, ವೃತ್ತಪತ್ರಿಕೆಗಳ ಆಗ್ಗದ ಸ್ತುತಿ, ಬಿರುದು ಬಾವುಲಿಗಳ ವ್ಯಾಮೋಹ ಇವುಗಳಿಗೆ ವಶನಾಗದೆ, ತಾನು ಹಿಡಿದ ಕೆಲಸವನ್ನು ಪಟ್ಟುಹಿಡಿದು ನಿಃಶಬ್ದವಾಗಿ ಮಾಡುವಾತನೇ ನಿಜವಾದ ಕರ್ಮಯೋಗಿ. ಸ್ವಾಮಿ ವಿವೇಕಾನಂದರು ಒಂದು ಕಡೆ ಈ ಅರ್ಥದ ಮಾತುಗಳನ್ನು ಹೇಳಿದ್ದಾರೆ: ನಾವಿರಾರು ಜನರು ಸುತ್ತಲೂ ನೆರೆದು ಕರತಾಡನ ಮಾಡುವಾಗ, ಜಯಘೋಷದಿಂದ ಹುರಿದುಂಬಿಸುವಾಗ, ಸ್ಮಾರಕ ಸ್ತೂಪಗಳೂ ಜೀವನಚರಿತ್ರೆಗಳೂ ತನ್ನನ್ನು ಕೊಂಡಾಡುತ್ತವೆ ಎಂದು ಗೊತ್ತಾದಾಗ, ತನ್ನ ಮರಣವೇ ತನ್ನ ಯಶೋದುಂದುಭಿಯನ್ನು ಮೊಳಗುತ್ತದೆಂದು ತಿಳಿದಾಗ ಯಾವ ಹೇಡಿ ತಾನೇ ಮುಂದುವರಿದು ರಣರಂಗದಲ್ಲಿ ಮಡಿಯಲಾರನು? ಯಾವ ಕ್ರಿಮಿ ತಾನೇ ಸಾಹಸಿಯಾಗಲಾರದು? ಆದರೆ ಕೀರ್ತಿಯ ಕಿರಣಮಾತ್ರವೂ ಪ್ರಕಾಶಿಸದಿರುವಾಗ, ಪ್ರಶಂಸೆ ಮಾಡುವವರಾಗಲಿ ಹುರಿದುಂಬಿಸುವವರಾಗಲಿ ಒಬ್ಬರೂ ಇಲ್ಲದಿರುವಾಗ, ಬಹುಕಾಲದ ಪ್ರಯತ್ನದಿಂದಲೂ ಕಾರ್ಯಸಿದ್ಧಿಯಾಗದಿರುವಾಗ ದೃಢಚಿತ್ತನಾಗಿ ಶ್ರದ್ಧಾನ್ವಿತನಾಗಿ, ಮೌನಿಯಾಗಿ, ಹಲ್ಲುಕಚ್ಚಿಕೊಂಡು, ಹಣೆ ಸಿಕ್ಕಿಕೊಂಡು, ಬೆವರು ಸುರಿಸುತ್ತಾ ನಸುಬಾಗಿ, ಕಟ್ಟಕಡೆಯ ಕಲ್ಯಾಣದಲ್ಲಿ ನೆಚ್ಚಿಟ್ಟುಕೊಂಡು, ಈಶ್ವರನನ್ನು ನೆನೆದು ಕರ್ತವ್ಯತ

ವನ್ನೇರುವವನೇ ಮಹಾ ತಪಸ್ವಿ; ಮಹಾ ಯೋಗಿ; ಅವನಿಗಿಂತಲೂ ಹೆಚ್ಚಾದ ವಿಭೂತಿಗಳನ್ನಿಲ್ಲ. ಅವನ ಹೆಸರು ಪತ್ರಿಕೆಗಳಿಗೆ ಗೊತ್ತಿಲ್ಲದಿರಬಹುದು; ಆದರೆ ಈಶ್ವರದೃಷ್ಟಿಯಲ್ಲಿ ಅವನು ಅಗ್ರಗಣ್ಯನಾಗುತ್ತಾನೆ.

ಆದ್ದರಿಂದ ಪ್ರತಿಯೊಬ್ಬ ಯುವಕನೂ ಅಂತಿಮದ ಅನಂತ ಕಲ್ಯಾಣದಲ್ಲಿ ಶ್ರದ್ಧೆಯಿಟ್ಟು ಕಾರ್ಯರಂಗಕ್ಕಿಳಿಯಬೇಕು. ತಾನು ರಂಗಕ್ಕಿಳಿದೊಡನೆಯೇ ಜಗತ್ತು ಉದ್ಧಾರವಾಗುತ್ತದೆಂದಾಗಲಿ, ಲೋಕಲೋಚನವಲಯಕ್ಕೆ ತಾನು ಕೇಂದ್ರವಾಗುತ್ತೇನೆಂದಾಗಲಿ ಶಾಂತಿಸ್ಥಾಪನೆಗಾಗಿ ಕೊಡುವ ನೋಬೆಲ್ ಬಹುಮಾನವು ತನಗೇ ಬರುತ್ತದೆ ಎಂದಾಗಲಿ ಹೊಂಗನಸುಗಳನ್ನೂ ಆಕಾಶಗೋಪುರಗಳನ್ನೂ ಕಟ್ಟಬಾರದು.

ಇನ್ನು ನನಗೆ ಅತ್ಯಂತ ಪ್ರಿಯತಮವಾದ ಒಂದೆರಡು ವಿಷಯಗಳನ್ನು ಕುರಿತು ಪ್ರಸ್ತಾಪಿಸಿ ಉಪನ್ಯಾಸವನ್ನು ಕೊನೆಗಾಣಿಸುತ್ತೇನೆ. ಆ ವಿಷಯಗಳು ನಿಮ್ಮೆಲ್ಲರಿಗೂ ಕೂಡಾ ಪ್ರಿಯವಾಗಿರುತ್ತವೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ.

ಯುವಕರು ಕೈಕೊಳ್ಳಬೇಕಾಗಿರುವ ಅನೇಕ ಉದ್ಯಮಗಳಲ್ಲಿ ಭಾಷೆಯ ಅಭ್ಯುದಯವೂ ಸಾಹಿತ್ಯ ನಿರ್ಮಾಣ ಮತ್ತು ಪ್ರಚಾರಗಳೂ ಗಣ್ಯವಾಗಿವೆ. ಹಿಂದಿ, ಲ್ಯಾಟಿನ್, ಗ್ರೀಕ್, ಸಂಸ್ಕೃತ, ತೆಲಗುಗಳನ್ನಲ್ಲ; ನಾನು ಹೇಳುತ್ತಿರುವುದು ಕನ್ನಡದ ಭಾಷೆ, ಕನ್ನಡ ಸಾಹಿತ್ಯ! ನಮ್ಮ ಮಾತೃ ಭಾಷೆ ಮತ್ತು ಅದರ ಸಾಹಿತ್ಯ!

ಜನಜೀವನವನ್ನು ಎಚ್ಚರಿಸುವ ತೂರ್ಯಧ್ವನಿ ಸಾಹಿತ್ಯದಿಂದ ಬರುತ್ತದೆ. ಸಾಹಿತ್ಯವು ಜನಜೀವನದ ಇಂದಿನ ಸ್ಥಿತಿಯನ್ನು ವರ್ಣಿಸಿ, ಮುಂದಿನ ಗತಿಯನ್ನು ನಿರ್ಣಯಿಸುತ್ತದೆ. ಕೃತವಿದ್ಯರಾದ ಯುವಕರು ತಮ್ಮ ಆಶೆ ಆಕಾಂಕ್ಷೆಗಳನ್ನು ಬರೆದು ಓದಿ, ಮತ್ತೆ ಮತ್ತೆ ಹೇಳಿ ಹೇಳಿ, ಜನರ ಹೃದಯಗಳಲ್ಲಿ ಕಿಡಿಗಳನ್ನು ಬಿತ್ತಬೇಕು. ಈಗಾಗಲೇ ನಮ್ಮ ನಾಡಿನ ಜೀವನವು ಕೃತ್ತಿಕಾ ದೀಪೋತ್ಸವದಂತೆ ನಾವಿರಾರು ಸೊಡರ್ಮಾಲೆಗಳಾಗಿ ಉರಿಯುತ್ತಿರುವ ಮನೋಹರ ಭವ್ಯ ದೃಶ್ಯವು ಕಂಗೊಳಿಸುತ್ತಿದೆ. ಎಲ್ಲೆಲ್ಲಿಯೂ ಕರ್ನಾಟಕ ಸಂಘಗಳೇಳುತ್ತಿವೆ; ಕನ್ನಡದ ಪುನರುಜ್ಜೀವನಕ್ಕಾಗಿಯೂ ಉದ್ಧಾರಕ್ಕಾಗಿಯೂ ದೀಕ್ಷೆತೊಟ್ಟು ಸೊಂಟಕಟ್ಟಿ ಕಂಕಣಬದ್ಧರಾಗಿರುವ ಅನೇಕ ಪ್ರತಿಭಾಸಂಪನ್ನರಾದ ಮಹನೀಯರು ಕರ್ಣಾಟಕದಲ್ಲೆಲ್ಲ ಸಂಚರಿಸಿ ಹಣತೆಗಳನ್ನು ಹೊತ್ತಿಸುತ್ತಿದ್ದಾರೆ; ಕೇಂದ್ರಸಂಸ್ಥೆಯಾಗಿರುವ ಸಾಹಿತ್ಯಪರಿಷತ್ತು ತನ್ನ ಕೈಯಲ್ಲಾದ ಮಟ್ಟಿಗೆ, ಹುರುಪಿನಿಂದ ಕಾರ್ಯಸಾಧನೆ ಮಾಡುತ್ತಿದೆ; ವಿದ್ಯಾಭ್ಯಾಸದ ಇಲಾಖೆಯು ಕನ್ನಡದಲ್ಲಿಯೇ ಪಾಠ ಹೇಳುವ ಏರ್ಪಾಡು ಮಾಡುತ್ತಿದೆ; ವಿಶ್ವವಿದ್ಯಾನಿಲಯವು ಕನ್ನಡ ಗ್ರಂಥ ಪ್ರಕಟಣೆಗಳಿಂದ ತನ್ನ ಭಾಗದ ತೈಲವನ್ನು ಹೊಯ್ದು ಉರಿಯನ್ನು ಪೋಷಿಸುತ್ತಿದೆ. ಇಂತಹ ಮಹಾ ಸಾಹಿತ್ಯದೀಪೋತ್ಸವದಲ್ಲಿ ನಾವೆಲ್ಲರೂ ಉತ್ಸಾಹದಿಂದ ಭಾಗಿಗಳಾಗದಿದ್ದರೆ, ಅದು ನಮ್ಮೆದೆಯ ಕಗ್ಗವಿಯ ಗಾಢಾಂಧಕಾರವನ್ನು ಮಾತ್ರ ಸೂಚಿಸುತ್ತದೆ. ಇಲ್ಲಿ ನೆರೆದಿರುವವರಲ್ಲಿ ಯಾರ ಹೃದಯದಲ್ಲಿಯೂ ಅಂತಹ ಕಗ್ಗತ್ತಲೆಯಿಲ್ಲವೆಂದು ದೃಢವಾಗಿ ನಂಬುತ್ತೇನೆ.

ಮಹನೀಯರೇ, ಮತ್ತೊಮ್ಮೆ ಹೇಳುತ್ತೇನೆ. ಮೇಲೆ ಹೇಳಿದಂತೆ ಜೀವನದಲ್ಲಿ ಮುಂಬರಿಯಬೇಕಾದರೆ ನಮ್ಮ ಹೃದಯದಲ್ಲಿ ಒಂದು ಶಕ್ತಿಯ ನಿಧಿಯನ್ನು ಶೇಖರಿಸಬೇಕು; ನಮ್ಮ ಆತ್ಮವು ಓಜಸ್ವಿಯಾಗಬೇಕು; ನಾವೆಲ್ಲರೂ ನಿರಂಕುಶಮತಿಗಳಾಗಿ 'ದರ್ಶನ'ದ್ರಷ್ಟರಾಗಬೇಕು. ಧ್ಯಾನ ಮಯ ನಿರ್ಮಲ ಜೀವನದಿಂದ ಅಂತಹ ಓಜಸ್ಸು ಲಭಿಸುತ್ತದೆ. ಪುಣ್ಯ ಜೀವನವೇ ಪಾವನ ತಪಸ್ಸು.

ನಮ್ಮೆಲ್ಲರ ದಿವ್ಯ 'ದರ್ಶನ'ಕ್ಕೆ ಈ ಮಹಾ ಮಂತ್ರಗಳು ಅಡಿಗಲ್ಲುಗಳಾಗಿರಲಿ:

"ಏಕಂ ಸತ್ ವಿಪ್ರಾ ಬಹುಧಾ ವದಂತಿ"

ಇರುವುದೊಂದೇ ಸತ್ಯ; ತಿಳಿದವರು ಬೇರೆ ಬೇರೆ ರೀತಿಯಿಂದ ಹೇಳುತ್ತಾರೆ.

"ಈ ಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ । ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಂ॥"

ಚರಾಚರ ಜಗತ್ತೆಲ್ಲವನ್ನೂ ಈಶ್ವರನಿಂದ ಆವರಿಸು, ತ್ಯಾಗದಿಂದ ಅದನು ಆಸ್ವಾದಿಸು. ಇತರರ ಸಿರಿಗೆ ಆಳುಪದಿರು.

"ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ। ಏವಂ ತ್ವಯಿ ನಾನ್ಯಥೇ ತೋಸ್ತಿ ನ ಕರ್ಮ ಲಿಪ್ಯತೇ ನರೇ॥"

ಒಂದು ಶತಮಾನ ಬಾಳಬೇಕೆಂದು ಇಚ್ಛಿಸುವಾತನು ಕರ್ಮ ಮಾಡುತ್ತಲೇ ಬಾಳಬೇಕು. ಹಾಗೆ (ಜಗತ್ತೆಲ್ಲವನೂ ಈಶ್ವರನಿಂದ ಆವರಿಸಿ) ಬಾಳಿದರೆ ಕರ್ಮಲೇಪನವಿಲ್ಲ.

"ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ। ಭದ್ರಂ ಪಶ್ಯೇಮಾಕ್ಷಭಿರ್ಯ ಜತ್ರಾಃ। ಸ್ಥಿರೈರಂಗೈಸ್ತುಷ್ಟುವಾಂ ಸಸ್ತನೂಭಿಃ । ಪಶ್ಯೇಮ ದೇವಹಿತಂ ಯದಾಯುಃ॥"

ಶುಭವಾದುದನೆ ನಮ್ಮ ಕಿವಿಯಾಲಿಸಲಿ. ಪೂಜಾರ್ಹವಾಗಿ ಮಂಗಳವಾದುದನೆ ನಮ್ಮ ಕಣ್ಣು ನೋಡಲಿ. ದೃಢ ದೇಹದಿಂದಲೂ ಆನಂದದಿಂದಲೂ ಜೀವಮಾನವು ಸುಖಃಗಿ ಸಾಗಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

**—ಕೆ. ವಿ. ಪುಟ್ಟಪ್ಪ**

---


# ಕಾನೂರು ಸುಬ್ಬಮ್ಮ ಹೆಗ್ಗಡಿತಿ

**ಕೆ. ವಿ. ಪುಟ್ಟಪ್ಪ**

ಮಲೆನಾಡಿನ ಜೀವನಕ್ಕೆ ಸಂಬಂಧಪಟ್ಟ ಸಾಮಾಜಿಕ ಕಾದಂಬರಿ. ಈಗ ನಮ್ಮ ಸಮಾಜದಲ್ಲಿ ಎಲ್ಲೆಲ್ಲಿಯೂ ಕಂಡುಬರುತ್ತಿರುವ ಹಳೆಯ ಮತ್ತು ಹೊಸ ಸಂಸ್ಕೃತಿಗಳ ಘರ್ಷಣೆಯನ್ನೂ ಕೇವಲ ವ್ಯಾವಹಾರಿಕ ಜೀವನಕ್ಕೂ ಆದರ್ಶ ಜೀವನಕ್ಕೂ ಇರುವ ಅಂತರಗಳನ್ನೂ ಈ ಕಾದಂಬರಿಯಲ್ಲಿ ನೋಡಬಹುದು. ಈ ಗ್ರಂಥವು ಐದು ಪುಟಗಳಷ್ಟು ವಿಸ್ತಾರವಾಗಿದ್ದು ೪ ಸಂಪುಟಗಳಲ್ಲಿ ಪ್ರಕಟವಾಗಿದೆ. ಕನ್ನಡ ಸಾಹಿತ್ಯದಲ್ಲಿ ಈಗಿರುವ ಕಾದಂಬರಿಗಳೆಲ್ಲೆಲ್ಲ ಇದೇ ಅತ್ಯಂತ ದೊಡ್ಡದೆಂದು ಹೇಳಬಹುದಾಗಿದೆ.

— ದೊರೆಯುವ ಸ್ಥಳ —

**ಕಾವ್ಯಾಲಯ —— ಪ್ರಕಾಶಕರು —— ಶಿವಮೊಗ್ಗ.**

# ಹಳ್ಳಿಯ ಆರ್ಥಿಕ ವಿಚಾರಣೆ*

**ನಮ್ಮ ದೇಶದಲ್ಲಿ ಗ್ರಾಮಪುನರುದ್ಧಾರ ಕಾರ್ಯಕ್ಕೆ ಕೈ ಹಚ್ಚುವ ಮೊದಲು ಗ್ರಾಮಗಳ ನಿಜವಾದ ಸ್ಥಿತಿಯನ್ನು ತಿಳಿದುಕೊಳ್ಳಬೇಕು. ರೋಗಿಯು ರೋಗವನ್ನು ಅರಿತಲ್ಲದೆ ಅವನಿಗೆ ಔಷಧಿಯನ್ನು ಕೊಡುವುದು ಹೇಗೆ ಸಾಧ್ಯವಲ್ಲವೋ ಹಾಗೆಯೇ ಗ್ರಾಮಗಳ ಕಷ್ಟ ಸುಖಗಳನ್ನೂ ನಿಜಸ್ಥಿತಿಯನ್ನೂ ತಿಳಿದಲ್ಲದೆ, ಗ್ರಾಮಜೀವನದ ಸಮಸ್ಯೆಗಳನ್ನು ಬಗೆಹರಿಸುವುದು ಸಾಧ್ಯವಲ್ಲ. ನಮ್ಮ ರೈತರ ಕಷ್ಟಪರಂಪರೆಗಳನ್ನು ನಿವಾರಿಸುವುದಕ್ಕೆ ಪ್ರಯತ್ನಮಾಡುವ ಮೊದಲೇ ಅವರ ವಾಸ್ತವಿಕ ಚಿತ್ರಗಳನ್ನು ಅರಿತುಕೊಳ್ಳಬೇಕು. ಅದುದರಿಂದ ನಮ್ಮ ಹಳ್ಳಿಗಳ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೆ ಹಳ್ಳಿಗಳ ಆರ್ಥಿಕ ವಿಚಾರಣೆಯು ಮುಖ್ಯವಾದುದು.**

●

ಭರತಖಂಡವು ಹಳ್ಳಿಗಳ ನಾಡು. ಒಂದಾನೊಂದು ಕಾಲದಲ್ಲಿ ಇಲ್ಲಿಯ ಹಳ್ಳಿಗಳಲ್ಲಿ ವಾಸಮಾಡುತ್ತಿದ್ದ ಜನಗಳು ಹೊರಗಿನ ಸಂಪರ್ಕವಿಲ್ಲದೆ, ಜೀವನದ ಎಲ್ಲಾ ಸೌಕರ್ಯಗಳನ್ನೂ ತಾವೇ ಏರ್ಪಡಿಸಿಕೊಳ್ಳುತ್ತಿದ್ದರು. ಪ್ರತಿಯೊಂದು ಗ್ರಾಮವು ಸ್ವಸಂಪೂರ್ಣವಾದ ಪ್ರಜಾಧಿಪತ್ಯವೆನಿಸಿಕೊಂಡಿದ್ದಿತು. ಇವುಗಳ ಆರ್ಥಿಕ ಜೀವನದಲ್ಲಿ ಒಂದು ವಿಧವಾದ ಹೆಂಚಿಕೆ ಇದ್ದಿತು. ಆರ್ಯರ ಕಾಲದಲ್ಲಿ ಗ್ರಾಮದೇವಸ್ಥಾನ, ಗ್ರಾಮಶಾಣ, ಗ್ರಾಮತೋಪು, ಕುಂಟೆ, ಇವುಗಳಿಗಾಗಿ ಗ್ರಾಮಸ್ಥರು ಶ್ರದ್ಧೆ ಮತ್ತು ಐಕಮತ್ಯದಿಂದ ಕೆಲಸಮಾಡುತ್ತಿದ್ದುದು ನಮಗೆ ತಿಳಿದುಬರುವುದು. ದ್ರಾವಿಡರ ಕಾಲದಲ್ಲಿಯೂ ಇದೇ ರೀತಿಯಿತ್ತು; ಗ್ರಾಮಗಳಲ್ಲಿ ವೈದ್ಯಸಹಾಯವನ್ನು ಅಶೋಕ ಚಕ್ರವರ್ತಿಯು ಕಲ್ಪಿಸಿದ್ದನೆಂಬುದನ್ನು ನಾವು ಶಾಸನಗಳಿಂದ ತಿಳಿಯಬಹುದು. ರೈತರು ಉಪವೃತ್ತಿಗಳನ್ನು ಕಲ್ಪಿಸಿಕೊಂಡು, ಗ್ರಾಮಗಳಲ್ಲಿ ಸುಖವಾಗಿ ಜೀವನಮಾಡುತ್ತಿದ್ದರು. ನಾಯಿಂದ, ಕುಂಬಾರ, ಕಮ್ಮಾರ, ಅಗಸ, ಬಡಗಿ, ಇವರೆಲ್ಲಾ ಉಂಬಳಿ ಜಮಾನುಗಳನ್ನು ಅನುಭವಿಸುತ್ತಾ, ಗ್ರಾಮದ ಜನಗಳಿಗೆ ಸಹಾಯಕರಾಗಿ, ಮೈತ್ರಿಯಿಂದಿರುತ್ತಿದ್ದರು.

ಗ್ರಾಮದಲ್ಲಿ ಪ್ರತಿಯೊಬ್ಬರೂ ಬೇರೆ ಬೇರೆ ಕಸಬುಗಳನ್ನು ಅವಲಂಬಿಸಿದ್ದರೂ, ಅದರಲ್ಲಿ ಒಂದು ವಿಧವಾದ ಸಜಾತೀಯ ಬಾಂಧವ್ಯ ಮತ್ತು ಐಕಮತ್ಯ ಇದ್ದುವು. ಹಳ್ಳಿಯಲ್ಲಿದ್ದ ಛತ್ರ, ತೋಪುಗಳು ಅಲ್ಲಿಯ ಸೊಬಗನ್ನು ಹೆಚ್ಚಿಸಿ, ಜನಗಳ ಅಭಿಮಾನವನ್ನು ಪ್ರಕಟಿಸುತ್ತಿದ್ದವು. ಊರೊಟ್ಟಿನ ಕೆಲಸವೆಂದರೆ ಎಲ್ಲರಿಗೂ ಸಂತೋಷ; ಹೆಮ್ಮೆಯಿಂದ ಬಂದು ಕೆಲಸಮಾಡುತ್ತಿದ್ದರು. ಅಲ್ಲಿಯ ಸಮಾಜದಲ್ಲಿ ಒಂದು ವಿಧವಾದ ಕಟ್ಟು ಇದ್ದಿತು. ಪಂಚಾಯಿತಿ ತೀರ್ಮಾನಗಳು ರೈತರನ್ನು ಹತೋಟಿಯಲ್ಲಿ ಇಡುತ್ತಿದ್ದವು.

ಭಾರತದ ಸಂಸ್ಕೃತಿಯು ಈ ಹೊತ್ತಿನ ವರೆಗೂ ಇಂತಹ ಹಳ್ಳಿಗಳನ್ನೆ ಆಶ್ರಯಿಸಿದೆ. ಅನೇಕ ಇತರ ದೇಶಗಳ ಪುರಾತನ ಸಂಸ್ಕೃತಿಗಳು ಪರಕೀಯರ ಧಾಳಿಯಿಂದ ನಾಶವಾದರೂ,

* ಸದ್ಯದಲ್ಲಿಯೇ ಪ್ರಕಟವಾಗಲಿರುವ "ರೈತನ ಪ್ರಪಂಚ" ಎಂಬ ಗ್ರಂಥದಿಂದ.

ನಮ್ಮ ಸಂಸ್ಕೃತಿಯು ಇನ್ನೂ ಹಾಳಾಗಿಲ್ಲ. ಅನೇಕ ಚಕ್ರಾಧಿಪತ್ಯಗಳು ಏರಿ ಇಳಿದರೂ, ಅನೇಕ ಇತರ ಸಂಸ್ಕೃತಿಗಳು ನಮ್ಮ ದೇಶದಲ್ಲಿ ಬೇರೂರಿದರೂ, ನಮ್ಮ ಸಂಸ್ಕೃತಿಯು ಇನ್ನೂ ಉಳಿದಿದೆ. ಹಿಂದಲ ಕಾಲದಲ್ಲಿ ಹಳ್ಳಿಯ ಗಾನ, ಕುಣಿತ, ಬೈಲಾಟ, ಹಬ್ಬ–ಇವುಗಳೆಲ್ಲಾ ಜನರನ್ನು ಹುರಿ ದುಂಬಿಸುತ್ತಿದ್ದವು. ಅವರು ಸಂತೋಷದಿಂದ ಜೀವಿಸುತ್ತಿದ್ದರು. ಜನರು ತಮ್ಮ ಪಿತ್ರಾರ್ಜಿತ ವಾದ ಕಸಬುಗಳನ್ನು ಕೈಗೊಂಡು, ದೃಢಕಾಯರಾಗಿ, ದೀರ್ಘಕಾಲ ಬದುಕುತ್ತಿದ್ದರು. ಜೀವನ ದಲ್ಲಿ ಅವರಿಗೆ ಜುಗುಪ್ಸೆ ಇರುತ್ತಿರಲಿಲ್ಲ. ಒಟ್ಟಿನಲ್ಲಿ ಪ್ರತಿಯೊಂದು ಹಳ್ಳಿಯೂ ಸ್ವಸಂಪೂರ್ಣ ವಾಗಿ, ಸಂತೋಷಭರಿತವಾದ ಒಂದು ದೊಡ್ಡ ಸಂಸಾರದ ಹಾಗೆ ಇದ್ದಿತೆನ್ನಬಹುದು.

ಇಷ್ಟು ಸಂತೋಷಭರಿತವಾದ, ಸ್ವಸಂಪೂರ್ಣವಾದ ಹಳ್ಳಿಗಳು ಒಂದೆರಡು ಶತಮಾನ ಗಳಿಂದೀಚೆಗೆ ಕಳೆಗುಂದಿ, ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾ ಇವೆ. ಈಗ ನಮ್ಮ ಹಳ್ಳಿಗಳು ಬಡತನದ ತವರುಮನೆ. ಬೆಳಗಿನಿಂದ ಸಾಯಂಕಾಲದ ವರೆಗೂ ದುಡಿದರೂ ರೈತರಿಗೆ ಹೊಟ್ಟೆತುಂಬ ಆಹಾರವಿಲ್ಲ. ಮೈತುಂಬ ಬಟ್ಟೆ ಇಲ್ಲ. ವಾಸಿಸಲು ಯೋಗ್ಯವಾದ ಮನೆಗಳಿಲ್ಲ. ಹಳ್ಳಿಗಳ ಬಡತನವನ್ನು ವರ್ಣಿಸುವುದು ಅಸಾಧ್ಯವಾಗಿದೆ. ನಮ್ಮ ದೇಶದ ಹಳ್ಳಿಗಳಲ್ಲಿರುವಷ್ಟು ದಾರಿದ್ರ್ಯವು ಪ್ರಪಂಚದ ಮತ್ತಾವ ಭಾಗದಲ್ಲಿಯೂ ಇಲ್ಲವೆಂದು ಧೈರ್ಯವಾಗಿ ಹೇಳಬಹುದು. ನಮ್ಮ ರೈತರು "ಋಣದಲ್ಲಿಯೇ ಹುಟ್ಟಿ, ಋಣದಲ್ಲಿಯೇ ಬೆಳೆದು, ಋಣದಲ್ಲಿಯೆ ಮಡಿಯುತ್ತಾರೆ."

ಅಹಸ್ಯಹನಿ ಕಾಲಕ್ಲೇಪದಿಂದ ಜೀವಿಸುತ್ತಿರುವ ಬಡ ರೈತರಿಗೆ ರೋಗಾದಿ ಉಪದ್ರವಗಳು ಬಂದರೆ, ಅವರು ಉಪವಾಸವಿರಬೇಕಾಗುತ್ತದೆ. ಈ ಜನಗಳ ಆರ್ಥಿಕಾಭ್ಯುದಯವು ಅವರ ದೇಹದಾರ್ಢ್ಯದ ಕೆಲಸಗಳನ್ನೇ ಅವಲಂಬಿಸಿರುವುದು. ನಮ್ಮ ರೈತರ ಆರ್ಥಿಕೋನ್ನತಿಗೂ ಮತ್ತು ದೇಶದ ಆರೋಗ್ಯಕ್ಕೂ ಬಹಳ ಹತ್ತಿರ ಸಂಬಂಧವಿದೆ ಎಂಬುದಾಗಿ ೧೯೨೮ ನೆಯ ಇಸವಿಯ ವ್ಯವ ಸಾಯ ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ದೇಶದಲ್ಲಿ ಬೆಳೆಯುತ್ತಿರುವ ರೈತರ ಆರ್ಥಿಕ ದೌರ್ಬಲ್ಯಕ್ಕೆ, ಇಲ್ಲಿಯ ನಿವಾರಿಸಲಸಾಧ್ಯವಾದ ರೋಗಗಳೇ ಕಾರಣವೆಂದು ೧೯೩೪ನೆಯ ಇಸವಿಯ ಅಖಿಲ ಭಾರತ ವೈದ್ಯವಿದ್ಯಾ ಸಂಘದವರು ಹೇಳಿದ್ದಾರೆ. ನಮ್ಮ ಹಳ್ಳಿಯ ಜನಗಳಲ್ಲಿ ಈಗ ಶಕ್ತಿಯಿಲ್ಲ; ಉತ್ಸಾಹವಿಲ್ಲ. ಅವಿದ್ಯೆ, ಅಜ್ಞಾನ, ಅಹಂಕಾರ ಇವುಗಳೆಲ್ಲಾ ಜನರನ್ನು ಆವರಿ ಸಿವೆ. ಹಿಂದಿನ ಮೂಢಾಚಾರಗಳನ್ನೇ ಜನರು ಅಜ್ಞಾನದಿಂದ ಅನುಸರಿಸುತ್ತಿರುವರು. ಮೌಢ್ಯವು ಆರ್ಥಿಕ ಜೀವನವನ್ನು ಉತ್ತಮಪಡಿಸುವುದಕ್ಕೆ ಅವಕಾಶ ಕೊಡುತ್ತಿಲ್ಲ. ಅವರು ಅಹಂಕಾರಿಗಳಾದುದರಿಂದ ತಮಗೆ ಸಹಾಯ ಮಾಡಬರುವ ನಿಪುಣರಿಗೆ ಅವರು ಆಸ್ಪದ ಕೊಡುತ್ತಿಲ್ಲ.

ಬಾದರಾಯಣಕಾಲದ ವ್ಯವಸಾಯಕ್ರಮ, ಸಮಾಜದ ಕೆಟ್ಟ ಸಂಪ್ರದಾಯ, ಜಮೀನು ಹಂಚುವಳಿಯಲ್ಲಿ ನ್ಯೂನತೆ, ಬಡತನ-ಇವುಗಳೆಲ್ಲಾ ವ್ಯವಸಾಯಾಭಿವೃದ್ಧಿಗೆ ಕಂಟಕಗಳಾಗಿವೆ. ಇವುಗಳ ಜೊತೆಗೆ ರೋಗಾದಿಗಳು ಒಂದೊಂದು ಸಲವೂ ಅನೇಕ ಜೀವಗಳನ್ನು ತೆಗೆದುಕೊಳ್ಳುತ್ತವೆ. ಪ್ಲೇಗು, ಕಾಲರಾ ರೋಗಗಳಂತೂ ಒಟ್ಟಿಗೇ ಜನರನ್ನು ಗುಡಿಸಿಬಿಡುತ್ತವೆ.

ಹಳ್ಳಿಗಳಲ್ಲಿ ಜನರಿಗೆ ಪುಷ್ಟಿಯಾದ ಆಹಾರವೇ ಇಲ್ಲ. ಪುಷ್ಟಿಯಾದ ಆಹಾರದ ಮಾತು ಹಾಗಿರಲಿ, ಹೊಟ್ಟೆತುಂಬ ಆಹಾರವಿಲ್ಲ. ಅವರ ಒಟ್ಟು ವರಮಾನದಲ್ಲಿ ಶೇಕಡಾ ಎಂಭತ್ತರಷ್ಟನ್ನು ಆಹಾರಕ್ಕೇ ಉಪಯೋಗಿಸಿದರೂ ಕೂಡ, ಅವರಿಗೆ ಹೊಟ್ಟೆ ತುಂಬುವಷ್ಟು ಆಹಾರವು ದೊರೆಯುವುದಿಲ್ಲ. ಸಾಮಾನ್ಯವಾಗಿ ಒಬ್ಬ ರೈತನು ಒಂದು ವರ್ಷಕ್ಕೆ, ಅವನ ಆಹಾರಕ್ಕಾಗಿಯೇ ಒಂದು ನೂರು ರೂಪಾಯಿಗಳನ್ನು ಖರ್ಚುಮಾಡಬೇಕಾಗುವುದು. ಅವನ ಆದಾಯವೇ ವರ್ಷಕ್ಕೆ ಐವತ್ತು ರೂಪಾಯಿಗಳಿಗೆ ಮೇಲ್ಪಟ್ಟು ಇಲ್ಲದೆ ಇರುವಾಗ, ಅಷ್ಟು ಹಣವನ್ನು ಅವನು ಎಲ್ಲಿಂದ ತಂದಾನು! ರೈತನು ತಾನು ಬೆಳೆದ ಕಾಯಿಪಲ್ಯ, ಹಣ್ಣು–ಇವುಗಳನ್ನು ತಾನು ಉಪಯೋಗಿಸದೆ

ನಗರಗಳಿಗೆ ಸಾಗಿಸುತ್ತಾನೆ ಹಾಲು-ತುಪ್ಪಗಳನ್ನೂ ಕೂಡ ಉಪಯೋಗಿಸುವುದಿಲ್ಲ. ಹೀಗಿರುವಲ್ಲಿ ಅವನಿಗೆ ಪುಷ್ಟಿಯಾದ ಆಹಾರವು ಎಲ್ಲಿಂದ ಬರಬೇಕು?

ಇಂದಿನ ಹಳ್ಳಿಯ ಜೀವನವನ್ನು ಇನ್ನೂ ಹೆಚ್ಚಾಗಿ ವಿಮರ್ಶೆಮಾಡಿ ನೋಡಿದರೆ, ಅಲ್ಲಿಯ ವಾಸವೇ ಅಸಹ್ಯವಾಗಿ ತೋರುವುದು. ಪವಿತ್ರವಾಗಿದ್ದ ದೇವಸ್ಥಾನಗಳು ಅನೇಕ ಸ್ಥಳಗಳಲ್ಲಿ ಪಾಳುಬಿದ್ದಿವೆ. ಪುರಾಣ, ಹರಿಕಥೆ, ಯಕ್ಷಗಾನ-ಇವುಗಳಿಗೆ ಮಾತೃಸ್ಥಾನವಾಗಿದ್ದ ಹಳ್ಳಿಗಳಲ್ಲಿ ಇವು ಯಾವುವೂ ಕಾಣುವುದಿಲ್ಲ, ಎಲ್ಲವೂ ಹಾಳಾಗಿವೆ. ಆಧುನಿಕ ನಾಗರಿಕತೆಯ ಸಂಪರ್ಕದಿಂದ, ಅವರು ಹಳೆಯ ಸಂಪ್ರದಾಯಗಳನ್ನು ಬಿಡುತ್ತಿದ್ದಾರೆ. ಹೊಸ ಉಪಕರಣಗಳು ಅವರಿಗೆ ಸಿಕ್ಕುತ್ತಿಲ್ಲ; ಸಿಕ್ಕುವ ಹಾಗೂ ಇಲ್ಲ. ನಮ್ಮ ಹಳ್ಳಿಯವರು ಹಳೆಯ ಹೆಣತೆಯನ್ನು ಈಗ ಉಪಯೋಗಿಸುತ್ತಿಲ್ಲ. ವಿದ್ಯುಚ್ಛಕ್ತಿ ದೀಪಗಳು ಅವರೆಲ್ಲರಿಗೂ ಸಿಕ್ಕುವುದಿಲ್ಲ. ಈ ವಿಧವಾದ ಇಕ್ಕಟ್ಟಿನಲ್ಲಿ ಸಿಕ್ಕಿ, ಅವರು ಬಹಳ ಶೋಚನೀಯ ಸ್ಥಿತಿಯಲ್ಲಿದ್ದಾರೆ.

ಇತಿಹಾಸಕರು ಯಾವ ಹಳ್ಳಿಯ ವಾಸವನ್ನು ಸ್ವರ್ಗಸಮಾನವೆಂದು ಸಾರಿದ್ದರೋ ಅಂತಹ ಹಳ್ಳಿಗಳು ಈಗ ಪಾಪಕೂಪಗಳಾಗಿ, ಅಶಕ್ತರಿಗೂ, ವೃದ್ಧರಿಗೂ, ಅಬಲೆಯರಿಗೂ, ನಿವಾಸಸ್ಥಾನಗಳಾಗಿವೆ. ಆಧುನಿಕ ನಾಗರಿಕತೆಗೆ ಮನಸೋತು, ಹಳ್ಳಿಯ ತರುಣರು ನಗರಗಳಿಗೆ ಹೋಗಿ ನೆಲಸುತ್ತಿದ್ದಾರೆ. ವಿದ್ಯಾವಂತರೂ, ದೃಢಾಂಗರೂ, ಸುಸಂಸ್ಕೃತರೂ ಆದ ಹಳ್ಳಿಯ ತರುಣರಿಗೆ ಹುಟ್ಟಿದ ಊರು ಅಸಹ್ಯವಾಗುತ್ತಿದೆ. ಹಳ್ಳಿಗಳಿಗೆ ಹೋಗಬೇಕೆಂದರೇ ಅವರಿಗೆ ಬೇಜಾರು. ಹೀಗಿರುವಾಗ ಹಳ್ಳಿಗಳು ಹೇಗೆ ಉದ್ಧಾರವಾಗಬೇಕು? ಕಷ್ಟಪಟ್ಟು ದುಡಿಯುತ್ತಿರುವ ಅವರ ನೋದರ ನೋದರಿಯರು ಹೇಗೆ ಅಭಿವೃದ್ಧಿ ಹೊಂದಬೇಕು? ಪುರಾತನ ಪ್ರಸಿದ್ಧವಾದ ಅವರ ಸಂಸ್ಕೃತಿಯು ಪಾಶ್ಚಾತ್ಯ ನಾಗರಿಕತೆಯ ಧಾಳಿಯಿಂದ ಹೇಗೆ ತಪ್ಪಿಸಿಕೊಂಡು ಉಳಿಯಬೇಕು?

ಈ ವಿಚಾರಗಳನ್ನು ನಾವು ವಿಮರ್ಶಿಸಬೇಕು. ದೇಶದ ಜನಪದ ಪರಿಗಣನೆಯ ಪಟ್ಟಿಯನ್ನು ನೋಡಿದರೆ, ಹಳ್ಳಿಯ ಜನರು ಹೇಗೆ ನಗರಗಳನ್ನು ನೇರುತ್ತಿದ್ದಾರೆಂಬುದು ಮಂದಟ್ಟಾಗುವುದು. ಮೈಸೂರು ಸಂಸ್ಥಾನದ ೧೯೨೧ನೆ ಇಸವಿಯ ಸೆನ್ಸಸ್ ಲೆಕ್ಕದ ಪ್ರಕಾರ ಒಂದು ಸಾವಿರ ಜನಕ್ಕೆ ೧೪೮ರಂತೆ ಇದ್ದ ನಗರವಾಸಿಗಳ ಸಂಖ್ಯೆಯು ೧೯೩೧ರಲ್ಲಿ ೧೬೦ಕ್ಕೆ ಏರಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವ ಜನಗಳ ಜನ್ಮಸ್ಥಳವನ್ನು ವಿಚಾರಿಸಿದರೆ ಇದು ಚೆನ್ನಾಗಿ ವ್ಯಕ್ತವಾಗುವುದು. ಇದೇ ರೀತಿಯಲ್ಲಿ ಇಂಡಿಯಾ ದೇಶದ ಪ್ರತಿಯೊಂದು ಪ್ರಾಂತ್ಯದಲ್ಲಿಯೂ ನಡೆಯುತ್ತಾ ಇದೆ. ಹೀಗೆ ಜನರು ತಮ್ಮ ಗ್ರಾಮಗಳನ್ನು ಬಿಟ್ಟು ನಗರಗಳನ್ನು ಸೇರುತ್ತಾ ಬಂದರೆ ಕಾಲಾನುಕ್ರಮದಲ್ಲಿ ಅನೇಕ ಗ್ರಾಮಗಳು ನಾಶವಾಗುವುದಲ್ಲದೆ ಅಲ್ಲಿಯ ಜೀವನವು ಕೂಡ ಅಸಹ್ಯವಾಗುವುದು.

ಪಾಶ್ಚಾತ್ಯ ದೇಶಗಳಲ್ಲಿ ಕೂಡ ಹಳ್ಳಿಯ ಜನಗಳು ನಗರಗಳನ್ನು ಸೇರುತ್ತಿದ್ದಾರೆ. "ಹಳ್ಳಿಗಳಲ್ಲಿ ಜನಗಳಿಗೆ ಸೌಖ್ಯವಿಲ್ಲ; ಅನುಕೂಲವಿಲ್ಲ; ವಾಸಿಸುವುದಕ್ಕೆ ಸರಿಯಾದ ಮನೆಗಳಿಲ್ಲ. ಆಹಾರ ಮತ್ತು ಸರಿಯಾದ ನೆರೆ ಮೊದಲೇ ಇಲ್ಲ. ಹೀಗಿರುವಾಗ ಅವರು ಅಭಿವೃದ್ಧಿಯಾಗುವುದೆಂತು?" ಎಂಬುದಾಗಿ ಹೆನ್ರಿ ವುಲ್ಫ್ ಎಂಬವರು ಬರೆಯುತ್ತಾರೆ. ಅಮೇರಿಕಾ ದೇಶದ ಸಂಯುಕ್ತ ರಾಷ್ಟ್ರದ ಹಳ್ಳಿಗಳಲ್ಲಿ ಅಲ್ಲಿಯ ಜನರ ಬಡತನ, ನೀರಸವಾದ ಸನ್ನಿವೇಶ, ಅನಾರೋಗ್ಯಜೀವನ ಮತ್ತು ವಿದ್ಯಾಭ್ಯಾಸಕ್ಕೆ ಅಡಚಣೆ–ಇವುಗಳು ಹಳ್ಳಿಯವರು ನಗರಗಳಿಗೆ ಹೋಗಿ ನೆಲಸುವಂತೆ ಮಾಡುತ್ತಿವೆ ಎಂಬುದಾಗಿ ಆ ದೇಶದ ಆರ್ಥಿಕ ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ.

ಪಾಶ್ಚಾತ್ಯರ ದೃಷ್ಟಿಯಿಂದಲೇ ನಾಗರಿಕರಾಗಿ ಮುಂದಾಗಿರುವ ದೇಶಗಳಲ್ಲೇ ಹೀಗಿರುವಾಗ ನಮ್ಮ ದೇಶದ ಹಳ್ಳಿಗಳ ಸ್ಥಿತಿಯನ್ನು ನಿವರಿಸಬೇಕಾಗಿಯೇ ಇಲ್ಲ ನಮ್ಮ ಹಳ್ಳಿಗಳಲ್ಲಿ ಕುಡಿಯಲು ಹಸನಾದ ನೀರಿಲ್ಲ. ಗಾಳಿ ಬೆಳಕಿಗೆ ಅನುಕೂಲವಾದ ಮನೆಗಳಿಲ್ಲ. ಸಾಂಕ್ರಾಮಿಕ ರೋಗಗಳು ಕೃತರನ್ನು ಪೀಡಿಸುತ್ತಿವೆ. ಬಡತನವೂ ಸಾಲದ ಹೊರೆಯೂ ಅವರನ್ನು ನಿರುತ್ಸಾಹಿಗಳನ್ನಾಗಿ

ಮಾಡುತ್ತಿವೆ. ಇವುಗಳೆಲ್ಲಕ್ಕಿಂತಲೂ ಹೆಚ್ಚಾಗಿ ಅವರು ನಿರಕ್ಷರಕುಕ್ಷಿಗಳು. ಅಜ್ಞಾನವು ಅವರನ್ನು ಸದಾ ಆವರಿಸಿದೆ. ನಮ್ಮ ದೇಶವು ಅಭಿವೃದ್ಧಿಯಾಗಬೇಕಾದರೆ ಮೊದಲು ನಮ್ಮ ಹೆಳ್ಳಿಗಳ ಉದ್ಧಾರವಾಗಬೇಕು.

ವ್ಯವಸಾಯವೇ ಪ್ರಧಾನ ವೃತ್ತಿಯಾಗಿರುವ ನಮ್ಮ ದೇಶದಲ್ಲಿ ನೂರಕ್ಕೆ ಎಂಭತ್ತು ಮಂದಿ ವ್ಯವಸಾಯದಿಂದಲೇ ಜೀವನ ಮಾಡುತ್ತಿದ್ದಾರೆ. "ಒಂದು ಹಳ್ಳಿಯ ಉದಾಹರಣೆಯನ್ನು ನೋಡಿ. ಒಬ್ಬ ರೈತನ ವರಮಾನ ಸುಮಾರು ೧೧೪ ರೂಪಾಯಿಗಳು; ಅವನ ಜೀವನಕ್ಕೆ ಬೇಕಾಗಿರುವ ಕನಿಷ್ಠ ಮೊಬಲಗು ೧೩೬ ರೂಪಾಯಿಗಳು; ಅವನ ಸಾಲ ೧೪೭ ರೂಪಾಯಿಗಳು. ಭರತ ಖಂಡದಲ್ಲಿ ಸಾಗುವಳಿಯಾಗುತ್ತಿರುವ ಜಮೀನು ಇಲ್ಲಿಯ ರೈತರಿಗೆ ಸಾಲದು. ಪ್ರತಿ ರೈತನಿಗೂ ಸುಮಾರು ಒಂದೂವರೆ ಎಕರೆ ಬರುತ್ತದೆ. ಈ ೬೦ ಗುಂಟೆಯಲ್ಲಿ ಅವನ ತೋಟ, ಗದ್ದೆ, ಹೊಲ ಇವುಗಳೆಲ್ಲಾ ಅಡಗಿವೆ" ಎಂಬುದಾಗಿ ನಮ್ಮ ದೇಶದ ಕೇಂದ್ರ ವ್ಯವಸಾಯ ಪರಿಶೀಲನಾ ಸಮಿತಿಯ ಉಪಾಧ್ಯಕ್ಷರಾಗಿದ್ದ ಸರ್ ಟಿ. ವಿಜಯರಾಘವಾಚಾರ್ಯರು[1] ಹೇಳಿದ್ದಾರೆ.

ನಮ್ಮ ಗ್ರಾಮಗಳ ದುರವಸ್ಥೆಯನ್ನು ಇನ್ನೊಬ್ಬ ನಿಪುಣರು ಹೀಗೆ ವರ್ಣಿಸಿದ್ದಾರೆ:

"ಮುಂಗಾರು ಮಳೆ ಒಂದೆರಡು ಹದ ಬಿದ್ದಮೇಲೆ, ರೈತರು ತಮ್ಮ ಭೂಮಿಯನ್ನು ಉತ್ತು ಹದಮಾಡಿ ಬಿತ್ತುತ್ತಾರೆ. ಪೈರೇನೋ ಚೆನ್ನಾಗಿ ಬರುತ್ತದೆ. ಆದರೆ ಮಳೆಯು ಕಾಲಕ್ಕೆ ಬರದೆ ಪೈರು ಒಣಗಿ ರೈತರಿಗೆ ನಷ್ಟವಾಗುತ್ತದೆ. ಮಳೆಯು ಹೀಗೆ ಕ್ರಮತಪ್ಪಿ ಬರುವುದರಿಂದ ಅವರು ಉಪಯೋಗಿಸಿದ ಗೊಬ್ಬರವು ಫಲಕಾರಿಯಾಗುವುದಿಲ್ಲ. ಮಳೆ, ಗೊಬ್ಬರ ಇವು ಇಲ್ಲದುದರಿಂದಲೂ ಅಥವಾ ಫಲಕಾರಿಯಾಗದುದರಿಂದಲೂ, ಇತರ ದೇಶದವರು ತೆಗೆಯುವ ಬೆಳೆಯಲ್ಲಿ ಅರ್ಧ ಅಥವಾ ಮೂರನೇ ಒಂದು ಭಾಗ ಕೂಡ ನಮ್ಮ ರೈತನಿಗೆ ಲಭಿಸುವುದಿಲ್ಲ. ಆದುದರಿಂದ ನಮ್ಮ ದೇಶವು ಐಶ್ವರ್ಯದಿಂದ ಬೆಳಗಬೇಕಾದರೆ ಮೊದಲು ವ್ಯವಸಾಯವು ಅಭಿವೃದ್ಧಿಯಾಗಬೇಕು. ವ್ಯವಸಾಯವು ಅಭಿವೃದ್ಧಿಯಾಗಬೇಕಾದರೆ ಗೊಬ್ಬರ, ನೀರು, ಕ್ರಮವಾಗಿ ಒದಗುವ ವ್ಯವಸ್ಥೆಯಾಗಬೇಕು"[2] ಆಗ ನಮ್ಮ ರೈತನು ಬದುಕುತ್ತಾನೆ. ಹೆಳ್ಳಿಗಳು ಅಭಿವೃದ್ಧಿಯಾಗುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ, ನೂರಾರು ವರ್ಷಗಳಿಂದ ನಮ್ಮ ದೇಶದ ರೈತರ ಸೂರೆಯಾಗುತ್ತಾ ಅವರ ಶಕ್ತಿ, ಸಹನೆ, ತ್ರಾಣ, ಎಲ್ಲವೂ ಕೊನೆಗೆ ಬಂದಿವೆ. ಬುದ್ಧಿ ಮಂಕಾಗಿದೆ. ಮೈ ನಿತ್ರಾಣವಾಗಿದೆ. ಇನ್ನು ಕೆಲವು ಕಾಲ ಹೀಗೆಯೇ ನಡೆದರೆ, ಹೆಳ್ಳಿಗಳು ನಾಶವಾಗುವುದರಲ್ಲಿ ಸಂದೇಹವಿಲ್ಲ. ಆದರೆ ಇತ್ತೀಚೆಗೆ ರೈತರಲ್ಲಿ ಎಲ್ಲರೂ ಕನಿಕರಗೊಳ್ಳುತ್ತಿದ್ದಾರೆ. ಅವರ ಉದ್ಧಾರ ಕಾರ್ಯಗಳು ಒಂದೊಂದಾಗಿ ಆರಂಭವಾಗುತ್ತಿವೆ. ಅನೇಕ ಪ್ರಾಂತೀಯ ಸರಕಾರಗಳು ದೇಶದ ಬೆನ್ನು ಮೂಳೆಯಂತಿರುವ ರೈತರ ಜೀವನವನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನಿಸುತ್ತಿವೆ.

"ದೇಶದ ಅಭಿವೃದ್ಧಿಯೆಲ್ಲಾ ಬಡ ರೈತನ ಉದ್ಧಾರದ ಮೇಲೆ ನಿಂತಿದೆ" ಎಂಬ ತತ್ವವು ಜನಗಳಲ್ಲಿಯೂ ಪ್ರಭುತ್ವಗಳಲ್ಲಿಯೂ ಈಗೀಗ ಹರಡುತ್ತಿದೆ. ರೈತರ ಜೀವನವು ಉತ್ತಮವಾಗಿ ಸಂಸ್ಥಾನಗಳು ಸಂಪದ್ಯುಕ್ತವಾಗಬೇಕಾದರೆ ಗ್ರಾಮ ಪುನರುಜ್ಜೀವನ ಕಾರ್ಯಗಳು ಚೆನ್ನಾಗಿ ನಡೆಯಬೇಕು. ಇವುಗಳು ಆಚರಣೆಗೆ ಬರಬೇಕಾದರೆ ಹೆಳ್ಳಿಗಳ ನಿಜಸ್ಥಿತಿಯು ಚೆನ್ನಾಗಿ ತಿಳಿಯಬೇಕು.

ರೈತರ ಉದ್ಧಾರ ಕಾರ್ಯಗಳಿಗೆ ಸೂಕ್ತ ಸಾಧನಗಳನ್ನು ಸೂಚಿಸುವುದಕ್ಕೆ ಮುಂಚೆ, ನಮ್ಮ ಹೆಳ್ಳಿಗಳ ಸ್ಥಿತಿಯನ್ನು ಪರಿಶೀಲಿಸಬೇಕು. ಹೆಳ್ಳಿಗಳಿಗೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನು ನಿರ್ಮಿಸಿ ಮಾಡುವುದರಿಂದ, ಅವುಗಳ ಪರಿಸ್ಥಿತಿಯು ಸ್ವಲ್ಪ ಮಟ್ಟಿಗೆ ಮುಂದಟ್ಟಾಗಬಹುದು.

1. Speech at the Bengal Chamber of Commerce—by Sir T. V. Acharya, on 25-1 1937.
2. Speech at the Civil Service Association—by Dewan Bahadur N N Iyengar, Chief Engineer, Mysore, June 1936.

ಆದರೆ ನಮ್ಮ ಹಳ್ಳಿಗಳ ಅವಸ್ಥೆಯನ್ನು ತೋರಿಸುವ ಅಂಕಿಗಳ ತಃಖ್ತೆಯೂ, ಅವುಗಳನ್ನು ತಯಾರಿಸುವ ವಿಧಾನವೂ, ಅಷ್ಟು ಸಮರ್ಪಕವಾಗಿಲ್ಲ. ಒಂದು ವರ್ಷದಲ್ಲಿ ಬರೆಯಲ್ಪಟ್ಟ ಅಂಕಿಗಳೇ ಸಾಮಾನ್ಯವಾಗಿ ಪ್ರತಿ ವರ್ಷದಲ್ಲಿಯೂ ಪುನರುಚ್ಚಾರವಾಗುತ್ತಿವೆ. ಉತ್ತಮ ಅಂಕಿಗಳ ತಃಖ್ತೆಯ ಮಹತ್ವವು ನಮ್ಮ ಜನಗಳಿಗೆ ತಿಳಿದಿಲ್ಲ. "ಒಟ್ಟಿನಲ್ಲಿ, ಜಮೀನಿನ ಒಟ್ಟು ಹುಟ್ಟುವಳಿಯ ವಿಷಯದಲ್ಲಾಗಲಿ, ಅಥವಾ ವ್ಯವಸಾಯದಿಂದುಂಟಾಗುವ ಆದಾಯದ ವಿಷಯದಲ್ಲಾಗಲಿ, ಈ ತಃಖ್ತೆಗಳು ಸರಿಯಾಗಿರುವುದೇ ಇಲ್ಲ."[3] ಎಂಬುದಾಗಿ ಅರ್ಥ ಶಾಸ್ತ್ರ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ಗ್ರಾಮಗಳ ಆರ್ಥಿಕ ಜೀವನದಲ್ಲಿ ಒಂದು ವಿಧವಾದ ಹೆಂಚಿಕೆಯನ್ನು ಏರ್ಪಡಿಸುವುದಕ್ಕೇ ಆಗಲಿ, ಅಥವಾ ಅವುಗಳ ಅಭಿವೃದ್ಧಿಗೆ ಮುಖ್ಯವಾದ ಸಲಹೆಗಳನ್ನು ಸೂಚಿಸುವುದಕ್ಕೇ ಆಗಲಿ, ಇಂತಹ ತಃಖ್ತೆ ಆವಶ್ಯಕ. ಅವುಗಳನ್ನು ಸರಿಯಾದ ರೀತಿಯಲ್ಲಿ ತಯಾರಿಸಬೇಕಾದದ್ದು ಅಗತ್ಯವಾಗಿದೆ.[4]

ನಮ್ಮ ಹಳ್ಳಿಗಳ ಆರ್ಥಿಕೋನ್ನತಿಗೆ ಯಾವ ಸಲಹೆಯನ್ನು ಕೊಟ್ಟರೂ ಅವು ವಸ್ತುಸ್ಥಿತಿಗೆ ಅನುಗುಣವಾಗಿರಬೇಕು! ಜರ್ಮನಿ, ಇಂಗ್ಲೆಂಡ್, ಅಮೇರಿಕಾ, ಜಪಾನ್ ದೇಶಗಳಲ್ಲಿ ಇಂತಹ ಅಂಕಿಗಳ ತಃಖ್ತೆಯನ್ನು (*Statistics*) ಬಹಳ ಜಾಗರೂಕತೆಯಿಂದಲೂ, ಸಾಮರ್ಥ್ಯದಿಂದಲೂ ತಯಾರು ಮಾಡುತ್ತಿದ್ದಾರೆ. ಅವುಗಳ ಸಹಾಯದಿಂದ, ಅಲ್ಲಿಯ ನಿಜವಾದ ಸ್ಥಿತಿಯನ್ನು ಕೂಡಲೇ ತಿಳಿದುಕೊಳ್ಳಬಹುದು. ಇದರೆ ಭರತ ಖಂಡದಲ್ಲಿ ಅನುಕೂಲವಾದ ಅಥವಾ ನಿಜವಾದ ನೆಲೆಯನ್ನು ತೋರಿಸುವ ಲೆಕ್ಕದ ಪಟ್ಟಿಗಳು ಅಪರೂಪ. ಅವುಗಳಲ್ಲಿ ಯಾವುದಾದರೂ ನ್ಯೂನತೆ ಇದ್ದೇ ಇರುವುದು. "ಭರತ ಖಂಡದಲ್ಲಿ ಆರ್ಥಿಕ ವಿಧಾನದ ಹೆಂಚಿಕೆಯ ಕಾರ್ಯಕ್ರಮವನ್ನು ಕೈಕೊಳ್ಳಬೇಕಾದರೆ, ಇಲ್ಲಿಯ ವಸ್ತುಸ್ಥಿತಿಯನ್ನು ಸರಿಯಾಗಿ ತೋರಿಸುವುದಕ್ಕೆ, ಸರಿಯಾದ, ತರಬೇತಾದ ಸಂಸ್ಥೆಗಳನ್ನೇ ಏರ್ಪಡಿಸಬೇಕು."[5] ಎಂಬುದಾಗಿ ಹಿಂದಿನ ವೈಸ್ರಾಯರು ಹೇಳಿದ್ದಾರೆ.

ನಮ್ಮ ಗ್ರಾಮಗಳ ಇರುವಿಕೆಯನ್ನು ವಿಭಜನೆ ಮಾಡಬೇಕಾದರೆ, ವೈಯಕ್ತಿಕ ವಿಚಾರಣೆಯೇ (Personal Investigation) ಶ್ರೇಷ್ಠವಾದುದು. ಇದರಿಂದ ನಮ್ಮ ಗ್ರಾಮಗಳ ಆರ್ಥಿಕ ವಿಚಾರಣೆ (Economic Surveys)ಯು ಬಹಳ ಚೆನ್ನಾಗಿ ನಡೆಯುವುದು. ಆದರೆ ಎಲ್ಲಾ ಸಂದರ್ಭಗಳಲ್ಲಿಯೂ, ವೈಯಕ್ತಿಕ ತನಿಖೆಯು ಸಾಧ್ಯವಾಗಲಾರದು. ಆದುದರಿಂದ ಸರಿಯಾದ ಲೆಕ್ಕಪತ್ರಗಳ ಸಹಾಯವೂ ಬೇಕಾಗುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಸ್ಥಳೀಯ ಜನಗಳ ಮತ್ತು ಸಂಸ್ಥೆಗಳ ವಿಚಾರಣೆಯಿಂದ ತನಿಖೆಯನ್ನು ಮುಂದುವರಿಸಬೇಕಾಗುತ್ತದೆ. ಗ್ರಾಮಗಳ ಆರ್ಥಿಕ ವಿಚಾರಣೆಯು ಅಲ್ಲಿಯ ನಿಜವಾದ ಜೀವನವನ್ನೂ, ಅಲ್ಲಿಯ ಪರಿಸ್ಥಿತಿಯನ್ನೂ ತೋರಿಸುವುದಾಗಿರಬೇಕು. ಶೋಧನಕಾರರು ಹಳ್ಳಿಗಳಲ್ಲಿ ಕೆಲವು ಕಾಲ ಇದ್ದು, ಅಲ್ಲಿಯ ಸ್ಥಿತಿಯನ್ನು ಕಣ್ಣಾರೆ ನೋಡಿ, ಅಲ್ಲಿಯ ವಿದ್ಯಮಾನಗಳನ್ನು ಚೆನ್ನಾಗಿ ತಿಳಿದು ವಿಷಯಸಂಗ್ರಹ ಮಾಡಬೇಕು. ಅಧಿಕಾರಿಗಳಿಂದ ಮತ್ತು ಖಾಸಗಿ ದೊಡ್ಡ ಮನುಷ್ಯರಿಂದ ವಿಶೇಷ ವರ್ತಮಾನವನ್ನು ಗಳಿಸಬೇಕು. ಶೋಧನಕಾರನು ಗ್ರಾಮದ ಸರಿಯಾದ ಜೀವನವನ್ನು ಚಿತ್ರಿಸಿ, ನಿಜವಾದ ಸಂಗತಿಗಳನ್ನೇ ಬರೆಯಬೇಕು. ಯಾವ ವಿಷಯವೂ ಅವನ ಕಲ್ಪನಾಶಕ್ತಿಗೆ ಸಂಬಂಧಿಸಿದ್ದಾಗಿರಕೂಡದು. ಶಾಸ್ತ್ರರೀತ್ಯಾ ನಡೆಸಿದ ಆರ್ಥಿಕ ವಿಚಾರಣೆಯು ಪೂರ್ಣವಾಗಿಯೂ ಸಾಂಗವಾಗಿಯೂ ಇರಬೇಕು. ಈ ರೀತಿಯಲ್ಲಿ ಎಲ್ಲಾ

---

3. Report of Dr. A. L. Bowley and D. H. Robertson, 1936.

4. Planned Economy for India (Part II)—by Sir M. Visvesvaraiya.

5. Address to The Associated Chamber of Commerce—by H. E. the Viceroy Lord Willingdon, on 8—1—'34.

ಗ್ರಾಮಗಳ ಆರ್ಥಿಕ ವಿಚಾರಣೆ ನಡೆಸದಿದ್ದರೂ ಕೂಡ, ಒಂದೊಂದು ಭಾಗದಲ್ಲಿ ಒಂದೊಂದು ನಮೂನೆಯ ಗ್ರಾನುಗಳ ತನಿಖೆಯನ್ನು ನಡೆಸಿದರೂ ಎಷ್ಟೋ ಪ್ರಯೋಜನವಾಗುವುದು.

ಸಾಮಾನ್ಯವಾಗಿ ಹಳ್ಳಿಯ ಆರ್ಥಿಕ ವಿಚಾರಣೆ ನಡೆಸುವುದಕ್ಕೆ ಎರಡು ವಿಧಾನಗಳಿವೆ. ಒಂದು ದಕ್ಷಿಣ ಇಂಡಿಯಾ ದೇಶದಲ್ಲಿ ಡಾಕ್ಟರ್ ಮನ್‌ರವರು ನಡೆಸಿರುವ ವಿಚಾರಣೆಯ ರೀತಿ. ಇನ್ನೊಂದು ಮ|| ಡಾರ್ಲಿಂಗ್ ಅಥವಾ ಕ್ಯಾಲ್‌ವರ್ಟ್‌ರವರು ಪಂಜಾಬು ದೇಶದಲ್ಲಿ ನಡೆಸಿರುವ ವಿಚಾರಣಾ ಗುಂಪಿಗೆ ಸೇರಿದ ಹಾಗೆ ಇರುವುದು. ಡಾ|| ಮನ್‌ರವರು ನಡೆಸಿರುವುದು ಕೆಲವು ಹಳ್ಳಿಗಳ ತನಿಖೆ ಮಾತ್ರ. ಡಾರ್ಲಿಂಗ್, ಕ್ಯಾಲ್‌ವರ್ಟ್‌ರವರು ನಡೆಸಿರುವುದು ಒಟ್ಟು ಪ್ರಾಂತದ ವಿಚಾರಣೆ. ಭರತ ಖಂಡದ ವ್ಯವಸಾಯ ಸಮಸ್ಯೆಗಳನ್ನೂ ಹಳ್ಳಿಗಳ ಆರ್ಥಿಕ ಜೀವನವನ್ನೂ ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಈ ಎರಡು ವಿಧವಾದ ಪರೀಕ್ಷೆಗಳೂ ಅಗತ್ಯವಾಗಿವೆ. ಆದರೆ ನಮೂನಾ ಹಳ್ಳಿಗಳ ಆರ್ಥಿಕ ಸ್ಥಿತಿಯನ್ನು ತಿಳಿದುಕೊಳ್ಳುವುದು ಈಗ ಮುಖ್ಯವಾಗಿದೆ. ಗ್ರಾಮ ಪುನರುಜ್ಜೀವನ ಕಾರ್ಯಗಳನ್ನು ಕೈಗೊಳ್ಳಬೇಕಾದರೆ, ಮುಖ್ಯವಾದ ಕೆಲವು ಹಳ್ಳಿಗಳ ಆರ್ಥಿಕ ವಿಚಾರಣೆಯಿಂದ ಅಗತ್ಯವಾದ ಸಾಧನೋಪಾಯಗಳನ್ನು ಕಂಡುಹಿಡಿಯಬೇಕು. ಸ್ಥಳ ವಿದ್ಯಮಾನಗಳನ್ನು ಕೂಲಂಕಷವಾಗಿ ಪರಿಶೀಲಿಸಿದಲ್ಲದೆ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಲಿ, ಅಥವಾ ಸೂಕ್ತ ಸಲಹೆಯನ್ನು ಸೂಚಿಸುವುದಕ್ಕಾಗಲಿ ಆಗುವುದಿಲ್ಲ.

ಗ್ರಾಮದ ಆರ್ಥಿಕ ವಿಚಾರಣೆಯನ್ನು ನಡೆಸುವುದರಲ್ಲಿ ಡಾ|| ಮನ್‌ರವರು ಮೊದಲನೆಯವರಾದ ಮಾರ್ಗದರ್ಶಕರಾಗಿದ್ದಾರೆ. ಅವರ ಆರ್ಥಿಕ ತನಿಖೆಯ ಕ್ರಮವು, ಹಳ್ಳಿಯ ಆರ್ಥಿಕ ಜೀವನವನ್ನೂ, ವ್ಯವಸಾಯಕ್ರಮವನ್ನೂ, ಅಲ್ಲಿಯ ಪ್ರಕೃತಿ ಲಕ್ಷಣ ಮತ್ತು ಭೂಮಿಯ ವಿಭಜನೆಯನ್ನೂ ಚೆನ್ನಾಗಿ ತೋರಿಸುತ್ತದೆ. ಹಳ್ಳಿಯ ಆರ್ಥಿಕ ಸ್ಥಿತಿ, ಆದಾಯ, ಸಾಲ, ಒಟ್ಟು ಬಂಡವಾಳ– ಇವುಗಳನ್ನು ತಿಳಿದುಕೊಳ್ಳಲೂ ಕೂಡ ಸಹಾಯವಾಗಿದೆ. ಇಂತಹ ಶಾಸ್ತ್ರೀಯ ವಿಚಾರಣೆಯು ಡಾ|| ಮನ್‌ರವರಿಂದ ಪ್ರಕಟವಾದ ಮೇಲೆ ನಮ್ಮ ದೇಶದ ಅನೇಕ ಭಾಗಗಳಲ್ಲಿ ಇನ್ನೂ ಅನೇಕ ವಿಚಾರಣೆಗಳು[8] ನಡೆದಿವೆ.

ಅವುಗಳಲ್ಲಿ ಕೆಲವು ಹಳ್ಳಿಯ ಆರ್ಥಿಕ ಜೀವನವನ್ನೂ, ಇನ್ನು ಕೆಲವು ಹಳ್ಳಿಯ ಸಮಾಜ ಮತ್ತು ಜೀವನಪದ್ಧತಿಗಳನ್ನೂ, ಮತ್ತೆ ಕೆಲವು ಹಳ್ಳಿಯ ಕೈಗಾರಿಕೆ, ವ್ಯಾವಾರ, ವಿದ್ಯಾಭ್ಯಾಸ ಮತ್ತು ಆರೋಗ್ಯ- ಇವುಗಳನ್ನೂ ಚಿತ್ರಿಸಿವೆ. ಒಂದೊಂದು ವಿಚಾರಣೆಯು ಒಂದೊಂದು ವಿಷಯಕ್ಕೆ ಪ್ರಾಧಾನ್ಯ ಕೊಟ್ಟಿರುತ್ತದೆ ಹಳ್ಳಿಯ ಮುಖ್ಯ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಚೆನ್ನಾಗಿ ವಿವರಿಸಿ ಅವುಗಳ ಏಳಿಗೆಗೆ ಅನುಕೂಲವಾದ ಮತ್ತು ಸುಲಭವಾದ ಸೂಚನೆಗಳನ್ನು ಸೂಚಿಸುವುದೇ ಈ ಆರ್ಥಿಕ ವಿಚಾರಣೆಯ ಮುಖ್ಯ ಗುರಿಯಾಗಿರಬೇಕು.

ಹಳ್ಳಿಗಳ ಅನುಭವಸಿದ್ಧವಾದ ವಿಷಯಗಳನ್ನು ಮತ್ತು ಸಮಂಜಸವಾದ ಆಚರಣೆಯನ್ನು ಸರಿಯಾದ ರೀತಿಯಲ್ಲಿ ಸಂಗ್ರಹಿಸುವುದು, ಆರ್ಥಿಕ ವಿಚಾರಕನ ಮೊದಲನೆಯ ಕರ್ತವ್ಯವಾಗಿರ

---

6. Wealth and Welfare in the Punjab—Calvert Punjab Peasant in Prosperity and Debt—by M. L. Darling.

7. Land and Labour in a South Gujarat Village—by G C. Mukhtyar P 53.

8. Some South Indian Villages—by Dr Slater Economic Life in a Bengal District—by Dr. Jack Economic Life in a Punjab District—by Lucas Economic Life in a Malabar Village—by S S Iyer A Social and Economic Survey of Konkan—by Ranade Report on the Economic Survey of Bairampur—by Ram Lal Bhalla Land and Labour in a South Gujarat Village—by G C Mukhtyar Studies in South Indian Villages—by Dr H. Mann. Punjab Peasant in Prosperity and Debt—by M L Darling

ಬೇಕು. ಹಳ್ಳಿಯ ಬಡ ರೈತರ ಮಧ್ಯದಲ್ಲಿ ಅನುಭವಿಗಳಾದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರೈತರೂ ಇದ್ದಾರೆ. ಇವರು ತಮ್ಮ ಉನ್ನತಿಗೂ ಇತರರ ಕ್ಷೀಣ ದೆಸೆಗೂ ಸರಿಯಾದ ಕಾರಣವನ್ನು ತಿಳಿದುಕೊಂಡಿದ್ದಾರೆ. ಇಂತಹವರ ಅನುಭವಸಿದ್ಧವಾದ ವಿಷಯಗಳ ಸಂಗ್ರಹಣೆಯು ವಿಚಾರಕನಿಗೆ ಬೆಲೆಯುಳ್ಳದ್ದು. ಇವುಗಳ ತಾರ್ಕಣೆಯಿಂದ ಸುಲಭವಾದ ಸಲಹೆಗಳನ್ನು ನಮೂದಿಸಬಹುದು. ಈ ಸಲಹೆಗಳನ್ನು ಆಚರಣೆಗೆ ತಂದು, ರೈತರ ಆರ್ಥಿಕ ಜೀವನವನ್ನು ಉತ್ತಮಪಡಿಸಬಹುದು.

ಆರ್ಥಿಕ ವಿಚಾರಣೆಯ ಮುಖ್ಯೋದ್ದೇಶವು ಹಳ್ಳಿಯ ಆರ್ಥಿಕ ಸ್ಥಿತಿಯ ಸತ್ಯಾಂಶವನ್ನು ತಿಳಿಸತಕ್ಕದಾಗಿರಬೇಕು. ಉತ್ತಮ ದರ್ಜೆಯ ತನಿಖೆಯು ಹಳ್ಳಿಯ ಜನಸಂಖ್ಯೆ, ಅವರ ಆದಾಯ, ಖರ್ಚು ಮತ್ತು ಸಾಲ-ಇವುಗಳ ಖಚಿತ ಅಂಕಿಗಳನ್ನೊಳಗೊಂಡಿರಬೇಕು. ಮತ್ತು ಅಲ್ಲಿಯ ವ್ಯವಸಾಯಕ್ರಮ, ಕೂಲಿಯ ಸಮಸ್ಯೆ, ವ್ಯಾಪಾರದ ಅನುಕೂಲ್ಯ, ಇವುಗಳ ವಿಷಯದಲ್ಲಿ ನಿಜಸ್ಥಿತಿಯನ್ನು ತೋರಿಸತಕ್ಕದಾಗಿರಬೇಕು. ಇವುಗಳಲ್ಲದೆ ಅಲ್ಲಿಯ ಕೈಗಾರಿಕಾಕ್ರಮ, ಸಾಲದ ವ್ಯವಸ್ಥೆ, ಜಮೀನಿನ ಹೆಂಚಿಕೆ, ಮತ್ತು ಸಾಮಾನ್ಯ ಜೀವನದ ಸ್ಥಿತಿ-ಇವುಗಳ ವಿಷಯಗಳನ್ನೆಲ್ಲಾ ಸಂಗ್ರಹಿಸಿರಬೇಕು.

ಮೇಲ್ಕಂಡ ವಿಷಯಗಳನ್ನೆಲ್ಲಾ ತನಿಖೆಮಾಡಬೇಕಾದರೆ, ವಿಚಾರಣಾಕರ್ತನಿಗೆ ಎರಡು ಮಾರ್ಗಗಳಿವೆ. ಒಂದು ಅಂಕಿಗಳನ್ನು ಶೇಖರಿಸುವ ಪಟ್ಟಿಯನ್ನು (Schedule) ಅನುಸರಿಸುವುದು. ಇನ್ನೊಂದು ಪ್ರಮಾಣಬದ್ಧವಾದ ಪ್ರಶ್ನೆಮಾಲಿಕೆಯನ್ನು ಅನುಸರಿಸುವುದು. ಸರಿಯಾದ ವಿಚಾರಣೆಯನ್ನು, ಅಂಕಿಗಳ ಪಟ್ಟಿಯಿಂದಲೇ ಆಗಲಿ ಅಥವಾ ಪ್ರಶ್ನೆಮಾಲಿಕೆಯೊಂದರಿಂದಲೇ ಆಗಲಿ, ನಡೆಸುವುದು ಅಷ್ಟು ಸಮರ್ಪಕವಲ್ಲ. ಪ್ರಶ್ನೆಮಾಲಿಕೆಯಿಂದ ಆದಾಯ, ನಷ್ಟ, ಸಾಲದ ಮಿತಿ, ಖರ್ಚು-ಇವುಗಳನ್ನು ಖಚಿತವಾಗಿ ಕಂಡುಹಿಡಿಯುವುದಕ್ಕಾಗುವುದಿಲ್ಲ. ಅದೇ ರೀತಿಯಲ್ಲಿ ಅಂಕಿಗಳ ಪಟ್ಟಿಯಿಂದ ಅಲ್ಲಿಯ ವ್ಯವಸಾಯಕ್ರಮ, ಸಾಲಗಳನ್ನು ವ್ಯವಸ್ಥೆ ಮಾಡುವ ಸಂಸ್ಥೆಗಳ ಸಮಸ್ಯೆ; ಇನ್ನೂ ಮುಂತಾದ ಇತರ ವಿಷಯಗಳನ್ನು ಸಂಗ್ರಹಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಸರಿಯಾದ ಆರ್ಥಿಕ ವಿಚಾರಣೆಗೆ, ಈ ಎರಡು ಕ್ರಮಗಳನ್ನೂ ಅನುಸರಿಸಲೇಬೇಕಾಗುವುದು.

ಇಂತಹ ವಿಚಾರಣಾ ವರದಿಯು ವ್ಯಾವಹಾರಿಕವಾಗಿ ಉಪಯೋಗವುಳ್ಳದ್ದಾಗಿ ಇರಬೇಕು. ಈ ವರದಿಯಲ್ಲಿ ನಮೂದಿಸಿರುವ ವಸ್ತುಸ್ಥಿತಿಯ ಆಧಾರದ ಮೇಲೆ, ಮುಂದಿನ ಪರಿಹಾರೋಪಾಯಗಳನ್ನು ಸೂಚಿಸತಕ್ಕುದಾಗಿರಬೇಕು. ಈ ಸೂಚನೆಗಳು ಅಭಿವೃದ್ಧಿ ಕಾರ್ಯಗಳನ್ನು ಆಚರಣೆಗೆ ತರುವ ಜವಾಬ್ದಾರರಿಗೆ ಸುಲಭವಾಗಿಯೂ, ಯೋಗ್ಯವಾಗಿಯೂ ಇರಬೇಕು. ಇಂತಹ ಉತ್ತಮ ವಿಚಾರಣೆಗಳು ಸಾಮಾನ್ಯವಾಗಿ ವಿದ್ಯಾವಂತರ ಐಚ್ಛಿಕ ಸಮ್ಮತಿಯನ್ನೂ ಪ್ರಜಾಭಿಪ್ರಾಯವೇ ಪ್ರಾಧಾನ್ಯವಾಗಿ ಉಳ್ಳ ಪ್ರಭುತ್ವಗಳ ಉತ್ತೇಜನವನ್ನೂ ಆಶ್ರಯಿಸಿರುತ್ತವೆ. ಆದುದರಿಂದ ಉತ್ಸಾಹಪರರಾದ, ವಿದ್ಯಾವಂತರಾದ ಯುವಕರಿಗೆ ಇಂತಹ ಆರ್ಥಿಕ ವಿಚಾರಣಾ ಕಾರ್ಯಗಳನ್ನು ಕೈಗೊಳ್ಳುವಂತೆ ಒಂದು ಕಡೆ ವಿದ್ಯಾಸಂಸ್ಥೆಯವರ ಉತ್ತೇಜನವೂ, ಇನ್ನೊಂದು ಕಡೆ ಪ್ರಭುತ್ವದವರ ಸಹಾಯವೂ ಸಿಕ್ಕುವಂತಾಗಬೇಕು.

— ಡಿ. ಕೃಷ್ಣ ಐಯಂಗಾರ್.

# ವೈರಾಗ್ಯದ ಮಹಿಮೆ

**ಅಥವಾ**

# "ಅಟ್ಟಿದರೆ ಓಡುತ್ತದೆ; ಬಿಟ್ಟರೆ ಹಿಂಬಾಲಿಸುತ್ತದೆ".

---

ಹರಪುರ ಗ್ರಾಮದ ರಾಯಚರಣನಿಗೆ ಸುಖಪಡಬೇಕೆಂಬ ಆಸೆ ಯಥೇಚ್ಛವಾಗಿದ್ದರೂ ಅದಕ್ಕೆ ತಕ್ಕ ಉಪಪತ್ತಿಯ ಅನುಕೂಲವಿರಲಿಲ್ಲ. ಹುಟ್ಟು ಸೋಮಾರಿಯಾಗಿದ್ದ ಆತನಿಗೆ ಕೆಲಸ ದಲ್ಲಿ ಸಂಪೂರ್ಣ ಅನಾಸಕ್ತಿ ಯೋಗವಿದ್ದುದರಿಂದ ಅವನಿಗೂ ಸಂಪತ್ತಿಗೂ ಎಣ್ಣೆ ಸೀಗೆ ನೆಂಟಸ್ತಿಗೆ ಯಿತ್ತು. ತಂದೆತಾಯಿಗಳು ಚಿಕ್ಕಂದಿನಲ್ಲಿಯೇ ವೈಕುಂಠವಾಸಿಗಳೋ ಕೈಲಾಸವಾಸಿಗಳೋ ಆಗಿದ್ದುದ ರಿಂದ ಆ ಎರಡು ದಿವ್ಯ ಸ್ಥಾನಗಳ ಸುಖವೂ ಅವನಿಗೆ ಇಲ್ಲಿ, ಈ ಪಾರ್ಥಿವ ಪ್ರಪಂಚದಲ್ಲಿ, ವಜಾ ಆಗಿ ಹೋಗಿತ್ತು. ದೂರದ ಬಂಧುಗಳ ಮನೆಗಳಲ್ಲಿ (ಹತ್ತಿರದ ನಂಟರು ಸೇರಿಸುತ್ತಿರಲಿಲ್ಲ) ಅವರಿವರ ಕನಿಕರದ ಕೂಳುಂಡು ದೊಡ್ಡವನಾದನು. ದೊಡ್ಡವನಾದ ಮೇಲೆಯೂ ಬಿಟ್ಟಿ ಕೂಳು ತಿನ್ನುವ ವಿಚಾರದಲ್ಲಿ ಅವನ ಅಭಿಪ್ರಾಯ ಭಿನ್ನವಾಗಲಿಲ್ಲ. ಆದರೆ ಕೂಳಿಕ್ಕುತ್ತಿದ್ದವರ ಅಭಿಪ್ರಾಯ ಭಿನ್ನವಾಯಿತು.

ಹುಡುಗನಾಗಿದ್ದಾಗ, ಏನೋ ಪಾಪ ತಂದೆ ತಾಯಿಗಳಿಲ್ಲ ಎಂದು ಅನ್ನ ಹಾಕಿದ್ದಕ್ಕೆ ದೊಡ್ಡವನಾದ ಮೇಲೆಯೂ ಸ್ವತಃ ದುಡಿದು ತಿನ್ನದೆ ಇನ್ನೊಬ್ಬರ ಕೈ ಹಾರೈಸಿದರೆ ಯಾರಿಗೆ ತಾನೇ ಸಹಿಸಲಾಗುತ್ತದೆ. ರಾಯಚರಣನಿಗೆ ಒಂದೊಂದು ಮನೆಯಿಂದಲೂ ಅರ್ಧಚಂದ್ರಪ್ರಯೋಗ ವಾಯಿತು. ಆವನಿಗೆ ರೇಗಿತು: ಬಹು ಕಾಲದಿಂದ ನಡೆದುಕೊಂಡು ಬಂದಿದ್ದ ಮಾಮೂಲು ಹಕ್ಕನ್ನು ತಿರಸ್ಕರಿಸುತ್ತಿದ್ದಾರಲ್ಲಾ ಎಂದು.

ಬಿಟ್ಟಿ ಕೂಳು ಸಿಕ್ಕುವುದು ಬಹು ಪ್ರಯಾಸಕರವಾಗಿ ಒಂದು ದಿನ ಉಪವಾಸವನ್ನು ಅನುಭವಿಸಿದ ಮೇಲೆಯೇ ರಾಯಚರಣನಿಗೆ ತಾನೂ ನಾಲ್ಕು ಕಾಸು ಸಂಪಾದನೆ ಮಾಡಿ ಇತರರಿಗೆ ಸಮನಾಗಿ ಸುಖಪಡುತ್ತ ಅವರನ್ನು ಮೂದಲಿಸಬೇಕೆಂಬ ಮನಸ್ಸು ಹುಟ್ಟಿದ್ದು. ಆದರೆ ಆದೂ ಸಾರ್ಥಕವಾಗಲಿಲ್ಲ. ಸೋಮಾರಿತನವು ರಕ್ತಗತವಾಗಿದ್ದ ಆತನಿಗೆ ಕೆಲಸ ಮಾಡುವುದೆಂದರೆ ಇತರರ ಮೂಗಿನ ಸಿಂಬಳ ತೆಗೆಯುವುದಕ್ಕಿಂತಲೂ ಹೆಚ್ಚು ಜುಗುಪ್ಸೆಯಾಗುತ್ತಿತ್ತು. ಸೋಮಾರಿತನವೇ ವೃತ್ತಿಯಾಗುವಂತಹ ಒಂದು ಜೀವನ ಮಾರ್ಗವಿದ್ದಿದ್ದರೆ ನಾನು ಕೋಟ್ಯಾಧೀಶ್ವರನಾಗುತ್ತಿದ್ದೆನಲ್ಲಾ ಎಂದು ರಾಯಚರಣನಿಗೆ ಆಗಾಗ ಮನಸ್ಸು ಪುಲಕಿತವಾಗುತ್ತಿತ್ತು.

ಈ ನಡುವೆ ಅವನಿಗೆ ಮತ್ತೊಂದು ಶನಿಯೂ ಬೆನ್ನುಹತ್ತಿತು. ವಸಂತ ಋತುವಿನಲ್ಲಿ ಒಂದು ಹೊತ್ತಾರೆ ರಾಯಚರಣನು ಹಳ್ಳಿಯ ತೋಟದಲ್ಲಿ ತಂಬಾಕು ಸೇದುತ್ತಾ ಹೊಗೆ ಬಿಡುತ್ತಾ ಹೊಗೆಯ ಸೋಮಾರಿತನವನ್ನು ತನ್ನ ಸೋಮಾರಿತನದಿಂದ ಅಣಕಿಸುತ್ತಾ ಅರೆಗಣ್ಣಾಗಿ ಕುಳಿತಿದ್ದಾಗ—ಏನಾಗಿಹೋಯಿತು!

ಪಕ್ಕದಲ್ಲಿ ಜೆಂದುಟಿಬಣ್ಣದ ಕೆಂದಳಿರಿನಿಂದ ಸುಂದರವಾಗಿದ್ದ ಮಾಮರದಲ್ಲಿ ಕೋಗಿಲೆ ಕೂಗಿತು! ರಾಯಚರಣನು ಒಂದು ಕಿರುಬಂಡೆಯ ಮೇಲೆ ಕೂತಿದ್ದನು. ಆ ಜಡ ಶಿಲಾಖಂಡವೂ ಚೈತನ್ಯದ ಪಿಂಡದಂತಾಗಿ ರಾಯಚರಣನ ಮೈಯಲ್ಲಿ ಮಿಂಚು ಸಂಚಾರವಾಯಿತು. ಸಿಡಿಮದ್ದಿಗೆ ಕಿಡಿ ಬಿದ್ದಂತೆ ಇವನು ಜಡತನವನ್ನಾಚೆಗೆ ತಳ್ಳಿ ಕಣ್ಣರಳಿ ನೆಟ್ಟಗೆ ನಿಮಿರಿ ಕುಳಿತನು. ಮತ್ತೆ,

ಚೂತ ವೃಕ್ಷದ ಕಿಸಲಯರಾಶಿಯಲ್ಲಿ ಆ ದೇವದೂತ ಕಲಕಂಠವು ಮೆದುಳಿಗೆ ಕಳ್ಳು ಹೊಯ್ಯು ವಂತೆ ಹೃದಯವನ್ನು ಮಥಿಸಿ ಕೇಳಿಸಿತು. ರಾಯಚರಣನು ನೋಡುತ್ತಾನೆ: ವಸಂತ ಮಾಸದ ಮನೋಹರತೆ ಸಮಸ್ತ ಲೋಕದ ನೆತ್ತಿಗೂ ಪಿತ್ತದಂತೇರಿಬಿಟ್ಟಿದೆ! ತಳಿರೇನು, ಚಿಗುರೇನು; ನನೆಯೇನು, ಕೊನೆಯೇನು; ಎಲರೇನು, ಮಲರೇನು! ಹರಪುರ ಗ್ರಾಮವೆ ಅಮರಾವತಿಯಾಗಿದೆ! ಆ ತೋಟವೆ ನಂದನವಾಗಿದೆ! ಸ್ವರ್ಗವಾಗುವುದಕ್ಕೆ ಅಪ್ಸರಿಯೊಬ್ಬಳೆ ಬಾಕಿ!

ರಾಯಚರಣನು ಬಾಯ್ದೆರೆದು ಕಣ್ಣರಳಿ ಕಯ್ಗಳೆರಡನ್ನೂ ಆಶ್ಚರ್ಯ ಮುದ್ರೆಯಿಂದ ಮೇಲೆತ್ತಿ ಮೈಯನ್ನು ನಸುಬಾಗಿ ಭಾವಸಮಾಧಿಸ್ಥನಾದಂತೆ ಕಡೆದು ಕಂಡರಿಸಿದ ಗೊಂಬೆಯಾಗಿ ನೋಡುತ್ತಿದ್ದನು. ಆದೋ ದೂರದಲ್ಲಿ ಅಪ್ಸರಿಯೂ ಬರುತ್ತಿದ್ದಾಳೆ! ಎಂತಹ ಸ್ಫುರದ್ರೂಪ: ಚಂದ್ರಮುಖಿ! ಕಮಲನಯನೆ! ಫಣಿವೇಣಿ! ಲತಾಂಗಿ! ಕುಂಭ...! ಸು ..ಣಿ! ನಿ....ನಿ! ನೋಡುತ್ತಿದ್ದ ಹಾಗೆ ರಾಯಚರಣನ ಹೃದಯದಲ್ಲಿ ಮನ್ಮಥ ಸಂಚಾರವಾಯಿತು! ಇನ್ನೇನು? ಹರಪುರ ಗ್ರಾಮವೆ ಸ್ವರ್ಗವಾಗುತ್ತದೆ. ಆ ತೋಟವೆ ನಂದನವಾಗುತ್ತದೆ. ರಾಯಚರಣನೆ ಇಂದ್ರ ನಾಗುತ್ತಾನೆ. ರಂಭೆಯೋ ಊರ್ವಶಿಯೋ ಮೇನಕೆಯೋ ತಿಲೋತ್ತಮೆಯೋ ಅಥವಾ ಅವರೆಲ್ಲರನ್ನು ಬೆಸೆದು ಮಾಡಿದ ಶೃಂಗಾರಸುಂದರಿಯೋ ಆದೋ ದೂರದಲ್ಲಿ ಬರುತ್ತಿದ್ದಾಳೆ!

ಶೃಂಗಾರಸುಂದರಿ ಹತ್ತಿರ ಬಂದಳು: ಆದರೆ, ಅಯ್ಯೋ ಆ ಗ್ರಾಮದ ಬೆಸ್ತರವನ ಅಜ್ಜಿ; ಮೀನು ಬುಟ್ಟಿ ಹೊತ್ತುಕೊಂಡು ಹೋಗುತ್ತಿದ್ದಾಳೆ! ಹಲ್ಲಿಲ್ಲ; ನರೆ ಕೂದಲು, ಕುಳಿಗೆನ್ನೆ; ದುರ್ಗಂಧ ಸೀರೆ; ..ಮತ್ತು ಬಳ್ಳಿಯಂತೆ ತೆಳ್ಳಗಿದ್ದರೂ ಲತಾಂಗಿಯಲ್ಲ. ಆ ಹೊಸ ಆವಿಷ್ಕಾರದ ಆಘಾತ ಎಷ್ಟರ ಮಟ್ಟಗಿತ್ತು ಎಂದರೆ ರಾಯಚರಣನ ನೆತ್ತಿಗೇರಿದ್ದ ತಂಬಾಕಿನ ಅಮಲೂ ಇಳಿದು ಹೋಯಿತು.

ಅಜ್ಜಿಯೇನೋ ಸುರಕ್ಷಿತವಾಗಿ ಹೊರಟುಹೋದಳು. ಆದರೆ ರಾಯಚರಣನ ಎದೆಯಲ್ಲಿ ಮೂಡಿದ ಮನ್ಮಥನು ಚಿರಸ್ಥಾಯಿಯಾಗಿಬಿಟ್ಟನು.

ದರಿದ್ರನಿಗೆ ಪ್ರಣಯಭಾವವೂ ಬರಬರುತ್ತಾ ಹೆಚ್ಚಾಯಿತು. ಚೆಲುವೆಯೊಬ್ಬಳನ್ನು ಒಲುಮೆಯಿಂದ ಗೆಲಿದು ಮದುವೆಯಾಗಬೇಕೆಂದು ಮನಸ್ಸು ಮಾಡಿದನು. ಆದರೆ, ಗ್ರಹಚಾರ! ರತಿ ದಾರಿದ್ರ್ಯಪ್ರಿಯಳಲ್ಲ. ಜೊತೆಗೆ, ರಾಯಚರಣನು ಕನ್ನಡಿಯ ಮುಂದೆ ಸ್ಫುರದ್ರೂಪಿ ಯಾಗಿದ್ದರೂ ಹೆರರ ಕಣ್ಣಿಗೆ ಹಾಗೆ ಕಾಣುತ್ತಿರಲಿಲ್ಲ.

ಮೈಕಾಂತಿ ಕೆಂಡವಾಗಿದ್ದರೂ ನೀರಿನ ಸಂಪರ್ಕವಾದಂತಿತ್ತು. ಮೂಗು ಸಂಪಗೆಯಾಗಿದ್ದರೂ ಹುಳುಹಿಡಿದು ಸಿಂಡಾಗಿತ್ತು. ಕಣ್ಣುಗಳೂ ಮುರುಕು ದೇಗುಲದ ಗೋಡೆಯ ಬಿರುಕುಗಳಂತಿದ್ದುವು. ಮೈಗಂಪು ಬಾಯ್ಗಂಪು ಕಯ್ಗಂಪುಗಳಿಗೆ ಒಂದಿನಿತೂ ಕೊರತೆಯಿರಲಿಲ್ಲ.

ಹೀಗಿದ್ದರೂ ಆಶಾವಾದಿಯಾಗಿದ್ದ ರಾಯಚರಣನು ನಿರುತ್ಸಾಹಿಯಾಗದೆ ಆ ಹಳ್ಳಿಯ ಸಾಹುಕಾರನಾಗಿದ್ದ ಕೇನ ರಾಮಗೋಸ್ವಾಮಿಯ ಬಳಿಗೆ ಹೋಗಿ ಮದುವೆಯ ಕರ್ಚಿಗೆ ಹಣವನ್ನು ಸಾಲ ಕೇಳಿದನು. ನಾಲ್ಕನೆಯ ಸಾರಿ ಕಿರುಹುಡುಗಿಯನ್ನು ಮದುವೆಯಾಗಿದ್ದ ಆ ಮುದಿ ಗೋಸ್ವಾಮಿ ರಾಯಚರಣನಿಗೆ ಸ್ವಪಂಚಭೂತ ನಶ್ವರತೆಯನ್ನೂ ಕಾಮಿನೀ ಕಾಂಚನ ತ್ಯಾಗವನ್ನೂ ಕುರಿತು ಒಂದು ಗಂಟೆ ಉಪದೇಶ ಮಾಡಿ ಊಟದ ಹೊತ್ತಾಗಿದ್ದರೂ ನಮಸ್ಕಾರ ಹೇಳಿ ಕಳುಹಿ ಸಿದ್ದನು.

ಹೊನ್ನು ಹೆಣ್ಣುಗಳ ಸಂವಾದನೆಯಲ್ಲಿ ಸಂಪೂರ್ಣವಾಗಿ ಸೋತುಹೋದ ಮೇಲೆ ರಾಯ-ಚರಣನಿಗೆ ಕೇನ ರಾಮಗೋಸ್ವಾಮಿಯ ಕಾಮಿನೀ ಕಾಂಚನ ತ್ಯಾಗದ ಉಪದೇಶವು ಜೆನ್ನಾಗಿ

ಮನಸ್ಸಿಗೆ ಹತ್ತಿ ಅವನಲ್ಲಿ ಪೂಜ್ಯಬುದ್ಧಿಯುಂಟಾಯಿತು. ಅದರಲ್ಲಿಯೂ ಗೋಸ್ವಾಮಿಯ ಕೆಲವು ಮಾತುಗಳಂತೂ ಮಹಾರ್ಥಗರ್ಭಿತವಾಗಿ ತೋರಿದುವು:

"ಐಹಿಕ ಸುಖಗಳನ್ನು ಹುಡುಕಿಕೊಂಡು ಹೋಗುವುದು ಮರುಭೂಮಿಯಲ್ಲಿ ಮರುಮರೀಚಿಕೆಯ ನೀರನ್ನು ಹುಡುಕುವಂತೆ ಅವಿವೇಕವಾದುದು. ಅದರಲ್ಲಿಯೂ, ಸುಖ ಸಂಪತ್ತುಗಳು ನಾವು ಹಿಡಿಯಹೋದಷ್ಟೂ ಸಿಕ್ಕದೆ ದೂರಹೋಗುತ್ತವೆ. ದೃಷ್ಟಾಂತವಾಗಿ: ನಮ್ಮ ನೆರಳನ್ನು ನಾವೇ ಹಿಡಿಯಲಿಕ್ಕೆ ಅಟ್ಟಿಕೊಂಡು ಹೋದರೆ ಅದು ಎಂದಾದರೂ ಕೈವಶವಾಗುತ್ತದೆಯೆ? ನಾವು ಅಟ್ಟಿಸಿಕೊಂಡು ಹೋದಷ್ಟೂ ಅದು ಮುಂದೆ ಮುಂದೆ ತಪ್ಪಿಸಿಕೊಂಡೇ ಹೋಗುತ್ತದೆ. ಎಂದಿಗೆ ನಾವು ಅದನ್ನು ಅಟ್ಟುವುದನ್ನು ಬಿಟ್ಟು ಹಿಂತಿರುಗಿ ಪರಾಙ್ಮುಖರಾಗುತ್ತೇವೆಯೋ ಆಗ ಆ ನೆರಳು ನಮ್ಮ ಹಿಂದೆ ನಾಯಿಯಂತೆ ಓಡಿಬರುತ್ತದೆ. ಸುಖವೂ ಆ ನೆರಳಿನಂತೆ: ಅಟ್ಟಿದರೆ ಓಡುತ್ತದೆ; ತಿರಸ್ಕರಿಸಿ ಹಿಂತಿರುಗಿದರೆ ಹಿಂಬಾಲಿಸುತ್ತದೆ. ಆದ್ದರಿಂದ ನಿಜವಾದ ಸುಖಪ್ರಾಪ್ತಿಯಾಗಬೇಕಾದರೆ ಇಂದ್ರಿಯಸುಖಗಳಿಂದ ವಿಮುಖರಾಗುವುದು, ಎಂದರೆ ಹಿಂತಿರುಗುವುದು, ಅಂದರೆ ವೈರಾಗ್ಯ ಬಹಳ ಆವಶ್ಯಕ. ವೈರಾಗ್ಯದ ಮಹಿಮೆ ಅದನ್ನು ಪ್ರಯೋಗಿಸಿದವರಿಗೇ ಗೊತ್ತು."

ಎಂದು ಮೊದಲಾಗಿ ಗೋಸ್ವಾಮಿ ಹೇಳಿದ್ದನು.

ಬಹುಶಃ ಗೋಸ್ವಾಮಿ ನಿರ್ವಂಚನೆಯಿಂದ ಹೃತ್ಪೂರ್ವಕವಾಗಿ ಉಪದೇಶ ಮಾಡಿದ್ದರೂ ಮಾಡಿದ್ದಿರಬಹುದು. ಹಣ್ಣು ಹಣ್ಣು ಮುದುಕನಾಗಿದ್ದ ಅವನ ಭಾಗಕ್ಕೆ ಕಿರುಹರೆಯದ ನಾಲ್ಕನೆಯ ಹೆಂಡತಿ ಮರುಮರೀಚಿಕೆಯೇ ಆಗಿದ್ದಿರಬೇಕು. ಅಂತೂ ಆದು ಹೇಗೇ ಇರಲಿ, ರಾಯಚರಣನಿಗೇನೋ ವೈರಾಗ್ಯದಲ್ಲಿ ಅತ್ಯಂತ ವ್ಯಾಮೋಹ ಹುಟ್ಟಿತು. ಅದರಲ್ಲಿಯೂ "ಅಟ್ಟಿದರೆ ಓಡುತ್ತದೆ; ಬಿಟ್ಟರೆ ಹಿಂಬಾಲಿಸುತ್ತದೆ." ಎಂಬ ಲಕ್ಷ್ಮಿಯ ಲಕ್ಷಣಗಳನ್ನು ಕುರಿತಿದ್ದ ಮಾತುಗಳು ಬಹುಮಟ್ಟಿಗೆ ಮನಸ್ಸಿಗೆ ಬಂದು ರಾಯಚರಣನು ಬೈರಾಗಿಯಾದನು.

ಅವನಾದುದು ವೈಷ್ಣವ ವೈರಾಗಿ. ಧರ್ಮ ಸಾಧನೆಗಳಲ್ಲಿ ವೈಷ್ಣವ ವೈರಾಗ್ಯಕ್ಕಿಂತಲೂ ಸೊಗಸಾದುದು ಮತ್ತೊಂದಿಲ್ಲ. ಅದರಲ್ಲಿ ದೇಹದಂಡನೆಯಿಲ್ಲ; ಅನಾವಶ್ಯಕವಾದ ಆತ್ಮದಂಡನೆಯೂ ಇಲ್ಲ! ಬೃಂದಾವನದ ಶ್ರೀಕೃಷ್ಣನು ಇಷ್ಟದೇವತೆಯಾದುದರಿಂದ ರಾಸಲೀಲೆಗೂ ಬೇಕಾದಷ್ಟು ಅವಕಾಶವಿರುತ್ತದೆ. ಆ ಸಾಧಕರಿಗೆ ಬೇಕಾದುದು ಪ್ರಪತ್ತಿ. ಎಂದರೆ ಸಂಪೂರ್ಣವಾಗಿ ದೇವರಿಗೆ ಶರಣಾಗುವುದು. ಪ್ರಪತ್ತಿಯೊಂದಿದ್ದರೆ ಏನೇನು ಮಾಡಿದರೂ ಎಲ್ಲಕ್ಕೂ ಕ್ಷಮೆ. ನಾವು ಭಗವಂತನಿಗೆ ಕರುಣಾಸಾಗರ ಎಂದು ಬಿರುದು ದಯಪಾಲಿಸುವುದೇನು ಪುಕ್ಕಟೆಯಲ್ಲ!

ಹಿಂಪೆ ರಾಯಚರಣನಾಗಿದ್ದ ಶ್ರೀಮತ್ ಭಗವಾನ್‌ದಾಸ ಬಾಬಾಜಿಗೆ ಕೆಲದಿನಗಳಲ್ಲಿಯೇ ಗೋಸ್ವಾಮಿಯ ಮಾತಿನ ಅರ್ಥ ಅನುಭವವೇದ್ಯವಾಗತೊಡಗಿತು. ಅಟ್ಟಿದಷ್ಟೂ ಓಡುತ್ತಿದ್ದ ಲಕ್ಷ್ಮಿ ಬಿಟ್ಟೊಡನೆ ಹತ್ತಿರ ಹತ್ತಿರ ಬರತೊಡಗಿದಳು. ಅಷ್ಟು ಸ್ವಲ್ಪ ಕಾಲದ ಸಾಧನೆಯಿಂದ ಅಂತಹ ಸಿದ್ಧಿ ಲಭಿಸುತ್ತದೆ ಎಂದು ರಾಯಚರಣನು ಕನಸಿನಲ್ಲಿಯೂ ಭಾವಿಸಿರಲಿಲ್ಲ. ವೈರಾಗ್ಯದ ಮಹಿಮೆಯನ್ನು ಕಂಡು ಅವನಿಗೆ ಹಿಡಿಸಲಾರದಷ್ಟು ಆನಂದವಾಯಿತು. ಎಲ್ಲವನ್ನೂ ಬಿಟ್ಟು ತನ್ನನ್ನು ಆಶ್ರಯಿಸಿದವರಿಗೆ ಎಲ್ಲವನ್ನೂ ತನ್ನನ್ನೂ ಕೊಡುತ್ತೇನೆ ಎಂದು ಸಾರಿದ ಆ ಶ್ರೀಕೃಷ್ಣ ಪರಮಾತ್ಮನ ದಿವ್ಯವಾಣಿ ಎಂದಾದರೂ ಹುಸಿಯಾಗುತ್ತದೆಯೇ?

ರಾಯಚರಣನಿಗೆ ವೈರಾಗ್ಯ ಹಿಡಿಯಿತು ಎಂದು ಕೇಳಿದೊಡನೆ ಹಳ್ಳಿಯಲ್ಲಿ ಆನಂದದ ಆಶ್ಚರ್ಯದ ಗೌರವದ ಕೋಲಾಹಲವೆದ್ದಿತು. ತಮಗೆ ಇಷ್ಟವಿಲ್ಲದಿದ್ದರೂ ಅವನಿಗೆ ಕೂಳು ಹಾಕಲೇಬೇಕಾಗಿದ್ದವರಿಗೆ ಸದ್ಯಕ್ಕೆ ಪೀಡೆ ತೊಲಗಿತಲ್ಲಾ ಎಂದು ಸಂತೋಷವಾಗಿ ಭಗವಾನ್ ದಾಸ ಬಾಬಾಜಿಯನ್ನು ಹೊಗಳಿದರು. ವೈರಾಗಿಗಳಾಗಬೇಕು ಎಂಬ ತೀವ್ರವಾದ ಆಕಾಂಕ್ಷೆ

ಯಲ್ಲಿಯೇ ಜೀವನವನ್ನೆಲ್ಲ ಕಳೆದು ತುದಿ ಮೆಟ್ಟಲಿಗೆ ಬಂದಿದ್ದವರು ತರುಣನ ವೈರಾಗ್ಯಕ್ಕೆ ಮೂಗಿ ಬೆರಳಾಗಿ ಆಶ್ಚರ್ಯಪಟ್ಟರು. ಕೆಲವು ವಿಧವೆಯರು "ಆ ಪುಣ್ಯ ಎಲ್ಲರಿಗೂ ಬರುತ್ತದೆಯೇ! ಎಲ್ಲವೂ ಪೂರ್ವ ಜನ್ಮದ ಸಂಸ್ಕಾರದ ಮಹಿಮೆ! ದೇವರ ಕೃಪೆ! ಹುಡುಗನಿಗೆ ಮುಮುಕ್ಷುತ್ವ ಬರುವುದೆಂದರೇನು ಸಾಮಾನ್ಯವಾಯಿತೇ? ಹಿಂದಿನ ಕಾಲದಲ್ಲಿ ಧ್ರುವ- ಪುಣ್ಯಾತ್ಮ ಒಬ್ಬ ಹಾಗೆ ಮಾಡಿದ್ದನಂತೆ ಇಂದಿನ ಕಾಲದಲ್ಲಿ ಅಂಥಾ ಪುಣ್ಯಾತ್ಮ ನಮ್ಮ ಹಳ್ಳಿಯಲ್ಲಿಯೆ ಹುಟ್ಟುತ್ತಾನೆ ಎಂದು ಯಾರು ಕಂಡಿದ್ದರು!" ಎಂದು ಕಣ್ಣೊರಸಿ ಮೂಗುಜ್ಜಿಕೊಂಡು ಗೌರವಪ್ರದರ್ಶನ ಮಾಡಿದರು.

ಹಿಂದೆ ರಾಯಚರಣನನ್ನು ತಿರಸ್ಕರಿಸುತ್ತಿದ್ದವರೆಲ್ಲರೂ ಶ್ರೀಮತ್ ಭಗವಾನ್‌ದಾಸ ಬಾಬಾಜಿ ಮೊಳಕಾಲಿನಿಂದ ತುಸು ಕೆಳಗಿನ ವರೆಗೆ ಮಾತ್ರ ಬಿಳಿಪಂಚೆ ಸುತ್ತಿಕೊಂಡು, ಬಿಳಿಯ ನಿಲುವಂಗಿ ಹಾಕಿಕೊಂಡು ತುಲಸೀಮಣಿಮಾಲೆಯಿಂದಲೂ ವಿವಿಧ ಮುದ್ರೆಗಳಿಂದಲೂ ಶೋಭಿತನಾಗಿ, ಹರಿ ನಾಮದ ನಾಮಾವಳಿಯಿಂದ ಚಿರತೆಯ ಚರ್ಮದಂತೆ ಕಾಣುತಿದ್ದ ವಸ್ತ್ರವನ್ನು ಹೊದೆದು, ಮುರದ ಮೆಟ್ಟುಗಳನ್ನು ಮೆಟ್ಟಿ, ಸುವುಷ್ಣವಾಗಿ ಬೆಳೆದಿದ್ದ ಜುಟ್ಟನ್ನು ಕೆದರಿಬಿಟ್ಟು, ಶಂಖವೂದುತ್ತಾ ಜಾಗಟೆ ಬಾರಿಸುತ್ತಾ ಹರಿನಾಮ ಘೋಷಿಸುತ್ತಾ ಬೀದಿಯಲ್ಲಿ ಭಿಕ್ಷಾಟನೆಗೆ ಬಂದನೆಂದರೆ ಕೂತವರೆದ್ದು ಧನಧಾನ್ಯಗಳನ್ನು ಭಕ್ತಿ ಗೌರವಗಳಿಂದ ನಿವೇದಿಸುತ್ತಿದ್ದರು.

ಸ್ವಲ್ಪ ಕಾಲದಲ್ಲಿಯೆ ಕಾಮಿನೀಕಾಂಚನ ತ್ಯಾಗ ಮಾಡಿದ ಬಾಬಾಜಿಗೆ ಎರಡನೆಯದರ ಸಿದ್ಧಿಯೇನೋ ಕೈಗೂಡಿತು. ಆದರೆ ಮನಸ್ಸು ಮೊದಲನೆಯದರ ಸಿದ್ಧಿಗೂ ಹಾತೊರೆಯತೊಡಗಿತು, ಅದಕ್ಕಾಗಿ ಬಾಬಾಜಿಯ ಸವಾರಿ ಯಾತ್ರೆ ಹೊರಟಿತು; ಊರಿನಲ್ಲಿ ಅನುಕೂಲವಿರಲಿಲ್ಲವಾಗಿ, ಅಥವಾ ಅನುಕೂಲ ಮಾಡಿಕೊಳ್ಳಲು ಗೊತ್ತಿರಲಿಲ್ಲವಾಗಿ.

ದಾರಿಯಲ್ಲಿ ಅನೇಕ ಪವಿತ್ರ ಕ್ಷೇತ್ರಗಳಲ್ಲಿ ಭಗವಾನ್‌ದಾಸ ಬಾಬಾಜಿ ವೈರಾಗ್ಯದ ಮಹಿಮೆಯನ್ನು ಯಥೇಚ್ಛವಾಗಿ ನೋಡುತ್ತಾ ಅವಕಾಶ ಸಿಕ್ಕಿದಾಗಲೆಲ್ಲಾ ಯಥಾಸಾಮರ್ಥ್ಯವಾಗಿ ಕಿಂಚಿದನುಭವ ಮಾಡುತ್ತಾ ಮುಂಬರಿದನು. ಕೇನ ರಾಮಗೋಸ್ವಾಮಿಯ ಮಾತು ಹೆಜ್ಜೆ ಹೆಜ್ಜೆಗೂ ಅನುಭವಸಿದ್ಧವಾಗುತ್ತಿತ್ತು.

ಯಾತ್ರೆ ಮಾಡುತ್ತಾ ಬಾಬಾಜಿ ಒಂದು ವೈಷ್ಣವ ಗ್ರಾಮಕ್ಕೆ ಬಂದಾಗ ಅಲ್ಲಿಯ ವೈಷ್ಣವ ದೇವಸ್ಥಾನದಲ್ಲಿ ಮೇಳ ನಡೆಯುತ್ತದೆ ಎಂದು ತಿಳಿಯಬಂದಿತು. ಮೇಳ ಎಂದರೆ ವೈಷ್ಣವ ಬೈರಾಗಿಗಳಲ್ಲಿ ಬೇರೆ ಬೇರೆ ಅರ್ಥವಿದೆ. ಅವರಲ್ಲಿ ಬೈರಾಗಿಗಳಂತೆಯೆ ಬೈರಾಗಿಣಿಯರೂ ಇರುತ್ತಾರೆ. ನಾನು ನನ್ನದು ಎಂಬ ಮಮತೆಯನ್ನು ಮೇಲು ಕೀಳು ಹಿರಿದು ಕಿರಿದು ಕೊಳಕು ಚೊಕ್ಕಟ ಮೊದಲಾದ ದ್ವಂದ್ವ ಭಾವಗಳನ್ನು ತ್ಯಾಗ ಮಾಡಿದ ಬೈರಾಗಿ ಮತ್ತು ಬೈರಾಗಿಣಿಯರಿಗೆ ಸಾಮಾನ್ಯ ಸಂಸಾರಿಗಳಂತೆ ವಿವಾಹಬಂಧನವು ನಿಷಿದ್ಧ. ಆದ್ದರಿಂದ ಅವರು ಹೀಗೆ ಮಾಡುತ್ತಾರೆ:

ಮಧುರ ಭಾವಸಾಧನ ಮಾಡಬೇಕೆನ್ನುವ ವೈಷ್ಣವಿಯರು ರಾತ್ರಿಯ ಕಾಲದಲ್ಲಿ ದೇವ ಸ್ಥಾನಕ್ಕೆ ಬಂದು, ಮುಸುಗು ಹಾಕಿಕೊಂಡು, ಹಿಲಾಲಿನ ಬೆಳಕಿನ ಮಬ್ಬಿನಲ್ಲಿ, ಸಾಲಾಗಿ, ಬೆರಳೊಂದನ್ನು ಮಾತ್ರ ಬುರುಕಿಯ ಹೊರಗೆ ತೂರಿಸುತ್ತಾ ಕೂತುಕೊಳ್ಳುತ್ತಾರೆ. ಮಧುರ ಭಾವ ಸಾಧನೆ ಮಾಡಲಿಚ್ಛಿಸುವ ಬೈರಾಗಿಗಳೂ ಅಲ್ಲಿಗೆ ಹೋಗಿ ಕಣ್ಣು ಕಟ್ಟಿಕೊಂಡು ಸಾಲಾಗಿ ನಿಲ್ಲುತ್ತಾರೆ. ಮುಖಂಡನು ಒಬ್ಬೊಬ್ಬ ವೈಷ್ಣವ ಬೈರಾಗಿಯನ್ನೇ ಮುಟ್ಟಿ ಸೂಚನೆ ಕೊಡಲು, ಅವನು ತಡವುತ್ತಾ ಮುಂಬರಿದು ಸಾಲಾಗಿ ಕುಳಿತಿರುವ ವೈಷ್ಣವಿಯರಲ್ಲಿ ಯಾರ (ಬುರುಕಿಯ ಹೊರಗಿರುವ) ಕೈಬೆರಳನ್ನು ಮೊದಲು ಮುಟ್ಟಿ ಹಿಡಿಯುತ್ತಾನೆಯೊ ಅವಳೊಡನೆ, ವಯಸ್ಸಿನ ತಾರತಮ್ಯಗಳನ್ನಾಗಲಿ, ಶರೀರದ ರೋಗಾರೋಗ್ಯಗಳನ್ನಾಗಲಿ ರೂಪಕುರೂಪ ಲಕ್ಷಣ ವಿಲಕ್ಷಣ

ಗಳನ್ನಾಗಲಿ ಲಕ್ಷಿಸದೆ, ಒಂದು ವರ್ಷ ಕಾಲ ಮಧುರ ಭಾವಸಾಧನೆ ಮಾಡಲೇಬೇಕು. ತರುವಾಯ, ಅವನ ಪಾಡು ಅವನಿಗೆ; ಅವಳ ಪಾಳು ಅವಳಿಗೆ. ಇಬ್ಬರೂ ಮತ್ತೆ ಬೇರೆ ಬೇರೆಯ ವೈಷ್ಣವ ಸ್ವಯಂವರಗಳಿಗೆ ಹೋಗುತ್ತಾರೆ.

ಆ ಸಾಧಕರಿಗೆ ಸಂತಾನನಿರೋಧದ ವಿಜ್ಞಾನ ವಿದ್ಯೆ ಚೆನ್ನಾಗಿ ಗೊತ್ತಿರುವುದರಿಂದ, ಮುಕ್ತಾತ್ಮಗಳನ್ನು ಜನ್ಮವೆತ್ತುವಂತೆ ಮಾಡಿ, ಹುಟ್ಟು ಸಾವುಗಳ ಬಲೆಯಲ್ಲಿ ಅವುಗಳನ್ನು ಸಿಕ್ಕಿಸಿ, ಕೋಟಲೆಗೇಳಿಸುವ ಪಾಪವನ್ನು ಅವರು ಎಂದಿಗೂ ಕಟ್ಟಿಕೊಳ್ಳುವುದಿಲ್ಲ.

ನಮ್ಮ ಭಗವಾನ್‌ದಾಸ ಬಾಬಾಜಿಯೂ ರಾತ್ರಿ ಮೇಳಕ್ಕೆ ಹೋದನು. ಕಣ್ಣು ಕಟ್ಟಿಕೊಳ್ಳುವ ಮೊದಲೇ ವೈಷ್ಣವಿಯರ ಸಾಲನ್ನು ಸಮೀಕ್ಷಿಸಿದನು. ಆದರೆ, ಹಾಳಾಯಿತು! ಎಲ್ಲರೂ ಬುರುಕಿಹಾಕಿಕೊಂಡಿದ್ದಾರೆ! ಆದರೂ ಬುರುಕಿಗಳನ್ನೇ ನೋಡಿ ಅಂದಾಜುಮಾಡಿದನು. ಬಹಿರಂಗ ಸೌಂದರ್ಯವು ಅಂತರಂಗಸೌಂದರ್ಯಕ್ಕೆ ಸಾಕ್ಷಿಯಲ್ಲವೇ ? (ಮಧುರ ಭಾವಸಾಧನೆಯಲ್ಲಿ ಸೌಂದರ್ಯ ಮೋಹದ ಕಾಮಕರ್ಮವಿರಬಾರದೆಂಬುದು ಅವನಿಗೆ ,ಆಗ ಮರೆತುಹೋಗಿತ್ತು.!) ಒಬ್ಬಳ ಬುರುಕಿ ಮನಸ್ಸಿಗೆ ಒಪ್ಪಿತು; ಲಕ್ಷಣವಾಗಿತ್ತು. ಬಾಬಾಜಿ ಅವಳಿಗೆ ನೇರವಾಗಿ ನಿಂತು ಕಣ್ಣು ಕಟ್ಟಿಕೊಂಡನು.

ಮುಖಿಂಡನು ತನ್ನ ಪಕ್ಕದಲ್ಲಿದ್ದ ಮುದಿ ಬೈರಾಗಿಯೊಬ್ಬನನ್ನು ಮುಟ್ಟಿ ವೈಷ್ಣವಿಯರ ಬಳಿಗೆ ಬಿಡಲು ನಮ್ಮ ಬಾಬಾಜಿಗೆ ಎದೆ ಪದರಾಡತೊಡಗಿತು. ಅವನೆಲ್ಲಿ ತಾನು ಕಟ್ಟಿಟ್ಟಿದ್ದ ಬುರುಕಿಯನ್ನು ಮುಟ್ಟಿಬಿಡುತ್ತಾನೆಯೊ ಎಂದು. ತಡೆಯಲಾರದೆ ತನ್ನ ಕಣ್ಣಿನ ಬಟ್ಟೆಯನ್ನು ಯಾರೂ ಕಾಣದಂತೆ ತುಸು ಓರೆಮಾಡಿ ನೋಡತೊಡಗಿದನು. ಆ ಮುದಿ ಬಾಬಾಜಿ ದೊಣ್ಣೆಯೂರಿಕೊಂಡು ತೂರಾಡುತ್ತಾ ಹೋಗಿ ಮುಟ್ಟಿದನು. ಭಗವಾನ್‌ದಾಸನಿಗೆ ಜೀವ ಬಂದಂತಾಯಿತು. ಆ ಮುದಿ ಬೈರಾಗಿ ತಾನು ವರಿಸಿದ್ದ ಬುರುಕಿಯ ತಂಟೆಗೆ ಹೋಗಿರಲಿಲ್ಲ!

ನಮ್ಮ ಬಾಬಾಜಿಯ ಸರದಿಯೂ ಬಂತು. ಓರೆಯಾಗಿದ್ದ ಬಟ್ಟೆಯಿಂದ ಒಕ್ಕಣ್ಣು ಕಾಣುತ್ತಿದ್ದರೂ ಹುಟ್ಟುಕುರುಡನಂತೆ ಅತ್ತಿತ್ತ ತೂರಾಡಿ ನಡೆಯುತ್ತಾ ಹೋಗಿ ತಾನು ಒಲಿದಿದ್ದ ಬುರುಕಿಯ ಕಂಡಿಯಲ್ಲಿ ಹೊರಟುಕೊಂಡಿದ್ದ ಬೆರಳನ್ನು ಪ್ರೀತಿ ಸೋರುವಂತೆ ಹಿಡಿದನು. ವೈಷ್ಣವಿ ಬುರುಕಿ ಹಾಕಿಕೊಂಡೇ ಅವನನ್ನು ಹಿಂಬಾಲಿಸಿದಳು.

ಮಧುರ ಭಾವಸಾಧನೆಯ ಸ್ಥಾನದಲ್ಲಿ ಬುರುಕಿಯನ್ನು ತೆಗೆದು ನೋಡಿದಾಗ ಬಾಬಾಜಿಯ ಹೊಂಗನಸು ಹುಡಿಹುಡಿಯಾಗಿ ಹಡಿಗೆತ್ತಿತು. ಹರಪುರದ ಬೆಸ್ತರವನ ಅಜ್ಜಿ ಅಪ್ಸರಿಯಾಗಿ ಕಂಡಳು ಅವನ ಸ್ವಯಂವರದ ವೈಷ್ಣವಿಯ ಮುಂದೆ! ಆದರೇನು ಮಾಡುವುದು ? ಬೈರಾಗಿಗಳ ಧರ್ಮದ ಪ್ರಕಾರ ಒಂದು ವರ್ಷ ಅವಳೊಡನೆ ಸಾಧನೆ ಮಾಡಲೇಬೇಕಷ್ಟೆ!

ತರುಣ ಬಾಬಾಜಿಗೆ ಆ ಮುದಿ ಹೆದ್ದಿನೋಡನೆ ಮಧುರ ಭಾವಸಾಧನೆಮಾಡಲು ಸ್ವಲ್ಪವೂ ಮನಸ್ಸೊಪ್ಪಲಿಲ್ಲ. ಆದರೆ ಆ ಮುದುಕಿಯ ಅಭಿಪ್ರಾಯ ಭಿನ್ನವಾಗಿತ್ತು. ಇನ್ನೇನು ತುಸು ಕಾಲದಲ್ಲಿಯೇ ಸಾಯುವುದು ನಿಶ್ಚಯವಾದ್ದರಿಂದ ಆದಷ್ಟು ಧರ್ಮಸಾಧನೆಮಾಡಿ ಪರಂಧಾಮದಲ್ಲಿ ವಿಷ್ಣುಪಾದಾರವಿಂದವನ್ನು ಸೇರಬೇಕೆಂದು ಆಕೆಯ ಮಹೋಗ್ರವಾದ ಹಂಬಲ್ಲಾಗಿತ್ತು. ಸರಿ. ಸಾಧನೆಗೆ ಬದಲು ಕಾದಾಟ ಮೊದಲಾಯಿತು. ಒಂದು ವರ್ಷದ ಮಾತಿರಲಿ, ಒಂದು ತಿಂಗಳೂ ಅವಳೊಡನೆ ಇರಲಾರದೆ ಬಾಬಾಜಿ ಹೇಳದೆ ಕೇಳದೆ ಹರಪುರ ಗ್ರಾಮಕ್ಕೆ ಕಪ್ಪೊಡಿಬಂದನು. ಆದರೆ ತುಂಬಾ ಅನುಭವಶಾಲಿಯಾಗಿ ಬಂದಿದ್ದನು.

ಮಧುರ ಭಾವಸಾಧನೆಯ ದಿವ್ಯರುಚಿಯನ್ನು ಸವಿನೋಡಿದ್ದ ಆತನಿಗೆ ಸುಮ್ಮನಿರಲಾಗಲಿಲ್ಲ. ಮನೆಯಿಂದ ಮನೆಗೆ ಅಲೆದು ದುಡ್ಡು ಒಟ್ಟುಮಾಡಿ ಒಂದು ಅಖಾಡ ಕಟ್ಟಿಸಿದನು. ಅಖಾಡ

ಎಂದರೆ ವೈಷ್ಣವ ಬೈರಾಗಿಗಳ ಮಾತಿನಲ್ಲಿ ವೈಷ್ಣವಮಠ ಎಂದರ್ಥ. ಭಗವಾನ್‌ದಾಸ ಬಾಬಾಜಿಯೇ ಆ ಮಠಕ್ಕೆ ಮಹಂತನಾಗಿ ನಿಂತನು. ಅಲ್ಲದೆ ಊರಿನಲ್ಲಿ ಬಲಿಷ್ಠನೂ ಶ್ರೀಮಂತನೂ ವಿದ್ಯಾವಂತನೂ ಎನ್ನಿಸಿಕೊಂಡಿದ್ದ ಕೇನ ರಾಮಗೋಸ್ವಾಮಿ ಬಾಬಾಜಿ ಯಾತ್ರೆಗೆ ಹೋಗಿದ್ದಾಗ ಆಕಸ್ಮಾತ್ತಾಗಿ (ನಾಲ್ಕನೆಯ ಕಿರುಹರೆಯದ ಹೆಂಡತಿಯ ದೆಸೆಯಿಂದ ಎಂದು ಆಗದವರು ಹೇಳುತ್ತಿದ್ದರು.) ತೀರಿಕೊಂಡಿದ್ದರಿಂದ ಭಗವಾನ್‌ದಾಸನೇ ಆತನ ಬಲಿಷ್ಠಸ್ಥಾನ ಶ್ರೀಮಂತಸ್ಥಾನ ವಿದ್ಯಾವಂತನ ಸ್ಥಾನಗಳ ಜೊತೆಗೆ ಗುರುಸ್ಥಾನವನ್ನೂ ವಹಿಸಿಕೊಂಡನು. ಕೇನರಾಮನ ನಾಲ್ಕು ಸ್ಥಾನಗಳನ್ನು ವಹಿಸಿಕೊಂಡವನಿಗೆ ಐದನೆಯ ಸ್ಥಾನವನ್ನೂ ಏತಕ್ಕೆ ವಹಿಸಿಕೊಳ್ಳಬಾರದು ಎಂಬ ಉಪಕಾರಬುದ್ಧಿ ಹುಟ್ಟಿತು. ಕೇನರಾಮನ ತರುಣ ವಿಧವೆಯ ದುಃಖವನ್ನೂ ಕಣ್ಣೀರನ್ನೂ ತೊಡೆಯುವ ಸಲುವಾಗಿ ಆಕೆಗೆ ಹೆಚ್ಚಾಗಿ ದೇವರ ಪ್ರಸಾದವನ್ನೂ ಕೊಟ್ಟು, ಪದೇಪದೇ ಅಖಾಡಕ್ಕೆ ಬಂದು ವಿಷ್ಣುಪ್ರೀತಿ ಸಂಪಾದನೆ ಮಾಡಬೇಕೆಂದು ಕರುಣೆಯಿಂದ ಬೋಧಿಸಿದನು. ಮುದಿಗಂಡನ ಹೆಂಡತಿಯಾಗಿದ್ದು ಇಂಗಿತಜ್ಞಳಾಗಿದ್ದ ಆಕೆಯೂ ಧರ್ಮಸಂಕೇತನವನ್ನು ಆರಿತು ಸಂತೋಷದಿಂದ ಸಮ್ಮತಿಸಿದಳು.

ದಿವಂಗತನಾಗಿದ್ದ ಕೇನರಾಮನ ತರುಣ ವಿಧವೆ ಪತಿವಿಯೋಗದ ದುಃಖಶಮನಾರ್ಥವಾಗಿಯೂ ಆತ್ಮಕ್ಷೇಮಕ್ಕಾಗಿಯೂ ಭಗವಾನ್‌ದಾಸ ಬಾಬಾಜಿಯ ಮಠಕ್ಕೆ ಆಗಾಗ್ಗೆ ಹೋಗಿ ಬಾಬಾಜಿ ಪೂಜಿಸುತ್ತಿದ್ದ ರಾಧಾಕೃಷ್ಣ ಮೂರ್ತಿಯ ಮುಂದೆ ಕಣ್ಣೀರು ಸುರಿಸಿ ತನ್ನ ದುರವಸ್ಥೆಯನ್ನು ಹೇಳಿಕೊಳ್ಳುತ್ತಿದ್ದಳು. ಮಠಕ್ಕೆ ಹೋಗಿ ಬಂದ ಹಾಗೆಲ್ಲಾ ಆಕೆಯ ಭಕ್ತಿ ಹೆಚ್ಚಿತು. ಮನೆ ಬೇಡವಾಯಿತು. ಸದಾ ಶ್ರೀ ರಾಧಾಕೃಷ್ಣರ ಪಾದಸಾನ್ನಿಧ್ಯದಲ್ಲಿಯೇ ಇರಬೇಕೆಂದು ಮನಸ್ಸಾಗಿ ಹಗಲಿನ ಬಹುಭಾಗವನ್ನು ಅಲ್ಲಿಯೇ ಕಳೆಯತೊಡಗಿದಳು. ಆಕೆಯ ಭಕ್ತಿಯನ್ನು ನೋಡಿ ಬಾಬಾಜಿ ಅವಳಿಗೆ 'ರಾಧಾದಾಸಿ' ಎಂದು ನಾಮಕರಣ ಮಾಡಿ ಹರಸಿ ಬಿರುದು ಹೊರಿಸಿದನು.

ರಾಧಾದಾಸಿಯ ಭಕ್ತಿಯ ಕಥೆ ಚಿತ್ರ ವಿಚಿತ್ರವಾಗಿ ಊರಿನಲ್ಲೆಲ್ಲ ಹಬ್ಬಿತು. ಕೆಲವರು ಆಕೆಗೆ ದೇವರು ನಿತ್ಯವೂ ಕಾಣಿಸಿಕೊಳ್ಳುತ್ತಾನಂತೆ ಎಂದರು. ಕೆಲವರು ಶ್ರೀ ಕೃಷ್ಣನು ಆಕೆ ಕೊಡುವ ನೈವೇದ್ಯವನ್ನು ಆಕೆಯ ಕೈಯಿಂದಲೆ ತುತ್ತು ತುತ್ತಾಗಿ ಸ್ವೀಕರಿಸುತ್ತಾನಂತೆ ಎಂದರು. ಮತ್ತೆ ಕೆಲವರು ಆಕೆಗೆ ಭೂಮಧ್ಯೆ ಜ್ಯೋತಿಃ ಪುರುಷನು ಭೇಟಿ ಕೊಡುತ್ತಾನೆ ಎಂದರು. ಇನ್ನೂ ಕೆಲವರು ವಿಷ್ಣುವು ಪ್ರತ್ಯಕ್ಷನಾಗಿ ''ನಿನ್ನನ್ನು ಕೆಲ ದಿನಗಳಲ್ಲಿಯೆ ಲಕ್ಷ್ಮಿಯನ್ನಾಗಿ ಮಾಡಿಕೊಳ್ಳುತ್ತೇನೆ'' ಎಂದು ಆಕೆಗೆ ಭಾಷೆ ಕೊಟ್ಟಿದ್ದಾನಂತೆ ಎಂದು ನಂಬಿ ನುಡಿದರು. ಅಂತೂ ಹೆಳ್ಳಿಯ ತುಂಬಾ ರಾಧಾದಾಸಿಯ ಭಕ್ತಿಯ ಮಾತು ಹಬ್ಬಿತು.

ಉಳಿದ ವಿಧವೆಯರು 'ರಾಧಾದಾಸಿಗಿಂತಲೂ ನಾವೇನು ಕಡಮೆ ಭಕ್ತಿಯಲ್ಲಿ? ಅವಳಿಗಿಂತಲೂ ಎಷ್ಟೋ ಮೊದಲೇ ಗಂಡಂದಿರನ್ನು ಕಳೆದುಕೊಳ್ಳಲಿಲ್ಲವೇ ನಾವು?' ಎಂದು ದೇವರ ಮೇಲೆ ಕ್ರುದ್ಧರಾಗಿ, ಅವಳಿಗಿಂತಲೂ ಹೆಚ್ಚಾಗಿ ಮಠಕ್ಕೆ ಹೋಗತೊಡಗಿದ್ದುದರಿಂದ ವಿಷ್ಣುಪತ್ನಿಯಾದ ಲಕ್ಷ್ಮಿಯ ಸ್ಥಾನಕ್ಕೆ ಉಮೇದುವಾರರು ಹೆಚ್ಚಿದರು.

ಕೇನರಾಮನ ತರುಣ ವಿಧವೆಗೆ ರಾಧಾದಾಸಿ ಎಂದು ಹೆಸರು ಕೊಟ್ಟ ಮೇಲೆ ಭಗವಾನ್‌ದಾಸನು ತನ್ನ ಹೆಸರನ್ನೂ ಬದಲಾಯಿಸಿಕೊಂಡನು. ಭಗವಾನ್ ಎಂದರೇನು? ಕೃಷ್ಣ ಎಂದರೇನು? ಆದ್ದರಿಂದ ಕೃಷ್ಣದಾಸ ಎಂದು ಹೆಸರಿಟ್ಟುಕೊಂಡನು. ಪರ್ಯಾಯಾರ್ಥದ ದೃಷ್ಟಿಯಿಂದ ಹೆಸರು ಬದಲಾಯಿಸಿಕೊಂಡ ಅವನಿಗೆ ಗಣಿತದ ದೃಷ್ಟಿಯೂ ಹೊಳೆಯಿತು. ರಾಧೆಗೆ ಕೃಷ್ಣನು ಪ್ರಿಯನಾದರೆ ರಾಧಾದಾಸಿಗೆ ಕೃಷ್ಣದಾಸನು ಪ್ರಿಯನಾಗಬಾರದೇಕೆ?

ಒಂದು ರಾತ್ರಿ ಕೃಷ್ಣದಾಸನು ರಾಧಾದಾಸಿಗೆ ಮಧುರಭಾವ ಸಾಧನೆಯ ಮಹಿಮೆಯನ್ನೂ ಪುರುಷರೆಲ್ಲ ಕೃಷ್ಣರು ಸ್ತ್ರೀಯರೆಲ್ಲರು ರಾಧೆಯರು ಎಂಬ ತತ್ವವನ್ನೂ, ವೈಷ್ಣವರ ಗುಪ್ತಸಾಧನೆಗಳನ್ನೂ ವಿವರಿಸಿದನು. ಕೇಳಿ ರಾಧಾದಾಸಿಗೆ ರೋಮಾಂಚವಾಗಿ 'ಅಯ್ಯೋ ನಾನು ಅಂತಹ ಮಹಾ ಯೋಗ್ಯತೆಗೆ ಅರ್ಹಳೇ? ಪುಣ್ಯವಿಲ್ಲದಿದ್ದರೆ ಅದೆಲ್ಲಿ ಲಭಿಸುತ್ತದೆಯೇ?' ಎಂದು ಮರುಗಿದಳು

ಕೃಷ್ಣದಾಸ ಬಾಬಾಜಿ 'ರಾಧಾದಾಸಿ, ನೀನು ಮರುಗಬೇಡ. ನಿನ್ನಾತ್ಮವನ್ನು ನನಗೊಪ್ಪಿಸಿ ಶರಣಾಗು. ನಾನು ನಿನ್ನನ್ನು ವೈಕುಂಠಕ್ಕೆ ತಕರಾರಿಲ್ಲದೆ ಕರೆದೊಯ್ಯುತ್ತೇನೆ. ಬೇಕಾದ್ದೇನಂದರೆ ಪ್ರಪತ್ತಿ, ಭಕ್ತಿ. ಅಂದರೆ ನಾನು ಹೇಳಿದಂತೆ ಕೇಳುವುದು' ಎಂದು ಹೂವುಗಳಿಂದ ಅಲಂಕೃತವಾಗಿ ಉಯ್ಯಾಲೆಯ ಮೇಲಿದ್ದ ರಾಧಾಕೃಷ್ಣರ ಮೂರ್ತಿಯನ್ನು ನಿರ್ದೇಶಿಸಿ ಕೈ ಮುಗಿದು ಮತ್ತೆ 'ನಾನು ಹೇಳಿದಂತೆ ನೀನು ಕೇಳಬೇಕು' ಎಂದನು.

"ನಾನು ಒಲ್ಲೆ ಎಂದೆನೇ? ತಮಗೆ ನನ್ನ ಮೇಲೆ ಇನ್ನೂ ದಯೆ ಬರಲಿಲ್ಲ. ಬಡವಳ ಮೇಲೆ ಕೃಪೆದೋರಬೇಕು." ಎಂದು ರಾಧಾದಾಸಿ ಕಣ್ಣೀರು ಮಿಡಿದಳು.

ಬಾಬಾಜಿ "ಹಾಗಾದರೆ ಏಳು, ಈಗಲೇ ಪ್ರಾರಂಭಿಸೋಣ. ಆಧ್ಯಾತ್ಮ ಸಾಧನೆಯ ವಿಚಾರದಲ್ಲಿ ಎಷ್ಟು ಶೀಘ್ರ ತೊಡಗಿದರೆ ಅಷ್ಟೂ ಕಲ್ಯಾಣವೇ!" ಎಂದು ಹೇಳಿ ಉಯ್ಯಾಲೆಯ ಮೇಲಿದ್ದ ರಾಧಾಕೃಷ್ಣರ ವಿಗ್ರಹವನ್ನು ಎತ್ತಿ ಕೆಳಗಿಟ್ಟನು.

ರಾಧಾದಾಸಿ ಕುತೂಹಲದಿಂದಲೂ ಆಶ್ಚರ್ಯದಿಂದಲೂ ನೋಡುತ್ತಿದ್ದ ಹಾಗೆ ಕೃಷ್ಣದಾಸನು ತಾನೇ ಉಯ್ಯಾಲೆಯ ಮೇಲೆ ಕೂತನು. ಭಾವವಶನಾದನು. ಕೃಷ್ಣದಾಸನಲ್ಲಿ ದಾಸತ್ವವು ಮೆಲ್ಲ ಮೆಲ್ಲನೆ ಅಳಿಯಿತು. ಕೃಷ್ಣತ್ವವು ಸಂಪೂರ್ಣವಾಗಿ ಮೈದೋರಿತು.

ದೂರ ಕುಳಿತು ನೋಡುತ್ತಿದ್ದ ಅವಳ ಕಡೆ ಶೃಂಗಾರ ದೃಷ್ಟಿಯಿಂದ ನೋಡುತ್ತಾ ಭಾವ ಗದ್ಗದ ವಾಣಿಯಿಂದ 'ರಾಧಾ, ಬಾ ಇಲ್ಲಿಗೆ. ನಾನು ಬಂದಿದ್ದೇನೆ, ಬೃಂದಾವನದ ಶ್ರೀಕೃಷ್ಣ ಮೂರ್ತಿ, ನಿನ್ನ ಭಕ್ತಿಗೆ ಮೆಚ್ಚಿ!' ಎಂದು ತೋಳು ಚಾಚಿದನು.

ರಾಧಾದಾಸಿಗೂ ದಾಸತ್ವವು ಅಳಿಸಿಹೋಗಿತ್ತು. ಭಾವವಶಳಾಗಿದ್ದ ಆಕೆಗೆ ತಾನೂ ರಾಧೆಯಾಗಿದ್ದಂತೆ ಅನುಭವವಾಯಿತು. ವೈಯಾರದಿಂದ ಮೇಲೆದ್ದು ಬಳುಕುತ್ತಾ ಹೋಗಿ . . . . . ಮುಂದೆ ಆಕೆಗೆ ಪ್ರಜ್ಞೆಯಿರಲಿಲ್ಲ. ಯಾವುದೋ ಒಂದು ಮಹದಾನಂದರ ಹೊಳೆಯಲ್ಲಿ ಕೊಚ್ಚಿ ಹೋಗುತ್ತಿದ್ದಳು.

ರಾಯಚರಣನಿಗೆ ವೈರಾಗ್ಯದ ಮಹಿಮೆಯನ್ನು ಕುರಿತಾಡಿದ ಕೇನರಾಮನ ಮಾತು ನೆನಪಿಗೆ ಬಂತು:

"ಅಟ್ಟಿದರೆ ಓಡುತ್ತದೆ; ಬಿಟ್ಟರೆ ಹಿಂಬಾಲಿಸುತ್ತದೆ."

—ಕೆ. ವಿ. ಪುಟ್ಟಪ್ಪ.

# ರಾಕ್ಷಸನ ಮುದ್ರಿಕೆ

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಚಂದ್ರಗುಪ್ತ—ಆರ್ಯರು ಹೇಳಿದ್ದು ನಿಜ, ಆದರೆ ನಂದರಲ್ಲಿ ಅಷ್ಟು ದೃಢಭಕ್ತಿಯಿರುವುದರಿಂದಲೇ ರಾಕ್ಷಸನು ನನ್ನ ಮೇಲಿನ ದ್ವೇಷದಿಂದ ಕುದಿಯುತ್ತಿದ್ದಾನೆ; ನನ್ನನ್ನು ಕೊಲ್ಲಿಸಬೇಕೆಂದು ಹೆಣಗುತ್ತಿದ್ದಾನೆ. ಇವನು ನಂದಶತ್ರುವಿನ ಸಚಿವನಾಗುವುದೆಂದರೇನು? ನನಗೇನೋ ಅಸಾಧ್ಯವಾಗಿ ತೋರುತ್ತದೆ.

ಚಾಣಕ್ಯ—ಚಂದ್ರಗುಪ್ತ, ಅಸಾಧ್ಯ ಎನ್ನುವ ಕಾರ್ಯ ಲೋಕದಲ್ಲಿ ಇಲ್ಲ. ಸಾಧಕನಲ್ಲಿ ಸಾಮರ್ಥ್ಯ ವಿರಬೇಕು, ಆಷ್ಟೆ.

ಚಂದ್ರಗುಪ್ತ—(ಅಭಿಮಾನಾಶ್ಚರ್ಯಗಳಿಂದ ನೋಡುತ್ತಾ) ಬಾಲಕನ ಅಜ್ಞಾನವನ್ನು ಮನ್ನಿಸಬೇಕು. ಆರ್ಯರಿಗೆ ಅಸಾಧ್ಯವಾದದ್ದು ಇಲ್ಲವೆನ್ನುವುದಕ್ಕೆ ನನ್ನ ಅಭ್ಯುದಯವೇ ಸಾಕ್ಷಿ! ತಮ್ಮ ಆಜ್ಞೆಯೇ ನನಗೆ ಮಹಾಪ್ರಸಾದ.

ಚಾಣಕ್ಯ—ನೋಡುತ್ತಿರು ವತ್ಸ, ಮಂತ್ರಕ್ಕೆ ಕಟ್ಟುಬಿದ್ದು ಹಾವು ಮಾಂತ್ರಿಕನ ಬಳಿಗೆ ಬರುವುದನ್ನು ಕ್ಷಿಪ್ರದಲ್ಲೇ ಕಾಣುತ್ತೀಯೆ.

ಚಂದ್ರಗುಪ್ತ—ಆರ್ಯರಲ್ಲಿ ಮತ್ತೊಂದು ಅರಿಕೆಯನ್ನು ಮಾಡಿಕೊಳ್ಳಲೆ!

ಚಾಣಕ್ಯ—ಏನು ಅದು?

ಚಂದ್ರಗುಪ್ತ—ಮಂತ್ರಕ್ಕೆ ಕಟ್ಟು ಬಿದ್ದ ಮಾತ್ರಕ್ಕೆ ಹಾವಿನ ವಿಷವೂ ಮುರಿಯುವುದೆಂದು ಹೇಗೆ ನಂಬಬಹುದು? ವಿಷ ಸರ್ಪಕ್ಕೆ ತಾನು ಮಲಗುವ ಹಾಸಿಗೆಯಲ್ಲೇ ಅವಕಾಶ ಕೊಡಬಹುದೆ?

ಚಾಣಕ್ಯ—(ನಗುತ್ತಾ) ನಿನ್ನ ಶಂಕೆ ಸಹಜ. ಆದರೆ ರಾಕ್ಷಸನ ಸ್ವಭಾವವನ್ನು ನಾನು ಬಲ್ಲೆ. ನಿನ್ನ ಪ್ರತಿಕಕ್ಷಿಯಾಗಿ ನಿಂತಿರುವಾಗ ಅವನು ನಿನ್ನ ಕೊಲೆಗಾಗಿ ಸಹಸ್ರ ತಂತ್ರಗಳನ್ನಾದರೂ ಮಾಡುವವನೇ ಸರಿ. ಆದರೆ, ನಿನ್ನ ಸೇವೆಯನ್ನು ಒಪ್ಪಿಕೊಂಡ ಮೇಲೆ ನಿನಗೆ ಎರಡು ಬಗೆಯತಕ್ಕವನಲ್ಲ.

ಚಂದ್ರಗುಪ್ತ—ಆರ್ಯರು ಸರ್ವಜ್ಞರು.....ಈಗ ಅವನು ಮಲಯಕೇತುವಿನ ಆಶ್ರಯದಲ್ಲಿದ್ದಾನಲ್ಲವೆ?

ಚಾಣಕ್ಯ—ನೋಡಿದೆಯೋ, ನಾನು ಹೇಳಿದ್ದಕ್ಕೆ ನಿದರ್ಶನ. ನಂದರ ತಂದೆ ಸರ್ವಾರ್ಥಸಿದ್ಧಿಯೂ ಈಚೆಗೆ ತಪೋವನದಲ್ಲಿ ತೀರಿ ಹೋದದ್ದರಿಂದ ಆ ವಂಶದ ಬೇರು ಕೂಡ ಉಳಿಯಲಿಲ್ಲ. ಆದಕಾರಣ, ಈ ಪರ್ವತೇಶ್ವರನಲ್ಲಿ ತನಗಿದ್ದ ಪೂರ್ವದ ಅಭಿಮಾನದಿಂದ ಈಗ ಅವನ ಮಗನ ಬಳಿಗೆ ರಾಕ್ಷಸನು ಹೋಗಿದ್ದಾನೆ. ಇರಲಿ, ಆಡುವ ಆಟವನ್ನೆಲ್ಲಾ ಆಡಲಿ. ಕಾಡಿನ ಸುತ್ತಲೂ ಆಗಲೇ ಬಲೆಯನ್ನು ಬೀಸಿದ್ದೇನೆ. ಮೃಗ ಯಾವ ಪೊದರಿನಲ್ಲೇ ಹೊಕ್ಕಿರಲಿ. ಬೇಟಿಗಾರನ ಕೈಗೆ ಸಿಕ್ಕಲೇ ಬೇಕು.

ಚಂದ್ರಗುಪ್ತ—ನನ್ನ ವ್ಯರ್ಥಾಲಾಪದಿಂದ ಆರ್ಯರಿಗೆ ಬೇಸರವಾಯಿತೇನೊ?

ಚಾಣಕ್ಯ—ಇಲ್ಲ, ಇಲ್ಲ. ತುಂಬ ಸಂತೋಷವಾಯಿತು. ನೀನು ಇನ್ನು ಮುಂದೆ ಸ್ವತಂತ್ರವಾಗಿ ವ್ಯವಹಾರಕ್ಕೆ ಮೊದಲು ಮಾಡು. ನನ್ನ ಮೇಲೆ ಸ್ವಲ್ಪ ಅಸಮಾಧಾನ ಪಟ್ಟಂತೆ ತೋರಿಸಿಕೊಂಡರೂ ಚಿಂತೆಯಿಲ್ಲ. ಅದರ ಪ್ರಯೋಜನವನ್ನು ಮುಂದೆ ಕಾಣಬಹುದು.

ಚಂದ್ರಗುಪ್ತ—ಆರ್ಯರ ಆಜ್ಞೆ. ಇನ್ನು ನನಗೆ ಅನುಜ್ಞೆಯನ್ನು ಕೊಡಬೇಕು.

# [illegible]

1939

[illegible]

೧ ಆಣೆ

1939

# ಕನ್ನಡ ಜ್ಯೋತಿ

ಪುಟ ೩

ಸರಿಚಿಕೆ ೪

KANNADA JYOTI

ಪ್ರ

ಸಂ:

ಬುವಿನ ಮಗ

WORLD NEWS PAPER EXHIBITION
MEGARAVALLI - 574624.



ಮೈಸೂರಿನ ಇಲಾಖೆಯ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ. ಬಾಳಾಸಾಹೇಬ ಖೇರರವರು
ತಾ. ೨ ಜೂನ್ ೧೯೪೦ನೇ ದಿವಸ ಶ್ರೀಧೂತಪಾಪೇಶ್ವರ ರುಗ್ಣಾಲಯಕ್ಕೆ ಸಂದರ್ಶನವನ್ನಿತ್ತರು.
ಆ ಕಾಲಕ್ಕೆ ತೆಗೆದ ಭಾಯಾಚಿತ್ರದ ದೃಶ್ಯವು.

1940

# ಪುಸ್ತಕ

ಪ್ರಣಯ ಪ್ರಪಂಚ
ವಿದ್ಯುದ್ವೃಷ್ಟಿ

ಉಡುಪಿ ಪಂಥಾ
ಕನ್ನಡಕ್ಕೆ ಸ್ವಾದ



ಮುಂಬಯಿ ಇಲಾಖೆಯ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ. ಬಾಳಾಸಾಹೇಬ ಖೇರರವರು
ತಾ. ೨ ಜೂನ್ ೧೯೪೦ ನೇ ದಿವಸ ಶ್ರೀಧೂತಪಾಪೇಶ್ವರ ರುಗ್ಣಾಲಯಕ್ಕೆ ಸಂದರ್ಶನವನ್ನಿತ್ತರು
ಆ ಕಾಲಕ್ಕೆ ತೆಗೆದ ಛಾಯಾಚಿತ್ರದ ದೃಶ್ಯವು.

# ಆರೋಗ್ಯ-ಮಂದಿರ

ಸಚಿತ್ರ ಮಾಸಿಕ

ಆಗಸ್ಟ್ ೧೯೪೦

ವರ್ಷ ೨

ಸಂಚಿಕೆ ೬



JANUARY
1940

ಉಡುಪಿ ಪಂಚಾಂಗ
ಕನ್ನಡಕ್ಕೆ ಅನುವಾದಿಸಲಾಗಿದೆ




PRICE
TWO ANNAS

ಶ್ರೀ

— ಹರಿಃ ಓಂ —

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ಗುರುಭ್ಯೋನಮಃ ॥

# ದ್ವೈತದುಂದುಭಿ

## ತ್ರೈಮಾಸಿಕ ಪತ್ರಿಕೆಯು

ವರ್ಷ ೧ | ಶಕೆ ೧೮೬೧ ಪಾಲ್ಗುಣ | ಸಂ. ೩

ಶ್ರೀಮದಾನಂದತೀರ್ಥರು

ಪೂರ್ಣಪ್ರಜ್ಞಸ್ಯ ತೀಯಸ್ಯ ಭಗವತ್ಪಾದಾಚಾರ್ಯಕ

ಸಂಪಾದಕರು — ರಾಮಾಚಾರ್ಯ ಕಟಗೇರಿ ( [illegible] )

ವಾ. ಚಂ. ೪-೫-೦ ] ಎಲ್ಲಿ ಒಡೆತನವು ಕಾದಿಡಲ್ಪಟ್ಟಿದೆ [illegible]

# ಅಂಕುರ



ಎರಡನೆಯ ಮುದ್ರಣ

# ಶರಣ ಸಂದೇಶ

SHARANA SANDESH

ನ್ಯಾಯನಿಷ್ಠುರ ದಾಕ್ಷಿಣ್ಯಪರನಾನಲ್ಲ! ಲೋಕವಿರೋಧಿ! ಶರಣನಾರಾರಿಗೂ ಅಂಜುವವನಲ್ಲ.! ಕೂಡಲಸಂಗಮದೇವರ ರಾಜಕೇಜದಲ್ಲಿಪ್ಪನಾಗಿ!!

—ಶ್ರೀ ಬಸವಣ್ಣನವರ

ಪ್ರತಿ ಸೋಮವಾರವೂ ಪ್ರಕಟವಾಗುವುದು.

1940

ಸಂಪುಟ ೧೦ | ಆಲಮಟ್ಟಿ— ಸೋಮವಾರ ತಾರೀಖು ೧೬ ನೆಯ ಸಪ್ಟಂಬರ್ ೧೯೪೦. | ಸಂಚಿಕೆ ೬


# ಸರ್ವಸ್ವವನ್ನೂ ಜನಸೇವೆಗೆ ಸಮರ್ಪಿಸುವ ದಿವ್ಯ ದೀಕ್ಷೆ.

(ಶ್ರೀ ಜಯಚಾಮರಾಜ ಒಡೆಯರವರು)

ನನ್ನ ಪ್ರಯತ್ನದಲ್ಲೇ ಇಮ್ಮಡಿ ಜಯಪ್ರದವಾಗಲೆಂದು ನಾನು ಎನ್ನಾಗಿ ತಿಳಿದಿದ್ದೇನೆ. ಸ್ವಾಮಿಯ ವಿಶ್ವಾಸ, ಸಹಾಯ ಸತತ ಗಳೂ ನನಗೆ ಇರ

ನಮ್ಮ ಹಿರಿಯರು ನಿನ್ಮೆಲ್ಲರಲ್ಲಿಯೂ ಪ್ರೇಮವನ್ನಿಟ್ಟಿದ್ದರು ಅವರು ತಮ್ಮ ದೈವಭಕ್ತಿ, ಸುಜ್ಞಾನ, ವಿನಯ, ಕರ್ತವ್ಯನಿಷ್ಠೆ, ಗಾಂಭೀರ್ಯಾದಿಗಳಿಂದ ನಿನ್ಮೆಲ್ಲರ ಪ್ರೇಮವನ್ನು ಆಕರ್ಷಿಸಿದ್ದರು

ಈಗ ನಾವು ಅವರ ಮಹಾ ಪ್ರಯತ್ನಗಳನ್ನು ನೆರವೇರಿಸುವದಕ್ಕೋಸ್ಕರ ನಮ್ಮನ್ನು ಅರ್ಪಣಮಾಡಿಕೊಳ್ಳಬೇಕಾಗಿದೆ ಒಂದು ದೊಡ್ಡ ಕುಟುಂಬದ ಭಾವನೆಯಲ್ಲಿ ನಮ್ಮನ್ನು ಮುಡುಪು ಕಟ್ಟಿಕೊಂಡದ್ದಾದರೆ ನಾವು ಅದನ್ನು ನೆರವೇರಿಸಿ ಕೃತಾರ್ಥರಾಗಬಹುದು.

ಈಗ ಲೋಕವು ಕಷ್ಟಕ್ಕೀಡಾಗಿದೆ ನಾವು ಏಕಮತ್ಯದಿಂದಲೂ ಸ್ವಾರ್ಥತ್ಯಾಗದಿಂದಲೂ ಪ್ರಯತ್ನಿಸಿದರೆ ಮಾತ್ರ ಈ ಕಷ್ಟದಿಂದ ಪಾರಾಗುವೆವು.

## ಗಾಂಧೀಜಿಯವರ ಶಾಂತಿಯುದ್ಧ?

ಮೈಸೂರು ಸಂಸ್ಥಾನಾಧಿಪತಿಗಳಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರವರು ತಾರೀಖು ೮-೯-೪೦ ನೆಯ ದಿನ ಪಟ್ಟಾಭಿಷೇಕದ ಕಾಲಕ್ಕೆ ತಮ್ಮ ಸಂಸ್ಥಾನದ ಪ್ರಜೆಗಳಿಗೆ ಕೊಟ್ಟ ಮಹತ್ವದ ಸಂದೇಶದಲ್ಲಿ ಹೀಗೆ ಹೇಳಿದ್ದಾರೆ—

"ನನ್ನ ಹಿರಿಯರ ಸಿಂಹಾಸನವನ್ನೇರುವ ಈ ವ್ರತ ಸಮಾರಂಭವು ನನ್ನನ್ನೂ ನನ್ನ ಜೀವಿತವನ್ನೂ ನನ್ನ ಸರ್ವಸ್ವವನ್ನೂ ಮೈಸೂರು ಸಂಸ್ಥಾನದ ಜನಸೇವೆಗಾಗಿ ಸಮರ್ಪಿಸುವ ದೀಕ್ಷೆಯೆಂದೇ ನಾನು ತಿಳಿಯುತ್ತೇನೆ

### ಭೂಷಣಪ್ರದವಾದ ಘೋಷಣೆ.

- ಬಂಗಾಲದ ಕೊರಳಿಗೆ ಕೃಷ್ಣಸರ್ಪ!
- ಕಣ್ಣಾರೆ ಕಂಡ ವಾರ್ತಾದ ಅಂತ್ಯಕಾಲ!
- ಹಿಂದುಗಳ ಭಯಂಕರ ಕ್ಷೀಣತೆ.
- ಹಿಟ್ಲರನ ರಕ್ಷಣೆಯ ಸಿದ್ಧತೆ.
- ನಿಜಾಮ ರಾಜ್ಯವು ಸ್ವತಂತ್ರ ರಾಷ್ಟ್ರವಾಗಬೇಕು!

ನನಗೆ ಒಪ್ಪಿಸಿರುವ ಪವಿತ್ರ ಕರ್ತವ್ಯವನ್ನು ನಿರ್ವಹಿಸಲು ಪರಮಾತ್ಮನು ನನಗೆ ಶಕ್ತಿಯನ್ನೂ ಬೆಳಕನ್ನೂ ಅನುಗ್ರಹಿಸಲಿ ಮತ್ತು ಆತನ ಕೃಪೆಯು ಯಥೇಷ್ಟವಾಗಿ ಮೈಸೂರು ಸಂಸ್ಥಾನದ ಪ್ರತಿಯೊಂದು ಮನೆಯಲ್ಲಿಯೂ ತೊಟ್ಟಿಲಲ್ಲಿಯೂ ಸೇರಿ ನೆಲೆಸಿ ಹೊಳೆದು ಬೆಳಗಲಿ"

★

—ಶ್ರೀ ಜಯಚಾಮರಾಜ ಒಡೆಯರವರ ಪಟ್ಟಾಭಿಷೇಕದ ದಿನ ಎಲ್ಲ ರಾಜಕೀಯ ಕೈದಿಗಳನ್ನೂ ಬಿಡುಗಡೆಮಾಡಿದರು. ಮೈಸೂರು ಸಂಸ್ಥಾನದ ಪ್ರತಿಯೊಂದು ಹಳ್ಳಿ ಗ್ರಾಮ ಪಟ್ಟಣಗಳಲ್ಲಿಯೂ ಎರಡು ಗಿಡಗಳನ್ನು ಹಚ್ಚಿದರು.

### ಕಾಂಗ್ರೆಸ್ಸಿನ ಮೇಲೆ ದಾಳಿ!

ಸರದಾರ ಪಟೇಲರು ತಾ. ೧೦-೯-೪೦ ನೆಯ ದಿನ ಅಲಹಾಬಾದಿನ ಸಭೆಯಲ್ಲಿ ಹೀಗೆ ಹೇಳಿದರು—

"ವ್ಹಾಯಿಸ್‌ರಾಯರ ಘೋಷಣೆಯು ಕಾಂಗ್ರೆಸ್ಸಿನ ಮೇಲೆ ಮಾಡಿದ ಒಂದು ದಾಳಿಯು ಗಾಂಧೀಜಿಯವರ ಮಾತನ್ನು ಕೂಡಾ ಮೀರಿ ಸರ್ಕಾರದ ಸ್ವಾಮಾನಿಕತೆಯನ್ನು ಪರೀಕ್ಷಿಸಲು ಕಾಂಗ್ರೆಸ್ಸು ಸಂಪೂರ್ಣ ಸಹಾಯ ಮಾಡಲು ಸಿದ್ಧವಾಗಿತ್ತು, ಅದನ್ನು ಸರಕಾರವು ಒಪ್ಪಲಿಲ್ಲ"

★

ಪಂಡಿತ ಜವಾಹರಲಾಲ ನೆಹರುರವರು ತಾರೀಖು ೯-೯-೪೦ ನೆಯ ದಿನ ಅಲಹಾಬಾದಿನ ಸಾರ್ವಜನಿಕ ಸಭೆಯಲ್ಲಿ ಹೀಗೆ ಹೇಳಿದರು—

"ಸರಕಾರಕ್ಕೂ ಕಾಂಗ್ರೆಸ್ಸಿಗೂ ಒಪ್ಪಂದವಾಗುವ ಕಾಲ ಮೀರಿತು ಇನ್ನು ನಮ್ಮ ಶಕ್ತಿ ಪರೀಕ್ಷೆಯ ಕಾಲ ಬಂದಿತು ಆದುದರಿಂದ ಎಲ್ಲರೂ ಸಿದ್ಧರಾಗಿರಿ. ನಮ್ಮ ಈ ಹೋರಾಟವು ಅತ್ಯಂತ ಭೀಕರವಾದುದೂ ದೀರ್ಘ ಕಾಲ ನಡೆಯುವುದೂ ಆಗಬಹುದು

ಸ್ವಯಂಸೇವಕ ದಳದ ಆಜ್ಞೆಯನ್ನು ಉಲ್ಲಂಘಿಸುವ ಹೋರಾಟವನ್ನೇನೂ ನಾವು ಈಗ ಪ್ರಾರಂಭಿಸುವುದಿಲ್ಲ

ನಾವು ಈಗಲೇ ಏನುಮಾಡಬೇಕಾಗುವುದೆಂಬುದನ್ನು ನಾನು ಹೇಳಲಾರೆನು. ಆದರೆ ನಮ್ಮ ತತ್ವ ಮತ್ತು ಧೋರಣಗಳಿಗನುಸರಿಸಿ ಮುಂದಡಿಯಿಡುವುದು ಮಾತ್ರ ನಿಜ. ನಮ್ಮ ಮುಂದೆ ಇರತಕ್ಕ ದಾರಿ ಅದೊಂದೇ. ಈ ಸಾರೆಯೂ ಮಹಾತ್ಮಾ ಗಾಂಧಿಯವರೇ ನಮ್ಮ ನಾಯಕರಾಗುವರೆಂಬುವುದರಲ್ಲಿ ನನಗೆ ತುಂಬಾ ವಿಶ್ವಾಸವಿದೆ."

# ಬಂಗಾಲದ ಕೊರಳಿಗೆ ಕೃಷ್ಣಸರ್ಪ!

ಬಂಗಾಲ ಪ್ರಾಂತದಲ್ಲಿ ಮುಸ್ಲಿಂಲೀಗಿನ ಪ್ರಭುತ್ವ ಪ್ರಾರಂಭವಾದುದರಿಂದ ಅಲ್ಲಿಯ ರಾಷ್ಟ್ರೀಯತ್ವಕ್ಕೂ ಹಿಂದುಗಳ ಉನ್ನತಿಗೂ ಭಯಂಕರ ತೊಂದರೆ ಸಂಭವಿಸಿದೆಯಷ್ಟೆ. ದಿನೆ ದಿನೆ ಅಲ್ಲಿ ಎಂಥ ಅರಾಷ್ಟ್ರೀಯ ಅನ್ಯಾಯದ ಶಾಸನಗಳಾಗಲಾರಂಭಿಸಿವೆಯೆಂಬುದಕ್ಕೆ ಮೊನ್ನೆ ಅಲ್ಲಿಯ ಅಸೆಂಬ್ಲಿಯಲ್ಲಿ ಮುಖ್ಯ ಮಂತ್ರಿಗಳಾದ ಮಾನ್ಯ ಹಕ್ಕರು ತಂದ "ಸೆಕೆಂಡರಿ ಎಜ್ಯುಕೇಶನ್ ಬಿಲ್" ಎಂಬುದೇ ಹೊಸ ದೃಷ್ಟಾಂತವು.

### ಗೊತ್ತುವಳಿಯ ಸ್ವರೂಪ

ಮಾಧ್ಯಮಿಕ ಶಿಕ್ಷಣದ ಮೇಲೆ ಸರಕಾರದ ಸ್ವಾಮಿತ್ವವನ್ನು ಸ್ಥಾಪಿಸುವುದೇ ಈ ಗೊತ್ತುವಳಿಯ ಮುಖ್ಯೋದ್ದೇಶ. ವಿಶ್ವ ವಿದ್ಯಾಪೀರದವರ ನೇತೃತ್ವ ಹೋಗಿ ಸರಕಾರದ ಕೈಯಲ್ಲಿ ಮಾಧ್ಯಮಿಕ ಶಿಕ್ಷಣ ಸೂತ್ರ ಬರಬೇಕೆಂಬುದೇ ಹಕ್ಕ ಮಂತ್ರಿಮಂಡಲದ ಉದ್ದೇಶ

ಆದುದರಿಂದ "ಸೆಕೆಂಡರಿ ಎಜ್ಯುಕೇಶನ್ ಬೋರ್ಡ್" ಎಂಬುದೊಂದು ಸಮಿತಿಯನ್ನು ಸರಕಾರವು ನಿಯಮಿಸುವುದು ಆ ಸಮಿತಿಯೇ ಮ್ಯಾಟ್ರಿಕ್ ಪರೀಕ್ಷೆಯ ಪಾರ ಕ್ರಮಗಳನ್ನೆಲ್ಲ ಗೊತ್ತುಮಾಡುವುದು ವಿದ್ಯಾಪೀರದಲ್ಲಿ ಯಾವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕೆಂಬ ನಿರ್ಣಯಮಾಡುವುದೂ ಈ ಸಮಿತಿಯ ಅಧಿಕಾರ ವಿದ್ಯಾಪೀರದ ಮ್ಯಾಟ್ರಿಕ್ ಪರೀಕ್ಷೆಯಂತಹ ಬೇರೊಂದು ಪರೀಕ್ಷೆಯನ್ನೂ ಈ ಸಮಿತಿಯು ತೆಗೆದುಕೊಳ್ಳುವುದು.

ಈ ಸಮಿತಿಯಾದರೋ ಮುಸ್ಲಿಂ ಜಾತ್ಯಾಭಿಮಾನದ ಬಹು ಸಂಖ್ಯಾಕ ಸಭಾಸದರಿಂದಲೇ ಕೂಡಿದ್ದಾಗುವುದೆಂಬುದನ್ನು ಬೇರೆ ಹೇಳಬೇಕಾದುದಿಲ್ಲವಷ್ಟೆ ಈಗಲೇ ಸರಕಾರದ ಹಣವನ್ನು ಮುಸ್ಲಿಮರ ಶಿಕ್ಷಣ ಪ್ರಸಾರಕ್ಕಾಗಿಯೇ ಅತ್ಯದಿಕವಾಗಿ ಹಕ್ಕ ಮಂತ್ರಿಮಂಡಲವು ಸೂರೆ ಮಾಡುತ್ತಿರುವಾಗ ಈ ಹೊಸ ಶಾಸನದಿಂದ ಎಷ್ಟು ಅನ್ಯಾಯ ಅನರ್ಥಗಳು ಸಂಭವಿಸುವವೋ ಎಂದು ಎಲ್ಲ ಪಕ್ಷ ಪಂಗಡದವರೂ ಇದನ್ನು ನಿಷೇಧಿಸುತ್ತಿದ್ದಾರೆ

### ನಿಷೇಧ ಪ್ರದರ್ಶನ

ಅಸೆಂಬ್ಲಿಯಲ್ಲಿ ಈ ಗೊತ್ತುವಳಿಯನ್ನು ಕಾಂಗ್ರೆಸ್ ಪಕ್ಷ, ಹಿಂದು ರಾಷ್ಟ್ರೀಯ ಪಕ್ಷ ಮೊದಲಾದವುಗಳಲ್ಲಾ ವಿರೋಧಿಸಿದವು ಅ[illegible]ಲೆ ಕ ಕಂ[illegible]ಲ್ಲಿ ಒಂದು ಪ್ರಚಂಡ ಸಭೆ[illegible] ಈ ಗೊತ್ತುವಳಿಯನ್ನು ನಿಷೇದಿಸಲಾಯಿತ ಆ ಸ[illegible]ಲ್ಲಿ ಹೀಗ ಭಾಷಣಗಳು ಜರುಗಿದವು —

ಈ ಗೊತ್ತುವಳಿಯನ್ನು ಸರಕಾರವು ತೀರ್ಮಾನಿಸಿದರೂ ನಾವು ಮಾನ್ಯಮಾಡುವುದಿಲ್ಲ "ನ್ಯಾಶನಲ್ ಕೌನ್ಸಿಲ್ ಆಪ್ ಎಜ್ಯುಕೇಶನ್" ಎಂಬ ಒಂದು ಪ್ರತ್ಯೇಕ ಸಂಸ್ಥೆಯನ್ನು ಏರ್ಪಡಿಸಿ ಆ ಮೂಲಕ ನಮ್ಮ ಎಲ್ಲ ಮಾಧ್ಯಮಿಕ ಶಿಕ್ಷಣ ಕಾರ್ಯಗಳನ್ನು ನಡೆಯಿಸುವೆವೆಂದು' ಕಾಂಗ್ರೆಸ್ ಪಕ್ಷದ ಧುರೀಣರಾದ ಶ್ರೀ ಶರಶ್ಚಂದ್ರ ಬೋಸರವರು ಹೇಳಿದರು

ಈ ಗೊತ್ತುವಳಿಯೆಂದರೆ "ಶಿಕ್ಷಣದ ಇಸ್ಲಾಮೀಕರಣ' ಎಂದು ಕಲಕತ್ತಾ ವಿದ್ಯಾಪೀರದ ಹಿಂದಿನ ವ್ಹಾಯಿಸ್ ಚಾನ್ಸ್‌ಲರ್ ಡಾ. ಶ್ಯಾಮಪ್ರಸಾದ ಮುಕರ್ಜಿಯವರು ಹೇಳಿದರು.

ಮಾಧ್ಯಮಿಕ ಶಿಕ್ಷಣದ ಶುತ್ತಿಗೆ ಹಿಚುಗುವ ಗೊತ್ತುವಳಿಯೆಂದೂ ಕೃಷ್ಣಸರ್ಪದಂತಹ ಗೊತ್ತು ಯೆಂದೂ ಅಸೆಂಬ್ಲಿ ಸಭಾಸದರು ಅಸೆಂಬ್ಲಿಯಲ್ಲಿಯೇ ಈ ಗೊತ್ತುವಳಿಯ ವಿಚಾರವಾಗಿ ತಮ್ಮ ನಿಷೇಧವನ್ನು ಪ್ರದರ್ಶಿಸಿದರು.

### ಶಿಕ್ಷಣ ಸ್ಥಿತಿ.

ಬಂಗಾಲದಲ್ಲಿ ಸಾಧಾರಣ ೧೩೦೦ ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳಿವೆ. ಅವುಗಳಲ್ಲಿ ಕೇವಲ ೫೦ ಸಂಸ್ಥೆಗಳು ಸಂಪೂರ್ಣ ಸರಕಾರಿ ಆಶ್ರಯ ಹೊಂದಿವೆ. ೬೨೫ ಸಂಸ್ಥೆಗಳಿಗೆ ಮಾತ್ರ ಸರಕಾರದ ಸಹಾಯ ದೊರೆಯುತ್ತಲಿದೆ. ಉಳಿದ ಸಂಸ್ಥೆಗಳು ಸಾರ್ವಜನಿಕ ಮತ್ತು ಉದಾರಿಗಳ ಸಹಾಯದಿಂದ ಸ್ವತಂತ್ರವಾಗಿರತಕ್ಕವು.

ಒಟ್ಟು ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳಲ್ಲಿ ೧ ಲಕ್ಷ ೭೦ ಸಾವಿರ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ೧ ಲಕ್ಷ ೨೨ ಸಾವಿರ ಹಿಂದು ವಿದ್ಯಾರ್ಥಿಗಳೂ ೪೭ ಮುಸಲ್ಮಾನ್ ವಿದ್ಯಾರ್ಥಿಗಳೂ ಇದ್ದಾರೆ.

ಸರಕಾರವು ಶಿಕ್ಷಣಕ್ಕಾಗಿ ವೆಚ್ಚಮಾಡುತ್ತಿರುವದರಲ್ಲಿ ೧೦೦ಕ್ಕೆ ೧೫ ರಷ್ಟು ಮಾತ್ರ ಈ ಮಾಧ್ಯಮಿಕ ಶಿಕ್ಷಣಕ್ಕೆ ವಿನಿಯೋಗವಾಗುತ್ತಲಿದೆ ಇತರ ಹಣವೆಲ್ಲಾ ಸಾರ್ವಜನಿಕವಾದುದು ಹೀಗಿರುವಾಗ ಮಾಧ್ಯಮಿಕ ಶಿಕ್ಷಣವೆಲ್ಲ ತನ್ನ ಸ್ವಾಧೀನವಾಗಬೇಕೆಂದು ಸರಕಾರವು ಹೀಗೆ ಗೊತ್ತುವಳಿಮಾಡಿದುದು ಅನ್ಯಾಯವೂ ರಾಷ್ಟ್ರೀಯತ್ವಕ್ಕೆ ವಿಘಾತಕವೂ ಆಗಿಲ್ಲವೆ?

★

# ಹಿಂದು ರಕ್ಷಣೆಗೆ ಕಟ್ಟಿದ ಕಂಕಣ!

ರಾಷ್ಟ್ರೀಯಸ್ವಯಂಸೇವಕ ಸಂಘದ ರಕ್ಷಾಬಂಧನ ಸಮಾರಂಭವು ಈ ಸಾರೆ ಪಂಢರಪುರದಲ್ಲಿ ಹಿಂದುಧರ್ಮ ಪ್ರಾಣ ಶ್ರೀಮಂತ ತುಕಡೋಜಿ ಮಹಾರಾಜರವರ ಅಧ್ಯಕ್ಷತೆಯಲ್ಲಿ ಜರುಗಿತು ಆಗ ಮಹಾರಾಜರವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು —

### ಹಿಂದು ತರುಣನ ಕಂಕಣ

"ನಾವು ಯಾರ ಕೈಯಿಗೆ ಈ ದಿನ ರಕ್ಷಾಬಂಧನ ಮಾಡುತ್ತೇವೆಯೋ ಅವರಿಗೂ ನಮಗೂ ಬಂಧುತ್ವವುಂಟಾಗುತ್ತದೆ. ಇಷ್ಟೇ ಅಲ್ಲ, ಈ ಪುಣ್ಯ ದಿನದಲ್ಲಿ ಪ್ರತಿಯೊಬ್ಬ ಹಿಂದು ತರುಣನು ಹಿಂದುಗಳೆಂದು ಹೇಳಿಕೊಳ್ಳುತ್ತಿರುವ ಪ್ರತಿಯೊಂದು ವ್ಯಕ್ತಿಯ ರಕ್ಷಣೆಗೆ ಬಲಸಂವರ್ಧನೆಗೆ ದುಃಖ ನಿವಾರಣೆಗೆ ಸಿದ್ಧನಾಗಿದ್ದೇನೆಂದು ಕಂಕಣವನ್ನೇ ಕಟ್ಟಿಕೊಳ್ಳುತ್ತಾನೆ

ನಮ್ಮಲ್ಲಿಯ ಪ್ರತಿಯೊಂದು ಧಾರ್ಮಿಕ ಸಮಾರಂಭಗಳ ನಿಜವಾದ ಉದ್ದೇಶವನ್ನು ತಿಳಿದುಕೊಂಡು ಆ ಪ್ರಕಾರ ನಾವು ನಡೆದದ್ದಾದರೆ ಹಿಂದು ಸಮಾಜವು ಬಲಶಾಲಿಯಾಗುವದಲ್ಲದೆ ಅದರ ಎಲ್ಲ ವಿಪತ್ತುಗಳೂ ನಿವಾರಣೆಯಾಗುವವು

ಹಿಂದು ಸಮಾಜದ ಉನ್ನತಿಗಾಗಿ ಅದು ಬಲಶಾಲಿಯಾಗುವಂತೆ ಮತ್ತು ಅದರ ಮೇಲೆ ಬರುತ್ತಿರುವ ಅನೇಕ ವಿಪತ್ತುಗಳನ್ನು ನಿವಾರಣೆ ಮಾಡುವಂತೆ ಸರ್ವಸ್ವವನ್ನೂ ಅರ್ಪಿಸಿ ಪ್ರಯತ್ನಿಸುವದಕ್ಕೋಸ್ಕರ ಕಂಕಣ ಕಟ್ಟಿಕೊಳ್ಳುವ ಒಂದು ಸಂಘವು ಬೇಕಾಗಿದ್ದಿತು. ಅದನ್ನು ಡಾ ಹೆಡಗೆವಾರರು ನಿರ್ಮಾಣಮಾಡಿದ್ದಾರೆ

### ಸಂಘಟನೆಯ ಶಕ್ತಿ

ಹಿಂದು ಸಮಾಜವು ಬಲಶಾಲಿಯೂ, ಸಂಘಟಿತವೂ ಆಗಬೇಕೆಂಬುದೇ ನಿಮ್ಮ ಉದ್ದೇಶವಾಗಿದೆ ಈ ನಿಮ್ಮ ಉದ್ದೇಶ ಸಾಧನೆಯು ನಿಮ್ಮ ಅಂತಃಕರಣದಲ್ಲಿ ಉಂಟಾಗುವ ತಳಮಳವನ್ನೇ ಮುಖ್ಯವಾಗಿ ಅವಲಂಬಿಸಿದೆ. ವೀರವೃತ್ತಿಯ ಜನ್ಮಭೂಮಿಯು ಅಂತಃಕರಣವು ಭಕ್ತನ ಭಕ್ತಿಯು ದೇವರ ಶೃಂಗಾರವನ್ನೂ ಪೂಜಾರ್ಚನೆಗಳ ಸಂಭ್ರಮವನ್ನೂ ಮುಖ್ಯವಾಗಿ ಅವಲಂಬಿಸಿರದೆ ಆತನ ಅಂತಃಕರಣದಲ್ಲಿ ಉಕ್ಕಿ ಬರುವ ತಳಮಳವನ್ನೇ ಅವಲಂಬಿಸಿರುತ್ತದೆ.

ಹಿಂದು ಸಮಾಜ ಬಲಶಾಲಿಯಾಗುವಂತೆ ಪ್ರಯತ್ನಿಸುವ ಈ ನಿಮ್ಮ ಪ್ರತಿಜ್ಞೆಯು ಕೂಡ ನಿಮ್ಮ ಅಂತಃಕರಣದ ತಳಮಳದ ಮೇಲಿಂದಲೇ ನೆರವೇರತಕ್ಕದ್ದಾಗಿದೆ. ಈ ದಿನ ನೀವು ರಕ್ಷಾಬಂಧನ ಹೊಂದಿದ ನಿಜವಾದ ಅರ್ಥವನ್ನು ಅರಿತುಕೊಂಡು ಆ ಪ್ರಕಾರ ನಡೆಯಲು ಸಿದ್ಧರಾಗಿ ನಿಮ್ಮ ಕೃತಿಯಿಂದಲೇ ಅಸಂಖ್ಯ ಹಿಂದು ಬಾಂಧವರ ಸಂಘಟನೆಗೆ ಅಗತ್ಯವಾದ ವೀರ . ವೃತ್ತಿಯನ್ನು ಪ್ರಸಾರಗೊಳಿಸಿದ್ದಾದರೆ ನೀವು ಜಯಶಾಲಿಗಳಾಗಿ ಈ ಸಂಘ ಸ್ಥಾಪಕರ ಕೀರ್ತಿಯು ಆ ಚಂದ್ರಾರ್ಕವಾಗಿರುವಂತೆ ಮಾಡುವಿರಿ

### ಬಾಂಧವರೇ?

ಹಿಂದು ಸಮಾಜದ ಸಂಘಶಕ್ತಿ ಮತ್ತು ವೀರವೃತ್ತಿಗಳು ಅನ್ಯ ಧರ್ಮದವರ ಮೇಲೆ ಆಕ್ರಮಣಕ್ಕಾಗಿ ಬೇಕಾಗಿಲ್ಲ. ಸ್ವಧರ್ಮದವರ ಬೌದ್ಧಿಕ ಶಾರೀರಿಕ ಮತ್ತು ನೈತಿಕ ಉನ್ನತಿಗಳಿಗಾಗಿ ಬೇಕಾಗಿವೆ.

ಅಬಲೆಯರ ಮಾನಭಂಗಮಾಡಲಿಕ್ಕೂ, ಸಜ್ಜನರನ್ನು ಹಿಂಸೆಗೊಳಿಸಲಿಕ್ಕೂ ಊರಲ್ಲಿ ದೊಂಬೆಯನ್ನುಂಟು ಮಾಡಲಿಕ್ಕೂ ವೀರವೃತ್ತಿಯು ಬೇಕಾಗಿಲ್ಲ. ಆದರೆ ಸಜ್ಜನರ ರಕ್ಷಣೆ ಮತ್ತು ಶಾಂತಿ ಸಮಾಧಾನಗಳನ್ನು ಉಂಟುಮಾಡಲು ವೀರವೃತ್ತಿ ಬೇಕಾದುದು ಈ ಸಂಘವು ಅಂಥ ಉದ್ದೇಶವುಳ್ಳದ್ದಾಗಿದೆಯೆಂದೇ ನಾನು ನಂಬಿದ್ದೇನೆ ಆದಕಾರಣ ಈ ನಿಮ್ಮ ಪ್ರಯತ್ನವನ್ನು ಪರಮಾತ್ಮನು ನೆರವೇರಿಸಲೆಂದು ಹಾರೈಸುತ್ತೇನೆ."

★

— ಸಿಂಧಪ್ರಾಂತದ ಹಿಂದುಗಳಿಗಾಗುತ್ತಿರುವ ದುಃಖವನ್ನು ಹೇಳಿಕೊಳ್ಳಲು ವ್ಹಾಯಿಸ್‌ರಾಯರು ಶಿಷ್ಟಮಂಡಲಕ್ಕೆ ಅವಕಾಶಕೊಡಲಿಲ್ಲ ನ್ಯಾಯ ಮತ್ತು ಸುವ್ಯವಸ್ಥೆಯ ಶಾಖಗಳು ಪ್ರಾಂತಿಕ ಅಧಿಕಾರಕ್ಕೆ ಒಳಪಟ್ಟವುಗಳಿರುವುದರಿಂದ ಆ ವಿಚಾರವಾಗಿ ತಾವು ಯೋಚಿಸುವುದಿಲ್ಲವೆಂದು ಹೇಳಿದರು.

# ಧರ್ಮದ ಹೆಸರಿನಿಂದ ಅಧರ್ಮ.

ಹಿಂದು ಸಮಾಜದಲ್ಲಿ ಧರ್ಮದ ಹೆಸರಿನಿಂದ ಎಷ್ಟೋ ಅಧರ್ಮ ಕಾರ್ಯಗಳು ಜರುಗುತ್ತಲಿವೆಯಷ್ಟೆ ಅವುಗಳಲ್ಲಿ ವಿಚಿತ್ರವಾದುದೊಂದು ಹೀಗೆ ಪ್ರಕಟವಾಗಿದೆ—

"ಕೋಚಿನ ಸರಕಾರದವರು ಶ್ರೀಮತಿ ಕುಲಕಟಮ್ಮ ಎಂಬ ಹೆಣ್ಣುಮಗಳನ್ನೂ ಅವಳ ಮಕ್ಕಳನ್ನೂ ಆ ಸಂಸ್ಥಾನದ ಗಡಿಪಾರುಮಾಡಿಸಿದರು ಏಕೆಂದರೆ ಕುಸಾಲಮಣಿಕಂ ಎಂಬಲ್ಲಿಯ ದೇವಾಲಯದ ಮುಖ್ಯ ಪೂಜಾರಿಗೂ ಈ ಹೆಣ್ಣುಮಗಳಿಗೂ ಪ್ರೇಮ ಸಂಬಂಧವುಂಟಾಗಿದ್ದುದು ಬೈಲಿಗೆ ಬಂದಿತು ಆ ದೇವಾಲಯದ ಮುಖ್ಯ ಪೂಜಾರಿಯು ಬ್ರಹ್ಮಚಾರಿಯಾಗಿರಬೇಕೆಂದೇ ನಿಯಮವಿದೆಯಂತೆ ಆತನು ಹೀಗೆ ಅವಳ ಸಂಗದಿಂದ ಭ್ರಷ್ಟನಾದ ಮೂಲಕ ಆ ಹೆಣ್ಣುಮಗಳನ್ನೂ ಅವಳ ಮಕ್ಕಳನ್ನೂ ಸೀಮಾಂತರದ ಈ ಮೋರ ಶಿಕ್ಷೆಗೆ ಸರಕಾರದವರು ಗುರಿಮಾಡಿದರು

ಹೀಗೆ ಶಿಕ್ಷೆ ವಿಧಿಸಬೇಕಾದುದೇ ಹಿಂದಿನಿಂದ ನಡೆದುಕೊಂಡು ಬಂದ ನಿಯಮವಾಗಿದೆಯಂತೆ ಆ ಭ್ರಷ್ಟ ಪೂಜಾರಿಗೆ ಆದ ಶಿಕ್ಷ ಯಾವುದೆಂದು ವಾಚಕರು ತಿಳಿದುಕೊಳ್ಳಲು ಆತುರರಾಗಿರಬಹುದು ಅದು ಕೂಡಾ ಹಿಂದಿನ ನಿಯಮದಂತೆಯೇ ಆಯಿತು ಆತನು ಪ್ರಾಯಶ್ಚಿತ್ತವನ್ನು ಹೊಂದಿದನು ಇನ್ನು ಮುಂದೆ ಬ್ರಹ್ಮಚಾರಿಯಾಗಿಯೇ ಇರುವೆನೆಂದು ಪ್ರತಿಜ್ಞೆಮಾಡಿದನು ಅನಂತರ ತನ್ನ ಮುಖ್ಯ ಪೂಜಾರಿಯ ಕಾರ್ಯವನ್ನು ವಹಿಸಿದನು!

ಹೇಗಿದೆ ಹಿಂದು ಸಮಾಜದಲ್ಲಿಯ ನ್ಯಾಯ? ವರ್ಣವಾದಿಗಳು ಇಂಥ ಸೈತಾನಿ ನಿಯಮಗಳನ್ನು ಈ ಸಮಾಜದಲ್ಲಿ ಸೇರಿಸಿರುವುದರಿಂದಲೇ ಇದಕ್ಕೆ ಈಗ ಅಧೋಗತಿ ಬಂದಿರುವುದು. ಈ ಇಪ್ಪತ್ತನೆಯ ಶತಮಾನದಲ್ಲಿ ಕೋಚಿನದಂಥ ಸಂಸ್ಥಾನದಲ್ಲಿ ಹೀಗೆ ದರ್ಮದ ಹೆಸರಿನಿಂದ ಅಧರ್ಮ ನಡೆಯಬಹುದೆ?

*

## ಉಪಾಹಾರ ಗೃಹದ ವ್ಯಾಜ್ಯ.

ಪುಣೆಯ ಮನೋಹರ ವಿಶ್ರಾಂತಿ ಗೃಹದಲ್ಲಿ ಒಬ್ಬ ಮುಸ್ಲಿಂ ಮೋಲಿಸ್ ಪ್ರವೇಶಿಸುವಾಗ ಅದರ ಯಜಮಾನನು ಅಡ್ಡಿಪಡಿಸಿದನು ಆದಕಾರಣ ಆತನು ವಿಶ್ರಾಂತಿಗೃಹದ ಯಜಮಾನನ ಮೇಲೆ ವ್ಯಾಜ್ಯ ಹೂಡಿದ್ದನು ಈ ವ್ಯಾಜ್ಯ ಆ. ಮ್ಯಾ. ಅಣ್ಣಾಸಾಹೇಬ ಮಾನೂರಕರ ಇವರ ಮುಂದೆ ನಡೆಯಿತು. ಸಾರ್ವಜನಿಕ ಉಪಾಹಾರಗೃಹದಲ್ಲಿ ಶೆಡ್ಲೂಲ್ಡ ಜಾತಿಯ ಮತ್ತು ಹರಿಜನರಿಗೆ ಪ್ರವೇಶಿಸಲು ಪ್ರತಿಬಂಧವಿರಕೂಡದೆಂದು ಪೋಲಿಸ್ ಆಕ್ಟ ಹೇಳುತದೆಯೇ ವಿನಾ ಮುಸಲ್ಮಾನರಿಗೆ ಅದು ಅನ್ವಯಿಸುವುದಿಲ್ಲ ಆದಕಾರಣ ಉಪಾಹಾರಗೃಹದ ಯಜಮಾನನು ಮುಸಲ್ಮಾನ್ ಮೋಲಿಸನನ್ನು ತಡೆಯಲು ಅಧಿಕಾರವುಳ್ಳವನೆಂದೇ ನ್ಯಾಯಾಧೀಶರು ತೀರ್ಮಾನಿಸಿದರು

## ವಾರ್ತಾ ಸಂಗ್ರಹ.

●

—ಇಂಡಿಯನ್ ಸಿವ್ಹಿಲ್ ಸರ್ವಿಸ್ ಪರೀಕ್ಷೆಗೆ ಇಂಗ್ಲೆಂಡಿಗೆ ಹೋಗಬೇಕಾಗಿದ್ದ ವಿದ್ಯಾರ್ಥಿಗಳು ಈಗ ಅಲ್ಲಿ ಯುದ್ಧ ನಡೆಯುತ್ತಿರುವುದರಿಂದ ಹಿಂದುಸ್ಥಾನದಲ್ಲಿಯೇ ಶಿಕ್ಷಣ ಪಡೆಯುವ ಏರ್ಪಾಟನ್ನು ಮಾಡಿದ ಕಾರಣ ಇಂಗ್ಲೆಂಡಿಗೆ ಹೋಗುವುದು ತಪ್ಪಿತು

—ಪಾಟಣಾದ ಕಮೀಶನರು ಶಾಲೆಯ ಅಧ್ಯಾಪಕರನ್ನೂ ವಿದ್ಯಾರ್ಥಿಗಳ ಪಾಲಕರನ್ನೂ ಕರೆಯಿಸಿ ಕಮ್ಯು ನಿಷ್ಟ ಚಟುವಟಿಕೆಯಿಂದ ದೂರ ಇರಲು ತಿಳಿಸಿದರು.

— ಹಿಂದುಮಹಾಸಭೆಯ ಅಧ್ಯಕ್ಷರಾದ ಬ್ಯಾ ಸಾವರಕರರ ದೇಹಾರೋಗ್ಯ ಸುಧಾರಿಸುತ್ತಿದೆ. ಆದರೂ ಅವರು ಸ್ವಂತ ಕೆಲಸ ನಡಸಲು ಒಂದೆರಡು ತಿಂಗಳುಗಳು ಬೇಕಾಗಬಹುದು.

ದೇಹವೇ
ದೇವಾಲಯ.
★
ಸಂಪಾದಕರು :—
ಶ್ರೀ. ಹರ್ಡೀಕರ
ಮಂಜಪ್ಪನವರು.
★

ಜನಸೇವೆ
ದೇವರಸೇವೆ.
★
ಬಿಡಿ ಸಂಚಿಕೆ ೧ ಆಣೆ
ವಾರ್ಷಿಕ ಚಂದಾ-
ಮೂರು ರೂಪಾಯಿ.
★

# * ಮಹಾಪುರುಷರ ಸ್ಫೂರ್ತಿದಾಯಕ ಸಂದೇಶ. *

## ಭಗವಾನ್ ಬುದ್ಧ.

(೧) ಭ್ರಮರವು ಪುಷ್ಪದ ಸೊಬಗನ್ನೂ ಪರಿಮಳವನ್ನೂ ಇಚ್ಛಿಸದೆ ಹೇಗೆ ಮಕರಂದವನ್ನು ಮಾತ್ರ ಸ್ವೀಕರಿಸುವುದೋ ಹಾಗೆಯೇ ವಿವೇಕಿಯು ಈ ಪ್ರಪಂಚದ ಚಲುವಿಕೆಗೂ ಭೋಗಗಳಿಗೂ ಮನಸ್ಸುಕೊಡದೆ ಇದರ ಅಂತರ್ಯದಲ್ಲಿ ಅಡಗಿರುವ ಆನಂದಾಮೃತವನ್ನು ಮಾತ್ರ ಪಾನಮಾಡುವನು.

(೨) ವಿವೇಕಿಯು ಇತರರ ಅವಿವೇಕವನ್ನೂ ಅನಾಚಾರಗಳನ್ನೂ ಲಕ್ಷಿಸಿ ಅವುಗಳನ್ನು ತಿದ್ದುವುದಕ್ಕೆ ಪ್ರತಿಯಾಗಿ ತನ್ನನ್ನು ತಾನು ತಿದ್ದಿಕೊಳ್ಳಲಿ.

(೩) ನೋಡುವುದಕ್ಕೆ ಬಹು ಸುಂದರವಾಗಿ ತೋರುವ ಪುಷ್ಪವು ಪರಿಮಳವಿಲ್ಲದಿದ್ದರೆ ಹೇಗೆ ಅಪ್ರಯೋಜಕವಾದುದೋ ಹಾಗೇಯೇ ಯಾವ ಉಪದೇಶವು ಉಪದೇಶಕನ ನಡತೆಯಲ್ಲಿಲ್ಲವೋ ಅದು ಕೂಡಾ ಅಪ್ರಯೋಜಕವಾದುದೇ ಸರಿ.

(೪) ಯಾವಾತನ ನುಡಿಯೂ ನಡೆಯೂ ಒಂದಾಗಿದೆಯೋ ಆತನ ಉಪದೇಶವು ಸುಂದರವಾಗಿಯೂ ಸುವಾಸನೆಯುಳ್ಳದ್ದಾಗಿಯೂ ಇರುವ ಪುಷ್ಪದಂತೆ ಪ್ರಯೋಜನಕಾರಿಯಾದುದು.

(೫) ಗಿಡಗಳಲ್ಲಿ ಬಿಡುವ ಬಳ್ಳಿಯ ಹೂವುಗಳಿಂದ ಮಾಲೆಯನ್ನು ಮಾಡಲು ಬರುವಂತೆ ಈ ಪ್ರಪಂಚವೆಂಬ ವೃಕ್ಷದಲ್ಲಿ ವಿವೇಕಿಗಳೆಂಬ ಸುಪುಷ್ಪಗಳು ಬಿಡಲ್ಪಟ್ಟಿದ್ದಾದರೆ ಅವರಿಂದಾಗುವ ಸತ್ಕರ್ಮಗಳೆಂಬ ಕಂಠಮಾಲೆಯನ್ನು ಮಾಡಲು ಅನುಕೂಲವಾಗುವುದು.

(೬) ಶ್ರೀಗಂಧ, ತಾವರೆ ಮೊದಲಾದ ಪುಷ್ಪಗಳ ಪರಿಮಳಕ್ಕಿಂತಲೂ ಸನ್ನಾರ್ಗಿಯ ಕೀರ್ತಿಪರಿಮಳವು ಸರ್ವೋತ್ತಮವಾದುದು. ಅದು ದೇವಲೋಕದಲ್ಲಿ ಕೂಡಾ ಘಮಘಮಿಸುವುದು.

(೭) ಕಮಲವು ಕೆಸರಿನ ಮಧ್ಯದಲ್ಲಿದ್ದರೂ ಹೇಗೆ ಸುವಾಸನೆಯುಳ್ಳದ್ದಾಗಿರುತ್ತದೆಯೋ ಹಾಗೆಯೇ ಜ್ಞಾನಿಯು ಅಜ್ಞಾನಿಗಳ ಮಧ್ಯದಲ್ಲಿದ್ದರೂ ಪರಿಶುದ್ಧನಾಗಿಯೇ ಇರುವನು.

## ಶ್ರೀ ಬಸವಣ್ಣನವರು

(೧) ಎನ್ನ ಕಾಯವ ದಂಡಿಗೆಯ ಮಾಡಯ್ಯ. ಎನ್ನ ಶಿರವ ಸೋರೆಯ ಮಾಡಯ್ಯ. ಎನ್ನ ನರವ ತಂತಿಯ ಮಾಡಯ್ಯ. ಎನ್ನ ಬೆರಳ ಕಡ್ಡಿಯ ಮಾಡಯ್ಯ. ಬತ್ತೀಸರಾಗವ ಹಾಡಯ್ಯ. ಉರದಲೊತ್ತಿ ಬಾರಿಸು ಕೂಡಲ ಸಂಗಮದೇವ.

(೨) ಅಡಿಗಡಿಗೆ ಲಿಂಗವ ನಡರಿಯಡರಿ ನೋಡಿ ನೋಡಿ ಕಂಗಳು ಕಡೆಗೋಡಿವರಿದವೆ ನಗಯ್ಯ. ಎನ್ನ ಶೃಜಲಂಗಳು ಅಲಿಕಲ್ಲುರೂಹಿನಂತೆ ಅರಗಿನ ಪುತ್ಥಳಿಯಂತೆ ತನುಪುಳಕಿತವಾದ ಬೆಮರ ಬಿಂದುಗಳೆಲ್ಲ. ಕೂಡಲ ಸಂಗನ ದರ್ಶನ ಸ್ಪರ್ಶನದಿಂದ ಮನವಲಿದು ನೆರೆ ಪ ಭರವನೇನ ಹೇಳುವೆನಯ್ಯ ?

(೩) ಲೋಕದ ಡೊಂಕ ನೀನೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆ ಮನೆಯ ದುಃಖಕ್ಕೆ ಅಳುವರ ಮೆಚ್ಚ ಕೂಡಲ ಸಂಗಮದೇವ.

(೪) ಎರೆದೆಲೆಯಂತೆ ಒಳಗೊಂದು ಹೊರಗೊಂದಾದರೆ ಮೆಚ್ಚುವನೆ ? ಬಾರದ ಭವಂಗಳ ಬರಿಸುವನಲ್ಲದೆ ಮೆಚ್ಚುವನೆ ? ಆ ಘೋರ ನರಕವನುಣಿಸುವನಲ್ಲದೆ ಮೆಚ್ಚುವನೆ? ಉಡುವಿನ ನಾಲಿಗೆಯಂತೆ ಎರಡಾದರೆ ಕೂಡಲ ಸಂಗಯ್ಯ ಮೆಚ್ಚುವನೆ ?

(೫) ಕೆಂಜ ಕರಿಕನ ನೆನೆದಡೆ ಕರಿಕನಾಗಬಲ್ಲನೆ ? ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ ? ದರಿದ್ರ ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೆ ? ಸಿರಿವಂತ ದರಿದ್ರನ ನೆನೆದಡೆ ದರಿದ್ರನಾಗಬಲ್ಲನೆ ? ಮುನ್ನಿನ ಪುರಾತನರ ನೆನೆದು ಧನ್ಯನಾದಿಹೆನೆಂಬ ಮಾತಿನ ರಂಜಕರ ನೇನೆಂಬೆ ಕೂಡಲ ಸಂಗಮದೇವ ?

*

## ಶ್ರೀ ಸ್ವಾಮಿ ರಾಮತೀರ್ಥರು.

(೧) ಪ್ರಾಚೀನ ಕಾಲದ ಒಬ್ಬ ಮಹಾ ಪುರುಷನ ಗ್ರಂಥವನ್ನೋದುವಾಗ ಆದರಲ್ಲಿಯ ಪ್ರತಿಯೊಂದು ಶಬ್ದವೂ ಸತ್ಯವಾದುದೆಂದೇ ಅಂದಾಜಿಸಿಕೊಂಡು ಓದಿದೆನು. ಆಗ ನನ್ನ ಹೃದಯವು ಸಾಕಷ್ಟು ಪ್ರಕಾಶಿತವಾಗಿರಲಿಲ್ಲ. ಆದುದರಿಂದ ಆ ಗ್ರಂಥದಲ್ಲಿಯ ಸಾದಿನಲ್ಪಟ್ಟ ತತ್ವಗಳ ವಿಚಾರವಾಗಿ ಸೂಕ್ಷ್ಮ ದೃಷ್ಟಿಯಿಂದ ಸ್ವಂತ ಆಲೋಚನೆಯನ್ನು ಮಾಡಿ ಸ್ವಾನುಭವದಿಂದ ಅದರ ನಿಜತ್ವವನ್ನು ಕಂಡುಕೊಳ್ಳಿರಿ.

(೨) ಪ್ರತಿಯೊಂದು ವಿಷಯವನ್ನೂ ಅದರ ಗುಣಾವಗುಣಗಳ ದೃಷ್ಟಿಯಿಂದ ಯೋಚಿಸಿರಿ. ಅದರಲ್ಲಿರುವ ಸತ್ಯಾಂಶದ ಮೇಲಿಂದಲೇ ಅದರ ಬೆಲೆಯನ್ನು ನಿರ್ಧರಿಸಿರಿ. ಆತನು ಮಹಾತ್ಮನಾಗಿದ್ದನೆಂತಲೂ ಆತನ ಚಾರಿತ್ರ್ಯವು ಪವಿತ್ರತರವಾಗಿದ್ದಿತೆಂತಲೂ ತಿಳಿದು ಆತನ ಉಪದೇಶವೂ ಆದರಣೀಯವಾದುದೆಂದೇ ನಂಬಬೇಡಿರಿ. ಆತನ ಚಾರಿತ್ರ್ಯವನ್ನೂ ಉಪದೇಶವನ್ನೂ ಬೇರೆ ಬೇರೆಯಾಗಿಯೇ ಆಲೋಚಿಸಿರಿ.

(೩) ಸ್ವರ್ಗವು ಆಕಾಶದಲ್ಲಾಗಲಿ ಅಥವಾ ನಕ್ಷತ್ರಮಂಡಲದಲ್ಲಾಗಲಿ ಇದೆಯೆಂಬುತಿಳಿಯಬೇಡಿರಿ. ಅದು ನಿಮ್ಮ ಅಂತಃಕರಣದಲ್ಲಿದೆ. ಪರಮಾತ್ಮನು ನಿಮ್ಮ ಹೃದಯದಲ್ಲಿದ್ದಾನೆಂಬುದನ್ನು ಜ್ಞಿನ್ನಾಗಿ ನೆನಪಿನಲ್ಲಿಡಿರಿ.

(೪) ಒಬ್ಬ ರಾಜನ ದರ್ಶನಕ್ಕೆ ಹೋಗುವಾಗ ನೀವು ಹೇಗೆ ಉತ್ತಮೋತ್ತಮ ಉಡುಪುಗಳನ್ನು ಧರಿಸುವಿರೋ ಹಾಗೆಯೇ ಪರಮಾತ್ಮನ ದರ್ಶನವು ನಿಮಗಾಗಬೇಕೆಂದಿದ್ದರೆ ನೀವು ನಿಷ್ಕಾಮವೆಂಬ ಶ್ರೇಷ್ಠತರವಾದ ಉಡುಪನ್ನು ಧರಿಸಲೇಬೇಕು.

*

## ಮಹಾತ್ಮಾ ಗಾಂಧಿಯವರು.

(೧) ಬ್ರಹ್ಮಚರ್ಯ ವ್ರತವನ್ನು ಪಾಲಿಸದಂಥ ವ್ಯಕ್ತಿಯು ಮನುಷ್ಯತ್ವಕ್ಕೆ ದೂರಾಗುತ್ತಾನೆ. ಪಶುಗಳು ಕೂಡಾ ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತವೆ. ಪಶುಗಳು ನಿಯಮಿತಧಿಂದ ವರ್ತಿಸುತ್ತವೆ. ಬ್ರಹ್ಮಚರ್ಯ ವ್ರತ ಪಾಲಿಸದವರಿಗೆ ಪಶುಗಳೆಂದು ಹೇಳುವುದುಂಟು. ಹಾಗೆ ಹೇಳುವುದು ಪಶುಗಳಿಗೆ ಅವಮಾನವನ್ನು ಮಾಡುವಂತೆಯೇ ಸರಿ.

(೨) ಬ್ರಹ್ಮಚರ್ಯ ಭ್ರಷ್ಟನು ಕೊನೆಗೆ ನಪುಂಸಕನಾಗುವನು. ಈಗಿನ ಪತ್ರಿಕೆಗಳಲ್ಲಿರುವ ವೀರ್ಯವರ್ಧಕ ಔಷಧದ ಜಾಹೀರಾತುಗಳನ್ನು ನೋಡಿರಬಹುದು. ಅವುಗಳನ್ನು ನಂಬಿ ಅವುಗಳಿಂದ ಪ್ರಯೋಜನ ಪಡೆದವರು ಯಾರೂ ಇಲ್ಲವೆಂದೇ ಹೇಳಬಹುದು. ಅವುಗಳಿಂದ ಪ್ರಯೋಜನ ಪಡೆಯಲು ಬಯಸುವವರು ಬ್ರಹ್ಮಚರ್ಯ ವ್ರತವನ್ನು ಪಾಲಿಸಬೇಕು. ಅದೊಂದೇ ಅವರಿಗೆ ಉಳಿದಿರುವ ಮಾರ್ಗ.

(೩) ಪುಷ್ಟಿಕರವಾದ ಆಹಾರವನ್ನು ಸೇವಿಸಿದರೆ ಮಾತ್ರ ಬ್ರಹ್ಮಚರ್ಯ ವ್ರತವನ್ನು ಪಾಲಿಸಲು ಸಾಧ್ಯವೆಂಬ ಅಭಿಪ್ರಾಯವು ಸರಿಯಲ್ಲ. ಬಡವರಾಗಿರುವವರು ಕೂಡಾ ಬ್ರಹ್ಮಚರ್ಯ ವ್ರತವನ್ನು ಪಾಲಿಸಬಹುದು. ಬ್ರಹ್ಮಚರ್ಯ ವ್ರತವನ್ನು ಪಾಲಿಸಲು ಹಣವು ಬೇಕಾಗಿಲ್ಲ. ಅದಕ್ಕೆ ಬೇಕಾಗಿರುವುದು ಮನಸ್ಸಿನ ಸಂಕಲ್ಪ ಮಾತ್ರ.

(೪) ಬ್ರಹ್ಮಚರ್ಯ ವ್ರತವನ್ನು ಪಾಲಿಸುವುದು ಕಷ್ಟವೆಂದು ಹೇಳುವುದು ಸರಿಯಲ್ಲ. ಅದು ಸುಲಭವಾದುದು. ಅದಕ್ಕೆ ಬೇಕಾಗಿರುವುದು ಮನಸ್ಸಿನ ಸಂಕಲ್ಪ ಮಾತ್ರ. ಮನಸ್ಸಿನ ಸಂಕಲ್ಪವಿಲ್ಲದೆ ಇರುವುದೇ ಅದರ ಪಾಲನೆಗೆ ಅಡ್ಡಿಯಾಗಿರುವುದು.

(೫) ಬ್ರಹ್ಮಚರ್ಯ ವ್ರತವನ್ನು ಪಾಲಿಸುವುದು ನಮ್ಮ ದುರ್ದೈವದ ಲಕ್ಷಣ ಬ್ರಹ್ಮಚರ್ಯ ಭ್ರಷ್ಟನ ಆತ್ಮವು ಮೂರ್ಛಾವಸ್ಥೆಯಲ್ಲಿರುತ್ತದೆ. ಆತನು ಮದ್ಯಪಾನ ಮಾಡದೆ ಮೂರ್ಛಿತನಾಗಿರುತ್ತಾನೆ. ಮನುಷ್ಯನ ವಿಚಾರಗಳು ಮಲಿನವಾದಾಗಲೇ ಆತನು ಮೂರ್ಛನಾಗುತ್ತಾನೆ.

(೬) ಹುಡುಗರು ೧೨ ವರ್ಷದವರಾದರೆಂದರೆ ಅವರ ಕಡೆಗೆ ವಿಶೇಷ ಲಕ್ಷಿಸಬೇಕು. ಅವರ ಆಚಾರವಿಚಾರಗಳನ್ನು ಪರಿಶೀಲಿಸಬೇಕು. ಅವರು ತಮ್ಮ ಹೊಣೆಗಾರಿಕೆಯನ್ನು ತಿಳಿದುಕೊಳ್ಳುವಂತೆ ಮಾಡಬೇಕು. ಅವರ ನಡತೆಯು ನಿಗ್ರಹವುಳ್ಳದ್ದಾಗುವಂತೆ ಮಾಡಬೇಕು. ಇವೆಲ್ಲ ಒತ್ತಾಯದಿಂದಾಗದೆ ಸ್ವಾಭಾವಿಕ ವಿನೋದದಿಂದಲೇ ನಡೆಯಬೇಕು.

(೪) ಬ್ರಹ್ಮಚಾರಿಯು ಮಿತಾಹಾರಿಯಾಗಿರಬೇಕಲ್ಲದೆ ಅಲ್ಪಾಹಾರಿಯೂ ಆಗಬೇಕಾಗುವುದು ವಿವಿಧ ಪಕ್ವಾನ್ನಗಳನ್ನು ಆತನು ಸೇವಿಸಕೂಡದು. ಗೋದಿ, ಹಾಲು, ಸ್ವಲ್ಪ ಕಾಯಿಪಲ್ಲೆಗಳಿಗಿಂತ ಆತನಿಗೆ ಹೆಚ್ಚಿಗೆ ಬೇಕಾಗುವುದಿಲ್ಲ.

(೫) ಯಾರಿಗೆ ದೇಶಸೇವೆಯ ಅಥವಾ ನಿಜವಾದ ಧಾರ್ಮಿಕ ಜೀವನದ ಇಷ್ಟವುಂಟೋ ಅವರು ವಿವಾಹಿತರಾಗಲಿ. ಅಥವಾ ಅವಿವಾಹಿತರಾಗಲಿ ಬ್ರಹ್ಮಚರ್ಯ ವ್ರತವನ್ನು ಪಾಲಿಸಬೇಕು. ಲಗ್ನ ವಿಧಿಯಲ್ಲಿ ಕಾಮವಾಸನೆಗೆ ಅವಶ್ಯಕವಾದ ಸ್ಥಾನವು ಇದ್ದೇ ತೀರಬೇಕೆಂದು ನನಗೇನೂ ತೋರುವುದಿಲ್ಲ.

*

## ಹಿತವಚನ.

★ ಕುಶಲತೆಯೊಂದಿಗೆ ಚಪಲತೆಯೂ ಬೇಕು.

★ ಕುವಿಚಾರಗಳ ಸಂಗಡ ಕುಕರ್ಮಗಳೂ ಬರುತ್ತವೆ.

★ ಪ್ರಾಮಾಣಿಕತನವನ್ನು ಪ್ರಾಣದಂತೆ ಜೋಕೆಮಾಡು.

★ ಮಾಡಿ ತೋರಿಸುವವ ಆಡಿ ತೋರಿಸುವುದಿಲ್ಲ.

★ ದುಡ್ಡಿಗಿಂತ ಯಶಸ್ಸಿನ ಕಡೆಗೆ ಹೆಚ್ಚು ಲಕ್ಷಿಸಬೇಕು.

**ಪೋಲಂಡಿನ ರಾಜಧಾನಿಯಾದ ವಾರ್ಸಾ ಪಟ್ಟಣದಲ್ಲಿ ನಾಜಿ ಕಾಕ್ಷಸೀ ಕೃತ್ಯವು ಹೇಗೆ ನಡೆಯಿತೆಂಬುದನ್ನು ವಿ. ಜ್ಯುಲಿಯನ್ ಬ್ರಾಯಿನ್ ಎಂಬ ಒಬ್ಬ ಅಮೇರಿಕನ್ ಗೃಹಸ್ಥನು ಕಣ್ಣಾರೆ ನೋಡಿದನು. ಆತನು ಪ್ರಕಟಿಸಿದ ಹೃದಯದ್ರಾವಕ ಸಂಗತಿಗಳು ಈ ಲೇಖನದಲ್ಲಿವೆ.**

# ಕಣ್ಣಾರೆ ಕಂಡ ವಾರ್ಸಾದ ಅಂತ್ಯ ಕಾಲ!

## ಜಗತ್ತಿಗೆ ತಿಳಿಸಿರಿ.

"ನಾನು ತಾರೀಖು ೭-೯-೧೯೩೯ ನೆಯ ದಿನ ರಾತ್ರೆ ಒಂದು ಗಂಟೆಗೆ ಕಗ್ಗತ್ತಲೆಯಲ್ಲಿ ವಾರ್ಸಾ ಸ್ಟೇಶನ್ನಿಗೆ ಹೋದೆನು. ನಾನು ಹೋದ ಗಾಡಿಯೇ ಕೊನೆಯದು. ಸ್ಟೇಷನ್ನಿನ ಮೇಲೆ ಒಂದಾದರೂ ಮೋಟಾರವಿರಲಿಲ್ಲ. ಎಲ್ಲವುಗಳನ್ನೂ ಸೈನ್ಯವು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದಿತು. ಹರಕು ಮುರುಕಾದ ಒಂದು ಕುದುರೆ ಗಾಡಿಯಲ್ಲಿ ನಾನು ಮತ್ತು ನನ್ನ ಪೋಲಿಸ್ ಮಿತ್ರರು ಕುಳಿತುಕೊಂಡು "ಯುರೋಪ ಜಸ್ಕಿ" ಎಂಬ ಊಟದ ಮನೆಗೆ ಹೋದೆವು.

ಮರುದಿನ ಐದು ಉಪ್ಪರಿಗೆಗಳ ಒಂದು ಮನೆ ಬಿದ್ದುದನ್ನು ನೋಡಲು ಹೋದೆನು. ಆ ದರಲ್ಲಿ ೧೪ ಶವಗಳು ದೊರಿತಿದ್ದವು. ಅವುಗಳಲ್ಲಿ ಕೆಲವು ಸ್ತ್ರೀಯರ ಶವಗಳೂ ಇದ್ದವು. ಕೆಲವರ ಕೈಕಾಲುಗಳೇ ಇರಲಿಲ್ಲ. ಅದು ಬಹು ಭಯಂಕರವಾದ ದೃಶ್ಯ. ನನ್ನಿಂದ ನೋಡಲಾಗಲಿಲ್ಲ.

ಆ ಮೇಲೆ ಒಂದು ಹೆರಿಗೆ ಮನೆಗೆ ಹೋದೆನು. ಬಾಂಬಿನ ಮತ್ತು ಗುಂಡಿನ ಸುರಿಮಳೆಯಿಂದ ಅಲ್ಲಿ ೫೦ ತರುಣಿಯರ ಗರ್ಭಪಾತವಾಗಿದ್ದಿತು! ಕೂಸುಗಳಿಗೆ ಕಾಜಿನ ತುಂಡುಗಳು ತಾಕಿ ಅವು ಸತ್ತಿದ್ದವು. ಆ ತಾಯಿಯರು ಆ ದುಃಖವನ್ನು ಧೈರ್ಯದಿಂದ ಸಹಿಸಿಕೊಂಡಿದ್ದರು. ಪೋಲ ಜನರ ಧೈರ್ಯವನ್ನು ನೋಡಿ ನನಗೆ ಆತ್ಚಾಶ್ಚರ್ಯವಾಯಿತು.

ನಾವು ಮಾರ್ಗದಲ್ಲಿ ಹೋಗುತ್ತಿದ್ದಾಗ ಒಂದು ಮನೆಯ ಮೇಲೆ ನಾಜಿ ವಿಮಾನುಗಳು ಬಾಂಬು ಎಸೆದವು. ಆದರಲ್ಲಿದ್ದ ಇಬ್ಬರು ಸ್ತ್ರೀಯರು ಮೃತಪಟ್ಟರು. ನರಿಯಲ್ಲಿಯೇ ಅಲುಗಡ್ಡೆಯನ್ನು ಆರಿಸುತ್ತಿದ್ದ ಏಳು ಜನ ಸ್ತ್ರೀಯರು ಬಾಂಬಿನ ಶಬ್ದವಾದೊಡನೆ ನೆಲದ ಮೇಲೆ ಮಲಗಿದರು. ಅವರಲ್ಲಿ ಇಬ್ಬರು ಬಾಂಬಿನ ಏಟಿನಿಂದ ಸತ್ತರು. ಪಾಪ! ಹೊಟ್ಟೆಗಿಲ್ಲದೆ ಅಲು ಗಡ್ಡೆ ತಿಂದು ಬದುಕಬೇಕೆಂದು ಬಂದವರು ನಾಜಿ ಬಾಂಬಿಗೆ ಆಹುತಿಯಾದರು.

ಆಷ್ಟರಲ್ಲಿ ಒಬ್ಬಳು ಆಳುತ್ತಾ ಓಡಿ ಬಂದಳು. ತನ್ನ ಹಿರಿಯ ಮಗಳು ಬಾಂಬಿಗೆ ಆಹುತಿಯಾದಳೆಂದೇ ಅವಳು ಆಳುತ್ತಿದ್ದಳು.

ಒಬ್ಬ ೭೦ ವರುಷಗಳ ಮುದುಕಿ ಹುಚ್ಚು ಹಿಡಿದವರಂತೆ ಮನೆಯ ಮುಂದೆ ನಿಂತು ಹಲುಬುತ್ತಿದ್ದಳು. ಅವಳ ಮನೆಯು ಬಾಂಬಿನಿಂದ ಸುಟ್ಟು ಬೂದಿಯಾಗಿದ್ದಿತು.

ದಾರಿಯಲ್ಲಿ ೧೪ ಕುದುರೆಗಳೂ ೧೦ ಜನರೂ ಸತ್ತು ಬಿದ್ದುದನ್ನು ನೋಡಿದೆನು. ಎಲ್ಲಾ ಮಾರ್ಗಗಳಲ್ಲಿಯೂ ಜನರು ಕಂಡ ಕಡೆಗೆ ಹೋಗುತ್ತಿದ್ದರು. ಈ ವಿಪತ್ತು ಬಡವರಿಗೂ ಧನಿಕರಿಗೂ ಸಮಾನವಾಗಿಯೇ ಇದ್ದಿತು.

## ದಾರಿಯೇ ಸ್ಮಶಾನ!

ತಾರೀಖು ೧೩-೯-೩೯ ನೆಯ ದಿನದಿಂದ ವಾರ್ಸಾ ಪಟ್ಟಣದ ಮೇಲೆ ತೋಫಿನ ಗುಂಡುಗಳೂ ಬೀಳಲಾರಂಭಿಸಿದವು. ಪ್ರತಿನಿತ್ಯ ೧೦ ರಿಂದ ೩೦ ಸಾವಿರ ಗುಂಡುಗಳು ವಾರ್ಸಾ ಪಟ್ಟಣದ ಮೇಲೆ ಬೀಳಲಾರಂಭಿಸಿದ್ದರಿಂದ ಮಾರ್ಗಗಳಲ್ಲಿ ಸಂಚರಿಸುವುದು ಕೂಡಾ ನಿಂತಿತು.

ತೋಪುಗಳ ಗುಂಡಿನ ಸುರಿಮಳೆ ರಾತ್ರಿ ಬೆಳಗಾಗುವುದರೊಳಗಾಗಿ ಎಲ್ಲೆಲ್ಲಿಯೂ ಹೆಣಗಳ ರಾಸಿ. ದಾರಿಯಲ್ಲಿಯೇ ತಗ್ಗು ತೆಗೆದು ಅಲ್ಲಿಯೇ ಹೆಣಗಳನ್ನು ಹೂಳುತ್ತಿದ್ದರು. ಬಾಂಬು ಮತ್ತು ತೋಪಿನ ಗುಂಡುಗಳ ಹೊಡೆತದಿಂದ ಪಟ್ಟಣದ ಮುಖ್ಯ ಕಟ್ಟಡಗಳೆಲ್ಲಾ ನೆಲಸಮವಾದವು.

ತಾ. ೧೫ ನೆಯ ದಿನ ಜ್ಯೂ ಜನರ ಹೊಸ ವರುಷವಾಗಿದ್ದಿತು. ಆ ದಿನ ನಾಜಿ ವಿಮಾನುಗಳು ಜ್ಯೂ ವಸತಿಯ ಮೇಲೆಯೇ ಬಾಂಬುಗಳನ್ನು ಸುರುವಿ ಅವರ ಒಂದಾದರೂ ಮನೆಯು ಇಲ್ಲದಂತೆ ಮಾಡಿದವು. ಸಾವಿರಾರು ಜ್ಯೂ ಜನರು ವಾಸವಾಗಿರಲು ಸ್ಥಳವಿಲ್ಲದೆ ಅತ್ತಿತ್ತ ಅಲೆದಾಡುತ್ತಿದ್ದರು. ಅವರಲ್ಲಿ ಎಷ್ಟು ಜನರು ಸತ್ತರು ಮತ್ತು ಗಾಯ ಹೊಂದಿದರು ಎಂಬುದು ಗೊತ್ತೇ ಆಗಲಿಲ್ಲ. ಈ ಯುದ್ಧದಲ್ಲಿ ಸೈನಿಕರಿಗಿಂತ ನಾಗರಿಕರೇ ಹೆಚ್ಚು ಸತ್ತರು. ರಣಭೂಮಿಗೆ ಹೋದ ತನ್ನ ಪತಿ ಹೇಗಿದ್ದಾನೆಂದು ಮನೆಯಲ್ಲಿಯು ಪತಿಯು ಚಿಂತಿಸುವುದಕ್ಕಿಂತ ರಣಭೂಮಿಯಲ್ಲಿದ್ದ ಪತಿಯು ಮನೆಯಲ್ಲಿ ತನ್ನ ಪತಿ ಮತಾದಿಗಳು ಬದುಕಿರಬಹುದೇ ಎಂದು ಚಿಂತಿಸುವುದೇ ಹೆಚ್ಚಾಗಿದ್ದಿತು.

## ಕಣ್ಣೀರು!

ನಾನು ಕಣ್ಣಾರೆ ನೋಡಿದ ಸಂಗತಿಗಳನ್ನೆಲ್ಲಾ ಆಕಾಶವಾಣಿಯ ಮೂಲಕ ಇಂಗ್ಲಿಷಿನಲ್ಲಿ ಜಗತ್ತಿಗೆ ತಿಳಿಸಬೇಕೆಂದು ಪೋಲ ಅಧಿಕಾರಿಗಳು ನನಗೆ ಹೇಳಿದರು. ಆದರೆ ನನ್ನ ಅಮೇರಿಕನ್ ಮಿತ್ರರು ಹಾಗೆ ಮಾಡುವುದು ನಮಗೆ ಸರಿಯಲ್ಲವೆಂದು ಹೇಳಿದರು. ಆದರೂ ಪೋಲರ ಹೇಳಿಕೆಯನ್ನು ಮೀರುವುದು ನನ್ನಿಂದಾಗಲಿಲ್ಲ. ಹತ್ತು ನಿಮಿಷಗಳಲ್ಲಿ ನಾನು ಆ ಸಂಗತಿಗಳನ್ನು ತಿಳಿಸಿದೆನು.

ಆಗ ಆಕಾಶವಾಣಿಯ ಕೇಂದ್ರ ಕಟ್ಟಡದ ಮೇಳೆಯೇ ಬಾಂಬು ಬಿದ್ದು ಅದು ಅದುರಿತು. ಆ ಜನರು ಬಹು ಶೂರರು. ಅವರು ಅಲ್ಲಿಯೇ ಇರುತ್ತಿದ್ದರು.

ಪರದೇಶದವರಾದ ನಾವೆಲ್ಲರೂ ಆ ಸ್ಥಳವನ್ನು ಬಿಡಬೇಕೆಂದು ತಾ. ೧೧ ನೆಯ ದಿನ ಆಜ್ಞೆಯಾಯಿತು. ಅಲ್ಲಿ ನಾವು ೩೦ ರಾಷ್ಟ್ರಗಳ ೧೫೦ ಜನರಿದ್ದೆವು. ನಾವು ನೋಟಾರು, ಬಸ್ಸುಗಳಲ್ಲಿ ಕುಳಿತುಕೊಂಡು ಹೊರಟೆವು. ಎಲ್ಲೆಲ್ಲಿಯೂ ಪಟ್ಟಣವು ಹಾಳಾಗಿದ್ದುದನ್ನೂ ಪೋಲ ಜನರಿಗೆ ಘೋರ ಪ್ರಸಂಗ ಬಂದುದನ್ನೂ ನೋಡಿ ನಮ್ಮ ಕಣ್ಣೀರುದುರಿದವು.

ಆ ಮೇಲೆ ಜರ್ಮನ್ ಸಿಪಾಯಿಗಳು ನಮ್ಮ ಹತ್ತಿರ ಬಂದರು. ನಮ್ಮ ಮಕ್ಕಳನ್ನು ಮುದ್ದಾಡಿದರು. ಬೆಚ್ಚನ್ನ ಬಟ್ಟೆಗಳನ್ನು ಕೊಟ್ಟರು. ವಾರ್ಸಾದಲ್ಲಿದ್ದಾಗ ನಮ್ಮ ಮೇಲೆ ಬಾಂಬುಗಳನ್ನು ಎಸೆದ ಜನರೇ ಆಗ ಆ ಪ್ರಕಾರ ಪ್ರೇಮ ತೋರಿಸಿದರು."

## ಜರ್ಮನಿಯು ಇನ್ನೊಂದು ಅಸ್ತ್ರ.

ಜರ್ಮನಿಯು ಈ ವರೆಗೆ ಆನೇಕ ಭಯಂಕರ ಶಸ್ತ್ರಾಸ್ತ್ರಗಳನ್ನು ನಿರಪರಾಧಿಗಳಾದ ನಾಗರಿಕರ ಮೇಲೆ ಕೂಡಾ ಉಪಯೋಗಿಸಿದೆಯಷ್ಟೆ. ಇನ್ನೊಂದು ಆದರ ಭಯಂಕರ ಅಸ್ತ್ರವಿದೆಯಂತೆ. ಆದೇ ವಿಷ ವಾಯು

ಜರ್ಮನಿಯು ಈಗಿನ ಯುದ್ಧದಲ್ಲಿ ಈ ವಿಷವಾಯುವನ್ನು ಬೆಲ್ಜಂದ ಇಬೆನ್-ಇಮೆಲ್ ಎಂಬ ಕೋಟೆಯನ್ನು ವಶಮಾಡಿಕೊಳ್ಳುವಾಗ ಮತ್ತು ಆಲ್ಬರ್ಟ್ ಕಾಲುವೆಯನ್ನು ತೆಗೆದುಕೊಳ್ಳುವಾಗ ಮಾತ್ರ ಉಪಯೋಗಿಸಿದೆ.

ನ್ನು ತಪ್ಪಿಸಲು ಮುಖಕವಚಗಳೇ ಅತ್ಯಪಯುಕ್ತವಾದವುಗಳು. ಇಟಲಿಯ ಹತ್ತಿರ ಇಂಥ ಕವಚಗಳು ೫೦ ಲಕ್ಷ ಇವೆಯಂತೆ. ಈ ಮುಖ ಕವಚವನ್ನು ಯಾರುವೆಪರೂ ಪ್ರಸಾರಗೊಳಿಸುವವರೂ ಜರ್ಮನಿಯಲ್ಲಿ ೧ ಕೋಟಿ ೨೦ ಲಕ್ಷ ಜನರಿದ್ದಾರಂತೆ. ಇಂಗ್ಲಿಷರಾದರೋ ೪॥ ಕೋಟಿ ಜನರಿಗೆ ಈ ಕವಚಗಳನ್ನು ಉಚಿತವಾಗಿ ಹಂಚಿದ್ದಾರೆ.

ಹಿಂದಿನ ಯುದ್ಧದಲ್ಲಿ ತಾ. ೨೨-೪-೧೯೧೫ ನೆಯ ದಿನ ಜರ್ಮನಿಯು ಕ್ಲೋರಿನ್ ಹೆಸೆಯ ಮೋಡವನ್ನೇ ಉಂಟುಮಾಡಿ ಮಿತ್ರ ಸೈನ್ಯದ ಕಡೆಗೆ ಬಿಟ್ಟಿದ್ದಿತು. ಅದು ಗಾಳಿಯಂದ ಮಿತ್ರ ಸೈನ್ಯದಲ್ಲಿ ಸೇರಲು ೫೦೦೦ ಜನರು ಮೃತಪಟ್ಟಿದ್ದರು.

ಕಳೆದ ಯುದ್ಧದಲ್ಲಿ ೩॥ ಲಕ್ಷ ಜನರನ್ನು ಕೊಲ್ಲಲು ೧೨ ಸಾವಿರ ಟನ್ ಹೆವೆಯನ್ನು ಮಾಡಬೇಕಾಗಿದ್ದಿತು. ಈ ವಿಷವಾಯು ಹಿಂದಿನ ಯುದ್ಧದಲ್ಲಿ ೧೦೦ ಕ್ಕೆ ೫೦ ರಂತೆ ಜನರನ್ನು ಕೊಂದಿದ್ದಿತು. ತೋಫಿನ ೫ ಗುಂಡುಗಳಲ್ಲಿ ಎರಡು ಗುಂಡುಗಳು ಈ ವಿಷವಾಯುಗಳುಳ್ಳವುಗಳಿರುತ್ತಿದ್ದವು.

## ಹಿಂದು ಮಹಾಸಭೆಯ ಸೂಚನೆ.

★

ತಾ. ೬-೯-೪೦ ನೆಯ ದಿನ ಮಹಾರಾಷ್ಟ್ರ ಹಿಂದು ಮಹಾಸಭೆಯ ಅಧ್ಯಕ್ಷರಾದ ಶ್ರೀ. ಆಣ್ಣಾರಾವ ಭೋಸಟಕರರು ವೈಸ್‌ರಾಯರಿಗೆ ಈ ಕೆಳಗಿನಂತೆ ತಂತಿ ಮೂಲಕ ತಿಳಿಸಿದ್ದಾರೆ—

"ವೈಸ್‌ರಾಯರ ಕಾರ್ಯಕಾರಿ ಮಂಡಲದಲ್ಲಿ ಮುಸ್ಲಿಂಲೀಗು ಹೆಚ್ಚು ಕೇಳಿರುವ ಪ್ರಾತಿನಿಧ್ಯವನ್ನು ಪ್ರಾಂತಿಕ ಹಿಂದು ಮಹಾ ಸಭೆಯು ನಿಷೇಧಿಸುತ್ತದೆ. ನ್ಯಾಯವಾದ ನಮ್ಮ ಹಕ್ಕುಬಾಧ್ಯತೆಗಳ ಮೇಲೆ ಆಗುವ ಯಾವ ವಿಧವಾದ ಆಕ್ರಮಣವನ್ನೂ ಮಹಾರಾಷ್ಟ್ರದ ಹಿಂದುಗಳಾದ ನಾವು ಸಹಿಸಲಾರೆವೆಂದು ಈ ಮೂಲಕ ಸೂಚಿಸಲಾಗಿದೆ.

ನಮ್ಮ ಜನಸಂಖ್ಯೆಯ ಪ್ರಮಾಣದಂತೆ ನಮಗೆ ನ್ಯಾಯವಾದ ಪ್ರಾತಿನಿಧ್ಯ ದೊರೆಯಬೇಕೆಂದೇ ಅಖಿಲ ಭಾರತ ಹಿಂದು ಮಹಾಸಭೆಯ ಪರವಾಗಿ ನಮ್ಮ ಪ್ರಾರ್ಥನೆಯಿದೆ."

---

—ಬಿಹಾರ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಮುಸ್ಲಿಂಲೀಗಿನ ಮತ್ತು ಪಾಕಿಸ್ತಾನದ ಪ್ರಚಾರಕ್ಕೆ ಶಿಷ್ಟಮಂಡಲಗಳು ಇಷ್ಟರಲ್ಲೇ ಹೋಗಿ ಈ ತಿಂಗಳು ೧೯ ನೆಯ ತಾರೀಖಿನಿಂದ ಪ್ರಚಾರ ಕಾರ್ಯ ನಡೆಸುವವು.

—ಬಂಗಾಲದಲ್ಲಿ ಹಡಗ ಕಟ್ಟುವ ಕಾರ್ಖಾನೆಗಳನ್ನು ಸ್ಥಾಪಿಸಬೇಕಾಗಿ ಬಂಗಾಲ ಸರಕಾರವು ಯೋಚಿಸಿದೆ.

# ಹಿಟಲರನ ರಕ್ಷಣೆಯೆ ಮುಖ್ಯ ಸಾಧನ-ಗೆಸ್ಟಾಪೋ.

卐

ದಾರರ ವಿಶ್ವಾಸಿ ವ್ಯಕ್ತಿಗಳನ್ನು ಮೊದಲನೆ ಮತ್ತು ಎರಡನೆ ಪಂಕ್ತಿಗಳಲ್ಲಿ ನಿಲ್ಲಿಸಲಾಗುವದು. ಇದು ಸ್ಥಳೀಯ ಸಂಸ್ಥೆಗಳ ಪ್ರಬಂಧದ ಮಾತಾಯಿತು. ಗುಪ್ತ ಪೋಲಿಸರು ತಮ್ಮ ಜನರನ್ನು ಮನೆಗಳ ಮೇಲ್ವಿಚಾರಣೆಗಳ ಮುಖ್ಯ ಸ್ಥಳ

ಈ ರೀತಿ ಹಿಟಲರನು ಬರುವ ಮೊದಲೇ ಪೋಲಿಸರು ಖಾಕಿ ಬಟ್ಟೆಯವರ ಮತ್ತು ಪಾರ್ಟಿ ಸದಸ್ಯರ ಮೂಲಕ ಆ ಸ್ಥಾನವನ್ನು ಸುರಕ್ಷಿತವಾಗಿಟ್ಟಿರುವರು. ನಿಶ್ಚಿತ ಜಾಗವನ್ನು ಸೇರುವ ವರೆಗೂ ಹಿಟ್ಲರನು ಮೋಟಾರಿನಿಂದ ಇಳಿಯುವುದಿಲ್ಲ. ಅಲ್ಲಿಯೂ ಪೋಲಿಸರು ಅವನ ರಕ್ಷಣೆಗಾಗಿ ಸಿದ್ಧರಿರುವರು. ಹಿಂದಿನ ಕಾರುಗಳು ಬಂದನಂತರ ಮತ್ತು ನಾಲ್ಕು ಕಡೆಗಳಲ್ಲಿ ಸಿಪಾಯಿಗಳು ಸುತ್ತುಕಟ್ಟಿದ ನಂತರವೇ ಅವನು ತನ್ನ ಕಾರಿನಿಂದಿಳಿದು ಮನೆಯನ್ನು ಪ್ರವೇಶಿಸುವದು.

ಆದರೆ ಹಿಟ್ಲರನು ಯಾರನ್ನೂ— ಹಿಮ್ಲರನನ್ನೂ ಸಹ ನಂಬುವದಿಲ್ಲ. ಹೆಸರಿಗೆ ಮಾತ್ರ "ಲೀಬ್ಸ್ಟ್ಯಾಂಡರ್ಡ್" ಎಂಬ ಒಂದು ಸೈನ್ಯವಿದೆ. ಇದು ಹಿಮ್ಲರನ "M. S." ಸೈನ್ಯದ ಒಂದು ಭಾಗ. ಇದರ ಸಂಚಾಲನೆಯನ್ನು ಜೋಸಫ್ ಡೀಟ್ರಿಚ್ ಎಂಬುವವನು ಮಾಡುವನು.

ಡೀಟ್ರಿಚ್‌ನು ಕೇವಲ ಹಿಟ್ಲರನ ಸಮಕ್ಷಮದಲ್ಲಿ ಮಾತ್ರ ಜವಾಬ್ದಾರನು. ಅವನ ಸೈನಿಕರು ಹಿಂದಿನ ಪ್ರಷ್ಯನ್ ಸೈನಿಕರ ಕಪ್ಪು ಟೋಪಿಗಳನ್ನು ಧರಿಸುವರು. ಈ ಟೋಪಿಗಳ ಮೇಲೆ "ರಾಜಭಕ್ತಿಯು ನನ್ನ ಗೌರವ" ಎಂಬುದು ಅಂಕಿತವಾಗಿರುತ್ತದೆ. ಇವರ ಸಂಖ್ಯೆಯು ೬ ಸಾವಿರವಿದೆ.

ಇವರ ಎತ್ತರವು ಸರಾಸರಿ ೬ ಅಡಿ ಇರುವದು. ಇವರು ತುಂಬಾ ಶಕ್ತಿವಂತರಾದ್ದು ತಮ್ಮ ಉತ್ಪತ್ತಿಯನ್ನು ಶತಮಾನದ ಹಿಂದಿನ ಆರ್ಯರಿಂದ ತೋರಿಸುವರು. ಅವರಲ್ಲಿ ಪ್ರತಿಯೊಬ್ಬ ಸೈನಿಕನೂ ಯುವಕರ ಆಂದೋಳನದ ಸಿಪಾಯಿಯಾಗಿರುವನು. ಪ್ರತಿಯೊಬ್ಬನೂ ಯುವಕನೇ ಆದುದರಿಂದ ಸಾಹಸಿಯಾಗಿರುವನು.

ಜರ್ಮನಿಯ ಲಕ್ಷಾಂತರ ಯುವಕರು ತಮ್ಮನ್ನು "ಲೀಬ್ಸ್ಟ್ಯಾಂಡರ್ಡ್" ಗೆ ಚುನಾಯಿಸುವಂತೆ ಅಪೇಕ್ಷಿಸುವರು. ಪೈಟೂರಿಯನ್ ಗಾರ್ಡಿನ ಸಿಪಾಯಿಗಳಿಗೆ ಆಕ್ಯಂತ ಉತ್ತಮವಾದ ಸರಕಾರಿ ನೌಕರಿಗಳು ದೊರೆಯುವವು. ಅವರ ಮುಖಂಡರು ಸಹ ಇವರಿಗೆ ಪುರಸ್ಕಾರ ಕೊಡುವರು.

ಇವರು ಬಳಿಯ ಕೋಟು ಕರೀ ನೆಕ್‌ಟೈ ಧರಿಸಿ ಫುಲ್ ಹಾಕುವ ದಾಗದಲ್ಲಿ ನಾಜಿ ದಳದ ಗುಂಡಿಯನ್ನು ಅಂಟಿಸಿಕೊಳ್ಳುವರು. ಇವರು ಬರ್ಲಿನ್ ಮತ್ತು ಬರ್ಚ್‌ಟ್ಸ್ ಗಾರ್ಡನ್‌ನಲ್ಲಿ ಹಿಟ್ಲರನ ರಕ್ಷಣೆಯಲ್ಲಿ ಪ್ರವೃತ್ತರಾಗಿದ್ದು ನೋಟಾರು ವಿಮಾನ ಮತ್ತು ಯುದ್ಧದ ಹಡಗಗಳಲ್ಲಿ ಅವನೊಡನೆ ಪ್ರವಾಸಮಾಡುತ್ತ ಅವನಿಗಾಗಿ ತಮ್ಮ ಪ್ರಾಣವನ್ನೂ ಸಹ ಅರ್ಪಿಸಲು ಸಿದ್ಧರಾಗಿರುವುದನ್ನು ನೋಡಬಹುದು. ಅವನು ಅವರಿಗೆ ಶಿಕ್ಷಣಕೊಡುವುದಲ್ಲದೆ ಅವರೊಡನೆ ಪ್ರೀತಿಯಿಂದ ವ್ಯವಹರಿಸುವನು. ಅವರಾದರೂ ತಾವು ಏನಾದರೂ ತಪ್ಪು ಮಾಡಿದಲ್ಲಿ ಕೊನೆಗೆ ಅವನ ಬಳಿಗೇ ಹೋಗಬೇಕಾಗಿರುವುದರಿಂದ ಕಾನೂನು ರೀತಿ ನಡೆಯಲು ಸಂತೋಷಪಡುವರು.

ಈ ದಳದ ಇತರ ನೌಕರರೂ ಇರುವರು. ಇವರು ಗೆಸ್ಟಾಪೋನ A. ಇಲಾಖೆಗೆ ಸಹಾಯಮಾಡುವರು. ಅನುಭವಿಗಳಾದ ಗುಪ್ತ

# ಜಗತ್ತಿನಲ್ಲೆಲ್ಲ ಅತ್ಯಂತ ಸುರಕ್ಷಿತನಾಗಿರುವ ಅತ್ಯಾಚಾರೀ

## 卐 ಸರ್ವಾಧಿಕಾರಿ. 卐

卐

### ಅವನು ತನ್ನ ರಕ್ಷಣೆಯನ್ನು ಹೇಗೆ ಮಾಡಿಕೊಳ್ಳುವನೋ ಇಲ್ಲಿ ನೋಡಿರಿ.

★

ಹಿಟ್ಲರನು ಇದು ವರೆಗೆ ಸುರಕ್ಷಿತವಾಗಿರುವುದರ ಮುಖ್ಯ ಕಾರಣವೆಂದರೆ ಅವನ ಪ್ರಬಂಧವೇ. ಎಲ್. ಕೈಪೋನ್ ನಂತಹ ಚತುರನಾದ ರಾಜನೀತಿಜ್ಞನ ಜೀವನವು ಸಹ ಭಯದಿಂದಲೇ ಕೂಡಿತ್ತು. ರಾಜನೀತಿಯಲ್ಲಿ ಅವನು ಎಲ್ಲರನ್ನೂ ಮೀರಿಸಿದ್ದನಾದರೂ ತನ್ನ ಸ್ವಂತ ಪ್ರಾಣದ ವಿಚಾರದಲ್ಲಿ ಮಾತ್ರ ನಿಶ್ಚಿಂತೆಯಿಂದಿರಲಿಲ್ಲ. ಹಿಟ್ಲರ್ ಮತ್ತು ಅವನ ಅಂಗರಕ್ಷಕರು ಇದೇ ರೀತಿಯಲ್ಲೇ ತಮ್ಮ ಕೆಲಸವನ್ನು ಮಾಡುತ್ತಿರುವರು. ಅವನ ಸರಕಾರದ ಸಮಸ್ತ ಶಕ್ತಿಗಳೂ ಅವನ ರಕ್ಷಣೆಗಾಗಿಯೇ ಮೀಸಲಾಗಿವೆ. ಈ ಪರಿಣಾಮದಿಂದಲೇ ಇವನು ಇತಿಹಾಸದಲ್ಲಿ ಎಲ್ಲಕ್ಕಿಂತ ಹೆಚ್ಚು ಸುರಕ್ಷಿತನಾದ ಅತ್ಯಾಚಾರಿಯಾಗಿದ್ದಾನೆ.

ಇವನ ರಕ್ಷಣೆಯ ಮುಖ್ಯ ಸಾಧನ ಹಿಮ್ಲರ್. ಇವನೊಬ್ಬ ಚತುರ ಗುಪ್ತಪೋಲಿಸಿನ ಮುಖಂಡನಾಗಿದ್ದಾನೆ. ಇವನ ಆಧೀನದಲ್ಲಿ ೨ ಲಕ್ಷ ಗೆಸ್ಟಾಪೋ (ಗುಪ್ತ ಪೋಲಿಸರು) ಇರುವರು. ಯಾವುದೇ ಒಂದು ಸಾಮಾಜಿಕ ಸಮಾರಂಭದಲ್ಲಿ ಆಗಲಿ ಇವರು ತಮ್ಮ ಮುಖಂಡನ ರಕ್ಷಣೆಗೆಂದು ಸಿದ್ಧರಾಗುವರು. ಇದಕ್ಕೆ ಸೇರಿದವರು ಕಪ್ಪು ವಸ್ತ್ರಗಳನ್ನು ಧರಿಸುವರು. ತಮ್ಮ ಪ್ರಭಾವವಿರುವ ಸ್ಥಾನಿಕ ಪೋಲಿಸರ ಸಹಾಯದಿಂದ ಕೆಲಸಮಾಡುವರು. ಹಿಟಲರನ ಪರೀಕ್ಷೆಗೆ ಮೊದಲು ಅವನ ಒಬ್ಬ ಅಧಿಕಾರಿಯು ನಗರವನ್ನು ಪರೀಕ್ಷಿಸುವನು. ಯಾವ ಕಾರ್ಯಕ್ಕೇ ಆಗಲಿ ಗುಪ್ತ ಪೋಲಿಸರು ಸ್ಥಾನ ಪೋಲಿಸಿನವರ ಮುಖ ನೋಡುತ್ತ ಕುಳಿತುಕೊಳ್ಳುವದಿಲ್ಲ.

ಗೆಸ್ಟಾಪೋವನ್ನು ಬಟಾಲಿಯನ್ನುಗಳಾಗಿ ನಿಂಗಡಿಸಿ ಪ್ರತಿಯೊಂದು ನಗರದಲ್ಲಿಯೂ ಸೈನ್ಯದ ಪ್ರಧಾನ ಕಾರ್ಯಾಲಯವಿರುವುದು ಹಿಟ್ಲರನು ಯಾವಾಗ ನಗರವನ್ನು ನೋಡಲು ಹೊರಟರೂ ಸ್ಥಾನಿಕ ಕರ್ನಲನು ಸ್ವಯಂ ವ್ಯವಸ್ಥೆಯನ್ನು ಮಾಡುವನು. ಪರೇಡ್ ಮಾಡಿಸಿ ಭಾಷಣಮಾಡುವನು. ಕ್ಯಾಪ್ಟನ್ನನಿಗೆ ನಗರದ ಪ್ರತಿಯೊಂದು ಭಾಗದ ವಿಚಾರದಲ್ಲಿ ಆದೇಶಕೊಡುವನು. ಪೋಲಿಸರು ಪ್ರತಿಯೊಂದು ಮನೆಗೂ ಹೋಗಿ ಆ ಪರಿವಾರದವರು ಅತಿಥಿಗಳ ಮತ್ತು ಇತರರ ಆಚರಣೆಗೆ ಜವಾಬ್ದಾರರಾಗಿರಬೇಕೆಂಬುದನ್ನು ಸೂಚಿಸುವರು. ಹೊರಗಿನಿಂದ ಯಾವ ಅತಿಥಿಗ್ಗೂ ಬರಲು ಅನುಮತಿಯಿರುವುದಿಲ್ಲ. ಕೂಲಿಕಾರರಿಂದ ಮೊದಲುಗೊಂಡು ಜಮೀನದಾರನ ವರೆಗೂ ಈ ರೀತಿ ಜವಾಬ್ದಾರಿಯನ್ನು ಹೊರಬೇಕಾಗುವುದು.

ಸಮುದಾಯದ ಮುಂದಿನ ಶ್ರೇಣಿಯನ್ನು ಚುನಾಯಿಸಿಕೊಂಡು ಸ್ಥಾನಿಕ ನಾಜೀ ಜವಾಬ್ದಾರಿಯ ಗುಪ್ತ ಪೋಲಿಸರು. ಪೋಲಿಸರು ನಾಜೀ ಸಂಸ್ಥೆಗಳ ಚತುರ ಮುಖಂಡರು ಕೂಲಿಕಾರರ ದಳಗಳು ಎ. ಆರ್. ಪಿ. ಬಂಡಾಯೂತ್ ಮೂವೆಂಟ್ ಮುಂತಾದ ದಳಗಳ ಮೇಲ್ವಿಚಾರಣೆಯ ಕಾರಣದಿಂದ ದಂಗೆಕೋರರ ವಿರೋಧಿಗಳ ಬೇಳೆಯು ಬೇಯುವುದಕ್ಕೆ ಅವಕಾಶವಿಲ್ಲದಂತಾಗಿದೆ. ಏಕೆಂದರೆ ಸಮಸ್ತ ಸಮಾಜವೇ ಅವರ ಕೈಯಲ್ಲಿ ಇದೆ.

ನಿಜವಾಗಿ ನೋಡಿದರೆ ಇದು ವರೆಗೆ ಹಿಟಲರನ ಮೇಲೆ ಒಂದೇ ಒಂದು ಆಕ್ರಮಣ ನಡೆದಿದೆ. ಅವನು ಗೋರಿಂಗನ ಮೊದಲನೆಯ ಪತ್ನಿಯ ಶವಸಂಸ್ಕಾರಕ್ಕಾಗಿ ಬರ್ಲಿನ್ನಿನಿಂದ ಹೊರಗೆ ಸ್ಕೂಲ್ ಫೀಡ್ ಫಾರೆಸ್ಟಿಗೆ ಹೋಗುತ್ತಿದ್ದನು. ಇದು ಅವನು ಡಿಕ್ಟೇಟರಾಗುವುದಕ್ಕಿಂತ ಮುಂಚಿನ ಸುದ್ದಿ. ೪೦೦ ಗಜ ದೂರದಲ್ಲಿ ಒಂದು ಮರದ ಮೇಲೆ ಅಡಗಿದ್ದವನೊಬ್ಬನು ಗುಂಡು ಹಾರಿಸಿದನು. ಇದು ಹಿಟ್ಲರನ ಜೊತೆಗಿದ್ದವನಿಗೆ ತಗಲಿತು. ಈ ರೀತಿ ಹಿಟ್ಲರನ ಪ್ರಾಣಕ್ಕೆ ಅನೇಕ ಮಂದಿ ಗಿರಾಕಿಗಳಿರುವರು. ಇದು ವರೆಗೆ ಅವನನ್ನು ಕೊಲ್ಲಲು ಅನೇಕರು ಯತ್ನಿಸಿರುವರಾದರೂ ಅವರಿಗೆ ಸರಿಯಾದ ಸಮಯ ಮಾತ್ರ ದೊರೆತಿರುವುದಿಲ್ಲ. S.

★

ಗುಂಡು ಹಾರಿಸುವ ಅಧಿಕಾರವಿಲ್ಲ. ಯಾರ ಮೇಲಾದರೂ ಸಂದೇಹವುಂಟಾದರೆ ಆ ವ್ಯಕ್ತಿಯನ್ನು ಜೀವ ಸಹಿತವಾಗೇ ಹಿಡಿದುಕೊಳ್ಳಬಹುದು. ಈ ಗುಪ್ತ ಪೋಲಿಸರು ಭಯವೇನೆಂಬುದನ್ನೇ ಅರಿಯರು. ಆದರೆ ಅವರ ಮನಸ್ಸಿನಲ್ಲಿ ಯಾವಾಗಲೂ ಸಂದೇಹವು ಮನೆಮಾಡಿಕೊಂಡಿರುವುದು.

ಸ್ಥಳೀಯ ಪೋಲಿಸರು ಗುಂಪಿನ ಮುಂದುಗಡೆ ಇರುವವರು ಯಾರೇ ಆಗಲಿ ಗುಂಡು ಹಾರಿ

++++++++++++++++++++++++++++

ಅನುವಾದಕ—

ಶ್ರೀ. ಚಂದ್ರಮಾಧವ ಶರ್ಮ.

++++++++++++++++++++++++++++

ಸುವುದಾಗಲಿ ಬಾಂಬು ಹಾಕುವುದಾಗಲಿ ಅಕೃತ್ಯ ನಡೆಸುವರೆಂಬುದನ್ನು ಹತ್ತೆ ಮಾಡುವುದರಲ್ಲೇ ಯಾವಾಗಲೂ ಮಗ್ನರಾಗಿರುವರು. ಸಂಶಯವುಂಟಾದ ಕೂಡಲೆ ಗುಂಪಿನ ಮೇಲೆ ಬಿದ್ದು ಬಿಡುವರು. ಆದರೆ ಆಗ ಅಪರಾಧಿಯು ದೊರೆಯುವುದು ದುರ್ಲಭವಾಗುವುದಾದರೂ ಗುಂಪಿನಲ್ಲಿ ಗಡಿಬಿಡಿಯುಂಟಾಗಿ ಹತ್ಯಾಕಾರಿಯ ಲಕ್ಷ್ಯವು ಬೇರೆ ಕಡೆಗೆ ಹೊರಳುವುದಲ್ಲದೆ ಹತ್ತಿರದ ಇತರರು ಅವನನ್ನು ಹಿಡಿದುಬಿಡುವರು. ಅವನ ದೃಷ್ಟಿಯು ಬೇರೆಯಾಗಬೇಕೆಂಬುದೇ ಅವರ ಉದ್ದೇಶ.

ಹಿಟ್ಲರನಿಗೆ ಈ ಸಂಸ್ಥೆಯ ಮೇಲೆ ತುಂಬಾ ವಿಶ್ವಾಸ. ಹಿಟ್ಲರನಿಗೆ ಯಾವಾಗ ಮೋಟಾರು ಹತ್ತಬೇಕು, ಸಲಾಂಗೆ ಉತ್ತರ ಕೊಡಲು ಯಾವಾಗ ಕೈ ಎತ್ತಬೇಕು, ಯಾವಾಗ ಕಾರಿನಲ್ಲಿ ಕುಳಿತುಕೊಳ್ಳಬೇಕು ಇವೆಲ್ಲವನ್ನು ಸೂಚಿಸುತ್ತಿರುವರು. ನೋಟಾರಿನಲ್ಲಿಯಾದರೂ ಎಂತಹ ವ್ಯವಸ್ಥೆ ಇದೆ ಎನ್ನುವಿರಿ? ಗುಂಡಿನೇಟುಗಳ ಪ್ರಭಾವವೇ ಬೇಳದಂತಿರುವ ಗಾಜಿನಿಂದ ಮಾಡಲ್ಪಟ್ಟಿರುವ ಗುರಾನಿಗಳಿರುವವು. ಇವೆ ನೋಟಾರಿನ ಎರಡು ಕಡೆಗಳಲ್ಲೂ ಇರುವವು.

## ಓದಿ ಆಶ್ಚರ್ಯಪಟ್ಟೀರಿ!

೧೯೩೧ ರಲ್ಲಿ ಒಂದು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಬಾಲ ವಿಧವೆಯರ ಸಂಖ್ಯೆಯು ೭೫೯ ಇದ್ದಿತು. ೧೯೩೧ ರಲ್ಲಿ ಅದು ಹೆಚ್ಚಿ ೧೫೧೫ ಆಯಿತು.

* * *

೧೯೩೩ ರ ವರದಿಯು ಪ್ರಕಟವಾಗುವ ಮೊದಲು ಭಾರತದಲ್ಲಿ ಒಟ್ಟು ೩೧ ವಿಮಾ ಸಂಸ್ಥೆಗಳು ಇದ್ದವು. ಅವುಗಳ ಪೈಕಿ ೧೬ ನಮ್ಮ ದೇಶವು. ೧೯೩೩ ರ ವರದಿಯ ನೇಳಿಗೆ ಅವುಗಳ ಸಂಖ್ಯೆಯು ೩೪ ಆಗಿ ೧೯ ಸ್ವದೇಶಿಯವಾಗಿದ್ದವು. ೧೫ ವಿದೇಶಿಯವು. ಈ ಕಂಪನಿಗಳಲ್ಲಿ ಒಟ್ಟು ೩೩ ಕೋಟಿ ರೂ. ಗಳ ಹೊಸ ಉದ್ಯಮವು ನಡೆಯಿತು. ಭಾರತದ ಕಂಪನಿಗಳು ಒಟ್ಟು ೨೪ ಕೋಟಿ ರೂ. ಗಳ ಮತ್ತು ವಿದೇಶಿ ಕಂಪನಿಗಳು ೯ ಕೋಟಿ ರೂ. ಗಳ ಕೆಲಸವನ್ನು ನಡೆಸಿದವು.

* * *

ಜಗತ್ತಿನಲ್ಲಿ ನಡೆಯುವ ವಜ್ರದ ವ್ಯಾಪಾರದ ಪೈಕಿ ಸೇ. ೯೦ ರಷ್ಟು ಇಂಗ್ಲೆಂಡಿನಲ್ಲಿ ನಡೆಯುತ್ತದೆ.

# ಹಿಟಲರನ ರಕ್ಷಣೆಯೆ ಮುಖ್ಯ ಸಾಧನ-ಗೆಸ್ಟಾಪೋ.

卐

## ಜಗತ್ತಿನಲ್ಲೆಲ್ಲ ಅತ್ಯಂತ ಸುರಕ್ಷಿತನಾಗಿರುವ ಅತ್ಯಾಚಾರೀ

## 卐 ಸರ್ವಾಧಿಕಾರಿ. 卐

卐

### ಅವನು ತನ್ನ ರಕ್ಷಣೆಯನ್ನು ಹೇಗೆ ಮಾಡಿಕೊಳ್ಳುವನೋ ಇಲ್ಲಿ ನೋಡಿರಿ.

★

ದಾರರ ವಿಶ್ವಾಸಿ ವ್ಯಕ್ತಿಗಳನ್ನು ಮೊದಲನೆ ಮತ್ತು ಎರಡನೆ ಪಂಕ್ತಿಗಳಲ್ಲಿ ನಿಲ್ಲಿಸಲಾಗುವದು. ಇದು ಸ್ಥಳೀಯ ಸಂಸ್ಥೆಗಳ ಪ್ರಬಂಧದ ನಾಕಾಯಿತು. ಗುಪ್ತ ಪೋಲಿಸರು ತಮ್ಮ ಜನರನ್ನು ಮನೆಗಳ ನೇಲ್ಬಾವಣಿಗಳ ಮುಖ್ಯ ಮುಖ್ಯ ಸ್ಥಳಗಳಲ್ಲಿ ಸಹ ನಿಲ್ಲಿಸುವರು. ಇವರಿಗೆ ಕಲೆಗೆ ಗುಂಡು ಹಾರಿಸುವ ಅಧಿಕಾರವಿಲ್ಲ. ಯಾರ ಮೇಲಾದರೂ ಸಂದೇಹವುಂಟಾದರೆ ಆ ವ್ಯಕ್ತಿಯನ್ನು ಜೀವ ಸಹಿತವಾಗೇ ಹಿಡಿದುಕೊಳ್ಳಬಹುದು. ಈ ಗುಪ್ತ ಪೋಲಿಸರು ಭಯನೇನೆಂಬುದನ್ನೇ ಅರಿಯರು. ಆದರೆ ಅವರ ಮನಸ್ಸಿನಲ್ಲಿ ಯಾವಾಗಲೂ ಸಂದೇಹವು ಮನೆಮಾಡಿಕೊಂಡಿರುವುದು.

ಸ್ಥಳೀಯ ಪೋಲಿಸರು ಗುಂಪಿನ ಮುಂದುಗಡೆ ಇರುವವರು ಯಾರೇ ಆಗಲಿ ಗುಂಡು ಹಾರಿಸುವುದಾಗಲಿ ಬಾಂಬು ಹಾಕುವುದಾಗಲಿ ಅಕೃತ್ಯ ನಡೆಸುವರೆಂಬುದನ್ನು ಪತ್ತೆ ಮಾಡುವುದರಲ್ಲೇ ಯಾವಾಗಲೂ ಮಗ್ನರಾಗಿರುವರು. ಸಂಶಯವುಂಟಾದ ಕೂಡಲೆ ಗುಂಪಿನ ಮೇಲೆ ಬಿದ್ದು ಬಿಡುವರು. ಆದರೆ ಆಗ ಅಪರಾಧಿಯು ದೊರೆಯುವುದು ದುರ್ಲಭವಾಗುವುದಾದರೂ ಗುಂಪಿನಲ್ಲಿ ಗಡಿಬಿಡಿಯುಂಟಾಗಿ ಹತ್ಯಾಕಾರಿಯ ಲಕ್ಷ್ಯವು ಬೇರೆ ಕಡೆಗೆ ಹೊರಳುವುದಲ್ಲದೆ ಹತ್ತಿರದ ಇತರರು ಅವನನ್ನು ಹಿಡಿದುಬಿಡುವರು. ಅವನ ದೃಷ್ಟಿಯು ಬೇರೆಯಾಗಬೇಕೆಂಬುದೇ ಅವರ ಉದ್ದೇಶ.

ಹಿಟ್ಲರನಿಗೆ ಈ ಸಂಸ್ಥೆಯ ಮೇಲೆ ತುಂಬಾ ವಿಶ್ವಾಸ. ಹಿಟ್ಲರನಿಗೆ ಯಾವಾಗ ಮೋಟಾರು ಹತ್ತಬೇಕು, ಸಲಾಂಗೆ ಉತ್ತರ ಕೊಡಲು ಯಾವಾಗ ಕೈ ಎತ್ತಬೇಕು, ಯಾವಾಗ ಕಾರಿನಲ್ಲಿ ಕುಳಿತುಕೊಳ್ಳಬೇಕು ಇವೆಲ್ಲವನ್ನು ಸೂಚಿಸುತ್ತಿರುವರು. ನೋಟಾರಿನಲ್ಲಿಯಾದರೂ ಎಂತಹ ವ್ಯವಸ್ಥೆ ಇದೆ ಎನ್ನುವಿರಿ? ಗುಂಡಿನೇಟುಗಳ ಪ್ರಭಾವವೇ ಬೀಳದಂತಿರುವ ಗಾಜಿನಿಂದ ಮಾಡಲ್ಪಟ್ಟಿರುವ ಗುರಾಣಿಗಳಿರುವವು. ಇವು ಮೋಟಾರಿನ ಎರಡು ಕಡೆಗಳಲ್ಲೂ ಇರುವವು.

ಈ ರೀತಿ ಹಿಟಲರನು ಬರುವ ಮೊದಲೇ ಪೋಲಿಸರು ಖಾಕಿ ಬಟ್ಟೆಯವರ ಮತ್ತು ಷಾರ್ಟ್ ಸದಸ್ಯರ ಮೂಲಕ ಆ ಸ್ಥಾನವನ್ನು ಸುರಕ್ಷಿತವಾಗಿಟ್ಟಿರುವರು. ನಿಶ್ಚಿತ ಜಾಗವನ್ನು ಸೇರುವ ವರೆಗೂ ಹಿಟ್ಲರನು ನೋಟಾರಿನಿಂದ ಇಳಿಯುವುದಿಲ್ಲ. ಅಲ್ಲಿಯೂ ಪೋಲಿಸರು ಅವನ ರಕ್ಷಣೆಗಾಗಿ ಸಿದ್ಧರಿರುವರು. ಹಿಂದಿನ ಕಾರುಗಳು ಬಂದನಂತರ ಮತ್ತು ನಾಲ್ಕು ಕಡೆಗಳಲ್ಲಿ ಸಿಪಾಯಿಗಳು ಸುತ್ತುಕಟ್ಟಿದ ನಂತರವೇ ಅವನು ತನ್ನ ಕಾರಿನಿಂದಿಳಿದು ಮನೆಯನ್ನು ಪ್ರವೇಶಿಸುವದು.

ಆದರೆ ಹಿಟ್ಲರನು ಯಾರನ್ನೂ– ಹಿಮ್ಲರನನ್ನೂ ಸಹ ನಂಬುವದಿಲ್ಲ. ಹೆಸರಿಗೆ ಮಾತ್ರ "ಲೀಬ್ಸ್ಟ್ಯಾಂಡರ್ಡ್" ಎಂಬ ಒಂದು ಸೈನ್ಯವಿದೆ. ಇದು ಹಿಮ್ಲರನ "M. S." ಸೈನ್ಯದ ಒಂದು ಭಾಗ. ಇದರ ಸಂಚಾಲನೆಯನ್ನು ಜೋಸಫ್ ಡೀಟ್ರಿಚ್ ಎಂಬುವವನು ಮಾಡುವನು.

ಡೀಟ್ರಿಚ್‌ನು ಕೇವಲ ಹಿಟ್ಲರನ ಸಮಕ್ಷಮದಲ್ಲಿ ಮಾತ್ರ ಜವಾಬ್ದಾರನು. ಅವನ ಸೈನಿಕರು ಹಿಂದಿನ ಪ್ರಷ್ಯನ್ ಸೈನಿಕರ ಕಪ್ಪು ಟೋಪಿಗಳನ್ನು ಧರಿಸುವರು. ಈ ಟೋಪಿಗಳ ಮೇಲೆ "ರಾಜಭಕ್ತಿಯು ನನ್ನ ಗೌರವ" ಎಂಬುದು ಅಂಕಿತವಾಗಿರುತ್ತದೆ. ಇವರ ಸಂಖ್ಯೆಯು ೭ ಸಾವಿರವಿದೆ.

ಇವರ ಎತ್ತರವು ಸರಾಸರಿ ೬ ಅಡಿ ಇರುವದು. ಇವರು ತುಂಬಾ ಶಕ್ತಿವಂತರಿದ್ದು ತಮ್ಮ ಉತ್ಪತ್ತಿಯನ್ನು ಶತಮಾನದ ಹಿಂದಿನ ಆರ್ಯರಿಂದ ತೋರಿಸುವರು. ಅವರಲ್ಲಿ ಪ್ರತಿಯೊಬ್ಬ ಸೈನಿಕನೂ ಯುವಕರ ಆಂದೋಳನದ ಸಿಪಾಯಿಯಾಗಿರುವನು. ಪ್ರತಿಯೊಬ್ಬನೂ ಯುವಕನೇ ಆದುದರಿಂದ ಸಾಹಸಿಯಾಗಿರುವನು.

ಜರ್ಮನಿಯ ಲಕ್ಷಾಂತರ ಯುವಕರು ತಮ್ಮನ್ನು "ಲೀಬ್ಸ್ಟ್ಯಾಂಡರ್ಡ್" ಗೆ ಚುನಾಯಿಸುವಂತೆ ಆಪೇಕ್ಷಿಸುವರು. ಪ್ರೆಟೋರಿಯನ್ ಗಾರ್ಡಿನ ಸಿಪಾಯಿಗಳಿಗೆ ಅತ್ಯಂತ ಉತ್ತಮವಾದ ಸರಕಾರಿ ನೌಕರಿಗಳು ದೊರೆಯುವವು. ಅವರ ಮುಖಂಡರು ಸಹ ಇವರಿಗೆ ಪುರಸ್ಕಾರ ಕೊಡುವರು.

ಇವರು ಬಿಳಿಯ ಕೋಟು, ಕರೀ ನೆಕ್‌ಟೈ ಧರಿಸಿ ಫೀಲ್ಡ್ ಹಾಕುವ ಜಾಗದಲ್ಲಿ ನಾಜಿ ದಳದ ಗುಂಡಿಯನ್ನು ಅಂಟಿಸಿಕೊಳ್ಳುವರು. ಇವರು ಬರ್ಲಿನ್ ಮತ್ತು ಬರ್ಚ್‌ಟ್ಸ್ ಗಾರ್ಡನ್‌ನಲ್ಲಿ ಹಿಟ್ಲರನ ರಕ್ಷಣೆಯಲ್ಲಿ ಪ್ರವೃತ್ತರಾಗಿದ್ದು ನೋಟಾರು ವಿಮಾನ ಮತ್ತು ಯುದ್ಧದ ಹಡಗುಗಳಲ್ಲಿ ಅವನೊಡನೆ ಪ್ರವಾಸಮಾಡುತ್ತ ಅವನಿಗಾಗಿ ತಮ್ಮ ಪ್ರಾಣವನ್ನೂ ಸಹ ಅರ್ಪಿಸಲು ಸಿದ್ಧರಾಗಿರುವುದನ್ನು ನೋಡಬಹುದು. ಅವನು ಅವರಿಗೆ ಶಿಕ್ಷಣಕೊಡುವುದಲ್ಲದೆ ಅವರೊಡನೆ ಪ್ರೀತಿಯಿಂದ ವ್ಯವಹರಿಸುವನು. ಅವರಾದರೂ ತಾವು ಏನಾದರೂ ತಪ್ಪು ಮಾಡಿದಲ್ಲಿ ಕೊನೆಗೆ ಅವನ ಬಳಿಗೇ ಹೋಗಬೇಕಾಗಿರುವುದರಿಂದ ಕಾನೂನು ರೀತಿ ನಡೆಯಲು ಸಂತೋಷಪಡುವರು.

ಈ ದಳದ ಇತರ ನೌಕರರೂ ಇರುವರು, ಇವರು ಗೆಸ್ಟಾಪೋನ A. ಇಲಾಖೆಗೆ ಸಹಾಯಮಾಡುವರು. ಆನು ಭವಿಷ್ಯತ್ತಿಗಾಗಿ ಗುಪ್ತ ಪೋಲಿಸರು. ಪೋಲಿಸರು ನಾಜೀ ಸಂಸ್ಥೆಗಳ ಚತುರ ಮುಖಂಡರು ಕೂಲಿಕಾರರ ದಳಗಳು ಎ. ಆರ್. ಪಿ. ಬಂಡಾಯೂತ್ ಮೂವೆಂಟ್ ಮುಂತಾದ ದಳಗಳ ಮೇಲ್ವಿಚಾರಣೆಯ ಕಾರಣದಿಂದ ದಂಗೆಕೋರರ ವಿರೋಧಿಗಳ ಬೇಳೆಯು ಬೇಯುವುದಕ್ಕೆ ಅವಕಾಶವಿಲ್ಲದಂತಾಗಿದೆ. ಏಕೆಂದರೆ ಸಮಸ್ತ ಸಮಾಜವೇ ಅವರ ಕೈಯಲ್ಲಿ ಇದೆ.

ನಿಜವಾಗಿ ನೋಡಿದರೆ ಇದು ವರೆಗೆ ಹಿಟಲರನ ಮೇಲೆ ಒಂದೇ ಒಂದು ಆಕ್ರಮಣ ನಡೆದಿದೆ. ಆವನು ಗೋರಿಂಗನ ಮೊದಲನೆಯ ಪತ್ನಿಯ ಶವಸಂಸ್ಕಾರಕ್ಕಾಗಿ ಬರ್ಲಿನ್ನಿನಿಂದ ಹೊರಗೆ ಸ್ಕೂಲ್ ಫೀಡ್ ಫಾರೆಸ್ಟಿಗೆ ಹೋಗುತ್ತಿದ್ದನು. ಇದು ಅವನು ಡಿಕ್ಟೇಟರಾಗುವುದಕ್ಕಿಂತ ಮುಂಚಿನ ಸುದ್ದಿ. ಲಂಂ ಗಜ ದೂರದಲ್ಲಿ ಒಂದು ಮರದ ಮೇಲೆ ಅಡಗಿದ್ದವನೊಬ್ಬನು ಗುಂಡು ಹಾರಿಸಿದನು. ಆದು ಹಿಟ್ಲರನ ಜೊತೆಗಿದ್ದವನಿಗೆ ತಗಲಿತು. ಈ ರೀತಿ ಹಿಟ್ಲರನ ಪ್ರಾಣಕ್ಕೆ ಅನೇಕ ಮಂದಿ ಗಿರಾಕಿಗಳಿರುವರು. ಇದು ವರೆಗೆ ಅವನನ್ನು ಕೊಲ್ಲಲು ಅನೇಕರು ಯತ್ನಿಸಿರುವರಾದರೂ ಅವರಿಗೆ ಸರಿಯಾದ ಸಮಯ ಮಾತ್ರ ದೊರೆತಿರುವುದಿಲ್ಲ.

S.

++++++++++++++++++++++++++++

ಅನುವಾದಕ—

ಶ್ರೀ. ಚಂದ್ರಮಾಧವ ಶರ್ಮ.

++++++++++++++++++++++++++++

★

## ಓದಿ ಆಶ್ಚರ್ಯಪಟ್ಟೀರಿ!

೧೯೩೧ ರಲ್ಲಿ ಒಂದು ವರ್ಷಕ್ಕೆಂತಲೂ ಕಡಿಮೆ ವಯಸ್ಸಿನ ಬಾಲ ವಿಧವೆಯರ ಸಂಖ್ಯೆಯು ೬೫೯ ಇದ್ದಿತು. ೧೯೩೧ ರಲ್ಲಿ ಆದು ಹೆಚ್ಚಿ ೧೫೧೫ ಆಯಿತು.

* * *

೧೯೩೩ ರ ವರದಿಯು ಪ್ರಕಟವಾಗುವ ಮೊದಲು ಭಾರತದಲ್ಲಿ ಒಟ್ಟು ೫೧೯ ವಿಮಾ ಸಂಸ್ಥೆಗಳು ಇದ್ದವು. ಅವುಗಳ ಪೈಕಿ ೧೬೯ ನಮ್ಮ ದೇಶದವು. ೧೯೩೪ ರ ವರದಿಯ ವೇಳೆಗೆ ಅವುಗಳ ಸಂಖ್ಯೆಯು ೩೪೧ ಆಗಿ ೧೯೪ ಸ್ವದೇಶಿಯವಾಗಿದ್ದವು. ೧೪೭ ವಿದೇಶಿಯವು. ಈ ಕಂಪನಿಗಳಲ್ಲಿ ಒಟ್ಟು ೩೩ ಕೋಟಿ ರೂ. ಗಳ ಹೊಸ ಉದ್ಯಮವು ನಡೆಯಿತು. ಭಾರತದ ಕಂಪನಿಗಳು ಒಟ್ಟು ೨೪ ಕೋಟಿ ರೂ. ಗಳ ಮತ್ತು ವಿದೇಶಿ ಕಂಪನಿಗಳು ೯ ಕೋಟಿ ರೂ. ಗಳ ಕೆಲಸವನ್ನು ನಡೆಸಿದವು.

* * *

ಜಗತ್ತಿನಲ್ಲಿ ನಡೆಯುವ ವಜ್ರದ ವ್ಯಾಪಾರದ ಪೈಕಿ ಸೇ. ೯೦ ರಷ್ಟು ಇಂಗ್ಲೆಂಡಿನಲ್ಲಿ ನಡೆಯುತ್ತದೆ.



ಶಾ. ಶ. ೧೮೬೨ ನೆಯ ಭಾದ್ರಪದ ಶು॥ ೧೫ ಸೋಮವಾರ.

# ಭೂಷಣಪ್ರದವಾದ ಘೋಷಣೆ.

ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರವರು ತಾ. ೮-೯-೪೦ ನೆಯ ದಿನ ಕರ್ನಾಟಕ ರತ್ನ ಸಿಂಹಾಸನವನ್ನೇರಿ ಮೈಸೂರು ಸಂಸ್ಥಾನದ ರಾಜ್ಯಸೂತ್ರವನ್ನು ವಿಧಿವತ್ತಾಗಿ ವಹಿಸಿಕೊಂಡು ಉದಾರ ಧೋರಣದಿಂದ ಪ್ರಭುತ್ವವನ್ನು ಪ್ರಾರಂಭಿಸಿದುದು ಅಖಿಲ ಕನ್ನಡಿಗರಿಗೇನೇ ಅಲ್ಲ; ಅಖಿಲ ಭಾರತೀಯರಿಗೂ ಸಂತೋಷಪ್ರದವಾದ ಸಂಗತಿಯೇ ಆಗಿದೆ.

ಇವರ ಹಿಂದಿನ ಮೂರು ಜನ ಮಹಾರಾಜರೂ ಈ ಸಿಂಹಾಸನವನ್ನೇರುವಾಗ ಚಿಕ್ಕವರಿದ್ದರು. ಆದುದರಿಂದ ಅವರು ಪ್ರೌಢರಾಗುವವರೆಗೂ ಅವರವರ ಪ್ರಭುತ್ವದ ಧೋರಣವನ್ನು ಅರಿತುಕೊಳ್ಳಲು ಪ್ರಜೆಗಳು ಕಾಲನಿರೀಕ್ಷಣೆಮಾಡಬೇಕಾಗಿದ್ದಿತು.

ಆದರೆ ಈಗಿನ ಮಹಾರಾಜರವರು ಅಂಥ ಸ್ಥಿತಿಯಲ್ಲೇನೂ ಸಿಂಹಾಸನವನ್ನೇರಲಿಲ್ಲ. ಪ್ರೌಢರೂ ವಿದ್ಯಾನುಭವಶೀಲರೂ ಆಗಿಯೇ ಪ್ರಭುತ್ವದ ಸೂತ್ರವನ್ನು ಹಿಡಿದಿರುವುದರಿಂದ ಪ್ರಜೆಗಳಿಗೆ ತಮ್ಮ ಪ್ರಭುಗಳ ಆಳ್ವಿಕೆಯ ರೀತಿನೀತಿಗಳು ಈಗಲೇ ಗೊತ್ತಾಗುವುದಕ್ಕೂ ಪ್ರಭುಗಳಿಗು ಕೂಡಾ ಪ್ರಜೆಗಳ ವಿಷಯದಲ್ಲಿರುವ ತಮ್ಮ ಪ್ರೇಮಾದರ ಕರ್ತವ್ಯಗಳನ್ನು ತಿಳಿಸಲಿಕ್ಕೂ ತುಂಬಾ ಅನುಕೂಲವಾಯಿತು. ಕಳೆದ ೧೫೦ ವರುಷಗಳಲ್ಲಿ ಅಲ್ಲಿನ ರಾಜ ಪ್ರಜೆಗಳಿಗೆ ಸಂಭವಿಸದೆ ಇದ್ದಂಥ ಈ ಸೌಲಭ್ಯವು ಈಗಿನ ಈ ಮಹಾರಾಜರವರ ಸಿಂಹಾಸನಾರೋಹಣದ ಕಾಲದಲ್ಲಿ ಲಭಿಸಿದುದು ಒಂದು ವಿಶೇಷವೇ ಸರಿ.

### ಸಿಂಹಾಸನದ ಘನತೆ.

ಶ್ರೀ ಜಯಚಾಮರಾಜ ಒಡೆಯರವರು ಏರಿದ ಸಿಂಹಾಸನವು ಕೇವಲ ಮೈಸೂರು ಸಂಸ್ಥಾನದ ೭೦ ಲಕ್ಷ ಪ್ರಜೆಗಳಿಗೆ ಸಂಬಂಧಪಟ್ಟುದೆಂದೇ ಹೇಳಲಿಕ್ಕಾಗದು. ಅದು ಕರ್ನಾಟಕ ರತ್ನ ಸಿಂಹಾಸನವು. ೧॥ ಕೋಟಿ ಕನ್ನಡಿಗರಿಗೂ ಆದರಾಭಿಮಾನಗಳುಳ್ಳ ರಾಜಪೀಠವು. ಕನ್ನಡ ಧ್ವಜವನ್ನು ಅಖಿಲ ಭರತಖಂಡವೇ ಅಲ್ಲ; ಪರದೇಶಗಳು ಕೂಡಾ ಬೆರಗಾಗುವಂತೆ ಮೆರೆಸಿದ ವಿಜಯನಗರ ಸಾಮ್ರಾಜ್ಯದ ತೇಜಸ್ವಿ ಅವಶೇಷವಿದು.

ವಿಜಯನಗರದ ಶ್ರೀರಂಗರಾಯನು ಈಯದು ರಾಜವಂಶದ ಒಂಬತ್ತನೆಯ ರಾಜರಾದ ಶ್ರೀ ರಾಜ ಒಡೆಯರಿಗೆ ಹದಿನಾರನೆಯ ಶತಮಾನದಲ್ಲಿ ಒಪ್ಪಿಸಿದ ಕರ್ನಾಟಕ ರತ್ನ ಸಿಂಹಾಸನವಿದು. ಇದರ ಆ ಮುಂಚಿನ ಐತಿಹ್ಯದ ಕಡೆಗೆ ಲಕ್ಷಿಸಿದರೆ ಹಸ್ತಿನಾವತಿಯಲ್ಲಿ ಧರ್ಮರಾಜನು ಇದೇ ರತ್ನ ಸಿಂಹಾಸನವನ್ನಲಂಕರಿಸಿದ್ದನೆಂದೂ [illegible]

ಈ ಪ್ರಕಾರ ಭಾರತೀಯ ಸಂಸ್ಕೃತಿಯ ಉಜ್ವಲ ಪರಂಪರೆಯುಳ್ಳ ಈ ರತ್ನ ಸಿಂಹಾಸನವನ್ನು ಶ್ರೀ ಜಯಚಾಮರಾಜ ಒಡೆಯರವರು ಏರಿ ಇದರ ಘನತೆಗೆ ತಕ್ಕಂತಹ ಹೊಣೆಗಾರಿಕೆಯ ಘೋಷಣೆಯನ್ನೇ ಮಾಡಿದ್ದಾರೆ.

### ಪ್ರಭುತ್ವದ ಉದ್ದೇಶ.

ಶ್ರೀ ಶಿವಾಜಿ ಮಹಾರಾಜರವರು ಶ್ರೀ ರಾಮದಾಸ ಸ್ವಾಮಿಗಳವರ ಅಪ್ಪಣೆಯಂತೆ ತಾವು ಪ್ರಜೆಗಳ ಸೇವಕರೆಂದೂ ರಾಜ್ಯವು ಸ್ವಾಮಿಗಳದ್ದೆಂದೂ ತಿಳಿದು ಕಾವಿ ಧ್ವಜದಡಿಯಲ್ಲಿ ನಿಂತು ಪ್ರಭುತ್ವವನ್ನು ಸಾಗಿಸಲಿಲ್ಲವೆ? ಈಗಿನ ಮೈಸೂರು ಮಹಾರಾಜರವರ ಮೂಲ ಪುರುಷರಾದ ಯದುರಾಯರ ರಾಜ್ಯಸ್ಥಾಪನೆಗೆ ಒಬ್ಬ ಜಂಗಮರು ಸಹಾಯ ಮಾಡಿದ ಕಾರಣ ಅಂದಿನಿಂದ ಇಂದಿನ ವರೆಗೂ ಎಲ್ಲ ಮಹಾರಾಜರವರೂ ತಮ್ಮ ಹೆಸರಿನ ಕೊನೆಗೆ "ಒಡೆಯರು" ಎಂಬ ಬಿರುದನ್ನಿಟ್ಟುಕೊಳ್ಳುತ್ತಾ ಬಂದಿದ್ದಾರಷ್ಟೆ. ಅರಮನೆಯ ಮುಂದೆ ಕಾವಿ ಧ್ವಜವು ಕೂಡಾ ಇದೆಯೆಂದು ತಿಳಿದು ಬಂದಿದೆ.

ಅಶೋಕ, ಹರ್ಷವರ್ಧನ ಮೊದಲಾದ ಪ್ರಾಚೀನ ಆದರ್ಶ ಭಾರತೀಯ ಚಕ್ರವರ್ತಿಗಳು ಕೂಡಾ ತಾವು ಪ್ರಜೆಗಳ ಸೇವಕರೆಂದೇ ತಿಳಿದು ಕೊನೆಗೆ ಸರ್ವಸ್ವವನ್ನೂ ತ್ಯಾಗ ಮಾಡಿದ್ದಾರಲ್ಲವೆ?

ಪ್ರಭುತ್ವವು ಪ್ರಜೆಗಳ ಸತ್ವವನ್ನು ಹೀರಿ ಭೋಗವಿಲಾಸಗಳನ್ನು ಹೊಂದಲು ಏರ್ಪಟ್ಟುದಲ್ಲ. ಪ್ರಜೆಗಳ ಸುಖಶಾಂತಿಗಳ ಅಭಿವೃದ್ಧಿಗಾಗಿ ಸರ್ವಸ್ವವನ್ನೂ ತ್ಯಾಗಮಾಡುವ ದಿವ್ಯ ಕಾರ್ಯಕ್ಷೇತ್ರವಾಗಿ ಏರ್ಪಟ್ಟುದೆಂದೇ ಭಾರತೀಯ ಆದರ್ಶ ಪ್ರಭುಗಳು ಗ್ರಹಿಸಿದ್ದಾರಷ್ಟೆ. ನಮಗಾಗಿ ಪ್ರಜೆಗಳಲ್ಲ. ಪ್ರಜೆಗಳಿಗಾಗಿ ನಾವೆಂಬ ಅತ್ಯುದಾರ ತತ್ವವನ್ನೇ ಶ್ರೇಷ್ಠ ರಾಜರು ಅನುಸರಿಸುವರಲ್ಲವೆ?

### ಮಾದರಿಯ ಘೋಷಣೆ.

ಹಿಂದುಸ್ಥಾನದ ಸಂಸ್ಥಾನಗಳಲ್ಲೆಲ್ಲಾ ಮಾದರಿಯ ಸಂಸ್ಥಾನವೆಂದು ಹೆಸರು ಹೊಂದಿರುವ ಮೈಸೂರು ಸಂಸ್ಥಾನದ ರಾಜ್ಯಸೂತ್ರವನ್ನು ವಹಿಸುವಾಗ ಶ್ರೀ ಜಯಚಾಮರಾಜ ಒಡೆಯರವರು "ನನ್ನನ್ನೂ, ನನ್ನ ಜೀವಮಾನವನ್ನೂ, ನನ್ನ ಸರ್ವಸ್ವವನ್ನೂ ಮೈಸೂರು ಸಂಸ್ಥಾನದ ಜನಸೇವೆಗಾಗಿ ಸಮರ್ಪಿಸುತ್ತೇನೆ." ಎಂಬ ಮಾದರಿಯ ಘೋಷಣೆಯನ್ನೇ ಮಾಡಿದರು. ಹಿಂದಿ ಸಂಸ್ಥಾನಗಳಲ್ಲಿ ಮುಕುಟಪ್ರಾಯವಾದ ಈ ಮೈಸೂರು ಸಂಸ್ಥಾನದ ಒಡೆಯರವರಿಗೆ ಈ [illegible]

ಅನೇಕ ಸಂಸ್ಥಾನಾಧಿಪತಿಗಳು ಹಾಲಿ ಪಕ್ಷ ಪಂಗಡಗಳ ಪಕ್ಷಪಾತದಿಂದ ಕಲಂಕಿತರಾಗಿರುವ ಈ ಸಮಯದಲ್ಲಿ ಭಾರತೀಯ ಸಂಸ್ಕೃತಿಯನ್ನು ಬಹು ಕಾಲದಿಂದಲೂ ಸಂರಕ್ಷಿಸಿಕೊಂಡು ಬಂದಿರುವ ಈ ದೇಶದ ಸಂಸ್ಥಾನಗಳಲ್ಲೆಲ್ಲ ಅಗ್ರಸ್ಥಾನವನ್ನು ಹೊಂದಿರುವ ಮೈಸೂರಿನಂತಹ ಶ್ರೇಷ್ಠ ಹಿಂದು ಸಂಸ್ಥಾನಾಧಿಪತಿಗಳು ಹೀಗೆ ತಮ್ಮ ಅಖಿಲ ಪ್ರಜೆಗಳ ಸೇವಕರು ತಾವೆಂದು ಘಂಟಾಘೋಷವಾಗಿ ಸಾರಿದುದು ಹಿಂದುಗಳಿಗೆಲ್ಲ ಹೆಮ್ಮೆಯ ವಿಷಯವಲ್ಲವೆ?

ಕೀರ್ತಿಶೇಷ ಶ್ರೀ. ಕೃಷ್ಣರಾಜ ಒಡೆಯರವರು ತಾ. ೮-೮-೧೯೦೨ ನೆಯ ದಿನ ರಾಜ್ಯಸೂತ್ರವನ್ನು ವಹಿಸುವಾಗ ಆಗಿನ ವ್ಹಾಯಿಸ್ ರಾಯರಾಗಿದ್ದ ಲಾರ್ಡ ಕರ್ಜನ್‌ರವರು ಮಹಾರಾಜರವರನ್ನುದ್ದೇಶಿಸಿ ಹೀಗೆ ಹೇಳಿದ್ದರು—

"ತಾವು ಈ ಪ್ರಭುತ್ವವನ್ನು ಪಡೆದುದು ಸ್ವಂತ ಸಾಂಪ್ರದಾಯಕ್ಕಲ್ಲ. ಪ್ರಜೆಗಳ ಹಿತಸಾಧನೆಗೆ."

ವ್ಹಾಯಿಸ್‌ರಾಯರ ಆ ಹೇಳಿಕೆಯನ್ನು ಕೀರ್ತಿಶೇಷ ಶ್ರೀ. ಕೃಷ್ಣರಾಜ ಒಡೆಯರವರು ತಮ್ಮ ದಿವ್ಯ ಆಳ್ವಿಕೆಯಲ್ಲಿ ಅನುಸರಿಸಿ ತೋರಿಸಿದರು. ಪ್ರಜೆಗಳನ್ನು ಮಕ್ಕಳಂತೆ ಮಮತೆಯಿಂದ ಪಾಲಿಸಿದರು. ಅಂತೆಯೇ ಪ್ರಜೆಗಳು ಅವರನ್ನು ತಂದೆಯಂತೆಯೂ ದೇವರಂತೆಯೂ ಭಾವಿಸಿದ್ದರು.

ಪ್ರಜೆಗಳಿಗೆ ದೊರೆಯೇ ದೇವರು. ಆ ಭಾವನೆಯಿಂದಲೇ ಹಿಂದಣ ಮಹಾರಾಜರ ಪ್ರಭುತ್ವ ಸಾಗಿತು. ದೊರೆಗೆ ಪ್ರಜೆವೇ ದೇವರಷ್ಟೆ. ಇನ್ನು ಈ ಭಾವದಿಂದ ಶ್ರೀ. ಜಯಚಾಮರಾಜ ಒಡೆಯರವರ ಪ್ರಭುತ್ವ ಸಾಗುವುದು. ಇವರು ಅಂಥ ವೀರ ಪ್ರತಿಜ್ಞೆಯಿಂದಲೇ ಪ್ರಭುತ್ವವನ್ನು ಪ್ರಾರಂಭಿಸಿದ್ದಾರೆ. ಇದು ಅದಕ್ಕಿಂತ ಒಂದಡಿ ಮುಂದಿನದಷ್ಟೆ.

### ಮುಂದಿನ ಕರ್ತವ್ಯ.

ಶ್ರೀ. ಜಯಚಾಮರಾಜ ಒಡೆಯರವರು ತಮ್ಮ ಈ ಚರಿತ್ರಾರ್ಹವಾದ ಘೋಷಣೆಯಲ್ಲಿ ಪ್ರಜೆಗಳು ತಮಗೆ ತುಂಬಾ ನೆರವಾಗಬೇಕೆಂದು ಕೋರಿದ್ದಾರಷ್ಟೆ. ಅದು ವಿಹಿತವಾದುದೇ ಆಗಿದೆ. ಪ್ರಜೆಗಳ ವಿಶ್ವಾಸ ಸಹಾಯ ಸಾಹಸಗಳಿಲ್ಲದಿದ್ದರೆ ಮಹಾರಾಜರ ಎಂಥ ಸದುದ್ದೇಶಗಳಾದರೂ ಸಂಪೂರ್ಣ ಫಲಕಾರಿಯಾಗುವುದು ಶಕ್ಯವಿಲ್ಲ. ಆದುದರಿಂದ ಅಲ್ಲಿನ ಎಲ್ಲ ಪಕ್ಷ ಪಂಗಡಗಳ ಪ್ರಜೆಗಳೂ ಮಹಾರಾಜರವರಿಗೆ ತುಂಬಾ ಸಹಾಯಕರಾಗಬೇಕಾದುದು ಅವರ ಕರ್ತವ್ಯವೇ ಆಗಿದೆ.

ಮುಂದಿನ ಮಾರ್ಚ ತಿಂಗಳಿಂದ ಪ್ರಾರಂಭವಾಗುವ ಮೈಸೂರು ಸರಕಾರದ ಹೊಸ ಸುಧಾರಣೆಯು ಎಷ್ಟೇ ಅತೃಪ್ತಿಕರವಾಗಿದ್ದರೂ ಈಗಿನ ಸಮಯ ಸನ್ನಿವೇಶಗಳನ್ನು ಲಕ್ಷಿಸಿ ಎಲ್ಲ ಪಕ್ಷ ಪಂಗಡದವರೂ ಸಹಕರಿಸಿ ಆ ಸುಧಾರಣೆಯು ತುಂಬಾ ಫಲಕಾರಿಯಾಗುವಂತೆಯೇ ಪ್ರಯತ್ನಿಸಬೇಕು. ನೂತನ ಮಹಾರಾಜರವರು ರಾಜ್ಯಾಂಗದ ಸಕಲ ವಿಷಯಗಳನ್ನೂ ಅರಿತುಕೊಳ್ಳಲು ಅವಕಾಶವನ್ನು ಕೊಡಬೇಕು. ಹೀಗೆ ಮಾಡುವುದೇ ತಮ್ಮ ಮತ್ತು ಸಂಸ್ಥಾನದ ಹಿತವನ್ನು ಸಾಧಿಸಿಕೊಳ್ಳುವ ಅಲ್ಲಿನ ಪ್ರಜೆಗಳ ವಿಹಿತವಾದ ಮಾರ್ಗವು. ಮೈಸೂರು ಸಂಸ್ಥಾನದ ಪ್ರಜೆಗಳು ವಿವೇಕಶಾಲಿಗಳೆಂದು ಪ್ರಸಿದ್ಧರಾಗಿರುವುದರಿಂದ ತಮ್ಮ ಮಹಾರಾಜರ ಉದಾರ ಧೋರಣವನ್ನರಿತು ಅವರ ಕೋರಿಕೆಯಂತೆ ತುಂಬಾ ಸಹಾಯ ಸಹಕಾರಗಳನ್ನೀಯುವರೆಂದೇ ನಾವು ದೃಢವಾಗಿ ನಂಬಿದ್ದೇವೆ.

ಮಹಾರಾಜರವರ ಈ ದಿವ್ಯ ಘೋಷಣೆಯಿಂದ ಅಧಿಕಾರಿ ವರ್ಗವೂ ತನ್ನ ಸ್ಥಾನಮಾನ [illegible]

[illegible] ತಾವು ಪ್ರಜೆಗಳ ಸೇವಕರೆಂದು ಹೇಳಿದ ಮೇಲೆ ಅಧಿಕಾರಿಗಳು ಯಾರೆಂಬುದನ್ನು ಬೇರೆ ಹೇಳಬೇಕಾದುದೇ ಇಲ್ಲವಷ್ಟೆ.

ಮಹಾರಾಜರವರಿಗೂ ಪ್ರಜೆಗಳಿಗೂ ಅಧಿಕಾರಿ ವರ್ಗವೇ ಮಧ್ಯವರ್ತಿಯಾದುದು. ರಾಜ ಪ್ರಜೆಗಳ ಉದ್ದೇಶ ಸಹಕಾರಗಳು ಎಷ್ಟೋ ಅನುಕೂಲವಾಗಿದ್ದರೂ ಅಧಿಕಾರಿ ವರ್ಗವು ಪ್ರತಿಕೂಲಸ್ಥಿತಿಯನ್ನುಂಟು ಮಾಡಬಹುದು. ಆದಕಾರಣ ರಾಜ್ಯದಲ್ಲಿ ಅಧಿಕಾರಿ ವರ್ಗವೂ ಒಂದು ಬಹು ಮುಖ್ಯಾಂಗವಾಗಿದೆ.

ದೇವರಿಗೂ ಭಕ್ತರಿಗೂ ಪೂಜಾರಿಯು ಮಧ್ಯವರ್ತಿಯಿದ್ದಂತೆ ರಾಜರಿಗೂ ಪ್ರಜೆಗಳಿಗೂ ಅಧಿಕಾರಿವರ್ಗ ಮಧ್ಯವರ್ತಿ. ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲವೆಂಬ ಗಾದೆಯಂತೆ ಅನೇಕ ಸಂದರ್ಭಗಳಲ್ಲಿ ರಾಜರ ಉದ್ದೇಶವು ಅಧಿಕಾರಿಗಳ ಪ್ರತಿಕೂಲದಿಂದ ವಿಫಲವಾಗುವುದುಂಟು. ಆದಕಾರಣ ಅಧಿಕಾರಿವರ್ಗವು ಕೂಡಾ ಮಹಾರಾಜರವರ ಘನವಾದ ಉದ್ದೇಶವನ್ನು ಲಕ್ಷಿಸಿ ಪ್ರಜಾಸೇವೆಯನ್ನು ನಿರ್ವಂಚನೆಯಿಂದ ಸಲ್ಲಿಸಿ ರಾಜಪ್ರಜೆಗಳಲ್ಲಿ ಪ್ರೇಮಾದರಗಳು ಹೆಚ್ಚುವಂತೆಯೇ ವರ್ತಿಸಬೇಕಾದುದು ಅಗತ್ಯವಲ್ಲವೆ? ಅಲ್ಲಿಯ ಅಧಿಕಾರಿವರ್ಗವು ಆ ಪ್ರಕಾರ ನಡೆಯಲೆಂದೇ ನಾವು ಹಾರೈಸುತ್ತೇವೆ.

ತರುಣ ಮಹಾರಾಜರವರಾದರೋ ಭೀಷ್ಮನಂತೆ ಅಮೋಘವಾದ ಘೋಷಣೆಯನ್ನು ಮಾಡಿದ್ದಾರೆ. ಅವರ ತಂದೆ ಮತ್ತು ದೊಡ್ಡಪ್ಪನವರಿಂದ ಹೊಂದಿರುವ ಅನೇಕ ದಿವ್ಯಶಕ್ತಿಗಳೇ ಅವರ ಈ ಘೋಷಣೆಯನ್ನು ನೆರವೇರಿಸಲು ಸಹಾಯ ಮಾಡುವವೆಂದು ನಾವು ನಂಬಿದ್ದೇವೆ. ಪರಮಾತ್ಮನು ಅಂಥ ಶಕ್ತಿ ಸಾಹಸಗಳನ್ನು ಅನುಗ್ರಹಿಸಲಿ. ಶ್ರೀ ಜಯಚಾಮರಾಜ ಒಡೆಯರವರು ಮೈಸೂರು ಸಂಸ್ಥಾನದ ಭಾಗ್ಯವಿಧಾತರಾಗಲಿ.

12-9-40

## ೧ ಕೋಟಿ ರೂ. ಗಳ ನಿಧಿ?

★

ಬಂಗಾಲ ಸರಕಾರವು ಮಾಧ್ಯಮಿಕ ಶಿಕ್ಷಣದ ಈಗಿನ ಅನ್ಯಾಯದ ಗೊತ್ತುವಳಿಯನ್ನು ಆಚರಣೆಯಲ್ಲಿ ತಂದರೆ ೧೫೦೦ ಹೈಸ್ಕೂಲುಗಳಲ್ಲಿಯ ಹಿಂದು ವಿದ್ಯಾರ್ಥಿಗಳನ್ನೆಲ್ಲಾ ಕೂಡಿಸಿ ಒಂದು ಸ್ವತಂತ್ರ ಹಿಂದು ವಿದ್ಯಾಪೀಠವನ್ನು ಏರ್ಪಡಿಸುವುದಾಗಿಯೂ ಅದಕ್ಕಾಗಿ ಒಂದು ಕೋಟಿ ರೂ. ಕೂಡಿಸುವುದಾಗಿಯೂ ಬಂಗಾಲದ ಸುಪ್ರಸಿದ್ಧ ಮುಂದಾಳು ಡಾ. ಶ್ಯಾಮಪ್ರಸಾದ ಮುಕರ್ಜಿಯವರು ಒಂದು ಸಭೆಯಲ್ಲಿ ಹೇಳಿದರು.

★

## ಭಯಂಕರ ವಿಮಾನ ಧಾಳಿ!

—ತಾ. ೧೦ ನೆಯ ರಾತ್ರೆ ಬರ್ಲಿನ್ ಪಟ್ಟಣದ ಮೇಲೆ ಬ್ರಿಟಿಶ್ ವಿಮಾನುಗಳು ಭಯಂಕರ ದಾಳಿಮಾಡಿದವು. ಜರ್ಮನ್ ರಾಯಿಶ್ ಸ್ಟಾರ್ ಭವನಕ್ಕೂ ಅಪಾಯ ಸಂಭವಿಸಿದೆ.

—ತಾ. ೧೧ ನೆಯ ದಿನ ಲಂಡನ್ನಿನ ಮೇಲೆ ಜರ್ಮನಿಯ ಭಯಂಕರ ವಿಮಾನ ದಾಳಿಯಾಯಿತು. ಬಕಿಂಗಹ್ಯಾಂ ಅರಮನೆಯ ಹತ್ತಿರ ಒಂದು ಬಾಂಬು ಹಾರಿ ಕಿಟಕಿಗಳಿಗೆ ತಾಕಿತು.

—ಬರ್ಲಿನ್ ಪಟ್ಟಣದ ಮೇಲೆ ಬ್ರಿಟಿಶ್ ವಿಮಾನುಗಳು ಭಯಂಕರ ದಾಳಿ ಮಾಡಿದವು. ತಾ. ೯ ನೆಯ ದಿನ ೫೦೦ ಜನರು ಸತ್ತರು. ೧೪೦೦ ಜನರಿಗೆ ಗಾಯಗಳಾಗಿವೆ. ತಾರೀಖು ೧೦ ನೆಯ ದಿನ ಗೋಬೆಲ್ಸನ ಮನೆಯ ಮುಂದೆ ಬಾಂಬು ಬಿದ್ದವು.

# ವೀರಶೈವ ಮಹಾ ಸಭೆಯ ಕಾರ್ಯಕಾರಿ ಮಂಡಲದ ನಿರ್ಣಯಗಳು.

ಅಖಿಲ ಭಾರತ ವೀರಶೈವ ಮಹಾಸಭೆಯ ಕಾರ್ಯಕಾರಿ ಮಂಡಲವು ತಾ ೩-೯-೪೦ನೆಯ ದಿನ ಸೊಲ್ಲಾಪುರದಲ್ಲಿ ಮಹಾಸಭೆಯ ಅಧ್ಯಕ್ಷರಾದ ಬ್ಯಾ. ಸರದಾರರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಬ್ಯಾ. ಸರದಾರರು ಮೊದಲು ತಮಗೂ ಮುಂಬೈ ಗವ್ಹರ್ನರ ಸಾಹೇಬರಿಗೂ ನಡೆದ ಸಂಭಾಷಣೆಯ ಸಂಗತಿಗಳನ್ನು ತಿಳಿಸಿದರು. ಆನಂತರ ಮಂಡಲದ ಕಾರ್ಯಗಳು ನಡೆದು ಈ ಕೆಳಗಿನ ನಿರ್ಣಯಗಳಾದವು.—

★

(೧) ಕಳೆದ ಆಗಷ್ಟ ೫ಂಗಳ ೮ನೆಯ ತಾರೀಖಿನ ದಿನ ವ್ಹಾಯಿಸ್‌ರಾಯರು ಮತ್ತು ೧೪ ನೆಯ ತಾರೀಖಿನ ದಿನ ಭಾರತ ಮಂತ್ರಿಗಳು ಹಿಂದುಸ್ಥಾನದ ಭವಿತವ್ಯದ ವಿಚಾರವಾಗಿ ಕೊಟ್ಟ ರಾಜಕೀಯ ಆಶ್ವಾಸನಕ್ಕೋಸ್ಕರ ಈ ಮಂಡಲವು ಸಮಾಧಾನವನ್ನು ವ್ಯಕ್ತಗೊಳಿಸುತ್ತದೆ. ಮತ್ತು ಯುದ್ಧ ಮುಗಿದನಂತರ ಇಂತಿಷ್ಟು ದಿನಗಳೊಳಗಾಗಿ ಹಿಂದುಸ್ಥಾನಕ್ಕೆ ಸಾಮಂತ ಸ್ವರಾಜ್ಯ ಕೊಡಲ್ಪಡುವುದೆಂದು ಸರಕಾರವು ಕಾಲಕ್ಲುಪ್ತ ಮಾಡಬೇಕಾಗಿ ಈ ಮಂಡಲವು ಸೂಚಿಸುತ್ತದೆ.

ಲಿಂಗಾಯತ ಸಮಾಜದ ಜನಸಂಖ್ಯೆ, ದೇಶದ ರಾಷ್ಟ್ರೀಯ ಜೀವನದಲ್ಲಿ ಅದಕ್ಕಿರುವ ಹಿತಸಂಬಂಧ ಮತ್ತು ಪಾತ್ರತೆಗಳನ್ನು ಲಕ್ಷಿಸಿ ಮುಂದಿನ ರಾಜ್ಯಘಟನೆಯ ಸಮಿತಿಯಲ್ಲಿ ಅದಕ್ಕೆ ಯೋಗ್ಯ ಪ್ರಾತಿನಿಧ್ಯ ಕೊಡಲ್ಪಡಬೇಕೆಂದು ಈ ಮಂಡಲವು ಸರಕಾರಕ್ಕೆ ಆಗ್ರಹಪೂರ್ವಕ ಕೇಳಿಕೊಳ್ಳುತ್ತದೆ.

(೩) ಕರ್ನಾಟಕ ಪ್ರಾಂತವನ್ನು ಆದಷ್ಟು ಜಾಗ್ರತೆ ಸ್ವತಂತ್ರ ಪ್ರಾಂತವನ್ನಾಗಿ ಮಾಡಬೇಕೆಂದು ಈ ಮಂಡಲವು ಆಗ್ರಹಪೂರ್ವಕ ಸರಕಾರಕ್ಕೆ ಸೂಚಿಸುತ್ತದೆ.

(೩) ವ್ಹಾಯಿಸ್‌ರಾಯರ ಕಾರ್ಯಕಾರಿ ಮಂಡಲವನ್ನು ವಿಸ್ತಾರಗೊಳಿಸುವುದು ಮತ್ತು ಯುದ್ಧ ಸಲಹೆ ಮಂಡಲವನ್ನು ನಿಯಮಿಸುವುದು ಸಮಾಧಾನಕರವಾದ ಸಂಗತಿಗಳು. ಕಾರ್ಯಕಾರಿಮಂಡಲದಲ್ಲಿ ಒಬ್ಬ ಕನ್ನಡಿಗರನ್ನು ತೆಗೆದುಕೊಳ್ಳಬೇಕೆಂದೂ ಯುದ್ಧ ಸಲಹೆ ಮಂಡಲದಲ್ಲಿ ರಾಷ್ಟ್ರೀಯ ವೃತ್ತಿಯ ಒಬ್ಬ ಲಿಂಗಾಯತರನ್ನು ತೆಗೆದುಕೊಳ್ಳಬೇಕೆಂದೂ ಈ ಮಂಡಲವು ಸರಕಾರಕ್ಕೆ ಸೂಚಿಸುತ್ತದೆ. ಇದರಿಂದ ಯುದ್ಧ ಸಹಾಯ ಕಾರ್ಯಕ್ಕೆ ಇನ್ನೂ ಹೆಚ್ಚಾದ ಪ್ರೋತ್ಸಾಹ ದೊರೆಯುವುದು.

(೪) ಅಲ್ಪ ಸಂಖ್ಯಾಕರ ವಿಷಯವಾಗಿ ವ್ಹಾಯಿಸ್‌ರಾಯರ ಘೋಷಣೆಯಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯವು ಸಮಾಧಾನಕರವಾಗಿದೆ. ಲಿಂಗಾಯತ ಸಮಾಜದ ಸಂಸ್ಕೃತಿ ಮತ್ತು ಪರಂಪರೆಗಳು ಸ್ವತಂತ್ರವಾದುಗಳೆರುವುದರಿಂದ ಇದನ್ನು ಅಲ್ಪ ಸಂಖ್ಯಾಕ ಸಮಾಜವೆಂದು ಪರಿಗಣಿಸಬೇಕು. ಮತ್ತು ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಗಳು ಇದಕ್ಕೆ ದೊರೆಯಬೇಕು.

ಲಿಂಗಾಯತ ಸಮಾಜವು ವಿದ್ಯೆಯಲ್ಲಿ ಇನ್ನೂ ಹಿಂದುಳಿದಿರುವುದರಿಂದ ಇದು ತನ್ನ ನೆರೆ ಹೊರೆಯ ಸುಧಾರಿಸಿದ ಸಮಾಜಗಳೊಂದಿಗೆ ಸ್ಪರ್ಧೆಮಾಡುವುದು ಶಕ್ಯವಿಲ್ಲದ ಕಾರಣ ಸರಕಾರಿ ಅಧಿಕಾರ ಮೊದಲಾದವುಗಳನ್ನು ಕೊಡುವಾಗ ಈ ಸಮಾಜಕ್ಕೆ ಹೆಚ್ಚಾದ ಸೌಲಭ್ಯವನ್ನು ಕೊಡಬೇಕೆಂದು ಈ ಸಮಿತಿಯು ಸರಕಾರಕ್ಕೆ ಆಗ್ರಹಪೂರ್ವಕ ಸೂಚಿಸುತ್ತದೆ.

(೫) ವೀರಶೈವ ಸಮಾಜದಲ್ಲಿಯ ಅನೇಕ ಶೂರ ವೀರರು ಪೂರ್ವದಲ್ಲಿಯೂ ಹಿಂದಿನ ಯುದ್ಧದಲ್ಲಿಯೂ ಮಾಡಿದ ಪರಾಕ್ರಮದ ಕಾರ್ಯಗಳ ಕಡೆಗೆ ಸರಕಾರವು ಲಕ್ಷಿಸಿ ಈಗ ಏರ್ಪಡಿಸುವ ಸೈನ್ಯ, ವಿಮಾನದಳ, ನೌಕಾದಳಗಳಲ್ಲಿ ಈ ಸಮಾಜದವರು ಭಾಗ ವಹಿಸುವರೆಂದು ತಿಳಿಯಬೇಕು. ಹಿಂದಿನ ಮಹಾಯುದ್ಧದಂತೆ ಈಗಲು ಕೂಡಾ ಲಿಂಗಾಯತರ ಒಂದು ಪ್ರತ್ಯೇಕವಾದ "ಬಟೋಲಿಯನ್" ಏರ್ಪಡಿಸಬೇಕು. ಅದಕ್ಕಾಗಿ ಈ ಸಮಾಜದಲ್ಲಿಯ ಪ್ರಮುಖರನ್ನು ರಿಕ್ರೂಟಿಂಗ್ ಆಫೀಸರರನ್ನಾಗಿ ನಿಯಮಿಸಬೇಕೆಂದು ಈ ಮಂಡಲವು ಸರಕಾರಕ್ಕೆ ಸೂಚಿಸುತ್ತದೆ.

(೬) ಮೇಲಿನ ಬೇರೆ ಬೇರೆ ಅಧಿಕಾರ ಸೌಲಭ್ಯಗಳನ್ನು ಕೊಡುವಾಗ ಮಹಾಸಭೆಯ ಈ ಕಾರ್ಯಕಾರಿ ಮಂಡಲವನ್ನು ವಿಚಾರಿಸಬೇಕೆಂದು ಸರಕಾರಕ್ಕೆ ಇದರ ಪ್ರಾರ್ಥನೆ.

(೭) ಯುರೋಪದ ಮಹಾ ಯುದ್ಧದಿಂದುಂಟಾಗಿರುವ ಭೀಕರ ಪರಿಸ್ಥಿತಿಯನ್ನು ಲಕ್ಷಿಸಿ ಬ್ರಿಟಿಶ್ ಸರಕಾರಕ್ಕೆ ಪ್ರತಿಯೊಬ್ಬ ವೀರಶೈವನೂ ಹೃದಯಪೂರ್ವಕ ಸಹಾಯಮಾಡಬೇಕು.

(೮) ಮೈಸೂರು ಮಹಾರಾಜರವರು ೮ನೆಯ ತಾರೀಖಿನ ದಿನ ಹೊಂದುವ ರಾಜ್ಯಾಭಿಷೇಕದ ಸಂಬಂಧವಾಗಿ ಅಭಿನಂದನ ಸಂದೇಶವನ್ನು ಈ ಮಂಡಲವು ಕಳುಹಿಸಬೇಕು.

(೯) ಮಹಾಸಭೆಯ ಅಧ್ಯಕ್ಷರಾದ ಬ್ಯಾ. ಸರದಾರರೂ ಜನರಲ್ ಸೆಕ್ರೆಟರಿಗಳಾದ ಶ್ರೀ. ಕಲ್ಯಾಣಶೆಟ್ಟಿ ವಕೀಲರೂ ಮಹಾಸಭೆಯ ಪ್ರಚಾರಕ್ಕೋಸ್ಕರ ಸಂಚರಿಸಬೇಕು. ಶಕ್ಯವಾದರೆ ಜನಗಣನೆ ಶಾಖೆಯ ಅಧಿಕಾರಿಗಳನ್ನು ಸಾತಾರದಲ್ಲಿ ಕಾಣಬೇಕು.

(೧೦) ಮಹಾಸಭೆಯ ವರ್ಕಿಂಗ್‌ಕಮಿಟಿ, ಸ್ಯಾಂಡಿಂಗ್ ಕಮಿಟಿ ಮತ್ತು ೮ ಕಮಿಟಿಗಳು ಬರುವ ಆಕ್ಟೋಬರ ತಿಂಗಳಲ್ಲಿ ಬೆಳಗಾವಿಯಲ್ಲಿ ಕೂಡಬೇಕು.

(೧೧) ಲಿಂಗಾಯತ ವಿದ್ಯಾರ್ಥಿಗಳ ವಿದ್ಯಾರ್ಥಿನೇತನ ಮತ್ತು ಫೀ ಸಂಬಂಧವಾಗಿ ಮದ್ರಾಸ ಸರಕಾರದ ಸಂಗಡ ಸ್ವತ್ರನ್ಯವಹಾರ ಮಾಡಲು ಅಧ್ಯಕ್ಷರಿಗೆ ಅಧಿಕಾರ ಕೊಡಬೇಕು.

(೧೨) ಮಹಾಸಭೆಯ ಪ್ರಚಾರಕ್ಕೋಸ್ಕರ ಒಂದು ಸ್ವಂತ ಪತ್ರಿಕೆ ಹೊರಡಿಸಬೇಕೆಂಬ ಅನೇಕರ ಸೂಚನೆಯು ಹಣವಿನ ಅಭಾವದಿಂದ ಶಕ್ಯವಿಲ್ಲದ ಮೂಲಕ ಸುದರ್ಶನ ಮತ್ತು ಶರಣ ಸಂದೇಶ ಪತ್ರಿಕೆಗಳು ಮಹಾಸಭೆಯ ಪ್ರಕಟನೆಗಳನ್ನು ಈಗ ಪ್ರಸಿದ್ಧಿಸುತ್ತಿರುವಂತೆ ಇನ್ನು ಮುಂದೆಯೂ ಪ್ರಕಟಿಸಬೇಕಾಗಿ ಆಯಾಯ ಪತ್ರಿಕಾಕರ್ತರಿಗೆ ವಿನಂತಿ ಮಾಡಿಕೊಳ್ಳಬೇಕು.

(೧೩) ದಾವಣಗೆರೆಯಲ್ಲಿ ವೀರಶೈವ ಮಧ್ವವರ್ತಿ ಗ್ರಂಥಾಲಯ ಮತ್ತು ಗ್ರಂಥ ಶೋಧನಾಲಯ ಮತ್ತು ವಸ್ತುಸಂಗ್ರಹಾಲಯವನ್ನು ಸ್ಥಾಪಿಸುವ ಪ್ರಯತ್ನವಾಗಬೇಕು.

(೧೪) ಅನೇಕ ಕಡೆ ಮಹಾಸಭೆಯ ಶಾಖೆಗಳನ್ನು ಸ್ಥಾಪಿಸಬೇಕು.

(೧೫) ಶ್ರೀಶೈಲ ಕ್ಷೇತ್ರದ ಸಂಬಂಧವಾಗಿರಶಕ್ಕ ಲಿಂಗಾಯತರ ಒಂದರೆಗಳನ್ನು ನಿವಾರಣೆಮಾಡಲು ಅಧ್ಯಕ್ಷರು ಪ್ರಯತ್ನಿಸಬೇಕು.

## ಆಯವ್ಯಯ.

ಮಹಾಸಭೆಯ ಈ ಕೆಳಗಿನ ಆಯವ್ಯಯವು ಒಪ್ಪಿಗೆಯಾಯಿತು.

ಬಂದುದು— ೨೪೦-೦-೦
ವೆಚ್ಚ — ೧೨೦-೬-೩

ಉಳಿದುದು— ೧೧೯-೯-೯

ವೆಚ್ಚದ ವಿವರ

| | |
|---|---|
| ಅಚ್ಚಿಗೆ— | ೪೯-೩-೦ |
| ತಂತಿಸೋಸ್ಟ್— | ೩೯-೧-೦ |
| ಪ್ರವಾಸ — | ೧೯-೮-೦ |
| ಸ್ಟೇಶನರಿ — | ೬-೧-೯ |
| ಟಾಯಪಿಂಗ್— | ೫-೦-೦ |
| ಬಿಲ್ಲರೆ— | ೧-೯-೬ |
| | ೧೨೦-೬-೩ |

## ಧನಸಹಾಯಕರು

ಕುಂಭಕೋಣ ಮಹಾಸಭೆಯಲ್ಲಿ ತೀರ್ಮಾನವಾದಂತೆ ೧೦ ರೂಪಾಯಿಗಳನ್ನು ಈ ಕೆಳಗಿನ ೨೪ ಮಹಾಶಯರು ಕೊಟ್ಟಿದ್ದಾರೆ. ಇತರರೂ ಅಧ್ಯಕ್ಷರ ಕಡೆಗೆ ಜಾಗ್ರತೆ ಹಣ ಕಳಿಸಿ ಸಹಾಯ ಮಾಡಬೇಕಾಗಿ ಪ್ರಾರ್ಥನೆ.

ಬೆಂಗಳೂರ ಮಹಾಜನರು— ಶ್ರೀಯುತರುಗಳಾದ ಕಂಬಿ ರೇವಣ್ಣನವರು, ಎಂ. ನಾಗಪ್ಪನವರು, ಜಿ. ಪರಮಶಿವಯ್ಯನವರು, ಕೆ. ಬಸಪ್ಪನವರು, ಜಿ. ಶಾಂತವೀರಪ್ಪನವರು, ಎಂ. ಎನ್. ಶಿವಪ್ಪನವರು, ವಾಯ್. ಸಿ. ಬಸಪ್ಪನವರು.

ದಾವಣಗೆರೆ ಶ್ರೀ- ಚಿಗಟೇರಿ ಮುರಿಗೆಪ್ಪನವರು, ಮೈಸೂರು ಶ್ರೀ. ಬಿ. ಎಸ್. ಪುಟ್ಟಸ್ವಾಮಯ್ಯನವರು, ಸೊಲ್ಲಾಪುರದ ಶ್ರೀ. ಕಾಡಾದಿ ನಾಗಪ್ಪನವರು, ಮೈಸೂರು ಸಂಗನಬಸಪ್ಪನವರು C/o ನಂಜುಂಡಯ್ಯ ಎಂಡ್ ಸನ್ಸ್, ನೀಲಗಿರಿ ಶ್ರೀ ಬಿ. ಎಂ. ನಂಜಯ್ಯನವರು, ಬಜೋಡಿಯ ಶ್ರೀ ಸಾಖರಸೆಕರ್, ಕೃಷ್ಣಗಿರಿ ಶ್ರೀ. ನಂಜುಂಡ ಚಿಟ್ಟಿಯವರು, ಕೋಯಮುತ್ತೂರು ಎನ್. ನಂಜಪ್ಪನವರು, ಬೆಳಗಾವದ ಡಾ. ನಂದಿ ಮಠರವರು, ವಿಜಾಪುರದ ರಾ. ಸಾ. ಹಳಕಟ್ಟಿಯವರು, ಮುಸುರಿ ಶ್ರೀಕುಮಾರ ವೀರಯ್ಯನವರು, ಶ್ರೀ. ಸಿ. ಸಿ. ಹುಲಕೋಟಿ ಡಿ ಜಜ್ಜರು, ಪುಸದ (ವರ್ಹಾಡ) ಶ್ರೀ. ವಕಿಲಾರೆ ವಕೀಲರು, ಹುಬ್ಬಳ್ಳಿ ಶ್ರೀ. ವಾಲಿ ರುದ್ರಪ್ಪನವರು, ಸೊಲ್ಲಾಪುರದ ಶ್ರೀ. ಬಸವಲಿಂಗಪ್ಪ ಶೇಟೆ, ಕಾವೇರಿ ಪಟ್ಟಣದ ಶ್ರೀ. ನಾಗರಾಜ ಮಣಿಗಾರ, ದಿವಾಣ ಬಹದ್ದೂರ ಆರ್. ಎಸ್. ಹಿರೇಮಠರವರು.

★

## ನವಿಲುಗುಂದ.

ಪ್ರತಿ ವರ್ಷದ ಪದ್ಧತಿಯಂತೆ ಶ್ರೀ. ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಶ್ರೀ ಕರ್ತೃ ಗದ್ದಿಗೆಯಲ್ಲಿ ಮಹಾರುದ್ರಾಭಿಷೇಕವು ಹಾಗೂ ಶ್ರೀಗಳವರಿಂದ ಶೂನ್ಯ ಸಂಪಾದನೆಯ ಪ್ರವಚನವು ನಡೆಯುತ್ತಿದ್ದುದು ಸರಿಯಷ್ಟೆ. ಈ ಮಧ್ಯದಲ್ಲಿ ಕೆತ್ತೂರಿನ ಶ್ರೀಮಾನ್ ಕಾಲಿದಾಸರವರಿಂದ ಹದಿನೈದು ದಿನಸ ಕೀರ್ತನೆಗಳು ಉತ್ತಮ ರೀತಿಯಿಂದ ಜರುಗಿದವು.

ಕಡೆಯ ವಾರದಲ್ಲಿ ಶ್ರೀಮಾನ್ ಮಂಜಪ್ಪನವರು ಹರ್ಡೆಕರ್ ಇವರಿಂದ ಸುಶ್ರಾವ್ಯ ಹಾಗೂ ಪರಿಣಾಮಕಾರಿ ವ್ಯಾಖ್ಯಾನಗಳಾದವು. ಆದೇ ಸಮಯಕ್ಕೆ ಶಿವಶರಣರ ತತ್ವಪ್ರಚಾರಕ ಸಂಘವೂ ಒಂದು ಇಲ್ಲಿ ಸ್ಥಾಪನೆಮಾಡಲ್ಪಟ್ಟಿದೆ. ಮೇಲ್ಕಂಡ ಶ್ರೀ ರುದ್ರಾಭಿಷೇಕ, ಪ್ರವಚನಗಳು ಭಾದ್ರಪದ ಶುದ್ಧ ೬ ಶನಿವಾರದ ವರೆಗೆ ನಡೆದು ಆ ಹೊತ್ತು ನಾಲ್ಕು ನಾಲ್ಕುವರೆ ಸಾವಿರ ಜನರಿಗೆ ಅನ್ನಸಂತರ್ಪಣೆಯಾಗಿ ಶ್ರಾವಣ ಸಂಬಂಧಿ ಕಾರ್ಯಗಳು ಪೂರೈಸಿದವು.

—ಸುದ್ದಿಗಾರ.

●

# ಲಂಡನ್ - ಬರ್ಲಿನ್‌ಗಳ ಮೇಲೆ ಭಯಂಕರ ದಾಳಿ!

★

### ಲಂಡನ್ನಿನಲ್ಲಿ ದಾಳಿ!

ಕಳೆದ ೭ ನೆಯ ತಾರೀಖಿನ ದಿನ ಲಂಡನ್ನಿನ ಮೇಲೆ ಜರ್ಮನ್ ವಿಮಾನುಗಳು ಭಯಂಕರ ದಾಳಿಮಾಡಿದವು. ಯುದ್ಧ ಪ್ರಾರಂಭವಾದನಂತರ ಇಂತಹ ದಾಳಿ ಆಗಿರಲಿಲ್ಲ. ಆ ದಾಳಿಯಲ್ಲಿ ೪೦೦ ಜನರು ಮೃತಪಟ್ಟರು. ೧೪೦೦ ಜನರಿಗೆ ಗಾಯಗಳಾದವು.

ಅನಂತರ ಕೂಡಾ ಆಗಾಗ್ಗೆ ಲಂಡನ್ನಿನ ಮೇಲೆ ಭಯಂಕರ ವಿಮಾನ ದಾಳಿ ಆಗುತ್ತಲೇ ಇದೆ. ಈಗ ಜರ್ಮನಿಯು ತನ್ನ ವಿಮಾನ ಬಲವನ್ನೆಲ್ಲಾ ಲಂಡನ್ನಿನ ಮೇಲೆಯೇ ಏಕೀಕರಿಸಿದೆಂತೆ ತೋರುತ್ತದೆ.

### ಬರ್ಲಿನ್ನಿನಲ್ಲಿ ದಾಳಿ.

ಬ್ರಿಟಿಶ್ ವಿಮಾನಗಳು ಬರ್ಲಿನ್ ಪಟ್ಟಣದ ಮೇಲೆ ಭಯಂಕರ ವಿಮಾನ ದಾಳಿಯನ್ನು ಕಳೆದ ೭ ನೆಯ ತಾರೀಖಿನಿಂದ ಮಾಡಲಾರಂಭಿಸಿವೆ. ತಾ. ೮ ನೆಯ ದಿನ ಬರ್ಲಿನ್ ಪಟ್ಟಣದ ಮೇಲೆ ಮಾಡಲ್ಪಟ್ಟ ದಾಳಿಯು ಈ ವರೆಗಿನ ದಾಳಿಗಳೆಲ್ಲೆಲ್ಲಾ ಹೆಚ್ಚಿನದು. ಅನೇಕ ಕಾರ್ಖಾನೆಯ ಮತ್ತು ಕಟ್ಟಡಗಳ ಮೇಲೆ ಬಾಂಬಿನ ಮಳೆ ಸುರಿದುದರಿಂದ ಅವು ಸುಟ್ಟು ಬೂದಿಯಾದವು. ಒಂದು ಲಗ್ನದ ಸಮಾರಂಭದ ಮೇಲೂ ೧೦೦ ಬಾಂಬುಗಳನ್ನು ಎಸೆಯಲಾಯಿತು.

ಜರ್ಮಯ ಮೆರಿಯನ್ ಎಂಬ ೧೨ ಸಾವಿರ ಟನ್ ಭಾರದ ಹಡಗವು ೩೦೦ ಸೈನಿಕರನ್ನು ತೆಗೆದುಕೊಂಡು ನಾರ್ವೆಜಿಯನ್ ಸಮುದ್ರದಲ್ಲಿ ಹೋಗುತ್ತಿದ್ದಿತು. ಬ್ರಿಟಿಶ್ ಸಬ್‌ಮೇರಿನ್ ಅದನ್ನು ಮುಳುಗಿಸಿತು. ಅದರಲ್ಲಿಯ ಸೈನಿಕರಲ್ಲಿ ೩೦೦ ಜನರು ಮಾತ್ರ ಬದುಕಿದ್ದಾರೆ.

### ಅಮೇರಿಕೆಯ ಸಿದ್ಧತೆ.

ಜನರನ್ನು ಒತ್ತಾಯದಿಂದ ಸೈನ್ಯದಲ್ಲಿ ಸೇರಿಸುವುದಾಗಿ ಅಮೇರಿಕೆಯು ಶಾಸನಮಾಡಿತು. ೩೦ ಲಕ್ಷ ಸೈನಿಕರಿಗೆ ಬೇಕಾಗುವ ಶಸ್ತ್ರಾಸ್ತ್ರಗಳನ್ನೂ ಹಡಗುಗಳನ್ನೂ ಸಿದ್ಧಗೊಳಿಸಲು ೩೦೦೦ ಲಕ್ಷ ಡಾಲರ್ ವೆಚ್ಚಮಾಡಬೇಕೆಂದೂ ಗೊತ್ತಾಯಿತು. ೪೫೦೦ ಲಕ್ಷ ಡಾಲರ್ ಕ್ರಯದ ೨೧೧ ಹಡಗುಗಳನ್ನು ಕಟ್ಟಲು ಸರಕಾರವು ಈಗಾಗಲೇ ಕಾರ್ಯಾಲಯಗಳಿಗೆ ವಹಿಸಿತು.

★

# ಹಿಂದುಗಳ ಭೀಷಣ ಕ್ಷೀಣತೆ ಮತ್ತು ಅದನ್ನು ತಡೆಯುವ ಉಪಾಯ.

**ಹಿಂದೂ ಜನರ ಕ್ಷೀಣತೆಯು ದಿನ ದಿನಕ್ಕೆ ಹೆಚ್ಚುತ್ತಲಿದೆಯೆಂಬುದು ವಿಚಾರಪರರೆಲ್ಲರೂ ಅಹುದೆಂಬ ವಿಷಯ. ಈ ಕೆಳಗಿನ ಸಂಖ್ಯೆಗಳನ್ನು ನೋಡಿದರೆ ಅದು ಹೆಚ್ಚಿಗೆ ಮನದಟ್ಟಾಗುವದು.**

ಹಿಂದುಗಳು ಸನ್ ೧೮೮೧ ರಲ್ಲಿ ಭಾರತದ ಜನಸಂಖ್ಯೆಯಲ್ಲಿ ನೂರಕ್ಕೆ ೭೪.೬ ರಂತೆಯೂ, ೧೮೯೧ ರಲ್ಲಿ ೭೫.೪ ರಂತೆಯೂ, ೧೯೦೧ ರಲ್ಲಿ ೭೧.೯ ರಂತೆಯೂ, ೧೯೧೧ ರಲ್ಲಿ ೭೧.೬ ರಂತೆಯೂ, ೧೯೨೧ ರಲ್ಲಿ ೭೦.೭ ರಂತೆಯೂ ಆಗಿ ಕ್ಷೀಣಿಸುತ್ತಲೇ ಬಂದಿದ್ದಾರೆ.

ಈಗ ನೂರಕ್ಕೆ ೭೫ ರಂತೆಯಾದರೂ ಇರಬಹುದೆ? ಎಂಬುದು ಸಂದಿಗ್ಧ ವಿಷಯ. ಹೀಗೆಯೇ ಮುಂದೆ ನಾಲ್ಕು ನೂರು ವರ್ಷಗಳ ವರೆಗೆ ಸಾಗಿದರೆ ಹಿಂದೂ ಧರ್ಮವು ನಿಶ್ಶೇಷವಾಗುವುದರಲ್ಲಿ ಸಂದೇಹವಿಲ್ಲ.

★★★★★★★★★★★★★★★★


ಲೇಖಕರು—

**ಶ್ರೀ. ಸಂತರಾಮ ಬಿ. ಎ. ಅವರು.**


★★★★★★★★★★★★★★★★

ಹಿಂದುಗಳಲ್ಲಿ ಹೆಚ್ಚು ಮಂದಿ ಸಾಯುವುದರಿಂದ ಹೀಗಾಗುತ್ತದೆಂದು ಕೆಲವರು ತರ್ಕಿಸಬಹುದು. ನಿಜ ಸ್ಥಿತಿಯನ್ನು ಸೂಕ್ಷ್ಮವಾಗಿ ಪರಾಮರ್ಶಿಸಿ ನೋಡಿದಲ್ಲಿ ಈ ತರ್ಕವು ನಿಜವಲ್ಲವೆಂದು ಕಂಡುಬರುವದು. ಸನ್ ೧೯೧೧ ರ ಖಾನೆಸುಮಾರಿಯಂತೆ ಹಿಂದು ಸ್ಥಾನದಲ್ಲಿ ೨೧,೭೫,೫೬,೯೯೪ ಹಿಂದುಗಳಿದ್ದರು. ಈ ಸಂಖ್ಯೆಯು ೧೯೨೧ ರಲ್ಲಿ ಕ್ಷೀಣಿಸಿ ೨೧,೬೭,೫೩,೫೫೬ ಕ್ಕೆ ಬಂದು ನಿಂತಿತು. ಅರ್ಥಾತ್ ಕೇವಲ ಹತ್ತು ವರ್ಷಗಳಲ್ಲಿ ೮॥ ಲಕ್ಷ ಜನರು ಕಡಿಮೆಯಾದರು. ಅವರೆತ್ತ ಹೋದರು?

ಉದಾಹರಣಾರ್ಥವಾಗಿ ಈ ಸಣ್ಣ ಘಟನೆಯನ್ನು ನೋಡಿ. ೧೯೨೧ ರ ಖಾನೆಸುಮಾರಿಯಂತೆ ಕ್ರಿಶ್ಚನರಲ್ಲಿ ೯ ಲಕ್ಷ ಜನರು ೧೯೧೧ ರ ಜನಗಣನೆಗಿಂತಲೂ ಏರಿದರು. ಅವರ ಜನಸಂಖ್ಯೆಯು ೪೫೪೪೦೭೯ ರಷ್ಟಾಯಿತು. ಬೇರೆ ರೀತಿಯಿಂದ ಹೇಳುವದಾದರೆ ಹತ್ತು ವರ್ಷಗಳಲ್ಲಿ ೮॥ ಲಕ್ಷ ಹಿಂದುಗಳು ಕ್ಷೀಣಿಸಿದರು. ಮತ್ತು ಅದೇ ಹತ್ತು ವರ್ಷಗಳಲ್ಲಿ ೯ ಲಕ್ಷ ಕ್ರೈಸ್ತರು ಹೆಚ್ಚಾದರು. ಇದರಿಂದ ಪ್ರತಿ ದಿನ ಸುಮಾರು ೨೪೪ ಕ್ಕಿಂತಲೂ ಕ್ರಿಶ್ಚಿಯನ್ನರು ಬೆಳೆಯುತ್ತಾರೆಂಬುದೂ, ಸಾಧಾರಣ ಅಷ್ಟೇ ಹಿಂದುಗಳು ಕಡಿಮೆಯಾಗುತ್ತಾರೆಂಬುದೂ ಸ್ಪಷ್ಟವಾಗುವುದು.

ಮದ್ರಾಸಿನ ಲಾಟ ಪಾದರಿಗಳು ೧೯೨೫ ರಲ್ಲಿ ತಮ್ಮ ಕಾರ್ಯಕ್ಷೇತ್ರದ ವರದಿಯನ್ನು ಪ್ರಸಿದ್ಧಿಸಿದ್ದಾರೆ. ಆದರಲ್ಲಿ ಪ್ರತಿ ತಿಂಗಳಿಗೆ ೯೯೩ ರಂತೆ ಕ್ರೈಸ್ತಿಯನರು ವೃದ್ಧಿಯಾದುದನ್ನು ತೋರಿಸಿದ್ದಾರೆ. ಪಂಜಾಬದಲ್ಲಿ ೧೮೮೧ ರಲ್ಲಿ ೩೬೯೯ ಕ್ರಿಶ್ಚಿಯನರಿದ್ದರು. ಅದೇ ೧೯೧೧ ರಲ್ಲಿ ಅವರ ಸಂಖ್ಯೆಯು ೧೮೯೯೪ ಆಯಿತು.

ಅತ್ತ ದಿನೇ ದಿನೇ ಮುಸಲ್ಮಾನರು ಸಹ ತಮ್ಮ ಧರ್ಮದ ವೃದ್ಧಿಯ ವಿಷಯದಲ್ಲಿ ಹಿಂದಾಗಿಲ್ಲ. ೧೮೩೭ ರಿಂದ ಅದೇ ವರ್ಷದ ಆಗಸ್ಟ ೭ ರ ಒಳಗೆ ದಿಲ್ಲಿಯ ಜುಮಾ ಮಸೀದಿಯಲ್ಲಿ ೪೫೩೬ ಮನುಷ್ಯರು ಮುಸಲ್ಮಾನರಾಗಲ್ಪಟ್ಟರು. ಇದರಿಂದ ದಿಲ್ಲಿಯೊಂದರಲ್ಲಿಯೇ ಪ್ರತಿ ದಿನ ೧೬ ರಂತೆ ಮುಸಲ್ಮಾನರಾಗುತ್ತಾರೆಂಬುದು ಗೊತ್ತಾಗುವದು. ೧೮೧೧ ರಿಂದ ೧೮೩೧ ರ ವರೆಗೆ ೩॥ ಲಕ್ಷ ಮುಸಲ್ಮಾನರು ಭಾರತದಲ್ಲಿ ಹೆಚ್ಚಿದರು. ಅರಬಸ್ಥಾನ, ಇರಾಣಗಳಿಂದ ೭ ಕೋಟಿ ಮುಸಲ್ಮಾನರು ಬಂದಿದ್ದಿಲ್ಲ. ಕೇವಲ ೭೦೦ ರಷ್ಟು ಮಾತ್ರ ಇದ್ದರು.

ತಮಗೆ ಹೊಟ್ಟೆಗಿಷ್ಟು ಒಟ್ಟು ಸಿಕ್ಕರೆ ಸಾಕೆಂಬ ನರಪಶುಗಳನ್ನು ಬಿಟ್ಟು ತಮ್ಮ ಸಂಸ್ಕೃತಿ, ತಮ್ಮ ಸಮಾಜಗಳ ಬಗ್ಗೆ ಅಳಿಮಾನವುಳ್ಳ ಯಾವದೇ ಹಿಂದುವಿಗೆ ತಮ್ಮ ಈ ತರದ ಕ್ಷೀಣತೆಯನ್ನು ಕಂಡು ಕಣ್ಣೀರ ಬುಗ್ಗೆಯು ಚಿಮ್ಮದಿರದು. ಆ ಸ್ವಮತಾಭಿಮಾನಿಗೆ-ಆ ಕಣ್ಣುಗಳಿಂದ - ಮನುಷ್ಯ ಪದವಿಗೆ ಅರ್ಹವಾಗುವ ಮಾನವನಿಗೆ - ವಿಚಾರ ಮಾಡಲು ಈ ಲೇಖನವನ್ನು ಬರೆದಿರುತ್ತದೆ. ಅದನ್ನು ಆತನು ಧೀರನಾಗಿ ವಿಮರ್ಶಿಸಿಯೇ ಒಪ್ಪಲೆಂದು ಲೇಖಕನು ಬೇಡುವನು.

ವ್ಯಕ್ತಿ ಅಥವಾ ರಾಷ್ಟ್ರದ ಇಳಿತರಕ್ಕೆ ಸಾಮಾನ್ಯವಾಗಿ ಎರಡು ಕಾರಣಗಳಿರುತ್ತವೆ.

(೧) ಅನಾರೋಗ್ಯ. (೨) ಸಾಮಾಜಿಕ ಜೀವನದ ನ್ಯೂನತೆ.

ಈ ಎರಡು ದೃಷ್ಟಿಗಳಿಂದ ಹಿಂದೂ ಧರ್ಮವನ್ನು ನೋಡಿದರೆ ಮೊದಲನೆಯದರಿಂದ ನಮ್ಮ ಧರ್ಮಕ್ಕೆ ಹಾನಿಯಾದಂತೆ ಕಂಡು ಬರುವದಿಲ್ಲ. ಇನ್ನು ಹಾನಿಯಾದದ್ದಾದರೆ ಅದು ಎರಡನೆಯ ಕಾರಣದಿಂದಲೇ ಎಂಬುದು ನಿರ್ವಿವಾದವು.

ನಾವು ನಮ್ಮ ಪೂರ್ವಜರಿಂದ ನಿಯಮಿತವಾದ ಸಮಷ್ಟಿ ಜೀವನವನ್ನು ತಿರಸ್ಕರಿಸಿ ವ್ಯಷ್ಟಿ ಜೀವನಕ್ಕೇನೇ ಮಹತ್ವ ಕೊಡುತ್ತಲಿದ್ದೇವೆ. ನಾವು "ಸಂಘೇ ಶಕ್ತಿಃ ಕಲೌಯುಗೇ" ಎಂಬ ತತ್ವವನ್ನು ಮರೆತು ಬೇರೊಬ್ಬ ಹಿಂದುವನ್ನು ಮುಟ್ಟದಿರೋ ನಮಗೆ ವೈಲಿಗೆಯಾಗುತ್ತದೆಂಬ ಭಾವನೆಯವರಾಗಿದ್ದೇವೆ. ಇಷ್ಟೇ ಏಕೆ? ನಮ್ಮಲ್ಲಿಯ ಅತಿ ಹಿಂದುಗಳು (?) ತನ್ನ ಹೆಂಡತಿ ಮಾಡಿದ ಅಡಿಗೆಯನ್ನೇ ಮುಟ್ಟದೆ — ತನ್ನ ಸಂಬಂಧಿಕರೆಲ್ಲರನ್ನೂ ಕೇಳಿಂದು ತಿಳಿದು, ಅವರಿಂದ ಹೊರಗುಳಿದು, ದೇವರ ಭಜನೆ ಮಾಡುತ್ತ ಎಲ್ಲರ ಸಂಪರ್ಕದಿಂದ ದೂರ ಉಳಿದು ಮುಕ್ತಿಯನ್ನು ಸಾಧಿಸುವದೇ ತನ್ನ ಕರ್ತವ್ಯವೆಂದು ಬಗೆಯುತ್ತಿದ್ದಾನೆ.

ಸಮಷ್ಟಿ ಜೀವನದ ಅಧಾವದಿಂದಲೇ ನಾವು ಪರಕೀಯರ ತೊತ್ತಾಗಿ ಕಾಲೊತ್ತುತ್ತಲಿದ್ದೇವೆ. ಇದೇ ಕಾರಣದಿಂದ ಬ್ರಹ್ಮವಿದ್ಯಾಪಾರಂಗತರಾದ ನಾವು ಬ್ರಹ್ಮವಿದ್ಯಾ ಬಾಜಿರಾದ ಕ್ರಿಶ್ಚಿಯನ್, ಮುಸಲ್ಮಾನರಿಗೆ ಶರಣಾಗತರಾಗಬೇಕಾಯಿತು.

ಪಿಂಡ-ದಾನ, ಸಂಧ್ಯಾವಂದನೆ, ಹವನ ಯಜ್ಞ, ಶ್ರಾದ್ಧ-ತರ್ಪಣ ಇತ್ಯಾದಿ ಕ್ರಿಯೆಗಳು ಒಳ್ಳೆಯವಾದರೂ ಅವು ವ್ಯಕ್ತಿಗತವಾದವುಗಳು. ಅದನ್ನು ಮಾಡದೇ ಇರುವದರಿಂದ ಆಗುವ ಹಾನಿಯಾಗಲೀ, ಅದನ್ನು ಮಾಡುವದರಿಂದಾಗುವ ಲಾಭವಾಗಲೀ ವ್ಯಕ್ತಿಗತ ವಿಚಾರದ್ದು. ಆದರೆ ತಾನು ಉಳಿದವರಿಗಿಂತ ಮಿಗಿಲೆಂದು ಭಾವಿಸಿ, ಅವರೊಡನೆ ಅನ್ನ ಸಂಬಂಧ, ಶರೀರ ಸಂಬಂಧಗಳನ್ನು ಬೆಳೆಸದೆ ಜನತೆಯೊಡನೆ ಸಮತೆ ಬಂಧು ಭಾವದಿಂದ ವರ್ತಿಸದ ಮನುಷ್ಯನು ಸಮಾಜದಲ್ಲಿ ದ್ವೇಷದ ಬೀಜವನ್ನು ಬಿತ್ತುತ್ತಾನೆ. ಮತ್ತು ಸಮಾಜದ ಸಂಘಟನೆಯನ್ನು ಬಲಹೀನವನ್ನಾಗಿ ಮಾಡುತ್ತಾನೆ. ಅವನು ಸಮಾಜ ಭಂಗದಂತಹ ದೊಡ್ಡ ಪಾಪಕ್ಕೆ ಗುರಿಯಾಗುತ್ತಾನೆ. ಇಸ್ಲಾಮಿ ಧರ್ಮದಲ್ಲಿ ಸಹ "ವ್ಯಕ್ತಿಗತ ಪಾಪವನ್ನು ದೇವರು ಮನ್ನಿಸುತ್ತಾನೆಂದೂ, ಸಾಮಾಜಿಕ ಪಾಪವನ್ನು ದೇವರು ಸಹ ಮನ್ನಿಸುವದಿಲ್ಲವೆಂದೂ" ಒಂದು ಹೇಳಿಕೆಯಿದೆ. ಹಿಂದುಗಳು ಸಮಾಜಕ್ಕೆ ಮಹತ್ವವನ್ನು ಕೊಡದೆ ವ್ಯಕ್ತಿಗೆ ಕೊಡುವದರಿಂದಲೇ ಅವರ ಕ್ಷೀಣತೆಯಾಗುತ್ತಾ ನಡೆದಿದೆ.

"ಜಗನ್ಮಿಥ್ಯಾ" ಎಂಬುದನ್ನು ನೆಚ್ಚಿಕೊಂಡು ಭೂಲೋಕವನ್ನು ಸ್ವರ್ಗ ಲೋಕಕ್ಕೆ ಹೋಗುವ ಸೋಪಾನವನ್ನಾಗಿ ಎಷ್ಟೋ ಹಿಂದುಗಳು ಮಾಡಿಕೊಂಡು ಮುಕ್ತಿಗಾಗಿ ಹೋರಾಡುತ್ತಿದ್ದಾರೆ. ಆದುದರಿಂದ ಸಂಘಶಕ್ತಿ, ಸಂಘಟನೆ ಇವುಗಳ ಕಡೆಗೆ ಅವರು ಮನಸ್ಸು ಹಾಕುವುದಿಲ್ಲ. ಪುನರ್ಜನ್ಮದಲ್ಲಿ ನಂಬುಗೆಯಿಡುವ ಹಿಂದುಗಳು ಈ ರೀತಿ ಜೀವನಕ್ಕೆ ಜಿಗುಪ್ಸೆ ಹೊಂದಿರುವದು ಶೋಚನೀಯವು.

ಒಕ್ಕಟ್ಟಿನಿಂದ--ಸಂಘಟನೆಯಿಂದ ಎಂತಹ ಮಹತ್ ಕೃತ್ಯಗಳಾದರೂ ಜರುಗುತ್ತವೆ. ಬಲಿಷ್ಠ ಸಮಾಜದ ಮುಂದೆ ಎಂತಹ ವ್ಯಕ್ತಿಯಾದರೂ ತಲೆಬಾಗಲೇ ಬೇಕು. "ವ್ಯಕ್ತಿಗಿರುವ ಶಕ್ತಿಯು ಆವನ ಸದಾಜದಲ್ಲಿಯೇ! ಸಮಾಜದಿಂದ ಹೊರಗಾದರೆ ಅವನನ್ನು ಕೇಳುವವರಾರೂ ಇಲ್ಲ' ಎಂದು ಉರ್ದು ಕವಿ ಇಕಬಾಲರು ಹೇಳಿದ್ದು ಅಕ್ಷರಶಃ ನಿಜವಿದೆ.

ನದಿಯ ನೀರು ಹರಿಯುತ್ತಿರುವಾಗ ಮಾತ್ರ ಸ್ವಚ್ಛ ಮತ್ತು ನಯನ ಮನೋಹರವಿರುತ್ತದೆ. ಹರಿಯುವುದು ನಿಂತರೆ ಕೊಳೆತು ಕ್ರಿಮಿಕೀಟಕ ಗಳಾಗುತ್ತವೆ. ಕೊನೆ ಕೊನೆಗೆ ಜಲಬಿಂದುಗಳು ಸಹ ಬೇರೆ ಬೇರೆಯಾಗಲು ಭಯಪಡುತ್ತವೆ. ಈ ನದಿಯ ನೀರಿನಂತೆಯೇ ಹಿಂದುಗಳ ಗತಿಯಾಗಿದೆ. ಊಟ—ಶರೀರ ಸಂಬಂಧಗಳಾಗದ ನಾಲ್ಕು ಪಂಗಡಗಳು ಮೊದಲಿದ್ದವು. ಪ್ರತಿಯೊಂದು ಪಂಗಡದಲ್ಲಿಯೂ ಮತ್ತೆ ಹತ್ತು-ಹನ್ನೆರಡು ಉಪ ಪಂಗಡಗಳು. ಇವು ಸಹ ಊಟ-ಶರೀರ ಸಂಬಂಧವನ್ನು ಪರಸ್ಪರರಲ್ಲಿ ಬೆಳೆಸುವದಿಲ್ಲ. ಇಪ್ಪೇ ಅಲ್ಲ; ನಾ ಮೇಲು — ನೀ ಮೇಲು ಎಂದು ಹೊಡೆದಾಟ ಬೇರೆ. ಇಂತಹ ಸಮಾಜ ಭಂಜಕರಿಗೆ ನಾಶವಲ್ಲದೆ ಮತ್ತೇನು? ಹೊರಗೆ ಹೋಗಲು ಮಹಾ ದ್ವಾರವನ್ನಿಟ್ಟು ಒಳಗೆ ಬರಲು ಹಾದಿಯೇ ಇಲ್ಲದಿದ್ದರೆ ಅಂತ್ಯವು ಶೂನ್ಯದಲ್ಲಿಯೇ ಅಲ್ಲವೇ?

ಆರ್ಯ ಸಮಾಜದ ಶುದ್ಧಿ ಕಾರ್ಯದಿಂದ ಹಿಂದುಗಳ ಕತ್ತಲೆ ತೀವಿದ ಆಕಾಶವು ಮತ್ತೊಮ್ಮೆ ಪ್ರಕಾಶಮಾನವಾದೀತೆಂದು ಭಾವಿಸಿದ್ದೆವು. ಆದರೆ ಅವರಲ್ಲಿಯೂ ವರ್ಣಭೇದಗಳು ಕಂಡು ಬರುತ್ತಿರುವದರಿಂದ ಅವರ ಶುದ್ಧಿಯು ಜನಿವಾರ ಮಾತ್ರದಲ್ಲಿಯೇ ಉಳಿದಿದೆ.

ಹಿಂದೂ-ಮುಸಲ್ಮಾನರ ಜಗಳಕ್ಕೆ ಸರಕಾರೀ ನೌಕರಿಯು ಮೂಲ ಕಾರಣವಲ್ಲ. ಸಾಂಪ್ರದಾಯಿಕವಾಗಿ ನಡೆದು ಬಂದ ಹಿಂದೂ-ಮುಸಲ್ಮಾನರ ದೊಂಬೆಯ ಇತಿಹಾಸದ ಹಿಂದೆ

★★★★★★★★★★★★★★★★


ಅನುವಾದಕರು—

**ಮಹಾಬಲೇಶ್ವರ, ಬಂಕಿಕೋಡ್ಲ.**


★★★★★★★★★★★★★★★★

ರೊಟ್ಟಿಯ ಪ್ರಶ್ನೆಯಿಲ್ಲ. ಆವರು ರಾಜಕೀಯ ರಂಗದಲ್ಲಿ ತಮಗೆ ದೊಡ್ಡ ಸ್ಥಾನ ಬೇಕೆಂದೂ ದಂಗೆಗಳನ್ನೆಳಿಸುವದಿಲ್ಲ. ಏಕೆಂದರೆ ದಂಗೆಗಳನ್ನೆಳಿಸುವವರು ಕೇವಲ ಅಶಿಕ್ಷಿತರಲ್ಲದೆ ಸುಶಿಕ್ಷಿತರಲ್ಲ.

ಮೊದಲು ಭಯ, ಲೋಭ ಇತ್ಯಾದಿ ಕಾರಣಗಳಿಂದ ಮುಸಲ್ಮಾನರಾದವರು ತಿರುಗಿ ಹಿಂದುವಾಗಲು ಯತ್ನಿಸಿದರು. ಆದರೆ ಇವರು ಒಪ್ಪಲಿಲ್ಲ. ಇಷ್ಟೇ ಅಲ್ಲ; ಅವರನ್ನು ಮುಟ್ಟಿಸಿಕೊಳ್ಳಲೂ ಹಿಂತೆಗೆದರು. ಆಗ ಮುಸಲ್ಮಾನರ ಸಂಖ್ಯೆಯು ಬಹಳವಿದ್ದಿಲ್ಲ. ತಾವು ಬಹು ಸಂಖ್ಯಾಕರಾಗದೆ ಹಿಂದುಗಳಿಂದ ತಿರಸ್ಕೃತರಾಗುವದು ತಪ್ಪಲಿಕ್ಕಿಲ್ಲೆಂದು ಬಗೆದು ತಮ್ಮ ಸಮಾಜವನ್ನು ಹಗಲಿನಲ್ಲಿ ಇಮ್ಮಡಿ ನಿಶೆಯಲ್ಲಿ ನಾಲ್ಮಡಿ ಬೆಳೆಸಹತ್ತಿದರು. ಮತ್ತು ಈ ಆಂತರಿಕ ರೋಷವನ್ನು ಮಸೀದೆಯ ಮುಂದೆ ಬಾರಿಸಗೊಡದಿರುವದು, ಗೋವಧೆ ಇತ್ಯಾದಿಗಳಿಂದ ಹೊರಹಾಕಹತ್ತಿದರು. ಅದು ಇಂದಿಗೆ ಇಂತಹ ರೂಪವನ್ನು ಧರಿಸಿ ಮುಂದೆ ನಿಂತಿದೆ. ಅದು ಹಿಂದುಗಳ ಜಿಗುಪ್ಸೆಯ ಬೃಹತ್ ರೂಪವೆಂದನ್ನು ಯಾರೂ ಮರೆಯುವಂತಿಲ್ಲ. ಅಸ್ಪುವಾಗಿ, ಅನಿರ್ದುಷ್ಟವಾಗಿ, ನಿರಾಕಾರವಾಗಿ ತ ಪ್ರತಿಪಾದನೆ ಮಾಡುವದಕ್ಕಿಂತ ದೃಷ್ಟಾಂತಗ ನ್ನೆತ್ತಿ ಭಾವವನ್ನು ವಿವರಿಸುವದು ಮೇಲ್ಲವೇ?

ಸಿಲೋನ್‌ನದಲ್ಲಿಯ ಬೌದ್ಧ ಭಿಕ್ಷುಗಳಲ್ಲಿ ಕೆ ವರು ಕ್ರಿಶ್ಚಿಯನರಾಗಿಸಲ್ಪಟ್ಟರು. ಆದರೆ ಕೆ ಯ ಬೌದ್ಧರು ಆ ಪರಿವರ್ತಿತ ಭಿಕ್ಷುಗಳಿಗೆ ಒ ಷ್ಕಾರವನ್ನು ಕೊಡಲೇ ಇಲ್ಲ. ಮೊದಲಿನಂತೆಯೇ ಊಟ ಉಡಿಗೆಗಳು ನಡೆಯುತ್ತಿದ್ದ ಪ್ರೇಮ ಭಾವನೆಯೇ ಎಲ್ಲರಲ್ಲಿಯೂ ಮೊದಲಿನಂತೆಯೇ ನೆಲೆಸಿತ್ತು. ಅಂತ್ಯದಲ್ಲಿ ನೋಡಲಾ ಕೆಲವು ದಿನಗಳಲ್ಲಿಯೇ ಅವರೆಲ್ಲರೂ ತಿರುಗಿ ಬೌ ಕೀಯರಾದರು.

ಆದುದರಿಂದ ಹಿಂದುಸ್ಥಾನದಲ್ಲಿ ಹಿಂ ಧರ್ಮವು ಬದುಕಿ ಬಾಳಿ ಉಳಿಯಲು ಕೊಳೆ ಕ ಕಾರ್ಯ ರಂಗಕ್ಕೆಳಿಯಬೇಕಾದರೆ ಮೇ ಕೀಯೆಂಬ ಭಾವನೆ ಮೊದಲು ಹೋಗಬೇ

# ನಿಜಾಮ ರಾಜ್ಯವು ಸ್ವತಂತ್ರ ರಾಷ್ಟ್ರವಾಗಬೇಕು !

**ಶಸ್ತ್ರಗಳ ಕಾರ್ಯಾಲಯ.**

"ಅಶಾಫಿಯಾಹಾಂ (ನಿಜಾಮ ಸಂಸ್ಥಾನಾಧಿಪತಿಗಳ) ರಾಜಮನೆತನದ ವರ್ತಮಾನ ಮತ್ತು ಭವಿಷ್ಯ ಕಾಲಗಳ ಸಂಬಂಧವಾಗಿ ಯಾವ ಸಂಗತಿಗಳನ್ನು ಆಲೋಚಿಸುವುದು ಅತ್ಯಗತ್ಯವಾಗಿದೆಯೋ ಆ ಸಂಗತಿಗಳನ್ನು ಕುರಿತು ದಕ್ಷಿಣ ಹಿಂದುಸ್ಥಾನದ ಮುಸಲ್ಮಾನರು ಈಗ ಯೋಚಿಸುವಂತಹ ಪರಿಸ್ಥಿತಿಯು ಈಗಿನ ಯುದ್ಧದಿಂದ ಉಂಟಾಗಿದೆ. ಅಂತೆಯೇ ನಾವು ತಿಳಿಸುವ ಈ ಸಂಗತಿಗಳನ್ನು ರಾಜಮನೆತನವು ಅವಶ್ಯಕವಾಗಿ ಯೋಚಿಸಬೇಕು.

ಇಂಗ್ಲಿಷರಿಗೆ ಈಗ ನಮ್ಮ ಸರಕಾರವು ಸೈನ್ಯ ಕೂಡಿಸಿ ಯುದ್ಧದಲ್ಲಿ ಸಹಾಯ ಮಾಡುತ್ತಲಿದೆಯೆಷ್ಟೆ. ಈ ಸಹಾಯವು ನಮ್ಮ ಸರಕಾರದ ಘನತೆಗೆ ಸರಿಯಾದುದಲ್ಲ. ಇಲ್ಲಿಂದ ಹೋಗುವ ಸೈನಿಕರು ಬರಿಗೈಯಿಂದ ಹೋಗುತ್ತಿದ್ದಾರೆ. ಇದು ನಮ್ಮ ಸರಕಾರದ ಘನತೆಗೆ ಕೊರತೆ. ಅವರೆಲ್ಲರೂ ಶಸ್ತ್ರ ಸನ್ನದ್ಧರಾಗಿ ಹೋಗುವಂತೆ ಮಾಡಬೇಕು. ಅದೇ ನಮಗೆ ಭೂಷಣ.

ನಿಜಾಮ ಸರಕಾರವೇನೂ ಶಸ್ತ್ರ ನಿರ್ಮಾಣದ ವಿಷಯದಲ್ಲಿ ಬ್ರಿಟಿಶ್ ಸರಕಾರದ ನಿರ್ಬಂಧಕ್ಕೊಳಗಾಗಿಲ್ಲ. ಆದಕಾರಣ ಈಗ ಈ ನಮ್ಮ ರಾಜ್ಯದ ಅನೇಕ ಕಡೆ ಯುದ್ಧಕ್ಕೆ ಬೇಕಾಗಿರುವ ಅನೇಕ ಶಸ್ತ್ರಾಸ್ತ್ರಗಳನ್ನು ಯಥೇಚ್ಛವಾಗಿ ಸಿದ್ಧಗೊಳಿಸಲು ಕಾರ್ಯಾಲಯಗಳನ್ನು ಸರಕಾರವು ಸ್ಥಾಪಿಸಬೇಕು. ಯುದ್ಧಕ್ಕೆ ಎಲ್ಲಿಯ ವರೆಗೂ ಸೈನ್ಯವನ್ನು ಕಳಿಸುತ್ತಿರಬೇಕಾಗುವುದೋ ಅಲ್ಲಿಯ ವರೆಗೂ ಅವರಿಗೆ ಬೇಕಾಗಿರುವ ಶಸ್ತ್ರಾಸ್ತ್ರಗಳನ್ನೂ ಕಳಿಸಬೇಕು.

ಹೀಗೆ ಶಸ್ತ್ರಾಸ್ತ್ರಗಳ ನಿರ್ಮಾಣ ಕಾರ್ಯವು ಸರಕಾರಕ್ಕೆ ಸಾಧ್ಯವಿಲ್ಲದಿದ್ದರೆ ಆ ಕಾರ್ಯವನ್ನು ಅಂಜುಮಾನ್ ಸಂಸ್ಥೆಯವರಾದ ನಾವು ವಹಿಸಿಕೊಳ್ಳಲು ಸಿದ್ಧರಾಗಿದ್ದೇವೆ. ನಮ್ಮ ನೇತೃತ್ವದಲ್ಲಿ ಯಥೇಚ್ಛವಾಗಿ ಶಸ್ತ್ರಾಸ್ತ್ರಗಳನ್ನು ಇಲ್ಲಿ ಸಿದ್ಧಮಾಡಿಕೊಡುತ್ತೇವೆ.

**ಆತ್ಮಾಹುತಿಗೆ ಸಿದ್ಧ.**

ಈಗ ದೇಶದಲ್ಲಿ ಶಾಂತತೆಯಿರಬೇಕೆಂಬ ಉದ್ದೇಶವೊಂದೇ ನಮ್ಮದಲ್ಲ. ರಣಭೂಮಿಯಲ್ಲಿ ಕೂಡಾ ನಮ್ಮ ಸೇವೆ ಹೆಚ್ಚಾಗಿ ಸಲ್ಲಬೇಕೆಂದೇ ನಮ್ಮ ಇಚ್ಛೆ. ಸೈನ್ಯ ಮತ್ತು ಶಸ್ತ್ರಾಸ್ತ್ರಗಳಿಂದ ಬೇಕಾದ ಸಹಾಯ ಮಾಡಲು ನಾವು ಸಿದ್ಧರಾಗಿದ್ದೇವೆ. ಪ್ರತಿಯೊಬ್ಬ ಮುಸಲ್ಮಾನನೂ ಈ ಕಾರ್ಯಕ್ಕೋಸ್ಕರ ಆತ್ಮಾಹುತಿ ಕೊಡಲು ನಾ ಮುಂದೆ ತಾ ಮುಂದೆ ಎಂದು ಬರುವವನಾಗಿದ್ದಾನೆ.

ಆದಕಾರಣ ನಮ್ಮ ನೇತೃತ್ವದಲ್ಲಿ ಶಸ್ತ್ರ ನಿರ್ಮಾಣವಾಗುವಂತೆ ಮಾಡಿದ್ದಾದರೆ ಈಗಿನ ಯುದ್ಧಕ್ಕೆ ಬೇಕಾಗಿರುವ ಶಸ್ತ್ರಾಸ್ತ್ರಗಳು ದೊರೆಯುವಲ್ಲದೆ ಅವೇ ಮುಂದೆ ಈ ದೇಶದ ಶಾಂತತೆಯ ರಕ್ಷಣೆಗೂ ಉಪಯೋಗವಾಗುವವು.

**ಹೈದರಾಬಾದಿನ "ಅಂಜುಮಾನೆ ಇತ್ತೆಹಾದುಲ್ ಮುಸಲ್ಮೀನ್" ಸಂಸ್ಥೆಯ ಅಧ್ಯಕ್ಷರಾದ ನಬಾಬ ಬಹದ್ದೂರ್ ಯಾರಜಂಗ್ ಬಹದ್ದೂರ್ ಅವರು ನಿಜಾಮ ಸರಕಾರದ ಮುಖ್ಯ ಮಂತ್ರಿಗಳಾದ ಸರ್ ಅಕಬರ ಹೈದರಿ ಅವರ ಕಡೆಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಕಳಿಸಿದ್ದಾರೆ. ಅದರ ಮುಖ್ಯಾಂಶ ಹೀಗಿದೆ—**

**ಸ್ವತಂತ್ರ ಹೈದರಾಬಾದ!**

ಕ್ರಿ. ಶ. ೧೭೨೪ ನೆಯ ಇಸವಿಯಲ್ಲಿ ಆಸಾಫಿಯಾ ರಾಜಮನೆತನವು ದಕ್ಷಿಣದಲ್ಲಿ ತನ್ನ ಧ್ವಜವನ್ನು ಮೆರೆಸಿದಾಗಲೇ ಹೈದರಾಬಾದದ ಸ್ವತಂತ್ರತೆಯು ಸರ್ವಮಾನ್ಯವಾಗಿದೆ. ಈಗ ಬ್ರಿಟಿಶರಿಗೂ ನಿಜಾಮ ಸರಕಾರದವರಿಗೂ ಮಿತ್ರತ್ವದ ಸಂಬಂಧವೇ ವಿನಾ ಬೇರೆಯಲ್ಲ. ಎಂದ ಮೇಲೆ ಬ್ರಿಟಿಶ್ ಸರಕಾರದ ಸಂಗಡ ಅದೇ ಪ್ರಕಾರ ನಮ್ಮ ಸರಕಾರವು ನಡೆದುಕೊಳ್ಳಬೇಕು. ಆದರೆ ಅದರ ಈಗಿನ ಪರಾವಲಂಬನೆಯ ಸ್ಥಿತಿಯನ್ನು ನೋಡಿ ತರುಣ ಮುಸ್ಲಿಮರ ಅಂತಃಕರಣ ಕಳವಳಿಸುತ್ತಿದೆ. ಇದಕ್ಕೆ ನಾವೇ ಕಾರಣರು.

"ಹೈದರಾಬಾದ ಸ್ವತಂತ್ರವಾದುದು. ಇದರಲ್ಲಿ ಅನ್ಯರ ಕೈವಾಡಕ್ಕೆ ಅವಕಾಶವೇ ಇಲ್ಲ. ಇದನ್ನು ಪೂರ್ಣ ಸ್ವತಂತ್ರಗೊಳಿಸಿದಾಗಲೇ ಇದರ ರಾಜಕೀಯ ಜೀವನಕ್ಕೆ ಚೈತನ್ಯ ಪ್ರಾಪ್ತವಾಗುವುದು." ಎಂದು ತಿಳಿದು ನಾವು ಪ್ರಯತ್ನಿಸೋಣ ಬನ್ನಿರಿ.

ಬ್ರಿಟಿಶ್ ಸಾಮ್ರಾಜ್ಯವು ಉನ್ನತಾವಸ್ಥೆಯಲ್ಲಿರುವುದು ಅದಕ್ಕೆ ಭೂಷಣಪ್ರದವೇ ಸರಿ. ಹೈದರಾಬಾದವು ಕೂಡಾ ಅದರ ಪಾಶವನ್ನೇ ಕಲಿತು ತಾನೂ ಪೂರ್ಣ ಸ್ವತಂತ್ರವಾಗಿ ಮಿತ್ರತ್ವದ ಸಹಕಾರ ಮಾಡುತ್ತಾ ಇರುವ ಸ್ಥಿತಿಯನ್ನು ತಂದುಕೊಳ್ಳಲು ಇಂಥ ಸುಸಮಯದಲ್ಲಿ ಏಕೆ ಪ್ರಯತ್ನಿಸಬಾರದು? ಈಗಿನ ಕಾಲ ಬಹು ಅನುಕೂಲವಾಗಿದೆ.

**ಹೋದದ್ದು ಪುನಃ ಬರುವುದು,**

ಇಂಗ್ಲಿಷರಿಗೂ ನಿಜಾಮರಿಗೂ ನಡೆದಿರುವ ಒಪ್ಪಂದವು ಎಲ್ಲಿಯ ವರೆಗೆ ಇಂಗ್ಲಿಷ್ ಸರಕಾರವು ಆ ಪ್ರಕಾರ ನಡೆಯಲು ಸಮರ್ಥವಾಗಿದೆಯೋ ಅಲ್ಲಿಯ ವರೆಗೇನೇ ನಿಜಾಮರಿಂದ ಅನುಸರಿಸಲ್ಪಡತಕ್ಕದ್ದಾಗಿದೆ. ಎಂದು ಹಿಂದುಸ್ಥಾನ ಸ್ವತಂತ್ರವಾಗುವುದೋ ಆಂದೇ ಅಳಿದು ಹೋದ ಹೈದರಾಬಾದಿನ ಸ್ವತಂತ್ರವೂ ಪುನಃ ಪ್ರಾಪ್ತವಾಗುವುದು. ಹೊಸ ರಾಜ್ಯ ಘಟನೆಗೆ ಸರಿಯಾದ ರೀತಿಯಲ್ಲಿ ಅದು ಮಿತ್ರ ರಾಷ್ಟ್ರವಾಗಿ ನಡೆದುಕೊಳ್ಳುವುದು.

**ಮೊದಲನೆಯ ಪ್ರಶ್ನೆ.**

ಹಿಂದುಸ್ಥಾನದ ಸ್ವತಂತ್ರತೆಯ ಕಾಲ ಯಾವುದು ಬಲ್ಲಿರಾ? ಸೈನ್ಯದ ನೆಚ್ಚು ಮೊದಲಾದುಗಳಿಗಾಗಿ ಬ್ರಿಟಿಶರಿಗೆ ಈಗ ಕೊಟ್ಟರೆ ತಕ್ಕ ನಿಜಾಮರ ಪ್ರಾಂತಗಳನ್ನು ಪುನಃ ತಿರುಗಿ ನಿಜಾಮರಿಗೆ ಕೊಡುವುದು.

ಆದಕಾರಣ ಆ ವಿಚಾರವಾಗಿ ನಿಜಾಮ ಸರಕಾರವು ಈಗಿನಿಂದಲೇ ಯೋಚಿಸಬೇಕು. ಅಂಥ ಸಾಮರ್ಥ್ಯ ಸರಕಾರದಲ್ಲಿದೆ. ಅಂಜುಮಾನೆ ಸಂಘದವರಾದರೂ ಆ ವಿಚಾರವಾಗಿ ಪ್ರಯತ್ನಿಸಲು ಸಿದ್ಧರಿದ್ದಾರೆಂದು ಆ ಶ್ವಾಸನ ಕೊಡುವವರಾಗಿದ್ದಾರೆ.

ಈಗ ಸೈನ್ಯ ಶಾಖೆಯಲ್ಲಿ ಸೈನ್ಯವನ್ನು ಹೆಚ್ಚಿಸಿ, ಶಸ್ತ್ರಾಸ್ತ್ರಗಳನ್ನೂ ಸಂಗ್ರಹಿಸಬೇಕೆಂದು ನಾವು ಹೇಳುವುದೇಕೆಂದರೆ ಈ ಸೈನ್ಯ ಮತ್ತು ಶಸ್ತ್ರಾಸ್ತ್ರಗಳು ಈಗಿನ ಯುದ್ಧಕ್ಕೆ ಸಹಾಯ ಮಾಡುವವಲ್ಲದೆ ಮುಂದೆ ಅವು ತಮ್ಮ ಒಡೆಯರ ಸೇವೆಗೂ ಸಿದ್ಧವಾಗಿರುವವೆಂದು.

ನಿಜಾಮ ಭಾಗದ ಯಾವ ಯಾವ ಸ್ಥಳಗಳಲ್ಲಿ ಬ್ರಿಟಿಶ್ ಸೈನ್ಯವಿದೆಯೋ ಅಲ್ಲಿಂದ ಅದನ್ನು ತೆಗೆದು ಆಯಾಯ ಸ್ಥಳಗಳನ್ನು ನಿಜಾಮರ ವಶಪಡಿಸಬೇಕೆಂದೂ, ಬ್ರಿಟಿಶ್ ಸರಕಾರಕ್ಕೂ ನಿಜಾಮ ಸರಕಾರಕ್ಕೂ ಹೆಚ್ಚಿನ ಪ್ರೇಮ ಸಂಬಂಧವುಂಟಾಗುವಂಥ ಒಪ್ಪಂದವಾಗಬೇಕೆಂದೂ ಅಂಜುಮಾನ್ ಸಂಘವು ಬ್ರಿಟಿಶ್ ಸರಕಾರದ ಸಂಗಡ ವಿಚಾರವಿನಿಮಯ ಮಾಡುವುದಿದೆ.

**ಸರಕಾರದ ಕರ್ತವ್ಯ.**

ಅಖಿಲ ಹಿಂದುಸ್ಥಾನದ ಮುಸಲ್ಮಾನರೆಲ್ಲರೂ ಹೈದರಾಬಾದೇ ತಮ್ಮ ರಾಜಮುಕುಟ, ರಾಜಸಿಂಹಾಸನವೆಂದು ತಿಳಿದಿದ್ದಾರೆ. ಇದೇ ತಮ್ಮ ರಾಜಕೀಯ ಜೀವನದ ಸರ್ವಸ್ವವೆಂದು ತಿಳಿದು ಇದರ ಬಲ ಅಭಿವೃದ್ಧಿಗಳಿಗಾಗಿ ಬೇಕಾದಂಥ ತ್ಯಾಗವನ್ನು ಬೇಕಾದಷ್ಟು ಮಾಡಲು ಸಿದ್ಧರಿದ್ದಾರೆ.

ಆದಕಾರಣ ಕಳೆದು ಹೋಗಿರುವ ಪ್ರಾಂತಗಳನ್ನು ಪುನಃ ದೊರಕಿಸಲು ನಿಜಾಮ ಸರಕಾರವು ಈಗ ಪ್ರಯತ್ನಿಸಬೇಕಾದುದೇ ಆದರ ಮೊದಲನೆಯ ಕರ್ತವ್ಯವು. ಇಂಥ ಕರ್ತವ್ಯ ಕ್ಕೋಸ್ಕರ ಅದಕ್ಕೆ ಸಂಪೂರ್ಣ ಶಕ್ತಿಯನ್ನು ದೇವರು ದಯಪಾಲಿಸಲಿ.

ಈ ಬಂಗಾರದಂಥ ಸಮಯವನ್ನು ನಿಜಾಮ ಸರಕಾರವು ಕಳೆದುಕೊಂಡದ್ದಾದರೆ ಕೇವಲ ನಿಜಾಮ ಪ್ರಾಂತದ ಮುಸಲ್ಮಾನರೇ ಅಲ್ಲ; ಅಖಿಲ ಹಿಂದುಸ್ಥಾನದ ಮುಸಲ್ಮಾನರೂ ಈ ಸರಕಾರವನ್ನು ದೂಷಿಸದೆ ಇರಲಾರರು."

★

## ಪಟ್ಟಣಗಳ ಮೇಲೆ ಬಾಂಬು ಬೀಳಬೇಕು!

ಬೆಂಗಳೂರಲ್ಲಿ ಮೊನ್ನೆ ಡಾ. ಅರುಂಡಲ್ ಅವರು "ಹಿಂದುಸ್ಥಾನ ಮತ್ತು ಯುದ್ಧ" ಎಂಬ ವಿಷಯವಾಗಿ ಒಂದು ಭಾಷಣವನ್ನು ಮಾಡಿದರು. ಆಗ ಸರ್. ಚಂದ್ರಶೇಖರ ವೆಂಕಟರಾಮನ್ ಅವರು ಅಧ್ಯಕ್ಷರಾಗಿದ್ದರು. ಇವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು—

(ಸರ್. ಸಿ. ವ್ಹಿ. ರಾಮನ್ ಅವರು)

"ಈಗಿನ ಯುರೋಪದ ಯುದ್ಧವು ಎಂಥ ಗಂಡಾಂತರದ್ದೆಂಬುದು ಹಿಂದಿಗಾದ ನಮಗೆ ಇನ್ನೂ ಗೊತ್ತೇ ಇಲ್ಲ ಪ್ರತ್ಯಕ್ಷ ನೋಡಿದ ವಿನಾ ದೊಡ್ಡ ಸಮಾಜವು ಜಾಗೃತವಾಗುವುದಿಲ್ಲವೆಂದೇ ಇತಿಹಾಸದಿಂದ ಗೊತಾಗುತ್ತದೆ.

ಇಂಗ್ಲೆಂಡವು ಕೂಡಾ ನಾರ್ವೆದಿಂದ ತಿರುಗಿ ಬರುವ ವರೆಗೂ ಈ ಯುದ್ಧದ ಭೀಕರತೆಯನ್ನು ಸಂಪೂರ್ಣ ಲಕ್ಷಿಸಿರಲಿಲ್ಲ. ಭಾರತೀಯರಾದ ನಮಗಂತೂ ಈ ಯುದ್ಧದ ಕಲ್ಪನೆಯೇ ಇಲ್ಲ. ನಮ್ಮ ಲ್ಲಿಯ ಮಹಾತ್ಮರು ಇಂಗ್ಲೆಂಡಿಗೆ ಅಹಿಂಸೆಯನ್ನು ಬೋಧಿಸಿದ್ದಾರೆ! ಕಾಂಗ್ರೆಸ್ಸು ಮಾತ್ರ ಸ್ವಲ್ಪ ದಾರಿಗೆ ಬಂದಿದೆ.

ಹುಟ್ಟಿದಂದಿನಿಂದ ಎಂದೂ ಹೆಗಲ ಮೇಲೆ ಬಂದೂಕನ್ನೇ ಇಡದ ನಾವು ಯುದ್ಧದ ಪರಿಣಾಮವನ್ನೇನು ಬಲ್ಲೆವು? ಈ ವರೆಗೂ ಅನ್ಯರೇ ನಮ್ಮನ್ನು ರಕ್ಷಿಸುತ್ತಾ ಬಂದಿದ್ದಾರೆ. ಈ ಶೋಚನೀಯ ಸ್ಥಿತಿ ನಿವಾರಣೆಯಾಗಬೇಕು.

ನಾವು ನಮ್ಮ ರಕ್ಷಣೆಯನ್ನಾದರೂ ಮಾಡಿಕೊಳ್ಳಲು ಸಿದ್ಧರಾಗಬೇಕು. ಈಗಿನ ಯುದ್ಧದ ಸಹಾಯ ಇಂಗ್ಲೆಂಡಿಗಿಂತಲೂ ಹಿಂದುಸ್ಥಾನಕ್ಕೇನೇ ಹೆಚ್ಚು ಆಗತ್ಯವಾಗಿದೆ. ನಮಗೆ ಬೇಕಾದುದು ಸಾಮರ್ಥ್ಯ! ಸಾಮರ್ಥ್ಯ!! ಸಾಮರ್ಥ್ಯ!!! ಈ ಕಾಲದಲ್ಲಿ ನಾವು ಇದನ್ನು ಗಳಿಸಿಕೊಳ್ಳದಿದ್ದರೆ ಕಾಡು ಜನರಿಗಿಂತಲೂ ಕೀಳಾಗುವೆವು.

ಬೆಂಗಳೂರು, ಮುಂಬೈ, ಮದ್ರಾಸ, ಕಲಕತ್ತಾ ಮೊದಲಾದ ಈ ದೇಶದ ಪಟ್ಟಣಗಳ ಮೇಲೆ ನಾಜಿ ಬಾಂಬುಗಳು ಬೀಳಬೇಕು. ಆಗಲೇ ನಾವು ಕಣ್ಣು ತೆರೆಯುವೆವು. ಮುಂದಿನ ಗಂಡಾಂತರದ

---

ಅದು ಹೋದೊಡನೆಯೇ ಜಾತಿ ಭೇದವು ಬೇಗನೇ ಅಳಿದೀತು. ಸಾಕಾರವಾದಿ, ನಿರಾಕಾರವಾದಿ, ಶಾಕಾಹಾರಿ, ಮಾಂಸಾಹಾರಿಗಳೆಲ್ಲರೂ ಹಿಂದುಗಳೇ ಆಗಿರುವಾಗ ನಮಾಜ ಮಾಡುವವನೂ, ನಮಸ್ಕಾರ ಮಾಡುವವನೂ ಒಂದೇ ಧರ್ಮದವರಂತೆ ಪ್ರೀತಿಯಿಂದಿದ್ದರೆ ಈ ಉಪಸ್ಥಿತ ಕರಿಗಾಲವು ಕಣ್ಮರೆಯಾಗುತ್ತಿತ್ತು. ಕ್ರೋಧದಿಂದ ಕ್ರೋಧವೂ, ಶಾಂತಿಯಿಂದ ಶಾಂತಿಯೂ ಬೆಳೆಯುತ್ತಿದೆಯೆಂಬುದು ಜನರಿಗೆ ಅಪರಿಚಿತವಾದುದೇನೂ ಇಲ್ಲ.

ಶುಭವಾದುದನ್ನೇ ನಮ್ಮ ಕಿವಿ ಕೇಳಲಿ.
ಸುಂಗಲಕರವಾದುದನ್ನೇ ನಮ್ಮ ಕಣ್ಣು ಕಾಣಲಿ.
ಪರಸ್ಪರ ಪ್ರೀತಿ ಬಂಧುತ್ವದಿಂದ ಸುಖವಾಗಿ
ಜೀವನವು ಸಾಗಲಿ.

# ಕನ್ನಡ ಹಿರಿಯರು ಒಂದಿಷ್ಟು ಲಕ್ಷಕೊಡುವರೆ?

★

ಕನ್ನಡ ನಾಡಿನ ಹಿರಿಯರು ಈಗ ಕನ್ನಡ ಸಂಸ್ಕೃತಿ, ಕನ್ನಡ ಕುಲ ಇವುಗಳನ್ನು ಪುನರುಜ್ಜೀವನಗೊಳಿಸುವ ಎತ್ತುಗಡೆಯಲ್ಲಿದ್ದಾರೆ. ಕನ್ನಡದ ಅಂಗೋಪಾಂಗಗಳಲ್ಲೆಲ್ಲ ಜೀವಗಾಳಿಯು ಹರಿದಾಡುವುದರಿಂದ ಇಡೀ ನಾಡು ಜೀವಕಳೆ ತುಂಬುವುದೆಂಬ ಮಾತಿಗೆ ಯಾರೂ ಅಲ್ಲಗಳೆಯುವಂತಿಲ್ಲ ಕನ್ನಡಮ್ಮನ ಕಾಯಿಲೆಯ ಕಾರಣವನ್ನು ಕಂಡುಹಿಡಿದ ಹಿರಿಯರು ಹಲವು ವಿಧವಾಗಿ ಆಕೆಯನ್ನು ಆರಯಿಸುತ್ತಿದ್ದಾರೆ. ಅವರು ಈಗ, ನಾನು ಮುಂದೊಡ್ಡುವ ಎರಡು ಮಾತುಗಳ ವಿಷಯವಾಗಿ ವಿಚಾರಿಸಬೇಕೆಂದು ಕೇಳಿಕೊಳ್ಳುವೆನು ಆ ಎರಡು ಮಾತುಗಳು ಯಾವವೆಂದರೆ—

(೧) ಕನ್ನಡದ ಸಭೆ ಸಮ್ಮೇಲನಗಳಲ್ಲಿಯೂ ರಾಷ್ಟ್ರೀಯ ಉತ್ಸಾಹಗಳಲ್ಲಿಯೂ 'ಕರ್ನಾಟಕ ಮಾತ ಕೀ- ಜಯ' ಎಂಬ ಜಯಜಯಕಾರ ಮಾಡುತ್ತಿರುವುದನ್ನು ಎಲ್ಲರೂ ಕೇಳಿದ್ದೇವೆ ಈ ಪದ್ಧತಿಯೇ ಹಳ್ಳಿಹಳ್ಳಿಗೂ ಹಬ್ಬಿದೆ. ಈ ಅನ್ಯದೇಶೀಯ ಪದ್ಧತಿಯೂ ಭಾಷೆಯೂ ಇರಬೇಕೋ— ಇರಬಾರದೋ? "ಅವಶ್ಯವಾಗಿ ಇರಬೇಕು ಹಿಂದಿಯು ರಾಷ್ಟ್ರಭಾಷೆ ಅದೆ ಅದನ್ನು ಬಹಿಷ್ಕರಿಸಕೂಡದು" ಎಂದು ಹೇಳುವವರುಂಟು. ಆದರೆ ವೀರಮಾತೆ -ಕನ್ನಡಮ್ಮನಿಗೆ ವೀರಭಾಷೆ ಇಲ್ಲೇ ಇಲ್ಲವೆ? ಆ ವೀರಭಾಷೆ ಹುಟ್ಟಿ ಅಥವಾ ತಲೆಯೆತ್ತಿ ನಾಡಿನ ರಕ್ತವಾಹಿನಿಗಳಾದ ಹಳ್ಳಿಗಳಲ್ಲಿ ಹೊಕ್ಕರೆ, ನಮ್ಮ ನಾಡಿನ ನಿಜವಾದ ಸಂಸ್ಕೃತಿಯನ್ನು ಸಂರಕ್ಷಿಸಿದಂತಾಗುವದಿಲ್ಲವೆ? ಕನ್ನಡ ಜಯ ಜಯಕಾರದ ಅವಶ್ಯಕತೆಯೇ ಇದ್ದರೆ ಆ ಹಿಂದಿ ಜಯ ಜಯಕಾರಕ್ಕೆ ಅನುಗುಣವಾದ ಅಥವಾ ನಮ್ಮ ಕನ್ನಡ ಹೊಸ ಜೀವನಕ್ಕೆ ತಕ್ಕಂತಹ ಶಬ್ದಗಳು ಯಾವವು? ಹೇಗೆ ಉಚ್ಚರಿಸಬೇಕು? ಮೊದಲ ದವುಗಳನ್ನು ಪ್ರಕಟಿಸಬೇಕು. "ಸಿರಿಗನ್ನಡಂ ಗೆಲ್ಲೆ" ಎಂದೂ 'ಕನ್ನಡಂ ಬಾಳ್ಗೆ' ಎಂದೂ ಉಚ್ಚರಿಸಬಹುದೆಂದು ಸೂಚಿಸುವುದಕ್ಕೆ "ಗೆಲ್ಗೆ-ಬಾಳ್ಗೆ" ಇವುಗಳ ಕೋಲುದಂಡಿಗೆ ಸ್ವಲ್ಪ ಸಡಿಲಿಸಬೇಕೆಂದು ನಗೆಯಾಡದೆ ಹೊಸ ಶಬ್ದಗಳನ್ನು ಮುಂದೆ ತರಬೇಕು

(೨) ರಜಕೀಯ ಪಾರತಂತ್ರ್ಯದಿಂದಲೋ ಸ್ವಸಂಸ್ಕೃತಿಯ ಅವಹೇಳನದಿಂದಲೋ ಇಡೀ ಭಾರತೀಯರೊಡನೆ ಕನ್ನಡಿಗರ ಉಡಿಗೆ ತೊಡಿಗೆಗಳೂ ಕಣ್ಮರೆಯಾಗಿವೆ ಧಾರವಾಡದ ಕನ್ನಡಿಗರ ಉಡುತೊಡಿಗೆಯ ರೀತಿಗೂ, ಮೈಸೂರು – ಮಂಗಳೂರುಗಳವರ ರೀತಿಗೂ ಸಂಬಂಧವೇ ಇಲ್ಲ ನಿಜಾಮ ಕನ್ನಡಿಗರೂ ಸೊಲ್ಲಾಪುರ–ಬೆಳಗಾವ ಕನ್ನಡಿಗರೂ ನಮ್ಮವರಲ್ಲವೆನ್ನುವಂತೆ ವಿಚಿತ್ರವಾಗಿ ಕಾಣುತ್ತಾರೆ. ಆದರೆ ಕನ್ನಡತಿಯರಾದ ನಮ್ಮ ತಾಯಿ ತಂಗಿಯರ ಉಡುತೊಡಿಗೆಗಳು ಇದ್ದುದರಲ್ಲಿ ಕನ್ನಡಿಗರ ಮರ್ಯಾದೆಯನ್ನು ಉಳಿಸಿವೆಯೆನ್ನಬಹುದು ಈ ಹೊಸ ಆಂದೋಲನದಲ್ಲಿ ಗಾಂಧಿಟೊಪ್ಪಿಗೆ, ನೇಹರು ಶರಟು ಮುಂತಾದವು ಮೈದೋರಿ ಭಾರತೀಯ ಸಂಸ್ಕೃತಿಯ ರೀತಿಯಿಂದ ಉಡುತೊಡಿಗೆಗಳಲ್ಲಿ ಕ್ರಾಂತಿಯನ್ನೇ ಮಾಡಿದ್ದು ಅಭಿಮಾನದ ಮಾತೇ. ಆದರೆ ಕನ್ನಡಿಗರಿಗೆ ಆ ಮಾತು ಒಂದಿಷ್ಟು ಅಪಮಾನಕರವೇನೋ! ಪಾಶ್ಚಾತ್ಯಾನುಕರಣವು ನಿರ್ಜೀವದ ಲಕ್ಷಣವೆಂದರೆ, ಇದು ಅಂಧಾನುಕರಣ!! ಇಂಗ್ಲಿಷ ಮೊದಲಾದ ಪರಭಾಷೆಯ ಸಾಹಿತ್ಯವನ್ನೂ, ಸಂಸ್ಕೃತ ಮೊದಲಾದ ದೇಶೀಯ ಸಾಹಿತ್ಯವನ್ನೂ ಅರಗಿಸಿಕೊಂಡು ಕನ್ನಡ ಸಾಹಿತ್ಯವು ತನ್ನ ತನವನ್ನು ಕಾಯ್ದುಕೊಂಡು ಹೊಸ ರೂಪವನ್ನು ತೊಟ್ಟಂತ, ಪರಕೀಯರ ವ್ಯವಹಾರ ಸಂಬಂಧಗಳೆಲ್ಲವನ್ನೂ ಅರಿತುಕೊಂಡು ಕನ್ನಡಿಗರು, ತಮ್ಮ ಜೀವಾಳಕ್ಕೆ ಒಗ್ಗುವ ಉಡುತೊಡಿಗೆಗಳನ್ನು ನಿರ್ಧರಿಸಿಕೊಳ್ಳುವುದು ಅವಶ್ಯಕವಿದೆ. ಕನ್ನಡಕ್ಕೇ ಸಂಬಂಧಿಸಿದ ಸಾಹಿತ್ಯ ಸಮ್ಮೇಲನದಂಥ ಸಭೆಗಳಲ್ಲಾದರೂ ಅಂಥ ಉಡಿಗೆತೊಡಿಗೆಗಳೊಂದಿಗೆ ಒತ್ತಟ್ಟಿಗೆ ಕೂಡಿದರೆ, ನೋಡಿದವರಿಗೆ ಇದು ಕನ್ನಡಿಗರ ಕೂಟ ಎಂದು ತಾನಾಗಿ ತಿಳಿಯುವಂತಾಗಬೇಕು. ಕನ್ನಡ ನಾಡಿನ ಹವೆ, ಜನರ ಪ್ರಕೃತಿ, ಆರ್ಥಿಕ ಸ್ಥಿತಿ, ಕೈಕೊಂಡ ಉದ್ಯೋಗ ಇವುಗಳಿಗೆ ಬಾಧೆ ಬರದಂಥ, ಹಳ್ಳಿ ಹಳ್ಳಿಯ ಬಡವರಿಗೂ ಸಹಜವೆನಿಸುವಂಥ ಉಡಿಗೆ ತೊಡಿಗೆಗಳು ನಮ್ಮವಾಗಬೇಕು. ನಮ್ಮದೊಂದು ಭಾಷೆಯೆಂದರೆ, ಭಾಷೆಗೆ ತಕ್ಕ ವೇಷ ಬೇಡವೇ?

ಬಲ್ಲಿದರು ಈ ಬಗ್ಗೆ ಚರ್ಚೆಯನ್ನು ಆರಂಭಿಸಬೇಕೆಂದೂ, ಕನ್ನಡ ಪತ್ರಿಕಾಸಂಪಾದಕರು ಅದನ್ನು ಪ್ರಕಟಿಸಿ ಈ ವಿಚಾರವನ್ನು ಮುಂದುವರಿಸಬೇಕೆಂದೂ ಪ್ರಾರ್ಥಿಸುತ್ತೇನೆ.

— ಒಬ್ಬ ಕನ್ನಡಿಗ

---

## ಧಾರವಾಡ

★

ಇಲ್ಲಿಯ ಹಾವೇರಿ ಪೇಟೆ ಶ್ರೀ ಮುರುಘಾಮರದಲ್ಲಿ ಸ್ಥಾಪಿತವಾಗಿರುವ ಶ್ರೀ ಜಗದ್ಗುರು ಮುರುಘಾರಾಜೇಂದ್ರ ಫ್ರೀಬೋರ್ಡಿಂಗಿನಲ್ಲಿ ಪದ್ಧತಿ ಪ್ರಕಾರ ಈ ಸಾರೆ ಶ್ರಾವಣಮಾಸದಲ್ಲಿಯೂ ಪುರಾಣ ಶ್ರವಣ ಪೂಜಾದಿ ಕಾರ್ಯಗಳುಸಂಭ್ರಮದಿಂದ ಜರುಗಿದವು.

ಶ್ರೀ ಶಿವಯೋಗೀಶ್ವರ ಶಿವಾನುಭವ ಕಾಲೇಜಿನ ಅಧ್ಯಾಪಕರಾದ ಪಂಡಿತ ಚಂದ್ರಶೇಖರ ಶಾಸ್ತ್ರಿಗಳು ಶ್ರೀ ಸಿದ್ಧರಾಮೇಶ್ವರ ಪುರಾಣವನ್ನು ಬಹು ಸ್ವಾರಸ್ಯವಾಗಿ ಹೇಳಿದರು ಆಗಾಗ್ಗೆ ಶಿವಕೀರ್ತನೆಗಳೂ ಜರುಗಿದವು

ಈ ಗುರುಕುಲದ ೨೧ ವಿದ್ಯಾರ್ಥಿಗಳಿಗೆ (ಭಕ್ತ–ಮಾಹೇಶ್ವರರಿಗೆ) ದೀಕ್ಷೆ ಮತ್ತು ಅಯ್ಯಾಚಾರಗಳು ಬೈಲಹೊಂಗಲದ ಶ್ರೀ ಪಟ್ಟಾಧ್ಯಕ್ಷರಿಂದ ನೆರವೇರಿದವು

ಶ್ರೀಮಂತ ರಾಜಾಲಖಮನಗೌಡರು ಬಸವಪ್ರಭುವಂಟಮುರಿ ಇವರು ಈ ಸಂಸ್ಥೆಗೆ ೧೦೦ ರೂ ಗಳನ್ನು ಅರ್ಪಿಸಿದರು

ಶಿವಪ್ಪ ಮಟ್ಟಿ

●

## ಗಜೇಂದ್ರಗಡ

★

ಇಲ್ಲಿ ತಾ ೯–೫–೪೦ ನೆಯ ದಿನ ಶ್ರೀ ಮಾನ್ ಉತ್ತಂಗಿ ಚೆನ್ನಪ್ಪನವರ ಹಸ್ತದಿಂದ "ಸತ್ಯಸೇವಾ ಲೈಬ್ರೆರಿ" ಉದ್ಘಾಟನವಾಯಿತು. ಧಾರವಾಡ ಕಲೇಕ್ಟರ್ ಸಾಹೇಬರು ತಾ. ೬–೮–೪೦ ನೆಯ ದಿನ ಇದನ್ನು ರಜಿಸ್ಟರ್ ಮಾಡಿದ್ದಾರೆ. ಇದಕ್ಕೆ ಶ್ರೀ ಕುಂದರಗಿ ಅಂದಾನೆಪ್ಪನವರು ೨೪೬ ಪುಸ್ತಕಗಳನ್ನೂ ಶ್ರೀ ನಂದಿಹಾಳ ಚನ್ನಬಸಪ್ಪನವರು ೧೧ ಪುಸ್ತಕಗಳನ್ನೂ ಆಲಮಟ್ಟಿ ವೀರಶೈವ ವಿದ್ಯಾಲಯ ಸಂಸ್ಥೆಯವರು ೧೦೫ ಪುಸ್ತಕಗಳನ್ನೂ ಕೊಟ್ಟಿದ್ದಾರೆ. ಈ ಸ್ಥಳದ ಬೇರೆ ಕೆಲವು ಮಹನೀಯರೂ ಕೆಲವು ಪುಸ್ತಕಗಳನ್ನು ಕೊಟ್ಟಿದ್ದಾರೆ. ಈಗ ೩೮೦ ಪುಸ್ತಕಗಳಿವೆ.

—ಕಾರ್ಯದರ್ಶಿ.

●

## ಎಲೇರಿ.

★

ಗುಲಬರ್ಗಾ ಜಿಲ್ಲಾ ಎಲೇರಿ ಗ್ರಾಮದಲ್ಲಿ ಸ್ಥಾಪಿತವಾದ ಸೇವಾಸಂಘವು ಶ್ರಾವಣಮಾಸದಲ್ಲಿ ಅನೇಕರಿಂದ ವ್ಯಾಖ್ಯಾನಗಳನ್ನು ಮಾಡಿಸಿ ಜನರನ್ನು ನೀತಿಮಾರ್ಗಕ್ಕೆ ತರಲು ಪ್ರಯತ್ನಿಸಿತು. ಈ ಕಾರ್ಯದ ಚಾಲಕರಾದ ಶ್ರೀ. ಸಿದ್ಧರಾಮಪ್ಪ ಶಿವರಾಯ ಇವರ ಕಡೆಗೆ ಇಲ್ಲಿಯ ಕೆಲವು ಮಹಿಳೆಯರು ಚಂದಾ ಕೂಡಿಸಿ ೧೨ ರೂ. ಗಳನ್ನು ಈ ಸೇವಾ ಸಂಘದ ಕಾರ್ಯಕ್ಕೆ ಕೊಟ್ಟರು. ಗುಲಬರ್ಗಾದ ಶ್ರೀ ಶರಣ ಕವಿಗಳು ಇಲ್ಲಿಗೆ ಬಂದು ಸ್ಫೂರ್ತಿದಾಯಕ ಭಾಷಣಮಾಡಿದರು.

— ಸುದ್ದಿಗಾರ.

●

## ಹುಪಾರಿ.

★

ಕೊಲ್ಲಾಪುರ ಸಂಸ್ಥಾನದ ಹುಪಾರಿ ಗ್ರಾಮದಲ್ಲಿ ತಾ ೬೯೪೦ ನೆಯ ದಿನ ಶ್ರೀ ಗುರುಪಾದ ಸ್ವಾಮಿ ಹಿರೇಮರ ಸಾವಂತವಾಡಿಕರ ಇವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಶ್ರೀ. ಶಿರಸಂಗಿ ತ್ಯಾಗವೀರ ಲಿಂಗರಾಜರ ಪುಣ್ಯತಿಥಿಯನ್ನು ಆಚರಿಸಲಾಯಿತು. ಶ್ರೀ ವಿರೋಬಪ್ಪ ಮಾಳಿ, ಶ್ರೀ. ಶಾಂತಯ್ಯ ಹಿರೇಮರ ಶ್ರೀ ವಿರೂಪಾಕ್ಷಪ್ಪ ಕುಂಭಾರೆ ಮೊದಲಾದ ಎಲ್ಲ ಪ್ರಮುಖರೂ ಬಂದಿದ್ದರು ವೀರಶೈವ ತರುಣ ಸಂಘಸ್ಥಾಪನೆಯ ಸಂಬಂಧವಾಗಿ ವಿಚಾರ ವಿನಿಮಯವಾಯಿತು

— ಓರ್ವ ವೀರಶೈವ ತರುಣ

●

## ಶ್ರೀ. ಗುಡ್ಡದ ಸಿದ್ಧೇಶ್ವರ

★

ಕಡ್ಲಿಮಟ್ಟಿ ಹತ್ತಿರ ಇರುವ ಶ್ರೀ ಗುಡ್ಡದ ಸಿದ್ಧೇಶ್ವರ ದೇವಸ್ಥಾನದಲ್ಲಿ ಈ ಮುಂಚೆ ಪ್ರಕಟವಾದ ಪ್ರಕಾರ ತಾ ೨೯೪೦ ನೆಯ ದಿನ ಸಭೆಕೂಡಿತ್ತು. ಇಲ್ಲಿ ಯಾತ್ರಿಕರ ಅನುಕೂಲಕ್ಕಾಗಿ ಒಂದು ಕೆರೆ ಕಟ್ಟಿಸಬೇಕೆಂದು ಗೊತ್ತಾಯಿತು ಶ್ರೀಮಂತ ಸೊನ್ನದ ದೇಸಾಯಿರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ಏರ್ಪಟ್ಟಿತು ಶ್ರೀ ಗಂಗಾಧರಪ್ಪ ಹೊದ್ಲೂರು ಇವರು ಚೇರಮನ್‌ರು. ಈ ವರೆಗೆ ಸುಮಾರು ೩೦೦ ರೂ ಕೂಡಿವೆ

— ಸುದ್ದಿಗಾರ

●

## ಬಾಗಲಕೋಟ

★

ಶ್ರೀ ಬಸವೇಶ್ವರ ಪ್ರಾಥಮಿಕ ಶಾಲೆಯ ವ್ಯಾಯಾಮ ಮಂದಿರದ ಮಲ್ಲಗಂಬ, ಜೋಡುಗುದುರೆ (ಡಬಲ್‌ಬಾರ) ಗಳ ಅನಾವರಣ ಸಮಾರಂಭವು ತಾ. ೨೯೮೪೦ ನೆಯ ದಿವಸ ಮಧ್ಯಾನ್ಹ ೫ ಘಂಟೆಗೆ ಶ್ರೀ. ಬ. ಪ್ರಾ ಶಾಲೆಯ ಬೈಲಿನಲ್ಲಿ ವ್ಯಾ. ಮಂದಿರದ ಮಲ್ಲಗಂಬ ಜೋಡುಗುದುರೆಗಳ ಅನಾವರಣ ಸಮಾರಂಭದ ನಿಮಿತ್ಯ ಸಭೆಕೂಡಿತ್ತು. ವ್ಯಾ. ಮಂದಿರದ ಅಧ್ಯಕ್ಷರಾದ ಡಾ. ಜಿ. ಆರ್. ಮುಳ್ಳೂರು ಇವರ ಬಿನ್ನಹದ ಮೆರೆಗೆ ಮೆ. ವಾಯ್. ಬಿ. ಯರಗಲ್. ಆ ಡೆ ಎ ಇ. ಫಾರ ಫಿಜಿಕಲ್ ಎಜ್ಯುಕೇಶನಲ್ ಸಾಹೇಬರವರು ಮುಖ್ಯ ಅತಿಥಿಗಳಾಗಿ ಅಗಮಿಸಿದ್ದರು. ಡಾ. ಮುಳ್ಳೂರ ಇವರು ಸ್ವಾಗತ ಭಾಷಣ ಮಾಡಿ ತಮ್ಮ ವ್ಯಾಯಾಮ ಮಂದಿರದ ಸಂಕ್ಷಿಪ್ತವರದಿಯನ್ನು ಓದಿತೋರಿಸಿದರು, ಹಾಗೂ ಮೆ॥ ರವರಿಗೆ ಮಲ್ಲಗಂಬ, ಡಬಲ್ ಬಾರಗಳ ಅನಾವರಣ ಸಮಾರಂಭವನ್ನು ನೆರವೇರಿಸಬೇಕೆಂದು ವಿನಂತಿಮಾಡಲು ಅವರು ಸಕಲರೊಂದಿಗೆ ಹೋಗಿ ಸಮಾರಂಭವನ್ನು ಪೂರೈಸಿ ಅವುಗಳ ಮೇಲೆ ಸ್ವತಃ ಕೆಲವು ಪ್ರಯೋಗಗಳನ್ನು ಅತ್ಯುತ್ತಮರೀತಿಯಿಂದ ಮಾಡಿತೋರಿಸಿದರು ಅಲ್ಲಿಯೇ ಮಲಗಂಬ ಡಬಲ್‌ಬಾರಗಳನ್ನು ಉಚಿತವಾಗಿ ಅರ್ಪಿಸಿದ ಶ್ರೀ. ಗು. ವೆ. ಸುಗಂಧಿ, ಶ್ರಿ ಮ.-ಚ ನಿಡಗುಂದಿ ಇವರೀರ್ವರಿಗೂ ತಾವು ಮರೆಯಲ್ಲಿನಿಂತು ಸಣ್ಣವರಿಗೆ ಗೌರವದ ಸ್ಥಾನಗಳನ್ನು ನೀಡಿ ಅವರಿಂದ ಮಹತ್ವದ ಕಾರ್ಯಗಳನ್ನು ಸುಲಭವಾಗಿ ನಿರ್ವಹಿಸುತ್ತಿರುವ, ಬಸವೇಶ್ವರ ಪ್ರಾಥಮಿಕ ಶಾಲೆಯ ಸಂಚಾಲಕರಾದ ಶ್ರೀ ವ್ಹಿ ಬಿ ಕಿಣಗಿ ಬಿ. ಎ. ಎಲ್. ಎಲ್. ಬಿ ವಕೀಲ ಇವರಿಗೂ ವಿಶೇಷವಾಗಿ ಧನ್ಯವಾದಗಳನ್ನರ್ಪಿಸಿದರು. ಅಲ್ಪಾವಧಿಯಲ್ಲಿಯೇ ವ್ಯಾ ಮಂದಿರವನ್ನು ಇಷ್ಟು ಊರ್ಜಿತಸ್ಥಿತಿಗೆ ತಂದ ವ್ಯಾ. ಮಂದಿರದ ಅಧ್ಯಕ್ಷರನ್ನೂ ಕಮೀಟಿಯವರನ್ನೂ ವಿಶೇಷವಾಗಿ ಹೊಗಳಿದರು. ಶಾಲೆಯ ವಿದ್ಯಾರ್ಥಿಗಳು ತೋರಿಸಿದ ಕೆಲವು ವ್ಯಾಯಾಮ ಚಟುವಟಿಕೆಗಳನ್ನು ನೋಡಿ ತಮಗಾದ ಆನಂದವನ್ನು ವ್ಯಕ್ತಪಡಿಸಿದರು. ನಂತರ ಈ ಶಾಲೆಯ ಸಂಚಾಲಕರು ಮುಖ್ಯ ಅತಿಥಿಗಳಾದ ಮೆ. ವಾಯ್. ಬಿ. ಯರಗಲ್ ಸಾಹೇಬರ ಹಾಗೂ ಸಭೆಗೆ ಆಗಮಿಸಿದ ಪುರ ಪ್ರಮುಖರ ಆಭಾರ ಮನ್ನಿಸಿದ ನಂತರ ಸಭೆಯು ಮುಕ್ತಾಯವಾಯಿತು.

— ಸುದ್ದಿಗಾರ.

●

## ಮೋರಗಿ

★

ಪದ್ಧತಿ ಪ್ರಕಾರ ಈ ವರ್ಷ ಇಲ್ಲಿ ಶ್ರಾವಣಮಾಸಾಂತ್ಯದವರೆಗೂ ಶಾಂತಿವರ್ದಕ ಶಾಲೆಯವತಿಯಿಂದ ಶ್ರೀ ಶರಣಬಸವೇಶ್ವರ ಪುರಾಣ ಶ್ರವಣವು ಜರುಗಿ ತಾ ೨೯೪೦ ನೆಯ ದಿವಸ ಮಹಾಗಣಾರಾಧನೆಯೊಂದಿಗೆ ಮಂಗಲ ಮಹೋತ್ಸವವು ಜರುಗಿತು ಆ ಕಾಲಕ್ಕೆ ಸ್ವಗ್ರಾಮದ ಮಹಾಜನರೂ ಸಮೀಪದ ಹಳ್ಳಿಯ ಜನರೂ ಆಗಮಿಸಿದ್ದರು ಸದರಿ ಶಾಲೆಯ ಚಾಲಕರಾದ ಭಾಲ್ಕಿಯ ಶ್ರೀ ಚನ್ನಬಸವೇಶ್ವರ ಪಟ್ಟದ್ದೇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪುರಾಣ ಶ್ರವಣದಿಂದಾಗುವ ಲಾಭವನ್ನು ಕೆಲವು ವ್ಯಾಖ್ಯಾತರು ತಿಳಿಸಿದರು ಮತ್ತು ಈ ಶಿವಾನುಭವವು ಇಲ್ಲಿಗೆ ಸಮಾಪ್ತಿಹೊಂದದೆ ಮುಂದೆ ಪ್ರತಿಸೋಮವಾರ ನಡೆಯಬೇಕೆಂದು ಒಂದು 'ಶಿವಾನುಭವಮಂಟಪ" ವನ್ನೂ ನಿರ್ಮಿಸಿದರು. ಮತ್ತು ಸರ್ವರ ಜ್ಞಾನಾಭಿವೃದ್ಧಿಗಾಗಿಯೂ ವಿದ್ಯಾರ್ಥಿಗಳ ವಾಚನಾಭಿವೃದ್ಧಿಗಾಗಿಯೂ ಶ್ರೀ ಚನ್ನಬಸವೇಶ್ವರ ವಾಚನಾಲಯವೆಂಬ ಅಭಿದಾನದ ಒಂದು ಗ್ರಂಥಾಲಯವನ್ನು ಅದೇ ದಿನವೇ ಸ್ಥಾಪಿಸಿ ಇವುಗಳ ಅನಾವರಣವನ್ನು ಶ್ರೀಗಳ ಪವಿತ್ರಹಸ್ತದಿಂದ ಮಾಡಿಸಲಾಯಿತು. ಈ ವಾಚನಾಲಯಕ್ಕೆ ಶ್ರೀಗಳು ೫೮ ಉಪಯುಕ್ತ ಧಾರ್ಮಿಕ ಗ್ರಂಥಗಳನ್ನು ಆಶೀರ್ವದಿಸಿದರು ಇತರ ಸ್ವಾಮಿಗಳೂ ಮತ್ತು ನೆರೆದ ಮಹಾ ಜನಗಳೂ ಸುಮಾರು ೬೦ ರೂಪಾಯಿಗಳನ್ನೂ ಗ್ರಂಥ ಸಂಗ್ರಹಕ್ಕಾಗಿ ದಾನವೆರೆದರು ಆಗ್ಗೆ ಸ್ತ್ರೀಯರೂ ಕೂಡಾ ವಾಚನಾಲಯಕ್ಕೆ ಧನಸಹಾಯ ಮಾಡಿದರು ಶ್ರೀಗಳು ಈ ಭಾಗದಲ್ಲಿ ಹಿಂದುಳಿದ ನಮ್ಮ ಸಮಾಜದ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸುಧಾರಣೆಗಳನ್ನು ಮಾಡುತ್ತಿರುವುದು ಬಹು ಸ್ತುತ್ಯ ಕಾರ್ಯವೇ ಸರಿ

— ಓರ್ವ ಪ್ರತ್ಯಕ್ಷದರ್ಶಿ.

★

Reg. No. M. 401
WORLD NEWS PAPER EXIBITION
BASAVALLI - 577524,
Shimoga Dist, Karanataka State, INDIA

# ಕೊಡಗು ಚಂದ್ರಿಕೆ

PAPER EXHIBITION
577524,
INDIA

ಸಂಪುಟ ೦ ಸಂಚಿಕೆ

ಜೂನ್ 1939.

ವಾರ್ಷಿಕ ಚಂದಾ 1—15—0 ಸಂಪಾದಕರು— ಬಿಳಿಗೇರಿ ಸುಬ್ರಾಯ

ಬಿಡಿ ಸಂಚಿಕೆ 0—2—6

ಚಲಚ್ಚಿತ್ರತಾರೆ

'ದುರ್ಗಾಬಾಯಿ ಖೋಟೆ'

ವಾರ್ಷಿಕ ಚಂದಾ ಒಂದೇ ರೂ.

# : PRASAD :

# ಸಾಮ್ಯಾಯ

ಪತಾರ

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳಿ

**ಕರ್ಣಾಟಕ ವೃತ್ತಪತ್ರಿಕಾ ಪ್ರದರ್ಶನ**

**6—1—1962.**

ಪತ್ರಿಕೆ ಹೆಸರು _____

ಆರಂಭ ದಿನಾಂಕ _____

ಪ್ರಕಟನಾ ಸ್ಥಳ _____

ಸಂಪಾದಕರ ಹೆಸರು _____

ಮ್ಹಾಲಿಕರ ಹೆಸರು _____

ಸೌಜನ್ಯ ಕೃಪೆ [illegible]

[illegible]

ರಿಪಬ್ಲಿಕ್ ವಿಶೇಷಾಂಕ

ಸಂಪುಟ ೧೯೫೪

ನವರಿ ೧೯೫೪

ಶಾಂತ

ಕೆ. ಸಿ. ಚೌಡಪ್ಪ ರೆಡ್ಡಿ, ಬಿ.ಎ.

# MYSORE

# INFORMATION

AUGUST 1959



# ಮೈಸೂರು ಇನ್‌ಫರ್ಮೇಷನ್ ಬುಲೆಟಿನ್

ಜುಲೈ 1939
ಸಂ II. ಸಂ 7

ದಿವಾಣರವರ ಸಂಚಾರ

•

ಮೈಸೂರಿನ ಮುನ್ನಡೆ

•

ಲಾರ್ಡ್ ಸ್ಯಾಮ್ಯುಯಲ್‌ರವರ ಪ್ರಶಂಸೆ

•

ಸಂಸ್ಥಾನದಲ್ಲಿ ಕೆರೆಗಳ ದುರಸ್ತಿ

•

ಮದ್ಯಪಾನ ನಿರೋಧ

•

ಗ್ರಾಮಾಭ್ಯುದಯ ಕೆಲಸ ಕಾರ್ಯಗಳು

•

ಮೈಸೂರಿನಲ್ಲಿ ಸಕ್ಕರೆಯ ತಯಾರಿ

•

ಅಧಿಕಾರಿಗಳೂ ಮತ್ತು ರೈತರು

# ಕರ್ನಾಟಕಬಂಧು

ಕನ್ನಡ ಸಾಹಿತ್ಯ ಸಂಚಿಕೆ

ಸಂಪಾದಕರು: ಚನ್ನಬಸವಸ್ವಾಮಿ ವಿರುಪಾಕ್ಷಾರ್ಯ ಹಿರೇಮಠ

ಸಂಪುಟ ೧೧ ] ಗದಗ—ಬುಧವಾರ ತಾ. ೨೫ ನೇ ಡಿಶೆಂಬರ ೧೯೪೦ [ ಸಂಚಿಕೆ ೧೩


## ಕರ್ನಾಟಕದ ಕನಸು

ಮೂಡುತಿದೆ ಏಕೈಕ ಕರ್ನಾಟಕದ ಕನಸು;
ನೋಡುತಿದೆ ನಿಡುಬಯಸಿ ನಿಖಿಲ ಕನ್ನಡ ಮನಸು!

— ೧ —

ಕಾವೇರಿ ಸಿರಿಯಡಿಯ, ಗೋದಾವರಿಯ ಮುಡಿಯ,
ಮೂಡುಮಲೆಯೆಡದ ಗಡಿಯ,
ಪಡುಡಗಲ ಬಲದ ತಡಿಯ;
ವರ್ಣಶಿಲ್ಪದ ಕಲೆಯ ಚೆಲ್ವಿನ ಶಿಲೆಯ ಗುಡಿಯ,
ಕನ್ನಡದಿಂಪು ನುಡಿಯ;

— ೨ —

ಶಿಶು ರೂಪಿ, ಪಶು ರೂಪಿ, ಜನ ರೂಪಿ, ಮನ ರೂಪಿ,
ನವ್ಯ ಶಾದ್ವಲ ರೂಪಿ,
ಕಲ ಕಲ ಪಕ್ಷಿ ರೂಪಿ;
ನವ ಸರೋವರದಂತೆ, ನವ ಶಾಲಿ ವನದಂತೆ,
ನವ ಯೌವನದ ಮೊದಲ ನವ ವಧೂವರದಂತೆ;
ನವ ಕವಿಯ ನವರಸ ನವೀನ ಕೃತಿಯಂತೆ,
ದಿವ್ಯ ವೀಣಾಗಾನ ಗತಿಯಂತೆ;

— ೩ —

ಕನ್ನಡದ ಮಕ್ಕಳಿರ, ಬನ್ನಿರ್ಪೆ ಓ ಬನ್ನಿ.
ಮನದ ನವನೀತವನು ಹೃದಯದೊಳಿರಿಸಿ ತನ್ನಿ:
ತಿರೆಕೆವುಡು ಸೀಳ್ವಂತೆ ನೀಳಿಂಚರದೊಳೆನ್ನಿ.
"ಭಾರತಾಂಬೆಯ ಕನ್ನೆ ಕನ್ನಡಾಂಬೆಯೆ ಧನ್ಯೆ!
ಜಯತು ಜೈ!
ಜಯತು ಜೈ!

1940


K. VASUDEVA SHENOY & BROTHER
MERCHANTS, TIRTHAHALLI SHIMOGA DT.
ವಾಸುದೇವ ಶಣೈ ಎಡ್ ಬ್ರದರ್ಸ್, ಮರ್ಚಂಟ್ಸ್
ತೀರ್ಥಹಳ್ಳಿ

WORLD NEWS PAPER EVENTION
MEGARAVALLI - 677524,
Shimoga Dist, Karanataka State, INDIA

# ನಿಜತತ್ತ್ವಚಿಂತಕ

ವಾರಪತ್ರಿಕೆಯಾಗಿ.

ವರ್ಗಣಿ ರೂ. ೩—೮—೦ (ಪ್ರತಿ ಗುರುವಾರ ದಿವಸ ಹೊರಡಿಸುವದು.) ಬಿಡಿ ಸಂಚಿಕೆ ೧ ಆಣೆ

ಸಂಪುಟ. ೫) ವಿಜಾಪುರ—ಗುರುವಾರ, ೨೬ ಡಿಸೆಂಬರ ೧೯೩೨ (ಸಂಚಿಕೆ. ೩೨



ವಿಜಾಪುರ ಹಿತಚಿಂತಕ ಪ್ರೆಸ್ಸಿನಲ್ಲಿ ದೊರೆಯುವ ಗ್ರಂಥಗಳು.

## ವಚನಶಾಸ್ತ್ರಸಾರ.

ಭಾಗ ೧.

ಪೂರ್ವಾರ್ಧ.

ವಚನವಾಙ್ಮಯದ ಮಹತ್ವವನ್ನು ನೊದಲು ಸ್ಪಷ್ಟಪಡಿಸಿ ಪ್ರತಿಕೆ ಮಾಡಿಕೊಟ್ಟ ಗ್ರಂಥವಿದು. ವೀರಶೈವ ಮತತತ್ವಗಳನ್ನು ತಿಳಿಯಲು ಬಹು ಅನುಕೂಲವಾದದ್ದು. ಡೆಮಿ ಒಟ್ಟು ಪುಟ ೩೩೨ ಬೆಲೆ ೩ ರೂ.

## ಪ್ರಭುದೇವರ

ವಚನಗಳು.

ಈ ಪ್ರಭುವಿನ ಅಧ್ಯಾತ್ಮಿಕ ವಿಚಾರಗಳನ್ನು ಇವರ ಮೂಲಕ ಬಹು ಚನ್ನಾಗಿ ಆರಿಯಬಹುದು. ಜಕ್ಕಣಾರ್ಯ ಮಂತ್ರಿಯು ವ್ಯಾಖ್ಯಾನವು ಇದರಲ್ಲಿ ಇದೆ. ಡೆಮಿ ಸುಟಿಗಳು ೩೩೦

ಬೆಲೆ ೨—೪—೦

ಶ್ರೀ.

"ಕತ್ತಲ್ಲಿ"
ವಿಸ್ತಪಡಿಸಿದೆನೆ
ಹತ್ತಿ!
ದೊರೆಯುವ ಸ್ಥಳ

"ಇತ್ತ ಬಾ"
ಎಂಬ
ಸದ್ಭಕ್ತನ ಮನೆಯ
ಬಾಗಿಲ
ಹತ್ತಿರ್ಕಾಣಾ
ರಾಮನಾಥಾ
—ದೇವರದಾಸಿಮಯ್ಯ.

ಅರ್ಥವು ಸ್ಪಷ್ಟವಿದೆ.

## ಶೂನ್ಯಸಂಪಾದನೆ.

ಇದು ಅತ್ಯುಚ್ಚವಾದ ಧಾರ್ಮಿಕ ಗ್ರಂಥವು. ವಚನವಾಙ್ಮಯದ ಅನೇಕ ವಿಚಾರಗಳನ್ನು ಉದಾಹರಿಸಿರುವರು.

ಬಹು ಸಹಾಯಕರವು.
ಅತ್ಯಂತ ಸಂಗ್ರಾಹ್ಯವಾದ ಗ್ರಂಥ.
ಪುಟಗಳ ಸಂಖ್ಯೆ ೪೧೨.
ಬೆಲೆ ೩ ರೂಪಾಯಿ ೨ ಆಣೆ.

## ನೈತಿಕ ಮತ್ತು ಭಕ್ತಿಯ

ವಚನಗಳು.

ಇದು ಮುಂಬಯಿ ಮತ್ತು ಪೈಸೂರ ಸರಕಾರಗಳಿಂದ ಮಂಜೂರು ಆದ ಗ್ರಂಥವಿರುತ್ತದೆ. ಇದರಲ್ಲಿ ವಚನಕಾರರ ಅತ್ಯಂತ ಭಕ್ತಿರಸ ವುಳ್ಳ ಮತ್ತು ನೈತಿಕ ವಿಚಾರಗಳುಳ್ಳ ಸುಮಾರಾಪ ಅಸಂಖ್ಯ ವಚನಗಳು ತುಂಬಿಕೊಂಡಿವೆ. ಪುಟಗಳು ೧೦೧ ಆಣೆ.

ಬೇಕಾಗಿದೆ.

ಈಗ ಕಾಣಿಸಿದ ಊರುಗಳಲ್ಲಿ ನಮ್ಮ ಶಿವಾನುಭವ ಮತ್ತು ನವಚೈತನ್ಯ ಪತ್ರಿಕೆಗಳಿಗೆ ವಿಜಂಟರು ಬೇಕಾಗಿದ್ದೆ. ಬೆಂಗಳೂರು, ಬಳ್ಳಾರಿ, ಹರಪನಹಳ್ಳಿ, ಹರಿಹರ, ರಾಣೆಬೆನ್ನೂರು, ತುಮಕೂರು, ಕೋಲಾರ, ಹಾಸನ, ಕಡೂರು, ಮೈಸೂರು, ನಂಜನಗೂಡು, ಚಿತ್ರದುರ್ಗ ಮುಂತಾದ ಸ್ಥಳಗಳಿಗೆ ವಿಜಂಟರಾಗಲಿಚ್ಛಿಸುವವರು ವಿಜಂಟರ ವಿಜಂಥನೆಯ ಲೀಪ್ಪಗೆ ಬರೆದುಕೊಳ್ಳಿರಿ.

ಪತ್ರೇ:— ಹಿತಚಿಂತಕ ಪ್ರೆಸ್. ವಿಜಾಪುರ.

From - To

1941-50

# ಸಮಾಚಾರ ಪತ್ರಿಕ

ವರ್ಷ ೨] ಮುಂಬಯಿ: ಶನಿವಾರ, ತಾರೀಖು ೧೧ನೇ ಜನವರಿ ಸನ್ ೧೯೪೧ 1941 [ಅಂಕ ೧


## ಅಖಿಲಭಾರತ ದನಕರುಗಳ ನಾಲ್ಕನೇ ಪ್ರದರ್ಶನ

### ಹೊಸ ವರ್ಗಗಳು

ಸನ್ ೧೯೪೧ನೇ ಇಸವಿಯ ಫೆಬ್ರುವರಿ ೧೭ರಿಂದ ೨೨ನೇ ತಾರೀಖಿನ ವರೆಗೆ ಹೊಸ ದಿಲ್ಲಿಯಲ್ಲಿ ನಡೆಯತಕ್ಕ ಅಖಿಲ ಭಾರತ ದನಕರುಗಳ ಪ್ರದರ್ಶನದಲ್ಲಿ ಈ ಹೊಸ ವಿಷಯಗಳ ಸೇರ್ಪಡೆಯಾಗುವದು—ಎಮ್ಮೆ ಕೋಣ ಮತ್ತು ಎತ್ತು ಆಕಳುಗಳ ಆರು ಹೊಸ ಜಾತಿಗಳ ಪ್ರದರ್ಶನ, ವಿದ್ಯಾರ್ಥಿಗಳ ಗುಂಪುಗಳಿಂದ ದನದ ಜಾತಿಗಳ ಪರೀಕ್ಷಣೆಯ ಸ್ಪರ್ಧೆ ಇತ್ಯಾದಿ

ಪ್ರದರ್ಶನದ ಮಾಹಿತಿ ಪುಸ್ತಕದಲ್ಲಿ ೩೬ ಜಾತಿಗಳ ೧೬೨ ವರ್ಗಗಳು ಹೇಳಲ್ಪಟ್ಟಿವೆ ಇದರಲ್ಲಿ ಬಹುತರವಾಗಿ ಹಿಂದುಸ್ಥಾನದ ಎತ್ತು ಆಕಳ ಮತ್ತು ಎಮ್ಮೆ ಕೋಣಗಳ ಯಾವತ್ತೂ ಜಾತಿಗಳು ಸಮಾವಿಷ್ಟವಾಗುತ್ತವೆ ೧೯೪೦ರಲ್ಲಿ ಕೇವಲ ೧೩೭ ಮತ್ತು ೧೯೩೯ರಲ್ಲಿ ೧೨೧ ಜಾತಿಗಳು ಪ್ರದರ್ಶಿಸಲ್ಪಟ್ಟಿದ್ದವು

ಅಲಂಪಾಡಿ, ಬಚ್ಚೌರ, ಬಾರಗೂರ, ಕೇನಕರಾ ಮತ್ತು ಸೀರಿ ಎತ್ತು-ಆಕಳುಗಳು ಮತ್ತು ಕುಂದೀ (ಸಿಂಧೀ) ಎಮ್ಮೆ ಕೋಣ ಇವೇ ಈ ಸಾರೆಯ ಹೊಸ ಜಾತಿಗಳಾಗಿರುತ್ತವೆ ಇದಲ್ಲದೆ ಒಂದು ಉತ್ಕೃಷ್ಟ ಪ್ರಕಾರದ ಕೆಲಸದ ಹೋರಿ ಮತ್ತು ಒಂದು ಆಕಳ ಇವುಗಳ ಪೀಳಿಗೆಯ ವರ್ಗಗಳೂ ಸೇರಿಸಲ್ಪಟ್ಟಿವೆ ಮತ್ತು ಆಕಳು ಮತ್ತು ಎಮ್ಮೆ ಹಿಂಡುವ ಸ್ಪರ್ಧೆಯೂ ನಡೆಯತಕ್ಕದ್ದಿದೆ ಈ ಕಾರ್ಯಕ್ರಮವು ಹೋಲಸಾರಿ ಬಿಲ್ಲರ ಮೆಚ್ಚಿಗೆಯನ್ನು ಪಡೆಯಿತು

### ಇನಾಮಿನ ೫೪ ಕಪ್ಪುಗಳು ಮತ್ತು ಢಾಲುಗಳು

೨೦,೦೦೦ ರೂ ಗಿಂತ ಹೆಚ್ಚಿಗೆ ರೋಖ ಹಣ, ೫೪ ಕಪ್ಪುಗಳು ಮತ್ತು ಢಾಲುಗಳು, ಮತ್ತು ಅಖಿಲ ಭಾರತ ಮಾರ್ಗಗಳ ಸಮ್ಮೇಲನದವರು ದಯಪಾಲಿಸಿದ ರಬ್ಬರ ಹಳಿಯ ಎರಡು ಎತ್ತಿನ ಗಾಡಿಗಳು ಇನಾಮಾಗಿ ಕೊಡಲ್ಪಡುವವು ಉತ್ತಮ ಜಾತಿಯ ಮತ್ತು ಇತರ ರೀತಿಯಲ್ಲಿ ಉತ್ಕೃಷ್ಟವಾದ ದನಗಳಿಗಾಗಿ ೧೦೦ ರೂ, ೧೨೫ ರೂ ಮತ್ತು ೧೫೦ ರೂ ಗಳ ಮೂರು ಇನಾಮುಗಳು ಕೊಡಲ್ಪಡುವವು ವ್ಹಾಯಿಸರಾಯರು ಪ್ರದರ್ಶನದಲ್ಲಿಯೇ ಉತ್ಕೃಷ್ಟವಾದ ಒಂದು ದನಕ್ಕಾಗಿ ಕೊಡತಕ್ಕ ಕಪ್ಪಿನ ಕೂಡ ೨೫೦ ರೂ ಗಳ ರೋಖ ಪಾರಿತೋಷಕವೂ ಕೊಡಲ್ಪಡುವದು ೧೯೩೮ರಲ್ಲಿ ಮೊದಲಬಾರಿ ನಡೆದ ಅಖಿಲ ಭಾರತ ದನಕರುಗಳ ಪ್ರದರ್ಶನದ ಕಾಲದಿಂದ ಪ್ರದರ್ಶನ ವಸ್ತುಗಳಲ್ಲಿ ಸಧಾರಣ ಮಾರ್ದಾಟ ಕಂದುಬರುತ್ತಿದೆ ಇದರಿಂದ ಪ್ರದರ್ಶನದ ಮೂಲಕ ದನಕರುಗಳನ್ನು ಬೆಳೆಯಿಸುವವರು ಹಚ್ಚ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆಂಬದು ಪಡಿತವಾಗುತ್ತದೆ ಒಟ್ಟಿನ ಮೇಲೆ ಹಿಂದುಸ್ಥಾನದಲ್ಲ ದನಕರುಗಳ ಪೀಳಿಗೆಯ ಉದ್ಯಮಕ್ಕೆ ಕಳೆಯೇರಿರುತ್ತದೆ

ಈ ತರದ ವಾರ್ಷಿಕ ಸಮ್ಮೇಲನದಿಂದ ದನಕರುಗಳನ್ನು ಬೆಳೆಯಿಸುವವರು ಒತ್ತಟ್ಟಿಗೆ ಕೂಡಿ ಬೇರೆ ಬೇರೆ ಪ್ರಶ್ನೆಗಳ ಬಗ್ಗೆ ವಿಚಾರವಿನಿಮಯ ಮಾಡಲಕ್ಕ ಸುಸಂಧಿಯು ಪ್ರಾಪ್ತವಾಗುತ್ತದೆ ಇನಾಮು ದೊರೆತವರು ಮತ್ತು ಯಾವತ್ತೂ ಪ್ರದರ್ಶಕರಿಗೆ ತಮ್ಮ ಮಾಲಿಗೆ ಹೆಚ್ಚಿಗೆ ಬೆಲೆ ದೊರೆಯುವಂತಾಗುತ್ತದೆ

### ಅಖಿಲ ಹಿಂದುಸ್ಥಾನ ಕೋಳಿಗಳ ಪ್ರದರ್ಶನ

ದನಕರುಗಳ ಪ್ರದರ್ಶನದೊಂದಿಗೆ ಕೋಳಿಗಳ ಪ್ರದರ್ಶನವೂ ಸರ್ಪಡಿಸಲ್ಪಡುವದು. ಫೆಬ್ರುವರಿ ೧೭ರಿಂದ ೧೯ರ ವರೆಗೆ ಕೋಳಿಗಳು ಪ್ರದರ್ಶಿಸಲ್ಪಡುವವು ಕೋಳಿಗಳಲ್ಲಿ ಎರಡು ವರ್ಗಗಳನ್ನು ಮಾಡಲಾಗಿದೆ—"ಪ್ರದರ್ಶನ"ದ ಕೋಳಿಗಳು ಮತ್ತು "ಉಪಯುಕ್ತತೆ"ಯ ಕೋಳಿಗಳು "ಪ್ರದರ್ಶನ"ದ ಕೋಳಿಗಳಲ್ಲಿ ಕೆಳಗಿನ ಜಾತಿಗಳು ಸಮಾವಿಷ್ಟವಾಗುವವು—ರ್ಹೋಡ ಆಯಿಲಂಡ ರೆಡ್, ವ್ಹಾಯಿಟ್, ಬ್ಲ್ಯಾಕ್ ಮಿನೋರ್ಕಾ, ಆಕ್ಟ್ರಿಲಾರ್ಡ, ಆರ್ಡಿಂಗ್ಟನ್ ಇತ್ಯಾದಿ. "ಉಪಯುಕ್ತತೆ"ಯ ಕೋಳಿಗಳಲ್ಲಿ—ವ್ಹಾಯಿಟ್ ಲೆಗ್ ಹಾರ್ನ, ರ್ಹೋಡ್ ಆಯಲಂಡ್ ರೆಡ್ಸ, ಬ್ಲ್ಯಾಕ್ ಮಿನೋರ್ಕಾ, ಚಿತ್‌ಗಾಂಗ, ದೇಶೀ, ಇತ್ಯಾದಿ.

ಕಪ್ಪುಗಳು ಮತ್ತು ಬೇರೆ ಇನಾಮುಗಳು ಕೊಡಲ್ಪಟ್ಟು

## ಯುದ್ಧಕಾಲದಲ್ಲಿ ಇಂಗ್ಲಂಡಿನ ಜೀವನ

ಮೇಲಿನ ಚಿತ್ರದಲ್ಲಿ ಒಬ್ಬ ಒಕ್ಕಲಿಗನು ಹೊಲದಲ್ಲಿ ಕೆಲಸ ಮಾಡುತ್ತಿದ್ದು ಮತ್ತೊಂದೆಡೆಗೆ ಒಬ್ಬ ಸೈನಿಕನು ಇರುಳ ನೆಲಕ್ಕುರುಳಿಸಲ್ಪಟ್ಟ ಒಂದು ಜರ್ಮನರ ವಿಮಾನವನ್ನು ಪರೀಕ್ಷಿಸುತ್ತಿದ್ದಾನೆ ಈ ದೃಶ್ಯವು ಯುದ್ಧದ ದಿವಸಗಳಲ್ಲಿಯು ಬ್ರಿಟನವು ಹೇಗೆ ನಿಶ್ಚಲ ವಾತಾವರಣವನ್ನು ಕಾದುಕೊಂಡಿದೆಯೆಂಬದನ್ನು ತೋರಿಸುತ್ತದೆ.

## ಭಿಲ್ಲರ ಮಧ್ಯದಲ್ಲಿ ಮುಂಬಯಿ ಗವ್ಹರ್ನರರು

### ದೋಹದ ಹಳ್ಳಿಯವರಿಗೆ ತಬಕದ ಇನಾಮು

ಭಡೋಚ ಮತ್ತು ಪಂಚಮಹಾಲ ಜಿಲ್ಹೆಯ ದೋಹದ ತಾಲೂಕಿನ ಜೇಸವಾಡಾದಲ್ಲಿ ಸುಮಾರು ೫,೦೦೦ ಭಿಲ್ಲ ಮತ್ತು ಪಟೇಲಿಯಾ ಒಕ್ಕಲಿಗರು—ಹೆಂಗಸರು ಮತ್ತು ಗಂಡಸರು—ಜೇಸವಾಡಾ ಗುಂಪಿನ ಗ್ರಾಮ ಸುಧಾರಣಾ ಸಮಿತಿಯವರಿಗೆ ಮುಂಬಯಿ ಗವ್ಹರ್ನರರು ಬೆಳ್ಳಿಯ ತಬಕವನ್ನು ಇನಾಮಾಗಿ ಕೊಡುವ ಕಾಲಕ್ಕೆ ಹಾಜರ ಇದ್ದರು ಈ ಗುಂಪಿನವರು ಸನ್ ೧೯೩೮ರಲ್ಲಿ ಸಾಯಿಕ್ಸ ಗ್ರಾಮ ಸುಧಾರಣಾ ಢಾಲನ್ನು ಪಡೆದಿದ್ದರು

ದೋಹದದ ಮಾಮಲೇದಾರರಾದ ಶ್ರೀ ಎಸ್ ರಾಕರ ಇವರು ನಾ ಗವ್ಹರ್ನರ ಮತ್ತು ಲೇಡಿ ಲಮ್ಲಿಯವರನ್ನು ಬರ ಮಾಡಿಕೊಂಡು ಶ್ರೀ ಏ ಕೆ ಸುರ್ವೇ ಮತ್ತು ಶ್ರೀ ಡಿ ಜಿ ವಣಿಕರ (ಸಮಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ) ಇವರ ಪರಿಚಯ ಮಾಡಿಕೊಟ್ಟರು ಆ ಮೇಲೆ ಕಲೆಕ್ಟರರು ಅವರಿಗೆ ಚಹಾಪಾನದ ವ್ಯವಸ್ಥೆ ಮಾಡಿದ್ದರು ಅದೇ ಕಾಲಕ್ಕೆ ಹಗ್ಗ ಜಗ್ಗುವದು, ಬಿಲ್ಲಬಾಣಗಳ ಉಪಯೋಗ ಮುಂತಾದವುಗಳು ಜರುಗಿದವು ಒಂದು ಭಿಲ್ಲರ ನೃತ್ಯವೂ ಏರ್ಪಡಿಸಲ್ಪಟ್ಟಿತ್ತು ಅದರಲ್ಲಿ ಸುಮಾರು ೪೦ ಭಿಲ್ಲ ಯುವಕ ಯುವತಿಯರು ಚಿತ್ತಾಕರ್ಷಕವಾಗುವಂತೆ ನೃತ್ಯಕಲೆಯ ಪ್ರದರ್ಶನ ಮಾಡಿದರು

ಆ ಮೇಲೆ ಗವ್ಹರ್ನರ ಮತ್ತು ಲೇಡಿ ಲಮ್ಲಿಯವರು ಒಕ್ಕಲತನದ ಸಾಮಾನುಗಳು, ಬೀಜದ ಕಾಳುಗಳು, ಬೆಲ್ಲ ಮಾಡುವದು, ಅರಗಿನ ಸಾಮಾನು ಮಾಡುವದು, ಕೈಯಿಂದ ನೇಯುವದು ಮತ್ತು ದನಕರುಗಳ ಸಂಬಂಧದ ಪ್ರಾತ್ಯಕ್ಷಿಕೆಗಳನ್ನು ನಿರೀಕ್ಷಿಸಿದರು

### ಪಾರಿತೋಷಕ ಸಮಾರಂಭ

ಆ ಮೇಲೆ ಗವ್ಹರ್ನರರಿಗೆ ಸಮಿತಿಯ ಇತರ ಸದಸ್ಯರ ಪರಿಚಯ ಮಾಡಿಕೊಡಲಾಯಿತು ಗವ್ಹರ್ನರರು ಅವರ ಅಧ್ಯಕ್ಷರಿಗೆ ತಬಕವನ್ನು ಸಮರ್ಪಿಸಿದರು.

ಬಾವಿ ತೋಡುವದಕ್ಕಾಗಿ ಬಡ್ಡಿ ಇಲ್ಲದ ತಗಾಯಿಯ ರೂಪದಲ್ಲಿ ೧೫೦ ರೂ., ಒಡ್ಡುಗಳಿಗಾಗಿ ೧೦೦ ರೂ, ಪಾತ್ರೆ, ಅರಿವೆ ಮುಂತಾದ ಇನಾಮುಗಳ ರೂಪದಲ್ಲಿ ೨೨೫ ರೂ. ಗಳನ್ನು ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಉತ್ಕೃಷ್ಟವಾದ ಕೆಲಸ ಮಾಡಿದವರಿಗೆ ಕೊಡಲಾಯಿತು ೩೦ ಜನ ಬಡ ಭಿಲ್ಲರಿಗೆ ೧೦೦ ರೂ.ಯ ಅರಿವೆಅಂಚಡಿಗಳು ಕೊಡಲ್ಪಟ್ಟವು

## ಸರ್ವಾಧಿಕಾರಿಗಳ ಆಕ್ರಮಣ ವೃತ್ತಿಗೆ ವಿರೋಧ

### ಭಾರತೀಯ ಮುಖಂಡರೂ ಯುದ್ಧವೂ

ಕ್ರಿಸ್‌ಮಸ್ ಹಬ್ಬದಲ್ಲಿ ಭಾರತದ ಬೇರೆ ಬೇರೆ ಮತಗಳ ಮುಖಂಡರು ಯುದ್ಧೋದ್ಯಮಕ್ಕೆ ಸಂಪೂರ್ಣ ಬೆಂಬಲ ಕೊಡುವ ಬಗ್ಗೆ ಹೇಳಿದರು

ಕಲಕತ್ತೆಯಲ್ಲಿ ಕೂಡಿದ ಪ್ರಗತಿವಕ್ಷದ ಅನುಯಾಯಿಗಳು ಸರ್ವಾಧಿಕಾರಿಗಳ ಆಕ್ರಮಣದಿಂದ ಬಳಲುವ ಜನರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ಯುದ್ಧದಲ್ಲಿ ಹಿಂದುಸ್ಥಾನವು ಸಂಪೂರ್ಣ ಸಹಾಯ ಮಾಡಬೇಕೆಂದು ಹೇಳಿದರು ಸರ್ವಾಧಿಕಾರಿಗಳ ನಾಶದಿಂದಲೇ ಪ್ರಜಾಸತ್ತೆಯ ಬವಿತವ್ಯ ಮತ್ತು ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವದು ಶಕ್ಯವಿದೆಯೆಂದು ಅವರ ಮತವಾಯಿತು

ಶ್ರಿ ಎಮ್ ಎನ್. ರಾಯ ಇವರು ಕರೆಯಿಸಿದ ಯಾವತ್ತೂ ಪಕ್ಷಪಂಗಡಗಳ ಸಭೆಯು ಫ್ಯಾಸಿಝಮ್‌ವನ್ನು ನಾಶ ಮಾಡುವದಕ್ಕಾಗಿ ಹಿಂದುಸ್ಥಾನದ ಸಾಧನಸಾಮಗ್ರಿಯನ್ನು ಅಣಿಮಾಡುವದೇ ತನ್ನ ಉದ್ದೇಶವೆಂದು ಸಾರಿತು

ಮದುರೆಯಲ್ಲಿ ಮಹಾ ಸಭೆಯಾದರೂ ಇದನ್ನೇ ಸಾರಿ ಹೇಳಿತು ಆದಷ್ಟು ಹಿಂದುಗಳನ್ನು ಸೈನ್ಯ ಖಾತಗಳಲ್ಲಿ ಸೇರಿಸುವದು, ಯುದ್ಧ ಶಿಕ್ಷಣ ಕೊಡುವದು, ನಾಗರಿಕ ರಕ್ಷಕ ಚಟುವಟಿಕೆಯಲ್ಲಿ ಭಾಗವಹಿಸುವದು—ಇವೇ ಮೊದಲಾದ ಸಂಗತಿಗಳನ್ನೊಳಗೊಂಡ ಒಂದು ಕಾರ್ಯಕ್ರಮವನ್ನು ಅದು ಹಿಂದುಗಳ ಮುಂದಿರಿಸಿತು

## ಬಾದಶಹರ ಸುಭ ಸಂದೇಶ

ಬಾದಶಹರಿಗೆ ಮತ್ತು ಮಹಾರಾಣಿಯವರಿಗೆ ಮುಂಬಯಿ ಗವ್ಹರ್ನರರು ಕೆಳಗಿನ ಆಶಯದ ವರ್ಷಾರಂಭದ ಶುಭ ಸಂದೇಶವನ್ನು ಕಳುಹಿದ್ದಾರೆ "ಮುಂಬಯಿ ಪ್ರಾಂತದ ಸರಕಾರ ಮತ್ತು ಜನರ ಪರವಾಗಿ ಹೊಸ ವರ್ಷದ ಶುಭ ಸಂದೇಶವನ್ನು ನಾನು ನಿಮಗೆ ಆದರಪೂರ್ವಕವಾಗಿ ಕಳುಹಿಸಿದ್ದೇನೆ."

ಅದಕ್ಕೆ ಬಾದಶಹರು ಉತ್ತರ ಕೊಟ್ಟದ್ದೇನಂದರೆ "ನಿಮ್ಮ ಶುಭ ಸಂದೇಶದ ಬಗ್ಗೆ ಮಹಾರಾಣಿಯವರು ಮತ್ತು ನಾನು ಕೃತಜ್ಞರಿದ್ದು ಅದೇ ಪ್ರಕಾರದ ಸಂದೇಶವನ್ನು ನಿಮಗೆ ಕಳಿಸಲಿಚ್ಛಿಸುತ್ತೇವೆ"

WORLD NEWS PA
INDIA

# ಜಿಡಿನ

# ಪರಿವಿಡಿ


| | | | |
|---|---|---|---|
| | ಪ್ರೊ. ರಂ ಶ್ರೀ. ಮುಗಳಿ ಎಂ.ಎ., ಬಿ. ಟಿ. | .... | ೭೦೯ |
| (ಪರಿಚಯ) | ಶ್ರೀ. ಶ್ರೀ ಗೊರೂರ ರಾಮಸ್ವಾಮಿ ಅಯ್ಯಂಗಾರ್ | .... | ೭೧೦ |
| | ಶ್ರೀ ರಾ. ವೆಂ ಕುಲಕರ್ಣಿ | .... | ೭೧೫ |
| .. | ,, | .... | ೭೧೫ |
| ... | ಪ್ರೊ. ರಂ ಶ್ರೀ ಮುಗಳಿ ಎಂ. ಎ; ಬಿ. ಟಿ | .... | ೭೧೬ |
| | ಪ್ರೆ. ಎ. ಕೃ ಗೋಕಾಕ, ಬಿ. ಎ. ( ಆಕ್ಸ್ ) | .... | ೭೨೪ |
| ೭. ... ಷಯಕ ) | ಶ್ರೀ ನಾಡಗೀರ | .... | ೭೩೧ |
| ೮. ಕನ್ನ... ನಿಬಂಧಗಳು | ಶ್ರೀ ವರದರಾಜ ಹುಯಿಲಗೋಳ | .... | ೭೩೬ |
| ೯. ಮಾನೂರಿ... ಮಹದೇವ ... | ' ಸು ಶಿ ' | .... | ೭೩೭ |
| ೧೦. ಹಿಂದು ಮ... ಮರ ಭಿನ್ನತೆಗೆ ಕಾರಣಗಳೇನು ? ಅವುಗಳ ನಿವಾರಣೆಗಳು | ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ | .... | ೭೪೨ |
| ೧೧. ಮಾಸ್ತಿಯವರನ್ನು ಕಂಡೆ .. | ಶ್ರೀ ಪಾಟೀಲ ಪುಟ್ಟಪ್ಪ | .... | ೭೪೭ |
| ೧೨. ಶ್ರಾವಣ ( ಕಾವ್ಯಾರಾಮ ) . | ' ಅಂಬಿಕಾತನಯ ದತ್ತ ' | .... | ೭೫೨ |
| ೧೩. ರಾಮನವಮಿ ( ಕಾವ್ಯಾರಾಮ ) .. | ' ಶ್ರೀನಿವಾಸ ' | .... | ೭೫೩ |
| ೧೪. ಬೋಯಿಹಾಡು ( ಕಾವ್ಯಾರಾಮ ) . | ' ಶ್ರೀಧರ | .... | ೭೬೪ |
| ೧೫. ಜಿಜ್ಞಾಸೆ .. | ಶ್ರೀ ಗುಂ ಜ. ಮಂಗಲಗಿ, ರಾ.ಯ. ಧಾರವಾಡ | | ೭೬೫ |
| ೧೬. ನೀನಿಲ್ಲದೇನಿದ್ದರೇನು ? ( ಕವಿತೆ ) . | ಸಾಪು | .... | ೭೭೧ |
| ೧೭. ಸಂಪಾದಕೀಯ .. | | .... | ೭೭೨ |


## ಚಂದಾದಾರರಿಗೆ ಬಿನ್ನಹ

ನವ್ಹಂಬರ ಸಂಚಿಕೆಯಿಂದ ' ಜೀವನ ' ದ ಮೂರನೆಯ ವರ್ಷವು ಆರಂಭವಾಗುತ್ತದೆ. ಮೂರನೆಯ ವರ್ಷದ ಚಂದಾ ಹಣವನ್ನು ಸಾಧ್ಯವಾದಷ್ಟು ಬೇಗ ಮನಿಯಾರ್ಡರಿನಿಂದ ಕಳಿಸಿಕೊಟ್ಟು ಚಂದಾದಾರರು ಉಪಕಾರಮಾಡಬೇಕಾಗಿ ಪ್ರಾರ್ಥನೆ. ಬರುವ ೫-೬ ತಿಂಗಳಲ್ಲಿ ಯಾವಾಗಲೊಮ್ಮೆ ತಮ್ಮ ಚಂದಾ ವರುಷವು ಮುಗಿಯುತ್ತಿದ್ದರೂ ಮುಂಗಡವಾಗಿ ಹೊಸ ವರುಷದ ಚಂದಾಹಣವನ್ನು ಚಂದಾದಾರರು ಕಳಿಸಿಕೊಟ್ಟರೆ ಪತ್ರಿಕೆಯ ಮನಃಪೂರ್ವಕವಾದ ಕೃತಜ್ಞತೆ ಅವರಿಗೆ ಸಲ್ಲುವುದು. ಕನಿಷ್ಟ ಪಕ್ಷಕ್ಕೆ, ' ಜೀವನ ಕಾರ್ಯಾಲಯ ' ದಿಂದ ಪತ್ರಬಂದೊಡನೆ ಚಂದಾ ಹಣವನ್ನು ಕಳಿಸಿದರೆ ವ್ಹಿ. ಪಿ. ಯ ಲನಾವಶ್ಯಕ ವೆಚ್ಚವನ್ನು ಚಂದಾದಾರರು ಉಳಿಸಿದಂತಾಗುವುದು

# ಜೀ ವ ನ

ಸಂಪಾದಕರು :

ಶ್ರೀ. ದ. ರಾ. ಬೇಂದ್ರೆ, ಎಂ. ಎ. ಪ್ರಿ. ವಿ. ಕೃ. ಗೋಕಾಕ, ಬಿ. ಎ. (ಆಕ್ಸನ್

| ಸಂಪುಟ ೨ | ಅಕ್ಟೋಬರ್ ೪, ೧೯೪೧ | ಸಂಚಿಕೆ ೧೨ |
|---|---|---|


## ಮಾ ನ ಸ ಮ ರಾ ಳ

★

ಮಾನಸಮರಾಳ ಮರಳಿ ನೆಗೆದೇಳ
ಕಲುಷಿತಕರಾಳ ಕೊಳದಿಂದ ಮೇಲೆ
ಕದಡಿ ಕೊಳೆಯಾದ ಪಕ್ಕಗಳ ಬಿದಿರಿ
ನಿರ್ಮಲ ನಿರಾಳ ಸರದಲ್ಲಿ ತೇಲೆ ೧

ತಿಳಿಬಿಳಿದುಪ್ಪಳ ನಿನ್ನ ನಯನವುರು
ಮಲಿತ ಜಲವುಂಡು ಮಾಸಿಹೋಗಿಹುದು
ಮುಗಿಲನೆ ಮುದ್ದಿವ ನಿನ್ನ ತಿಳಿಗಣ್ಣು
ಮಿನದ ಕಂಗಳ ಬಂದಿಯಾಗಿಹುದು ೨

ಎತ್ತರದ ಗಿರಿಯ ಸರೋವರದಲ್ಲಿ
ಚೆಲುಗೊರಳ ತೂಗಿ ಒಯ್ಯಾರದಿಂದ
ಮೆಲ್ಲಡಿಯನಿಡುವ ಚೆಲ್ಲವನು ತೊರೆದು
ಜೊಂಡಿನಲಿ ಸಿಲುಕಿ ನೀನಿಹುದೆ ಅಂದ? ೩

ಕಾಣದೊಲು ನೀರಿನೊಳು ಬೇರಿಳಿಸಿದ
ಅಂತರಗಂಗೆಯು ಮಾಮಾಯೆಯಾಗಿ
ಹಸುರೆಲೆಯ ಹಾಸಿ ಹಸೆಗೆ ಕರೆದೊಡನೆ
ಮರೆತು ಬೆರೆತಿರುವೆ ಬಿಮ್ಮೆಂದು ಬಾಗಿ ೪

ಕೊರಗದಿರು ನೀನು ಕೊರಳೆತ್ತಿ ನೋಡು
ಮರುಗಿ ಮುಂದರಿಯೆ ಕಾಲವನುಕೂಲ
ಆಗಸದ ಹಿರಿಯ ಹಕ್ಕಿಯುಲಿ ಕೇಳು
ಹಾರು ಹಾಕುತ ರೆಕ್ಕೆಗಳ ತಾಲ ೫

ಹಾರಿ ಹುರಿಗೊಂಡು ಮೇಲೇರಿ ಏರಿ
ಅಪಾರ ನೀಲದಿ ಮೈಯ ನೀ ತೂರು
ಮೋಡಗಳ ಬೆಳ್ಳಬೆಳಗಿನಲಿ ಮಿಂದು
ಸತ್ವಶಿರೋಮಣಿಯಾಗಿ ಸಾರು ೬

ಧವಳಗಿರಿಶಿರದಿ ಮಾನಸದ ಸರದಿ
ಇಳಿದು ತಿಳಿನೀರಿನೊಳು ಈಜಾಡು
ನಿನ್ನ ಪಡಿನೆಳಲ ನೋಡುತ ನಲಿಯುತ
ಅಮರ ಸುಖಶಾಂತಿ ಕಾಂತಿಯ ಕೂಡು ೭

—ರಂ. ಶ್ರೀ. ಮುಗಳಿ

# ಸರ್ ಎಂ. ವಿಶ್ವೇಶ್ವರಯ್ಯನವರು

ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ಮಾತೆಯ ಪ್ರೀತಿಯ ಮಗು; ಕರ್ನಾಟಕಕ್ಕೆ ಭೂಷಣ; ಅಖಿಲ ಭಾರತದಲ್ಲಿ ಪ್ರಸಿದ್ಧರಾದವರು; ನಾಗರಿಕ ಜಗತ್ತಿನಲ್ಲಿ ಅವರ ಹೆಸರನ್ನು ಕೇಳದವರು ಹೆಚ್ಚಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು

ಸರ್ ಎಂ. ವಿಶ್ವೇಶ್ವರಯ್ಯನವರು ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪಕರು. ಶ್ರೀ ಕೃಷ್ಣರಾಜ ಸಾಗರವು ಅವರ ಪ್ರತಿಭೆಯ ಶಿಶು. ಮೈಸೂರು ಬ್ಯಾಂಕು, ಮೈಸೂರು ವಿಶ್ವವಿದ್ಯಾಲಯ, ಭದ್ರಾವತಿ ಕಬ್ಬಿಣದ ಕಾರ್ಖಾನೆ, ಮೈಸೂರು ರೈಲು, ಮೈಸೂರು ಸಾಬೂನು ಕಾರ್ಖಾನೆ ಇವೆಲ್ಲಾ ಅವರ ಬುದ್ಧಿಯ ಕಿರಣಗಳು. ಮೈಸೂರಿನ ಮಂಗಳಕ್ಕೆ ಅವರು ಬಹುಮಟ್ಟಿಗೆ ಕಾರಣರು.

ಸುಯೆಸ್ ಕಾಲುವೆಯಿಂದ ಈಚೆಗೆ ಅವರಂತಹ ಪ್ರಸಿದ್ಧರಾದ ಇಂಜನೀಯರು ಇಲ್ಲವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅವರ ಈ ತೀಕ್ಷ್ಣವಾದ ಬುದ್ಧಿಯ ಚಿನ್ಹೆಗಳು ಅವರ ಬಾಲ್ಯದಲ್ಲಿಯೇ ಪ್ರಕಾಶಿತವಾಗಿದ್ದುವು. ಸೆಂಟ್ರಲ್ ಕಾಲೇಜಿನಿಂದ ಅವರು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಾಗಲೇ ಅವರ ಪ್ರತಿಭೆಯನ್ನು ಕಂಡು ಆಗಿನ ಮೈಸೂರು ದಿವಾನರಾಗಿದ್ದ ರಂಗಾಚಾರ್ಯರು ಅವರನ್ನು ಸ್ಕಾಲರ್‌ಶಿಪ್ ವಿದ್ಯಾರ್ಥಿಯಾಗಿ ಪುಣೆಗೆ ಇಂಜನೀಯರಿಂಗ್ ಕಾಲೇಜಿಗೆ ವ್ಯಾಸಂಗಕ್ಕೆ ಕಳುಹಿಸಿದರು. ಸರ್ ಎಂ. ವಿಶ್ವೇಶ್ವರಯ್ಯನವರು ಅಲ್ಲಿ ಮೊದಲನೆ ದರ್ಜೆಯಲ್ಲಿ ತೇರ್ಗಡೆ ಹೊಂದಿ ಬೊಂಬಾಯಿ ಆಧಿಪತ್ಯದಲ್ಲಿ ಇಂಜನೀಯರಾಗಿ ಸೇರಿ ಅನಂತರ ಸ್ಯಾನಿಟರಿ ಎಂಜನೀಯರಾದರು. ಅವರು ಬೊಂಬಾಯಿಗೂ ಏಡನ್ನಿಗೂ ಮಾಡಿಕೊಟ್ಟ ಡ್ರೈನೇಜು ಏರ್ಪಾಡನ್ನು ಇಂದಿಗೂ ಆ ನಗರಗಳವರು ಕೃತಜ್ಞತೆಯಿಂದ ನೆನೆಯುತ್ತಾ ವಿಶ್ವೇಶ್ವರಯ್ಯನವರು ನಮ್ಮವರೇ ಎನ್ನುತ್ತಾರೆ. ಬೊಂಬಾಯಿಗೆ ಎಷ್ಟೋ ಜನ ಸ್ಯಾನಿಟರಿ ಇಂಜನೀಯರ ಸೇವೆ ಸಂದಿದೆ. ಆದರೆ ಆ ನಗರದವರು ಎಲ್ಲರನ್ನೂ ವಿಶ್ವೇಶ್ವರಯ್ಯನವರನ್ನು ನೆನೆಯುವಂತೆ ನೆನೆಯುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ಸರ್ ಎಂ. ವಿಶ್ವೇಶ್ವರಯ್ಯನವರ ಬುದ್ಧಿಶಕ್ತಿ. ಸ್ವಲ್ಪ ಹೆಚ್ಚು ಕಡಿಮೆ ಪ್ರಪಂಚದ ಇಂಜನಿಯರಿಂಗ್ ಬುದ್ಧಿಗಳಲ್ಲಿ ಅವರದು ಮೊದಲನೆಯದು ಎನ್ನಬಹುದು. ಅವರು ಕಂಡು ಹಿಡಿದ ಆಟೊಮಾಟಿಕ್ ಗೇಟನ್ನು ಅಮೇರಿಕಾ ಖಂಡದವರು ಪನಾಮ ಕಾಲುವೆಯಲ್ಲಿ ಉಪಯೋಗಿಸುತ್ತಿರುವುದೇ ಆ ದೇಶದವರು ಇವರಿಗೆ ತೋರಿಸುತ್ತಿರುವ ಗೌರವಕ್ಕೆ ಸಾಕ್ಷಿಯಾಗಿದೆ. ಭಾರತದಲ್ಲಿ ಯಾವ ಇಂಜನಿಯರಿಂಗ್ ಏರ್ಪಾಡೂ ಇವರ ಸಲಹೆಯಿಲ್ಲದೆ ಪ್ರಾರಂಭವಾಗುವುದಿಲ್ಲ. ಇಂದೂರು, ಹೈದರಾಬಾದ್ ತಿರುವಾಂಕೂರು ಮುಂತಾದ ಯಾವ ದೊಡ್ಡ ರಾಜ್ಯಗಳ ಯಾವ ಎಂಜನೀಯರಿಂಗ್ ಏರ್ಪಾಡಿಗೂ ಇವರ ಒಪ್ಪಿಗೆ ಬೇಕೆಬೇಕು. ಈಚೆಗೆ ಅವರು ಮೈಸೂರು ದಿವಾನ್‌ಗಿರಿಯಿಂದ ನಿವೃತ್ತರಾದ ಮೇಲೆ ಸಹ, ಭಾರತದ ನಾನಾ ಪ್ರಾಂತಗಳವರು ಅವರನ್ನು ಸಲಹೆ ಕೇಳುವುದನ್ನು ಬಿಡಲಿಲ್ಲ. ಇದರಿಂದ ಅವರಿಗೆ ಸ್ವಲ್ಪವೂ ವಿರಾಮವಿಲ್ಲದೆ ಬಹಳ ಕಷ್ಟವಾಗಿ, ಕೊನೆಗೆ ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದೆ ಫೀಜು ಕೊಟ್ಟರೇ ಸರಿ, ಇಲ್ಲವಾದರೆ ನಾನು ಸಲಹೆ ಕೊಡುವುದಿಲ್ಲ ಎಂದು ಅವರು ಪ್ರಕಟಿಸಿದರು. ಇದರಲ್ಲಿ ವಿಶ್ವೇಶ್ವರಯ್ಯನವರಿಗೆ ದುಡ್ಡಿನ ಆಸೆಗಿಂತ, ಪದೇ ಪದೇ ತಮ್ಮ ಸಲಹೆ ಕೇಳುವವರ ಸಂಖ್ಯೆಯನ್ನು ಕಡಿಮೆ ಮಾಡಿಕೊಳ್ಳಬೇಕೆಂಬುದೇ ಆಗಿದ್ದಿತು. ಇಷ್ಟಾದರೂ ಕೂಡ ಅವರಿಗೆ ಈಗಲೂ ಬಿಡುವಿಲ್ಲ. ಅವರ ಇಂಜನೀಯರಿಂಗ್ ಶಕ್ತಿಯನ್ನು ತೋರಿಸಲು ಈ ಉದಾಹರಣೆಗಳನ್ನು ಕೊಟ್ಟೆ.

೧೯೧೯ನೇ ಇಸವಿಯಲ್ಲಿ ಮೈಸೂರು ದೇಶದ ದಿವಾನ್‌ಗಿರಿಯು ಖಾಲಿಬಿದ್ದಾಗ, ಆಗಿನ ಇಂಡಿಯಾ ಸೆಕ್ರಟರಿ ಆಫ್ ಸ್ಟೇಟ್‌ರವರು ನಮ್ಮ ಮಹಾರಾಜರಿಗೆ ಶ್ರೀಮಾನ್ ವಿಶ್ವೇಶ್ವರಯ್ಯನವರನ್ನೆ ದಿವಾನರಾಗಿ ನಿಯಮಿಸಿಕೊಳ್ಳಿರೆಂದು ಸೂಚಿಸಿರೆಂದು ಹೇಳುತ್ತಾರೆ. ದಿವಾನ್‌ಗಿರಿಗೆ ಬರುವುದಕ್ಕೆ ಮುಂಚೆ ವಿಶ್ವೇಶ್ವರಯ್ಯನವರು ಮೈಸೂರಿಗೆ ಸಂಬಂಧಪಟ್ಟ ಆರ್ಥಿಕ ಮತ್ತು ಎಂಜನೀಯರಿಂಗ್ ಯೋಜನೆಗಳನ್ನೆಲ್ಲಾ

ಸಿದ್ಧಪಡಿಸಿಕೊಂಡಿದ್ದರು. ದೇಶದ ರೈತರ ಆರ್ಥಿಕ ಸ್ಥಿತಿ ಉತ್ತಮವಾದ ಹೊರತು ಯಾವ ಸುಧಾರಣೆಗಳೂ ಸಾಧ್ಯ ವಿಲ್ಲವೆಂಬುದು ಅವರಿಗೆ ಚೆನ್ನಾಗಿ ತಿಳಿದಿದ್ದಿತು. ಸುಮಾರು ೧೯೧೧ನೇ ಇಸವಿಯಲ್ಲಿ ಅವರು ಮಹಾರಾಜರಿಗೆ ಸಮರ್ಪಿ ಸಿದ ಒಂದು ಟಿಪ್ಪಣಿಯಲ್ಲಿ ದೇಶದಲ್ಲಿ ಎಲ್ಲೆಲ್ಲಿ ವಿದ್ಯುಚ್ಛ ಕ್ತಿಯ ಅನುಕೂಲಗಳಿವೆಯೋ ಅಲ್ಲಿಂದಲೆಲ್ಲಾ ವಿದ್ಯುತ್ ಶಕ್ತಿಯನ್ನು ತಯಾರಿಸಬೇಕು. ಗೇರುಸೊಪ್ಪ, ಶಿಂಶ, ನೇಕೆದಾಟ್ ಕೃಷ್ಣರಾಜಸಾಗರ ಇಲ್ಲೆಲ್ಲಾ ವಿದ್ಯುತ್ ಶಕ್ತಿಯನ್ನು ತಯಾರಿಸಿ ಹಳ್ಳಿಹಳ್ಳಿಗಳಿಗೂ ಹರಡಬೇಕು. ವಿದ್ಯುತ್ ಶಕ್ತಿಯಿಲ್ಲದೆ, ದೇಶದ ದಾರಿದ್ರ್ಯ ನಾಶವಾಗುವು ದಿಲ್ಲ ಎಂದು ಒರೆದಿದ್ದರೆಂದು ಒಲ್ಲವರು ಹೇಳುತ್ತಾರೆ. ಆದು ನಿಕ ಜಗತ್ತಿನಲ್ಲಿ ವಿದ್ಯುತ್ ಶಕ್ತಿಯು ಸರ್ವಶಕ್ತಿ. ಇದು ೧೯೧೧ರಲ್ಲಿ ಪಾಶ್ಚಾತ್ಯರಿಗೆ ಸಹ ಚೆನ್ನಾಗಿ ತಿಳಿದಿರಲಿಲ್ಲ. ೧೯೩೧ರಲ್ಲಿ ಲೆನಿನ್ನನು ರಷ್ಯದಲ್ಲಿ ವಿದ್ಯುತ್‌ಶಕ್ತಿಯನ್ನು ಹೆಚ್ಚು ಹೆಚ್ಚಾಗಿ ಎಲ್ಲೆಲ್ಲೂ ಒದಗಿಸುವುದೇ ಜನರ ಕಷ್ಟ ನಿವಾರಣೆಗೆ ಮೊದಲನೆಯ ಉಪಾಯವೆಂದು ಸಾರಿದನು. ಅನಂತರ ಆದು ಬೆಂಕಿಯಂತೆ ಹತ್ತಿಕೊಂಡು ಪಾಶ್ಚಾತ್ಯ ರಾಷ್ಟ್ರಗಳೆಲ್ಲೆಲ್ಲಾ ವಿದ್ಯುತ್‌ಶಕ್ತಿ ಎಂಬುದೇ ಕೂಗಾ ಯಿತು. ಈ ನಿಜವು, ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಲೆನಿನ್ನನಿಗೆ ತಿಳಿಯುವುದಕ್ಕಿಂತ ಹತ್ತು ವರುಷ ಮುಂಚೆ ಗೊತ್ತಾಗಿದ್ದಿತು. ಸರ್ ಎಂ. ವಿಶ್ವೇಶ್ವರಯ್ಯನವರು ೧೯೧೯ರ ಸುಮಾರಿನಲ್ಲಿ ಮಹಾರಾಜರಿಗೆ ಒಪ್ಪಿಸಿದ ಇನ್ನೊಂದು ಟಿಪ್ಪಣಿಯಲ್ಲಿ ಮೈಸೂರು ದೇಶವು ಕೈಗಾ ರಿಕಾ ಮತ್ತು ಆರ್ಥಿಕ ಪ್ರಗತಿಗೆ ಬರಬೇಕಾದರೆ ಯಾವ ಯಾವ ಸ್ಕೀಮುಗಳನ್ನು ಜಾರಿಗೆ ಕೊಡಬೇಕೆಂಬುದನ್ನು ಅರಿಕೆ ಮಾಡಿದ್ದರೆಂದೂ, ಅವುಗಳನ್ನೆಲ್ಲಾ ಇನ್ನೂ ಕೆಲಸ ಮಾಡಿ ಪೂರೈಸಿಲ್ಲವೆಂದೂ ಒಂದೊಂದಾಗಿ ತೆಗೆದುಕೊಳ್ಳು ತ್ತಾರೆಂದೂ ತಿಳಿದವರು ಹೇಳುತ್ತಾರೆ. ಮೋಟಾರು ಕಾರ್ಖಾನೆ, ಆಕಾಶವಿಮಾನ ಕಾರ್ಖಾನೆ, ಉಕ್ಕಿನ ಕಾರ್ಖಾನೆ, ಕಾಗದದ ಕಾರ್ಖಾನೆ, ಸಕ್ಕರೆ ಕಾರ್ಖಾನೆ ಇವು ಸರ್ ಎಂ. ವಿಶ್ವೇಶ್ವರಯ್ಯನವರ ಆಶೆಗಳಾಗಿದ್ದವು. ಸಕ್ಕರೆಯ ಕಾರ್ಖಾನೆಗೆ ಆವಶ್ಯಕವಾದ ಕಬ್ಬನ್ನು ಬೆಳೆಯು ವುದಕ್ಕಾಗಿಯೇ ಅವರು ಕೃಷ್ಣರಾಜ ಸಾಗರವನ್ನು ನಿರ್ಮ ಡಿಸಿದ್ದುದು. ಸಕ್ಕರೆ ಕಾರ್ಖಾನೆ ಅದರ ಸ್ವಾಭಾವಿಕವಾದ ಮುಂದಲ ಬೆಳವಣಿಗೆಯಾಯಿತು.

ಒಂದು ದೇಶದ ಜನರನ್ನು ವಿದ್ಯಾವಂತರನ್ನಾಗಿ ಮಾಡ ಬೇಕಾದರೆ ಆ ದೇಶದಲ್ಲಿ ವಿಶ್ವವಿದ್ಯಾಲಯವಿದ್ದ ಹೊರತು ಸಾಧ್ಯವಲ್ಲವೆಂಬುದನ್ನು ಚೆನ್ನಾಗಿ ಅರಿತ ವಿಶ್ವೇಶ್ವರಯ್ಯನ ವರ ಮೈಸೂರು ವಿಶ್ವವಿದ್ಯಾಲಯದ ಏರ್ಪಾಡನ್ನು ಮಾಡಿ ದರು. ಆ ವಿಶ್ವವಿದ್ಯಾಲಯದ ಏರ್ಪಾಡಿಗೆ ಸಹ ಅನೇಕ ವಿಧದಲ್ಲಿ ಅಡ್ಡಿಬಂದಿತು. ಆಗ ಬೆಂಗಳೂರು ಕಾಲೇಜಿನ (ಆಥವಾ ಮೈಸೂರೊ?) ಪ್ರಿನ್ಸಿಪಾಲರಾದ ಟೀ ಟ್ ಸಾಹೇಬರು 'ಇದು ಬೇಕಿಲ್ಲ. ಈ ವಿಶ್ವವಿದ್ಯಾಲಯ ಆಧಿ ವೃದ್ಧಿಯಾಗುವುದಿಲ್ಲ' ಎಂದು ಪ್ರತಿಭಟಿಸಿದರು. ವಿಶ್ವೇ ಶ್ವರಯ್ಯನವರು ಅವರ ಪ್ರತಿಭಟನೆಯನ್ನು ಲಕ್ಷಿಸಲಿಲ್ಲ. ವಿಶ್ವವಿದ್ಯಾಲಯವು ಸ್ಥಾಪಿತವಾಯಿತು. ಟೀಟ್ ಸಾಹೇ ಬರು ರಾಜೀನಾಮೆ ಕೊಟ್ಟು ರಿಟೈಯರ್ ಆದರು. ಶ್ರೀಮಾನ್ (ಈಗ ರಾಜಸೇವಾಸಕ್ತ) ಬಿ. ಎಂ. ಶ್ರೀಕಂಠಯ್ಯನವರ ಅದ್ಭುತವಾದ, ಯಾವ ಇಂಗ್ಲಿಷ್ ಪ್ರೊಫೆಸರ್‌ರಿಗೂ ಇಲ್ಲದ ಇಂಗ್ಲಿಷ್ ಪಾಂಡಿತ್ಯವನ್ನು ಅರಿತು, ಅವರನ್ನು ಇಂಗ್ಲಿಷ್ ಪ್ರೊಫೆಸರ್‌ರನ್ನಾಗಿ ಆರಿಸಿಕೊಂಡುದೂ ವಿಶ್ವೇಶ್ವರಯ್ಯ ನವರ ಪ್ರಭಾವದಿಂದಲೆ. ಇಲ್ಲದಿದ್ದರೆ ಇಂಗ್ಲಿಷ್ ಪ್ರೊಫೆ ಸರ್ ಸ್ಥಾನ ನಮ್ಮವರಿಗೆ ನಮ್ಮ ಕಾಲೇಜುಗಳಲ್ಲಿ ಅಷ್ಟು ಸುಲಭವಾಗಿ ದೊರಕುತ್ತಿರಲಿಲ್ಲ. ಎಲಿಮೆಂಟರಿ ವಿದ್ಯಾ ಭ್ಯಾಸ ಪದ್ಧತಿಯಲ್ಲಿಯೂ ವಿಶ್ವೇಶ್ವರಯ್ಯನವರು ಹೊಸ ಮಾರ್ಗವನ್ನೆ ಹಾಕಿಕೊಟ್ಟರು. ಇಂಡಿಯಾ ಸರ್ಕಾರದಿಂದ ನಿಯಮಿತವಾದ ವಿದ್ಯಾಕಮಿಷನವರು ಅವರ ಈ ಸಲಹೆ ಗಳನ್ನು ಪ್ರಶಂಸಿಸಿ ಎಲಿಮೆಂಟರಿ ವಿದ್ಯಾಭ್ಯಾಸವನ್ನ, ಆಗಿನ ಮೈಸೂರು ವ್ಯಾಧಮಿಕ ವಿದ್ಯಾಭ್ಯಾಸದ ಮಾರ್ಗವನ್ನೇ ಅನುಸರಿಸಬೇಕೆಂದು ಹೇಳಿದ್ದಾರೆ. ಈಚೆಗೆ ವಿಶ್ವೇಶ್ವರಯ್ಯ ನವರು ಹಾಕಿಕೊಟ್ಟ ಕ್ರಮವು ಬದಲಾಯಿಸಿದೆ. ವಿದ್ಯಾಪ್ರಚಾ ರಕ್ಕೆ ಬರಿಯ ಪ್ರೈಮರಿ ಸ್ಕೂಲುಗಳ ಸಂಖ್ಯೆ ಹೆಚ್ಚಾದರೆ ಸಾಲದು. ಮಿಡಲ್ ಮತ್ತು ಹೈಸ್ಕೂಲುಗಳೂ ಹೆಚ್ಚಾಗ ಬೇಕೆಂದು ಅವರು ಹೇಳುತ್ತಿದ್ದರು.

ಮೈಸೂರಿನ ಆರ್ಥಿಕ ಪ್ರಗತಿಗೆ ಮೈಸೂರು ಸರ್ಕಾರದ ಬೆಂಬಲವುಳ್ಳ ಬ್ಯಾಂಕ್ ಅವಶ್ಯಕವಾದುದೆಂದು ಅವರು ತಿಳಿದು ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಆದು ಎಷ್ಟು ಮುಂದಾಲೋಚನೆಯುಳ್ಳ ಕೆಲಸವೆಂಬುದು ಈಚಿನ ಆ ಬ್ಯಾಂಕಿನ ಬೆಳವಣಿಗೆಯಿಂದಲೂ ಅದಕ್ಕೆ ದೊರೆತಿರುವ ಪುರಸ್ಕಾರದಿಂದಲೂ ಅದು ಮೈಸೂರಿನ ಹಣಪ್ರಪಂಚದಲ್ಲಿ ತೋರಿಸುತ್ತಿರುವ ಕೈವಾಡದಿಂದಲೂ ಗೊತ್ತಾಗುತ್ತದೆ. ಅದರ ಶೇರು ಬೆಲೆ, ಮೊದಲು ಇದ್ದುದರ ಮೂರರಷ್ಟು ಈಗ ಆಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರು ಸ್ವಭಾವ ದಿಂದ ನೀರಾವರಿಯ ಇಂಜನಿಯರಾದರೂ, ನಮ್ಮ ದೇಶ

ದವರ ಬಡತನವನ್ನು ಹೋಗಲಾಡಿಸುವ ಉದ್ದೇಶದಿಂದ ಅವರು ಅನೇಕ ರೀತಿಯ ಆರ್ಥಿಕ ಯೋಜನೆಗಳನ್ನು ತಯಾರಿಸಿದ್ದಾರೆ. ಅವರ ಆರ್ಥಿಕ ಯೋಜನೆಗಳೆಲ್ಲಾ ಹಿಂದೆಲ್ಲಾ ನಮ್ಮ ಜನರ ದಾರಿದ್ರ್ಯ ನಿರುದ್ಯೋಗ ನಿವಾರಣೆಯೇ ಆಡಗಿದೆ. ಭಾರತದ ಪುನರ್ನಿರ್ಮಾಣ ಎಂಬುದು ಈ ಯೋಜನೆಗಳಲ್ಲಿ ಮುಖ್ಯವಾದುದು. ಇದು ಇಂಡಿಯನ್ ಸಿವ್ಹಿಲ್ ಸರ್ವಿಸ್‌ಗೆ ಪಠ್ಯಪುಸ್ತಕವೂ ಆಗಿದೆ. ನಿರುದ್ಯೋಗ ನಿವಾರಣೆ, ಗ್ರಾಮಪುನರುಜ್ಜೀವನ, ಭಾರತಕ್ಕೆ ವ್ಯವಸ್ಥಿತವಾದ ಆರ್ಥಿಕಯೋಜನೆ ಇವೆಲ್ಲಾ ಅವರ ಆರ್ಥಿಕ ಪ್ರಶ್ನೆಗಳಿಗೆ ಸಂಬಂಧಿಸಿದ ಪ್ರತಿಭೆಯನ್ನು ಬೆಳಗುವ ಗ್ರಂಥಗಳು. ಆ ಗ್ರಂಥಗಳಲ್ಲಿ ವಿವರಿಸಿರುವ ಸತ್ಯ ಮತ್ತು ಪ್ರಯೋಗಗಳನ್ನೆಲ್ಲಾ ಅವರು ಮೈಸೂರಿನ ಸ್ಥಿತಿಗತಿಗಳಿಗೆ ಅನುಗುಣವಾಗಿ ಇಲ್ಲಿ ಕಾರ್ಯಾಚರಣೆಯಲ್ಲಿ ತಂದರು. ಉಕ್ಕು ಮತ್ತು ಕಬ್ಬಿಣ ಆಧುನಿಕ ನಾಗರಿಕತೆಯಲ್ಲಿ ಜನ್ಮ ಬೆಳ್ಳಿಗಳಿಗಿಂತ ಹೆಚ್ಚು ಬೆಲೆಯಾದುದೆಂಬುದನ್ನು ಅರಿತು ಭದ್ರಾವತಿಯ ಕಾರ್ಖಾನೆಯನ್ನು ಸ್ಥಾಪಿಸಿದರು. ಇವತ್ತು ನಮಗೆ ಅದರ ಬೆಲೆ ಅರ್ಥವಾಗುತ್ತದೆ. ಹಿಂದೂ ದೇಶದಲ್ಲಿ ಎಲ್ಲೆಲ್ಲಿ ಉಕ್ಕು ಮತ್ತು ಕಬ್ಬಿಣದ ಕೆಲಸ ನಡೆಯುತ್ತದೆಯೋ ಅಲ್ಲೆಲ್ಲಾ ಅವರ ಕೈವಾಡವಿದ್ದೇ ಇದೆ. ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಂಪನಿಗೆ ಅವರು ಬಹು ಕಾಲ (ಈಗಲೂ) ಡೈರೆಕ್ಟರ್ ಆಗಿದ್ದರು. ಭಾರತ ಸರ್ಕಾರದವರು ಅಡ್ಡಿಬರದೇ ಇದ್ದಿದ್ದರೆ ಮೋಟಾರು ಕಾರ್ಖಾನೆಯು ಈ ವೇಳೆಗೆ ಇಲ್ಲಿ ಸ್ಥಾಪಿತವಾಗಿ ಎಷ್ಟೋ ಕಾಲವಾಗುತ್ತಿದ್ದಿತು. ಮೈಸೂರು ರೈಲ್ವೆಗಳು ಸಹ, ತಮ್ಮ ಲಾಭ ನೇ ಈ ವಯಸ್ಸಿನಲ್ಲಯೂ Industrialise or perish "ಕೈಗಾರಿಕಾ ದೇಶವಾಗಿ, ಇಲ್ಲದಿದ್ದರೆ ನಾಶವಾಗುವಿರಿ" ಎಂದು ಕೂಗುತ್ತಿರುವ ವಿಶ್ವೇಶ್ವರಯ್ಯನವರು, ಮೈಸೂರನ್ನು ಕೈಗಾರಿಕೆಗಳ ನಾಡಾಗಿ ಮಾಡುವ ಪ್ರಯತ್ನಗಳಲ್ಲಿ ಒಂದು.

ಅವರ ಮೈಸೂರು ದಿವಾನ್‌ಗಿರಿಯಲ್ಲಿ ಇಂತಹ ಅಸಂಖ್ಯಾತ ಸಣ್ಣ ಸಣ್ಣ ಯೋಜನೆಗಳು ಪ್ರಾರಂಭವಾದುವು. ಎಕನಾಮಿಕ್ ಕಾನ್‌ಫರೆನ್ಸು, ವಿಲೇಜ್ ಯೂನಿಯನ್, ನೂರಾರು ಕಮೀಟಿಗಳು ಇವುಗಳ ಮೂಲಕವೆಲ್ಲಾ ಅವರು ನಮ್ಮ ಜನರಿಗೆ ಪ್ರಜಾಪ್ರಭುತ್ವದಲ್ಲಿ ತಯಾರಿಕೆಯನ್ನು ಕೊಡುತ್ತಿದ್ದರು. (training in democracy) ಆ ವಿಲೇಜ್ ಯೂನಿಯನ್‌ಗಳು ಈಗ ಪಂಚಾಯ್ತಿಗಳಾಗಿ ಅವುಲ್ಲಾದರ ಸರ್ವಾಧಿಕಾರಕ್ಕೆ ಒಳಗಾಗಿದ್ದರೂ ಆಗ ಅವುಗಳ ಉದ್ದೇಶವು ರೈತನಿಗೆ ತಾನು ಮೈಸೂರು ಸೀಮೆಯ ಪ್ರಜೆ, ಇಂಡಿಯಾ ದೇಶ ನನ್ನ ದೇಶ ಎಂಬ ವಿಶಾಲವಾದ ಜನಾಂಗ ಭಾವನೆಯನ್ನು ಉಂಟುಮಾಡುವುದೇ ಆಗಿದ್ದಿತು. ವಿಶ್ವೇಶ್ವರಯ್ಯನವರು ಮೈಸೂರು ದಿವಾಣರಾದುದು ಮೈಸೂರಿಗೆ ಒಂದು ಹೊಸ ಯುಗವಾಯಿತು. ಗಾಡಿಯಲ್ಲಿ ಹೋಗುತ್ತಿದ್ದವನು ಮೋಟಾರಿನಲ್ಲಿ ಹೋಗುವುದನ್ನು ಪ್ರಾರಂಭಿಸಿದಂತೆ ನಿಧಾನವಾಗಿ ಸಾವಧಾನವಾಗಿ ನಡೆಯುತ್ತಿದ್ದ ಕೆಲಸಗಳಿಗೆಲ್ಲಾ ಚುರುಕು ಬಂದಿತು. ಜನರ ಸ್ವಭಾವವೇ ಬದಲಾಯಿಸಿತು, ಜೀವನ ಕ್ರಮದಲ್ಲಿ ಮಾರ್ಪಾಡಾಯಿತು. ಆಗ ಸಾಧಾರಣವಾಗಿ ಬೆಂಗಳೂರು, ಮೈಸೂರು, ತುಮಕೂರು ಮುಂತಾದ ಮುಖ್ಯ ಪಟ್ಟಣಗಳಲ್ಲಿ ಯಾವ ಖಾಸಗಿ ಸಭೆಗಳಿಗೂ ಅಧಿಕಾರಿಗಳೇ ಅಧ್ಯಕ್ಷರಾಗುತ್ತಿದ್ದರು. ಅವರು ಸ್ವಾಭಾವಿಕವಾಗಿ ಅರ್ಧ ಗಂಟೆ ಒಂದು ಗಂಟೆ ಸಾವಕಾಶವಾಗಿಯೇ ಬರುತ್ತಿದ್ದರು. ಅದರಿಂದ ಜನರೂ, (ಅಭ್ಯಾಸಬಲದಿಂದ) ಬೇಜಾರುಪಟ್ಟುಕೊಳ್ಳಲಿಲ್ಲ. ಮೊನ್ನೆ ಪ್ರವಾಸವನ್ನು ಕೈಕೊಂಡ ನೂತನವಾಗಿ ನಿಯಮಿತರಾದ ಖಾಸಗಿ ಮಂತ್ರಿಗಳು ಕೊಟ್ಟಿದ್ದ ಕಾಲಕ್ಕಿಂತ ಎರಡು ಕಾಲು ಗಂಟೆ ಸಾವಕಾಶವಾಗಿ ಒಂದರು. ಆದರೆ ವಿಶ್ವೇಶ್ವರಯ್ಯನವರ ಆಡಳಿತ ಪ್ರಾರಂಭವಾದುದೇ ತಡ. ಅವರ ಸ್ವಂತ ಅಭ್ಯಾಸ ಎಲ್ಲಾ ಅಧಿಕಾರಿಗಳಿಗೂ ಬಂದು ಗೊತ್ತಾದ ಕಾಲಕ್ಕೆ ಸರಿಯಾಗಿ ಬರುತ್ತಿದ್ದರು. ಕಾಲದ ಬೆಲೆಯನ್ನು ಈ ರೀತಿ ನಮ್ಮವರಿಗೆ ಮೊದಲು ತಿಳಿಸಿದವರು ವಿಶ್ವೇಶ್ವರಯ್ಯನವರೇ. ಇನ್ನು ನಮ್ಮ ಜನರ ಉಡುಪುಗಳಲ್ಲಿಯೂ ವಿಶ್ವೇಶ್ವರಯ್ಯನವರ ಮೇಲು ಪಂಗ್ತಿಯಿಂದ ದೊಡ್ಡ ಬದಲಾವಣೆಯಾಯಿತು. ಎಂತೆಂತಹುದೋ ಒಟ್ಟೆಗಳನ್ನು ಹಾಕಿಕೊಂಡು ಹೇಗೆ ಹೇಗೋ ಒರುತ್ತಿದ್ದ ಅಧಿಕಾರಿಗಳಿಗೂ ಖಾಸಗೀ ಜನರಿಗೂ ಉಡುಪಿನಲ್ಲಿ ಶಿಸ್ತು ಪ್ರಾರಂಭವಾಯಿತು. ಜೀವನದಲ್ಲಿ ಒಂದು ಕ್ರಮ ಉಂಟಾಯಿತು. ವಿಶ್ವೇಶ್ವರಯ್ಯನವರ ಕಲಾಭಿರುಚಿಯೂ ಇದಕ್ಕೆ ಮುಖ್ಯ ಕಾರಣ ಯಾವ ಕೆಲಸದಲ್ಲಿಯೂ ಅಚ್ಚುಕಟ್ಟನ್ನು ಅವರು ಬಹಳ ಮೆಚ್ಚುತ್ತಾರೆ. ಅವರ ಅಚ್ಚುಕಟ್ಟಿನ ಪ್ರೇಮವು ಎಷ್ಟಕ್ಕೆ ಒಂದಿದ್ದಿತೆಂದರೆ ನಮ್ಮಲ್ಲಿ ಯಾರಾದರೂ ಚೆನ್ನಾಗಿ ಉಡುಪು ಹಾಕಿಕೊಂಡರೆ "ಹೋ ಇವನು ವಿಶ್ವೇಶ್ವರಯ್ಯನವರಂತೆ ಡ್ರೆಸ್ ಮಾಡಿಬಿಟ್ಟ" ಎಂದು ಜನ ಹೇಳುತ್ತಿದ್ದರು. ಅಕ್ಷರಗಳನ್ನು ಚೆನ್ನಾಗಿ ಬರೆಯುತ್ತಿದ್ದವರನ್ನು ಸಹ ವಿಶ್ವೇಶ್ವರಯ್ಯನವರು ಮೆಚ್ಚುತ್ತಿದ್ದರೆಂದು ಕೇಳಿದ್ದೇನೆ.

ಪ್ರಜಾಪ್ರತಿನಿಧಿ ಸಭೆಯ ಎರಡನೆಯ ಅಧಿವೇಶನವನ್ನೂ (ವರುಷಕ್ಕೆ ೨ ಸಲ ಅಧಿವೇಶನವಾಗಬೇಕೆಂಬುದನ್ನೂ) ಎರಡು ಸಭೆಗಳಲ್ಲೂ ಬಜೆಟ್ ಚರ್ಚೆಗೆ ಅವಕಾಶವನ್ನೂ ಕಲ್ಪಿಸಿದವರು ವಿಶ್ವೇಶ್ವರಯ್ಯನವರು. ಅವರು ತಮ್ಮ ಆಡಳಿತ ವಿಚಕ್ಷಣೆಯಿಂದಲೂ ಪ್ರಜಾಪ್ರತಿನಿಧಿ ಸಭೆಯಲ್ಲಿ ತಾವು ಸದಸ್ಯರೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿಯಿಂದಲೂ, ಆ ಸಭೆಯ ಸಡವಳಿಕೆಗಳನ್ನು ಶ್ರೀಮನ್ಮಹಾರಾಜರಿಗೆ ತಿಳಿಸುತ್ತಿದ್ದ ಕ್ರಮದಿಂದಲೂ ಆಗಿನ ಪ್ರಜೆಗಳಿಗೆ 'ಇದೇ ಇನ್ನು ಪಾರ್ಲಿಮೆಂಟ್‌ಗೆ ಸಮಾನವಾಗುತ್ತೆ. ಇದರ ಅಭಿಪ್ರಾಯವನ್ನು ಮಹಾರಾಜರು ಕೂಡ ಪುರಸ್ಕರಿಸುತ್ತಾರೆ" ಎಂಬ ಭಾವ ಉಂಟಾಯಿತು.

ಆಗ ಪ್ರಜಾಪ್ರತಿನಿಧಿ ಸಭೆಗೆ ಹೋಗುತ್ತಿದ್ದವರು ಒಂದು ಸಂಗತಿಯನ್ನು ಹೇಳುತ್ತಾರೆ. ಒಂದು ಅಧಿವೇಶನ ಕಾಲದಲ್ಲಿ ಸದಸ್ಯರೊಬ್ಬರು "ಈ ಸಭೆ ಹೀಗೆ ವರುಷಕ್ಕೆ ಒಂದು ಸಲ, ಎರಡು ಸಲ ಸೇರಿದರೆ ಸಾಲದು, ನಮ್ಮ ಅಹವಾಲುಗಳನ್ನು ಹೇಳಿಕೊಳ್ಳುವುದಕ್ಕೇ ಅವಕಾಶವಾಗುವುದಿಲ್ಲ. ಇನ್ನೂ ಹೆಚ್ಚು ಸಲ ಸೇರಬೇಕು" ಎಂದು ಕೇಳಿದರಂತೆ. ಆಗ ಒಬ್ಬ ಮಂತ್ರಿಗಳು (Councillor) ಸ್ವಲ್ಪ ತಿರಸ್ಕಾರದಿಂದ 'ಅದಕ್ಕೇನು ನೀವು ನೀವೇ ನಿಮ್ಮ ಊರುಗಳಲ್ಲಿಯೇ ಸೇರಿ ರಾವು ಮಾಡಿಕೊಂಡು ಬಿಟ್ಟರಾಯಿತು' ಎಂದರಂತೆ. ಮುಖ ಭಂಗಿತರಾದ ಸದಸ್ಯರು ಚಾವಟಿ ಏಟು ತಿಂದವರಂತೆ ಪೆಚ್ಚಾದರು. ಆಗ ವಿಶ್ವೇಶ್ವರಯ್ಯನವರು 'ಪದೇ ಪದೇ ನಿಮ್ಮ ನಿಮ್ಮ ಊರುಗಳಲ್ಲಿಯೂ ತಾಲ್ಲೂಕು ಡಿಸ್ಟ್ರಿಕ್ಟ್ ಗಳಲ್ಲಿಯೂ ಸಭೆ ಸೇರಿ ನಿಮ್ಮ ಅಭಿಪ್ರಾಯಗಳನ್ನೆಲ್ಲಾ ಕ್ರೋಡೀಕರಿಸಿ ಇಲ್ಲಿಗೆ ತೆಗೆದುಕೊಂಡು ಬನ್ನಿ" ಎಂದು ಹೇಳಿ ಮಂತ್ರಿಗಳ ಮಾತಿನಲ್ಲಿದ್ದ ವಿಷವನ್ನು ತೆಗೆದು ಹಾಕಿ ಸದಸ್ಯರಿಗೆ ಸಮಾಧಾನ ಮಾಡಿದರಂತೆ. ಈ ಅಭಿಪ್ರಾಯವನ್ನೇ ಅವರು, ಮೈಸೂರು ಸರ್ಕಾರದವರು ನೇಮಿಸಿದ "ಗಣವತಿ" ಸಮಿತಿಯ ಅಧ್ಯಕ್ಷರಾಗಿ "ಜನರ ಆಸೆಗಳು ಹೇಗೆ ಇವೆಯೋ ಆದರಂತೆ ಇವರಿಗೆ ಜವಾಬ್ದಾರಿ ಸರ್ಕಾರವನ್ನು ಕೊಡಬೇಕು. ಇಲ್ಲದಿದ್ದರೆ ದೇಶದಲ್ಲಿ ಶಾಂತಿಯುಂಟಾಗುವುದಿಲ್ಲ" ಎಂದು ತಿಳಿಸಿದರು. ಭಾರತನ್ನು ಪರದಾಸ್ಯದಲ್ಲಿರುವುದನ್ನು ಕಂಡು ಕರಗಿ ಅವರು ಅನೇಕ ಸಲ "ಈ ದೇಶ ಸ್ವತಂತ್ರವಾಗುವವರೆಗೆ, ತನ್ನ ಕಾಲಮೇಲೆ ತಾನು ನಿಂತುಕೊಳ್ಳುವವರೆಗೆ ತನಗೆ ಬೇಕಾದ ಆರ್ಥಿಕ ಯೋಜನೆಗಳನ್ನು ತನಗೆ ಬೇಕಾದಷ್ಟು ಬೇಗ ನಡೆಸಿಕೊಳ್ಳಲಾರದು." ಎಂದು ಹೇಳಿದ್ದಾರೆ.

ನಮ್ಮ ಆಡಳಿತವನ್ನು ನಮ್ಮವರು ನಡೆಸಿಕೊಳ್ಳಬೇಕೆಂಬುದನ್ನು ತಮ್ಮ ಅಧಿಕಾರಾವಧಿಯಲ್ಲಿ ಒಂದೆರಡು ಸಲ ತೀಕ್ಷ್ಣವಾಗಿ ಅವರು ಪ್ರಯೋಗಿಸಿದ್ದುದು ಉಂಟು. ಪ್ರಾರಂಭ ದೆಸೆಯಲ್ಲಿ ಭದ್ರಾವತಿಯಲ್ಲಿ ಅಮೇರಿಕನ್ ಕೆಲಸಗಾರರು ಈ 'ಜಾತಿ' ವ್ಯತ್ಯಾಸವನ್ನು ತೋರಿಸಿದಾಗ ವಿಶ್ವೇಶ್ವರಯ್ಯನವರು ಅವರನ್ನು ಕೆಲಸದಿಂದ ನಿವೃತ್ತಿ ಮಾಡಿದರು. ಅವರ ಕಾಲದಲ್ಲಿ ಟೆಕ್ನಿಕಲ್ ಕೆಲಸಗಾರರು ಹೊರತು ಪರದೇಶದ ಇತರರಿಗೆ ಇಲ್ಲಿ ಹೆಚ್ಚಾಗಿ ಅವಕಾಶ ವಿರಲಿಲ್ಲ. ಆದರೆ ಈಚೆಗೆ ಸ್ವಲ್ಪ ಬದಲಾವಣೆ ನಡೆದಿದೆ. ಮುಖ್ಯ ಮತ್ತಿತರ ಸ್ಥಳಗಳನ್ನೆಲ್ಲಾ ಅವರೇ ಆಕ್ರಮಿಸಿಕೊಂಡಿದ್ದಾರೆ. ಪೋಲಿಸ್ ಐಜಿ, ವಿದ್ಯಾ ಇಲಾಖೆಯ ಡೈರೆಕ್ಟರ್, ಬೆಂಗಳೂರು ಮೈಸೂರು ಕಾಲೇಜು ಪ್ರಿನ್ಸಿಪಾಲರುಗಳು, ಛೀಫ್ ಎಲೆಕ್ಟ್ರಿಕಲ್ ಇಂಜನಿಯರ್, ಛೀಫ್ ಕಮ್ಯಾಂಡೆಂಟ್ ಹೈಕೋರ್ಟು ಈ ಸ್ಥಳಗಳಲ್ಲೆಲ್ಲಾ ನಮ್ಮವರೇ ಆಗಂತುಕರಾಗುತ್ತಿದ್ದಾರೆ ಆದರೆ ಕೊಚಿನ್ ಮುಂತಾದ ಕಡೆ ದಿವಾನರೇ ಏರೋಪ್ಯರಾಗುತ್ತಿರುವಾಗ ನಾವು ಇಷ್ಟರ ಸೌಭಾಗ್ಯಕ್ಕೇ ಕೃತಜ್ಞರಾಗಿರಬೇಕಾಗಿದೆ. ಪ್ಯಾರವೆಂಟ್ ಪವರ್ ಮತ್ತು ರೆಸಿಡೆಂಟರವರೊಡನೆ ನಡೆಸುತ್ತಿದ್ದ ವ್ಯವಹಾರದಲ್ಲಿಯೂ, ವಿಶ್ವೇಶ್ವರಯ್ಯನವರು ಮೈಸೂರು ದೇಶದವರ ಮರ್ಯಾದೆಯನ್ನು (Self respect) ಚೆನ್ನಾಗಿ ಉಳಿಸಿದ್ದರು. ಅವರು ಮೈಸೂರು ದಿವಾನ್‌ಗಿರಿಗೆ ಒಂದನೇಲೆ ರೆಸಿಡೆಂಟ್‌ರವರಿಂದ ಬರುತ್ತಿದ್ದ ಕಾಗದಗಳ ಧ್ವನಿಯೇ ಬದಲಾಯಿಸಿತೆಂದು ಆ ವಿಚಾರಗಳಲ್ಲಿ ಪರಿಶ್ರಮವುಳ್ಳವರು ಹೇಳುತ್ತಾರೆ. ಮೈಸೂರು ದೇಶದವರು ಕೊಡುತ್ತಿದ್ದ ಪೊಗದಿಯ ವಿಚಾರದಲ್ಲಿ ಪ್ಯಾರಮೆಂಟ್ ಪವರಿನೊಂದಿಗೆ ದೀರ್ಘ ವ್ಯವಹಾರವನ್ನು ನಡೆಸಿ ತಮ್ಮ ಕಾಲದಲ್ಲಿಯೇ ದೇಶಕ್ಕೆ ಹಣವನ್ನು ಉಳಿತಾಯ ಮಾಡಿ, ಈಚೆಗೆ ಪೊಗದಿಯ ರಿಯಾಯಿತಿಗೆ ತಳಹದಿಯನ್ನು ಸ್ಥಾಪಿಸಿದವರು ವಿಶ್ವೇಶ್ವರಯ್ಯನವರೇ. ತಮ್ಮ ದಿವಾನ್‌ಗಿರಿಯ ಅವಧಿಯಲ್ಲಿ ಒಂದು ಸಲ ಅವರು ಯಾವುದೋ ಹಳ್ಳಿಗೆ ಹೋಗಿದ್ದಾಗ ಹಳ್ಳಿಯವರು ಬೆಂಗಳೂರಿನ ಹೂವಿನ ಹಾರಗಳನ್ನೂ ಸೇಬಿನ ಹಣ್ಣುಗಳನ್ನೂ ಅರ್ಪಿಸಿದುವನ್ನು ಕಂಡು "ಇವುಗಳನ್ನೆಲ್ಲಾ ನಾನು ಬೆಂಗಳೂರಿನಲ್ಲಿ ನಿತ್ಯ ಅನುಭವಿಸುತ್ತಿದ್ದೇನೆ ನಿಮ್ಮ ಹಿತ್ತಲಲ್ಲಿ ಬೆಳೆದಿದ್ದ ಹೂವುಗಳಿದ್ದರೆ ತನ್ನಿ. ಹಣ್ಣುಗಳಿದ್ದರೆ ತನ್ನಿ. ಮುಂದಲ ವರುಷದ

ಹೊತ್ತಿಗೆ ನಾನು ಬರುವ ವೇಳೆಗಾದರೂ ಬೆಳೆಯಿರಿ'' ಎಂಬುದಾಗಿ ಎಂದು ಹೇಳಿದರಂತೆ. ಹೀಗೆ ಹಣ್ಣು ಹೂವು ವಿಳ್ಳೆದೆಲೆಯಿಂದ ಹಿಡಿದು ಮೋಟಾರು ರೈಲು ಇಂಜನ್‌ಗಳ ವರೆಗೆ ಮೈಸೂರು ಸ್ವಾವಲಂಬಿ ( Self sufficient ) ಯಾಗಬೇಕೆಂಬುದೇ ಅವರ ಹಿರಿಯ ಆಸೆಯಾಗಿದ್ದಿತು. ರಾಜಕೀಯ ಪರಿಸ್ಥಿತಿಗಳು ಕೇವಲ ಉಗ್ರವಾದ ರೂಪವನ್ನು ತಾಳಿ ಹಿಂದೂ ಮುಸಲ್ಮಾನರ ನಡುವಿನ ಅಂತರ ದೂರವಾಗಿ ಬೆಳೆದು ಪರಸ್ಪರರಲ್ಲಿ ಅಪನಂಬಿಕೆಯೂ ಅಸಮಾಧಾನವೂ ಹೆಚ್ಚುತ್ತಿದ್ದ ಕಾಲದಲ್ಲಿ, ಅಖಿಲ ಪಕ್ಷ ಸಮ್ಮೇಳನಕ್ಕೆ ವಿಶ್ವೇಶ್ವರಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸಿದುದು, ದೇಶದ ರಾಜಕೀಯ ಪರಿಸ್ಥಿತಿಯ ಮೇಲೆ ಅವರಿಗೆ ಇದ್ದ ಹಿಡಿತವನ್ನೂ ಸರ್ವ ಪಕ್ಷಗಳಿಗೂ ಅವರಲ್ಲಿ ಇದ್ದ ನಂಬಿಕೆಯನ್ನೂ ತೋರಿಸುತ್ತದೆ. ಕನ್ನಡಿಗರಿಗೆ ಈ ಗೌರವ ದೊರೆತುದು ನಮಗೆಲ್ಲ ಹೆಮ್ಮೆಯೇ. ಮದರಾಸಿನ ಸ್ವದೇಶಿ ಪ್ರದರ್ಶನದಲ್ಲಿ ಅವರು ಖಾದಿಯನ್ನು ಕುರಿತು ಹೇಳಿದ ಮಾತುಗಳು ಗೃಹಕೈಗಾರಿಕೆಗಳಿಗೆ ಹಿಂದೂ ದೇಶದಲ್ಲಿ ಎಂತಹ ಮಹತ್ವದ ಸ್ಥಾನವನ್ನು ಕೊಡಬೇಕೆಂಬುದನ್ನು ತೋರಿಸುತ್ತದೆ. ಮಹಾತ್ಮಾ ಗಾಂಧಿಯವರಂತೆ ವಿಶ್ವೇಶ್ವರಯ್ಯನವರೂ ಒಂದೇ ಕಾಲದಲ್ಲಿ ಅತ್ಯಂತ ಮಹತ್ವವಾದ ಮತ್ತು ಗಹನವಾದ ವಿಷಯವನ್ನೂ, ಅತ್ಯಂತ ಸಣ್ಣ ವಿಚಾರವನ್ನೂ ಕುರಿತು ಚರ್ಚಿಸಿ ತೀರ್ಮಾನಿಸಬಲ್ಲರು. ಅವರ ಆರ್ಥಿಕ ಯೋಜನೆಯಲ್ಲಿ ಅತ್ಯಂತ ಆಧುನಿಕವಾದ ಯಂತ್ರಗಳಿಂದ ತಯಾರಾಗುವ ಮೋಟಾರು ಆಕಾಶವಿಮಾನಗಳೂ, ಕೈಯ್ಯಿನಲ್ಲಿ ರಾಟೆಯಿಂದ ತಯಾರಿಸುವ ನೂಲಿನ ಬಟ್ಟೆಗಳೂ ಸಣ್ಣ ಸಣ್ಣ ಗೃಹಕೈಗಾರಿಕೆಗಳೂ ಒಂದೇ ಕಡೆ ಪರಸ್ಪರ ವಿರುದ್ಧಗಳಿಲ್ಲದೆ ಇರಬಲ್ಲವು. ವಿಶ್ವೇಶ್ವರಯ್ಯನವರು ಸರ್ವ ಜನಾದರಣೀಯರಾಗಲು ಅವರ ಬುದ್ಧಿಯ ಈ ವೈಶಾಲ್ಯವೇ ಕಾರಣ.

ಮೈಸೂರಿನ ಎಲ್ಲಾ ಮಂಗಳಗಳಿಗೂ ಶ್ರೀಮಾನ್ ವಿಶ್ವೇಶ್ವರಯ್ಯನವರೇ ಮೊಳಕೆಯನ್ನು ನೆಟ್ಟರೆನ್ನಬಹುದು. ಶ್ರೀ. ಹೆಚ್. ವಿ. ನಂಜುಂಡಯ್ಯನವರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದಾಗ ಕನ್ನಡವು ನಮ್ಮ ಜನರ ಜೀವನದಲ್ಲಿ ಆಕ್ರಮಿಸಬೇಕಾದ ಭಾಗ ಅವರಿಗೆ ಚೆನ್ನಾಗಿ ತಿಳಿದಿದ್ದಿರಬೇಕು. ಸರ್ಕಾರಿ ಕಛೇರಿಗಳಲ್ಲಿ, ಹೈಕೋರ್ಟಿನಲ್ಲಿ, ಅರಮನೆ ಗುರುಮನೆಗಳಲ್ಲಿ, ವಿಶ್ವವಿದ್ಯಾಲಯದಲ್ಲಿ ಕನ್ನಡವು ತಾಂಡವವಾಡುತ್ತಾ ಕನ್ನಡ ನುಡಿ ಇತರ ಯಾವ ಭಾಷೆಗಳಿಗೂ ತಲೆಬಗ್ಗಿಸದೆ ಜನರ ಬಾಳನ್ನೆಲ್ಲಾ ಸುಗಂಧಯುಕ್ತವಾಗಿ ಮಾಡುವ ದಿನದ ಬಾವೀ ಕನಸು ಕಂಡಿರಬೇಕು. ಕನ್ನಡ ವಿಶ್ವವಿದ್ಯಾಲಯವೆಂದು ಕೊಳ್ಳುವ ನಮ್ಮ ಮೈಸೂರು ವಿಶ್ವವಿದ್ಯಾಲಯದಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಬಂಗಾಳಿ ಭಾಷೆಗೂ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಹಿಂದಿಗೂ ಇರುವ ಸ್ಥಾನವಿಲ್ಲ. ಕನ್ನಡದ ಅಧ್ಯಾಪಕರಿಗೆ ಕೊಡುವ ಸಂಬಳಗಳನ್ನು ಇತರ ಅಧ್ಯಾಪಕರ ಸಂಬಳಗಳೊಂದಿಗೆ ಹೋಲಿಸಿನೋಡಿದರೆ ಇದು ಕನ್ನಡದ ವಿಶ್ವವಿದ್ಯಾಲಯವೆಂಬುದು ಒರಿಯು ಉಪಚಾರವಾದೀತು.

ಸರ್ ಎಂ. ವಿಶ್ವೇಶ್ವರಯ್ಯನವರು, ಈ ವಯಸ್ಸಿನಲ್ಲೂ ಒಳ್ಳೆಯ ಚಟುವಟಿಕೆಯುಳ್ಳವರಾಗಿದ್ದಾರೆ. ಅವರನ್ನು ನೋಡಿದವರಿಗೆ ಅವರು ಮುದುಕರಂತೆ ಕಾಣುವದಿಲ್ಲ. ಅವರು ಈಗಲೂ ತೆರೆದ ಮನಸ್ಸಿನಿಂದ ವೈಜ್ಞಾನಿಕ ಮನಸ್ಸಿನಿಂದ ಭಾರತದ ಮತ್ತು ಜಗತ್ತಿನ ಸಮಸ್ತ ಪ್ರಶ್ನೆಗಳನ್ನೂ ವ್ಯಾಸಂಗಮಾಡುತ್ತಿದ್ದಾರೆ. ಅವರು ಕಾಯಿಲೆ ಬಿದ್ದುದನ್ನು ಯಾರೂ ಕಾಣರು. ಒಂದು ದೃಷ್ಟಿಯಿಂದ ಅವರನ್ನು ಮಹಾತ್ಮಾ ಗಾಂಧಿಯವರಿಗೆ ಹೋಲಿಸಬಹುದು. ಇಬ್ಬರ ಆರೋಗ್ಯದ ಮುಖ್ಯ ಕಾರಣವೂ ಅವರ ನಿತ್ಯ ನೂತನವಾಗುಯುವ್ವನವೇ. ಯಾವ ಹೊಸ ಭಾವವೂ ಅವರಿಬ್ಬರಿಗೂ ಹೊಸದಲ್ಲ. ಯಾವ ಕ್ರಾಂತಿಯೂ ಅವರನ್ನು ಹಿಂದೆ ಬಿಟ್ಟು ಓಡಲು ಸಾಧ್ಯವಿಲ್ಲ. ಇವತ್ತಿನ ಯುವಕರ ಯಾವ ಚಳುವಳಿಯೊಂದಿಗೂ ಅವರು ಒಂದಾಗಿ ಸೇರುತ್ತಾರೆ. ಅವರಿಬ್ಬರ ಮನಸ್ಸೂ ಇನ್ನೂ ಬೆಳೆಯುತ್ತಲೇ ಇದೆ. ಆ ಮನಸ್ಸುಗಳ ಬೆಳವಣಿಗೆ ಇನ್ನೂ ನಿಂತಿಲ್ಲ. ಅದು ಬೆಳೆಯುತ್ತಿರುವ ವರೆಗೆ ಅವರು ಯುವಕರೆ. ಈ ಯೌವನದ ಮನೋಭಾವಕ್ಕೆ ಬೇಕಾದ ಒಂದು ವಿಧವಾದ ಅನಾಸಕ್ತಿ ಅವರಿಬ್ಬರಲ್ಲೂ ಇದೆ

ನಾನು ಓದುತ್ತಿರುವಾಗ ನಮ್ಮ ಉಪಾಧ್ಯಾಯರು ನೀವು ಸರಿಯಾಗಿ ಜೀವನವನ್ನು ಸವಿರಸದಲ್ಲಿ ಇಟ್ಟುಕೊಂಡಿಲ್ಲ. ಆಟವಾಡಿದರೆ ಆಟವೇ, ಪಾಠ ಓದಿದರೆ ಪಾಠವೇ, ಊಟಮಾಡಿದರೆ ಊಟವೇ. ಸರ್ ಎಂ. ವಿಶ್ವೇಶ್ವರಯ್ಯನವರ ತತ್ತ್ವವನ್ನು ಅನುಸರಿಸಿ '' ಎಂಟು ಗಂಟೆ ಕೆಲಸ, ಎಂಟುಗಂಟೆ ವಿನೋದ ವಿರಾಮ, ಎಂಟುಗಂಟೆ ನಿದ್ರೆ'' ಒಹುಶಃ ಈ ಜೀವನ ಸಾಮರಸ್ಯವೇ ಸರ್ ಎಂ. ವಿ. ಯವರ ಆರೋಗ್ಯದ ಗುಟ್ಟು ಎಂದು ಕಾಣುತ್ತದೆ. Industrialise or Perish ಎಂಬುದಾಗಿ ಹೇಳುವ ಆ ೮೧ ವರ್ಷದ ಮುದುಕ ಕೈಗಾ

ರಿಕೆಗಳ ಕಣ್ಣಾಮುಚಿಯಂತೆ ತೋರುತ್ತಾನೆ. ಅವನ ಪ್ರಚಂಡವಾದ ಬುದ್ಧಿ–ಅದೇ ಬ್ರಂಹರಾಕ್ಷಸ !

ಭಾರತವು ತನ್ನ ಗುರಿಯನ್ನು ಮುಟ್ಟುವುದನ್ನು ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ಜೀವಿತ ಕಾಲದಲ್ಲಿ ಕಾಣಲಿ. ಭಗವಂತನು ಅವರನ್ನು ಇನ್ನೂ ಬಹು ನಮ್ಮ ನಡುವೆ ಇಡಲಿ.

—ಗೊರೂರು ರಾಮಸ್ವಾಮಿ ಐಯ್ಯಂ

## ಹಕ್ಕಿಗೆ

★

೧

ಆಗ ದಿನಮುಖಲಕ್ಷ್ಮಿ ನಸುದೆರೆದ ಮೃದುಹಾಸ
ಆಕಾಶಮಂಡಲಕೆ ಹಲ್ಲವಿಸುತಿತ್ತು ;
ಶುಳುಕು-ಹೂಗಂಪಿನೊಲು ನಿನ್ನ ಸೊಲ್ಲಿನ ಸೊಂಪು
ಪೂರವಿಸಿ ನನ್ನೆದೆಯ ಭುಲ್ಲವಿಸುತಿತು ;

೨

ಹಸರಿಸಿದ ಹನಿಹಸಿರ ಮೇಲೆ ತೆರೆತೆರೆಯಾಗಿ
ತಣ್ಣೆಲರ ತನಿಸೊಬಗು ತೇಲಾಡುತಿತ್ತು ;
ನಿನ್ನ ಕೊರಲಲಿ ಬಂದ ರಸಗಾನಗಂಗೆಯಲಿ
ನನ್ನಾತ್ಮ ತಂತಾನೆ ಓಲಾಡುತಿತ್ತು.

೩

ನಿನ್ನ ಸಾನ್ನಿಧ್ಯದಲಿ ಬಾಳು ನುಣ್ಬೆಳಗಾಗಿ,
ಹೂವಾಗಿ, ಹಾಡಾಗಿ ನಲಿದಾಡುತಿತ್ತು ;
ಹುಟ್ಟಿಗೂ ಮೊದಲಾದ ಹಾಡನಾಲಿಸಿದಂತೆ
ನನ್ನ ಜೀವದ ದುಃಖ ಹೆಡೆಯಾಡುತಿತ್ತು.

೪

ನಿನ್ನ ಹರ್ಷದಲಿಂದು, ಚೆಲ್ವ ಬೆಳಗಿನ ಹಕ್ಕಿ,
ನನ್ನ ಕನಸಿನ ಬರವ ನಾ ತುಂಬಿಕೊಂಡೆ
ಇಂದು ನಿಂತಿತು ನೋವು, ಒಮ್ಮೆ ಹಿಂಗಿತು ಸಾವು
ಸಾಕು! ಬಾಳಿನಲೊಂದು ರಸನಿಮಿಷವುಂಡೆ.

—ರಾ. ವೆಂ. ಕುಲಕರ್ಣಿ.

## ವಸಂತ

★

ಮಾಗಿಯಿರುಳು ತೆರಳುವಂದು
ದೂರ ಮುಳುಗು ಚಿಕ್ಕೆಯೊಂದು
ಸಾರಿದೊಸಗೆ ತೇಲಿ ಬಂದು
ತುಳುಕಿತೋ ದಿಗಂತ—
" ಬಂದನೋ ವಸಂತ ! "

ಹಾಡು ಬರುವ ಮುನ್ನ ಹೃದಯ
ತುಂಬಿ ಬರುವ ಹಾಗೆ, ಎದೆಯ
ತೆರೆದು ಸೃಷ್ಟಿ ಕೂಗೆ " ಉದಯ
ವೆಂದಿಗೋ ವಸಂತ ? "
ಬಂದನೋ ವಸಂತ.

ಚಂದ್ರಹಾಸದಲ್ಲಿ ಮಿಂದು
ಇಂದ್ರವನದ ಗೀತೆಯೊಂದು
ನೆಲಕೆ ಬಂದ ಹಾಗೆ ಇಂದು
ಜುಮ್ಮೆನಿಸಿಯೆನಿಂತ
ವನವನೀ ವಸಂತ.

ಹೃದಯ-ಹೃದಯ ವರಳಿನಿಂತು
ಕಂಠಕಂಠದಲ್ಲಿ ಎಂತು
ದೇವವಾಣಿ ತುಂಬಿ ಬಂತು
ತಾನೆ ತಾನನಂತ !
ಗೀತಮಯ ವಸಂತ !

—ರಾ. ವೆಂ ಕುಲಕರ್ಣಿ

# ನೀರಿನ ನಾರಪ್ಪ

(೧)

ವಿಜಯಪುರ ಬೆಲ್ಹೆಯಲ್ಲಿ ಮುದ್ದಬ್ಬೆಹಳ್ಳಿ ತಾಲೂಕಿನ ಸ್ಥಳವಾದರೂ ದೊಡ್ಡ ಹಳ್ಳಿಯೇ ಸರಿ. ರೇಲ್ವೆ ಹಳಿಗಳಿಗೆ ಅದು ಹತ್ತಿಪ್ಪತ್ತು ಮೈಲು ದೂರವಾಗಿದ್ದರೆ ನಾಗರಿಕತೆಯ ಉಗಿಬಂಡಿಗೆ ನೂರು ಹರದಾರಿ ದೂರವಾಗಿದೆ. ಅಲ್ಲಿ ಕೋರ್ಟ್ ಕಚೇರಿಗಳ ಮೂಲಕ ಪದವೀಧರರಾದ ಕೆಲವು ಅಧಿಕಾರಿಗಳೂ ವಕೀಲರೂ ಉದರ ನಿರ್ವಾಹಕ್ಕೆ ವಾಸವಾಗಿದ್ದಾರೆ—ಅಜ್ಞಾನದ ಸಮುದ್ರದಲ್ಲಿ ವಿದ್ಯಾವಂತಿಕೆಯ ನಡುಗಡ್ಡೆಗಳಂತೆ. ಇತ್ತೀಚೆ ಹಲವು ವರ್ಷಗಳಿಂದ ಮೋಟರ ವಾಹನಗಳು ಮುದ್ದಬ್ಬೆಹಳ್ಳಿಗೆ ಬಂದಿದ್ದು ಸುಧಾರಣೆಯ ಕೊಂಬನ್ನು ಅದರ ಅಡ್ಡ ತಿಡ್ಡ ಬೀದಿಗಳಲ್ಲಿಯೂ ಊದುತ್ತಿವೆ. ಅವುಗಳ ಪರಿಪಾಠವಾದ ಚಹಾ ಪರಾಳದಂಗಡಿಗಳೂ ಬೀಡಿ ದುಕಾನುಗಳೂ ಬೇರೆ ಬೇರೆ ಮತದವರಿಗಾಗಿ ಹಗಲು ರಾತ್ರಿ ತೆರೆದಿದ್ದು ಬೇಡಿದ ಸೌಖ್ಯಸೌಕರ್ಯಗಳನ್ನು ಒದಗಿಸುತ್ತಿವೆ. ಅವುಗಳಲ್ಲಿ ಒಂದು ಅಂಗಡಿ ರೇಡಿಯೋ ದೇವಿಯ ಮೂರ್ತಿಯನ್ನು ಸ್ಥಾಪಿಸಿ ಊರಿಗೆ ಊರನ್ನೇ ದರ್ಶನ ಶ್ರವಣಕ್ಕಾಗಿ ಕರೆಯುತ್ತಿದೆ. ಜನರ ಜೀವನ ಮಾತ್ರ ನಿಂತ ನೀರು. ಏನಾದರೂ ಬೆಳೆವಣಿಗೆಯಾದರೆ ಆ ನಿಂತ ನೀರು ಮಲಿತರೆ ಎಂಥದು ಆಗಬೇಕೋ ಅಂಥದು. ಹೊಸ ಕಾಲದ ದುರ್ಗುಣಗಳೆಲ್ಲ ಅದರ ಸುತ್ತು ಹೊಲಸು ಹುಳಗಳಂತೆ ತಡವಿಲ್ಲದೆ ಮುಕ್ಕುತ್ತಿವೆ.

ಇಂಥ ಮುದ್ದಬ್ಬೆಹಳ್ಳಿಗೆ ವಕೀಲ ಭಗವಂತರಾಯರ ಮನೆಯ ನೀರಿನವನಾಗಿ ನಾರಪ್ಪನು ಬಂದನು. ಬಂದನು ಎಂದ ಮೇಲೆ ಮೊದಲು ಎಲ್ಲಿದ್ದನು ಏನು ಎಂದು ಕೇಳುವ ಕುತೂಹಲ ಹುಟ್ಟಬಹುದು. ನಾರಪ್ಪ ರಾಯರ ಮನೆಗೆ ಎಂದ ಸಮಾಚಾರವು ಹಾಗೆ ಕೇಳುವಂತೆ ಲೋಹಚುಂಬಕವಾಗಿಯೆ ಇದೆ. ರಾಯರು ಊರಿಗೆ ಹೆಸರಾದ ವಕೀಲರು, ಹಳ್ಳಿಹಳ್ಳಿಗೆ ಹೋಗಿ ಅವರ ಪ್ರಸಿದ್ಧಿಯು ಡಂಗುರವನ್ನು ಹೊಡೆದಿತ್ತು. ಫೌಜದಾರೀ ಖಟ್ಲೆಯಿದ್ದರಂತೂ ಆರೋಪಿಯಾದ ಪಕ್ಷದ ಕಡೆ ಭಗವಂತರಾಯರು ಇದ್ದೆ ತೀರಬೇಕು. ವಿಶೇಷವಾಗಿ ಖೂನಿ ಮಾಡಿದವರು ತನ್ನ ನಿರ್ದೋಷತೆಯನ್ನು ಸಿದ್ಧ ಮಾಡಿ ಸರಕಾರದ ದಾರುಣ ಶಿಕ್ಷೆಯಿಂದ ಪಾರಾಗಬೇಕಾದರೆ 'ತ್ವಮೇವ ಶರಣಂ ಮಮ' ಎಂದು ಭಗವಂತರಾಯರ ಮೊರೆ ಹೊಗುತ್ತಿದ್ದರು. ಅವರ ಯುಕ್ತಿವಾದ, ಮಾತುಗಾರಿಕೆ ಅಷ್ಟು ಹರಿತ, ಅಷ್ಟು ಧಾರಾಳ. ಹೀಗಿರಲು ಒಂದು ಖೂನೀ ಖಟ್ಲೆಯನ್ನು ನಡಸುವುದಕ್ಕಾಗಿ ಕೋಳೆಯೂರಿಗೆ ರಾಯರು ಹೋಗಬೇಕಾದ ಪ್ರಸಂಗವು ಬಂದಿತು. ಆ ಊರ ಗೌಡರು ರಾಯರ ಸಲುವಾಗಿ ಚಾವಡಿಯಲ್ಲಿ ಉತ್ತಮವಾದ ಸರ ಒರಾಯಿಯ ವ್ಯವಸ್ಥೆಯನ್ನು ಮಾಡಿ ಹಳ್ಳಿಯಲ್ಲಿ ದೊರೆಯುವ ಊಟ ಉಡಿಗೆಯ ಉತ್ತಮ ಪದಾರ್ಥಗಳನ್ನು ತರಿಸಿದರು. ಆದರೆ ಅಡಿಗೆ ಮಾಡುವವರು ಯಾರು? ಎಂಬ ಪ್ರಶ್ನೆ ತಲೆಯೆತ್ತಿತು. ಅಲ್ಲಿ ಹಾರುವರ ಮನೆಗಳಿಲ್ಲ, ಅಡಿಗೆಯವರಿಲ್ಲ. ರಾಯರು ನಾಲ್ಕೈದು ದಿನ ಬೇರೆ ಇರಬೇಕಾಗಿತ್ತು. ಈ ಹೊತ್ತಿಗೆ ತನ್ನ ಹಳ್ಳಿಯಿಂದ ಆಕಸ್ಮಾತ್ತಾಗಿ ನಾರಪ್ಪನು ಗೌಡರ ಭೆಟ್ಟಿಗೆಂದು ಬಂದನು. ಅವನೇನು ಅಡಿಗೆ ನೀರಿನ ಕೆಲಸ ಮಾಡಿದವನಲ್ಲ, ಆದರೆ ಎಲ್ಲ ಕೆಲಸದ ಮಾಹಿತಿ ಇದ್ದವನು. ತನ್ನ ಜೀವದ ಮಿತ್ರನಾದ ಗೌಡನ ದೆಸೆಯಿಂದ ಕೂಡಲೆ ಅವನು ರಾಯರ ಸೇವೆಗೆ ಸನ್ನದ್ಧನಾದನು. ಇದರಲ್ಲಿ ಮಾನಾಪಮಾನದ ಸಂಕೋಚವು ಅವನ ತಲೆಯಲ್ಲಿ ಸೇರಲೆ ಇಲ್ಲ. ಅವನು ಮಾಡಿದ ಪ್ರತಿಯೊಂದು ಕೆಲಸದಿಂದ ರಾಯರು ಬಹಳ ಖುಷಿಯಾದರು. ಅವನ ಸಾರಿನ ರುಚಿಯನ್ನು ಎಷ್ಟು ಹೊಗಳಿದರೂ ಅವರಿಗೆ ಸಾಲದು. ತಾವು ಮಾಮೂಲೇ ದಾರರ ಮುಂದೆ ನಿಂತು ಖಟ್ಲೆ ನಡಸುವಾಗ ನಾರಪ್ಪನ ಸಾರಿನೂಟವು ತಮಗೆ ಹುರುಪು ಕೊಟ್ಟಿತೆಂದು ತಿರುತಿರುಗಿ ಗೌಡರಿಗೆ ಹೇಳಿದರು. ಒಂದು ದಿನ ರಾತ್ರಿ ೯-೧೦ ಘಂಟೆಯವರೆಗೆ ವಿದುಳಿನ ಕೆಲಸ ಮಾಡಿ ರಾಯರು ಸೋತು ಸುಣ್ಣಾಗಿ ಬಿಡಾರಕ್ಕೆ ಬಂದರು. ಅಲ್ಲಯ ಕೆಲಸ

ಮುಗಿದದ್ದರಿಂದ ಅವರು ಮರುದಿನವೇ ಮುದ್ದಬ್ಬೆಹಳ್ಳಿಗೆ ಹೊರಡಬೇಕಾಗಿತ್ತು. ಆಗ ಚಾವಡಿಯ ಮುಂದಿನ ಕಟ್ಟೆಯ ಮೇಲೆ ಆರಾಮಕುರ್ಚಿಯಲ್ಲಿ ಕಾಲುಚಾಚಿ ಬಿದ್ದುಕೊಂಡರು. ಬೆಳದಿಂಗಳು ಎಲ್ಲ ಕಡೆ ಹಬ್ಬಿಕೊಂಡಿತ್ತು. ಆಗ ಅದೇನು ಸ್ಫೂರ್ತಿ ಬಂದಿತೊ ಏನೊ, ಕಟ್ಟೆಯ ತುದಿಗೆ ಕುಳಿತ ಗೌಡರಿಗೆ ರಾಯರು ಅಂದರು 'ಗೌಡ, ಇಂದು ಫಕ್ಕಡ ಮಸರು ಅವಲಕ್ಕಿ ಆಗಿಬಿಡಲಿ, ಒಂದು ನಾಲ್ಕೈದು ಗಡಿಗೆ ತರಿಸು.' ಗೌಡರ ಮುಖ ಹಿಗ್ಗಿತು–ವಕೀಲರಿಗೆ ಕೊನೆಯ ಸೇವೆ ಮುಟ್ಟಿಸುವ ಉತ್ತಮ ಯೋಗಬಂದಿತೆಂದು. ಆದರೆ ಮರುಕ್ಷಣವೇ ತುಸು ತಗ್ಗಿತು–ಇಷ್ಟು ರಾತ್ರಿಯಲ್ಲಿ ಬೇಡಿದ್ದು ಸಿಗುವುದೋ ಇಲ್ಲವೋ ಎಂಬ ಭಯದಿಂದ. ಅಂತೂ ವಾಲೀಕಾರರನ್ನು ಮನೆಮನೆಗೆ ಅಟ್ಟಿದರು. ಅದೆಂಥ ವಿಷಮವೇಳೆಯೊ, ಎಲ್ಲಿಯೂ ಗಡಿಗೆ–ಮೊಸರಿಲ್ಲ. ಒಂದೇ ಮನೆಯಲ್ಲಿ ಒಬ್ಬ ಖಟ್ಟ ಮುದುಕಿಯ ಹತ್ತಿರ ಎರಡು ಗಡಿಗೆಗಳಿವೆಯೆಂದು ಸಂಶೋಧನೆ ಮಾಡಿದಮೇಲೆ ತಿಳಿಯಿತು. ಗೌಡರು ತಾವೇ ಅವಳಿದ್ದಲ್ಲಿಗೆ ಹೋಗಿ ಗಡಿಗೆಗಳನ್ನು ಬೇಡಿದರು, ಅವಳು ಕೊಡಲಿಲ್ಲ. ಮರುದಿವಸ ಯಾರಿಗೋ ಪರವೂರವರಿಗೆ ಕೊಡಬೇಕು ಎಂದಳು, ಸೋಮವಾರ ದಿನ ಹೆಪ್ಪು ಮುರಿಯುವದಿಲ್ಲ ಎಂದಳು. ಮುಖ್ಯವಾಗಿ ಪುಕ್ಕಟಾಗಿ ಕೊಡಬೇಕಾದೀತೆಂಬ ಅಂಜಿಕೆ ಕಾರಣವಾಗಿರಬೇಕು. ಗೌಡರಿಗೆ ನಿರಾಶೆಯಾಯಿತು. ರಾಯರು ಖುರ್ಚಿಯ ಮೇಲೆ ದಾರಿನೋಡುತ್ತ ಒರಗಿಕೊಂಡು ಅಲ್ಲಿಯೇ ಹತ್ತಿದ ನಿದ್ದೆಯಲ್ಲಿ ಮೊಸರವಲಕ್ಕಿಯ ಸವಿಯನ್ನು ಕಂಡರೇನೊ! ಇಲ್ಲಿಯವರೆಗೆ ಸುಮ್ಮನಿದ್ದ ನಾರಪ್ಪನು 'ಏನು ಗೌಡ, ನಿನ್ನ ಕೈಲೆ ಆಗಲಿಲ್ಲ ಹೌದಲ್ಲೊ, ನಾ ತರತೀನಿ ನೋಡು' ಎಂದು ರಾಯರ ಕಾರಕೂನನಿಂದ ಎರಡು ರೂಪಾಯಿ ಇಸಗೊಂಡು ಹೋಗಿ ಅದೇ ಮುದುಕಿಯ ಹತ್ತಿರ ಹೋದನು. ಮೊದಲು ಮೊಸರಿನ ಪ್ರಸ್ತಾಪವೆತ್ತಲೇ ಇಲ್ಲ. ತಾನು ಒಬ್ಬ ಪ್ರಸಿದ್ಧ ಜೋಯಿಸನೆಂದು ಹೇಳಿ ಮಳೆಬೆಳೆಯ ಭವಿಷ್ಯ, ಮುದುಕಿಗೆ ಸಮೀಪದಲ್ಲಿ ಮೊಮ್ಮಗ ಹುಟ್ಟುವನೆಂಬ ಮುಂದುಗಾಣಿಕೆ ಈ ಮೊದಲಾದ ವಿಷಯಗಳನ್ನು ಹೇಳಿ ಅವಳನ್ನು ಒಲಿಸಿಕೊಂಡನು. ಮಾತುಮಾತಿಗೆ ಅವನು ಚುರಮುರಿಯಂತೆ ತೂರುವ ಗಾದೆಮಾತುಗಳನ್ನು ಕೇಳಿ ಅವನು ದಿವ್ಯ ಪುರುಷನೆಂದು ಅವಳು ತಿಳಿದುಕೊಂಡಳು. 'ಮುದಕಿ, ಕೈ ಕೆಸರು, ಬಾಯಿ ಮೊಸರು' ಅಂತಾರ ನೋಡು ಹಂಗ ನಿನ್ನ ಬಾಳೇವೈತಿ. 'ನಿನ್ನ ಮನ್ಯಾಗ ಮೊಸರ ಗಡಿಗಿ ಯಾರ ಮನ್ಯಾಗ ಇಲದಿದ್ದರೂ ಇರತಾವ' ನಾರಪ್ಪನೆಂದ. 'ಈಗ ಎರಡು ಅವ ಎಪ್ಪ' ಎಂದಳು ಮುದುಕಿ. 'ಕೊಟ್ಟು ಬಿಡು ಹಂಗಾರ, ತಗೊ ರೂಪಾಯಿ' ಎಂದು ನಾರಪ್ಪ ಟೊಂಕದಿಂದ ರೂಪಾಯಿ ತೆಗೆದು ಝಣಝಣಿಸಿದನು. ಮುದುಕಿಯ ಬಾಯಿ ನೀರುಬಿಟ್ಟಿತು. ಆದರೂ 'ಎಪ್ಪ, ಇಂದ ಸೋಮವಾರ ಅಯ್ತಿ' ಎಂದಳು. ಕೂಡಲೆ ನಾರಪ್ಪನು ಅವಳನ್ನು ಮನೆಯ ಹೊರಗೆ ಕರೆದು ಚಂದಪ್ಪನನ್ನು ತೋರಿಸಿ 'ಅಕಾ ನೋಡು ಸೋಮವಾರ ಹೋಗಿ ಮಂಗಳಾರ ಬಂತು. ಹನ್ನೆರಡು ಬಡದು ಹೋತು. ನಾ ಜೋಯಿಸ ಹೇಳತೀನಿ ಕೇಳು ಮುದಕಿ' ಎಂದು ಮುಂತಾಗಿ ಹೇಳಿ, ಹೇಗೊ ಮನವೊಲಿಸಿ ನಾರಪ್ಪನು ಅವಳಿಂದ ಎರಡೂ ಮೊಸರು–ಗಡಿಗೆಗಳನ್ನು ದೊರಕಿಸಿ ಎರಡೂ ಹೆಗಲಮೇಲೆ ಹೊತ್ತು, ರಾಮಲಕ್ಷ್ಮಣರನ್ನು ಹೊತ್ತುತಂದ ಮಾರುತಿಯ ಆಢ್ಯತೆಯಿಂದ ಚಾವಡಿಗೆ ಬಂದನು. ಅದೇ ನಿದ್ದೆ ತಿಳಿದು ಕುಳಿತ ರಾಯರಿಗೂ ಹಾದೀ ನೋಡುತ್ತಲಿದ್ದ ಗೌಡರಿಗೂ ಬಹಳ ಆಶ್ಚರ್ಯವಾಯಿತು. ಮುಂದೆ ಮೊಸರವಲಕ್ಕಿಯ ಕಾರ್ಯಕ್ರಮವು ನಿಜವಾಗಿಯೂ 'ಫಕ್ಕಡ' ಆಯಿತೆಂದು ವಿಸ್ತರಿಸಿ ಹೇಳಬೇಕಾಗಿಲ್ಲ. ರಾಯರು ಮರುದಿನ ಬೆಳಿಗ್ಗೆ ಹೊರಡುವಾಗ 'ನಾರಪ್ಪ, ನಮ್ಮೂರಿಗೆ ಬಂದು ನಮ್ಮ ಮನೆಯಲ್ಲೇ ಇದ್ದು ಬಿಡು' ಎಂದರು. ಅದೇಕೊ ನಾರಪ್ಪನಿಗೂ ತನ್ನ ಹಳ್ಳಿ ಬಹಳ ಬೇಡಾಗಿತ್ತು, ರಾಯರಿಂದ ತನ್ನದೊಂದು ಕೆಲಸ ಆದೀತೆಂಬ ಆಸೆ ಬೇರೆ ಹುಟ್ಟಿತು. ಅಂತೇ 'ಒಳ್ಳೇದು ರಾಯರ' ಎಂದು ಕೂಡಲೆ ಒಪ್ಪಿಕೊಂಡು ಕೆಲವು ದಿನಗಳ ಮೇಲೆ ಮುದ್ದಬ್ಬೆಹಳ್ಳಿಗೆ ಬಂದು ನೆಲಸಿದನು.

(೨)

ನಾರಪ್ಪನ ಒರವಿನಿಂದ ಭಗವಂತರಾಯರಿಗೆ ಎಷ್ಟೋ ವಿಷಯದಲ್ಲಿ ನಿಶ್ಚಿಂತೆಯಾಯಿತು. ಮುದ್ದಬ್ಬೆಹಳ್ಳಿ ನೀರಿನ ಭವಣಿಗೆ ಹೆಸರಾದ ಊರು. ಊರ ಬಾವಿಗಳೆಲ್ಲ ಹೆಚ್ಚಾಗಿ ಊರ ತುದಿಗೆ ಇರುವುದರಿಂದ ಅನೇಕ ಜನ ಮನೆಯಿಂದ ತಿರುಪತಿ ಯಾತ್ರೆಮಾಡಿದಂತೆ ದೂರದ ಬಾವಿಗಳಿಗೆ ಹೋಗಿ ನೀರು ಜಗ್ಗಿ ಕೊಡತುಂಬಿ ತರಬೇಕು. ಮಳೆ ಸಾಕಷ್ಟು ಆಗಿ ಕೆರೆ ತುಂಬಿದ್ದರೆ ಬಾವಿಗಳೂ ತುಂಬಿರುವವು. ಅದೆ ಮಳೆಯೆ ತಿಟಿಪಿಟಿಯಾಗಿದ್ದರೆ ಆಯಿತು, ಬಾವಿಯಲ್ಲಿ ನೀರಿನ ಬದಲು ಕಪ್ಪೆಗಳನ್ನೊ ಏಡಿಗಳನ್ನೊ

ಕಾಣಬೇಕಾದ ಪ್ರಸಂಗ. ಬಹಳ ಹಿಂದೆ ಅಲ್ಲಿ ಮಲೆ ನಾಡಿನಂತೆ ನೀರಿನ ಸಮೃದ್ಧಿ ಇದ್ದಿತೆಂದು ಹಳಬರು ಹೇಳುತ್ತಾರೆ. ಬಹುಶಃ ಹೊಸಬರ ಕಾಲದಲ್ಲಿ ಮುದ್ದಬ್ಬೆ ಹಳ್ಳಿಯಿಂದ ಆ ನೀರು ಮಾಯವಾಗಿದೆ ಎಂದು ತೋರುತ್ತದೆ. ಅಂತೂ ವಕೀಲರೇನು ಅವರ ಕಾರಕೂನರೇನು ಎಲ್ಲ ಮನೆಯ ಹೆಂಗಳೆಯರು ಮೂರೂ ಹೊತ್ತು ಬಾವಿಗಳಿಗೆ ಓಡಾಡುವ ನೋಟ ಅಲ್ಲಿ ಬಹಳ ಸಾಮಾನ್ಯವಾದದ್ದು. ಭಗವಂತರಾಯರು ತಮ್ಮ ಗಳಿಕೆ ಹೆಚ್ಚುತ್ತ ಹೋದಂತೆ ನೀರಿನವನಿಂದ ನೀರು ಹಾಕಿಸಿಕೊಳ್ಳುತ್ತಿದ್ದರು, ಆದರೂ ಮನೆಯ ಹೆಂಗಸರ ಶ್ರಮಕ್ಕೆ ಬಿಡುವಿರಲಿಲ್ಲ. ನಾರಪ್ಪ ಬಂದ ತೊಟ್ಟು ಅವನು ಯಾರಿಗೂ ಹೋಗಗೊಡದೆ ತಾನೇ ಎಲ್ಲ ನೀರನ್ನು ಹೊರುತ್ತಿದ್ದನು. ಮೇಲಾಗಿ ರಾಯರಿಗೆ ಒಂದೆರಡು ವರುಷಗಳಹಿಂದೆ ಎರಡನೆಯ ಮದುವೆಯಾಗಿದೆ, ಮೋಹದ ಹೆಂಡತಿಯನ್ನು ಈ ನೀರಿನ ಶಿಕ್ಷೆಗೆ ಗುರಿಮಾಡುವುದು ಅವರಿಗೆ ಬೇಡಾಗಿತ್ತು. ರಾಯರ ಅಕ್ಕ ವಿಧವೆಯಾಗಿದ್ದು ಅವರ ಹತ್ತಿರವೇ ಬಹು ಕಾಲದಿಂದ ಇದ್ದರು. ಅವರು ಹೊಸ ಸೊಸೆಯ ನೆರವಿನಿಂದ ಅಡಿಗೆ ಊಟದ ಮನೆಗೆಲಸವನ್ನು ನೋಡಿಕೊಳ್ಳುತ್ತಿದ್ದರು. ಆದರಿಂದ ನಾರಪ್ಪನು ಬರೀ ನೀರಿನ ನಾರಪ್ಪನಾದನು. ರಾಯರ ಮೊದಲಿನ ಸಂಬಂಧದಿಂದ ಹುಟ್ಟಿದ ಎರಡು ಹುಡುಗರು ಇವೆ–ಒಂದು ಗಂಡು ನಾಲ್ಕು ವರುಷದ್ದು, ಹೆಣ್ಣು ಎರಡು ವರುಷದ್ದು. ಅವರನ್ನು ಆಡಿಸುವುದಕ್ಕೆಂದೆ ತಿಂಗಳ ಸಂಬಳವನ್ನು ಗೊತ್ತು ಮಾಡಿ ಒಬ್ಬ ಆಳುಮನುಷ್ಯನನ್ನು ರಾಯರು ಇಟ್ಟಿದ್ದರು. ಎರಡನೆಯ ಸಂಬಂಧಕ್ಕೆ ಅವುಗಳ ವಿಷಯವಾಗಿ ನಿಜವಾದ ಅಕ್ಕರತೆ ಹುಟ್ಟಲಾರದೆಂದು ಅವರಿಗೆ ತಿಳಿದಿತ್ತು. ಆದರೆ ಕೂಳಿನ ಆಳಾದ ಆಳುಮನುಷ್ಯನಿಗೆ ಮಾತ್ರ ಅಕ್ಕರತೆ ಹುಟ್ಟಬಹುದೆಂದು ಅವರು ಅದು ಹೇಗೊ ತಿಳಿದರು. ಬರಬರುತ್ತ ಅದು ಅಸಾಧ್ಯ ಎಂದು ಗೊತ್ತಾಯಿತು. ತನ್ನ ಸಂಬಳದ ಸಲುವಾಗಿ ಎಷ್ಟು ಮಾಡಬೇಕೊ ಅಷ್ಟು ದಿನಗೆಲಸವನ್ನು ಆತ ಮಾಡುತ್ತಿದ್ದ. ಅದೇ ನಾರಪ್ಪ ಮನೆಗೆ ಬಂದ ಮೇಲೆ ಒಮ್ಮೆಲೆ ವಾತಾವರಣವು ಪ್ರಫುಲ್ಲವಾಯಿತು. ಮನೆ ಮಕ್ಕಳು ಒಂದು ತಿಂಗಳಲ್ಲಿ ಅವನಿಗೆ ಈಲಾದವು, ಅವನನ್ನು ಬಿಟ್ಟಿರಲಿಲ್ಲ. ನೀರಿನ ಕೆಲಸ ತೀರಿದ ಕೂಡಲೆ ನಾರಪ್ಪನು ಹುಡುಗರ ಕೂಡ ಆಟ ನೋಟ, ಮಾತುಕತೆ ಇದರಲ್ಲಿ ಹೊತ್ತು ಕಳೆಯುತ್ತಿದ್ದನು. ಅವನ ನಗೆಮಾತು, ಸವಿಗತೆ ಇವನ್ನು ಕೇಳಬೇಕೆಂದು ಎಲ್ಲರಿಗೂ ಲವಲವಿಕೆ. ಹೆದಹೆದರುತ್ತ ಮಲಮುಕ್ಕಳ ಮನೆಯಲ್ಲಿ ಕಾಲಿಟ್ಟ ರಾಯರ ಎರಡನೆಯ ಹೆಂಡತಿ ಸುಶೀಲಾಬಾಯಿಯವರು ನಾರಪ್ಪನ ರೀತಿನಡತೆಯಿಂದ ಸಂತುಷ್ಟರಾದರು, ಅವನ ನಗೆಚಾಟಿಕೆಯಿಂದ ಜೀವವನ್ನು ಹಗುರುಮಾಡಿದರು. ಹೀಗೆ ನಾರಪ್ಪನು ಎಲ್ಲರಿಗೆ ಬೇಕಾದನು. ಮೇಲಿಂದ ನೋಡುವವರಿಗೆ ಆತ ಬಲುಸುಖಿಯಾದ ಪ್ರಾಣಿ, ಒಳ್ಳೆಯ ನಗೆಗಾರ. ಅವನ ಜೀವವನ್ನು ಕುಟುಕುತ್ತಿದ್ದ ಸಾವಿರ ಜೇಳುಗಳನ್ನು ಅವನ ಹೊರತು ಇನ್ನಾರೂ ಅರಿಯರು. ಅವನ ನಿತ್ಯಕ್ರಮದಲ್ಲಿಯ ಕೆಲವು ಅಂಶಗಳಿಂದ ಮನೆಯವರಿಗೆ ಆಶ್ಚರ್ಯವಾಗುತ್ತಿತ್ತು ಮಾತ್ರ. ಬೆಳಗಿನಲ್ಲಿ ಎದ್ದೊಡನೆ ಮುಖತೊಳೆದು ಹಿತ್ತಲದ ತುಳಸೀ ಕಟ್ಟೆಯ ಸುತ್ತು ಪ್ರದಕ್ಷಿಣೆ ಹಾಕಿ ಏನೇನೋ ತನ್ನ ಮಂತ್ರವನ್ನು ಜಿನುಗುತ್ತಿದ್ದನು. ವೃಂದಾವನದ ಮುಂದೆ ತಾನೇ ತಂದು ಸ್ಥಾಪಿಸಿದ ಬಾಲಮಾರುತಿಯ ಮುಂದೆ ಕುಳಿತು ಕೈಮುಗಿದು ಗಲ್ಲಬಡಿದುಕೊಂಡು ಸಾಷ್ಟಾಂಗ ನಮಸ್ಕಾರ ಹಾಕುತ್ತಿದ್ದನು. ಹಲವಾರು ಸಾರೆ ಉಶ್ ಉಶ್ಶೆನ್ನುತ್ತಿದ್ದನು. ಚಹಾಪಾನದ ತರುವಾಯ ತನ ಕೋಣೆಯಲ್ಲಿ ಜುಟ್ಟ ಸೇದಿ ಮೈಲಿಗೆ ನೀರುಹೊರಲು ತಯಾರಾಗುತ್ತಿದ್ದನು. ನೋಡಿದರೆ ಅವನ ಮೈ ಬಡಕಲಾದುದು, ಆದರೆ ಬಿದಿರಿನಂತೆ ಅದಕ್ಕೆ ಬಿಗಿಯಿದೆ, ನುಣಿತವಿದೆ. ನೀರಿನ ಎರಡು ಕೊಡಗಳನ್ನು ಹೊತ್ತುಕೊಂಡು ಅವನು ಕುಣಿಯುತ್ತ ಬಾವಿಯಿಂದ ಬರುತ್ತಿದ್ದರೆ ಅದೊಂದು ನೋಡತಕ್ಕ ನೋಟ. ಮೈಯ ಬಣ್ಣ ಸಾದ ಕಪ್ಪು. ಅದರಲ್ಲಿ ಮುಖವು ಇನ್ನಿಷ್ಟು ಕಪ್ಪಾಗಿದೆ—ಬಯಲುಸೀಮೆಯ ಬಿಸಿಲಿನಿಂದ. ಅದರಲ್ಲಿಯೂ ವಿಪರೀತ ಚುಟ್ಟಗಳನ್ನು ಸೇದಿ ತುಟಿಗಳೂ ಕಪ್ಪಾಗಿವೆ. ಅವನು ಮಾತುಮಾತಿಗೆ ನಕ್ಕು ನಗಿಸಿದಾಗ ತೋರುವ ಹಲ್ಲುಸಾಲು ಮಾತ್ರ ಅವನ ಶುಭ್ರಕೀರ್ತಿಯೆನ್ನಬಹುದು. ಮುಂದೆ ಧಾಬಳಿಯನ್ನುಟ್ಟು ಅವನು ಮಡಿ ನೀರನ್ನು ಒಂದೆರಡು ಸರತಿಯಲ್ಲಿ ಮುಗಿಸುತ್ತಿದ್ದನು. ಹನ್ನೊಂದು ಹನ್ನೆರಡು ಗಂಟೆಗೆ ಇದೆಲ್ಲ ಕೆಲಸ ಮುಗಿಯಲು ಬಾವಿಯ ಮೇಲೆ ತಣ್ಣೀರ ಜಳಕವನ್ನು ಮಾಡಿ ನಾರಪ್ಪ ಒದ್ದೆ ಪಂಜೆಯಲ್ಲಿಯೆ ಊರ ಮುಂದಿನ ಹಣಮಪ್ಪನ ಗುಡಿಗೆ ಹೋಗಿ ಮಡಿಯಿಂದ ತಾನು ಒಯ್ದ ಕೊಡದ ನೀರಿನಿಂದ ಅವನ ಅಭಿಷೇಕಮಾಡಿ ನಮಸ್ಕಾರ ಪ್ರದಕ್ಷಿಣೆ ಹಾಕಿ ತುಂಬ ಬಿಸಿಲಲ್ಲಿ ಮನೆ ಸೇರುತ್ತಿದ್ದನು. ಅಷ್ಟೊತ್ತಿಗೆ ರಾಯರು ಊಟಮಾಡಿ ಕಚೇರಿಗೆ ಹೊಳ್ಳಿ

ರುತ್ತಿದ್ದರು. ದಿನಾಲು ಅವನು ಉಣ್ಣುವುದು ಮನೆಯ ಹೆಂಗಸರೊಡನೆ ಆರಿದ ಊಟವನ್ನು. ಅವನ ಬಗ್ಗೆ ನಿಜವಾದ ಮಮತೆಯಿಂದ ರಾಯರು ಬೇಕಾದಷ್ಟು ಹೇಳಿ ನೋಡಿದರು. ಆಹ್ನಿಕವನ್ನು ಬೇಗ ತೀರಿಸಿ ತಮ್ಮೊಂದಿಗೆ ಬಿಸಿ ಊಟವನ್ನು ಮಾಡಲೇಬೇಕೆಂದು ಗದ್ದರಿಸಿದರು. ಅದು ಯಾವುದೂ ಬಗೆಹರಿಯಲಿಲ್ಲ. ಅವನದು ಉಕ್ಕಿನ ಎದೆ, ಅಸಿಧಾರಾವ್ರತ. ಒಂದು ದಿನ ಹನುಮಪ್ಪನ ಗುಡಿಯಿಂದ ಬರಿಗಾಲಿನಲ್ಲಿ ನಡೆದುಬಂದು ಬಾಯಾರಿ, ನಾರಪ್ಪ ಉಸ್ಸೆಂದು ಗೋಡೆಗೆ ಆತು ಕುಳಿತನು. ಸುಶೀಲಾ ಬಾಯರು ಅದನ್ನುನೋಡಿ ಮರುಗಿದರು. ಅರ್ಧ ನಗೆಚಾಟಿಕೆ, ಅರ್ಧ ಮರುಕದಿಂದ ಕೇಳಿದರು 'ಅಲ್ಲ, ನಾರಪ್ಪ. ಬಿಟ್ಟೂ ಬಿಡದೆ ದಿನಾ ಹೋಗಿ ಹಣಮಪ್ಪಗ ನೀರು ಸುರವಿ ಬರತಿ. ಅವ ಏನು ಕೊಟ್ಟಂಗಾತು ನಿನಗ?' ನಾರಪ್ಪ ನಗೆಯ ಆವೇಶದಲ್ಲಿ ಮೊಗವರಳಿಸಿ ಕೂಡಲೆ ಉತ್ತರವಿತ್ತ: 'ನೀವಂಬೂದು ಸುಳ್ಳಲ್ಲ, ಬಾಯರ. ಮಾರಾಯ ಹಣಮಪ್ಪನ ತಲೀಮ್ಯಾಲ ನೀರ ಹಾಕಿ ದಿನಾ ತೊಳದs ತೊಳೀತೀನಿ. ಅವ ಏನೂ ಒಲೀವೊಲ್ಲ. ಮತ್ತೇನದ? ಅವ ಒಂದು ಕಲ್ಲು, ನಾ ಒಂದು ಕಲ್ಲು! ಹಿಂಗs ನೋಡಿರಿ. ಹಣೇಬರದಾಗ ಇದ್ದದ್ದು ಹೆಂಗ ಬಿಟ್ಟೀತು? ದಾಸರು ಹೇಳಿಲ್ಲs, ಊರ ಬಿಟ್ಟು ಬ್ಯಾರೂರಿಗೆ ಹೋದರ ಪ್ರಾರಬ್ಧವು ತಪ್ಸೀತೆ, ಬೆಟ್ಟದ ನವಿಲದು ಕಣ್ಣೀರಿಟ್ಟರ ಬ್ಯಾಟಿಗಾರನಿಗೆ ದಯ ಪುಟ್ಟೀತೆ, ಎಂದು.' ಸುಶೀಲಾಬಾಯರು 'ಖರೇ ಮಾತು' ಎನ್ನುತ್ತ ಹೊಟ್ಟೆ ತುಂಬ ನಕ್ಕರು.

ನಾರಪ್ಪ ಮಧ್ಯಾಹ್ನದ ಊಟವಾದ ಮೇಲೆ ಸುಮಾರು ಒಂದು ತಾಸು ಅಡ್ಡಾಗಿ ಏಳುತ್ತಿದ್ದನು. ಅಲ್ಲಿಂದ ಮುಖತೊಳೆದು ತನ್ನ ಹತ್ತಿರ ಇದ್ದ ಹಳೆಯ ಕಾಗದಪತ್ರ, ಹಾಡಿನ ಪುಸ್ತಕ ಮುಂತಾದುವಿದ್ದ ಗಂಟನ್ನು ಉಚ್ಚಿ ಏನೇನೊ ಓದುತ್ತ ಕೂಡುತ್ತಿದ್ದನು. ಅವನ ಹಿರಿಯರು ಮಾಡಿದ ದೊಡ್ಡ ಆಸ್ತಿಯನ್ನು ಅವನ ಅಣ್ಣ-ತಮ್ಮಂದಿರು ತಮ್ಮ ದುಂದುಗಾರಿಕೆಯಿಂದ ಕಳೆದುಕೊಂಡು ಬಿಟ್ಟಿದ್ದರು. ಅದರಲ್ಲಿ ಒತ್ತೆಯಾಗಿದ್ದ ಒಂದೆರಡು ಒಳ್ಳೆಯ ಹೊಲಗಳು ತಿರುಗಿ ಅವನಿಗೆ ಬರುವಂತೆ ಇದ್ದವು. ಅದರ ಸಮಾಚಾರವನ್ನೆಲ್ಲ ಭಗವಂತರಾಯರಿಗೆ ಅವನು ತಿಳಿಸಿ ತನಗೆ ಅವನ್ನು ದೊರಕಿಸಿಕೊಡಬೇಕೆಂದು ಆಲ್ವರಿದು ಹೇಳಿದ್ದನು. ರಾಯರು ಆಗಲಿ ನೋಡೋಣ ಎಂದಿದ್ದರು. ರಾಯರ ಸೇವೆಯಿಂದ ಇದಿಷ್ಟು ಫಲ ದೊರೆತರೆ ಎಷ್ಟೋ ತನ್ನ ಪುಣ್ಯ ಎಂದು ನಂಬಿಕೊಂಡು ಇದ್ದನು. ಇ
ಹೊತ್ತಾದಂತೆ ಕೋರ್ಟಿನಿಂದ ಮರಳಿದ ಪಕ್ಷಗಾರರಾಗ
ನಾರಪ್ಪನ ಮಾತಿನ ಖ್ಯಾತಿಯನ್ನು ಕೇಳಿದ ಊರ ಜ
ಆಗಲಿ ಬಂದು ರಾಯರ ಕಟ್ಟೆಯಮೇಲೆ ಕಲೆಯುತ್ತಿದ್ದರ
ನಾರಪ್ಪ ಚಹ ತಗೊಂಡು ಬಂದು ಕುಳಿತು ಹುಡುಗರನ
ಆಡಿಸುತ್ತ ಹರಟೆ ಹಚ್ಚಿದನೆಂದರೆ ವಿಶ್ವಕೋಶವೇ ಅದರಲ್
ಅಡಕವಾಗುತ್ತಿತ್ತು. ಕತೆಯಮೇಲೆ ಕತೆ, ಗಾದೆಯ
ಮೇಲೆ ಗಾದೆ ಇವುಗಳ ಸುರಿಮಳೆಯೆಂದರೆ ನಾರಪ್ಪ ಎ
ಬಹುದು. ಅವನೇನು ಹಳ್ಳಿಯ ಗಾವಠಿ ಸಾಲೆಯಲ್
ಮೂರುನಾಲ್ಕು ಇಯತ್ತೆ ಕಲಿತಿದ್ದನೋ ಇಲ್ಲವೋ
ಕನ್ನಡ ಮಾತಿನ ಪ್ರಾಚೀನ ಪರಂಪರೆಯ ಚಿನ್ನ
ಕಣಿಯು ಹಸ್ತಗತವಾದಂತೆ ಸೂರೆಮಾಡುತ್ತಿದ್ದನು
ಅವನು ಸಮಾಧಾನ ಹೇಳುವ ರೀತಿ, ನಗಿಸುವ ಬ
ಚಮತ್ಕಾರವಾಗಿದ್ದವು. ದುಃಖ-ನಿರಾಶೆ-ಜುಗುಪ್ಸೆ
ಇವನ್ನು ಅತ್ಯಂತವಾಗಿ ಕಂಡುಂಡು ಅವನ್ನು ನಗೆಯ
ಲೇಪದಿಂದ ಹಗುರುಗೊಳಿಸುವ ಕಲೆ ಅವನಲ್ಲಿತ್ತು.
ಅದೇನು ವೇದಾಂತದ ದೊಡ್ಡ ತಿಳಿವಲ್ಲ. ಆದರೆ ವಿಧಿಯ
ಅಣಕಾಟದಿಂದ ಹುಟ್ಟಿದ ಪ್ರತಿ ಅಣಕ ಎನ್ನುವಂಥ
ಒಂದು ಬಗೆ.

ಇಂಥ ಪ್ರಸಂಗಗಳಲ್ಲಿ ತರತರದ ಜನ ಅವನ ಸುತ್ತು ನೆರೆದು ಪ್ರಶ್ನೆ ಕೇಳುತ್ತಿದ್ದರು. ನಿಂಗಪ್ಪ ಎಂಬ ಒಬ್ಬ ರೈತ ಕೋರ್ಟಕಚೇರಿಗೆ ಓಡಾಡಿ ಹೊಲಮನೆ ಹಾಳಾಗಿದ್ದರೂ ಖಟ್ಲೆಯ ಚಟವೇನು ಅವನನ್ನು ಬಿಟ್ಟಿರಲಿಲ್ಲ. ಅವನದೆಲ್ಲ ಇತಿಹಾಸ ನಾರಪ್ಪನಿಗೆ ಗೊತ್ತು. ಅವನ ಹತ್ತಿರ ಕುಳಿತು ಹರಟುತ್ತ ಒಮ್ಮೆ ನಿಂಗಪ್ಪ ಕೇಳಿದ 'ಏನು ನಾರಪ್ಪನವರ, ಮತ್ತ ನನ್ನ ಭಾಗ್ಯೇವು ಎಂದ ತೆರೀತೈತಿ?' ನಾರಪ್ಪ ನಗುತ್ತ ಹೇಳಿದ 'ಎಂದ ತೆರೀತೈತಿ ಹೇಳಲ್ಯಾ ನಿಂಗಪ್ಪ. ಈ ಸೂರ್ಯಾ ಪಚ್ಚಿಮಕ್ಕ ಹುಟ್ಟಿ ಪೂರ್ವಕ್ಕ ಮುಳುಗಬೇಕು, ನಿಮ್ಮೂರ ಮುಂದಿನ ಗೆಂಗಿ ಹೊಳಿ ತಿರುವ ಮುರವ ಹರಿಬೇಕು, ಅಂದ ನಿನ್ನ ಭಾಗ್ಯ ತೆರೀತದ. ಹುಚ್ಚ, ಬ್ರಹ್ಮ ಕೊರೆದ ಗೆರಿ ಇದು ಹಣಿಮ್ಯಾಲಿಂದು, ಮುಂಬೈ ಹಾಯಕೋರ್ಟ ಜಡಜಿಗೆ ಸಹಿತ ಅದನ್ನ ಅಳಸಾಕ ಬರೋದುಲ್ಲ. ಕುಂತೀ ಮಕ್ಕಳ ಕತಿ ಕೇಳಿ ಇಲ್ಲೊ, ಹಂಗs ನೋಡು. ಅಂತೂ ಇಂತೂ ಕುಂತೀಮಕ್ಕಳಿಗೆ ವನವಾಸ ಅಂಬೂ ಪೈಕಿ ನಾವು ನೀವು. ಯಾರದೇನು ಅದ ಈ ಭೂಮಿಮ್ಯಾಗ, ನಿಂಗಪ್ಪ. ಗೇಣಾಗಿ ಬಳ್ಳೂದು, ಮಾರು ದ್ದಾಗಿ

ಹೋಗೂದು—ಮಣ್ಣಪಾಲಾಗಿ.'' ನಿಂಗಪ್ಪನು ಮಾತಿಗೆ ಬೆರಗುಬಟ್ಟು ಬಾಯಿ ತೆರೆದನು. ಆದರೂ ತನ್ನ ಆಶಾವಾದವನ್ನು ಆಡಿ ತೋರಿಸದೆ ಬಿಡಲಿಲ್ಲ 'ಮತ್ತ, ನಾರಪ್ಪನವರ, ನಮ್ಮೂರ ಜೋಯಿಸ ಒಳ್ಳೆ ಮನಗಂಡ ಆಸಾಮಿ. ಅವ ಸೈತ ಹೇಳಿದ, ನಮ್ಮು ಹೊಲಪಲ ಈ ಬರೋ ಉಗಾದಿ ಅಮಾಸಿಗೆ ಬಿಟ್ಟು ಬರತಾವಂತ. ಅಮ್ಯಾಗರ ನಮ್ಮ ಹೊಲದ ಬೆಳಸಿ ತಿನ್ನಾಕ ನೀವು ಬರಾಕಬೇಕು? ನಾರಪ್ಪನಿಗೆ ವಿಚಿತ್ರ ನಗೆ ಉಕ್ಕಿ ಬಂತು, ಆದರೂ ತಡೆದು ಕೊಂಡು ಹೇಳಿದ 'ಆಗಲೆಪ. ಇಂತಾ ಹೊಲದ ಬೆಳಸಿ ತಿಂದು ತಿಂದು ಈ ಗತಿ ಆಗೇದ ನನ್ನದು. ಅದೇನೋ ಅಂತಾರಲ್ಲ, ಕನಸಿನ ಭತ್ತಕ್ಕ ಗೋಣೇ ಜೀಲ ಹೊತ ಕೊಂಡು ಹೋದರಂತ. ಆ ಪೈಕಿ ಕಾಣತೀ ನೀ. ಸುಮ್ಮನ ಕೋರ್ಟಿಗೆ ಸಾಷ್ಟಾಂಗನಮಸ್ಕಾರ ಹಾಕಿ ತೀರ್ಥಯಾತ್ರೆಹೊರಡು. ಶ್ರೀಶೈಲಕ್ಕಹೋಗಿ ಬಾ, ಉಳವಿ ಬಸಪ್ಪಗ ಬಾಗಿ ಬಾ' ಹೀಗೆ ನಾರಪ್ಪನ ಹಾಸ್ಯಮಿಶ್ರಿತವಾದ ಉಪದೇಶ ಝರಿಯು ಹರಿದೇ ಹರಿಯಿತು. ನಿಂಗಪ್ಪನು ಬಾಯಿ ತೆರೆದುಕೊಂಡು ಕೇಳುತ್ತಲೆ ಇದ್ದನು.

ನಾರಪ್ಪನಿಗೆ ತುಸುಮಟ್ಟಿಗೆ ಗಿಡಮೂಲಿಕೆಗಳ ಜ್ಞಾನವಿತ್ತು. ತನ್ನ ಸ್ವಂತದ ಕಿರುಕುಳ ಬೇನೆಗಳಿಗೆ ಅವನು ತನ್ನ ಔಷಧವನ್ನೇ ತಗೊಳ್ಳುತ್ತಿದ್ದನು. ಹೀಗಾಗಿ ಅವನು ಕಟ್ಟೆಯಲ್ಲಿ ಕುಳಿತಾಗ ನಾರುಬೇನೆಯಿಂದ ಬಳಲುವವರು, ಹೊಟ್ಟೆಕಡಿತದಿಂದ ನರಳುವವರು—ಹೀಗೆ ಹಲವು ಬಗೆಯ ಬಂಧುಗಳು ಅವನ ಮೋಫತ್ ದವಾಖಾನೆಗೆ ಬರುದು ಪುಕ್ಕಟೆ ಔಷಧಿಯನ್ನು ಕೇಳಿಕೊಂಡು ಹೋಗುತ್ತಿದ್ದರು. ಔಷಧಿಯನ್ನು ಸೂಚಿಸುತ್ತ ಅವನು ಹೇಳುವ ಕತೆ, ಆಡುವ ನಗೆ ಮಾತು ಇದರಿಂದ ಆ ರೋಗಿಗಳಿಗೆ ಹೆಚ್ಚು ಆರೋಗ್ಯ ಉಂಟಾಗುತ್ತಿತ್ತೆಂದು ತೋರುತ್ತದೆ. ಒಮ್ಮೆ ಒಬ್ಬ ಇಪ್ಪತ್ತು ವರುಷದ ಹರೆಯದ ಹುಡುಗ ಜೋಳು ಕಡಿಸಿಕೊಂಡು ಕೈಜಾಡಿಸುತ್ತ ನಾರಪ್ಪನ ಕಟ್ಟೆಗೆ ಬಂದನು. ಅವನ ಅಳುವಿನ ಅರ್ಭಾಟವನ್ನು ಕಂಡು ನಾರಪ್ಪನಿಗೆ ಹಿಡಿಸಲಾರದ ನಗೆ ಬಂದಿತು. ಅವನ ಕೈಹಿಡಿದು ಮುಂತ್ರಹಾಕಿ ಮಗ್ಗಲಿಗೆ ಧೂ ಎಂದು ಉಗುಳಿ, ತಿಳಿಯದಂತೆ ಜೋರಾಗಿ ಚಿವುಟಿ 'ಕಡಿಮಿ ಆತ?' ಎಂದು ಕೇಳಿದನು. 'ಏ' ಎಪ್ಪ, ಭಗ್ಗಂತ ಉರಿ ಹತ್ತಿದಂಗಾತು, ಏರಾಕಹತ್ತು' ಎಂದು ಒದರ ಹತ್ತಿದನು. 'ಉರೀ ಹತ್ತಿತ? ಧೂ ನಿನ್ನ ಹರೇಕ್ಕ ಉರಿ ಹಚ್ಚಲಿ. ಮೈ ಅಂದರ ಜಾಲೀ ಕೊಡ್ಡಾಗೇದ, ಒಂದು ಈಟು ಜೋಳು ಕಡಿದರ ಸಿಡಿಲುಬಡದಂಗ ಗಾಬರಿಗೀ. ನಾಳೆ ಸಂಸಾರ ಏನು ಮಾಡತೀಯೊ ಮುಳ್ಳ?' ನುತ್ತು ಮುತ್ತಿನ ಜನ ಖೊಕ್ಕೆಂದು ನಕ್ಕರು, ಜೋಳು ಕಡಿದ ಹರೆಯದ ಬಂಟನೂ ನಗಬೇಕಾಯಿತು; ನಾರಪ್ಪನ ಮಾತಿನ ಮಂತ್ರದಿಂದ ಬರಬರುತ್ತ ಜೋಳಿನ ನೋವು ಇಳಿಯುತ್ತ ಹೋಯಿತು. ಅಂದಿನಿಂದ ಜನದ ವಿಶ್ವಾಸ ಅವನಲ್ಲಿ ಬೆಳೆಯುತ್ತ ನಡೆಯಿತು.

ಸಂಜೆಯ ಹೊತ್ತಿನಲ್ಲಿ ನಾರಪ್ಪನು ನೀರಿಗೆ ಹೋಗುವುದು ವಿರಳವಾಗಿತ್ತು. ತೀರ ಅಗತ್ಯವೆಂದು ಕಂಡು ಬಂದರೆ ನಾಲ್ಕಾರು ಕೊಡ ತರುತ್ತಿದ್ದನು. ಹೆಚ್ಚಾಗಿ ಅವನ ಸಂಜೆಯ ಸಲುವಳಿಯೆಂದರೆ ಗಂಗೆಯೂರಿನ ಹಾದಿಗೆ ತಿರುಗುತ್ತ ಒಬ್ಬನೇ ಹೋಗುವುದು. ಅಲ್ಲಿ ಮುದ್ದಬ್ಬೆಹಳ್ಳಿಯಿಂದ ಒಂದು ಮೈಲಿನಂತರದಲ್ಲಿ ಮುದ್ದನಹಳ್ಳಿ ಎಂಬ ಊರ ಹತ್ತಿರ ಒಂದು ಹೊಲದ ಬದುವಿಗೆ ಕಲ್ಲುಬಂಡೆಯಿದೆ, ಅದರ ನುತ್ತು ಗಿಡದ ಝಾಡಿದೆ. ಅಲ್ಲಿ ಒಂದು ಕಲ್ಲುಬಂಡೆಯ ಮೇಲೆ ತಿರುಪತಿ ವೆಂಕಪ್ಪನು ಒಡಮೂಡಿರುವನೆಂದು ಒಬ್ಬ ಭಕ್ತನಿಗೆ ಕನಸು ಬಿದ್ದಿತಂತೆ. ಅಂದಿನಿಂದ ಆ ಒಡಮೂಡಿದ ವೆಂಕಪ್ಪನ ಪೂಜೆಯಾಗುತ್ತಿತ್ತು, ಯಾರೊ ಭಕ್ತರು ಅಲ್ಲಿ ಒಂದು ಕಟ್ಟೆಯನ್ನು ಕಟ್ಟಿಸಿದ್ದಾರೆ. ಅಲ್ಲಿ ಹೋಗಿ ಶಾಂತವಾದ ಸಂಜೆಹೊತ್ತಿನಲ್ಲಿ ತಾನೊಬ್ಬನೇ ನಾರಪ್ಪನು ಕೂಡುತ್ತಿದ್ದನು. ವೆಂಕಪ್ಪನಿಗೆ ಬಲವಂದು ಬಾಗಿ ಕೈಮುಗಿದು ತನ್ನ ಜೀವನಕ್ಕೆ ಸುಖ-ಶಾಂತಿಯನ್ನು ಬೇಡುತ್ತಿದ್ದನು. ಹೀಗೆ ಒಂದು ದಿನ ಕುಳಿತಾಗ ಸೂರ್ಯನ ಹೊಂಬಿಸಿಲು ತೆಳುಹಳದಿ ಬಟ್ಟೆಯನ್ನು ನೆಲಕ್ಕೆ ಉಡಿಸಿದಂತೆ ಹಬ್ಬಿಕೊಂಡಿತ್ತು. ತಂಗಾಳಿಯಲ್ಲಿ ಗಿಡದೆಲೆಗಳು ಚಿನ್ನಾಟವಾಡುತ್ತಿದ್ದವು. ಆ ಹೊತ್ತಿಗೆ ಮುದ್ದನಹಳ್ಳಿಯಿಂದ ಇಬ್ಬರು ತರುಣ ದಂಪತಿಗಳು ತಮ್ಮ ಮಗುವನ್ನು ಕರಕೊಂಡು ಬಂದು ವೆಂಕಪ್ಪನಿಗೆ ಎರಗಿದರು, ತಮ್ಮ ಅಭೀಷ್ಟವನ್ನು ಬೇಡಿಕೊಂಡರು. ಅಲ್ಲಿದ್ದ ಅಂಗಾರವನ್ನು ತಾವೂ ಹಚ್ಚಿಕೊಂಡು ಕೂಸಿಗೂ ಹಚ್ಚಿ ಬಹಳ ಪ್ರಸನ್ನ ಮುದ್ರೆಯಿಂದ ನಗುತ್ತ ಕೆಲೆಯುತ್ತ ಹೊರಟರು. ಕಟ್ಟೆಯಲ್ಲಿ ಕುಳಿತ ನಾರಪ್ಪನನ್ನು ಹಿಂದಿರುಗಿ ಮಿಕಿಮಿಕಿ ನೋಡುತ್ತಿದ್ದರೂ ಅವನ ಗಾಂಭೀರ್ಯ ನೋಡಿ ಅವನನ್ನು ಮಾತಾಡಿಸುವದಾಗಲಿಲ್ಲ. ನಾಲ್ಕು ಹೆಜ್ಜೆ ಹೋದ ಮೇಲೆ 'ಯಾವ ಅವ?' ಎಂದು ಹೆಂಡತಿ ಕೇಳಿದಳು. 'ಇದ್ದಾನು ಯಾವರ ಸಂನ್ಯಾಸಿ' ಎನ್ನದು

ಗಂಡನು ಉತ್ತರ ಕೊಟ್ಟನು. ಈ ಪ್ರಶ್ನೋತ್ತರ ನಾರಪ್ಪನ ಕಿವಿಗೆ ಬಿದ್ದಿತು. ಅದೇಕೊ ಒಮ್ಮಲೆ ಬರ್ಚಿಗಳಿಂದ ಮೈಯೆಲ್ಲ ಚುಚ್ಚಿದಂತಾಯಿತು ಅವರು ಮರೆಯಾಗುವರೆಗೆ ಕಷ್ಟದಿಂದ ತಡಕೊಂಡು ಆಮೇಲೆ ವೆಂಕಪ್ಪನ ತನ್ನ ಇದಿರು ದೊಪ್ಪನೆ ಬಿದ್ದು 'ಹೌದು, ಸಂನ್ಯಾಸಿ, ನಾ ಸಂನ್ಯಾಸಿ. ಹೆಂಡರು-ಮಕ್ಕಳಿದ್ದ ಸಂನ್ಯಾಸಿ...'ಎಂದು ಭೋ ಎಂದು ಅಳತೊಡಗಿದನು. ತನ್ನ ಸಂಸಾರದ ಚಿತ್ರ ಕಣ್ಮುಂದೆ ನಿಚ್ಚಳವಾಗಿ ಸುಳಿಯಿತು. ಆ ಬೀಡಾದ ಹೆಂಡತಿ, ಕುರುಡಾದ ಮಗು, ಹಾಳಾದ ತಾನು ಈ ಮೂರಾಬಟ್ಟೆ ಅವನ ಬಾಳಿನ ಕಬ್ಬನ್ನು ಹಿಂಡಿ ಹಿಪ್ಪೆ ಮಾಡಿತ್ತು. ಕತ್ತಲೆಯ ಮುಬ್ಬು ಕವಿಯತೊಡಗಿತು. ಹಲವಾರು ಸಲ ಉಸ್ಸೆಂದು ಕೊನೆಗೆ ನಾರಪ್ಪ ದಿಗ್ಗೆಂದು ಎದ್ದುನಿಂತು ವೆಂಕಪ್ಪನಿಗೆ ಕೈಮುಗಿದು 'ಆಗಲಿ ವೆಂಕಪ್ಪ. ಕಾಡೊದೆಷ್ಟದ ಕಾಡು. ನಾನೂ ಘಟ್ಟಿ ಆಗೀನಿ. ಕಡೀ-ಕೊಮ್ಮೆ ಸಾವು ಖಾತ್ರಿ ಹೌದಲ್ಲೊ? ಸಾವಿನಾಗರ ಮುಕ್ತಿ ಕಂಡೇನು' ಎಂದು ಮನೆಯತ್ತ ನಡೆದನು.

(೩)

ನಾರಪ್ಪನು ಮುದ್ದಬ್ಬೆಹಳ್ಳಿಯಲ್ಲಿ ಎಲ್ಲ ಜನಕ್ಕೆ ಬೇಕಾದವನಾದನು. ಏನಾದರೂ ಅಸಾಧ್ಯವಿದ್ದದ್ದು ಸಾಧ್ಯವಾಗಬೇಕಾದರೆ 'ನೀರಿನ ನಾರಪ್ಪನ ಕಡೆ ಹೋದ ರಾಯಿತು ಹಾದಿ ಸಿಗತದ' ಎಂಬುದೊಂದು ಹೊಸ ಗಾದೆ ಮಾತು ರೂಢವಾಯಿತು. ಭಗವಂತರಾಯರಿಗೂ ಅವನು ಆಪ್ತಸಚಿವನಂತಾದನು. ಅವರ ಮೊದಲ ಹೆಂಡತಿಯ ಮಕ್ಕಳು ಅವನ ತೊಡೆಯ ಮೇಲೆ ಬೆಳೆದವು, ಅವನನ್ನು ಬಿಟ್ಟು ಮನೆಯ ಹೆಂಗಸರ ಬಳಿ ಸಹಿತ ಹಾಯುತ್ತಿರಲಿಲ್ಲ. ಹೀಗೆ ಎಂಟು ಹತ್ತು ವರುಷಗಳು ಕಳೆದವು. ಸುಶೀಲಾ ಬಾಯರ ಹೊಟ್ಟೆಯಲ್ಲಿ ಒಂದು ಗಂಡು, ಒಂದು ಹೆಣ್ಣು ಹುಟ್ಟಿ ದೊಡ್ಡವಾದವು. ಅದೇಕೊ ಅವು ನಾರಪ್ಪನ ಕಡೆ ಹೆಚ್ಚಾಗಿ ಹೋಗುತ್ತಿರಲಿಲ್ಲ. ನಾರಪ್ಪ ಮಾತ್ರ ಎಲ್ಲ ಹುಡುಗರು ಅಷ್ಟೇ ಎಂದು ಆಡಿಸಬೇಕೆಂದು ಹಾತೊರೆಯುತ್ತಿದ್ದನು. ಮಕ್ಕಳ ಬಗ್ಗೆ ಅವನ ಪ್ರೀತಿಯೆಂದರೆ ಅಷ್ಟು ಸಹಜವಾದುದು. ಆದರೆ ಅವನ ಕಲ್ಪನೆಯಿಲ್ಲದೆ ಒಂದು ತರದ ತಾರತಮ್ಯವು ತೋರಹತ್ತಿತು. ಮಲ-ಮಕ್ಕಳ ಮೇಲೆ ಅವನ ಅಂತಃಕರಣ ಹೆಚ್ಚಾಗಿರುವುದೆಂದು ಸುಶೀಲಾಬಾಯವರಿಗೆ ಭ್ರಾಂತಿ ಹುಟ್ಟಿತು, ಅದರೆ ರಾಯರ ಹೆದರಿಕೆಯಿಂದ ಅದನ್ನು ಅಂದು ತೋರಿಸುತ್ತಿರಲಿಲ್ಲ. ಬುದ್ಧಿಬಲಿಯದೆ ಇದ್ದ ಹುಡುಗರು ತಮ್ಮ ನಡತೆಯಿಂದ ಆ ಭ್ರಾಂತಿಯನ್ನು ದಿನದಿನವೂ ಹೆಚ್ಚುಗೊಳಿಸುತ್ತಿದ್ದರು. ನಾರಪ್ಪನು ಒಮ್ಮೆ ಹೋಗದೆ ಬಹಳ ದಿನವಾಯಿತೆಂದು ತನ್ನ ಹಳ್ಳಿಗೆ ಹೋಗಿದ್ದನು. ಅವನಿಲ್ಲದೆ ಮೊದಲ ಹೆಂಡತಿಯ ಹುಡುಗರಿಗೆ ಸೊಗಸದು. ಮಾತಿಗೊಮ್ಮೆ ಅವನನ್ನು ನೆನಸುತ್ತಿದ್ದರು. ಆಗ ಆಕಸ್ಮಿಕವಾಗಿ ಗಂಡು ಹುಡುಗನಿಗೆ ಅಜೀರ್ಣದ ಜ್ವರ ಬಂದವು. ಸುಶೀಲಾಬಾಯರು ಅವನ ಹತ್ತಿರ ಕುಳಿತು ತಮಗೆ ಶಕ್ಯವಿದ್ದಷ್ಟು ಉಪಚಾರ ಮಾಡಿದರು. ಆದರೆ ಅವನಿಗೆ ಸಮಾಧಾನವಿಲ್ಲ, ಪ್ರತಿಯೊಂದಕ್ಕೂ ನಾರಪ್ಪ ಎಂದು ಒದರುತ್ತಿದ್ದನು. ಸುಶೀಲಾಬಾಯರಿಗೆ ಅದು ಅಸಹ್ಯವಾಯಿತು. ರಾಯರು ಇದಿರಲ್ಲಿ ಇದ್ದಾಗ ಕಣ್ಣೀರು ತಂದು 'ನಾವೆಷ್ಟು ಮಾಡಿದರೂ ಈ ಹುಡುಗರಿಗೆ ಸರಿ ಬರೂದುಲ್ಲ.' ಎಂದರು. 'ಅದ್ಯಾಕೆ?' ಎಂದು ರಾಯರು ಕೇಳಿದರು. 'ಯಾಕೇನು? ಮನ್ಯಾಗ ತಂದು ಸೇರಿಸೀರಲ್ಲ ನವತೀ ಇನ್ನೊಂದು ಅವತಾರ' ತಾಳತಪ್ಪಿ ಬಾಯರು ಆಡಿಬಿಟ್ಟರು. ''ಹಾಂ. ಅದ್ಯಾರು?' ಎಂದು ರಾಯರು ಸಿಟ್ಟಿನ ಆವೇಶದಿಂದ ಕೇಳಿದರು. 'ಮತ್ಯಾರು? ನಾರಪ್ಪ, ಹೊಲಸು ನಾರಪ್ಪ' ಎಂದು ಉತ್ತರ ಬಂದಿತು. ರಾಯರು ಮೊದಲನೆ ಸಲ ಇಂಥ ಮಾತನ್ನು ಕೇಳಿ ಕಸಿವಿಸಿಗೊಂಡರು, ಕನಲಿದರು. ಆದರೆ ಹೆಚ್ಚು ಆಡಲು ಬಾಯಿಯಿಲ್ಲ. 'ಹಂಗೆಲ್ಲ ಅನಬಾರದು ಅವನಂಥ ಮನಸ್ಯಾಗ' ಎಂದಿಷ್ಟೆ ಮೆತ್ತಗೆ ಆಡಿದರು. ಅಷ್ಟಕ್ಕೇ ಬಾಯರ ಬಾಯಿ ನಿಲ್ಲಲಿಲ್ಲ. 'ಆಗಿಹೋತು. ಹಿಂಗ ಅವನ್ನ ಏರಿಸಿ ಕೂಡಿಸಿದ್ದಕ್ಕ ಈಗತಿ ಆತು. ಅವ ಎಷ್ಟು ಭೇದ ಮಾಡತಾನ ನಿಮಗೇನು ತಿಳೀತದ. ಅನುಭೋಗಿಸುವವರಿಗೆ ಎಲ್ಲ ಗೊತ್ತು. ನಮ್ಮ ಹುಡುಗರನ್ನ ಅವ ಒಂದು ದಿವಸರ ಮುಟ್ಟಿದ್ದರ ದೇವರಾಣಿ' ಎಂದು ಮುಂತಾಗಿ ಮಲ-ತಾಯಿಯ ಮೋಹಮಂತ್ರ ಪಠನವು ನಡೆಯಿತು. ರಾಯರಿಗೆ ಇದೊಂದು ಹೊಸ ಭೂತ ಮನೆಯಲ್ಲಿ ಹೊಕ್ಕಿತೆಂದು ಎದೆ ನಡುಗಿತು. ಆದರೂ ಸಮಾಧಾನ ಹೇಳುವಷ್ಟು ಹೇಳಿ ಕೆಲಸದ ನೆವನದಿಂದ ಅಲ್ಲಿಂದ ಕಾಲ್ತೆಗೆದರು.

.... ನಾರಪ್ಪ ತನ್ನ ಊರಿಂದ ನಾಲ್ಕು ದಿನದಲ್ಲಿ ತಿರುಗಿ ಬಂದನು. ಅಲ್ಲಿಯ ಅನುಭವಗಳಿಂದ ಅವನ ಜೀವ ಹತಾಶವಾಗಿತ್ತು, ನಗೆ ಮಾಸಿದಂತಾಗಿತ್ತು. ಆದರೂ ಮತ್ತೆ ತನ್ನ ಹಗುರುಮನದ ಸ್ವರ್ಗದಲ್ಲಿ ಸೇರಲು ಅವನು ಹವಣಿಸುತ್ತಿದ್ದನು. ತಾನು ಹೋದಾಗ ಗಂಡು ಹುಡುಗ

ನಿಗೆ ಜಡ್ಡಾದ ಸುದ್ದಿ ಕೇಳಿದನು. ಉಳಿದ ಸಂಗತಿಗಳು ಸ್ವಾಭಾವಿಕವಾಗಿ ತಿಳಿಯಲಿಲ್ಲ. ಆದರೆ ಬಾಯರ ವೃತ್ತಿ ಮೊದಲಿನಂತೆ ಇಲ್ಲವೇನೊ ಎಂಬ ಭಾಸವು ಮಾತ್ರ ಅವನಿಗೆ ಆಗುತ್ತ ಹೊರಟಿತು. ಅದನ್ನು ಲಕ್ಷ್ಯಕ್ಕೆ ತಾರದೆ ಅವನು ತನ್ನ ಕೆಲಸದಲ್ಲಿ ಎಂದಿನಂತೆ ತಲ್ಲೀನನಾದನು. ಇಷ್ಟರಲ್ಲಿ ರಾಯರ ಮೊದಲ ಸಂಬಂಧದ ಮಗಳು ಹದಿನಾಲ್ಕು ವರುಷದವಳಾಗಿ ಬೆಳೆದುನಿಂತಳು. ಅವಳ ಮದುವೆಯ ಚಿಂತೆ ಅವರಿಗೆ ಹತ್ತಿತು. ಹತ್ತೆಂಟು ಕಡೆ ಶೋಧಮಾಡಿ ಕೊನೆಗೆ ಎರಡು ಸಾವಿರ ವರದಕ್ಷಿಣೆಗೆ ರಾಯರು ಒಂದು ಸ್ಥಳ ಗೊತ್ತುಮಾಡಿದರು. ವರನು ಬಿ. ಎ. ಆಗಿದ್ದು ಒಂದು ಸಾವಿರ ವರೆಗಿನ ಉತ್ಪನ್ನದ ಒಡೆಯನಾಗಿದ್ದವನು. ಇದರಿಂದ ರಾಯರಿಗೆ ಅದಷ್ಟು ಸಂತೋಷವು ನಾರಪ್ಪನಿಗೆ ಆಯಿತು. ತಾನು ಸಾಕಿ ಸಲುಹಿದ ಮಗ ಒಳ್ಳೆಯ ಮನೆತನಕ್ಕೆ ಬೀಳುತ್ತಾಳೆ ಎಂದು ನೆನೆದು ಮದುವೆಯನ್ನು ಬಹಳ ಸಂಭ್ರಮದಿಂದ ಮಾಡಬೇಕೆಂದೂ ತಾನು ತನ್ನ ಪರನೂವಧಿ ಸೇವೆಯನ್ನು ಆಗ ಮಾಡುವೆನೆಂದೂ ರಾಯರಿಗೆ ಹೇಳಿದನು.

ಮದುವೆ ವೈಶಾಖ ಮಾಸದಲ್ಲಿ ಮೇ ತಿಂಗಳ ನಡುವೆ ಎಂದು ಗೊತ್ತಾಯಿತು. ರಾಯರ ಮನೆಯಲ್ಲಿ ಇದು ಮೊದಲನೆಯ ದೊಡ್ಡ ಸಮಾರಂಭವೆಂದು ಎರಡು ಮೂರು ತಿಂಗಳಿಂದ ಎಲ್ಲ ಸಿದ್ಧತೆ ನಡೆಯಿತು. ಆದರೆ ಒಂದು ವಿಷಯ ರಾಯರ ಚಿಂತೆಗೆ ಕಾರಣವಾಗಿತ್ತು. ಮುದ್ದಬ್ಬಿಹಳ್ಳಿಯ ಎಲ್ಲ ಬಾವಿಗಳಲ್ಲಿ ನೀರು ಸರಿಯ ತೊಡಗಿತ್ತು. ಆ ವರುಷ ಮಳೆಗಾಲದಲ್ಲಿ ನೆಟ್ಟಗೆ ಮಳೆ ಆಗಿರಲಿಲ್ಲ. ಅಲ್ಲದೆ ಊರ ಮುಂದಿನ ಕೆರೆಯೊಡೆದು ನೀರು ಇಂಗಿಕೊಳ್ಳದೆ ಹತ್ತುಕಡೆ ಹರಿದುಹೋಗಿತ್ತು. ಈ ಹನ್ನೆರಡು ವರುಷಗಳಲ್ಲಿ ಎಂದಿಲ್ಲದ ನೀರಿನ ಬರ ಬರಬಹುದೋ ಹೇಗೆ ಎಂಬ ಎದೆಗುದಿ ಹುಟ್ಟಿತು. ಮದುವೆಯನ್ನೆ ಮುಂದೆ ಹಾಕಬೇಕೆಂದರೆ ಕನ್ಯಾಗತ ಮುಂಬರುವುದಿತ್ತು, ಹುಡುಗಿ ಬೆಳೆದುನಿಂತಿದ್ದಾಳೆ. ಬೇರೆ ಯೂರಿಗೆ ಇಲ್ಲವೆ ತಿರುಪತಿಯಂಥ ಪುಣ್ಯ ಕ್ಷೇತ್ರಕ್ಕೆ ಹೋಗೋಣವೆಂದರೆ ರಾಯರ ಮನಸ್ಸಿಗೆ ಒಪ್ಪದು, ಅವರ ಮಿತ್ರರೂ ಅದಕ್ಕೆ ಅನುಕೂಲವಾಗಿಲ್ಲ. ಪ್ರಸಿದ್ಧ ವ ಕೀ ಲ ರಾ ದ ಭಗವಂತರಾಯರು ಇದ್ದೂರಲ್ಲಿ ಮದುವೆ ಮಾಡದಿದ್ದರೆ ಅದು ಅವರಿಗೆ ಶೋಭಿಸುವುದೇ? ಈ ಸಾಮಾಜಿಕ ಕಲ್ಪನೆಯು ಮದುವೆ ಆದರೆ ಮುದ್ದಬ್ಬಿ ಹಳ್ಳಿಯಲ್ಲಿಯೆ ಎಂದು ನಿರ್ಧರಿಸಿ ಬಿಟ್ಟಿತ್ತು. ಒಮ್ಮೆ ನಾರಪ್ಪನನ್ನು ತಮ್ಮ ಕೋಣೆಗೆ ಕರೆಯಿಸಿ ನೀರಿನ ಸಮಸ್ಯೆಯನ್ನು ಕುರಿತು ರಾಯರು ಸುದೀರ್ಘವಾದ ಮಂತ್ರಾಲೋಚನೆಯನ್ನು ನಡಸಿದ್ದರು. 'ಮದವಿ ಇಲ್ಲೇ ಆಗಬೇಕು' ಎಂದು ಅವನೂ ಅಭಿಪ್ರಾಯಪಟ್ಟನು. 'ನೀರಿನ ವ್ಯವಸ್ಥಾ ಹೆಂಗ ನಾರಪ್ಪ?' ಎಂದು ಕೇಳಿದರು ರಾಯರು. 'ರಾಯರ, ಅದನ್ನ ನನಗೆ ಬಿಟ್ಟಕೊಡಿರಿ. ನೀರಿನ ನಾರಪ್ಪ ಅಂತ ನನಗೆ ಹೆಂಗೂ ಹೆಸರ ಬಿದ್ದದ. ನನ್ನೊಳಗ ಎಷ್ಟು ನೀರದ ನೋಡೇ ಬಿಡತೀನಿ!' ಇದರಿಂದ ರಾಯರಿಗೆ ಹುರುಪು ಬಂತು. ನಾರಪ್ಪನ ಯೋಗ್ಯತೆಯ ಬಗ್ಗೆ ಅವರಿಗೆ ತುಂಬಾ ಮನನರಿಕೆಯಾಗಿತ್ತು. ಹೆಚ್ಚು ವಿಚಾರ ಮಾಡದೆ ಆಗಲಿ ಎಂದುಬಿಟ್ಟರು. ಅದು ಹೇಗೊ ಸುಶೀಲಾಬಾಯರ ಕಿವಿಗೆ ಕಜೇರಿ ಖೋಲಿಯಲ್ಲಿಯ ಈ ಎಲ್ಲ ಮಾತು ಗೊತ್ತಾದವು. ಅಂದೇ ರಾತ್ರಿ ರಹಸ್ಯಮಂದಿರದಲ್ಲಿ ಅವರು ರಾಯರೊಡನೆ ಪ್ರಸ್ತಾಪವೆತ್ತಿ ವಿರುದ್ಧಪಕ್ಷವನ್ನು ಮಂಡಿಸಿದರು. 'ಅದೇನು ಹೇಳತಾನ ನಾರಪ್ಪ ತನ್ನ ತಲಿ. ಊರಾಗಿನ ಒಂದು ಬಾವ್ಯಾಗ ಕಾಳು ನೀರಿಲ್ಲ. ಹೊತ್ತು ಹಾಕೇನಂದ್ರ ನೀರೆಲ್ಲವ? ಈಗ ದಿನದ ಬಳಕಿಗೆ ತರಬೇಕಾದರೆ ಕಣ್ಣೀರು ಕಪಾಳಕ್ಕ ಬರತಾವ.' 'ಅಲ್ಲ, ನಾರಪ್ಪನ ತಾಖತು ಗೊತ್ತಿಲ್ಲೇನು ನಿನಗ?' ಎಂದು ರಾಯರು ಕೇಳಿದ್ದಕ್ಕೆ 'ಎಲ್ಲಾ ಗೊತ್ತದ, ಚಹಾ ಕುಡಿದು ಬೀಡಿ ಸೇದಿ ಎದಿ ಗೂಡುಗಟ್ಟೀದ. ಹತ್ತಸಾರೆ ಉಶ್ ಅನಕೋತ ಕೊಡ ಹೊತಗೊಂಡು ಬರತಾನೆ. ನಿಮಗೆಲ್ಲಾ ಇವು ತಿಳಿಯೂದಿಲ್ಲ. ಹಿಂದಾಗಡೆ ನಾಕ ಮಂದ್ಯಾಗ ಫಜೀತಿ ಆದೀತು'ಎಂದು ಬಾಯರು ಮುಂದುನುರಿದರು. 'ಹಂಗರ ಎಲ್ಲ್ಯರ ಮದವಿ ಮಾಡಬೇಕೆಂತೀ?' ಎಂದು ರಾಯರು ಕೇಳಿದರು. 'ಎಲ್ಲ್ಯಾರ ಯಲಗೂರದಂತ ಜಾಗಾದಾಗ ಹೋಗಿ ಅಕ್ಕೀಕಾಳು ಹಾಕಿ ಬಂದರಾತು.' ಈ ಮಾತಿನಿಂದ ರಾಯರ ಭಾವನೆಯನ್ನು ಕಲಕಿದಂತಾಯಿತು. ಇದು ಮೂಲತಾಯಿಯ ಮೂಲಿತ ಮಾತೆಂದು ಅವರಿಗೆ ತೋರಿತು. 'ಹೌದು ಹೌದು, ನಿನಗೇನು ಮದವಿ ಎಲ್ಲ್ಯಾದರೂ ಅಷ್ಟೇ ಅದ.' ಎಂದು ಸೂಚ್ಯವಾಗಿ ನೊಂದುಕೊಂಡು ಆಡಿದರು, ಇಷ್ಟಕ್ಕೆ ಬಾಯರು ಅತ್ತತ್ತು ಮಗ್ಗಲಾಸಿಗೆಯನ್ನೆಲ್ಲ ತೊಯ್ಸಿದರು.

ಮೇ ತಿಂಗಳು ಸುರುವಾಯಿತು. ಮದುವೆಯ ಮುಹೂರ್ತ ಹದಿನೈದು ದಿನ ಉಳಿಯಿತು. ರಾಯರ ಆಪ್ತೇಷ್ಟರು ಎಲ್ಲ ಕಡೆಯಿಂದ ಬರಹತ್ತಿದರು. ರಾಯರ ದೊಡ್ಡ ಮನೆ ಹೆಂಗಸರು ಹುಡುಗರಿಂದ ತುಂಬಿ ನಳ್ಳಿ

ರ ಲಾರಿಯಂತೆ ಭರ್ತಿ ಆಯಿತು. ಮನೆಯ ಮುಂದೆ ಭತ್ತು ಹೊ ಡೆ ದ ಮಂಡಪವು ಅಲ್ಪಕಾಲದ ಇಂದ್ರ ಸಭೆಯಂತೆ ಸಜ್ಜಾಗತೊಡಗಿತು. ಆ ದ ರೆ ನೀರಿನ ಸ್ಥಿತಿ ಮಾತ್ರ ದಿನದಿನಕ್ಕೆ ಹೆಚ್ಚು ಭಯಾನಕ ವಾಯಿತು. ಪ್ರತಿಯೊಂದು ಬಾವಿಯ ಮುಂದೆ ಸಾಲು ಸಾಲಾಗಿ ಹೆಂಗಸರು ಗಂ ಡ ಸ ರು ತಮ್ಮ ಪಾಳಿಗಾಗಿ ಕಾಯುತ್ತ ಕೂತ ನೋಟವೇ ನೋಟ. ಅವರ ಹತ್ತಿರ ಒಂದು ಕೊಡ, ಒಂದು ಪರಟೆ ಇಲ್ಲವೆ ಬಟ್ಟಲ. ರಾತ್ರಿ ಯಲ್ಲಿ ಸಹ ಜಾಗರಣೆಮಾಡಿ ಜನ ನೀರು ತುಂಬುತ್ತಿ ದ್ದರು. ಈಚಟುನಟಿಕೆಯಿಂದ ಸಾಮಾನ್ಯವಾಗಿ ನಿಶ್ಚೇತನ ವಾದ ಮುದ್ದಬ್ಬಿಹಳ್ಳಿ ಒಂದು ರೀತಿಯಿಂದ ಕೆಲಕಾಲ ತುಂಬ ಸಚೇತನವಾಗಿತ್ತು. ಎಲ್ಲರ ಬಾಯಲ್ಲಿ ನೀರಿನ ಮಾತೇ ಮಾತು. ಬಿ ಸಿ ಲು ಹೆಚ್ಚುತ್ತ ಹೋದರೂ ಮಳೆಯ ಸುದ್ದಿಯಿಲ್ಲ. ಯಾವಾಗದರೊಮ್ಮೆ ಇಳಿ. ಹೊತ್ತಿಗೆ ಮೋಡಕವಿದು ಮಿಂಚಾಡಿದರೆ ರಾಯರು 'ಇನ್ನೂ ಮಳೆಯಾದೀತು' ಎಂದು ಆಶಿಸುತ್ತಿದ್ದರು. ಆದರೆ ಆ ಮಿಂಚು ಬರೀ ಕಟ್ಟಣಕದ ನಗೆಯಾಗಿಬಿಡು ತ್ತಿತ್ತು. 'ಇನ್ನೇನು ಗತಿ? ನೀರೇ ಇ ಲ್ಲ ದಿ ದ್ದ ರೆ ನೀನಾದರೂ ಎಲ್ಲಿಂದ ತಂದು ಹಾಕುವಿ, ನಾರಪ್ಪ' ಎಂದು ರಾಯರು ಮದುವೆಗಿಂತ ಎಂಟುದಿನ ಮೊದಲು ನಾರಪ್ಪನನ್ನು ಸ ಚಿ ಂ ತ ಮುದ್ರೆಯಿಂದ ಕೇಳಿದರು. ನಾರಪ್ಪನು ತನ್ನ ಠೀವಿಯಲ್ಲಿ ಹೇಳಿದನು 'ನೀವು ಅದರ ಕಾಳಜಿ ಬಿಡಿರಿ ರಾಯರ. ಆಡದೆ ಮಾಡುವನು ರೂಢಿ ಯೊಳಗುತ್ತಮನು ಎಂದು ಸ ರ್ವ ಜ್ಞ ಹೇಳಿಲ್ಲ. ರಾಯರು ನಿರ್ವಾಹವಿಲ್ಲದೆ ಸುಮ್ಮನಾದರು. ನಾರಪ್ಪನ ಗಾದೆಮಾತಿನ ಮುಂದೆ ಯಾವ ಮಾತೂ ಗಾದೆಯಷ್ಟು ಸುಖಕರವಾಗುತ್ತಿತ್ತು. ಆದರೆ ಈ ಹೊಸ ಸರ್ವಜ್ಞ ನೀರಿನ ದೆಸೆಯಿಂದ ಯಾವ ಸ್ಕಂಟ (ಚಮತು) ಮಾಡ ಲಿರುವನೆಂಬುದು ಅವರಿಗೆ ಗೋಚರಿಸಲಿಲ್ಲ.

ನಾರಪ್ಪನು ಮಾತ್ರ ಮುದ್ದನಹಳ್ಳಿಗೆ ಪ್ರ ತಿ ನಿ ತ್ಯ ಹೋಗುವಂತೆ ಸುತ್ತಲಿನ ಎರಡುಮೂರು ಮೈಲಿನಲ್ಲಿಯ ಹಳ್ಳಿಗಳಿಗೆ ಹೋಗಿ ಬಂದನು. ಎರಡು ಮೈಲಿನ ಮೇಲೆ ಒಂದು ದೊಡ್ಡ ಬಾವಿಯಲ್ಲಿ ಉತ್ತಮ ನೀರು ಹೇರಳ ವಾಗಿತ್ತು. ಅದೂ ರಸ್ತೆಗೆ ಹೊಂದಿ ಇರುವಂಥದು. ಇದು ಒಳ್ಳೆಯದಾಯಿತು ಎಂದು ನಾಲ್ಕು ಜೋಡೆತ್ತಿನ ಗಾಡಿಗಳನ್ನು ಹೂಡಿಸಿದನು, ತನ್ನ ಕೈಯೊಳಗೆ ಊರ್ಲ ನೀರು ಹಾಕುವ ಎಂಟು-ಹತ್ತು ಹು ಡು ಗ ರ ನ್ನು ತಗೊಂಡನು. ನಾಲ್ಕೂ ಗಾಡಿಗಳಲ್ಲಿ ದೊಡ್ಡ ಹಂಡೆ ಗಳನ್ನೂ ಹೌದುಗಳನ್ನೂ ಇಡಿಸಿಕೊಂಡು ಬೆಳಿಗ್ಗೆ ನಾಲ್ಕು ಗಂಟೆಗೆ ಹೋಗಿ ಬೆಳಗಾಗ ಎಂಟು ಗಂಟೆಗೆ ನೀರು ತುಂಬಿ ಡಮಡಮಾಯಿಸುತ್ತ ಊರಿಗೆ ಬರುತ್ತಿದ್ದನು. ಮದುವೆ ಇನ್ನೆರಡು ದಿನವಿತ್ತು. ಒಂದು ದಿನ ರಾಯರು ನೀರಿನ ಬರದ ಕೆಟ್ಟ ಕನಸು ಕಂಡು ವ್ಯಥೆಪಟ್ಟು ಎದ್ದು ನೋಡುತ್ತಾರೆ—ಮನೆಯಲ್ಲಿ ನೀರಿನ ಸಮೃದ್ಧಿ. ಅವರಿಗೆ ಬಹಳ ಆಶ್ಚರ್ಯವಾಯಿತು, ಭಲೆ ನಾರಪ್ಪ ಎಂದು ಪ್ರಶಂಸೆಮಾಡಿದರು. 'ಯಾರೂ ವ್ಯರ್ಥ ನೀರನ್ನು ಚೆಲ್ಲ ಕೂಡದು, ನಾ ರ ಪ್ಪ ನಿ ಗೆ ಎಷ್ಟು ಆಯಾಸವಾಗತದೆ ತಿಳಿಕೋಬೇಕು' ಎಂದು ಸೌಮ್ಯವಾಗಿ ಎಲ್ಲ ಮನೆ ಮಂದಿಗೆ ಅಪ್ಪಣೆಮಾಡಿದರು. ಅದಕ್ಕೆ 'ಛೇ, ರಾಯರ ನನ್ನ ಆಯಾಸಗೀಯಾಸ ನೋಡಬ್ಯಾಡರಿ. ಮದವೀ ಮನಿ ಇದು. ಮನಸಿಗೆ ಬಂದಷ್ಟು ಛೆಲ್ಲಲಿ. ಛೆಲ್ಲಿದಂಗ ತುಂಬತೀನಿ' ಎಂದು ಬಹಳ ಆವೇಶದಿಂದ ಹೇಳಿದನು. ಎಲ್ಲರೂ ಅವನ ಕರ್ತೃತ್ವ ಶಕ್ತಿಗೆ ಬೊಟ್ಟು ಕಚ್ಚಿದರು. ಆ ಸಮಾರಂಭದ ನಾ ಟ ಕ ಕ್ಕೆ ನಾರಪ್ಪನೇ ಮುಖ್ಯ ನಾಯಕನಾಗಿ ಎಲ್ಲರ ಮನಸ್ಸನ್ನು ತನ್ನ ಕಡೆ ಎಳೆದು ಕೊಂಡುಬಿಟ್ಟನು.

ಮದುವೆ ವೈಭದದಿಂದ ಸಾಂಗವಾಯಿತು. ರಾಯರ ಸಂತೋಷಕ್ಕೆ ಪಾರವೇ ಇಲ್ಲ. 'ಇವ ಖರೇ ನೀರಿನ ನಾರಪ್ಪ' ಎಂದು ಸೇರಿದ ಜನಸಮುದಾಯವೆಲ್ಲ ನಾರಪ್ಪ ನನ್ನು ಬಾಯಿತುಂಬ ಹೊಗಳಿದರು. 'ನನ್ನ ಆಯುಷ್ಯ ಸಾರ್ಥಕ ಆತು' ಎಂದು ನಾರಪ್ಪ ತ ನ್ನೊ ಳ ಗೆ ಹಿರಿಹಿರಿ ಹಿಗ್ಗಿದನು.

## (೪)

ಮದುವೆಯಾಗಿ ಒಂದು ತಿಂಗಳಾಯಿತು, ಮಾಸ-ಲಾಣಿಯ ಹಬ್ಬ ಜರುಗಿತು. ಅಷ್ಟರಲ್ಲಿ ಒಂದೆರಡು ಮಳೆ ಬಿದ್ದು ಬಾವಿಗಳಿಗೆ ಜಲದೇವಿ ಒಲಿದಿದ್ದಳು. ನಾರಪ್ಪನ ತೊಂದರೆ ಕಡಿಮೆಯಾಗಿತ್ತು. ಮದುವೆಯ ಮಂಡಪ ವನ್ನು ಕಿತ್ತಿದರು, ಮಾವಿನೆಲೆಗಳು ಮಂಗಲಸಮಯದಲ್ಲಿ ಶೋಭೆಯನ್ನು ಬೀರಿ ಈಗ ಒಣಗಿ ತಿಪ್ಪೆಯ ಪಾಲಾದವು. ಮಾಸಲಾಣಿಯ ಮರುದಿನ ಒಂದು ಅಕಲ್ಪಿತ ಘಟನೆ ಆಯಿತು. ಸುಶೀಲಾಬಾಯರ ಸರಿಗೆ ಕಳೆದು ಹೋಗಿ ಬಿಟ್ಟಿತ್ತು. ಮಾಸಲಾಣಿಯ ದಿವಸ ಹಲವಾರು ಹೊರಗಿನ ಜನ ಊಟಕ್ಕೆ ಬಂದಿದ್ದರು. ಅಂದು ಹಾಕಿಕೊಂಡು ಸಂಜೆಯಲ್ಲಿ ದೇವರಕಟ್ಟೆಯ ಮೇಲೆ ಉಚ್ಚಿಟ್ಟು ಯಾರೋ

ನಿಗೆ ಜಡ್ಡಾದ ಸುದ್ದಿ ಕೇಳಿದನು. ಉಳಿದ ಸಂಗತಿಗಳು ಸ್ವಾಭಾವಿಕವಾಗಿ ತಿಳಿಯಲಿಲ್ಲ. ಆದರೆ ಬಾಯರ ವೃತ್ತಿ ಮೊದಲಿನಂತೆ ಇಲ್ಲವೇನೊ ಎಂಬ ಭಾಸವು ಮಾತ್ರ ಅವನಿಗೆ ಆಗುತ್ತ ಹೊರಟಿತು. ಅದನ್ನು ಲಕ್ಷ್ಯಕ್ಕೆ ತಾರದೆ ಅವನು ತನ್ನ ಕೆಲಸದಲ್ಲಿ ಎಂದಿನಂತೆ ತಲ್ಲೀನನಾದನು. ಇಷ್ಟರಲ್ಲಿ ರಾಯರ ಮೊದಲ ಸಂಬಂಧದ ಮಗಳು ಹದಿನಾಲ್ಕು ವರುಷದವಳಾಗಿ ಬೆಳೆದುನಿಂತಳು. ಅವಳ ಮದುವೆಯ ಚಿಂತೆ ಅವರಿಗೆ ಹತ್ತಿತು. ಹತ್ತೆಂಟು ಕಡೆ ಶೋಧಮಾಡಿ ಕೊನೆಗೆ ಎರಡು ಸಾವಿರ ವರದಕ್ಷಿಣೆಗೆ ರಾಯರು ಒಂದು ಸ್ಥಳ ಗೊತ್ತುಮಾಡಿದರು. ವರನು ಬಿ. ಎ. ಆಗಿದ್ದು ಒಂದು ಸಾವಿರ ವರೆಗಿನ ಉತ್ಪನ್ನದ ಒಡೆಯನಾಗಿದ್ದವನು. ಇದರಿಂದ ರಾಯರಿಗೆ ಅದಷ್ಟು ಸಂತೋಷವು ನಾರಪ್ಪನಿಗೆ ಆಯಿತು. ತಾನು ಸಾಕಿ ಸಲುಹಿದ ಮಗ ಒಳ್ಳೆಯ ಮನೆತನಕ್ಕೆ ಬೀಳುತ್ತಾಳೆ ಎಂದು ನೆನೆದು ಮದುವೆಯನ್ನು ಬಹಳ ಸಂಭ್ರಮದಿಂದ ಮಾಡಬೇಕೆಂದೂ ತಾನು ತನ್ನ ಪರಮಾವಧಿ ಸೇವೆಯನ್ನು ಆಗ ಮಾಡುವೆನೆಂದೂ ರಾಯರಿಗೆ ಹೇಳಿದನು.

ಮದುವೆ ವೈಶಾಖ ಮಾಸದಲ್ಲಿ ಮೇ ತಿಂಗಳ ನಡುವೆ ಎಂದು ಗೊತ್ತಾಯಿತು. ರಾಯರ ಮನೆಯಲ್ಲಿ ಇದು ಮೊದಲನೆಯ ದೊಡ್ಡ ಸಮಾರಂಭವೆಂದು ಎರಡು ಮೂರು ತಿಂಗಳಿಂದ ಎಲ್ಲ ಸಿದ್ಧತೆ ನಡೆಯಿತು. ಆದರೆ ಒಂದು ವಿಷಯ ರಾಯರ ಚಿಂತೆಗೆ ಕಾರಣವಾಗಿತ್ತು. ಮುದ್ದಬ್ಬಿಹಳ್ಳಿಯ ಎಲ್ಲ ಬಾವಿಗಳಲ್ಲಿ ನೀರು ಸರಿಯ ತೊಡಗಿತ್ತು. ಆ ವರುಷ ಮಳೆಗಾಲದಲ್ಲಿ ನೆಟ್ಟಗೆ ಮಳೆ ಆಗಿರಲಿಲ್ಲ. ಅಲ್ಲದೆ ಊರ ಮುಂದಿನ ಕೆರೆಯೊಡೆದು ನೀರು ಇಂಗಿಕೊಳ್ಳದೆ ಹತ್ತುಕಡೆ ಹರಿದುಹೋಗಿತ್ತು. ಈ ಹನ್ನೆರಡು ವರುಷಗಳಲ್ಲಿ ಎಂದಿಲ್ಲದ ನೀರಿನ ಬರ ಬರಬಹುದೋ ಹೇಗೆ ಎಂಬ ಎದೆಗುದಿ ಹುಟ್ಟಿತು. ಮದುವೆಯನ್ನೆ ಮುಂದೆ ಹಾಕಬೇಕೆಂದರೆ ಕನ್ಯಾಗತ ಮುಂಬರುವುದಿತ್ತು, ಹುಡುಗಿ ಬೆಳೆದುನಿಂತಿದ್ದಾಳೆ. ಬೇರೆ ಯೂರಿಗೆ ಇಲ್ಲವೆ ತಿರುಪತಿಯಂಥ ಪುಣ್ಯ ಕ್ಷೇತ್ರಕ್ಕೆ ಹೋಗೋಣವೆಂದರೆ ರಾಯರ ಮನಸ್ಸಿಗೆ ಒಪ್ಪದು, ಅವರ ಮಿತ್ರರೂ ಅದಕ್ಕೆ ಅನುಕೂಲವಾಗಿಲ್ಲ. ಪ್ರಸಿದ್ಧ ವ ಕೀ ಲ ರಾ ದ ಭಗವಂತರಾಯರು ಇದ್ದೂರಲ್ಲಿ ಮದುವೆ ಮಾಡದಿದ್ದರೆ ಅದು ಅವರಿಗೆ ಶೋಭಿಸುವುದೇ? ಈ ಸಾಮಾಜಿಕ ಕಲ್ಪನೆಯು ಮದುವೆ ಆದರೆ ಮುದ್ದಬ್ಬಿ ಹಳ್ಳಿಯಲ್ಲಿಯೆ ಎಂದು ನಿರ್ಧರಿಸಿ ಬಿಟ್ಟಿತ್ತು. ಒಮ್ಮೆ ನಾರಪ್ಪನನ್ನು ತಮ್ಮ ಕೋಣೆಗೆ ಕರೆಯಿಸಿ ನೀರಿನ ಸಮಸ್ಯೆಯನ್ನು ಕುರಿತು ರಾಯರು ಸುದೀರ್ಘವಾದ ಮಂತ್ರಾಲೋಚನೆಯನ್ನು ನಡಸಿದ್ದರು. 'ಮದವಿ ಇಲ್ಲೇ ಆಗಬೇಕು' ಎಂದು ಅವನೂ ಅಭಿಪ್ರಾಯಪಟ್ಟನು. 'ನೀರಿನ ವ್ಯವಸ್ಥೆ ಹೆಂಗ ನಾರಪ್ಪ?' ಎಂದು ಕೇಳಿದರು ರಾಯರು 'ರಾಯರ, ಅದನ್ನ ನನಗೆ ಬಿಟ್ಟಕೊಡಿರಿ. ನೀರಿನ ನಾರಪ್ಪ ಅಂತ ನನಗೆ ಹೆಂಗೂ ಹೆಸರ ಬಿದ್ದದ. ನನ್ನೊಳಗ ಎಷ್ಟು ನೀರದ ನೋಡೇ ಬಿಡತೀನಿ!' ಇದರಿಂದ ರಾಯರಿಗೆ ಹುರುಪು ಬಂತು. ನಾರಪ್ಪನ ಯೋಗ್ಯತೆಯ ಬಗ್ಗೆ ಅವರಿಗೆ ತುಂಬಾ ಮನವರಿಕೆಯಾಗಿತ್ತು. ಹೆಚ್ಚು ವಿಚಾರ ಮಾಡದೆ ಆಗಲಿ ಎಂದುಬಿಟ್ಟರು. ಅದು ಹೇಗೊ ಸುಶೀಲಾಬಾಯಿಗೆ ಕಿವಿಗೆ ಕಜೇರಿ ಖೋಲಿಯಲ್ಲಿಯ ಈ ಎಲ್ಲ ಮಾತು ಗೊತ್ತಾದವು. ಅಂದೇ ರಾತ್ರಿ ರಹಸ್ಯಮಂದಿರದಲ್ಲಿ ಅವರು ರಾಯರೊಡನೆ ಪ್ರಸ್ತಾಪವೆತ್ತಿ ವಿರುದ್ಧಪಕ್ಷವನ್ನು ಮಂಡಿಸಿದರು. 'ಅದೇನು ಹೇಳತಾನ ನಾರಪ್ಪ ತನ್ನ ತಲಿ. ಊರಾಗಿನ ಒಂದು ಬಾವ್ಯಾಗ ಕಾಳು ನೀರಿಲ್ಲ. ಹೊತ್ತು ಹಾಕೇನಂದ್ರು ನೀರೆಲ್ಲವ? ಈಗ ದಿನದ ಬಳಕಿಗೆ ತರಬೇಕಾದರೆ ಕಣ್ಣೀರು ಕಸಾಳಕ್ಕ ಬರತಾವ.' 'ಅಲ್ಲ, ನಾರಪ್ಪನ ತಾಖತು ಗೊತ್ತಿಲ್ಲೇನು ನಿನಗ?' ಎಂದು ರಾಯರು ಕೇಳಿದ್ದಕ್ಕೆ 'ಎಲ್ಲಾ ಗೊತ್ತದ, ಚಹಾ ಕುಡಿದು ಬೀಡಿ ಸೇದಿ ಎದಿ ಗೂಡುಗಟ್ಟೀದ. ಹತ್ತಸಾರೆ ಉಶ್ ಅನಕೋತ ಕೊಡ ಹೊತಗೊಂಡು ಬರತಾನೆ. ನಿಮಗೆಲ್ಲಾ ಇವು ತಿಳಿಯೂದಿಲ್ಲ. ಹಿಂದಾಗಡೆ ನಾಕ ಮಂದ್ಯಾಗ ಫಜೀತಿ ಆದೀತು'ಎಂದು ಬಾಯರು ಮುಂದುನುರಿದರು. 'ಹಂಗರ ಎಲ್ಲ್ಯರ ಮದವಿ ಮಾಡಬೇಕೆಂತೀ?' ಎಂದು ರಾಯರು ಕೇಳಿದರು. 'ಎಲ್ಲಾ್ಯರ ಯಲಗೂರದಂತ ಜಾಗಾದಾಗ ಹೋಗಿ ಅಕ್ಕೀಕಾಳು ಹಾಕಿ ಬಂದರಾತು.' ಈ ಮಾತಿನಿಂದ ರಾಯರ ಭಾವನೆಯನ್ನು ಕಲಕಿದಂತಾಯಿತು. ಇದು ಮಲತಾಯಿಯ ಮಲಿತ ಮಾತೆಂದು ಅವರಿಗೆ ತೋರಿತು. 'ಹೌದು ಹೌದು, ನಿನಗೇನು ಮದವಿ ಎಲ್ಲಾ್ಯದರೂ ಅಷ್ಟೇ ಅದ.' ಎಂದು ಸೂಚ್ಯವಾಗಿ ನೊಂದುಕೊಂಡು ಅಡಿದರು, ಇಷ್ಟಕ್ಕೆ ಬಾಯರು ಅತ್ತತ್ತು ಮಗ್ಗಲಾಸಿಗೆಯನ್ನೆಲ್ಲ ತೊಯ್ಸಿದರು.

ಮೇ ತಿಂಗಳು ಸುರುವಾಯಿತು. ಮದುವೆಯ ಮುಹೂರ್ತ ಹದಿನೈದು ದಿನ ಉಳಿಯಿತು. ರಾಯರ ಆಪ್ತೇಷ್ಟರು ಎಲ್ಲ ಕಡೆಯಿಂದ ಬರಹತ್ತಿದರು. ರಾಯರ ದೊಡ್ಡ ಮನೆ ಹೆಂಗಸರು ಹುಡುಗರಿಂದ ತುಂಬಿ ಸಂತೆ-

ದಿನದ ಮೋಟರ ಲಾರಿಯಂತೆ ಭರ್ತಿ ಆಯಿತು. ಮನೆಯ ಮುಂದೆ ಭತ್ತು ಹೊ ಡೆ ದ ಮಂಡಪವು ಅಲ್ಪಕಾಲದ ಇಂದ್ರ ಸಭೆಯಂತೆ ಸಜ್ಜಾಗತೊಡಗಿತು. ಆ ದ ರೆ ನೀರಿನ ಸ್ಥಿತಿ ಮಾತ್ರ ದಿನದಿನಕ್ಕೆ ಹೆಚ್ಚು ಭಯಾನಕ ವಾಯಿತು. ಪ್ರತಿಯೊಂದು ಬಾವಿಯ ಮುಂದೆ ಸಾಲು ಸಾಲಾಗಿ ಹೆಂಗಸರು ಗಂ ಡ ಸ ರು ತಮ್ಮ ಪಾಳಿಗಾಗಿ ಕಾಯುತ್ತ ಕೂತ ನೋಟವೇ ನೋಟ. ಅವರ ಹತ್ತಿರ ಒಂದು ಕೊಡ, ಒಂದು ಪರಟೆ ಇಲ್ಲವೆ ಬಟ್ಟಲ. ರಾತ್ರಿ ಯಲ್ಲಿ ಸಹ ಜಾಗರಣೆಮಾಡಿ ಜನ ನೀರು ತುಂಬುತ್ತಿ ದ್ದರು. ಈಜಟುವಟಿಕೆಯಿಂದ ಸಾಮಾನ್ಯವಾಗಿ ನಿಶ್ಚೇತನ ವಾದ ಮುದ್ದಬ್ಬಿಹಳ್ಳಿ ಒಂದು ರೀತಿಯಿಂದ ಕೆಲಕಾಲ ತುಂಬ ಸಚೇತನವಾಗಿತ್ತು. ಎಲ್ಲರ ಬಾಯಲ್ಲಿ ನೀರಿನ ಮಾತೇ ಮಾತು. ಬಿ ಸಿ ಲು ಹೆಚ್ಚುತ್ತ ಹೋದರೂ ಮಳೆಯ ಸುದ್ದಿಯಿಲ್ಲ. ಯಾವಾಗದರೊಮ್ಮೆ ಇಳಿ-ಹೊತ್ತಿಗೆ ಮೋಡಕವಿದು ಮಿಂಚಾಡಿದರೆ ರಾಯರು 'ಇನ್ನೂ ಮಳೆಯಾದೀತು' ಎಂದು ಆಶಿಸುತ್ತಿದ್ದರು. ಆದರೆ ಆ ಮಿಂಚು ಬರೀ ಕಟ್ಟಣಕದ ನಗೆಯಾಗಿಬಿಡು ತ್ತಿತ್ತು. 'ಇನ್ನೇನು ಗತಿ? ನೀರೇ ಇ ಲ್ಲ ದಿ ದ್ದ ರೆ ನೀನಾದರೂ ಎಲ್ಲಿಂದ ತಂದು ಹಾಕುವಿ, ನಾರಪ್ಪ' ಎಂದು ರಾಯರು ಮದುವೆಗಿಂತ ಎಂಟುದಿನ ಮೊದಲು ನಾರಪ್ಪನನ್ನು ಸ ಚಿ ಂ ತ ಮುದ್ರೆಯಿಂದ ಕೇಳಿದರು. ನಾರಪ್ಪನು ತನ್ನ ಠೀವಿಯಲ್ಲಿ ಹೇಳಿದನು 'ನೀವು ಅದರ ಕಾಳಜಿ ಬಿಡಿರಿ ರಾಯರ. ಆಡದೆ ಮಾಡುವನು ರೂಢಿ ಯೊಳಗುತ್ತಮನು ಎಂದು ಸ ರ್ವ ಜ್ಞ ಹೇಳಿಲ್ಲ.' ರಾಯರು ನಿರ್ವಾಹವಿಲ್ಲದೆ ಸುಮ್ಮನಾದರು. ನಾರಪ್ಪನ ಗಾದೆಮಾತಿನ ಮುಂದೆ ಯಾವ ಮಾತೂ ಗಾದೆಯಷ್ಟು ಸುಖಕರವಾಗುತ್ತಿತ್ತು. ಆದರೆ ಈ ಹೊಸ ಸರ್ವಜ್ಞ ನೀರಿನ ದೆಸೆಯಿಂದ ಯಾವ ಸ್ಟಂಟ (ಚಮತು) ಮಾಡ ಲಿರುವನೆಂಬುದು ಅವರಿಗೆ ಗೋಚರಿಸಲಿಲ್ಲ.

ನಾರಪ್ಪನು ಮಾತ್ರ ಮುದ್ದನಹಳ್ಳಿಗೆ ಪ್ರ ತಿ ನಿ ತ್ಯ ಹೋಗುವಂತೆ ಸುತ್ತಲಿನ ಎರಡುಮೂರು ಮೈಲಿನಲ್ಲಿಯ ಹಳ್ಳಿಗಳಿಗೆ ಹೋಗಿ ಬಂದನು. ಎರಡು ಮೈಲಿನ ಮೇಲೆ ಒಂದು ದೊಡ್ಡ ಬಾವಿಯಲ್ಲಿ ಉತ್ತಮ ನೀರು ಹೇರಳ ವಾಗಿತ್ತು. ಅದೂ ರಸ್ತೆಗೆ ಹೊಂದಿ ಇರುವಂಥದು. ಇದು ಒಳ್ಳೆಯದಾಯಿತು ಎಂದು ನಾಲ್ಕು ಜೋಡೆತ್ತಿನ ಗಾಡಿಗಳನ್ನು ಹೂಡಿಸಿದನು, ತನ್ನ ಕೈಯೊಳಗೆ ಊರಲ್ಲಿ ನೀರು ಹಾಕುವ ಎಂಟು-ಹತ್ತು ಹು ಡು ಗ ರ ನ್ನು ಜಗೊಂಡನು. ನಾಲ್ಕೂ ಗಾಡಿಗಳಲ್ಲಿ ದೊಡ್ಡ ಹಂ ಗಳನ್ನೂ ಹೌದುಗಳನ್ನೂ ಇಡಿಸಿಕೊಂಡು ಬೆಳಿಗ್ಗೆ ನಾಲ್ಕು ಗಂಟೆಗೆ ಹೋಗಿ ಬೆಳಗಾಗ ಎಂಟು ಗಂಟೆಗೆ ನೀರ ತುಂಬಿ ಡಮಡಮಾಯಿಸುತ್ತ ಊರಿಗೆ ಬರುತ್ತಿದ್ದನು ಮದುವೆ ಇನ್ನೆರಡು ದಿನವಿತ್ತು. ಒಂದು ದಿನ ರಾಯರ ನೀರಿನ ಬರದ ಕೆಟ್ಟ ಕನಸು ಕಂಡು ವ್ಯಥೆಪಟ್ಟು 'ಎದ್ದು ನೋಡುತ್ತಾರೆ—ಮನೆಯಲ್ಲಿ ನೀರಿನ ಸಮೃದ್ಧಿ. ಅವರಿ ಬಹಳ ಆಶ್ಚರ್ಯವಾಯಿತು, ಭಲೆ ನಾರಪ್ಪ ಎಂದ ಪ್ರಶಂಸೆಮಾಡಿದರು. 'ಯಾರೂ ವ್ಯರ್ಥ ನೀರನ್ನು ಚೆಲ್ಲ ಕೂಡದು, ನಾ ರ ಪ್ಪ ನಿ ಗೆ ಎಷ್ಟು ಆಯಾಸವಾಗತ ತಿಳಿಕೋಬೇಕು' ಎಂದು ಸೌಮ್ಯವಾಗಿ ಎಲ್ಲ ಮ ಮುಂದಿಗೆ ಅಪ್ಪಣೆಮಾಡಿದರು. ಅದಕ್ಕೆ 'ಛೇ, ರಾಯ ನನ್ನ ಆಯಾಸಗೀಯಾಸ ನೋಡಬ್ಯಾಡರಿ. ಮದವಿ ಮನಿ ಇದು. ಮನಸಿಗೆ ಬಂದಷ್ಟು ಛೆಲ್ಲಲಿ. ಛೆಲ್ಲಿದಂ ತುಂಬತೀನಿ' ಎಂದು ಬಹಳ ಆವೇಶದಿಂದ ಹೇಳಿದನು ಎಲ್ಲರೂ ಅವನ ಕರ್ತೃತ್ವ ಶಕ್ತಿಗೆ ಬೊಟ್ಟು ಕಚ್ಚಿದರು ಆ ಸಮಾರಂಭದ ನಾ ಟ ಕ ಕ್ಕೆ ನಾರಪ್ಪನೇ ಮುಖ ನಾಯಕನಾಗಿ ಎಲ್ಲರ ಮನಸ್ಸನ್ನು ತನ್ನ ಕಡೆ ಎಳೆದ ಕೊಂಡುಬಿಟ್ಟನು.

ಮದುವೆ ವೈಭದದಿಂದ ಸಾಂಗವಾಯಿತು. ರಾಯ ಸಂತೋಷಕ್ಕೆ ಪಾರವೇ ಇಲ್ಲ. 'ಇವ ಖರೇ ನೀರಿ ನಾರಪ್ಪ' ಎಂದು ಸೇರಿದ ಜನಸಮುದಾಯವೆಲ್ಲ ನಾರಪ್ಪ ನನ್ನು ಬಾಯಿತುಂಬ ಹೊಗಳಿದರು. 'ನನ್ನ ಆಯುಷ ಸಾರ್ಥಕ ಆತು' ಎಂದು ನಾರಪ್ಪ ತ ನ್ನೊ ಳ ಹಿರಿಹಿರಿ ಹಿಗ್ಗಿದನು.

## (೪)

ಮದುವೆಯಾಗಿ ಒಂದು ತಿಂಗಳಾಯಿತು, ಮಾಸ ಲಾಣಿಯ ಹಬ್ಬ ಜರುಗಿತು. ಅಷ್ಟರಲ್ಲಿ ಒಂದೆರಡು ಮ ಬಿದ್ದು ಬಾವಿಗಳಿಗೆ ಜಲದೇವಿ ಒಲಿದಿದ್ದಳು. ನಾರಪ್ಪ ತೊಂದರೆ ಕಡಿಮೆಯಾಗಿತ್ತು. ಮದುವೆಯ ಮಂಡ ವನ್ನು ಕಿತ್ತಿದರು, ಮಾವಿನೆಲೆಗಳು ಮಂಗಲಸಮಯದಲ್ಲಿ ಶೋಭೆಯನ್ನು ಬೀರಿ ಈಗ ಒಣಗಿ ತಿಪ್ಪೆಯ ಪಾಲಾದವು ಮಾಸಲಾಣಿಯ ಮರುದಿನ ಒಂದು ಅಕಲ್ಪಿತ ಘಟ ಆಯಿತು. ಸುಶೀಲಾಬಾಯರ ನರಿಗೆ ಕಳೆದು ಹೋ ಬಿಟ್ಟಿತ್ತು. ಮಾಸಲಾಣಿಯ ದಿನವೆ ಹಲವಾರು ಹೊರಗಿ ಜನ ಊಟಕ್ಕೆ ಬಂದಿದ್ದರು. ಅಂದು ಹಾಕಿಕೊಂಡ ಸಂಜೆಯಲ್ಲಿ ದೇವರಕಟ್ಟೆಯ ಮೇಲೆ ಉಚ್ಚಿಟ್ಟು ಯಾರೊ

ಕರೆದರೆಂದು ಅವರು ಹೊರಗೆ ಹೋದರಂತೆ. ತಿರುಗಿ ಅದರ ಧ್ಯಾಸವೇ ಉಳಿಯಲಿಲ್ಲ. ಆಯಿತು, ಮರುದಿನ ಪೆಟ್ಟಿಗೆಯಲ್ಲಿ ಎಲ್ಲ ವಸ್ತ್ರ ಒಡವೆಗಳನ್ನು ಇಡುವಾಗ ಆ ಸರಿಗೆ ಇಲ್ಲವೆಂದು ತಿಳಿದು ಅವರೆದೆ ಧಸ್ಸೆಂದಿತು. ಓಡಿ ಹೋಗಿ ರಾಯರ ಮುಂದೆ ಹೇಳಿದರು. ಮನೆಯಲ್ಲಿ ಎಲ್ಲರಿಗೆ ಸುದ್ದಿ ಮುಟ್ಟಿತು. ಎಂಟು-ಹತ್ತು ತೊಲೆ ಬಂಗಾರದ ಸರಿಗೆ, ಅದು ಯಾರು ತಗೊಂಡಿರಬಹುದು ಎಂಬುದೇ ಎಲ್ಲರೂ ಕೇಳುತ್ತಿದ್ದ ಪ್ರಶ್ನೆ. ಅದರಲ್ಲಿ ದೇವರ ಕಟ್ಟಿಯಮೇಲೆ ಇಟ್ಟಂತಹದು, ಹೊರಗಿನ ಆಳುಗಳು ಯಾರೂ ಒಳಸೇರುವಂತಿಲ್ಲ. ಯಾರು ಕದ್ದಿರಬೇಕು ಎಂದು ಮನೆಯಲ್ಲಿ ಎಲ್ಲರೂ ಯೋಜನೆ ಮಾಡಲಿಕ್ಕೆ ಹತ್ತಿದರು. ಸಂಶಯವು ಅನೇಕರ ಮೇಲೆ ಹಾದಾಡಿಬಂದಿತು. ಈ ಸುದ್ದಿಯನ್ನು ಕೇಳಿ ನಾರಪ್ಪನಿಗೂ ಬಹಳ ಎಣಿಕೆ ಉಂಟಾಯಿತು. ಆದರೆ ತನ್ನ ಪದ್ಧತಿಯಂತೆ 'ಯಾಕ ಚಿಂತೀ ಮಾಡತೀರಿ, ಬಾಯರ. ನಾ ಹುಡಕಿ ಕೊಡತೀನಿ. ರಾಯರು ಚಾಷ್ಟಿಗೆ ತಗದಿಟ್ಟಿದ್ದಾರು' ಎಂದು ಬಾಯರನ್ನು ನಗಿಸಲು ಯತ್ನಮಾಡಿದನು. ಅವರೇನು ನಗುವ ಸ್ಥಿತಿಯಲ್ಲಿ ಇರಲಿಲ್ಲ. ಹೀಗೆ ಏನೂ ಪತ್ತೆ ಆಗದೆ ಎರಡು ಮೂರು ದಿನ ಆದವು. ಒಂದು ದಿನ ರಾಯರು ಮಧ್ಯಾಹ್ನದ ಊಟಕ್ಕೆ ಕುಳಿತಿದ್ದರು. ಆಗ ಸುಶೀಲಾಬಾಯರು ಅದೇ ವಿಷಯ ವನ್ನೆತ್ತಿದರು. ನಾರಪ್ಪ ತನ್ನ ದಿನಚರಿಯಂತೆ ಹಣಮಪ್ಪನ ಗುಡಿಗೆ ಹೋಗಿದ್ದನು. ಈಹೊತ್ತು ಸಾಧಿಸಿ ಬಾಯರು ಹೇಳಿದರು 'ನನಗ ಅನಸೂದಂದರ ಮನ್ಯಾಗಿಂದು ಎಲ್ಲಾ ಮಾಹಿತಿ ಇದ್ದವರs ಅದನ್ನ ತಗೊಂಡಾರ.' 'ಅಂದರ ಯಾರು?' ರಾಯರು ಕೇಳಿದರು. ಅದಕ್ಕೆ ಸರಳವಾಗಿ ಉತ್ತರಕೊಡದೆ 'ನಿಮ್ಮ ಅತಿ ವಿಶ್ವಾಸಕ್ಕ ಪಾತ್ರ ಆದವರು' ಎಂದು ಬಾಯರು ಅಡಿದರು. 'ಹಾ ಅವರ್ಯಾರು?' ಎಂದು ರಾಯರು ಗದ್ದರಿಸಿ ಕೇಳಿದರು. 'ಮತ್ಯಾರು?' ಎಂದು ಬಾಯಿಯವರು ಹೇಳುವ ಹೊತ್ತಿಗೆ ದುರ್ದೈವದಿಂದ ನಾರಪ್ಪನು ಮನೆಗೆ ಬಂದು ಹೊರಗೆ ನಡುಮನೆಯಲ್ಲಿ ಕುಳಿತನು. ಅದು ಬಾಯರಿಗೆ ಗೊತ್ತಾಗಲಿಲ್ಲ. 'ನಾರಪ್ಪ, ನಿಮ್ಮ ನಂಬಿಗಸ್ತ ನಾರಪ್ಪ' ಎಂದು ಹೀಯಾಳಿಕೆಯ ದನಿಯಲ್ಲಿ ಅವಳು ಹೇಳಿದ್ದು ಕಿವಿಗೆ ಬಿದ್ದೊಡನೆ ನಾರಪ್ಪ ಚಕ್ಕಾಗಿ ಇದೇನು ಪ್ರಸಂಗವೆಂದು ಲಕ್ಷ್ಯಕೊಟ್ಟು ಕೇಳಹತ್ತಿದನು. ರಾಯರೂ ದಿಕ್ಕೆಟ್ಟು ಹೋಗಿ 'ಏನು ನಮ್ಮ ನಾರಪ್ಪ ತಗೊಂಡನ? ನಿನ್ನ ತಲಿ ಕೆಟ್ಟsದ' ಎಂದು ಒದರಾಡಿದರು. ಅದಕ್ಕೆ ಸುಶೀಲಾಬಾಯರು ಅಳುಮೋರೆ ಮಾಡಿ 'ಹೌದು, ನನ್ನ ತಲೀನs ಕೆಟ್ಟsದ. ಎಲ್ಲಾ ನನ್ನದs ತಪ್ಪು. ಅಲ್ಲ, ಅವತ್ತ ಇಲ್ಲೇ ದೇವರ ಕಟ್ಟಿಮ್ಯಾಲೆ ಸರಿಗಿ ಇಟ್ಟು ನಾ ಹೊರಗ ಹೋದಾಗ ನಾರಪ್ಪ ಇಲ್ಲೇ ನೀರ ತುಂಬತಿದ್ದ.' ಎಂದು ಮುಂತಾಗಿ ಪೂರ್ವಗ್ರಹ ದೂಷಿತವಾದ ಪ್ರಮಾಣಗಳನ್ನು ವರ್ಣಿಸಿದರು. 'ಸಾಕು ನಿನ್ನ ಮಾತು' ಎಂದು ರಾಯರು ಕೋಪಿಸಿಕೊಂಡು ತಮ್ಮ ಕೋಣೆಗೆ ಹೊರಟರು. ಅಷ್ಟರಲ್ಲಿ ಆ ಮಾತೆಲ್ಲ ಕೇಳಿ ಕಾದ ಕೆಂಡವಾಗಿ ನಾರಪ್ಪ ಹಿತ್ತಲ ಸೇರಿದ್ದನು. ಒಮ್ಮಿಂದೊಮ್ಮೆಲೆ ಅವನಿಗೆ ನೂರುಸಿಡಿಲು ಬಡಿದಂತಾಯಿತು. ತನ್ನ ಬಗ್ಗೆ ಯಾವ ಮನೆಯಲ್ಲಿ ಎಂಥ ಮಾತು ಆಡಿದರಲ್ಲ ಎಂದು ಅವನು ಬಹಳ ಕಳವಳಪಟ್ಟನು. ಮುಂದೆ ಎಷ್ಟೊತ್ತಿನ ಮೇಲೆ ತನ್ನ ಖೋಲಿಗೆ ಹೋಗಿ ಮುಸುಕುಹಾಕಿ ಮಲಗಿಬಿಟ್ಟನು. ಬಾಯರು ಆಳುಮನುಷ್ಯನನ್ನು ಕಳಿಸಿ ಊಟಕ್ಕೆ ಎಬ್ಬಿಸಿದರು, ಮೈಯಲ್ಲಿ ನೆಟ್ಟಗಿಲ್ಲ ಊಟವೊಲ್ಲೆನೆಂದು ತಿಳಿಸಿದನು. ಅದನ್ನು ಅವರು ವಿಪರೀತವಾಗಿಯೆ ತಿಳಿದರು. 'ಯಾಕ ಉಂಡಾನು, ದೆವ್ವನಂಥ ಸರಿಗಿ ಸಿಕ್ಕsದ, ಆಡಿದವರು ನಾವs ಮೂರ್ಖರಾಗತೀವಿ' ಎಂದು ಗೊಣಗುಟ್ಟಿದರು. ಅಂದು ರಾತ್ರಿಯೆಂದರೆ ನಾರಪ್ಪನ ಆಯುಷ್ಯದಲ್ಲಿ ಕಾಳರಾತ್ರಿಯೇ ಸರಿ. ಒಂದು ನಿಮಿಷ ಕಣ್ಣಿಗೆ ಕಣ್ಣು ಹಚ್ಚದೆ ಒದ್ದಾಡಿದನು, ವಿಚಾರ ಮಾಡಿ ಮಾಡಿ ಒಂದು ಘೋರವಾದ ನಿರ್ಧಾರವನ್ನು ಮಾಡಿದನು. ಬೆಳಗಾಯಿತು, ನಾರಪ್ಪನು ರಾಯರ ಕೋಣೆಗೆ ಹೋಗಿ 'ರಾಯರ, ಅಪ್ಪಣಿ ಕೊಡರಿ' ಎಂದು ಒಮ್ಮೆಲೆ ಅಂದುಬಿಟ್ಟನು. ಇದೇನು ಸೋಜಿಗವೆಂದು ಅವರು 'ಯಾವದಕ್ಕೆ?' ಎಂದರು. 'ಹೋಗಲಿಕ್ಕೆ' ಎಂದು ಉತ್ತರ ಬಂದಿತು. ರಾಯರು ಇದೇನೊ ಲಕ್ಷಣ ಚೆನ್ನಾಗಿಲ್ಲ ಎಂದು ಅವನನ್ನು ಕೂಡಿಸಿಕೊಂಡು ಮಾತಾಡಿಸಿದರು. ಏನೂ ಕಾರಣ ಹೇಳದೆ, ತನಗೆ ಹೋಗಗೊಡಬೇಕೆಂದು ನಾರಪ್ಪ ಅಂಗಲಾಚಿ ಬೇಡಿಕೊಂಡನು. ಬೇಡವೆಂದು ರಾಯರು ಪಟ್ಟುಹಿಡಿದರು. ತನಗೆ ಕಳವಿನ ಅಪವಾದ ಬಂದಕಾರಣ ಅವನು ಹೋಗುತ್ತಿರಬಹುದೆಂದು ತಿಳಿದು ರಾಯರು ಅದನ್ನೆಲ್ಲ ಹಚ್ಚಿಕೋಬ್ಯಾಡ, ನಾ ಇದ್ದೀನಿ' ಎಂದು ಆಶ್ವಾಸನ ಕೊಟ್ಟರು. ಹೀಗೆ ೩ ೪ ದಿನ ಹೋದವು. ಸುಶೀಲಾಬಾಯರು ಸಹ ಲೌಕಿಕಕ್ಕಾಗಿ ಹೋಗಬೇಡೆಂದು ಅವನಿಗೆ ಚಾಲೊತ್ತು ಹ್ಯೇಳಿ

ದರು. ನಾರಪ್ಪನಿಗೆ ಹನ್ನೆರಡು ವರುಷ ಯಾವ ಮನೆ ತನ್ನ ಮನೆ ಆಗಿತ್ತೊ ಅದು ಈಗ ತನ್ನನ್ನು ಹೀಗಳೆದ ಹೆರವರ ಮನೆ ಆಗಿ ಎದ್ದು ಒಡಿಯಹತ್ತಿತು. ಕಡೆಗೆ ಒಂದು ದಿನ ಬೆಳಿಗ್ಗೆ ತನ್ನ ಸಾಮಾನು ಕಟ್ಟಿಕೊಂಡು ರಾಯರ ಹತ್ತಿರ ಹೋಗಿ 'ರಾಯರ, ದಯಮಾಡಿ ಇನ್ನ ತಡಿಬ್ಯಾಡ್ರಿ ನನ್ನ, ನಾ ಸಂತೋಷದಿಂದ ಹೋಗತೇನಿ. ನಿಮ್ಮ ಅಂತಃಕರಣದ ಶಿಶು ಆಗಿ ಇಷ್ಟು ದಿನ ಇದ್ದೆ, ಸಾಕು, ರಾಮುಗ ಹನ್ನೆರಡು ವರುಷ ವನವಾಸ ಆದರ ನನಗ ನಿಮ್ಮ ಸಹವಾಸ ಆತು, ಅದಃ ನನ್ನ ಪುಣ್ಯ, ಎಂದು ಸಾಷ್ಟಾಂಗನಮಸ್ಕಾರ ಹಾಕಿ ಅಪ್ಪಣೆ ಪಡೆದನು. ರಾಯರು ಬಾಗಿದ ಅವನ ಮೈಮೇಲೆ ಕಂಬನಿಗರೆದು ಕಂಠ ವುಬ್ಬಿಸಿ 'ಒಳ್ಳೇದವ, ಹೋಗಿ ಬಾ, ಕಳದ ಸರಗಿ ಸಿಕ್ಕೀತು, ನಾರಪ್ಪ, ನೀ ಹೆಂಗ ಸಿಕ್ಕೀ? ಎಂದರು. ನಾರಪ್ಪನು ಒಳಗೆ ಹೋಗಿ ಸುಶೀಲಾಬಾಯರನ್ನೂ ಅತ್ತೆಯವರನ್ನೂ ವಂದಿಸಿ 'ನಿಮ್ಮ ಆಶೀರ್ವಾದ ಇರಲಿ. ಮಾರುತಿ ರಾಯ ಸೀತಾದೇವಿ ಸೇವಾಮಾಡಿದಂಗ ನಿಮ್ಮದು ಮಾಡೀನಿ. ಏನಾದರೂ ತಪ್ಪಾಗಿದ್ದರ ಹೊಟ್ಟಾಬ್ಯಗ ಹಕ್ಕೊಳ್ಳರಿ' ಎಂದು ಹೊರಟನು. ತಾನು ಜೋಪಾನ ಮಾಡಿದ ಹುಡುಗರನ್ನು ಉಬ್ಬಿದ ಕುತ್ತಿಗೆ ಸಿರದಿಂದ ಬೀಳ್ಕೊಂಡನು. ಅವೆರಡೂ ಹೊಯ್ಯೆಂದು ಅತ್ತವು. ನಾರಪ್ಪ ತನ್ನ ಸಾಮಾನಿನ ಹಸಿಬೆಯನ್ನು ಹೆಗಲಿಗೆ ಹಾಕಿ ಮನೆಯ ತಲೆಬಾಗಿಲನ್ನು ದಾಟಿದನು. ನೆರೆಹೊರೆಯ ಜನ ನೋಡಿ ಕೊರಗಿದರು. ಅದರಲ್ಲಿ ಒಬ್ಬ ಕೇಳಿದ 'ಎಲ್ಲಿಗೆ ಹೊಂಟಿ ನಾರಪ್ಪ?' 'ಎಲ್ಲಿಗೆ? ಎಲ್ಲಿಂದ ಬಂದೆ ಅಲ್ಲಿಗೆ. ಕಟ್ಟೀಕಲ್ಲು ಕಟ್ಟಿಗೆ ಕೂತಿತು. ಹಳ್ಳೀ ಕೋತಿ ಶಾರದೂರಿಗೆ ಬಂದರ ಹುಳ್ಳೀಕಟಿಗಿಲೆ ಹೊಡ ದಟ್ಟಿದರಂತ.' ಎಂದು ನಗೆಯಾಡಿ ನಾರಪ್ಪ ನಡೆದನು. ಊರ ತುದಿಯವರೆಗೆ ಅವನನ್ನು ಜನ ಗುಂಪುಗಟ್ಟಿ ಕಳಿಸಲು ಹೋದರು. ಅವನ ನಗೆಮಾತಿಗೆ ಇನ್ನೂ ಕೂಡ ತಡೆಯಿರಲಿಲ್ಲ. ಆದರೆ ಈಗ ಆ ಮಾತು ನಗೆಯನ್ನೂ ನೋವನ್ನೂ ಕೂಡಿಯೆ ಹುಟ್ಟಿಸುತ್ತಿತ್ತು.

ನಾರಪ್ಪ ಹೋದ ದಿನ ಸುಶೀಲಾಬಾಯಿಯವರು ಹೊಟ್ಟೆತುಂಬ ಊಟಮಾಡಿದ್ದರೂ ಮಾಡಿರಬಹುದು, ಆದರೆ ಮುದ್ದಬ್ಬಿಹಳ್ಳಿಯಲ್ಲಿಯ ಒಂದು ಪಿಳ್ಳೆಯೂ ಸುಖದಿಂದ ಉಣ್ಣಲಿಲ್ಲ.

—ರಂ. ಶ್ರೀ. ಮುಗಳಿ


ಬೇಗನೆ ಪ್ರಕಟವಾಗುವದು

# ರುದ್ರವೀಣೆ

ಕರ್ನಾಟಕದ ರಾಜಕೀಯ ಜೀವನ ಪ್ರಪಂಚದಲ್ಲಿ **ರುದ್ರವೀಣೆ**ಯನ್ನು ಮಿಡಿದು **ರೌದ್ರಭೀಷಣ** ರಸವನ್ನು ಸೂರೆಗೊಂಡ ಕನ್ನಡ ಕಲಿಗಳ ಅಪೂರ್ವ, ರಹಸ್ಯಮಯ ರೋಮಾಂಚಕಾರಕ ಕಥೆಗಳನ್ನು ಇಲ್ಲಿ ಓದಿ ಸೋಜಿಗಗೊಳ್ಳುವಿರಿ. ಈ ಕಥೆಗಳು ಎಲ್ಲಿಯೂ ಪ್ರಕಟವಾಗಿಲ್ಲ. ತೀವ್ರ ಬೆಳಕಿಗೆ ಬರುತ್ತವೆ.

ವಿಂಚಿದ ಮಹಿಳೆಯರ ಗ್ರಂಥಕರ್ತರೇ **ಶ್ರೀ. ದೇಸಾಯಿ ಪಾಂಡುರಂಗರಾಯರು** ಎಂ. ಎ. ಇದನ್ನು ಬರೆದಿದ್ದಾರೆ.

ಪ್ರಕಾಶಕ
**ಶಿಕ್ಷಣ ಸಾಹಿತ್ಯಮಾಲಾ**
**ಮುಂಗಳವಾರಪೇಟೆ, ಧಾರವಾಡ**

# ಚೆಲುವಿನ ಹೊಸತನ

ಯಾವ ಪರಂಪರೆಯನ್ನೂ ಅರಿಯದೆ ಬ್ರಹ್ಮಜಿಜ್ಞಾಸೆಯೊಂದು ಮನದಲ್ಲಿ ಜಾಗೃತವಿರಲು ನಮ್ಮ ಅನುಭವದ ಪರಂಪರೆಯನ್ನೇ ಕಟ್ಟಿ ಜೀವನವನ್ನು ನಾವು ಹಿರಿದಾಗಿಸ ಬಹುದ್ದು. ಇದನ್ನು ಶೆಲ್ಲಿ ಕವಿಯು ಸಾಧಿಸಿ ತೋರಿಸಿದ. ಭಾರತದಲ್ಲಿ ಹುಟ್ಟಿ ಬೆಳೆದಿದ್ದರೆ ಶೆಲ್ಲಿಯು ಉತ್ತಮ ಶಂಕರಾದ್ವೈತಿಯಾಗುತ್ತಿದ್ದ. ಆದರೆ ಕಾಂಟ್ ಮೊದಲಾದವರ ತತ್ವಜ್ಞಾನವನ್ನೂ ವರ್ಡ್ಸ್‌ವರ್ತ್ ಹಾಗು ಕೋಲರಿಜ್‌ರ ಕಾವ್ಯವನ್ನೂ ಬಿಟ್ಟರೆ ಆತ್ಮೋನ್ನತಿಯ ಹಾದಿಯಲ್ಲಿ ಅವನಿಗೆ ಬೇರೆ ಸಾಧನೆಗಳೇನೂ ದೊರೆಯಲಿಲ್ಲ. ಎಲ್ಲರೂ ಉಪಯೋಗಿಸುವ 'ದೇವರು' (God) ಎಂಬ ಶಬ್ದವು ಬರಿ ಭ್ರಮೆಯೆಂದು ಶೆಲ್ಲಿಯು ಸಾರಿದ. ಆದರೆ ಶೆಲ್ಲಿಗಿಂತ ಹೆಚ್ಚಿನ ದೇವಭಕ್ತರು ಸಿಗುವದು ವಿರಳ. ಮದುವೆಯೆಂಬುದು ಸಮಾಜವು ಹೂಡಿದ ಅನ್ಯಾಯದ ಸಂಸ್ಥೆಯೆಂದು ಶೆಲ್ಲಿಯು ಅಭಿಪ್ರಾಯಪಟ್ಟ. ಆದರೆ ಪ್ರೇಮದಲ್ಲಿ ಅವನು ಕಂಡ ಆದರ್ಶಮಯತೆಯು ಇನ್ನೂ ಅನೇಕರಿಗೆ ದಾರಿದೀಪವಾಗಿದೆ. 'ಅರಸ'ನೆಂಬ ದೂಷಣಾರ್ಹವಾದ ಅಂಕಿತವನ್ನು ಸ್ವತಂತ್ರವಾದ ಜನತೆಯು ಮಣ್ಣುಗೂಡಿಸ ಬೇಕೆಂದು ಅವನ ಮತವಾಗಿತ್ತು. ಆದರೆ ಮಾನವ ಜಾತಿಯು ಹೇಗೆ ದೈವಿಕವಾಗಬೇಕಾಗಿದೆಯೆಂಬುದನ್ನು ತನ್ನ ಉದಾಹರಣೆಯಿಂದ, ತನ್ನ ಕಾವ್ಯದಲ್ಲಿಯ ಪುರುಷ-ವನಿತೆಯರ ಉದಾಹರಣೆಯಿಂದ, ಶೆಲ್ಲಿಯು ಜಗತ್ತಿಗೆ ತೋರಿಸಿದ.

ಸುಮಾರು ನೂರು ವರ್ಷಗಳ ಹಿಂದೆ ಬಾಳಿ ಶೆಲ್ಲಿಯು ಬರೆದ ಕವನಗಳು ಇಂದಿಗೂ ಅನುಭವದ ಹೆದ್ದಾರಿಯಾಗಿವೆ. ಪರಂಪರೆಯಿಲ್ಲದ ಅನುಭವವನ್ನೇ ಶೆಲ್ಲಿಯು ಒಂದು ಪರಂಪರೆಯಾಗಿ ಕಟ್ಟಿದ. 'ಪಡುವಣದ ಗಾಳಿಗೆ' ಎಂಬ ಕವನದಲ್ಲಿ ಮರುತನನ್ನು; 'ಎಪಿಸಾಯಿಡಿಯನ್' ಎಂಬಲ್ಲಿ ಅಮರ ಪ್ರೇಮವನ್ನು; 'ಎಲ್ಯಾಸ್ಟರ್' ಎಂಬಲ್ಲಿ ಸೌಂದರ್ಯೋಪಾಸನೆಯನ್ನು; 'ಎಡೊನಿಸ್' ಎಂಬ ಕವಿತೆಯಲ್ಲಿ ಐಕ್ಯಸ್ಥಲವನ್ನು; 'ಪ್ರಮೀಥಿಯಸ್ ಅನ್‌ಬೌಂಡ್' ಎಂಬ ಕಾವ್ಯನಾಟಕದಲ್ಲಿ ದೇವಮಾನವ ಜಾತಿಯ ಉದಯವನ್ನು: ಹೀಗೆ ಅನೇಕ ಪರಿಗಳನ್ನು ಬಿಚ್ಚಿ ಕಂಡು ಗುರುತಿಸಿ ಶೆಲ್ಲಿಯು ಅವುಗಳನ್ನೆಲ್ಲ ಸವಿಯಾಗಿ ಹಾಡಿದ.

"ಸಣ್ಣವನಿದ್ದಾಗ ನಾನು ಪಿಶಾಚಿಗಳ ಬೆನ್ನು ಹತ್ತಿದ್ದೆ. ಗುಹೆ-ಗಂಹರಗಳಲ್ಲಿಯೂ ಹಾಳುಬೀಳುಗಳಲ್ಲಿಯೂ ಚಿಕ್ಕೆ ಬೆಳಕಿನ ಅಡವಿಗಳಲ್ಲಿಯೂ ಅಂಜುತಂಜುತ್ತ ಮೃತರಾತ್ಮಗಳೊಡನೆ ಮಾತನಾಡಲು ದೊರೆಯಬಹುದೆಂಬ ಹಿರಿಯಾಸೆಯಿಂದ ನಾನು ಹುಡುಕಾಡಿದೆ. ನನ್ನು ತಾರುಣ್ಯವನ್ನು ವೋಷಿಸುವ ವಿಷ ನಾಮಗಳನ್ನೆಲ್ಲ ಉಚ್ಚರಿಸಿ ನೋಡಿದೆ. ನನ್ನ ಕರೆಯೆಲ್ಲ ಅರಣ್ಯಧ್ವನಿಯಾಯಿತು ಅವು ನನಗೆ ಕಾಣಲಿಲ್ಲ. ಆಗ—ಬಾಳುವೆಯ ಸುಖ-ದುಃಖಗಳನ್ನು ಕುರಿತು ಆಳವಾಗಿ ಧ್ಯಾನಿಸುತ್ತಿರುವಾಗ—ಹೂ ಹಕ್ಕಿಗಳ ಸುದ್ದಿ ಬೀರುವ ಪ್ರಾಣವಾಯುಗಳಿಗೆಲ್ಲ ಮರುತರು ಒಲಿಯುತ್ತಿರುವಾಗ,— ಒಮ್ಮೆಲೆ ನಿನ್ನ ನೆಳಲು ಬಿದ್ದಿತು ನನ್ನ ಮೇಲೆ! ಆಗ ನಾನು ಉನ್ಮಾದದಿಂದ ಕೈ ಜೋಡಿಸಿದೆ, ಚೀರಾಡಿದೆ!" ಎಂದು ಶೆಲ್ಲಿಯು ತಾನು ಕಂಡ ಸೌಂದರ್ಯವನ್ನು ಸಂಬೋಧಿಸುತ್ತಾನೆ. "ಮಾನವೀಯ ರೂಪ-ಗುಣಗಳನ್ನೆಲ್ಲ ನಿನ್ನ ಒಣ್ಣಗಳಿಂದ ನೀನು ಪವಿತ್ರವಾಗಿಸುವಿ. ಓ! ಸೌಂದರ್ಯವೆ! ನೀನು ಮರೆಯಾಗುವದೇಕೆ? ಮರೆಯಾಗಿ ಕಣ್ಣೀರಿನ ಕಂದರದಂತಿದ್ದ ನಮ್ಮ ಜಗತ್ತನ್ನು ಹಾಳುಬೀಳಾಗಿಸುವದೇಕೆ?" ಎಂದು ಸೌಂದರ್ಯದಧಿದೇವತೆಯನ್ನು ಪ್ರಶ್ನಿಸುತ್ತಾನೆ. "ನಾನು ಸಂತತವಾಗಿ ನಿನ್ನನ್ನೇ ಪ್ರೀತಿಸಿದ್ದೇನೆ; ನಿನ್ನೊಬ್ಬಳನ್ನೇ ಒಸೆದಿದ್ದೇನೆ" ಎಂದು ತನ್ನ ಹೃದಯವನ್ನು ತೆರೆದು ತೋರಿಸುತ್ತಾನೆ.

ಒಮ್ಮೆ ಶೆಲ್ಲಿಗೆ ಸೌಂದರ್ಯದರ್ಶನವಾಯಿತು. ಇದನ್ನು ಆತನು ತನ್ನ "ಎಲ್ಯಾಸ್ಟರ್" ಎಂಬ ಕವಿತೆಯಲ್ಲಿ ಬಣ್ಣಿಸಿದ್ದಾನೆ: "ಮುಸುಕು ಹೊತ್ತ ಮಾಯಾಂಗನೆಯೊಬ್ಬಳು ಗಂಭೀರ ಧ್ವನಿಯಲ್ಲಿ ಮೆಲ್ಲನೆ ಮಾತನಾಡುತ್ತ ತನ್ನ ಹತ್ತಿರ ಕುಳಿತಂತೆ ಕವಿ ಕನಸು ಕಂಡ ಸಮಾಧಿವರವಾದ ವಿಚಾರದ ಶಾಂತಿಯಲ್ಲಿ ಕೇಳಿಸಿದ ತನ್ನಾತ್ಮದ ಧ್ವನಿಯಂತೆಯೇ ಅವಳ

ಧ್ವನಿಯಿದ್ದಿತು. ಗಾಳಿ-ಕಾಳ್ಪುರಗಳ ಮೇಳದಸಿಯಂತೆ ಅದರ ಸಂಗೀತಾಲಾಪವಿದ್ದಿತು. ಚಣಕ್ಕೊಮ್ಮೆ ಮಾರ್ಪಡುವ ಬಣ್ಣಬಣ್ಣಗಳುಳ್ಳ ಅದರ ಜಾಲದಲ್ಲಿ ಕವಿಯ ಅಂತರಾತ್ಮವು ಸಿಕ್ಕು ನೇತಾಡಹತ್ತಿತು. ಕವಿಗೆ ಪ್ರಿಯತಮವಾದ ವಿಚಾರಗಳನ್ನೇ ಆ ಲಲನೆಯು ಸಂಗೀತಿಸಿದಳು. ಜ್ಞಾನ, ಸತ್ಯ, ಶೀಲ, ದೈವಿಕ ಸ್ವಾತಂತ್ರ್ಯದ ಬಗ್ಗೆ ತಳೆದ ಉತ್ಕಂಠೆ, ಕಾವ್ಯ,—ಇವನ್ನೆಲ್ಲ ಕವಯಿತ್ರಿಯಾಗಿಯೇ ಆಕೆ ಹಾಡಿದಳು. ಒಡನೆ ಆಕೆಯ ಪವಿತ್ರ ಮನಸ್ಸಿನ ಗಂಭೀರ ಲಹರಿಯಿಂದ ಆಕೆಯ ಮೈಕಟ್ಟಿನ ತುಂಬೆಲ್ಲ ಮಹಾಜ್ವಾಲೆಯೊಂದು ಪ್ರಜ್ವಲಿಸಿತು. ಆಗ ಆಕೆಯ ಆಕ್ರೋಶವು ಹಿರಿದಾಯಿತು. ದೈನ್ಯದಿಂದ ಆಕೆಯ ವಾಣಿ ಜೋಲಿಹೊಡೆದು ಅನುಕಂಪಿಸಿತು, ಬಿಕ್ಕುಗಳಲ್ಲಿ ಮುಗ್ಗರಿಸಿತು. ವಸ್ತ್ರಾಭರಣವಿಲ್ಲದ ಆಕೆಯ ಕೈಗಳು ಅದಾವುದೋ ಒಂದು ವೀಣೆಯಿಂದ ಹೃದಯದ್ರಾವಕ ಸಂಗೀತವನ್ನು ನುಡಿಸುತ್ತಿದ್ದವು. ಆ ವೀಣೆಯ ದೇಹದಲ್ಲೆಲ್ಲ ಟಿಸಿಲೊಡೆದ ನಾಳನಾಳಗಳಂಥ ತಂತಿಗಳಲ್ಲಿ ವಾಚಾಮಗೋಚರವಾದ ಕಥೆಯೊಂದನ್ನು ಸಂಗೀತರಕ್ತವು ಹೊಗೆಹೊಮ್ಮಿಸುತಿತ್ತು. ಸಂಗೀತವು ನಿಂತಾಗ ಅವಳ ಹೃದಯದ ಚಲನವಲನವು ಕೇಳಿಸುತಿತ್ತು. ಆ ಚಲನವಲನದೊಡನೆ ಶೋಕಾನ್ವಿತ ಧ್ವನಿಯು ಆಲಾಪಿಸುತಿತ್ತು. ತುಂಬಿ ತಡೆಯಲಾಗದ ಭಾರದಿಂದ ಹೃದಯವು ತಳಮಳಿಸುವುದೇನೋ ಎಂಬಂತೆ ಆ ತರುಣಿಯು ಒಮ್ಮೆಲೆ ಎದ್ದು ನಿಂತಳು. ಒಡನೆ ಕವಿಯು ಹೊರಳಿ ನೋಡಿದನು; ಹೊದಿಕೆಯಿಲ್ಲದೆ ಮುಂದೆ ಚಾಚಿದ ಅವಳ ನಿಡಿದೋಳ್ಗಳು ರಾತ್ರಿಯುಸಿರಾದ ಗಾಳಿಯಲ್ಲಿ ತೇಲುವ ಅವಳ ನೀಲ ಕೇಶಕಲಾಪಗಳು, ಕಿರಣಗಳನ್ನು ಸಂಕಲಿಸಿ ತನ್ನನ್ನೇ ನೋಡುವ ಕಣ್ಣುಗಳು, ಮುಂದು ವರಿದಗಲ್ದು ನಿಸ್ತೇಜವಾಗಿ ಉತ್ಸುಕತೆಯಿಂದ ಕಂಪಿಸುವ ತುಟಿಗಳು,— ಗಾಳಿಗೆ ಮಣಿಯುವ ಮುಸುಕಿನ ಕೆಳಗೆ ಪ್ರಾಣದ ಸ್ವಯಂಜ್ಯೋತಿಯಿಂದ ಹೊಳೆಯುವ ಅವಳ ಈ ಕಾಂತಿಯುತ ಅವಯವಗಳನ್ನೆಲ್ಲ ಕವಿಯು ನೋಡಿದನು. ಪ್ರೇಮಾತಿಶಯದಿಂದ ಅವನ ಬಲಿಷ್ಠ ಹೃದಯವು ಕುಸಿಯಿತು, ಗಾಸಿಯಾಯಿತು. ಕಂಪಿಸುವ ತನ್ನ ಅವಯವಗಳನ್ನೆತ್ತಿ, ತೇಂಕುವ ಉಸಿರನ್ನು ತಡೆದು ಬಿದ್ದೇಳುವ ಅವಳೆದೆಯನ್ನಪ್ಪಲು ಕವಿಯು ತನ್ನ ತೋಳುಗಳನ್ನು ಚಾಚಿದನು....ಲಲನೆಯು ಒಂದರ್ಧ ನಿಮಿಷ ಹಿಂದೆ ನರಿದಳು. ಮುಂದೆ ನಿರ್ಬಂಧವರಿಯದ ಆನಂದಲಹರಿಗೊಳಗಾಗಿ ಉನ್ಮಾದಿನಿಯಂತೆ ಕೈಯೆತ್ತಿ ಉಸಿರು ಸಿಕ್ಕುಂತೆ ನರಳಿ ಅವನ ದೇಹವನ್ನು ತನ್ನ ತೋಳುಗಳಿಂದ ಬಂಧಿಸಿದಳು— ಆ ಕತ್ತಲೆಯು ಕವಿಯ ಕಂಗಳನ್ನು ಮುತ್ತಿತು. ರಾತ್ರಿಯು ಆ ದರ್ಶನವನ್ನು ಸುತ್ತಿ ನುಂಗಿಬಿಟ್ಟಿತು. ತಡೆಗಟ್ಟಿದ ಕಾಳಪ್ರವಾಹದಂತೆ ನಿದ್ದೆಯು ಅವನ ಶೂನ್ಯ ಮುಸ್ತಿಷ್ಕದ ಮೇಲೆ ಅಪ್ಪಳಿಸಿತು".

ಇದೇ ಸೌಂದರ್ಯ ಸಾಕ್ಷಾತ್ಕಾರ. ಶೆಲ್ಲಿಯು ತ ಕಣಸನ್ನು ತನ್ನ ಆಯುಷ್ಯದಲ್ಲೆಲ್ಲ ನೆನಸಿದನು. ಅದರಲ್ಲಿ ಮೂರು ಪರಿಗಳನ್ನು ಕಾಣಬಹುದು. ವಿಶ್ವವನ್ನೆಲ್ಲ ತುಂಬಿದ ಶಕ್ತಿಯೇ ಸೌಂದರ್ಯ; ಜಾಗೃತವಾದ ತನ್ನ ಆತ್ಮವೇ ಸೌಂದರ್ಯ; ಪ್ರೀತಿಯು ಗುರುತಿಸಿದ ಗೆಳತಿಯ ಆತ್ಮವೇ ಸೌಂದರ್ಯ; ಈ ಮೂರು ವಿಧಾನಗಳೂ ಶೆಲ್ಲಿಯು ಮನವನ್ನು ಸೆಳೆದವು. ಗೆಳತಿಯ ಆತ್ಮವು ತನ್ನ ಆತ್ಮದಲ್ಲಿ ಲೀನವಾದರೆ ತನ್ನ ಆತ್ಮವು ವಿಶ್ವಾತ್ಮದಲ್ಲಿ ಲೀನವಾಗುತ್ತಿತ್ತು. ಈ ವಿಶ್ವಾತ್ಮದೊಡನೆ ಸಮರಸವಾಗುವದೇ ಮುಖ್ಯವಾದ ಮಾತು. ಅದರಲ್ಲಿ ಉಳಿದವು ಅಡಕವಾಗುತ್ತವೆ. ಈ ಸಾಮರಸ್ಯವನ್ನು ಸಾಧಿಸಲು ಮರಣವೇ ದಾರಿಯೆಂದು ಶೆಲ್ಲಿಯು ತಿಳಿದಿದ್ದ. ಅಂತೇ ಆತನು ಮರಣಕ್ಕೆ ಮನಸೋತಿದ್ದ. "ನೀನಾವುದನ್ನು ಅರಸುತ್ತ ಅಲೆದಾಡುವಿಯೋ ಅದರೊಡನೆ ಹೊಂದಿರುವಾಸೆಯಿದ್ದರೆ,— ಮರಣವನ್ನು ಶರಣು ಹೋಗು" ಎಂದು **ಎಡೊನಿಸ್** ಎಂಬ ಕವಿತೆಯಲ್ಲಿ ಶೆಲ್ಲಿಯು ಹೇಳಿದ್ದಾನೆ.

ಸೌಂದರ್ಯದ ಅಮರಶಿಲ್ಪವೆಲ್ಲ ಶೆಲ್ಲಿಗೆ ಪ್ರಕೃತಿಯಲ್ಲಿ ಕಾಣುತ್ತದೆ. ಬಾನಾಡಿಯು ಬರಿ ಹಕ್ಕಿಯಲ್ಲ; ಅದೊಂದು ಜೈತನ್ಯ. ನಮಗೆ ಗೊತ್ತಿರದ ಆನಂದದ ರಹಸ್ಯವು ಈ ಹಕ್ಕಿಗೆ ಗೊತ್ತಿದೆ. ಇಂಥ ಆನಂದೋರ್ಮಿಗಳೇ ಅದರ ಹಾಡಾಗಿವೆ. ಪ್ರೀತಿ ಇಲ್ಲವೆ ಮದ್ಯಪಾನದಿಂದ ಇಂಥ ದೈವಿಕ ಆನಂದ ಗೀತಗಳು ಹುಟ್ಟಲಾರವು. ಹಕ್ಕಿಯ ಹಿಗ್ಗಿನ ಅರ್ಧದಷ್ಟು ಹಿಗ್ಗು ನಮ್ಮದಾದರೆ ಜಗತ್ತೇ ಮರುಳಾಗಿ ನಮ್ಮ ಗೀತಗಳನ್ನು ಕೇಳಬಹುದು! ಪ್ರಕೃತಿಯಲ್ಲಿ ಸೌಂದರ್ಯವು ಮಲಿನವಾಗದೆ ಸಂಪೂರ್ಣವಾಗಿ ಪ್ರಕಟವಾಗಿದೆ. ಮಾನವನ ಮನಸ್ಸಿನಲ್ಲಿ ಮಾತ್ರ ಅದರ ಮೇಲೆ ಮತ್ತೆ ಬೇರೆ ಪರಿಗಳು ಬೆಳೆದಿವೆ.

ಇದೇ ಪ್ರಕಾರ, ಬ್ಲಾಂಕ್ ಪರ್ವತವು ಬರಿ ಪರ್ವತವಲ್ಲ. ಮುಗಿಲಿನ ಅನಂತವಾದ ಗುಮ್ಮಟಕ್ಕೆ ತ್ರಿಕಾಲಾಬಾಧಿತ ಶಾಸನದಂತಿರುವ ಶಕ್ತಿಯು ಅದರಲ್ಲಿ ನೆಲಸಿರುತ್ತದೆ. ಎಲ್ಲ ವಿಚಾರಕ್ರಮವೂ ಅದರ ಅಂಕಿತಕ್ಕೆ ಒಳಪಟ್ಟಿದೆ. ಇದ್ದುದರಲ್ಲೆಲ್ಲ ವಾಸವಾಗಿರುವ ಗುಪ್ತಶಕ್ತಿಯೇ [illegible]

ಚಂದ್ರನು ಒರಿ ಗ್ರಹವಲ್ಲ. ಜೊತೆಗಾರರಿಲ್ಲದೆ ಬೇರೆ ಹುಟ್ಟಿನ ತಾರೆಗಳ ನಡುವೆ ತಿರುಗಿ ತಿರುಗಿ ದಣಿದ ಪಯಣಿಗನವನು. ಎಲ್ಲವೂ ಕ್ಷಣಭಂಗುರವೂ ಚಂಚಲವೂ ಎಂಬುದನ್ನು ಕಂಡು ಆನಂದವನ್ನು ಕಳಕೊಂಡ ಕಣ್ಣು ಅವನದು. ಇಂದ್ರನು ಪರ್ವತಗಳ ರೆಕ್ಕೆಗಳನ್ನು ಕಡಿದಿರಬಹುದು. ಆದರೆ ಶೆಲ್ಲಿಯ ದೃಷ್ಟಿಯಲ್ಲಿ, ಬಿರುಗಾಳಿ ಬಿಟ್ಟಾಗ ಅಪೆನ್ನೈನ್ ಪರ್ವತವು ಬಿರುಗಾಳಿಯೊಡನೆ ಸಂಚರಿಸುತ್ತದೆ! ಮೋಡವೆಂದರೇನು? ಬರಿ ಮಂಜೆ? ಎಂದಿಗೂ ಅಲ್ಲ, ವಸುಂಧರಾ-ರತ್ನಾಕರರ ಕನ್ನೆಯಾಕೆ-ನೀರದದ ನೀರೆ! ಆಕೆಗೆ ಮಾರ್ಪಾಟಿದೆ, ಆದರೆ ಸಾವಿಲ್ಲದ ನಿರ್ಜರಾಂಗನೆಯಾಕೆ! ತನ್ನ ಸ್ಮಾರಕಗೋರಿಯನ್ನು ತಾನೇ ಕಂಡು ನಗುವ ಕನ್ನೆಯಾಕೆ! ಸೂರ್ಯನೆಂದರೇನು ಗೊತ್ತೆ! ಅವನೇ ಇಡಿ ವಿಶ್ವದ ನೇತ್ರ. ನೇಸರು ಗಣ್ಣಿನಿಂದ ತನ್ನನ್ನೇ ತಾನು ನೋಡಿಕೊಂಡು ವಿಶ್ವವು ತನ್ನ ಚೆಲುವಿಕೆಯನ್ನು ತಿಳಿಯಲು ಸಮರ್ಥವಾಗುತ್ತದೆ. ಏರೆ ಥೂಜಾ-ಆಲ್ಫಿಯಸ್ ನದಿಗಳ ಸಂಗಮವು ಬರಿ ನೀರಿನ ನೆರೆಯಲ್ಲ. ಪ್ರೇಮಜೀವಿಗಳೀರ್ವರು ಒಂದಾದುದರ ಕುರುಹದು. ನಾಚಿಕೆಗೆಡವು ಮುಗ್ಧಜೀವದ ಕುರುಹಾಗಿದೆ. ಈ ರೀತಿಯಾಗಿ ಶೆಲ್ಲಿಗೆ ನಿಸರ್ಗದಲ್ಲಿ ಒಮ್ಮೊಮ್ಮೆ ದೈವಿಕ ತೆಯೂ ಒಮ್ಮೊಮ್ಮೆ ಮಾನವೀಯ ಜೀವನದ ಪ್ರತಿಬಿಂಬವೂ ಒಡೆದುಕಾಣುತ್ತವೆ.

ಶೆಲ್ಲಿಯು ಪ್ರೀತಿಸುವ ಕೀಟ್ಸ್ ಕವಿಯು ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡ. ಇದರಿಂದ ಶೆಲ್ಲಿಗೆ ಒಹಳ ದುಃಖವಾಯಿತು. ಕೆಲವು ಜನ ಕುಹಕರ ವಿಮರ್ಶೆಯಿಂದ ಅವನ ಅವಸಾನಕಾಲವು ಇನ್ನೂ ಸಮೀಪಿಸಿತೆಂದು ಶೆಲ್ಲಿಯು ತಿಳಿದಿದ್ದ. ಇದರಿಂದ ಅವನ ಶೋಕದಲ್ಲಿ ಸಂತಾಪವು ಬೆರೆಯಿತು. ಆದರೂ ಈ ಮರಣದ ಕಡೆಗೆ ಶೆಲ್ಲಿಯು ಕಟ್ಟ ಕಡೆಗೆ ತಾತ್ವಿಕ ದೃಷ್ಟಿಯಿಂದ ನೋಡಿದ. "ಶಾಂತಂ ಪಾಪಂ! ನಾವು ಅಳಬಾರದು. ಅತನು ಮಲಗಿಲ್ಲ, ತೀರಿ ಹೋಗಿಲ್ಲ. ಬಾಳುವೆಯೆಂಬ ಕನಸಿನಿಂದ ಇದೀಗ ಎಚ್ಚತ್ತಿದ್ದಾನೆ. ಸಾಯುವವರು **ನಾವು. ನಾವು** ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತೇವೆ, ಹಳವಂಡಗಳೊಡನೆ ಗುದ್ದಾಡುತ್ತೇವೆ, ಹುಚ್ಚರಂತೆ ಬಾಳಕರವಾಳದಿಂದ ಅಜಿಂಕ್ಯವಾದ ಶೂನ್ಯತೆಗಳನ್ನು ಹಣಿಯಲೆಸಗುತ್ತೇವೆ. ಗೋರಿಗಳಲ್ಲಿದ್ದ ಶವಗಳಂತೆ **ನಾವು** ಕೊಳೆಯುತ್ತೇವೆ. ಅಂಜಿಕೆಯೂ ದುಃಖವೂ ನಮ್ಮನ್ನು ಉನ್ಮಾದಿಸುತ್ತವೆ; ಸಾವಕಾಶವಾಗಿ ನಮ್ಮನ್ನು ತಿನ್ನುತ್ತವೆ. ಸತ್ತ ಆಸೆಗಳೆಲ್ಲ ಹುಳುಗಳಂತೆ ನಮ್ಮ ಮೆಯ್ಯ ಮಣ್ಣಿನಲ್ಲಿ ಗುಂಪುಗಟ್ಟುತ್ತವೆ. ಆದರೆ ನಮ್ಮನ್ನು ಸುತ್ತುಗಟ್ಟಿದ ನಿಶೆಯ ಸಂಕಟವನ್ನು ಅತನು ಹಾರಿಹೋಗಿದ್ದಾನೆ. ದ್ವೇಷ, ದೂಷಣೆ, ಅಸೂಯೆ, ನೋವು ಹಾಗು ನಾವು ಸುಖವೆಂದು ತಿಳಿಯುವ ದಂದುಗವು ಇನ್ನು ಅವನನ್ನು ಮುಟ್ಟುವ ಹಾಗಿಲ್ಲ; ಮುಟ್ಟಿ ಗೋಳಾಡಿಸುವ ಹಾಗಿಲ್ಲ....ಎಲ್ಲ ಪ್ರಕೃತಿಯೊಡನೆ ಅತನು ಒಂದಾಗಿಹೋಗಿದ್ದಾನೆ. ಪ್ರಕೃತಿಯ ಸಂಗೀತದಲ್ಲೆಲ್ಲ ಅವನ ಧ್ವನಿಯು ಕೇಳಿಸುತ್ತದೆ. ಮೊಳಗಿನ ಮೊದಲುದನಿಯಿಂದ ರಾತ್ರಿಯಲ್ಲಿ ಸಂಗೀತಿಸುವ ಹಕ್ಕಿಯ ಸ್ವರದ ವರೆಗೆ ಅವನ ವಾಣಿಯು ಪಡಿನುಡಿಯುತ್ತದೆ. ಕತ್ತಲಲ್ಲಿಯೂ ಬೆಳಕಿನಲ್ಲಿಯೂ ತಿಳಿದು ಅನುಭವಿಸಬಲ್ಲ ಸಾಮೀಪ್ಯವು ಅವನದು. ಶಿಲೆಯಲ್ಲಿಯೂ ಸಸಿಯಲ್ಲಿಯೂ ಅವನ ಸಮಾಗಮವನ್ನು ನಾವು ಅನುಭವಿಸಬಹುದು. ದಣಿಯದ ದೊಲವಿನಿಂದ ಜಗತ್ತನ್ನೇ ಕಾಯುವ, ಶೇಷನಂತೆ ಅದಕ್ಕಾಧಾರವಾಗಿ ಮೇಲಿನಿಂದ ಅದನ್ನು ಉದ್ದೀಪಿಸುವ ಶಕ್ತಿಯು ತನ್ನಲ್ಲಿ ಅತನ ಆತ್ಮವನ್ನು ಬೆರಸಿಕೊಂಡಿದೆ. ಆದು ಎಲ್ಲೆಲ್ಲಿ ಸಂಚರಿಸುವದೋ ಅಲ್ಲಲ್ಲಿ ಅವನ ಚೈತನ್ಯವು ಹಬ್ಬಿಕೊಳ್ಳುತ್ತದೆ. ಅತನೀಗ ತಾನೇ ಒಮ್ಮೆ ಸುಂದರತರವಾಗಿಸಿದ ಸೌಂದರ್ಯದ ಭಾಗವಾಗಿಹೋಗಿದ್ದಾನೆ.

ಇದನ್ನು ನಾವು ಶೋಕವೆಂದು ಕರೆಯುವದು ಸಾಧ್ಯವಿಲ್ಲ. ತಾತ್ವಿಕನು ಮರಣವನ್ನು ನೋಡುವ ಬಗೆಯದು. ಶೆಲ್ಲಿಯಲ್ಲಿ ಅದು ಸಹಜಸಿದ್ಧವಾಗಿತ್ತು. ಇದೇ ಜ್ಞಾನ ಶಿಖರದ ಮೇಲೆ ನಿಂತಾಗ ಶೆಲ್ಲಿಗೆ ವಿಶ್ವಚೈತನ್ಯದ ಸಾಕ್ಷಾತ್ಕಾರವಾಗುತ್ತದೆ: "ಶಾಶ್ವತವಾಗುಳಿಯುವದೊಂದೇ,—ಏಕಮೇವಾದ್ವಿತೀಯಂ. 'ಬಹುಧಾ' ಸೃಷ್ಟಿಯೆಲ್ಲ ಬದಲಾಗುತ್ತದೆ, ಕಳೆಯುತ್ತದೆ. ಪೃಥಿವಿಯ ಮಾಯೆಗಳೆಲ್ಲ ಲಯವಾಗುತ್ತವೆ. ದೈವಿಕತೆಯ ಜ್ಯೋತಿಯು ಮಾತ್ರ ನಂದಾದೀಪವಾಗಿ ಬೆಳಗುತ್ತದೆ. ಮರಣವು ಬಂದು ತುಳಿದು ಚೂರು ಚೂರು ಮಾಡುವ ನಕ ಮಳೆಬಿಲ್ಲುಗಾಜಿನ ಗುಮ್ಮಟದಂತಿದ್ದ ಜೀವನವು ಅನಂತತೆಯ ಶುಭ್ರಪ್ರಕಾಶವನ್ನು ಬಣ್ಣ ಬಣ್ಣವಾಗಿಸುತ್ತದೆ, ಕದಡಿಸುತ್ತದೆ. ನೀನಾವುದನ್ನು ಅರಸುತ್ತ ಅಲೆದಾಡುವಿಯೋ ಅದರೊಡನೆ ಹೊಂದಿರುವಾಸೆಯಿದ್ದರೆ,—ಮರಣವನ್ನು ಶರಣು ಹೋಗು."

**"ಲೋಕಗಳನುದ್ದೀಪಿಸುವ ಮಂದಸ್ಮಿತದ ಜ್ಯೋತಿ,**
**ಬ್ರಹ್ಮಾಂಡವನು ತನ್ನ ಮಂಡಲದೊಳಿಟ್ಟ ಚೆಲುವು,**
**ಜನುಮ-ರಾಹುವು ಸಾಗಿ ಬರೆ ಸುಟ್ಟುಬಿಡುವ ಮುಕುತಿ,**
**ಗಾಳಿ-ನೆಲ-ಕಡಲು-ನರ-ಪ್ರಾಣಿಯಲಿ ನಿಂತ ಬಲವು,**

**ಜೀವಿತದ ಜಾಲದಲಿ ಹಾಸು-ಹೊಕ್ಕಾಗಿ ಬೆಳಗಿ**
**ಪರ್ಪಣದ ಅರ್ಪಣವದೆಂತಂತು ಪ್ರತಿಬಿಂಬಿಸಿ—**
**ಧಾಳ್ಮಿಸಿ ಮುಸುಕಾಗಿ— ಎಲ್ಲರಲಿ ತೊಳಗುತಿಹುದು.**
**ಎಲ್ಲರನು ಮೋಹಿಸಿದ ದಿವ್ಯ ಪಾವಕವು ಪಳಗಿ**
**ಮೂಡುತಿದೆ ಕಿರಣದಿಂದೆನ್ನ ಮೈ-ಮನ ತುಂಬಿಸಿ:**
**ಅಳಿದುಳಿದ ಮರ್ತ್ಯತೆಯ ಮುಗಿಲೋಳಿ**
**ತೊಲಗುತಿಹುದು.***

ಶೆಲ್ಲಿಯಲ್ಲಿ ಇನ್ನೂ ಒಂದು ಹಂಬಲವಿತ್ತು. ಸಾಕ್ಷಾತ್ಕಾರವನ್ನು ಪಡೆದು ತನ್ನಷ್ಟಕ್ಕೆ ತಾನು ಸಫಲನೆಂದು ಅತನು ಭಾವಿಸಲಿಲ್ಲ. ತಾನು ಕಂಡ ಜೆಲುವನ್ನು ಮಾನವ ಜಾತಿಯೆಲ್ಲ ಕಾಣಬೇಕೆಂದು ಅತನ ಆಕಾಂಕ್ಷೆಯಾಗಿತ್ತು. ಶಾಂತಿ– ಪುಷ್ಟಿ– ತುಷ್ಟಿಗಳನ್ನು ಸುಲಭಸಾಧ್ಯವಾಗಿಸುವ ಸ್ವರ್ಣಯುಗವು ಭೂಲೋಕದಲ್ಲಿ ಸಂತತವಾಗಿ ವಿರಾಜಿಸಬೇಕೆಂದು ಅವನ ಪ್ರಾರ್ಥನೆಯಾಗಿತ್ತು. ಜಗತ್ತಿನಲ್ಲಿ ಕಂಡ ಅನ್ಯಾಯಗಳೊಡನೆ ಅತನು ಯುದ್ಧವಾಡಿದ: ಐಶ್ವರ್ಯವಂತರ ಮನೆಯಲ್ಲಿ ಹುಟ್ಟಿ ಬೆಳೆದ ಅತನು, ತಂದೆಯು ತನ್ನ ಆದರ್ಶವನ್ನು ಅಡ್ಡಗಟ್ಟಲು,—ತನ್ನ ಮನೆಗೆ ಹೊರತಾದ. ತನ್ನ ಕ್ರಾಂತಿಮಯ ವಿಚಾರಗಳು ರುಚಿಸದ ವಿಶ್ವವಿದ್ಯಾಲಯಕ್ಕೆ ಅತನು ಶರಣು ಹೊಡೆದ. ಕೊನೆಗೆ ಇದೇ ಕಾರಣದ ಸಲುವಾಗಿ ದೇಶತ್ಯಾಗ ಮಾಡಿದ. ಇನ್ನೂ ಸಾಲೆಗೆ ಹೋಗುವ ಹುಡುಗನಾಗಿದ್ದಾಗ ಶೆಲ್ಲಿಯಲ್ಲಿ ಈ ಅರಿವು ಮೊಳೆಯಿತು. "ಇಸ್ಲಾಮಿನ ಧರ್ಮಯುದ್ಧ" ವೆಂಬ ತನ್ನ ಕಾವ್ಯದ ಉಪೋದ್ಘಾತದಲ್ಲಿ ಶೆಲ್ಲಿಯು ಈ ತಿಳುವಳಿಕೆಯ ಬರವನ್ನು ವರ್ಣಿಸಿದ್ದಾನೆ: "ನನ್ನಾತ್ಮವನ್ನು ನಿದ್ದೆಯಿಂದ ಬಡಿದೆಬ್ಬಿಸಿದ ವೇಳೆಯ ನೆನವು ಇನ್ನೂ ಅಚ್ಚಳಿಯದೆ ನನಗಿದೆ. ಮೇ ತಿಂಗಳ ಚೆಲುವು ಮುಂಜಾವಿನ ದಿನವೊಂದದು. ಬೆಳಗಿನಲ್ಲಿ ಇಬ್ಬನ್ನಿಯುದುರಿ ಹೊಳೆಯುವ ಹುಲ್ಲಿನ ಮೇಲೆ ನಾನು ತಿರುಗಾಡುತ್ತ ನಡೆದೆ. ಅದೇಕೋ ಕಾಣೆ, ಆಗ ನನಗೆ ಅಳುವು ಬಂತು. ಮನಬಂದಂತೆ ಅತ್ತೆ. ಅಲ್ಪಾವಧಿಯಲ್ಲಿಯೇ ಹತ್ತಿರದ ಶಾಲೆಯ ಕೋಣೆಯೊಳಗಿಂದ ಕೆಲವು ದನಿಗಳು ಕೇಳಿ ಒಂದವ್ವ. ಆಳರಸರ ಹಾಗು ಶತ್ರುಗಳ ಕ್ರೂರ-ದಾರುಣ ಕಲಹಪ್ರಿಯತೆಯು ತುಂಬಿದ ದುಃಖಮಯ ಜಗತ್ತಿನ ಪ್ರತಿಧ್ವನಿಯೇ ಆ ದನಿಗಳಲ್ಲಿ ಕೇಳುತ್ತಿತ್ತು. ಆಗ ನಾನು ಕೈಗೆ ಕೈ ತಳಕಿಕ್ಕಿ ಸುತ್ತಲು ನೋಡಿದೆ. ನಾನು ಸುರಿಸುತ್ತಿರುವ ಕಣ್ಣೀರನ್ನಣಕಿಸಲು ಹತ್ತಿರ ಯಾರೂ ಇರಲಿಲ್ಲ. ಬಿಸಿಲು ಬಿದ್ದ ನೆಲದ ಮೇಲೆ ಕಾದ ಕಂಬನಿಗಳು ಸುರಿಯುತ್ತಿದ್ದವು. ರಾಜದೆ ಮರೆ-ವಾಜದೆ ನನ್ನೊಳಗೇ ನಾನು ನುಡಿದೆ: "ಹಾಗಾಗುವ ಯೋಗ್ಯತೆಯು ಬಂದಲ್ಲಿ ನಾನು ಜಾಣನಾಗುವೆನು; ನ್ಯಾಯಸಿಷ್ಣುರನಾಗುವೆನು; ಸ್ವತಂತ್ರನಾಗುವೆನು; ಮೃದುಮಧುರನಾಗುವೆನು. ಸ್ವಾರ್ಥಿಗಳೂ ಬಲಿಷ್ಠರೂ ಖಂಡನೆಯಿಲ್ಲದೆ ತಡೆಯಿಲ್ಲದೆ ಎಸಗುವ ಅನ್ಯಾಯಗಳನ್ನು ನೋಡಿ ನೋಡಿ ನನಗೆ ಆಯಾಸವಾಗಿದೆ."ಹೀಗೆ ನಾನಂದು ಕೊಂಡು ಅಳುವನ್ನು ಬಿಗಿಹಿಡಿದೆ. ನನ್ನ ಹೃದಯವು ಶಾಂತವಾಯಿತು. ಒಂದು ಬಗೆಯ ದಿಟ್ಟತನವೂ ಸಹನ ಶೀಲತೆಯೂ ನನ್ನಲ್ಲಿ ಕಾಣಿಸಿಕೊಂಡವು. ಆಗಿನಿಂದ ಮುಂದೆ ನಾನು ಕೃತನಿಶ್ಚಯನಾಗಿ ಒಹಿಷ್ಕೃತವಾದ ಜ್ಞಾನಖನಿಗಳಿಂದ ಜ್ಞಾನವನ್ನು ರಾಶಿರಾಶಿಯಾಗಿ ಪಡೆದೆನು. ಆಳರಸರಂತೆ ನಡೆಯುವ ನನ್ನ ಶಿಕ್ಷಕರು ತಿಳಿದ ಇಲ್ಲವೆ ಕಲಿಸುವ ಯಾವ ವಿಷಯವನ್ನೂ ಕಲಿಯಲು ನನಗೆ ಮನಸಿರಲಿಲ್ಲ. ಆದರೆ ಮಾನವರ ನಡುವೆ ಹೋಗಿ ನಿಂತು ಅವರೊಡನೆ ನನ್ನಾತ್ಮವು ಕಾದಾಡಬೇಕಾಗಬಹುದೆಂದು ಬಗೆದು ಅದಕ್ಕೆ ಮುಂಚಿತವಾಗಿ ನಾನು ಗುಪ್ತವಾಗಿ ಸಂಗ್ರಹಿಸಿದ ಜ್ಞಾನವನ್ನು ಪಯೋಗಿಸಿ ನನ್ನಾತ್ಮಕ್ಕೆ ಭದ್ರವಾದ ಕವಚವೊಂದನ್ನು ತಯಾರಿಸಿದೆನು. ಈ ರೀತಿಯಾಗಿ ನನ್ನಂತರಂಗದಲ್ಲಿ ಸಾಮರ್ಥ್ಯವೂ ಭರವಸೆಯೂ ದೃಢತರವಾದವು."

ಇದೇ ನಿರ್ಧೀತಿಯೇ ಶೆಲ್ಲಿಯಲ್ಲಿ ಕೊನೆವರೆಗೆ ಮನೆಮಾಡಿಕೊಂಡಿತ್ತು. ಯಾವ ದಬ್ಬಾಳಿಕೆಗೂ ಅವನು ಸೊಪ್ಪು ಹಾಕಲಿಲ್ಲ. ತನಗೆ ಸತ್ಯವೆಂದು ಹೊಳೆದುದನ್ನು ಶೆಲ್ಲಿಯು ಮುಕ್ತಕಂಠನಾಗಿ ಸಾರಿದ. 'ಪ್ರಮೀಥಿಯಸ್ ಅನ್‌ಬೌಂಡ್' ಎಂಬ ತನ್ನ ಕಾವ್ಯನಾಟಕದಲ್ಲಿ ಶೆಲ್ಲಿಯು ಶಕ್ತಿ-ವ್ಯಕ್ತಿಗಳ ಕಲಹವನ್ನು ಪ್ರತಿಭಾಪೂರ್ಣವಾಗಿ ಚಿತ್ರಿಸಿದ್ದಾನೆ. ಜ್ಯುಪಿತರೇಂದ್ರನೇ ಇಲ್ಲಿಯ ಆಳರಸ, ಸ್ವರ್ಗಾಧಿಪತಿ. ಮಾನವ ಜಾತಿಯನ್ನು ದಾಸ್ಯದಲ್ಲಿ ಕೊಳೆಯಿಸುವದೇ ಅವನಿಗೆ ಪ್ರಿಯವಾದ ವಿಷಯ. ಪ್ರಮೀಥಿಯಸನು ಮಾನವ ಜಾತಿಯ ಸ್ವಾತಂತ್ರ್ಯಕ್ಕಾಗಿ ಹೋರಾಡುವ ನಾಯಕ. ಜ್ಯುಪಿತರನು ಕೆಡಕು-ದ್ವೇಷಗಳ ಮೂರ್ತಿಯಾದರೆ ಪ್ರಮೀಥಿಯಸನು ಧೀರಗಂಭೀರನು; ಅತ್ಯಾಸೆ, ಅಸೂಯೆ, ಸೇಡು ಮೊದಲಾದ ದುರ್ಗುಣಗಳ ಸಂಪರ್ಕವಿಲ್ಲದವನು. ಪ್ರೀತಿ ಚೈತನ್ಯವು ಅವನನ್ನು ಸ್ಫೂರ್ತಿಸುತ್ತದೆ. ಕಾಕೇಸಸ್ ಪರ್ವತಾವಳಿಯ ಒಂದು ಭೃಂಗದ ಮೇಲೆ ಜ್ಯುಪಿತರನು ಪ್ರಮೀಥಿಯಸ್‌ನನ್ನು ಒಂದು ಬಂಡೆಗಲ್ಲಿಗೆ ಸರಪಣಿಯಿಂದ ಕಟ್ಟಿ ಹದ್ದುಗಳು ಅವನ ಹೃದಯವನ್ನು ಸದಾ ತಿನ್ನುವಂತೆ ಕಠಿಣ ಶಿಕ್ಷೆಯನ್ನು

ವಿಧಿಸುತ್ತಾನೆ. ಆದರೆ ಮಾನವರ ಅಮರನಾಯಕನಾದ ಪ್ರಮೀಥಿಯಸನು ಇದಕ್ಕೆ ಹಿಂಜರಿಯುವದಿಲ್ಲ. ಅಜೇಯನಾಗಿ ಕಾಣುವ ಜ್ಯುಪಿತರನ ಅಧಿಕಾರವನ್ನು ಅವನು ತಾಳ್ಮೆಗೊಂಡು ವಿರೋಧಿಸುತ್ತಾನೆ. ಅವನ ತಾಯಿಯಾದ ಭೂಮಾತೆಯು ಪ್ರಮೀಥಿಯಸನ ಸಹನಶೀಲತೆಗೆ ಆಧಾರವಾಗುತ್ತಾಳೆ. ಪ್ರಕೃತಿ ಇಲ್ಲವೆ ಆದಿಮಾಯೆಯ ಪ್ರತೀಕವಾದ ಏಸಿಯ ಎಂಬ ಸಧುವಿನ ಸವಿನೆನಪು ಅವನನ್ನು ಹುರಿದುಂಬಿಸುತ್ತದೆ. (ಏಸಿಯ ಖಂಡದ ಮೇಲೆ ಶೆಲ್ಲಿಯ ಪ್ರೀತಿಯೆಷ್ಟು! ಮಾನವ ಜಾತಿಯ ಭವಿತವ್ಯತೆಯ ವಿಷಯದಲ್ಲಿ ಶೆಲ್ಲಿಯು ಅದಕ್ಕೆ ಮುಖ್ಯವಾದ ಸ್ಥಾನವನ್ನು ಕಲ್ಪಿಸಿ ಕೊಡುತ್ತಾನೆ.) ಕೊನೆಗೆ ವಿಧಿ ತಂದ ಕಾಲವು ಒಂದಾಗ ಮೈದುಂಬಿ ಡೆಮಗಾರ್ಗನ್ ಎಂಬ ಹೆಸರಾಂತ ಅನಂತತೆ ಇಲ್ಲವೆ ಆದಿ ಚೈತನ್ಯವು ಬಂದು ಜ್ಯುಪಿತರನ್ನು ಸಿಂಹಾಸನದಿಂದ ನರಕಕ್ಕೆ ತಳ್ಳುತ್ತದೆ. ಮೂರ್ತಿಮಂತ ಸಾನುಧ್ಯವೇ ಆದ ಹರ್ಕ್ಯುಲೀಜನು ಪ್ರಮೀಥಿಯಸನನ್ನು ಬಂಧನೆಯಿಂದ ಬಿಡಿಸುತ್ತಾನೆ. ಆಗ ಪ್ರೀತಿಯ ಸ್ವರ್ಣಯುಗಕ್ಕೆ ಪ್ರಾರಂಭವಾಗುತ್ತದೆ. ಈ ಯುಗದಲ್ಲಿ ಗುಡಿ-ಗುಂಡಾರಗಳಿಲ್ಲ, ಸಿಂಹಾಸನಗಳಿಲ್ಲ, ಮಠಗಳಿಲ್ಲ, ನ್ಯಾಯಸ್ಥಾನಗಳಿಲ್ಲ, ಸೆರೆಮನೆಗಳಿಲ್ಲ. ಆಗ ಮಾನವನು ನಿರಂಕುಶನಾಗಿ, ಸ್ವತಂತ್ರನಾಗಿ, ಸ್ವಚ್ಛಂದವಾಗಿ ಬಾಳುತ್ತಾನೆ. ಮಾನವ-ಮಾನವರ ನಡುವೆ ಆಗ ವಿಷಮತೆಯುಳಿಯುವದಿಲ್ಲ. ದೇಶ-ಕುಲ-ವರ್ಗಗಳ ಭೇದವೆಲ್ಲ ಅಳಿದುಹೋಗುತ್ತದೆ. ಹೆಚ್ಚಿನವರಿಗೆ ಅವನು ಹೆದರ ಬೇಕಾಗುವ ಕ್ರಮವೂ ಕಡಿಮೆಯವರಿಂದ ಸನ್ಮಾನವನ್ನು ಪಡೆಯಬೇಕಾದ ಕ್ರಮವೂ ತಪ್ಪಿಹೋಗುತ್ತವೆ ತಾರತಮ್ಯವೆಲ್ಲ ಬಯಲಾಗುತ್ತದೆ. ಆಗ ಮಾನವನು ತಾನೇ ತನ್ನೊಡೆಯನಾಗಿ ಬಾಳುತ್ತಾನೆ; ಮರ್ತ್ಯನಾದರೂ ನ್ಯಾಯನಿಷ್ಠುರನಾಗಿ, ವಿನೀತನಾಗಿ, ಪರಿಣತನಾಗಿ ಜೀವಿಸುತ್ತಾನೆ.

ನಾಟಕದ ಕೊನೆಯಲ್ಲಿ ಡೆಮಗಾರ್ಗನ್ ಎಂದು ಶೆಲ್ಲಿಯು ಕರೆದ ಅನಂತತೆಯು ಮಾನವಜಾತಿಯನ್ನು ಸಂಬೋಧಿಸಿ ಬಾಳುವೆಯಲ್ಲಿ ನಿರಂತರನಾಗಿ ಗೆಲುವನ್ನು ಪಡೆಯುವ ರಹಸ್ಯವನ್ನು ಈ ರೀತಿಯಾಗಿ ಸಾರುತ್ತದೆ:

**ಡೆಮಗಾರ್ಗನ್ :**

**ಅಳರಸ, ಹಳಬ, ವಂಚಿತ, ವಂಚಕನದೊಮ್ಮೆ**
**ಸಂತತ ವಿನಾಶ; ಕೊನೆಯಿಲ್ಲದಲೆ ಬೆಳಗುವ ಅ-**
**ನಂತತೆಯ ಹಗಲಿನ ಅವಿದ್ಯೆಯಾ ರಾತ್ರಿಯಲಿ**
ತೂಗುದೊಟ್ಟಲದಿಂದ ಮರಣವಟ್ಟಿಗೆ ನಡೆವ
ದಾರಿಹೋಕನದಾಗಿ ಜೀವಿಸಿದ ಮಾನವನೆ!

**ಎಲ್ಲರೂ :**

ನುಡಿ! ನಿನ್ನ ಬಲ್ನುಡಿಗಳೆಂದಿಗೂ ಕಳೆಯದಿರಲಿ.

**ಡೆಮಗಾರ್ಗನ್ :**

ಸ್ವರ್ಣ ದಿನವಿಂದಹುದು; ಮಾನವರ ನಾಯಕನ
ಸ್ಥಿರ ತಪೋಬಲದೊಂದು ಮಂತ್ರಗಾರಿಕೆಯಿಂದ
ಸ್ವರ್ಗದಾಳರಸನನು ನುಂಗಿ ಬಿಡಲೆಂದೀಗ
ಸೀಳ್ದು ಪಾತಾಳದಾ ಕತ್ತಲೆಯನುದಿಸುತಿದೆ;
ಅಂಧಂತಮಸ್ಸಿನಲಿ ಮುಗಿಲೊಡೆಯನನ್ನು ಸೆರೆ-
ಯಾಳಂತೆ ಎಳೆಯುವದು. ತಿಳಿದ ಹೃದಯಗಳಲ್ಲಿ
ತಾಳ್ಮೆ ಗಳಿಸಿದ ಬಲದ ದಿವ್ಯ ಸಿಂಹಾಸನವ-
ನಿಂದಲಂಕರಿಸುವದು ಪ್ರೇಮ; ಬಂದಿಹ ದುಃಖ-
ಗಳ ಕೊನೆಯ ತಿವಿತವನು ತಾಳುತೆದೆಗುಂದದಲೆ
ಯಾತನೆಯ ಶೃಂಗಶಿಲೆಯಿಂದ, ಕಡು ನೀಲ್ದಿರುವ
ಅನುತಾಪದಾ ತುತ್ತ ತುದಿಯಿಂದ ನೆಗೆತಂದು
ತನ್ನಶ್ವಿನೀಪಕ್ಷಗಳ ಹರಹಿ ಲೋಕವನು
ತಬ್ಬಿಹುದು. ವಿನಯ, ಪರಿಣತಿ, ಶೀಲ, ತಾಳ್ಮೆಯಿವು
ದಬ್ಬಾಳಿಕೆಯ ಬಲುಮೆ ಬಿದ್ದ ನರಕದ ದ್ವಾರ
ತೆರೆಯದೆಂಬಭಯವಚನದ ಮುದ್ರಿಕೆಗಳಹುದು;
ವಿಧವಿಧದ ಗೆಯ್ಮೆಗಳ ಪ್ರಹರಗಳ ಮೂತಾಯಿ-
ಆ ಅನಂತತೆ–ಸಡಿಲುಗೆಯ್ಯಿಂದ ಮುಂದೊಮ್ಮೆ
ತನ್ನ ಮೆಯ್ಯುದ್ದ ಮುರಿಯಾಟವಾಡುವ ಸರ್ಪ-
ವನು ಬಿಡಲು, ವಶಪಡಿಸಿಕೊಳುವ ಗಾರುಡಮಂತ್ರ-
ವಹುದು ಮುದ್ರಿಕೆಗಳಿವು. ಇವಕೆ ಕೊನೆಯೇ ಇಲ್ಲ-
ವೆಂದೀಪ್ಸಿತವು ತಿಳಿದ ಯಾತನೆಗಳನು ತಾಳಿ
ಬಾಳುವದು; ನಿಶೆಗಿಂತ ಕಾಳ ಮೃತ್ಯುವಿಗಿಂತ
ಕಪ್ಪಿಡಿದ ಅನ್ಯಾಯಗಳನೆಲ್ಲ ಕ್ಷಮಿಸುವದು;
ಸರ್ವತಂತ್ರವಿದೆಂದು ತೋರ್ವ ದರ್ಪವನೆದುರಿ-
ಸುತ್ತಲ್ಲಗಳೆಯುವದು; ಒಲಿಯುವದು; ಸಹಿಸುವದು;
ಈಪ್ಸೆಯದು ತಾ ಕೂರ್ಮದನ್ನೆ ತನ್ನಯ ಭಂಗ-
ದಿಂದ ನಿರ್ಮಿಸುವನಕ ಬಯಸುವದು; ಮಾರ್ಪಡಿಸೆ,
ಮರಮರನೆ ಮರುಗದಲೆ ಹಿಂದುಮುಂದೆನ್ನದಲೆ
ಬಾಳುವದು: ಓ! ಪ್ರಮೀಥಿಯಸ! ಇದುವೇ ನಿನ್ನ
ಮಹಿಮೆಯಂತೊಳ್ಳಿತನ ಹಿರಿಮೆ, ಚೆಲುವಾನಂದ
ಸ್ವಾತಂತ್ರ್ಯಗಳ ಪಡೆವ ಹೆದ್ದಾರಿ, ಇದುವೊಂದೆ
ಆನಂದ, ಸಾಮ್ರಾಜ್ಯ, ಗೆಲುವು, ಜೀವನ್ಮುಕ್ತಿ."

—ವಿ. ಕೃ. ಗೋಕಾಕ

# ಕ್ರೀಡೆ

ಕ್ರೀಡೆಯು ಜೀವನದ ಜೀವಾಳವಾದ್ದರಿಂದ ಅದು ಯಾವದಾದರೊಂದು ಜನಾಂಗದ ಅಥವಾ ಕಾಲದ ಸೊತ್ತಾಗಿರದೆ, ಎಲ್ಲೆಡೆಯಲ್ಲಿಯೂ ಎಲ್ಲ ಕಾಲಕ್ಕೂ ಇದ್ದೇ ಇದೆ. ಆದರೆ ಅದು ಧರಿಸಿದ ರೂಪು ಮಾತ್ರ ಸ್ಥಳ ಮತ್ತು ಕಾಲಕ್ಕನುಸರಿಸಿ ಬೇರೆಯಾಗಿರುತ್ತದೆ ಉದಾಹರಣೆಗೆ, ನಮ್ಮಲ್ಲಿಯ 'ಕಣ್ಣು ಮುಚ್ಚಾಟದಂತೆಯೇ ಪಶ್ಚಿಮ ದೇಶದಲ್ಲಿ "Blind Man's Buff" ಎಂಬ ಆಟವಿದೆ. 'ನಮ್ಮ ನಟ್ಟಪ್ಪನ ಆಟ' ಅಲ್ಲಿ 'Pitching the horse shoe' ಎಂಬ ಹೆಸರಿನಿಂದ ಇದೆ. ಸ್ಕಾಟ್‌ಲಂಡದಲ್ಲಿ 'ನರಿ ಮತ್ತು ಬಾತುಗೋಳಿಗಳು' ಎಂಬ ಆಟವಿದ್ದರೆ ಫಾನ್ಸದಲ್ಲಿ 'ನರಿ ಮತ್ತು ಕೋಳಿಮರಿಗಳು' ಎಂಬ ಹೆಸರಿನಿಂದ ಅದೇ ಆಟವು ಇರುತ್ತದೆ.

ಕ್ರೀಡೆಯು ಬಹು ಪುರಾತನ ಕಾಲದಿಂದಲೂ ಬಂದಿದೆ ಎಂಬುದಕ್ಕೆ ಇಜಿಪ್ತ, ಬೇಬಿಲೋನಿಯಾ, ಹೊಸದಾಗಿ ಸಂಶೋಧಿತವಾದ ಮೋಹೆಂಜೊದಾರೊ ಇವುಗಳಲ್ಲಿ ಪ್ರಾಚೀನಕಾಲದ ಕ್ರೀಡೆಯ ಸಾಮಗ್ರಿಗಳು, ಬಾಲ ಬಾಲಿಕೆಯರು ಕ್ರೀಡೆಯಲ್ಲಿ ತನ್ಮಯವಾದಂಥ ಚಿತ್ರಗಳು ಸಾಕಷ್ಟು ಪ್ರಮಾಣಗಳನ್ನು ಒದಗಿಸಿಕೊಡುತ್ತವೆ.

ಸಂಸ್ಕೃತಿ-ನಾಗರಿಕತೆಗಳ ಜನನವಾಗುವದಕ್ಕಿಂತ ಪೂರ್ವದಲ್ಲಿ ಮಾನವನು ಕಾಡುಸ್ಥಿತಿಯಲ್ಲಿದ್ದಾಗ ಅವನ ಕ್ರೀಡೆಯು ಕಾಡುರೂಪದಲ್ಲಿ ಇದ್ದರೂ ಕೆಲವು ವೈಶಿಷ್ಟ್ಯಗಳು ಅದರಲ್ಲಿ ಕಂಡುಬರುತ್ತವೆ. (೧) ನೃತ್ಯ ಮತ್ತು ತಾಲಬದ್ಧ ಚಟುವಟಿಕೆ. (೨) ಅನುಕರಣ ಮತ್ತು ಅಭಿನಯ. (೩) ಹಾಡುವದು. (೪) ಸಂಭಾಷಣೆ ಮತ್ತು ಕಥೆ ಹೇಳುವದು. (೫) ಪಂದ್ಯಾಟಗಳು. (೬) ಲಲಿತಕಲೆ ಮತ್ತು ಕಸಬುಗಾರಿಕೆ ಈ ಆರು ಅಡಿಗಲ್ಲುಗಳ ಮೇಲೆ ಆಧುನಿಕ ಕ್ರೀಡಾ ಪದ್ಧತಿಯ ಮಂದಿರವು ಸುಸಂಘಟಿತವಾದ ರೀತಿಯಲ್ಲಿ ಕಟ್ಟಲ್ಪಟ್ಟಿದೆ.

ಇನ್ನು ಕ್ರೀಡೆಯ ಜನನದಲ್ಲಿ ಮೂಲಭೂತ ಗುಣಗಳ ಬಗ್ಗೆ ವಿಚಾರಿಸೋಣ. ಕ್ರೀಡೆಯು ಹೇಗೆ ಹುಟ್ಟುತ್ತದೆ? ಕ್ರೀಡೆಯೆಂದರೇನು? ಬಾಲಕರು ಕ್ರೀಡೆಯಲ್ಲಿ ಭಾಗವಹಿಸಲು ಏಕೆ ಇಚ್ಛಿಸುತ್ತಾರೆ? ಮನೋರಂಜನೆಯಲ್ಲದೆ ಮತ್ತೇನಾದರೂ ವಿಧಾಯಕ ಗುಣಗಳು ಅದರಲ್ಲಿ ಕಂಡುಬರುತ್ತವೆಯೋ ಹೇಗೆ? ಹಾಗಿದ್ದರೆ ಅವು ಯಾವವು? ಎಂಬೀಪ್ರಶ್ನಾವಳಿಗೆ ಉತ್ತರವನ್ನು ಕೊಡಲು ಅನೇಕ ಬರೆಹಗಾರರು ಪ್ರಯತ್ನಿಸಿದ್ದಾರೆ. ಅವರೆಲ್ಲರೂ ತಮ್ಮ ದೃಷ್ಟಿಕೋನದಿಂದ ಕ್ರೀಡೆಯನ್ನು ಅನುಲಕ್ಷಿಸಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವು ಎಷ್ಟರಮಟ್ಟಿಗೆ ನಮಂಜಸವಾಗಿರುವವೆಂಬದನ್ನು ನೋಡಬೇಕು. ಯಾಕಂದರೆ ಕ್ರೀಡೆಯು ಜೀವನದಷ್ಟೇ ವಿಶಾಲವಾದದ್ದು, ವಿಶ್ವವ್ಯಾಪಕವಾದದ್ದು. ಇಂಥ ಕ್ರೀಡೆಯನ್ನು ಯಾವದಾದರೊಂದು ಕೋನದಿಂದ ನೋಡಿ ಅದೇ ಸರಿಯೆಂದು ಹೇಳುವದು ತಪ್ಪು. ಆದರೂ ಅವುಗಳಲ್ಲಿ ಯಾವದಾದರೊಂದು ಅದರ ನಿಜ ಸ್ವರೂಪದ ಸಾಮೀಪ್ಯಕ್ಕೆ ಬರುವಂಥ ತತ್ವವಿದ್ದರೆ ಅದು ಯಾವದು, ಮತ್ತು ಇನ್ನುಳಿದ ತತ್ವಗಳಲ್ಲಿಯ ಗುಣಗಳು ಯಾವವು, ಅವಗುಣಗಳು ಯಾವವು, ಎಂಬುದನ್ನು ಅವಲೋಕಿಬೇಕಾಗಿದೆ.

(೧) ಉತ್ಸಾಹಾಧಿಕ್ಯತತ್ವ (Surplus Energy theory):– ಇದು ಪುರಾತನ ತತ್ವ. ಇದಕ್ಕೆ ಸ್ಕಿಲ್ಲರ್ ಮತ್ತು ಸ್ಪೆನ್ಸರ ತತ್ವವೆಂದೂ ಹೆಸರು. ಸ್ಕಿಲ್ಲರ್ ಮತ್ತು ಸ್ಪೆನ್ಸರ್ ಇವರು ಬರೆಯುವದಕ್ಕಿಂತ ಮುಂಚೆಯೇ ಶೈಕ್ಷಣಿಕ ಸಾಹಿತ್ಯದಲ್ಲಿ ಈ ತತ್ವವು ಪ್ರಚಾರದಲ್ಲಿತ್ತು. ಇತ್ತೀಚೆಗೆ ಜೇಮ್ಸರವರು ತಮ್ಮ 'Energies of men' ಎಂಬ ನಿಬಂಧದಲ್ಲಿ ಇದನ್ನೇ ಪ್ರತಿಪಾದಿಸಿದ್ದಾರೆ. ಈ ತತ್ವದ ಪ್ರಕಾರ ಕ್ರೀಡೆಯಂದರೆ 'ಉತ್ಸಾಹದ ಉಗಿಯನ್ನು ಹೊರಗೆ ಬಿಡುವದು'. ಬಾಲಕರು ಯಾವಾಗಲೂ ಉತ್ಸಾಹಭರಿತರಾದ ಕಾರಣ ಎಂದೂ ಸುಮ್ಮನೆ ಕೂಡುವದಿಲ್ಲ. ಸ್ಕಿಲ್ಲರ್ ಕ್ರೀಡೆಯ ವ್ಯಾಖ್ಯೆಯನ್ನು ಈ ಪ್ರಕಾರವಾಗಿ ಕೊಟ್ಟಿದ್ದಾರೆ. "ಅಧಿಕವಾದ ಉತ್ಸಾಹವನ್ನು ಉದ್ದೇಶರಹಿತವಾದ ರೀತಿಯಲ್ಲಿ ವೆಚ್ಚ ಮಾಡುವದು." "ಹೊಟ್ಟೆತುಂಬಿದಾಗ ಸಿಂಹವು ಗುಡುಗು ಹಾಕುವದಾಗಲೀ, ಸಣ್ಣ ಹುಳಗಳು

ಬಿಸಿಲಿನಲ್ಲಿ ಹಾರಾಡುವದಾಗಲೀ, ಪಕ್ಷಿಗಳು ಹಾರಾಡುವದಾಗಲೀ ಉದ್ದೇಶರಹಿತವಾದ ಚಟುವಟಿಕೆಗಳು."

ಹೊಬ ಹೌಸ, ಲೇವನ್ ಮುಂತಾದವರು ಈ ತತ್ವವನ್ನು ಕಟುವಾಗಿ ಟೀಕಿಸಿದ್ದಾರೆ. ಸಜೀವ ವಸ್ತುವಿನ ಪ್ರತಿಯೊಂದು ಚಟುವಟಿಕೆಯೂ ಉದ್ದೇಶದಿಂದ ಒಡಗೂಡಿದೆ. ಉದ್ದೇಶರಹಿತವಾದ ಕ್ರೀಡೆ ಇದ್ದ ಪಕ್ಷದಲ್ಲಿ, ಅದನ್ನು ನೀಚತರಗತಿಯ ಕ್ರೀಡೆಯನ್ನಬಹುದು.

(೨) ಜೀವನದ ಪೂರ್ವ ಸಿದ್ಧತೆಯ ತತ್ವ (Preparation for life):—

ಕಾರ್ಲ ಗ್ರೂಸ್‌ರವರು ಪ್ರಾಣಿಗಳ ಮತ್ತು ಬಾಲಕರ ಕ್ರೀಡೆಗಳನ್ನು ಅಭ್ಯಾಸಿಸಿ ಕಂಡು ಹಿಡಿದದ್ದೇನಂದರೆ:— ಬಾಲಕರು ಮುಂದೆ ತಮಗೆ ಉಪಯೋಗವಾಗುವಂಥ ಮತ್ತು ತಮ್ಮ ಜೀವನದ ಮೇಲೆ ಅವಲಂಬಿಸಿದಂಥ ಚಟುವಟಿಕೆಗಳನ್ನೆ ರೂಢಿಮಾಡುತ್ತಾರೆ; ಇಂಥ ರೂಢಿಯು ಅವಶ್ಯವಾಗಿರುತ್ತದೆ. ಯಾಕಂದರೆ ಅದರ ಮೇಲೆ ಪ್ರತಿಯೊಬ್ಬ ವ್ಯಕ್ತಿಯ ಪ್ರಗತಿಯು ಅವಲಂಬಿಸಿರುತ್ತದೆ.

ಕೆಲವೊಂದು ಉದಾಹರಣೆಗಳಲ್ಲಿ ಪ್ರಾಕೃತಿಕ ಮನುಷ್ಯನ ಜೀವನದಲ್ಲಿ, ಈತರಹದ ಹೋಲಿಕೆಯನ್ನು ನಾವು ಕಾಣಬಹುದು. ಆದರೆ ಎಲ್ಲ ಕ್ರೀಡೆಯಲ್ಲಿ ಈ ಮಾದರಿಯ ಭವಿತವ್ಯತೆಯನ್ನು ಸೂಚಿಸುವಂಥ ಮತ್ತು ಭವಿತವ್ಯತೆಯ ಪೂರ್ವಸಿದ್ಧತೆಯನ್ನು ಮಾಡುವಂಥ ಚಟುವಟಿಕೆಗಳನ್ನು ಕಾಣುವದು ಕಠಿಣ. ಉದಾಹರಣೆಗಾಗಿ ಕಾಡುಜಾತಿಯ ಹುಡುಗರಿಗೆ ಓಡುವ, ಜಿಗಿಯುವ ಮತ್ತು ಹಿಡಿಯುವ ಆಟಗಳು ಹೆಚ್ಚು ಬೆಲೆಯಳ್ಳವಾಗಿ ಕಾಣಬಹುದು. ಯಾಕಂದರೆ ಅವರು ದೊಡ್ಡವರಾದ ಬಳಿಕ ಜೀವನವನ್ನು ಸಾಗಿಸುವದಕ್ಕಾಗಿ ಬಲ ಮತ್ತು ಚಪಲತೆಗಳು ಬೇಕು. ಆದರೆ ಇವೇ ಚಟಗಳು ನಾಗರಿಕ ಮತ್ತು ಸುಸಂಸ್ಕೃತ ಹುಡುಗರಿಗೆ ರುಚಿಸಿದರೂ ಕೂಡ ಅವು ಯಾವ ರೀತಿಯಿಂದ ಮುಂಬರುವ ಜೀವನಕ್ಕೆ ಸಹಾಯಕಾರಿಯಾಗಿ ಪರಿಣಮಿಸುತ್ತವೆ? ಮೋಟಾರ ಹೊರಟಾಗ ಓಡಿಹೋಗಿ ಜಿಗಿದು ಹತ್ತುವದಕ್ಕೆ ಉಪಯೋಗವಾಗುತ್ತದೆಯೆ? ಉಗಿಬಂಡಿಯಲ್ಲಿ ಕುಳಿತು ಹೊರಟಾಗ ಒಮ್ಮೆಲೆ ಹೊರಗೆ ಜಿಗಿಯಲು ಉಪಯೋಗವಾಗುತ್ತದೆಯೆ?

(೩) ಪುನರಾವರ್ತನೆಯ ತತ್ವ (Recapitulation) :- ಈ ತತ್ವದ ಧರ್ಮಪಿತೃಗಳಾದ ಸ್ಟಾನಲೇ ಹಾಲರವರು ಕ್ರೀಡೆಯ ವಿಷಯಕ್ಕೆ ಹೀಗೆ ಹೇಳಿದ್ದಾರೆ. ಕ್ರೀಡೆಯು ನಮ್ಮ ಪೂರ್ವಜರ ದೈಹಿಕ ಚಟುವಟಿಕೆಗಳ ಮತ್ತು ಜೀತನದ ಚಿನ್ಹ. ಕ್ರೀಡೆಯಲ್ಲಿಯ ಪ್ರತಿಯೊಂದು ಚಲನವಲನವೂ ಅನುವಂಶಿಕತೆಯಿಂದ ತುಂಬಿರುತ್ತದೆ. ಈ ಪ್ರಕಾರವಾಗಿ ನಮ್ಮ ಪೂರ್ವಜರ ಚಟುವಟಿಕೆಗಳನ್ನೇ ನಾವು ಪರನ ಮಾಡುತ್ತೇವೆ, ಪುನರಾಲೋಚಿಸುತ್ತೇವೆ, ಮಾನವನು ಪ್ರಾಣಿವರ್ಗದಿಂದ ಬೇರೆಯಾಗಿ ಆ ಮೇಲೆ ಕಾಡುರೂಪದಲ್ಲಿ ಇದ್ದು ಮುಂದೆ ಸಂಸ್ಕೃತಿ ಮತ್ತು ನಾಗರಿಕತೆಯ ಮೆಟ್ಟುಗಳನ್ನು ಏರುತ್ತ ಹೇಗೆ ಈಗಿನ ಸ್ಥಿತಿಗೆ ಬಂದಿರುವನೆಂಬುದನ್ನೆಲ್ಲ ಬಾಲಕರು ಒಂದೊಂದಾಗಿ ಪುನರಾಲೋಚಿಸುತ್ತಾರೆ. ಉದಾಹರಣೆಗೆ ಬಾಲಕರ ಪ್ರಾಣಿಗಳ ಅನುಕರಣೆ, ಬಿಲ್ಲು ಹೊಡೆಯುವದು ಮುಂತಾದವು.

ಆದರೆ ಸರಿವಯಸ್ಸಿನ ಕೆಲವು ಹುಡುಗರು ಈಸಲಿಕ್ಕೆ ಮತ್ತು ನುಳಲಿನಲ್ಲಿ ಗುಹೆಯನ್ನು ರಚಿಸಲಿಕ್ಕೆ ಹೋದರೆ, ಮತ್ತೆ ಕೆಲವು ಹುಡುಗರು ಹಾಳೆಹಡಗಗಳನ್ನಾಗಲೀ ಅಥವಾ ಕಟ್ಟಿಗೆಯ ಉಗಿಬಂಡಿಯನ್ನಾಗಲಿ ಕಬ್ಬಿಣ ವಿಮಾನವನ್ನಾಗಲಿ ತೆಗೆದುಕೊಂಡು ಆಡಲು ಹೋಗುತ್ತಾರೆ; ಇದು ಏಕೆ? ಕೆಲವು ಹುಡುಗರಿಗಂತೂ ಗೊಂಬೆಯಾಟದ ಹೊರತು ಉಳಿದ ಯಾವ ಆಟವೂ ಸೇರುವದಿಲ್ಲ; ಇದು ಏಕೆ?

(೪) ಮನಃಶುದ್ಧಿಯ ತತ್ವ:— ಮಾನವನ ಮನಸ್ಸು ಸಹಜ-ವೃತ್ತಿಗಳ ಮೂಟೆ ಇರುತ್ತದೆ. 'ಸಹಜವೃತ್ತಿಗಳು ಪ್ರಾಕೃತಿಕ ಸ್ವರೂಪದಲ್ಲಿ ಕಂಡಾಗ ಅವು ವ್ಯಕ್ತಿಗೂ ಮತ್ತು ಸಮಾಜಕ್ಕೂ ಅಪಾಯಕಾರಿಯಾಗಿ ಕಂಡು ಬರುತ್ತವೆ. ಇಂಥ ಪ್ರವೃತ್ತಿಗಳಿಗೆ ಕ್ರೀಡೆಯ ಔಷಧವನ್ನು ಕೊಟ್ಟು ಅವುಗಳನ್ನು ಶುಚಿಗೊಳಿಸಬೇಕೆಂಬುದೇ ಈ ತತ್ವದ ತಿರುಳು. ಉದಾ: ಹೋರಾಟದ ವೃತ್ತಿಯನ್ನು ಶುಚಿಗೊಳಿಸಬೇಕಾದರೆ, ಹುಡುಗರಿಗೆ ಕುಸ್ತಿ, ಮುಷ್ಟಿಯುದ್ಧ, ಲಾಠಿ, ಜೋಥಾಟಿ ಮುಂ. ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಬೇಕು. ಇವೆಲ್ಲ ವೈಯಕ್ತಿಕ ಚಟುವಟಿಕೆಗಳು. ಇನ್ನು ಸಾಂಘಿಕ ಚಟುವಟಿಕೆಗಳೆಂದರೆ ಫುಟ್‌ಬಾಲ್, ಹಾಕಿ ಮುಂ. ಇವುಗಳಲ್ಲಿ ಬಾಲಕರಿಗೆ ಭಾಗವಹಿಸಲು ಹಚ್ಚಿದರೆ ಅವರು ದ್ವೇಷ, ಅಸೂಯೆ, ಹೊಡೆದಾಟಗಳನ್ನು ಬಿಟ್ಟು ಉತ್ತಮವಾದ ಒಡನಾಡಿಕೆಯನ್ನು ಕಲಿಯಬಹುದು, ತನ್ಮೂಲಕ

ಪರರೆಂಬ ಗುಣವನ್ನು ಕಲಿಯಬಹುದು. ಎಂದ ಬಳಿಕ ಕ್ರೀಡೆಯಿಂದ ಕೈಲಾಸವನ್ನು ಪಡೆಯಬಹುದು.

ಇದೆಲ್ಲ ನಿಜ. ಆದರೆ ಬಾಲಕರಿಗೆ ಆಟವಾಡಲು ಪಿಸ್ತೂಲು, ಬಂದೂಕನ್ನು ತಂದು ಕೊಟ್ಟರೆ, ಅವರು ಅದರ ಸದುಪಯೋಗವನ್ನು ಯಾವಾಗಲೂ ಮಾಡುವರೆಂದು ಹೇಳಲಾಗದು. ಹಾಗೆ ಮಾಡಹೇಳಲು ಉತ್ತಮ ಶಿಕ್ಷಕರು ಬೇಕು. ಶಿಕ್ಷಕರ ಅಭಾವವಿದ್ದಲ್ಲಿ, ಹೋರಾಟದ ಪ್ರವೃತ್ತಿಯ ಬಾಲಕರು ದೊಡ್ಡವರಾದ ಬಳಿಕ ಸಮಾಜದ ವೈರಿಗಳೇ ಆಗಬಹುದು. ಕುಸ್ತಿ, ದಾಂಡಪಟ್ಟಾ, ಲಾಠಿ ಮುಂತಾದ ಶಕ್ತಿವರ್ಧಕ ಮತ್ತು ಸ್ವಯಂರಕ್ಷಕ ಚಟುವಟಿಕೆಗಳನ್ನು ಕಲಿತು ಅವುಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದು ಮುಂದೆ ಸಮಾಜಕ್ಕೆ ಘಾತುಕರಾದಂಥ ದರೋಡೆಖೋರರಾದ ಜನರ ಉದಾಹರಣೆಗಳೇ ನಮ್ಮಲ್ಲಿ ಜಾಸ್ತಿ.

(೫) ವಿಶ್ರಾಂತಿಯ ಮತ್ತು ಮನೋರಂಜನೆಯ ತತ್ವ :– ವ್ಯಾಟ್ರಿಕ್ಕರವರು ಈ ಹಳೇತತ್ವವನ್ನು ಹೊಸದಾಗಿ ಪ್ರಚಾರದಲ್ಲಿ ತಂದಿದ್ದಾರೆ. ಉದ್ಯೋಗದಿಂದ ಉಂಟಾದ ಬೇಸರಿಕೆಯನ್ನು ಹೋಗಲಾಡಿಸಲು, ಹೆಚ್ಚಾಗಿ ಮೆದುಳಿನ ಮುಖ್ಯ ಕೇಂದ್ರಗಳಿಗೆ ವಿಶ್ರಾಂತಿಕೊಡಲು ಮನೋರಂಜನೆ ಬೇಕು. ಇಂಥ ಮನೋರಂಜನೆ ವಿಶ್ರಾಂತಿಗಳೆರಡನ್ನು ಕ್ರೀಡೆಯು ಕೊಡಬಲ್ಲದು. ಒಂದು ಉದ್ಯೋಗದಿಂದ ಮತ್ತೊಂದು ಉದ್ಯೋಗವನ್ನು ಕೈಕೊಳ್ಳುವದೇ ಒಂದು ವಿಶ್ರಾಂತಿ ಇದ್ದಂತೆ. ಅದರಲ್ಲಿ ಮೊದಲಿನ ಉದ್ಯೋಗಕ್ಕಿಂತ ಎರಡನೆಯದರಲ್ಲಿ ಕಡಿಮೆ ಶ್ರಮವಾಗುವ ಹಾಗಿದ್ದರೆ, ಸ್ವಲ್ಪೇ ಲಕ್ಷ್ಯಕೊಡಲು ಬರುವ ಹಾಗಿದ್ದರೆ, ಎರಡನೆಯದರಲ್ಲಿ ಮತ್ತಿಷ್ಟು ಉತ್ಸಾಹದಿಂದ ಭಾಗವಹಿಸಬಹುದು ಎಂಬುದು ನಿಜವಾದ ಮಾತಾಗಿದೆ. ಮತ್ತು ಒಂದೇ ಸ್ಥಳದಲ್ಲಿ ಬಹಳ ವೇಳೆ ಕೂತರೆ ಹುಡಗರಿಗಾಗಲೀ ಹಿರಿಯರಿಗಾಗಲಿ, ಬೇಸರ ಹುಟ್ಟುತ್ತದೆ. ಇಷ್ಟೇ ಅಲ್ಲ, ಸ್ನಾಯುಗಳು ಒರಟು ಹಿಡಿಯುತ್ತವೆ. ಈ ವೇಳೆಗೆ ಕ್ರೀಡೆಯು ಉತ್ತಮವಾದ ಮತ್ತು ಏನೋದದಾಯಕವಾದ ಚಟುವಟಿಕೆ.

(೬) ಸ್ಪರ್ಧೆಯ ತತ್ವ :— ಮ್ಯಾಕ್‌ರೂಗಲ್ಲರ ಪ್ರಕಾರ ಕ್ರೀಡೆಯ ತಿರುಳು ಸ್ಪರ್ಧೆಯಲ್ಲಿ ಇದೆ. " ಮಾನವನಲ್ಲಿ ಯಾವಾಗಲೂ ತಾನು ಮುಂದೆ ಬಂದು ಎಲ್ಲರಿಗಿಂತ ಶ್ರೇಷ್ಠನೆನಿಸಿಕೊಳ್ಳಬೇಕೆಂಬ ಇಚ್ಛೆ ಪ್ರಧಾನವಾಗಿರುತ್ತದೆ. ಇದೇ ಸ್ಪರ್ಧೆಗೆ ಮೂಲಭೂತ ಕಾರಣವು. "

ಆದರೆ ಬಾಲಕರ ಎಷ್ಟೋ ಆಟಗಳಲ್ಲಿ ಸ್ಪರ್ಧೆಗೆ ಎಡೆಯೇ ಇರುವದಿಲ್ಲ. ಉದಾ:— ಕೂಸಿನ ಚಿನ್ನಾಟ, ಹುಡುಗರ ಹುಸಿಯಾಟ, ಹುಡಿಗೆಯರ ಗೊಂಬೆಯಾಟ ಮುಂತಾದವುಗಳಲ್ಲಿ ಸ್ಪರ್ಧೆಯ ರೇಖೆಯು ಕಂಡುಬರುವದಿಲ್ಲ. ಹಿರಿಯರ ಆಟದಲ್ಲಿ ಈ ತತ್ವದ ಸತ್ಯಾಂಶವನ್ನು ನಾವು ಕೆಲವು ವೇಳೆ ಕಾಣಬಹುದು.

(೭) ಆತ್ಮಾವಿರ್ಭಾವದ ತತ್ವ (Self-Expression) :— ಈ ತತ್ವದ ಪುರಸ್ಕರ್ತರಾದ ಮೊಸೊನ್ ಮತ್ತು ಮಿಚೆಲ್ ರವರು ಇದೇ ಉತ್ತಮವಾದ ತತ್ವವೆಂದೂ ಮತ್ತು ಕ್ರೀಡೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನೀಯುವದೆಂದೂ ಅಭಿಪ್ರಾಯಪಡುತ್ತಲಿದ್ದಾರೆ. " ಮನುಷ್ಯನಿಗೆ ಹೊಟ್ಟೆಯ ಹೋರಾಟದ ಹೋರೆಯಲ್ಲಿದ್ದಾಗ ಅಥವಾ ಮತ್ತಾವ ಚಿಂತೆಯ ಒತ್ತುವಿಕೆಯಲ್ಲಿ ಸಿಲುಕಿ ತತ್ತರಿಸದೆ ಇದ್ದಾಗ, ಅವನು ಸುಮ್ಮನೆ ಕಂಬದಂತೆ ನಿಲ್ಲಲಾರ. ಅವನಿಗೆ ಅನೇಕ ಆಶೆ-ಆಕಾಂಕ್ಷೆಗಳು ಇರುತ್ತವೆ. ಕೂಲೆಯವರ ಪ್ರಕಾರ " ಮಾನವನ ಜೀವನವು ಮತ್ತು ಅವನ ಆಕಾಂಕ್ಷೆಗಳು, ಉದ್ದೇಶಗಳು ಹಾಸುಹೊಕ್ಕಾಗಿ ಕೂಡಿಕೊಂಡಿವೆ. " ಈ ಆಕಾಂಕ್ಷೆ-ಉದ್ದೇಶಗಳನ್ನು ಪೂರೈಸಲು ಮಾನವನು ಅನೇಕ ರೀತಿಯಿಂದ ಪ್ರಯತ್ನಪಡುತ್ತಾನೆ. ಈ ಪ್ರಯತ್ನದಲ್ಲಿ ಅವನ ಆತ್ಮಾವಿರ್ಭಾವವಾಗುತ್ತದೆ, ಸ್ವಭಾವವು ವ್ಯಕ್ತವಾಗುತ್ತದೆ. ವ್ಯಕ್ತಿತ್ವದ ಆವಿರ್ಭಾವವು ಬೇರೆ ಬೇರೆ ರೀತಿಯಲ್ಲಿ ಪರಿಣಮಿಸಬಹುದು. ಉದಾ :- ಸಾಹಿತ್ಯೋಪಾಸನೆ, ಲಲಿತಕಲೆ, ಕ್ರೀಡೆ ಮುಂ. ಅಂದಬಳಿಕ ಜೀವನದಲ್ಲಿ ಸಾಹಿತ್ಯ ಮತ್ತು ಲಲಿತಕಲೆಗಳಿಗೆ ಯಾವ ಸ್ಥಾನವಿದೆಯೋ ಅಷ್ಟೇ ಮಹತ್ವದ ಸ್ಥಾನವು ಕ್ರೀಡೆಗೆ ಇದೆ.

ಈ ಏಳು ತತ್ವಗಳಲ್ಲದೆ ಮತ್ತೆ ಕೆಲವು ತತ್ವಗಳಿವೆ. ಅವು ಮುಖ್ಯವಲ್ಲದ್ದರಿಂದ ಅವುಗಳನ್ನು ಇಲ್ಲಿ ಹೇಳಿಲ್ಲ. ಮೇಲೆ ಹೇಳಿದ ಪ್ರತಿಯೊಂದು ತತ್ವವೂ, ಒಂದೊಂದು ದೃಷ್ಟಿಕೋನದಿಂದ ಪ್ರತಿಪಾದಿತವಾದ್ದರಿಂದ ಒಂದೇ ಒಂದು ತತ್ವವು ಒಳ್ಳೆಯದು ಎಂದು ಹೇಳುವದು ತಪ್ಪಾಗದಿರದು. ಪ್ರತಿಯೊಂದು ತತ್ವಕ್ಕೂ ಗುಣಾವಗುಣಗಳಿವೆ. ಅವಗುಣಗಳೇನೇ ಇರಲಿ, ಈ ಸಪ್ತ ತತ್ವಗಳ ಗುಣಗಳನ್ನು ಸಪ್ತವರ್ಣಗಳಂತೆ ಒಂದೆಡೆಗೆ ಸೇರಿಸಿದರೆ ಕ್ರೀಡಾ ಪದ್ಧತಿಯು ಸ್ವೇತವರ್ಣವಾಗುವದು.

—ನಾಡಿಗೇರ

# ಕನ್ನಡ ಸಾಹಿತ್ಯದಲ್ಲಿ ನಿಬಂಧಗಳು

( ಸಪ್ಟಂಬರ್ ಸಂಚಿಕೆಯಿಂದ ಮುಂದುವರಿದುದು )

## (೭)

ಹೊಸಗನ್ನಡ ಸಾಹಿತ್ಯದಲ್ಲಿ ಸಣ್ಣ ಪ್ರಕಾರಗಳಲ್ಲಿ ನಿಬಂಧವೂ ಒಂದಷ್ಟೆ! ಭಾವಗೀತೆ, ಸಣ್ಣ ಕಥೆ, ಸಣ್ಣ ನಾಟಕ, ನಿಬಂಧ ಎಲ್ಲವೂ ಸಾಧಾರಣವಾಗಿ ಒಂದೆ ಕಾಲಕ್ಕೆ ಪ್ರಾರಂಭವಾದವು. ಆದರೆ ನಿಬಂಧವು ಇಷ್ಟು ವರುಷಗಳ ವರೆಗೆ ಬಾಳಿ ಸಾಹಿತ್ಯದ ಉಳಿದ ಸಣ್ಣ ಪ್ರಕಾರಗಳಂತೆ ಅದೂ ಏನನ್ನಾದರೂ ಸಾಧಿಸಿದೆಯೆ? ಸಾಹಿತ್ಯಕ್ಕೆ ಯಾವ ಕಾಣಿಕೆಯನ್ನಾದರೂ ಸಲ್ಲಿಸಿದೆಯೆ? ತನ್ನದೆಂದು ಆತ್ಮವಿಶ್ವಾಸದಿಂದ ಹೇಳಿಕೊಳ್ಳುವ ಶಕ್ತಿ ಅದಕ್ಕೆ ಯಾವುದಿದೆ? ಎಂದು ಸಹಜವಾಗಿ ಉದ್ಭವಿಸುವ ಪ್ರಶ್ನೆಗಳನ್ನು ವಿಚಾರಮಾಡಿ ನೋಡಬೇಕು. ರವಿಯ ರಾಜ್ಯವು ಮರಳಿದೊಡನೆ ಕತ್ತಲೆಯಲ್ಲಿಯ ಎಲ್ಲ ವಸ್ತುಗಳು ಮರಳಿ ಕಾಣಿಸಿಕೊಳ್ಳುವಂತೆ ಇಂದಿನ ಜೀವನದ ಬೆಳಕಿನಲ್ಲಿ ಹೊಸ ಹೊಸ ಸಂಗತಿಗಳು ಪ್ರಾಧಾನ್ಯವನ್ನು ಪಡೆದಿವೆ. ಮೂಲೆಯಲ್ಲಿರುವ ವಸ್ತುಗಳು ಹೊರಗೆ ಬಂದು ಬೆಳಕನ್ನು ಕಂಡವು; ವಸ್ತ್ರಾಭರಣಗಳನ್ನುಟ್ಟು ಸಿಂಗಾರವಾದವು. ಇಂಥ ಜೀವನಕ್ಕೆ ಪ್ರೇರಣೆನೀಡುವುದರಲ್ಲಿಯೆ ಇಂದಿನ ಸಾಹಿತ್ಯದ ದಾರಿ ಸಾಗಿದೆ. ಜನತೆಯ ಕಣ್ಣಿಗೆ ಕಾಣದ ವಸ್ತುಗಳನ್ನು ಅದರ ಕಣ್ಣೆದುರು ನಿಲ್ಲುವಂತೆ ಮಾಡುವುದೆ ಆಧುನಿಕ ಸಾಹಿತ್ಯದ ಕಾರ್ಯವಾಗಿದೆ. ಈ ಸಮಯದಲ್ಲಿ ನಿಬಂಧಗಳು ಮಾಡಿದಷ್ಟು ಕಾರ್ಯವನ್ನು ಉಳಿದ ಯಾವ ಸಾಹಿತ್ಯಪ್ರಕಾರಗಳೂ ಸಾಧಿಸಿಲ್ಲವೆಂದು ಹೇಳುವಂತಿದೆ. ವಿಹಂಗಮನೋಟದಿಂದ ಕನ್ನಡ ಸಾಹಿತ್ಯದ ಸಣ್ಣ ರೂಪಗಳನ್ನು ಅವಲೋಕಿಸಿದರೆ ಭಾವಗೀತೆ ಬರೆಯುವ ಕವಿಗಳಿಗೆ ರಾಜಮಾರ್ಗವೆ ಬೇಕಾಗಿದೆ. ಓಬೀರಾಯನ ಕಾಲದಿಂದಲೂ ಇದ್ದ ವಸಂತ, ಕೋಗಿಲೆ, ಮಂದಾರದಂಥ ಜೊಲುವಾದ ವಿಷಯಗಳಲ್ಲಿಯೆ ಕವಿಯು ಬಹುಶಃ ಆಸಕ್ತನಾಗಿದ್ದಾನೆ. ಸಣ್ಣ ಕಥೆ, ಸಣ್ಣ ನಾಟಕ ಬರೆಯುವವರಿಗೆ ಯುಗಾಂತರದಿಂದಲೂ ಎಷ್ಟು ಮಾತನಾಡಿದರೂ ತೀರದ ಜೀವನದಲ್ಲಿಯ ಹೆಣ್ಣುಗಂಡಿನ ಪ್ರೇಮದ ನಿನ್ನಿವೇಶಗಳೆ ರುಚಿಕರವಾಗಿವೆ. ಆದರೆ ನಿಬಂಧಕಾರರು ಹಾಗಿಲ್ಲ. ಯಾರೂ ಗೋಚಿಗೆ ಹೋಗದಂಥ ಕನಬರಿಗೆ, ತಗಣಿ, ಉಗುಳು, ಮೀಸೆ, ಕ್ಷೌರಕತ್ತಿ ಇಂಥ ವಸ್ತುಗಳ ಬಗ್ಗೆ ಅವರು ನಲಿಗೆಯಿಂದ ಮಾತನಾಡುತ್ತಿದ್ದಾರೆ. ತಮ್ಮ ಹಾಸ್ಯದಿಂದ, ತಮ್ಮ ವ್ಯಕ್ತಿತ್ವದ ಪ್ರಭಾವದಿಂದ ಆ ವಿಷಯಗಳಿಗೆ ಹೊಸ ಬೆಳಕನ್ನು ಬೀರಿದ್ದಾರೆ. ಅವು ಕೆಸರಿನಲ್ಲಿ ಕಮಲಗಳು ಇದ್ದಂತೆ ಬೆಳಗುತ್ತಿವೆ. ಇದರಿಂದ ನಿಬಂಧಕಾರರು ತಮ್ಮ ಕಲ್ಪನಾಶಕ್ತಿಯನ್ನು ಬಲಿಸಿಕೊಂಡರಲ್ಲದೆ ಸಾಹಿತ್ಯದಲ್ಲಿರುವ ಜನರ ಅಭಿರುಚಿಗೆ ಬಲೆಯನ್ನು ಬೀಸಿದ್ದಾರೆ. ಇಂಥ ಅಭಿರುಚಿಯನ್ನು ಹುಟ್ಟಿಸಲು ಸಾಹಿತ್ಯಪ್ರಕಾರಗಳಲ್ಲಿ ನಿಬಂಧವೆ ಮೊದಲಿಗೆ ರೂಪತಾಳಿತೆಂದು ಹೇಳಬಹುದಾಗಿದೆ.

ಓದುಗರಲ್ಲಿ ಕುತೂಹಲವನ್ನು ಹುಟ್ಟಿಸಲು ಸಾಮಾನ್ಯ ವಿಷಯಗಳಿಷ್ಟೆ ಸಹಾಯವಾಗಲಿಲ್ಲ. ನಿಬಂಧಕಾರರಲ್ಲಿರುವ ಹಾಸ್ಯಚಮತ್ಕೃತಿಯೂ ಎಷ್ಟೊ ನೆರವಾಗಿದೆ. ಬಯಲು ಆಲಯವೊ ಆಲಯವು ಬಯಲೊಳಗೊ ಎಂದು ದಾಸರು ಹಾಡುವಂತೆ, ಹಾಸ್ಯದಲ್ಲಿ ನಿಬಂಧವೆಂದೂ ನಿಬಂಧದಲ್ಲಿ ಹಾಸ್ಯವೆಂದೂ ಕನ್ನಡ ಸಾಹಿತ್ಯದಲ್ಲಿ ಹಾಡುವಂತಾಗಿದೆ. ಹಾಸ್ಯವು ನಿಬಂಧದ ಸೊತ್ತಾಗಿದೆ. ಧಾರವಾಡದ ಗೆಳೆಯರ ಗುಂಪಿನವರು ತಮ್ಮ ಆತ್ಮೀಯ ನಿಬಂಧಗಳ ಸಂಗ್ರಹಕ್ಕೆ ' ಹರಟೆಗಳು ' ಎಂದು ನಾಮಕರಣ ಮಾಡಿದ್ದರಿಂದಲೊ ಏನೊ, ನಿಬಂಧವೆಂದರೆ ' ಹರಟೆ ' ಆಯಿತು, ಹರಟೆಯೆಂದರೆ ವಿನೋದ ಲೇಖನವಾಯಿತು; ಆ ಪರಂಪರೆಯೆ ಸಾಗುತ್ತ ಬಂದಿದೆ. ಮೊದಮೊದಲು ನಿಬಂಧದ ಇತಿಹಾಸದಲ್ಲಿ ವಿನೋದಲೇಖನಗಳೆ ತುಂಬಿದ್ದವು. ಮಾತಿನಮನೆ, ಹರಟೆಯಮನೆ, ಬೀದಿಯ ಬಸವ, ಜೇಳಿನ ಕೊಂಡೆ, ಚಿತ್ರಗುಪ್ತ, ಜಡ್ಡುಭರತ,

ತುಣುಕು ಮಿಣುಕಿನವ ಮುಂತಾದ ಅನೇಕ ಲೇಖಕರ ಅಂಕಿತನಾಮಗಳನ್ನು ನೋಡಿದರೆ ಹಾಸ್ಯನಿಬಂಧಗಳು ಎಷ್ಟು ವಿಪುಲವಾಗಿರಬೇಕು, ಎಷ್ಟು ವಿವಿಧವಾಗಿರಬೇಕು ಎಂಬುದನ್ನು ಕಲ್ಪಿಸಿಕೊಳ್ಳಬಹುದಾಗಿದೆ. ಹೀಗೆ ಹುಟ್ಟಾ ತನ್ನದೆ ಆದ ಆಸ್ತಿಯನ್ನು ಒಳ್ಳೇ ರೀತಿಯಿಂದ ಉಪ ಯೋಗಿಸಿಕೊಂಡು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ನಿಬಂಧವು ಹೆಣಗಾಡಿದೆ.ಹಾಸ್ಯವು ಸರ್ವತೋಮುಖವಾಗಿ ಬೆಳೆಯಲು ಹವಣಿಸಿದೆ. ಆಂಗ್ಲೇಯ ಪಂಚ್‌ಪತ್ರಿಕೆ ಯಲ್ಲಿರುವಂಥ ಹಾಸ್ಯವು ರಾ. ಶಿ. ಯವರಲ್ಲಿ, ಯದ್ವಾ ತದ್ವಾ ಹಾಸ್ಯವು ನಾ. ಕಸ್ತೂರಿಯವರಲ್ಲಿ, ಇನ್ನಿತರ ತರತರದ ಹಾಸ್ಯವು ಶ್ರೀರಂಗ, ಕಾರಂತ ವತ್ತು ಬೇಂದ್ರೆ ಯವರಲ್ಲಿ ಕಂಡುಬಂದಿದೆ. ಇದಲ್ಲದೆ ತಿಳಿಹಾಸ್ಯದ ರಸವು ಪ್ರತಿಯೊಬ್ಬ ನಿಬಂಧಕಾರರಲ್ಲಿ ಆವಿರ್ಭವಿಸಿದೆ. ಇಂದಿನ ಹಾಸ್ಯದಲ್ಲಿ ತ್ರಾಸ ತೆಗೆದುಕೊಳ್ಳದೆ ಪ್ರಾಸ ಹುಟ್ಟಿಸುವದು, ಧರ್ಮ ಪುರಾಣ ಮುಂತಾದ ಹಳೆಯದರ ಕೊಳೆಯನ್ನು ಹೀಯಾಳಿಸುವದು, ಹೊಸದನ್ನು ನಾನಾ ರೀತಿಯಿಂದ ವಿಮರ್ಶಿಸುವದು ಇವೆ ಅದರ ವೈಶಿಷ್ಟ್ಯ ಗಳಾಗಿವೆ. ನಿಬಂಧಗಳ ಹಾಸ್ಯದಲ್ಲಿ ಬರೆಹಗಾರನ ಸಹಜತೆಯು ಪೂರ್ಣವಾಗಿ ತುಂಬಿಬಂದಿದೆ. ಅಂತೆಯೆ ಸಾಮಾನ್ಯವಾಗಿ ಹಾಸ್ಯದಲ್ಲಿ ಯಾವ ಆಡಂಬರವೂ ಕೃತ್ರಿಮತೆಯೂ ಇಲ್ಲ. ಹಾಸ್ಯವು ಶ್ರೀರಂಗ, ಕಾರಂತ, ಕೈಲಾಸಂ ಮುಂತಾದವರ ಏಕಾಂಕನಾಟಕಗಳಲ್ಲಿಯೂ ಶ್ರೀನಿವಾಸ, ಆನಂದ, ಪ. ರಮಾನಂದ ಮುಂತಾದವರ ಸಣ್ಣಕತೆಗಳಲ್ಲಿಯೂ ಉಚ್ಚವಾದ ಸ್ಥಾನವನ್ನು ಪಡೆದರೂ ಸಹ ನಿಬಂಧಗಳ ಆತ್ಮವೆ ಹಾಸ್ಯವಿದ್ದುದರಿಂದ ಅವುಗಳಲ್ಲಿರುವ ಹಾಸ್ಯವೂ ಕನ್ನಡ ಸಾಹಿತ್ಯದಲ್ಲಿ ವಿಶೇಷ ವಾಗಿ ಮನ್ನಣೆಯನ್ನು ಪಡೆಯಬಲ್ಲುದಾಗಿದೆ.

ಹೊಸಗನ್ನಡ ಗದ್ಯದ ಶೈಲಿಯಲ್ಲಿ ನಿಬಂಧಗಳು ಮುಖ್ಯವಾದ ಪಾತ್ರವನ್ನು ವಹಿಸಿವೆ. ಈ ಶೈಲಿಯ ಗಾಳಿಯು ಮುಮ್ಮಡಿ ಕೃಷ್ಣರಾಜನ ಕಾಲದಿಂದಲೆ—ಅಂದರೆ ೧೮೫೫ರಿಂದಲೆ—ಮುದ್ರಾಮಂಜೂಷವೆಂಬ ಗ್ರಂಥದಿಂದ ಬೀಸಲಾರಂಭಿಸಿತ್ತು. ಮುಂದೆ ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಮುದ್ದಣನ 'ಗಾಮಾಶ್ವಮೇಧ', ತೂರಮರಿಯವರ 'ಕಾದಂಬರಿ' ಮುದ್ರಿತವಾಗಿ ಹೊಸಗನ್ನಡದ ವಿಜಯಪತಾಕೆಯನ್ನು ಹಿಡಿಯುವವರೆಗೂ ಮಿಶನರಿ ಜನರು ಪ್ರಾಚೀನ ಗ್ರಂಥ ಗಳನ್ನು, ಶಬ್ದಕೋಶಗಳನ್ನು, ಶಾಲೋಪಯೋಗಿ ಪುಸ್ತಕ ಗಳನ್ನು ಪ್ರಕಟಿಸುತ್ತ ಆ ಶೈಲಿಗೆ ಎಷ್ಟೊ ನೆರವಾದರು. ಆದರೂ 'ಇಂದಿನ ಗದ್ಯಶೈಲಿಯು ಕೇವಲ ಇಂದಿನದೆ' ಎಂದು ಶ್ರೀ. ಬೇಂದ್ರೆಯವರು ಹೇಳುವಲ್ಲಿ ತಥ್ಯಾಂಶವಿದೆ. ಏಕೆಂದರೆ ಇಂದಿನ ಗದ್ಯಶೈಲಿಯಲ್ಲಿ ಸಂಸ್ಕೃತ-ಕನ್ನಡ ಶಬ್ದಗಳ ತಾಕಲಾಟಕ್ಕಿಂತ ಇಂಗ್ಲಿಷ-ಕನ್ನಡ ಶಬ್ದಗಳ ತಾಕಲಾಟವು ಹೆಚ್ಚಾಗಿದೆ. ಶೈಲಿಯಲ್ಲಿ ಇಂಥ ಗೊಂದಲವು ಪ್ರಾರಂಭವಾದುದು ಇಪ್ಪತ್ತನೆಯ ಶತಮಾನದ ಆದಿಭಾಗದಿಂದಲೆ, ಮನಸ್ಸಿನ ಮೂರ್ತಿಯನ್ನು ಅಚ್ಚಳಿಯದಂತೆ ಭಾಷೆಯಲ್ಲಿ ಚಿತ್ರಿಸುವುದೆ ಶೈಲಿಯ ಮುಖ್ಯವಾದ ಗುಣವೆಂದು ಪ್ರಸಿದ್ಧ ವಿಮರ್ಶಕರಾದ ಗಿಬನ್ನರು ಹೇಳುತ್ತಾರೆ. ಆಂಗ್ಲಭಾಷೆಯ ವಿಶೇಷ ಸಂಪರ್ಕದಿಂದ ಕರ್ನಾಟಕದಲ್ಲಿ ಆಧುನಿಕ ಜನರ ಮನಸ್ಸು ಆ ಭಾಷೆ ಯಲ್ಲಿಯೆ ಆದಷ್ಟು ವಿಚಾರಿಸುವುದನ್ನು ಅಭ್ಯಾಸಮಾಡಿದೆ; ಹಾಗೆ ವಿಚಾರಿಸುವುದು ನಮ್ಮ ಜನರ ಸಂಸ್ಕೃತಿಯಲ್ಲಿ ಬೆರೆತುಹೋಗಿದೆ. ನಿಬಂಧಕಾರರಂತೂ ಬರೆಹಗಳಲ್ಲಿ ತಮ್ಮ ಮನಸ್ಸಿನ ನಿರ್ಝರಿಯನ್ನು ಹರಿಸುವವರು. ಇದರಿಂದ ಎಷ್ಟೊ ಇಂಗ್ಲಿಷ ಶಬ್ದಗಳೆ, ಅಷ್ಟೇಕೆ ವಾಕ್ಯಗಳೆ ಅವರ ಶೈಲಿಯಲ್ಲಿ ಬೆರೆತುಕೊಂಡಿವೆ. ಇದಕ್ಕೆ ಉದಾ-ಹರಣೆಗಳನ್ನು ಕೊಡುತ್ತ ಹೋಗಬೇಕಾಗಿಲ್ಲ. ಕನ್ನಡ ನಿಬಂಧಗಳನ್ನು ಓದುವ ಪ್ರತಿಯೊಬ್ಬ ಓದುಗನಿಗೂ ಈ ಮಾತು ಹೊಳೆಯದೆ ಇರಲಾರದು. ವು. ತಿ. ಯವರು, ವಿ. ಸೀ. ಯವರು, ವಿನಾಯಕರು, ಎ. ಎನ್. ಮೂರ್ತಿ-ರಾಯರು ಕಾವ್ಯದಲ್ಲಿಯ ಶೈಲಿಯನ್ನು ಗದ್ಯಕ್ಕೂ ತಂದು ನಿಬಂಧವು 'ವಚನ ಕಾವ್ಯ'ವೆಂದು ತೋರಿಸಿ ಕೊಟ್ಟಿದ್ದಾರೆ. ಹಲವು ಲೇಖಕರನ್ನು ಬಿಟ್ಟರೆ ಉಳಿದೆಲ್ಲ ನಿಬಂಧಕಾರರಲ್ಲಿ, ಅದರಲ್ಲಿಯೂ ಹಾಸ್ಯನಿಬಂಧಕಾರ ರಲ್ಲಿ, ಇಂಗ್ಲಿಷ ಶಬ್ದಗಳ ಉಪಯೋಗವು ಅತಿಶಯವಾಗಿ ಕಂಡುಬಂದಿದೆ. ಫಾಸಿಜಂ ಅಂದರೆ ಫಾಸಿಗೆ ಕೊಟ್ಟಂತೆ, ಫಿಜಿಕ್ಸ ಅಂದರೆ ಫಜೀತಿ ಶಾಸ್ತ್ರ; ಟ್ರಾ್ಯವ್ಹಲ್ ಆಜ ಯು ಲಾಯಿಕ ಅಂದರೆ ಸ್ವೇಚ್ಛಾಸಂಚಾರ ಎಂದು ವಿನೋದದಿಂದ ಹಲವರು ಅನೇಕ ವಿಧದಿಂದ ಆ ಇಂಗ್ಲಿಷ ಶಬ್ದಗಳಿಗೆ ಅರ್ಥಕೊಟ್ಟಿದ್ದಾರೆ. ಈ ಎಲ್ಲ ಚಿಪ್ಪಗಳು ಭಾಷಾಶುದ್ಧೀಕರಣ ಮಾಡಬೇಕೆಂಬ ತಜ್ಞರಿಗೆ ಮಾರ್ಗವನ್ನು ತೋರಿಸುತ್ತಿವೆ; ಅವರಿಗೆ ವಿಚಾರ ಮಾಡಲು ವಸ್ತುವನ್ನು ದೊರಕಿಸುತ್ತಿವೆ. ವಿಚಾರಪರಿ-ಪ್ಲುತರಾದ ಭಾಷಾಶಾಸ್ತ್ರಜ್ಞರು ಆದಷ್ಟು ಬೇಗನೆ ಆಂಗ್ಲ ಭಾಷೆಯ ಶಬ್ದಗಳಿಗೆ ಸರಿಯಾದ ಕನ್ನಡ ಶಬ್ದಗಳನ್ನು

ಹುಡುಕಿ ಕೊಟ್ಟರೆ ಸರಿ. ಇಲ್ಲವಾದರೆ ನಿಬಂಧಕಾರರ ಇಂಥ ಶೈಲಿಯ ಹಾವಳಿಯು ಹಾಗೆಯೆ ಉಳಿದೀತು! ಈ ನಿಷೇಧಾರ್ಥ ಸೂಚಕವಾದ ಅರ್ಥದಲ್ಲಿ ನಿಬಂಧಗಳು ಹೊಸಗನ್ನಡ ಗದ್ಯದ ಶೈಲಿಯನ್ನು ಸುಧಾರಿಸಲು ಮುಖ್ಯವಾದ ಪಾತ್ರವನ್ನು ವಹಿಸಿವೆ ಎಂದು ಕರೆದಿದ್ದೇನೆ.

ಎಲ್ಲವನ್ನೂ ಹೇಳಿದಮೇಲೆ ಇನ್ನು ಒಂದೆರಡು ಮಾತುಗಳನ್ನು ನಿಬಂಧಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯವಾಗಿದೆ. ಸಾಹಿತ್ಯದ ಮೇಲೆ ಹಾಸ್ಯದಿಂದ ಟೀಕೆ ಮಾಡುವ ವಿಷಯವನ್ನು ಎಷ್ಟೊ ನಿಬಂಧಕಾರರು ಆರಿಸಿಕೊಂಡಿದ್ದಾರೆ. ಆ ವಿಷಯದ ಮೇಲೆ ತಮ್ಮ ವಕ್ರದೃಷ್ಟಿಯನ್ನು ತೋರಿಸಿ, ತಮ್ಮ ಕಟುಟೀಕೆಯ ಗದೆಯನ್ನೆ ಎತ್ತಿದ್ದಾರೆ. ನಿಬಂಧಕಾರರ ಈ ದೃಷ್ಟಿಯು ೧೯೩೧ ರಲ್ಲಿ ವಿ. ಕೃ. ಗೋಕಾಕರು ಬರೆದ 'ಯುಗಾಂತರ' ದಿಂದ ಪ್ರಾರಂಭವಾಯಿತು. ನಮ್ಮ ಸಾಹಿತ್ಯದಲ್ಲಿ ವಿಶೇಷವಾಗಿ ಹೊಸದರಲ್ಲಿ ಎದ್ದುಕಾಣುವ ಕೆಲವು ದೋಷಗಳಿಂದ ಈ ಟೀಕೆ ಸ್ವಾಭಾವಿಕವಾಗಿ ಪ್ರೇರಣೆಹೊಂದಿದೆ. ಅದು ಮೊದಮೊದಲು ಜನರ ಮನಸ್ಸನ್ನು ಹಿಡಿಯಿತು. ನಮ್ಮನ್ನೆ ನಾವು ಸುಧಾರಿಸಿಕೊಳ್ಳಲು ಟೀಕೆ ಬೇಕು, ಹಾಸ್ಯಬೇಕು; ಇದನ್ನು ಎಲ್ಲರೂ ಒಪ್ಪಲೆ ಬೇಕು. ಆದರೆ ಇದೆ ಮುಂದೆ ವಿಪರೀತಕ್ಕೆ ಹೋಗಿ ದೊಡ್ಡ ಹಾವಳಿಯನ್ನೆ ಎಬ್ಬಿಸಿತು. ಪ್ರತಿಯೊಬ್ಬ ನಿಬಂಧಕಾರನು ಆ ವಿಷಯದ ಬಗ್ಗೆ ಏನಾದರೂ ಟೀಕೆಯನ್ನು ಬರೆಯದೆ ಬಿಡನು. 'ಯದ್ವಾ ತದ್ವಾ', 'ಕೋದಂಡನ ಉಪನ್ಯಾಸಗಳು' ಮುಂತಾದ ಪುಸ್ತಕಗಳು ಈ ಮಾತಿಗೆ ನಿದರ್ಶನವಾಗಿವೆ. ಅತ್ಯಾಶೆ ಗತಿಗೆಡಿಸುವದಂತೆ. ಆದ್ದರಿಂದ ಈ ಅತಿರೇಕದ ಟೀಕೆಯು ನಿಬಂಧಕಾರರ ಬರೆವಣಿಗೆಯಲ್ಲಿ ಬೇಗನೆ ಕಡಿಮೆಯಾದರೆ ಒಳಿತಲ್ಲವೆ? ಇನ್ನೊಂದು ಮಾತೆಂದರೆ 'essay' ಇದಕ್ಕೆ 'ಹರಟೆ' ಎಂಬ ಶಬ್ದವು ರೂಢಿಯಲ್ಲಿ ಬಂದುದರಿಂದ ಎಷ್ಟೊ ಲೇಖಕರು ಅದರ ಗೂಢಾರ್ಥವನ್ನು ತಿಳಿದುಕೊಳ್ಳದೆ ಜನರನ್ನು ನಗಿಸುತ್ತ ಒಣ ಹರಟೆಯನ್ನು ಕೊಚ್ಚುವುದೆ ನಿಬಂಧದ ಧ್ಯೇಯವೆಂದು ತಿಳಿದಿದ್ದಾರೆ. ಸಣ್ಣಕಥೆ ಸಣ್ಣಕತ್ತೆ ಅಲ್ಲ; ಕಾವ್ಯದಲ್ಲಿಯ ಸರಳ ರಗಳೆ ಸಾರವಿಲ್ಲದ ರಗಳೆ ಅಲ್ಲ; ಗದ್ಯದಲ್ಲಿಯ ಹರಟೆ ಬರಡು ಹರಟೆ ಅಲ್ಲ. ಆತ್ಮೀಯ ನಿಬಂಧವೆ 'ಹರಟೆ' ಯೆಂದೂ, ನಿಬಂಧಕ್ಕೆ ಅನೇಕ ಮುಖಗಳಿವೆ ಎಂದೂ ಲೇಖಕರು ತಿಳಿದುಕೊಂಡರೆ ಕನ್ನಡದಲ್ಲಿ ಲ್ಯಾಂಬರಂಥ ಉತ್ತಮ ನಿಬಂಧಕಾರರು ಬೇಗನೆ ಬೆಳಕ ಕಾಣುವರೆಂದು ಹೇಳುವಲ್ಲಿ ಸಂಶಯವೆ ಇಲ್ಲ.

ಸದಭಿರುಚಿ, ಸದಸದ್ವಿವೇಕ ಬುದ್ಧಿ, ಅನನ್ಯವಾದ ವ್ಯಕ್ತಿತ್ವದ ನಾವೀನ್ಯಗಳನ್ನು ಎತ್ತಿ ತೋರುವ ಕನ್ನಡ ನಿಬಂಧಗಳು ಉತ್ತಮವಾದ ಹಾಸ್ಯದಿಂದ ಮತ್ತು ಶೈಲಿಯಿಂದ ಒಡಗೂಡಿ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಿಗಿಂತ ಮುಂದಡಿಯಿಡುವನೆಂಬ ಚಿಹ್ನಗಳು ಈಗಾಗಲೆ ತೋರುತ್ತಲಿವೆ. ವಿಶ್ವಸಾಹಿತ್ಯದಲ್ಲಿ ಮುನ್ನಣಿಯನ್ನು ಪಡೆದಿರುವ ನಿಬಂಧಗಳು ಕನ್ನಡದಲ್ಲಿ ಭಾಷಾಂತರವಾಗುತ್ತಲಿವೆ. ವಿಷಯಗಳಲ್ಲಿಯೂ ರೂಪಗಳಲ್ಲಿಯೂ ವಿವಿಧತೆ ತುಂಬಿ ತುಳುಕುತ್ತಿದೆ. ಜನರೆಲ್ಲರೂ ಆತುರತೆಯಿಂದಲೂ ಆಸಕ್ತಿಯಿಂದಲೂ ಅವುಗಳ ಕಡೆಗೆ ನೋಡುತ್ತಲಿದ್ದಾರೆ. ಯಾರೂ ಇದುವರೆಗೂ ಡಾ. ಜಾನ್ಸನ್‌ರಂತೆ ನಿಬಂಧವನ್ನು 'ಮನಸ್ಸಿನ ಶಿಥಿಲಗತಿ' ಎಂದು ಕರೆದಿಲ್ಲ; ಅಥವಾ ಒಂದು ಹೊತ್ತಿನಲ್ಲಿ "ಈ ನಿಬಂಧಗಳು ಎಷ್ಟು ವ್ಯರ್ಥವಾದವುಗಳು!..... ಅವು ಸಾಧಿಸುವುದಾದರೂ ಎಷ್ಟು ಕಡಿಮೆಯಾಗಿದೆ! ಕಡಿಮೆಯಿದ್ದರೂ ಎಷ್ಟು ನಿರರ್ಥಕವಿದೆ!" ಎಂದು ವಿಲಿಯಮ್ ಹ್ಯಾಜ್ಲಿಟ್‌ನು ಉದ್ಗಾರತೆಗೆದಂತೆ ಇನ್ನೂ ಯಾವ ಓದುಗರೂ ನುಡಿದಿಲ್ಲ. ಕನ್ನಡ ನಿಬಂಧಗಳು ಉದಯೋನ್ಮುಖವಾದ ಹಸುಗೂಸುಗಳಾಗಿವೆ. ಪೂರ್ವ ಪಶ್ಚಿಮ ಘಟ್ಟಗಳ ನಡುವೆ ಕಂದವ್ವ ಲಾಲಿಯೆಂದು ಕನ್ನಡ ತಾಯಿಯನ್ನು ತೂಗಿದಂತೆ,

ಯಾತ ಯಾತರ ಗಾಳಿ ಎಲೆಯ ತೋಟದ ಗಾಳಿ
ಸುತ್ತಾಲು ಗಾಳಿ ಸುಳಿಗಾಳಿ ನನ್ನಯ್ಯನ
ತೊಟ್ಟೀಲ ಗಾಳಿ ಮನೆತುಂಬ

ಎಂಬ ಜೋಗುಳವನ್ನು ಹಾಡುತ್ತ, ಈ ತೊಟ್ಟಿಲಗೂಸನ್ನು ಸುವ್ವಿಗೆಯ್ದು ತೂಗಿ ಬೆಳೆಯಿಸುವುದು ಕನ್ನಡಿಗರ ರಸಿಕ ಧರ್ಮವಾಗಿದೆ.

(ಮುಗಿದುದು)

—ವರದರಾಜ ಹುಯಿಲಗೋಳ

# ಮಾನೂರಿನ ಮಹದೇವ

You have worshiped the Gods in the temples long enough ; it is time you started worshiping the God in man.

ಮಾನೂರು ಒಂದು ಚಿಕ್ಕ ಊರು. ಸಮೀಪದ ಪಟ್ಟಣದಿಂದ ಅಲ್ಲಿಗೆ ಮೂರು ಹರದಾರಿ ದೂರಾಗಬಹುದು. ದಾರಿ ಸ್ವಲ್ಪ ದುರ್ಗಮ ಆಗಿದ್ದು ಪಟ್ಟಣದ ರಸ್ತೆಗಳಲ್ಲಿ ಓಡಾಡಿದ ನನಗೆ ಭರ್ತೃಹರಿ ಹೇಳಿದ ಒಂದು ಮಾತಿನ ನೆನಪು ಕೊಡುವುದು; ಸುಖ ಯಾವದೆಂದು ಕೇಳಿದಕ್ಕೆ ಅವನು ಪ್ರವಾಸ ಮಾಡದಿರುವದೆ ಸುಖ ಎಂದನಂತೆ. ಆದರೆ ಮಾನೂರಿಗೆ ತಲುಪಿ ಆಊರ ಮನೋಹರ ನಿಸರ್ಗವನ್ನು ನೋಡಿದಾಗ ದಾರಿಯಾಯಾಸ ಮರೆಯುತ್ತೇವೆ. ನಾನು ಆ ಊರನ್ನು ನೋಡಿದುದು ಒಮ್ಮೆ ಮಾತ್ರ. ಆದರೂ ಅಂದು ಅಲ್ಲಿ ನೋಡಿದ ದೃಶ್ಯಗಳು ಈಗಲೂ ಕಣ್ಣುಮುಂದೆ ನಿಚ್ಚಳವಾಗಿ ನಿಲ್ಲುತ್ತವೆ. ಪಟ್ಟಣದಲ್ಲಿ ದಿನದಿನವೂ ನೋಡಿದುದನ್ನೆ ನೋಡಿ ನೋಡಿ ಮನಸು ಅಸಮಾಧಾನಗೊಂಡು ಕಣ್ಣು ಹೊನದನ್ನು ಬಯಸಿದಾಗ ಅಲ್ಲಿ ನೋಡಿದ ನಿತ್ಯ ನೂತನ ದೃಶ್ಯಗಳ ಸೊಬಗನ್ನು ಅನುಭವಿಸಿದ ಹೃದ್ಯವಾದ ಶಾಂತವಾದ ಸಮಾಧಾನವನ್ನು ಸ್ಮರಿಸಿಕೊಂಡು ಎಷ್ಟೋ ವೇಳೆ ಆನಂದಪಟ್ಟಿದೇನೆ.

ಊರ ಮಧ್ಯದಲ್ಲೊಂದು ಹಳೆಯ ದೇವಾಲಯ ಇದೆ. ಅದು ಬಹಳ ದೊಡ್ಡದಿಲ್ಲ; ಅದರಲ್ಲಿರುವ ದೇವರು ದೊಡ್ಡವ— ಮಹದೇವ. ಗರ್ಭಗುಡಿ ಶಿಲೆಯಿಂದಲೆ ನಿರ್ಮಿತವಾದುದು. ಅದರ ಗೋಡೆಯ ಹೊರಬದಿಯಲ್ಲಿ ರಾಮಾಯಣ ಭಾರತಗಳ ಚಿತ್ರಗಳನ್ನು ಕೆತ್ತಿದಾರೆ. ಈಗ ಅವುಗಳಲ್ಲಿ ಹಲವು ಮೈಮೇಲೆ ಸಾವಟಿ ಬೆಳೆಸಿಕೊಂಡೂ ಹುಡುಗರಿಂದ ಬಂಣ ಬಳೆಸಿಕೊಂಡೂ ಗುರುತು ಮರೆಸಿಕೊಂಡಿವೆ. ಪೂರ್ವಕ್ಕಿರುವ ಸ್ವಲ್ಪ ಕಿರಿದಾದ ಬಾಗಿಲಿಂದ ನೋಡಿದರೆ ಒಳಗಿರುವ ದೀಪದ ಶಾಂತ ಪ್ರಕಾಶದಲ್ಲಿ ಮಹದೇವ ವಿಗ್ರಹ ಭವ್ಯವಾಗಿ ತೋರುವುದು. ಗರ್ಭಗುಡಿಯ ಸುತ್ತ ಅಂಗಣ ವಿಶಾಲವಾಗಿದೆ. ದೇವರಿಗಿದಿರಾಗಿ ಎತ್ತರವಾದ ಧ್ವಜಸ್ತಂಭ– ಬಹಳ ಹಳೆಯದಾದುದರಿಂದ ಬಲಗುಂದಿ— ಒಂದು ಕಡೆಗೆ ಸ್ವಲ್ಪ ವಾಲಿ ನಿಂತಿದೆ. ಅಂಗಣವನ್ನಾವರಿಸಿ ತೆಂಕು ಬಡಗು ದಿಕ್ಕುಗಳಲ್ಲಿರುವ ಎತ್ತರವಾದ ಗೋಡೆ ಹಲವುಕಡೆ ಕುಸಿದುಬಿದ್ದಿದೆ. ಮೂಡು ಬಡಗುಗಳಲ್ಲಿರುವ ಗೋಪುರಗಳೂ ಈಗ ವಿಕೃತವಾಗಿವೆ. ಬಡಗು ಗೋಪುರ ಮಹಾದ್ವಾರದಿಂದ ಹೊರಟರೆ ಮುಂದೆ ಹಾಸುಗಲ್ಲುಗಳಿಂದ ರಚಿತವಾದ ವಿಶಾಲವಾದ ಕೆರೆಯಿದೆ. ಪಕ್ಕದಲ್ಲೊಂದು ಅರಳೀಮರದ ಕಟ್ಟೆಯಿದೆ. ಮೂಡು ಗೋಪುರದ ಮಹಾದ್ವಾರದ ಹೊರಗೆ ತೆಂಗಿನ ತೋಟವಿದೆ. ತೋಟಕ್ಕೆ ತಾಗಿ ಸಣ್ಣದೊಂದು ತೊರೆ ಹರಿಯುವುದು. ಅದು ತೆಂಕಣಿಂದ ಹರಿದುಬಂದು ಪೂರ್ವದಿಂದಲೂ ಬಡಗಿನಿಂದಲೂ ದೇವಾಲಯವನ್ನು ಅರ್ಧಚಂದ್ರಾಕೃತಿಯಲ್ಲಿ ಸುತ್ತಿ ಪಶ್ಚಿಮಕ್ಕೆ ಸಾಗುವುದು. ಈ ತರಂಗಿಣಿ ಅಲ್ಲೊಮ್ಮೆ ಸುಳಿಯಾಗಿ ಸುಳಿದು, ಇಲ್ಲೊಮ್ಮೆ ಕಳಕಳೆಂದು ನಕ್ಕು, ಒಂದೆಡೆ ನೀರನ್ನು ಸೋಂಕಿನಿಂತಿರುವ ಹೂಗೊಂಚಲುಗಳೊಡನೆ ಆಟವಾಡುತ್ತ ಮತ್ತೊಂದೆಡೆ ಮಳಲು ದಿಣ್ಣೆಗಳ ಮೇಲೆ ಹಾರುತ್ತ ಶಾಂತವಾಗಿ ನಿಧಾನವಾಗಿ ಹರಿವ ಭಂಗಿಯನ್ನು ನೋಡಿದರೆ ಯಾವಳೋ ಒಬ್ಬಳು ಶಾಪಗ್ರಸ್ತೆಯಾದ ಯಕ್ಷಿಣಿ ಆ ಊರಲ್ಲಿಳಿದು ಈ ಭೂಮಿಯ ಸೊಬಗನ್ನು ನೋಡುತ್ತ ಮುನ್ನಡೆಯುತಿದ್ದಾಗ ದಾರಿಯಲ್ಲಿ ಮಹದೇವನ ಸಾನ್ನಿಧ್ಯವನ್ನು ಕಂಡು ಆಕರ್ಷಿತಳಾಗಿಯೂ ಸುತ್ತಲಿನ ಸೃಷ್ಟಿಸೌಂದರ್ಯಕ್ಕೆ ಮನಸೋತವಳಾಗಿಯೂ ಅಲ್ಲಿಂದ ಮುಂದೆ ಹೋಗುವದಕ್ಕೆ ಮನಬಾರದೆ ಅಲ್ಲೆ ಸುಳಿದಾಡುತಿರಲು ಮಹದೇವನು ಅದನ್ನು ನೋಡಿ ಅವಳು ಹೊನಲಾಗಿ ಹುಟ್ಟಿ ಮಾಡಬೇಕಾದ ಕರ್ತವ್ಯಗಳು ಬೇರೆ ಇವೆ ಎಂದು ಎಚ್ಚರಿಸಿದುದರಿಂದ ಉಪಾಯಗಾಣದೆ ಅವಳು ಮನಸಿಲ್ಲದ ಮನಸಿನಿಂದ ಮುಂದೆಸಾಗುತಿರುವಳೋ ಎಂದು

ಭಾಸವಾಗುವುದು. ಹೊನಲಿನ ಆಚೆದಡದುದ್ದಕ್ಕೂ ಪೈರಿನ ಹೊಲಗಳು ಹಸನಾಗಿ ಮಲಗಿವೆ.

ಅನೇಕ ವರ್ಷಗಳ ಹಿಂದೆ ಆ ದೇವಸ್ಥಾನದ ಕೀರ್ತಿ ಬಹುದೂರದವರೆಗೆ ಹಬ್ಬಿತ್ತೆಂದೂ ಆದ್ದರಿಂದ ಆ ಊರ ಹೆಸರು ದೂರದ ಊರುಗಳಲ್ಲೂ ಕೇಳಬರುತಿತ್ತೆಂದೂ ಅಲ್ಲಿಯ ಜನರು ಹೇಳಿಕೊಳ್ಳುತಾರೆ. ಈಗಿನ ಸ್ಥಿತಿಗತಿಗಳಲ್ಲಾದರೂ ಅವರಿಗೆ ಅವರ ದೇವಸ್ಥಾನದ ಬಗ್ಗೆ ಇದ್ದ ಗೌರವ, ಅವರ ದೇವರ ಮೇಲೆ ಇದ್ದ ವಿಶ್ವಾಸ ಸಂಪೂರ್ಣ ಅಳಿದುಹೋಗಿಲ್ಲ. ಅವರಿಗೆ ಅವರ ಊರಿನ ಬಗ್ಗೆ ಒಂದು ಅಭಿಮಾನ, ತಾವು ಆ ಊರವರು ಎಂಬುದರಿಂದ ಸ್ವಲ್ಪ ಹೆಮ್ಮೆ ಇದ್ದಂತೆ ತೋರುತದೆ. ದೇವರ ಮತ್ತು ದೇವಸ್ಥಾನದ ಮಾತಂತಿರಲಿ; ಜನರ ಸುಖಸಂಪತ್ತಿನ ಮಾತೂ ಇರಲಿ; ಅಲ್ಲಿ ನಮ್ಮ ಕಣ್ಣಮುಂದು ನಿಲ್ಲುವ ನಿಸರ್ಗವನ್ನು ನೋಡಿದರೆ ಅವರ ಅಭಿಮಾನ ಹೆಮ್ಮೆಗಳು ಸರಿಯಾದುವೆಂದು ಒಪ್ಪಿಕೊಳ್ಳುತೇವೆ. ಅಂದು ಸಂಜೆ ಕೆರೆಯ ಮೇಲಿದ್ದ ಅರಳೀಕಟ್ಟೆಯ ಮೇಲೆ ಕುಳಿತು ಸುತ್ತಲಿನ ಅನುಪಮ ಮನೋಹರ ಪ್ರಕೃತಿಯ ಸೊಬಗನ್ನು ನೋಡುತ್ತ ನನಗೆ ನಾನೇ ದೇವರು ದೇವಾಲಯದ ಒಳಗಿರುವ ಮೂರ್ತಿಯಲ್ಲಿದಾನೆಯೇ, ಹೊರಗಿರುವ ನಿಸರ್ಗಸೌಂದರ್ಯದಲ್ಲಿದಾನೆಯೆ? ಎಂದು ಕೇಳಿಕೊಂಡಿದೇನೆ.

ಕಟ್ಟೆಯ ಮೇಲೆ ಕುಳಿತಿದ್ದಂತೆ ನನ್ನ ದೃಷ್ಟಿ ಎತ್ತೆತ್ತಲೂ ಓಡುತ್ತ ಕೊನೆಗೆ ಎದುರಿಗೆ ಕೂಗಳತೆಯ ಅಂತರದಲ್ಲಿದ್ದ ಬಯಲಿನ ಒಂದು ಬದಿಗಿದ್ದ ಸಣ್ಣದೊಂದು ತೋಪಿನ ಮೇಲೆ ಬಿದ್ದು ನಿಂತಿತು. ನಮ್ಮ ಭಾವನೆಗಳು ಅಸಾಮಾನ್ಯ ಸ್ಥಿತಿಯಲ್ಲಿರುವಾಗ ಕಣಿಗೆ ಕಂಡ ವಸ್ತುಗಳಲ್ಲೆಲ್ಲಾ ಏನಾದರೂ ಅಸಾಮಾನ್ಯತೆ ಇರಬಹುದೆ ಎಂದು ಭಾವಿಸುತ್ತೇವೆ. ಅಂದು ಆ ಮರಗಳ ಗುಂಪನ್ನು ಕಂಡೂ ನನಗೆ ಹಾಗೆ ಭಾವನೆ ಆಯಿತು. ಅಷ್ಟರಲ್ಲಿ ಅಲ್ಲಿಗೆ ಬಂದೊಬ್ಬ ವೃದ್ಧನೊಡನೆ 'ಅದೇನು ಮರಗಳ ಗುಂಪು?' ಎಂದು ವಿಚಾರಿಸಿದೆ. ಅವನು "ಅದನ್ನೇನು ಕೇಳುತೀರಿ ಸ್ವಾಮಿ, ಅದು ಹಳೆಯ ಮಾತು" ಎಂದ. ನನ್ನ ಕುತೂಹಲ ಹೆಚ್ಚಿತು. ಅದೇನೆಂದು ವಿಸ್ತಾರವಾಗಿ ಹೇಳಬೇಕೆಂದು ಕೇಳಿಕೊಂಡೆನು. ಅವನು ಹೇಳಿದುದು ಹೀಗಿದೆ;

ಮಾನೂರಿಗೆ ಆರೇಳು ಮೈಲು ದೂರದಲ್ಲಿ ಪಾವ್ಗೂರು ಎಂಬ ಮತ್ತೊಂದು ಊರು ಉಂಟು. ಅಲ್ಲಿ ಮಂಜ ನೆಂಬೊಬ್ಬ ಮುದುಕ ಬೇಸಾಯ ಮಾಡಿಕೊಂಡಿದ್ದ. ಬಡತನದಲ್ಲಿ ನಾಲ್ಕು ಎತ್ತು ಕಟ್ಟಿಕೊಂಡು ಮರ್ಯಾದೆಯಿಂದ ದಿನಗಳೆಯುತಿರಲು ಒಂದು ಕಾಲ ಅವನ ಮೇಲೆ ಘೋರ ಆಪತ್ತು ಬಂದಿತು; ಎತ್ತುಗಳ ಹಟ್ಟಿಯು ಉಣ್ಣಿಗಳಿಂದ ತುಂಬಿಹೋಯಿತು. ಜೀವನದ ಆಧಾರಸ್ತಂಭವಾಗಿದ್ದ ಎತ್ತುಗಳು ಸಾಯಲಿಕ್ಕಾದುದನ್ನು ಕಂಡು ಪಾಪ, ಮುದಿ ಮುಂಜನಿಗೆ ಹಗಲಿನಲ್ಲಿ ಹಸಿವು ತಿಳಿಯಲಿಲ್ಲ; ರಾತ್ರಿ ನಿದ್ರೆ ಹತ್ತಲಿಲ್ಲ. ಔಷಧಿ, ಮಂತ್ರ, ತಂತ್ರ, ಒಂದೂ ಬಿಡದೆ ಮಾಡಿಸಿದಾಗಲೂ ಉಣ್ಣಿಯ ಹಾವಳಿ ದಿನದಿನಕ್ಕೆ ಹೆಚ್ಚುತ್ತ ಹೋಯಿತು. ಕೊನೆಗೆ ಮುದುಕ ಕಟ್ಟಕಡೆಯ ದಾರಿಯೆಂದು, ತನ್ನ ಮೇಲೆ ಬಂದ ಗಂಡಾಂತರ ಪರಿಹಾರ ಆದರೆ ಮಾನೂರ ಮಹದೇವನಿಗೆ ಒಂದು ಕಾಯಿ ಒಡೆಸುತೇನೆ, ಬಂದು ಆರತಿ ಬೆಳಗಿಸುತೇನೆ, ಇಲ್ಲವಾದರೆ ತಾನೂ ಅನ್ನ ನೀರು ಮುಟ್ಟದೆ ಸಾಯುತೇನೆ ಎಂದು ಹರಕೆ ಹೊತ್ತನಂತೆ. ಮತ್ತು ಏಳು ದಿನ ಅನ್ನನೀರಿಲ್ಲದೆ ಹಟ್ಟಿಯ ಗೋದಲೆಯ ಮೇಲೆ ಬಿದ್ದಿದ್ದು ಪಶುಗಳೊಡನೆ ತಾನೂ ಉಣ್ಣಿಗಳಿಂದ ಕಡಿಸಿಕೊಂಡನಂತೆ. ಎಂಟನೆಯ ದಿನ ಬೆಳಿಗ್ಗೆ ನೋಡುವಾಗ ವಿಪತ್ತು ಅರ್ಧಕರ್ಧ ಕಡಿಮೆ ಆಗಿತ್ತು. ಒಂಬತ್ತನೆಯ ದಿನ ಹಟ್ಟಿ ಸಂಪೂರ್ಣ ಪರಿಹಾರವಾಗಿತ್ತು. ಜಾನು ವಾರುಗಳು ಉಳಿದುವು; ಮಂಜೂನೂ ಬದುಕಿದ.

ಎರಡು ಮೂರು ದಿನಗಳಲ್ಲಿ ಸಂಕ್ರಾಂತಿ ಬರಲು ಮುಂಜನ ಮನಸುಕಿನಲ್ಲೆದ್ದು ದೇವರಿಗೆ ಹೇಳಿದ್ದ ಹರಕೆ ಒಪ್ಪಿಸುವದಕ್ಕಾಗಿ ಮಾನೂರಿಗೆ ಹೊರಟು ನಿಂತ. ಅವನ ಮಗ "ನೀನು ನಡೆಯಲಾರೆಯಪ್ಪಾ, ನಾನು ಹೋಗಿ ಒಪ್ಪಿಸಿ ಬರುತೇನೆ" ಎಂದರೂ ಕೇಳಲಿಲ್ಲ. "ಆ ಮಾದೇವ ದೊಡ್ಡವ ಮಗಾ– ನಮ್ಮ ಮನೆ ಮಾರು ಉಳಿಸಿದ. ನನ್ನ ಬಾಯಿಂದ ಬಂದ ಹರಕೆ ನನ್ನ ಕೈಯಿಂದಲೇ ಅವನಿಗೆ ಮುಟ್ಟಬೇಕು. ಇನ್ನು ನಾನು ಇಲ್ಲಿ ಎಷ್ಟು ದಿನ ಇದ್ದೇನು, ಕೊನೆಯ ಕಾಲಕ್ಕೆ ಅವನ ದೊಂದು ಸೇವೆಮಾಡಿ ಬರುತೇನೆ' ಎಂದು ನಡೆದನಂತೆ.

ಸಂಕ್ರಾಂತಿ ಮುಂತಾದ ಪರ್ವದಿನಗಳಲ್ಲಿ ಮಾನೂರು ದೇವಸ್ಥಾನಕ್ಕೆ ದೂರದ ಊರುಗಳಿಂದ ಭಕ್ತಜನರು ಬರುತಿದ್ದರಾದುದರಿಂದ, ಆದಿನಗಳಲ್ಲಿ ಬೆಳಿಗಿನ ಪೂಜೆ ಸ್ವಲ್ಪ ಹೊತ್ತಾಗಿಯೇ ಆಗುತಿತ್ತು. ಅಂದು ಮುಂಜ ಅಲ್ಲಿಗೆ ತಲುಪುವಾಗ ಹೊತ್ತು ಎರಡು ಮೂರು ಏರಿಬಂದಿತ್ತು. ಮುಖ ಕೈ ಕಾಲು ತೊಳೆದುಕೊಂಡು ಪೂರ್ವಕ್ಕಿದ್ದ

ಮಹಾದ್ವಾರದ ಬಳಿಹೋಗಿ ಕೈ ಮುಗಿದು ಅಡ್ಡಬಿದ್ದನು. ತೆಂಗಿನ ಕಾಯಿ ಬಾಳೆ ಹಂಣುಗಳನ್ನೂ, ಎಂಟಾಣೆ ರೊಕ್ಕವನ್ನೂ ದೇವಾಲಯದ ಪೂಜಾರಿಯ ವಶ ಒಪ್ಪಿಸಿ ತನ್ನ ಹರಕೆಯ ಸಂಗತಿ ತಿಳಿಸಿದ; ಮತ್ತು ಮುಂದಕ್ಕೂ ದೇವರು ಮನೆ ಮಕ್ಕಳು ಮರಿಗಳಿಗೆ ಕಲ್ಯಾಣ ಮಾಡುವಂತೆ ಬೇಡಿಕೊಳ್ಳಬೇಕೆಂದು ನಿವೇದಿಸಿಕೊಂಡ.

ಮಂಜ ಶೂದ್ರ. ಆದುದರಿಂದ ಮಹಾದ್ವಾರದ ಹೊರಗೆ ನಿಂದಿರಬೇಕು. ಒಂದು ಬದಿಗೆ ಸರಿದು ನಿಂತು ಕತ್ತು ದ್ದ ಮಾಡಿ ಒಳಗೆ ನೋಡುತಿದ್ದನು. ಪೂಜೆ ಪ್ರಾರಂಭ ಆಯಿತು. ನಗಾರಿ, ಶಂಖ, ವಾದ್ಯ, ತಮ್ಮಟೆಗಳ ಮೊಳಗು ಕೇಳಿಸಿದಾಗ ಅವನೆದೆಯಲ್ಲೂ ಮೊಳಗು ಹುಟ್ಟಿರಬೇಕು. ತುಸು ಹೊತ್ತಿನಲ್ಲಿ ಕಾಯಿ ಒಡೆಯುವ ಸಪ್ಪಳ ಕೇಳಿದಾಗ, ತಾನರ್ಪಿಸಿದ ಕಾಯಿಯನ್ನೂ ಆಗ ಒಡೆಯಬಹುದೆಂದು ಅವನಿಗೆ ಒಂದು ಕಡೆಯಿಂದ ಹರ್ಷವಾದರೆ, ಅದನ್ನು ನೋಡುವ ಪುಣ್ಯ ಇಲ್ಲವಲ್ಲಾ ಎಂದು ಮತ್ತೊಂದು ಕಡೆಯಿಂದ ಚಿಂತೆ. ಪೂಜಾರಿ ಸಾವಕಾಶವಾಗಿ ಆರತಿ ಎತ್ತುವದು ತೋರಿತು. ಅದರ ಬೆಳಕಿನಲ್ಲಿ ದೇವರ ಹೊಳೆಯುತಿದ್ದ ಮುಖ ಹೌದೋ ಅಲ್ಲವೋ ಎಂಬಂತೆ ಕಾಣಿಸಿತು. ಒಂದು ಆರತಿ ಕೆಳಗಿಟ್ಟು ಪೂಜಾರಿ ಮತ್ತೊಂದೆತ್ತಿದ. ಅದು ತನ್ನದೇ ಇರಬಹುದೇ ಎಂದುಕೊಂಡಿರಬಹುದು ಮಂಜ. ಅದರ ಬೆಳಕಿನಲ್ಲಿ ದೇವರ ಮುಖ ಮತ್ತೊಮ್ಮೆ ಜೆನ್ನಾಗಿ ಕಾಣಿಸುತಿದ್ದರೆ ಸತ್ತರೂ ಸ್ವರ್ಗ ಸಿಗಬಹುದೆಂದು ಅಭಿಲಾಷೆ ಪಟ್ಟಿರಬಹುದು....ಏನಾಯ್ತೋ ಯಾರಿಗೆ ಗೊತ್ತು, ಅವ ಮಹಾದ್ವಾರದಿಂದ ಒಳಗೆ ಹೋದ; ಅಂಗಣಕ್ಕಿಳಿದು ಧ್ವಜಸ್ತಂಭದ ಬಳಿಸಾರಿ ನಿಂತ. ಮತ್ತೆ ಮಂಜನಿಗೆ ತಾನೆಲ್ಲಿದಾನೆಂಬ ಎಚ್ಚರ ಬಂದುದು ದೇವಾಲಯದ ಊಳಿಗದ ಆಳು ಕೈಹಿಡಿದು ಎಳೆದಾಗಲೆ. ಮರುಕ್ಷಣದಲ್ಲಿ ಅವ ಹೊರಗೆ ತೋಟದಲ್ಲಿದ್ದ. ಒಳಗೆ ಕೋಲಾಹಲ ಎದ್ದಿತ್ತು.

ಮಧ್ಯಾಹ್ನ ಹೊತ್ತಿನಲ್ಲಿ ಊರ ಗೌಡನೂ ಪಂಚರೂ ದಯಮಾಡಿಸಿ ಅರಳೀಕಟ್ಟೆಯ ಮೇಲೆ ಉಪಸ್ಥಿತರಾದರು. ದೇವರ ಪೂಜಾರಿಯೂ ಚಿತ್ತೈಸಿದ. ಮಂಜ ಎಲ್ಲರಿಗೂ ಬಾಗಿ ಕೈಮುಗಿದ ಮೇಲೆ ವಿಚಾರಣೆಗಾರಂಭವಾಯಿತು. ಅಪರಾಧಿ ತಪ್ಪನ್ನು ಒಪ್ಪಿದ. ಒಪ್ಪದೆ ಏನು ಮಾಡಿಯಾನು? 'ಏಕೆ ಒಳಗೆ ಪ್ರವೇಶಿಸಿದೆ' ಎಂದು ಕೇಳಿದ್ದಕ್ಕೆ– 'ಅಲ್ಲೇಕೆ ನಿಂತಿರುವಿ ಬಾ,' ಎಂದು ಯಾರೋ ಒಳಗಿಂದ ಕರೆದಂತಾಯಿತು, ಹೋದೆ' ಎಂದನಂತೆ. ನಾನು "ಹಿಂದೆ ಎಂದಾದರೂ ಮುಂಜ ಇಂಥ ಅಪರಾಧ ಮಾಡಿದ್ದನೆ?" ಎಂದು ನನ್ನ ಕತೆಗಾರನೊಡನೆ ಕೇಳಿದೆ. ಅದಕ್ಕವ, "ಛೆ! ಅವನಂಥ ಸಂಭಾವಿತ ಮನುಷ್ಯ ಪಾವೂರಲ್ಲಿ ಇದ್ದಿಲ್ಲ. ಎಲ್ಲರಿಗೂ ಬಗ್ಗಿ ನಡೆಯುವವ, ಎಂದು ಆ ಊರ ಜನರು ಹೇಳುವದನ್ನು ಕೇಳಿದೇನೆ" ಎಂದ. ಮಾನೂರಿಂದ ಹಿಂದಿರುಗಿ ಬರುತಲೂ ಆಮೇಲೂ ಅನೇಕ ವೇಳೆ ಈ ವಿಚಾರವಾಗಿ ಯೋಚನೆ ಮಾಡಿದೇನೆ. ಪರಾಂಬರಿಸಿ ನೋಡಲು ಮಂಜನಿಗೆ ಒಳಗಿಂದ ಕರೆ ಕೇಳಿಸಿದ್ದರೂ ಇರಬಹುದೆಂದು ಹೊಳೆಯುತದೆ. ಯೌವನದ ಹುಮ್ಮಸಿರುವಾಗಲೂ ನಾಡಿನ ರೂಢಿಗೆ ವಿರುದ್ಧ ಹೋಗದವ, ವೃದ್ಧಾಪ್ಯದಲ್ಲಿ ನೆತ್ತರು ಬತ್ತಿ ಕೈಕಾಲು ಕಡ್ಡಿಯಾದಾಗ ಬೇಕೆಂದು ತಪ್ಪುದಾರಿ ತುಳಿದಾನೇ? ಅಸಂಭವ. ಅವನ ನಿಷ್ಕಪಟ ಭಕ್ತಿ, ಆಜಲ ವಿಶ್ವಾಸಗಳಿಗೆ ಮೆಚ್ಚಿದ ದೇವನ ಕರೆ ಅವನ ನಿರ್ಮಲಿನ ಹೃದಯಕ್ಕೆ ಕೇಳಿಸಿದ್ದರೂ ಇರಬಹುದು ಎಂದನಿಸುತದೆ. ಸ್ತನಗಳಲ್ಲಿ ಹಾಲು ತುಂಬಿ ದ್ರವಿಸಹತ್ತಿದಾಗ ತಾಯಿ, 'ಅಯ್ಯೋ ಕೂಸು ಹಸಿದಿದೆ, ಹಾಲು ಕುಡಿಯಲು ಬಯಸುತಿದೆ' ಎನ್ನುವಳು. ನಮಗೆ ಈ ಮಾತು ಸತ್ಯವೆಂದು ತೋರಲಿ ತೋರದಿರಲಿ ಕೂಸಿನ ತಾಯಿಯ ಮನಸಿಗೆ ಅದು ಸತ್ಯ, ತಾಯ್ತನದ ಅರಿವಿಲ್ಲದವರಿಗೆ ತಿಳಿಯದ ಒಂದು ಸತ್ಯ! ಮಂಜನಿಗೆ ದೇವಾಲಯದೊಳಗಿಂದ ಕರೆ ಕೇಳಿಸಿದುದರಲ್ಲಿಯೂ ಅಂಥದೊಂದು ಸತ್ಯ ಇರಬಹುದಲ್ಲವೆ?

ಆದರೆ ಅಂದು ಗೌಡನೂ ಪೂಜಾರಿಯೂ ಪಂಚರೂ ಅವನನ್ನು ಹುಚ್ಚನೆಂದರೆಂತೆ. ಕಡೆಗೆ ಆ 'ಹುಚ್ಚ'ನಿಂದಾದ ಅಪರಾಧಕ್ಕೆ ಪ್ರಾಯಶ್ಚಿತ್ತ ಏನೆಂಬ ಪ್ರಶ್ನೆ ಬಂತು. ಗೌಡ ಪೂಜಾರಿಯ ಮುಖ ನೋಡಿದ. ಅವನು "ಶೂದ್ರನು ದೇವಾಲಯ ಪ್ರವೇಶಿಸುವದು ಸಾಮಾನ್ಯವಲ್ಲ, ದೊಡ್ಡ ತಪ್ಪು, ಗೌಡರೇ. ಧ್ವಜಸ್ತಂಭವನ್ನೂ ಮುಟ್ಟಿದಾನೆ. ಅವನ ನೆರಳು ಗರ್ಭಗುಡಿಯ ಮೇಲೆ ಬಿದ್ದಿದ್ದರೂ ಇರಬಹುದು. ಆದ್ದರಿಂದ ಒಳಗೆ ಹೊರಗೆ ಎಲ್ಲಾ ಶುದ್ಧ ಆಗಬೇಕು. ದೇವರಿಗೆ ಪ್ರತ್ಯೇಕ ಪೂಜೆ ನಡೆಯಬೇಕು. ನಾಗನಿಗೂ ಅಭಿಷೇಕ ಆಗಬೇಕು. ಒಂದಿಪ್ಪತ್ತೈದು ಬ್ರಾಹ್ಮಣರಿಗಾದರೂ ಸಮಾರಾಧನೆ ನಡೆಯಬೇಕು. ಇಷ್ಟಕ್ಕೆಲ್ಲ ಹತ್ತುರೂಪಾಯಿಗೆ ಕಡಿಮೆ ಸಾಲದು' ಎಂದ. ಪಂಚರೂ ಅದಕೊಪ್ಪಿದರು. ಗೌಡ ಅಪರಾಧಿಯ ಕಡೆ ನೋಡಿ 'ಕೇಳಿಸಿತೇ' ಎಂದ. ತಲೆಗೆ ಕೈಯಿಟ್ಟು ಮುಖ

ತಗ್ಗಿಸಿ ಕುಳಿತ ಮಂಜನ ಕಂಣುಗಳು ತೋಯ್ದಿದ್ದುವು, ತುಟಿಗಳು ಅದುರುತಿದ್ದುವು; ಬಾಯಿಂದ ಮಾತೊಂದೂ ಹೊರಡಲಿಲ್ಲ. ಅವನ ಭಗ್ಗೆ ಕನಿಕರಗೊಂಡವನೊಬ್ಬನು ಜನನಂದಣಿಯಿಂದ ಮುಂದೆ ಬಂದು 'ಪಾಪ ಬಡವ, ಹತ್ತು ರೂಪಾಯಿ ಎಲ್ಲಿಂದ ಕೊಟ್ಟಾನು ಗೌಡರೇ, ಹೂ ಹಾಕುವಲ್ಲಿ ಹೂವಿನ ಎಸಳು, ಹೇಗಾದರೂ ಸ್ವಲ್ಪ ಕಡಿಮೆ ಮಾಡಿದರೆ ನಿಮ್ಮ ಹೆಸರು ಹೇಳಿಯಾನು" ಎಂದ. ಆದರೆ ಪೂಜಾರಿ ಒಪ್ಪದೆ ಗೌಡ ಹೆಚ್ಚು ಕಡಿಮೆ ಮಾಡಲಾರ. ಮತ್ತೊಬ್ಬನು " ದೇವರಿಗೇನು ಕಡಿಮೆ ಬಂದದೆ ಭಟ್ಟರೇ, ಬಡವರನ್ನು ಸಾಯಿಸುತೀರಾ ?" ಎಂದ. ಭಟ್ಟರು ಸ್ವಲ್ಪ ಕೆರಳಿದ ದನಿಯಲ್ಲಿ " ಸಂಬಂಧ ವಿಲ್ಲದ ವಿಚಾರದಲ್ಲಿ ಕೈಹಾಕಬಾರದು. ದೇವರಿಗೆ ಯಾವದು ಮೆಚ್ಚು ಯಾವದು ತುಚ್ಛ ಎಂದು ಶಾಸ್ತ್ರಗಳು ಹೇಳುತವೆ. ಅದೆಲ್ಲ ಶಾಸ್ತ್ರ ಓದಿದವರಿಗೇ ಗೊತ್ತು. ಬಾಯಿಗೆ ಬಂದಂತೆ ಆಡಿ ಪಾಪಕಟ್ಟಿಕೊಳ್ಳಬಾರದು" ಎಂದ. ಶಾಸ್ತ್ರ ಮತ್ತು ಪಾಪ ಎಂಬೆರಡು ಶಬ್ದ ಕೇಳಿದ ಬಳಿಕ ಜನರು ಮಾತಿತ್ತಿಲಲ್ಲ. ಗೌಡ ಪಂಚರನ್ನು ದ್ವೇತಿಸಿ 'ಹಾಗಾದರೆ ತೀರ್ಪು ಹೇಳಬಹುದಲ್ಲವೇ' ಎಂದ. ಅವರಲ್ಲೊಬ್ಬನು 'ಈ ಶೂದ್ರ ಮುಂಡೇದಕ್ಕೆ ಇಷ್ಟು ಪ್ರಾಯ ಆದರೂ ಒಂದಿಷ್ಟು ಬುದ್ಧಿ ಇರಬೇಡವೆ? ಪರಊರುಗಳಿಗೆ ಈ ಸುದ್ದಿ ಮುಟ್ಟಿದರೆ ದೇವಸ್ಥಾನದ ಗೌರವ ಎಷ್ಟು ಕುಂದುವುದು, ನೀವೆ ಯೋಚಿಸಿ ನೋಡಿ ಗೌಡರೆ.— ಮತ್ತೆ ಮಂದಿ ಈ ದೇವರಿಗೆ ಹರಕೆ ಹೊರುವರೇ?" ಎಂದನು. ಗೌಡ ಅಪರಾಧಿಗೆ ಹತ್ತು ರೂಪಾಯಿ ದಂಡ ಮಾಡಿದೆ ಎಂದು ತೀರ್ಪು ಹೇಳಿದ. ಮಂಜ ನೊಡನೆ ಹತ್ತು ಕಾಸೂ ಇದ್ದಿಲ್ಲ. ಅಥವಾ ಅಷ್ಟು ಬೆಲೆ ಬಾಳುವ ಒಡವೆ ವಸ್ತುಗಳಾದರೂ ಇದ್ದಿಲ್ಲ. ಆದ್ದರಿಂದ ಗೌಡನು ಪಾವೂರ ಗೌಡನಿಗೆ ಒಂದು ಪತ್ರ ಕೊಟ್ಟು, ಮಂಜ ದಂಡದ ಹಣವನ್ನು ಅವನಿಗೆ ಮುಟ್ಟಿಸಬೇಕೆಂದು ಗೊತ್ತು ಮಾಡಿದನು; ಜನರು ಮನೆಯ ದಾರಿ ಹಿಡಿದರು.

ಮಂಜ ಮೆಲ್ಲನೆದ್ದು ಮಹಾದ್ವಾರದ ಎದುರು ಸಾಷ್ಟಾಂಗ ಎರಗಿ, ಎದ್ದು ಮತ್ತೊಮ್ಮೆ ಕೈ ಮುಗಿದು ಬೆನ್ನು ತಿರುಗಿಸಿದ. ಆಗ ಅವನ ಗೂಡುಸೇರಿದ್ದ ಕಣ್ಣು ಗಳಲ್ಲಿ ತುಂಬಿದ್ದ ನೀರು ಬತ್ತಿ ಸುಕ್ಕಾದ ಕಪೋಲಗಳ ಮೇಲಿಂದಿಳಿದು ಭೂಮಿಗೆ ಬಿತ್ತು. ಅವನು ಊರು ಗೋಲನ್ನೆತ್ತಿಕೊಂಡು ತನ್ನೂರ ದಾರಿ ಹಿಡಿದ. ಮತ್ತೆ ಹಿಂದಿರುಗಿ ನೋಡಲಿಲ್ಲ.

ಆಗ ಮಧ್ಯಾಹ್ನ ಎರಡು ಗಂಟೆಯ ಸಮಯ ಆಗಿರ ಬಹುದು, ಬಿಸಿಲು ಸುಡುತಿತ್ತು. ಅರಳೀಕಟ್ಟೆಯ ಮೇಲೆ ಕುಳಿತು ನೋಡಿದರೆ ಎದುರಿಗೆ ಕಾಣುವ ಬಯಲಿಗೆ ಹೋದಾಗ ಆ ದಿನ ಹೊಟ್ಟೆಗೇನೂ ಇಲ್ಲದ್ದರಿಂದಲೂ ದುಃಖದಿಂದಲೂ ಅವನಿಗೆ ಬವಳಿ ಒಂದಂತಾಯಿತು. ಈಗ ತೋಪು ಇರುವಲ್ಲಿ ಆಗ ಒಂದೇ ಮರ ಇತ್ತು. ಅದಕ್ಕೊರಗಿ ಕುಳಿತ. ಎಷ್ಟೋ ಹೊತ್ತಿನ ಬಳಿಕ ತನು ಜೇತರಿಸಿಕೊಂಡು ಅಲ್ಲೆ ಹತ್ತಿರದಲ್ಲಿದ್ದ ಸಂಣ ಮನೆಗೆ ಹೋಗಿ ಬಾಗಿಲಲ್ಲಿ ನಿಂತು 'ತಾಯೀ, ಒಂದಿಷ್ಟು ನೀರು ಕೊಡುವಿರಾ?' ಎಂದು ಬೇಡಿದ. ಮನೆಯ ಹೆಂಗಸು ಹೊರಗೆ ಬಂದು ಅಪರಿಚಿತನೊಬ್ಬನು ನಿಂತಿರುವದನ್ನು ನೋಡಿ 'ಯಾವ ಊರವರಯ್ಯಾ ನೀವು? ಯಾವ ಜಾತಿ? .... ನಾನು ಶೂದ್ರಳು' ಎಂದು ಸಹಜವಾಗಿ ಕೇಳಿದಳು. ಬಾಗಿಲಿಗೆ ಬಂದವನು ಉತ್ತಮಜಾತಿಯವ ನಾಗಿದ್ದರೆ ಅವನಿಗೆ ತನ್ನ ಕೈಯಿಂದ ನೀರು ಕೊಟ್ಟು ಪಾಪ ಕಟ್ಟಿಕೊಳ್ಳಬಾರದೆಂದು ಅವಳ ತರ್ಕವಿದ್ದಂತೆ ತೋರುತ್ತದೆ. ಅದು ಅವಳು ತಿಳಿದಿದ್ದ ಧರ್ಮಗಳ ಲ್ಲೊಂದು. ಮಂಜನ ಒಣಗಿದ ಗಂಟಲಿಂದ 'ನಾನೂ ಶೂದ್ರನೆ' ಎಂದುತ್ತರ ಹೊರಟಿತು. ಜಗಲಿಯ ಮೇಲೆ ಕೂತಿರ ಹೇಳಿ ಅವಳು ಒಳಗಿಂದ ನೀರು ತಂದಿತ್ತಳು. ಅವನ ಬಾಡಿದ ಮುಖವನ್ನು ನೋಡಿ ಅವಳಿಗೆ ಅನು ಮಾನ ಆಯ್ತೆಂದು ತೋರುತದೆ. 'ಒಬ್ಬನು ದೇವಾ ಲಯಕ್ಕೆ ಹೋಗಿ ದಂಡ ಮಾಡಿಸಿಕೊಂಡನಂತೆ ....? ಎಂದು ಪ್ರಶ್ನೆ ಮಾಡಿದಳು. ಮಂಜ ನೀರು ಕುಡಿದು ಸ್ವಲ್ಪ ಜೇತರಿಸಿಕೊಂಡು ಎದ್ದುನಿಲ್ಲುವದರಲ್ಲಿದ್ದ; ಅವ ಳಿಂದ ಮಾತು ವಜ್ರಾಘಾತದಂತೆ ಅವನೆದೆಗೆ ಬಡಿಯಿತು; ದೊಪ್ಪನೆ ಗೋಡೆಗೊರಗಿದ. ಆ ಹೆಂಗಸು ಬಹಳ ಮರು ಗಿದಳು. ಅವಳ ಪ್ರಶ್ನೆ ಅವನನ್ನು ಅಷ್ಟು ನೋಯಿಸುವ ದೆಂದು ಮೊದಲು ತಿಳಿಯಲಿಲ್ಲ; ಕಡೆಗೆ ಶಕ್ತಿಮೀರಿ ಉಪಚರಿಸಿದಳು. ಅವನ ಮನಸ್ಸಿನುದ್ವೇಗ ತನು ಶಾಂತವಾದಾಗ ಹೇಳಿದಳು, 'ನಾನು ಭಟ್ಟರಿಗೆ ಹೇಳಿ ಸ್ವಲ್ಪಾದರೂ ಕಡಿಮೆ ಮಾಡಿಸುತೇನೆ, ಚಿಂತೆಮಾಡ ಬೇಡಿರಿ.' ಅವಳ ಸೌಹಾರ್ದಕ್ಕೆ ಬೆಲೆ ಕೊಡುವದಕ್ಕಾಗಿ ಮಂಜ ಮೆಲ್ಲನೆ ದೇವರಿಗೆ ಅಷ್ಟು ಬೇಕೆಂದಿದ್ದರೆ ಭಟ್ಟರು ನಿನ್ನ ಮಾತು ಕೇಳುವದುಂಟೇ?" ಎಂದ. ಅದಕ್ಕವಳು ಪ್ರತಿಷ್ಠೆಗೆ ಕುಂದು ಬಂದವಳಂತೆ ಸ್ವಲ್ಪ ಗರ್ವದಿಂದ 'ಏಕೆ ಕೇಳಲಿಕ್ಕಿಲ್ಲ? ನಾನು ನನ್ನ ದೇಹವನ್ನೆ ಅವನಿಗೆ

ಟ್ಟಿರುವಾಗ ಅವರು ನನ್ನದೊಂದು ಮಾತು ನಡೆಸಲಿಕ್ಕಿಲ್ಲವೆ?' ಎಂದಳು. ದುಃಖದಲ್ಲೂ ಅವನಿಗೆ ನಗು ಬಂತು. ಆ ಹೆಂಗಸಿಗೆ ತನ್ನ ದೇಹದೊಡೆಯನ ಮೇಲಿದ್ದ ಅಧಿಕಾರವನ್ನು ನೆನಸಿ ನಕ್ಕನೋ ಅಥವಾ ದೇವರ ಪೂಜಾರಿಯ ವಿಶ್ವಬಂಧುತ್ವವನ್ನು ನೆನಸಿ ನಕ್ಕನೋ, ಅಂತೂ ಮೆಲ್ಲನೆ ನಕ್ಕನಂತೆ ಅವಳ ಮಾತುಗಳಿಂದ ಅವನಿಗೇನೂ ಸಮಾಧಾನ ಆಗಲಿಲ್ಲ. ಎದ್ದು ಹೋಗಿ ಮೊದಲು ಕುಳಿತಿದ್ದ ಮರದೆಡೆಯಲ್ಲಿ ಕುಳಿತು ಬಿಟ್ಟ. ಒಮ್ಮೊಮ್ಮೆ ತನ್ನಷ್ಟಕ್ಕೆ ಏನೇನೋ ಹೇಳಿಕೊಂಡು ಅಂಗೈಯಿಂದ ಹಣೆ ಹೊಡೆದುಕೊಳ್ಳುವದಷ್ಟು ತೋರುತ್ತಿತ್ತು.

ಸಂಜೆ ಸೂರ್ಯಾಸ್ತದ ಕಾಲವಾದರೂ ಅವನು ಕೂತಲ್ಲಿಂದ ಎದ್ದಿರಲಿಲ್ಲ. ಅಜುಬಾಜಿನ ಇಬ್ಬರು ಮೂವರು ಸೇರಿ ತಮ್ಮ ಮನೆಗೆ ಹೋಗೋಣವೆಂದು ಒತ್ತಾಸೆ ಮಾಡಿದರು. ಅವನು ಕದಲಲಿಲ್ಲ. ಅವರು ಅವನಿಗಾದ ದಂಡದ ಹಣವನ್ನು ತುಂಬಿಸುವದಾಗಿ ಹೇಳಿದರು. ಅದಕ್ಕೂ ಒಪ್ಪಲಿಲ್ಲ. 'ದಂಡ ಮಾಡಿಸಿಕೊಂಡವ ನಾನು–ನೀವಲ್ಲ' ಎಂದನು. ಅವರು ಬೇರೆ ಉಪಾಯ ಗಾಣದೆ 'ಹಾಗಾದರೆ ನಾವು ನಿನ್ನನ್ನು ಮನೆಗೆ ಮುಟ್ಟಿಸಿ ಬರುತೇವೆ, ಹೊಗೋಣ' ಎಂದರು. ಮುಂಜ ಮಾತಾಡಲಿಲ್ಲ, ಏನೋ ಯೋಚಿಸಹತ್ತಿದ. ಸ್ವಲ್ಪ ಹೊತ್ತು ಯೋಚಿಸುತಿದ್ದು ಕೊನೆಗೆ "ನನಗೀಗ ಎಪ್ಪತ್ತು ವಯಸ್ಸಾಯಿತು, ಎಂದಾದರೂ ಜನರಿಂದ ಛೀ ಹೇಳಿಸಿಕೊಂಡಿಲ್ಲ. ಈಗ ದಂಡ ಮಾಡಿಸಿಕೊಂಡು ಊರಿಗೆ ಹೇಗೆ ಹೋಗಲಿ? ನನ್ನ ಜನರಿಗೆ ಹೇಗೆ ಮುಖತೋರಿಸಲಿ? ಅಯ್ಯೋ ಮುಂಜಾ, ಊರಿಗೇ ಅಪಮಾನ ಮಾಡಿದಿಯಲ್ಲಾ; ಈ ಜೀವ ಇಟ್ಟುಕೊಂಡು ಹೇಗೆ ಬಂದಿ?' ಎಂದು ಜನರು ಕೇಳಿದರೆ ಏನು ಉತ್ತರ ಹೇಳಲಿ? ಮನೆಮಾರು ನೋಡಿಕೊಳ್ಳುವದಕ್ಕೆ ಬೆಳೆದ ಮಗನಿದ್ದಾನೆ. ಇನ್ನು ನಾನು ಊರಿಗೆ ಹೋಗುವದು ಆಗದ ಮಾತು" ಎಂದನಂತೆ. ಮುಂಜನ ಮಾತನ್ನು ಖಂಡಿಸಿ ಏನು ಹೇಳುವದಕ್ಕೂ ಅವರಿಗೆ ತೋರಲಿಲ್ಲ. 'ಹಾಗಾದರೆ ಮುಂದೇನು ದಾರಿ ಅಂಣಾ' ಎಂದು ಸಂತಾಪದಿಂದ ಕೇಳಿದರು. ಅದಕ್ಕುತ್ತರ ಹೇಳಿದ "ಮುಂದಿನ ದಾರಿ ಆ ಮಾದೇವನಿಗೆ ಗೊತ್ತಿದೆ. ಅವನನ್ನೆ ನಂಬಿದೇನೆ. ಅವನಿಗೆ ನನ್ನ ಮೇಲೆ ಕರುಣೆಯಿದ್ದರೆ ಇಂಥಾ ಸಮಯದಲ್ಲಿ ಬಿಟ್ಟು ಹಾಕುವನೆ?" ಅವರಿಗೆ ಆಗ ಅವನ ಮಾತಿನ ಅರ್ಥವಾಗಲಿಲ್ಲ. ಮೂಕರಾಗಿ ಅಲ್ಲಿಂದ ತೆರಳಿದರು.

ರಾತ್ರಿ ಬೆಳಗಾಯಿತು. ದೇವರ ಪೂಜಾರಿ ಆ ಸಂಣ ಮನೆಯಿಂದ ಹೊರಬಿದ್ದು, ಹಿಂದಿನ ದಿನ ಆ ಶೂದ್ರನಿಗಾದ ದಂಡದ ಹಣವನ್ನು ಕಡಿಮೆ ಮಾಡುವದಕ್ಕೆ ಏನು ಕಾರಣ ಕೊಡಲಿ ಎಂದು ಯೋಚಿಸುತ್ತ ದೇವಸ್ಥಾನದ ದಾರಿ ಹಿಡಿದು ಹೊರಟ. ಹೋಗುತ್ತ ಮೊದಲು ಕಂಡುದು, ಮರಕ್ಕೊರಗಿ ಕುಳಿತು ಕಂಣುಮುಚ್ಚಿದ ಮುಂಜನನ್ನು. ಮಹದೇವ ಮುಂಜನನ್ನು ಬಿಟ್ಟುಹಾಕಲಿಲ್ಲ! ಊರಿನ ಅವನ ಜಾತಿಬಾಂಧವರೆಲ್ಲ ಸೇರಿ ಅವನಿಗೆ ಆ ಮರದಡಿಯಲ್ಲಿ ಸಮಾಧಿ ಕಾಣಿಸಿದರಂತೆ. ಸಮಾಧಿಯ ಮೇಲೆ ಈಗ ಆ ತೋಪು ನಿಂತದೆ ಈಗಲೂ ಜನರು ಆ ಕಡೆಗೆ ಸ್ವಲ್ಪ ಭಯದಿಂದಲೂ ಸ್ವಲ್ಪ ಭಕ್ತಿಯಿಂದಲೂ ನೋಡುವರು.

ನನ್ನ ಕತೆಗಾರ ಕತೆಮುಗಿಸಿ ಹೋಗಲೆದ್ದ. ನಾನು ಅವನನ್ನು ನಿಲ್ಲಿಸಿ ಕೇಳಿದೆ "ಇದಾಗಿ ಎಷ್ಟು ವರ್ಷ ಆಯಿತು?" "ಈಗ ನನಗೆ ಎಪ್ಪತ್ತು ಮೀರಿತು. ಆಗ ಸಂಣ ಹುಡುಗನಾಗಿದ್ದೆ" ಎಂದ.

"ಭಟ್ಟರು ಈಗ ಇದ್ದಾರೆಯೆ?"

"ಎಂದೋ ಹೋದರು."

"ಗೌಡರು?"

"ಅವರೂ."

"ಅವರ ಸಮಾಧಿಗಳು ಎಲ್ಲಿವೆ'" ಎಂದು ಕೇಳಿದೆ. ಅವನು ನಕ್ಕು ಹೇಳಿದ: "ಎಂದೋ ಆದರು, ಎಂದೋ ಹೋದರು ಸತ್ತವರಿಗೆಲ್ಲ ಸಮಾಧಿ ಕಟ್ಟಿದರೆ, ಇದ್ದವರಿಗೆ ಜಾಗ ಉಳಿದೀತೆ?"

"ಆ ಪಂಚರು, ಆ ಹೆಂಗಸು, ಅವರೂ ಯಾರೂ ಇಲ್ಲವೆ?"

"ಒಬ್ಬರೂ ಇಲ್ಲ. ಆ ಹೆಂಗಸು ಸತ್ತು ಬಹಳ ಕಾಲ ಆಗಲಿಲ್ಲ ನಮಗೆಲ್ಲ ಈ ಕತೆ ಹೇಳಿದವಳು ಅವಳೇ."

ಅವನು ನನ್ನೊಬ್ಬನನ್ನೆ ಕಟ್ಟೆಯಮೇಲೆ ಬಿಟ್ಟು ಹೊರಟುಹೋದನು. ಸೂರ್ಯದೇವ ಕಡಲಿಗಿಳಿಯುವ ದರಲ್ಲಿದ್ದ; ಸಂಜೆಗೆಂಪು ಸುತ್ತಲೂ ಹರಡಿತ್ತು. ನಾನು ಎದ್ದುನಿಂತು ಆ ತೋಪಿನ ಕಡೆ ನೋಡಿದೆ. ತಿರುಗಿ ದೇವಾಲಯವನ್ನು ನೋಡಿದೆ. ಒಡಲೊಳಗಿಂದೊಂದು ದನಿ "ಮಹದೇವನಿರುವದೆಲ್ಲಿ?" ಎಂದು ಕೇಳಿತು.

—ಸು. ಶಿ.

# ಹಿಂದು ಮುಸ್ಲಿಮರ ಭಿನ್ನತೆಗೆ ಕಾರಣಗಳೇನು ? ಅವುಗಳ ನಿವಾರಣೆಗಳು *

ಹಿಂದು ಮುಸಲ್‌ಮಾನರು ಒಂದೇ ದೇಶದಲ್ಲಿ ವಾಸ ಮಾಡತಕ್ಕವರು. ಇಬ್ಬರ ಲಾಭನಷ್ಟಗಳು ಒಟ್ಟಿಗೆ ಇವೆ. ಎರಡು ಕೋಮಿನವರ ಜೀವನ ಸಮಸ್ಯೆಗಳು ಒಂದೇ ಆಗಿ ಇವೆ. ಹೀಗಿದ್ದರೂ ಎರಡು ಜನಾಂಗದವರೂ ಹಾವು ಕೀರಗಳಂತೆ ವರ್ತಿಸುತ್ತಿದ್ದಾರೆ. ಕೆಲವರಿಗಂತೂ ಹಿಂದು, ಮುಸ್ಲಿಂ ಐಕ್ಯತೆಯಲ್ಲಿ ಸ್ವಲ್ಪವೂ ನಂಬಿಗೆಯೆ ಇಲ್ಲ.

ಈ ದೇಶದಲ್ಲಿ ಹಿಂದೆ ಆರ್ಯ, ಅನಾರ್ಯರಲ್ಲಿ ಜಗಳ ವಿತ್ತು. ಆದರೂ ಇವೆರಡು ಕೋಮಿನವರೂ ಒಟ್ಟಾಗಿ ಅವರ ಸಂಸ್ಕೃತಿ ಮತ್ತು ಧರ್ಮಗಳು ಒಂದೇ ಆಗಿ ಹೋಗಿವೆ.

ಹಿಂದು ಮುಸಲ್‌ಮಾನರಲ್ಲಿ ಇರುವ ಭಿನ್ನತೆಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದೆ. ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ವಾಸ್ತವಿಕತೆಯು ವ್ಯಕ್ತವಾಗುವುದು.

| ಹಿಂದು | ಮುಸಲ್ಮಾನ್ |
|---|---|
| ೧. ಮೂರ್ತಿ ಪೂಜಕರು. | ೧. ಮೂರ್ತಿಪೂಜಾ ವಿರೋಧಿಗಳು. |
| ೨. ಶಾಖಾಹಾರಿಗಳು. | ೨. ಮಾಂಸಾಹಾರಿಗಳು. |
| ೩. ಗೋವಧೆಯನ್ನು ವಿರೋಧಿಸುವರು. | ೩. ಬಯಸುವವರು. |
| ೪. ಪುನರ್‌ಜನ್ಮವಾದಿಗಳು. | ೪. ಅದನ್ನು ವಿರೋಧಿಸುವರು. |
| ೫. ಪೂಜೆಯಲ್ಲಿ ಗಾನ ಮಾಡುವರು. | ೫. ನಮಾಜಿನಲ್ಲಿ ಶಾಂತರೀತಿಯಲ್ಲಿರುವವರು. |
| ೬. ಪೂರ್ವಕ್ಕೆ ಮುಖ ಮಾಡಿ ಪೂಜೆ ಮಾಡುವರು. | ೬. ಪಶ್ಚಿಮಕ್ಕೆ ಮುಖ ಮಾಡಿ ನಮಾಜ್ ಮಾಡುವರು. |
| ೭. ಜುಟ್ಟನ್ನು ಬಿಡುವರು. | ೭. ಗಡ್ಡ ಬಿಡುವರು. |
| ೮. ಧಾರ್ಮಿಕ ಉದಾರತೆ ಇದೆ. | ೮. ಕಡಿಮೆ. |
| ೯. ಮುಸಲ್‌ಮಾನರನ್ನು ಅಸ್ಪೃಶ್ಯರೆಂದು ಭಾವಿಸುವರು. | ೯. ಯಾರನ್ನೂ ಆ ರೀತಿ ಭಾವಿಸುವುದಿಲ್ಲ. |
| ೧೦. ನಾಗರಿ ಲಿಪಿಯನ್ನು ಬರೆಯುವರು. | ೧೦. ಪಾರ್ಸಿ ಲಿಪಿಯನ್ನು ಬರೆಯುವರು. |

ಇನ್ನು ಇವುಗಳಲ್ಲಿ ಪ್ರತಿಯೊಂದನ್ನು ಒಂದೊಂದಾಗಿ ಪರೀಕ್ಷಿಸೋಣ.

### ಮೂರ್ತಿ ಪೂಜೆ

ಆರ್ಯಸಮಾಜಿಗಳು, ಬ್ರಹ್ಮಸಮಾಜಿಗಳು ಮುಂತಾದ ಅನೇಕ ಪಂಗಡಗಳು ವಿಗ್ರಹಾರಾಧನೆಯನ್ನು ಒಪ್ಪುವುದಿಲ್ಲ. ಮುಸಲ್ಮಾನರು ಗೋರಿಗಳನ್ನು ಪೂಜಿಸುವರು, ಮಕ್ಕಾದಲ್ಲಿನ ಶಿಲೆಯನ್ನು ಚುಂಬಿಸುವರು. ಮಸೀದಿಗಳಲ್ಲಿ ಪಾದರಕ್ಷೆಗಳೊಡನೆ ಹೋಗಲು ಅವಕಾಶಕೊಡುವದಿಲ್ಲ. ಇದೂ ಒಂದು ತರಹ ಮೂರ್ತಿಪೂಜೆಯೇ ಆಗಿದೆ. ಇಟ್ಟಿಗೆ, ಗಾರೆ ಮತ್ತು ಕಲ್ಲುಗಳಲ್ಲಿ ಇಟ್ಟಿರುವ ಆಧಾರ ಭಾವನೆಯೂ ಕೂಡ ಮೂರ್ತಿಪೂಜೆಯೇ. ಹಾಗೆ ನೋಡಿದರೆ ಹಿಂದುಗಳೂ ಮೂರ್ತಿಪೂಜಕರಲ್ಲ, ಮುಸಲ್ಮಾನರೂ ಅಲ್ಲ. ಇಟ್ಟಿಗೆ, ಕಲ್ಲುಗಳನ್ನು ಯಾರೂ ದೇವರೆಂದು ಭಾವಿಸುವುದಿಲ್ಲ, ದೇವರನ್ನು ನೆನಪಿಗೆ ತರುವ ಗುರುತು ಅಥವಾ ನಿಮಿತ್ತ ಮಾತ್ರ ಎಂದು ತಿಳಿದಿದ್ದಾರೆ. ಕೆಲವರಿಗೆ ಮಸೀದಿಯನ್ನು ನೋಡಿದಾಗ ದೇವರು ನೆನಪಿಗೆ ಬರುವಂತೆ, ಕೆಲವರಿಗೆ ಮೂರ್ತಿಯನ್ನು ಕಂಡಾಗ ಭಗವಂತನ ಸ್ಮರಣೆಯುಂಟಾಗುತ್ತದೆ. ಶ್ರೀರಾಮನ ಮೂರ್ತಿಯನ್ನು ಕಂಡಾಗ ಆತನ ತ್ಯಾಗ, ಉದಾರತೆ, ಪ್ರಜಾಪಾಲನೆ ಮತ್ತು ವೀರತ್ವ ಮುಂತಾದ ಗುಣಗಳ ಸ್ಮರಣೆಯಾಗುತ್ತದಲ್ಲದೆ, ಯಾರೇ ಆಗಲಿ

* ವರ್ಧಾದಲ್ಲಿನ ಸತ್ಯಾಶ್ರಮದ ಸಂಸ್ಥಾಪಕರಾದ ಸ್ವಾಮಿ ಸತ್ಯಭಕ್ತರ ಹಿಂದೀ ಲೇಖನದ ಅನುವಾದ.

" ನೀನು ಅಮೃತಶಿಲೆಯಿಂದಾದವನು. ಬಹಳ ಭಾರವಾಗಿದ್ದೀಯೆ " ಎಂದು ಹೇಳುವುದಿಲ್ಲ. ಮುಸಲ್ಮಾನರೂ ಕೂಡ ಪಶ್ಚಿಮದ ಕಡೆಗೆ ತಿರುಗುವುದು ಪ್ರಾರ್ಥನೆಯ ಆಧಾರಕ್ಕಾಗಿಯೇ. ಆದುದರಿಂದ ಇಬ್ಬರೂ ಮೂರ್ತಿ ಪೂಜಕರಲ್ಲ.

ಹಿಂದುಗಳು ವಿಗ್ರಹಗಳಿಲ್ಲದೆ ಸಂಧ್ಯಾವಂದನೆ ಮೊದಲಾದ ಅನೇಕ ಕರ್ಮಗಳನ್ನು ಮಾಡುವಾಗ, ಮೂರ್ತಿ ಇಲ್ಲದೆ ನಮಾಜನ್ನೇಕೆ ಮಾಡಬಾರದು? ಅದೇ ರೀತಿ ಮುಸಲ್ಮಾನರು ಕಾಬ, ಗೋರಿ, ಮತ್ತು ಪಂಜಾಗಳ ಆಧಾರವನ್ನು ತೆಗೆದುಕೊಳ್ಳುವಾಗ, ಮೂರ್ತಿಗಳ ಪೂಜೆಯ ಬಗ್ಗೆ ಕಾದಾಟವೇಕೆ?

## ಮಾಂಸಭಕ್ಷಣೆ

ಹಿಂದುಗಳಲ್ಲಿ ಸಹಾ ಶೇಕಡ ೭೫ ಮಂದಿ ಮಾಂಸಾಹಾರಿಗಳು. ಬಂಗಾಳ, ಒರಿಸ್ಸಾ ಮುಂತಾದ ಕಡೆಗಳಲ್ಲಿ ಉಚ್ಚಜಾತಿಯ ಬ್ರಾಹ್ಮಣರು ಕೂಡ ಮಾಂಸವನ್ನು ತಿನ್ನುತ್ತಾರೆ. ಕ್ಷತ್ರಿಯರು, ಸಿಕ್ಖರು, ಕ್ರಿಸ್ತರು ಎಲ್ಲರೂ ಮಾಂಸಾಹಾರಿಗಳು. ಆದುದರಿಂದ ಮಾಂಸಭಕ್ಷಣೆಯೇ ಹಿಂದೂ ಮುಸಲ್ಮಾನರ ಭೇದಕ್ಕೆ ಕಾರಣವಾಗಲಾರದು.

ಹಿಂದು, ಮುಸಲ್ಮಾನರಿಬ್ಬರಲ್ಲೂ ಮಾಂಸಾಹಾರವನ್ನು ವಿರೋಧಿಸುವರಿದ್ದಾರೆ. ಮುಸಲ್ಮಾನರು ಮಕ್ಕಾಯಾತ್ರೆಗೆ ಹೋಗುವಾಗ ಮಾಂಸಾಹಾರವನ್ನು ತ್ಯಜಿಸಬೇಕಾಗುತ್ತದೆ. ಮುಸಲ್ಮಾನ್ ಸೂಫಿಗಳಲ್ಲಂತೂ ಅನೇಕರು ಮಾಂಸವನ್ನು ಮುಟ್ಟುವುದೇ ಇಲ್ಲ. ಹಿಂದೂಗಳಂತೂ ಮಾಂಸತ್ಯಾಗವನ್ನು ಪುಣ್ಯವೆಂದು ನಂಬಿದ್ದಾರೆ. ಈ ರೀತಿ ಮೂಲದಲ್ಲಿ ಇಬ್ಬರೂ ಅಹಿಂಸಾವಾದಿಗಳೇ. ಆದರೆ ಅಭ್ಯಾಸದಿಂದ ಎರಡು ಕಡೆಯಲ್ಲಿಯೂ ಹಿಂಸೆ ಇದೆ. ಅಂದಮೇಲೆ ಈ ಜಗಳವೇಕೆ?

## ಗೋವಧೆ

ಮೇಲ್ಕಂಡಂತೆ ಎರಡು ಜನಾಂಗದವರೂ ಅಹಿಂಸೆಗೆ ಮಹತ್ವವನ್ನುಕೊಡುವಾಗ, ಯಾರೂ ಯಾವ ವಧೆಯನ್ನೂ ಸಹಿಸಬಾರದು. ಭಾರತವು ಕೃಷಿಪ್ರಧಾನವಾದ ದೇಶ, ವ್ಯವಸಾಯವು ಹಿಂದೂ, ಮುಸಲ್ಮಾನರಿಬ್ಬರಿಗೂ ಅಗತ್ಯ. ವ್ಯವಸಾಯಕ್ಕೆ ಗೋವು ಅನಿವಾರ್ಯ ಅಂದಮೇಲೆ ಹಿಂದೂ ಮುಸಲ್ಮಾನರಿಬ್ಬರೂ ಗೋವಧೆಯನ್ನು ವಿರೋಧಿಸಲೇಬೇಕು.

ಪ್ರತಿದಿನವೂ ಕೊಲ್ಲಲ್ಪಡುವ ಸಾವಿರಾರು ಗೋವುಗಳನ್ನು ಹಿಂದುಗಳೇ ಮಾರುವರು. ಆದರೆ ಅದನ್ನು ಮಾತ್ರ ಯಾವ ಹಿಂದುವೂ ಆಕ್ಷೇಪಿಸುವುದೇ ಇಲ್ಲ. ಆದರೆ ಹಬ್ಬದಲ್ಲಿ ( ಈದ್ ) ಗೋವಧೆಯಾದರೆ ಆಕ್ಷೇಪಣೆ ಎತ್ತುವರು. ಆದರೆ ಗೋವುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಕೊಲ್ಲದೆ ಪ್ರತ್ಯೇಕವಾಗಿ ( ಧಾರ್ಮಿಕದೃಷ್ಟಿಯಿಂದಲ್ಲ, ನಾಗರಿಕತೆಯ ದೃಷ್ಟಿಯಿಂದ ) ಕೊಲ್ಲಬೇಕೆಂಬ ಈಗಿನ ನಿಯಮವನ್ನು ಪಾಲಿಸುವುದು ಒಳ್ಳೆಯದು.

ಗೋವಧೆಯನ್ನು ತಡೆಯುವ ಮಾರ್ಗವೇನೆಂದರೆ ಅವುಗಳನ್ನು ಮಾರುವ ಪ್ರಸಂಗವೇ ಇಲ್ಲದಂತೆ ಅವುಗಳನ್ನು ಪೋಷಿಸುವುದು. ಈಗ ನಡೆಯುತ್ತಿರುವ ಗೋವಧೆಗೆ ಹಿಂದುಗಳೇ ಕಾರಣರು. ಅಂದಮೇಲೆ ವರ್ಷಕ್ಕೊಂದು ಸಾರಿ ನಡೆಯುವ ಗೋವಧೆಯು **ಹಿಂದು ಮುಸಲ್ಮಾನರ ಐಕಮತ್ಯದ ವಧೆಗೆ ಏಕೆ ಕಾರಣವಾಗಬೇಕು?**

## ಪುನರ್ಜನ್ಮ

ಹಿಂದುಗಳ ಪುನರ್ಜನ್ಮ ಮತ್ತು ಮುಸ್ಲಿಮರ ಖಯಾಮತ್ ( ಪ್ರಳಯ Resurrection day ) ಇವೆರಡರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಮರಣದನಂತರ ಈ ಜನ್ಮದ ಪುಣ್ಯಪಾಪಗಳ ಫಲ ದೊರೆಯುತ್ತದೆ ಎಂಬುದೇ ಇದರ ಅಭಿಪ್ರಾಯ. ಈ ಫಲವು ಮರಣದ ತಕ್ಷಣವೇ ದೊರೆಯಲಿ, ಅಥವಾ ಸ್ವಲ್ಪಕಾಲದನಂತರ ದೊರೆಯಲಿ, ಇದರಲ್ಲಿ–ಧಾರ್ಮಿಕದೃಷ್ಟಿಯಿಂದ–ಯಾವ ವ್ಯತ್ಯಾಸವೂ ಇಲ್ಲ. ಏಕೆಂದರೆ ಎರಡರಲ್ಲೂ ಪಾಪದ ಭಯ ಮತ್ತು ಪುಣ್ಯದ ಆಕರ್ಷಣೆಯೇ ಇರುವುದು. ಆದುದರಿಂದ ಈ ಕಾರಣಕ್ಕಾಗಿಯೇ ಭೇದಭಾವಗಳನ್ನುಂಟುಮಾಡುವುದರಲ್ಲಿ ಅರ್ಥವಿಲ್ಲ. ಅನೇಕ ಸೂಫಿಗಳು ಪುನರ್ಜನ್ಮವನ್ನು ನಂಬುವರೆಂದು ಹೇಳುತ್ತಾರೆ.

## ವಾದ್ಯ

ಹಿಂದುಗಳು ವಾದ್ಯಬಾರಿಸಿದರೆ, ಮುಸ್ಲಿಮರೂ ಅದಕ್ಕೆ ವಿರೋಧಿಗಳೇನೂ ಅಲ್ಲ. ಮೊಹರಂ ಕಾಲದಲ್ಲಿ ಬಾರಿಸುವ ವಾದ್ಯವನ್ನು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ— ರಾತ್ರಿ ನಿದ್ದೆಸಹ ಬರದಷ್ಟು ಬಾರಿಸುತ್ತಾರೆ. ಹಿಂದುಗಳು ಸಹ ಪೂಜೆಯ ಕಾಲದಲ್ಲಿ ವಾದ್ಯಬಾರಿಸಿದರೂ, ಸಂಧ್ಯಾವಂದನಾದಿಗಳಲ್ಲಿ, ಸುಮ್ಮನೇ

ಇರುವರು; ಅಂದಮೇಲೆ ಹಿಂದು ಮುಸ್ಲಿಮರ್ಯಾರೂ ವಾದ್ಯವನ್ನು ವಿರೋಧಿಸುವವರಲ್ಲವೆಂದಂತಾಯಿತಲ್ಲವೇ? ವಿಷಯವೇನೆಂದರೆ, ಸಮಯಾಸಮಯಗಳನ್ನು ಗಮನಿಸಬೇಕು, ಅಷ್ಟೆ. ಕೆಲವು ಅಂಶಗಳನ್ನು ಇಲ್ಲಿ ಸೂಚಿಸಲಾಗಿದೆ.

೧. ರಾತ್ರಿ ೧೦ ರಿಂದ ಬೆಳಿಗ್ಗೆ ೫ ರ ವರೆಗೆ ವಾದ್ಯ ಬಾರಿಸಬಾರದು. ೨. ಮಸೀದಿಯಲ್ಲಿ ನಮಾಜ್ ಆಗುತ್ತಿರುವಾಗ ಪಕ್ಕದಲ್ಲಿ ವಾದ್ಯ ಬಾರಿಸಕೂಡದು. ಈ ಬಗ್ಗೆ ಯಾವುದಾದರೊಂದು ಸೂಚನೆಯನ್ನು, ಬಾವುಟದ ಮೂಲಕ ಕೊಡಬೇಕು. ೩. ೫೦ ಕ್ಕಿಂತ ಹೆಚ್ಚು ಮಂದಿ ನೆರೆದಿರುವ ಸಭೆಯ ಬಳಿ ವಾದ್ಯಬಾರಿಸಲಾಗದು.

ಈ ರೀತಿ ನಿಯಮಗಳನ್ನು ಮಾಡಿ, ಕೆಲಸ ನಡೆಯಿಸಬೇಕೇ ವಿನಹ ಹಠ ಅಥವ ಸ್ವಪ್ರತಿಷ್ಠೆಯ ಪ್ರದರ್ಶನವನ್ನು ಮಾಡಬಾರದು. ಅಧಿಕಾರದ ಬಲದಿಂದಾಗಲಿ, ಭಯವನ್ನು ತೋರಿಸುವದರ ಮೂಲಕವಾಗಲಿ ಅಥವಾ ಹೊಡೆದಾಟ ಕಡಿದಾಟಗಳಿಂದಾಗಲಿ ವಾದ್ಯವನ್ನು ನಿಲ್ಲಿಸಲೆತ್ನಿಸುವುದರಿಂದ ಏನೇನೂ ಪ್ರಯೋಜನವಿಲ್ಲ. ಪೂಜೆ, ನಮಾಜ್ ಎಲ್ಲ ನಾಶವಾಗಿಬಿಡುವುವು!

ನಿಜವಾದ ಧರ್ಮದ ಭಾವನೆಯು ಹೀಗಿರಬೇಕು– ಸಾಹುಕಾರರೊಬ್ಬರು ಮೆರವಣಿಗೆಯಲ್ಲಿ ನಮಾಜ್ ನಡೆಯುತ್ತಿರುವಾಗ ಮಸೀದಿಯ ಮುಂದೆ ವಾದ್ಯ ಸಮೇತ ಬಂದಲ್ಲಿ, ತಕ್ಷಣ, ವಾದ್ಯವನ್ನು ನಿಲ್ಲಿಸಿ, ನಮಾಜಿನಲ್ಲಿ ತಾವೂ ಒಬ್ಬರು ಸೇರಿರುವರೋ ಎಂಬಂತೆ ಶಾಂತರೀತಿಯಿಂದಿರಬೇಕು. ನಮಾಜ್ ಆದನಂತರ ಮುಸ್ಲಿಮರು ಅವರನ್ನು ಆದರದಿಂದ ಬೀಳ್ಕೊಡಬೇಕು.

ಹಿಂದು ಮುಸಲ್ಮಾನರು ಬೇರೆ ಬೇರೆಯಾಗಬಹುದು. ಆದರೆ ದೇವರು ಬೇರೆಯಾಗಲಾರನು. ಅವನಿಗೆ ಇದರಿಂದ ಎಂದಿಗೂ ಸಮಾಧಾನವಾಗಲಾರದು. ಇದನ್ನು ಎಲ್ಲರೂ ಗಮನಿಸಿದರೆ, ಯಾವ ಜಗಳಕ್ಕೂ ಅವಕಾಶವೇ ಇರುವುದಿಲ್ಲ.

## ಪೂರ್ವ–ಪಶ್ಚಿಮ

ಒಬ್ಬ ಮಿತ್ರರು ನನ್ನನ್ನು ಕುರಿತು ಈ ರೀತಿ ಪ್ರಶ್ನಿಸಿದರು "ಒಬ್ಬ ಪೂರ್ವದ ಕಡೆಗೆ ನೋಡಿದರೆ, ಇನ್ನೊಬ್ಬ ಪಶ್ಚಿಮದ ಕಡೆಗೆ ನೋಡುತ್ತಾನೆ, ಹೀಗಿರುವಾಗ ಹಿಂದು ಮುಸಲ್ಮಾನರು ಒಂದಾಗುವುದು ಸಾಧ್ಯವೇ?" ಆಗ ನಾನು ಈ ರೀತಿ ಹೇಳಿದೆನು–– "ಹೌದು, ಒಬ್ಬರೊಡನೊಬ್ಬರು ಸೇರುವಾಗ ಹೀಗೇ ಆಗಬೇಕು. ಏಕೆಂದರೆ, ನೀವು ಮುಖತಿರುಗಿಸಿರುವ ಕಡೆಗೇ ನಾನೂ ಮುಖ ತಿರುಗಿಸಿಕೊಂಡಿದ್ದರೆ, ನೀವು ನನ್ನ ಬೆನ್ನನ್ನು ನೋಡುವಿರೇ ವಿನಹ, ಮಾತನಾಡುವುದು ಹೇಗೆ ಸಾಧ್ಯ? ನಾನು ನನ್ನ ಎದೆಯನ್ನು ನಿಮ್ಮ ಎದೆಗೆ ತಾಗಿಸಿ ಪ್ರೀತಿಯಿಂದ ಮಾತನಾಡಿದರೆ, ನಮ್ಮಿಬ್ಬರ ಮುಖಗಳೂ ವಿರೋಧವಾಗಿರುವುದು ಸ್ವಾಭಾವಿಕವೇ ತಾನೇ? ಅಂದಮೇಲೆ, ಪೂಜೆ–ನಮಾಜಿನಲ್ಲಿ ಈ ರೀತಿ ಆಗುವುದನ್ನು ನಿರೋಧಿಸುವುದೇತಕ್ಕೆ?"

ಇಂತಹ ಸಣ್ಣ ವಿಷಯಗಳಿಗಾಗಿ (ಮರ್ಮವನ್ನು ತಿಳಿಯದೆ) ಕಾದುವುದರಿಂದೇನು ಗುಣ? ದಿಕ್ಕಿನ ಈ ಭೇದವು ನಿಸ್ಸಾರವೂ, ನಿರಾಧಾರವೂ ಆಗಿದೆ. ಭಾರತದ ಮುಸ್ಲಿಮರು ಪಶ್ಚಿಮಕ್ಕೆ ತಿರುಗಿ ಪ್ರಾರ್ಥನೆಮಾಡುವರು–ಮಕ್ಕವು ಪಶ್ಚಿಮದಲ್ಲಿರುವುದರಿಂದ. ಯುರೋಪಿನ ಮುಸ್ಲಿಮರು ಪೂರ್ವಕ್ಕೆ ತಿರುಗುವರು, ದಕ್ಷಿಣಆಫ್ರಿಕದಲ್ಲಿ ಉತ್ತರದ ಕಡೆಗೂ, ಉತ್ತರದ ದೇಶಗಳಲ್ಲಿ ದಕ್ಷಿಣದ ಕಡೆಗೂ ತಿರುಗುವರು. ಮಕ್ಕದಲ್ಲಿನ ಮಸೀದಿಯಲ್ಲಿ ನಾಲ್ಕುಮಂದಿ ಇಮಾಮರು ನಾಲ್ಕು ಕಡೆಗಳಲ್ಲಿ ನಮಾಜ್ ಮಾಡಿಸುವರು– ಒಬ್ಬನು ಪೂರ್ವಕ್ಕೆ, ಒಬ್ಬನು ಪಶ್ಚಿಮಕ್ಕೆ, ಒಬ್ಬನು ದಕ್ಷಿಣಕ್ಕೆ, ಮತ್ತೊಬ್ಬನು ಉತ್ತರಕ್ಕೆ ತಿರುಗಿರುವನು. ಹಿಂದುಗಳಲ್ಲಿ ಸಹ ಮೂರ್ತಿ ಇರುವ ಕಡೆಗೇ ಪ್ರಣಾಮಮಾಡುವರು, ಮೂರ್ತಿಯ ಮುಖವು ಪೂರ್ವಕ್ಕಿದ್ದರೆ ಪೂಜಾರಿಯು ಪಶ್ಚಿಮಕ್ಕಿರುವನು.

## ಗಡ್ಡ–ಜುಟ್ಟು

ಹಿಂದು ಮುಸ್ಲಿಂ ದಂಗೆಯನ್ನು "ಗಡ್ಡ ಜುಟ್ಟಿನ ಸಂಗ್ರಾಮ" ವೆನ್ನಬಹುದು. ಸಿಖ್ಖರು, ಹಿಂದು ಸನ್ಯಾಸಿಗಳು ಗಡ್ಡಬಿಡುವರು. ಕ್ಷತ್ರಿಯರನೇಕರು ಗಡ್ಡಬಿಡುವರು, ಅನೇಕ ಹಿಂದುಗಳಿಗೆ ಗಡ್ಡವಿರುತ್ತದೆ. ಅಲ್ಲದೆ ಸಾವಿರಾರು ಮಂದಿ ಮುಸ್ಲಿಮರಿಗೆ ಸಹ ಗಡ್ಡವಿರುವುದೇ ಇಲ್ಲ.

ಇನ್ನು ತಲೆಮೇಲಿನ ಜುಟ್ಟು. ಕೋಟ್ಯಂತರ ಬಂಗಾಳಿಗಳೂ, ಹಿಂದುಗಳೂ ಜುಟ್ಟನ್ನು ಇಡುವುದಿಲ್ಲ. ಮುಸಲ್ಮಾನರು ತಲೆಯ ಮೇಲೆ ಜುಟ್ಟನ್ನಿಡದಿದ್ದರೂ ಅವರ ಟೋಪಿಗಳ ಮೇಲೆ, ಗುಚ್ಛವು ಇದ್ದೇ ಇದೆ. ನೂರಾರು ಮಂದಿ ಸೂಫಿಗಳು ಕೂದಲನ್ನು ಬೆಳೆಸುವರು.

ಆದುದರಿಂದ ಇದೂ ಕೂಡ ಇವರ ಅನೈಕ್ಯತೆಗೆ ಕಾರಣವಲ್ಲ.

ಇವೆಲ್ಲ ಒಂದುರೀತಿಯ "ಫ್ಯಾಷನ್" ಅಷ್ಟೆ.

## ಧಾರ್ಮಿಕ ಉದಾರತೆ

ಹಿಂದುಧರ್ಮ, ಇಸ್ಲಾಂಗಳೆರಡೂ ಉದಾರವಾಗಿಯೇ ಇವೆ. ಎರಡು ಸಮಾಜಗಳೂ ಸಾಧಾರಣವಾಗಿ ಉದಾರವಾಗೇ ಇವೆ. ಆದರೆ ಒಬ್ಬರು ಇನ್ನೊಬ್ಬರನ್ನು ತಿಳಿಯಲೆತ್ನಿಸುವುದಿಲ್ಲ, ಅದೇ ಇರುವ ತೊಂದರೆ 'ಎಷ್ಟು ವಿಭೂತಿಗಳಿರುವರೋ, ಅವರೆಲ್ಲ ಈಶ್ವರನ ಅಂಶದಿಂದಲೇ ಹುಟ್ಟಿರುವರು' ಎಂದು ಸಾರುತ್ತದೆ. ಹಿಂದು ಧರ್ಮ (ಯದ್ಯದ್ವಿಭೂತಿ ಮತ್ತತ್ವಂ, ಮತ್ತೇಜೋಂಶ ಸಂಭವಂ). ಆದುದರಿಂದ ಯಾವ ಧರ್ಮದ ದೇವತೆಯಾಗಲಿ, ಮಹಾಪುರುಷನಾಗಲಿ, ಹಿಂದುವಿನ ದೃಷ್ಟಿಯಿಂದ ವಂದನೀಯರೇ ಆಗಿರುವರು. ಇಸ್ಲಾಂ ಧರ್ಮಕ್ಕನುಸಾರವಾಗಿ ಸಹ ಪ್ರತಿಕೋಮಿನಲ್ಲಿ ಪ್ರತಿ ಕಾಲದಲ್ಲಿ ಪ್ರತಿ ದೇಶದಲ್ಲಿ ಅನೇಕ ಪೈಗಂಬರರು ಬಂದಿರುವರು. ಅವನ್ನು ನಂಬುವುದು ಪ್ರತಿ ಮುಸ್ಲಿಮನ ಧರ್ಮ. ಆದುದರಿಂದ ಮುಸ್ಲಿಮರು ಯಾವ ಧಾರ್ಮಿಕ ಮಹಾಪುರುಷರನ್ನೂ ಖಂಡಿಸುವುದಿಲ್ಲ. ಶ್ರೀಕೃಷ್ಣನನ್ನು ಸ್ತುತಿಸಿರುವ ಮುಸ್ಲಿಂ ಕವಿಗಳ ಸಂಖ್ಯೆಗೆ ಏನೂ ಕಡಿಮೆಯಿಲ್ಲ ಆದರೆ ಹಿಂದುಗಳಿಗೆ ಈ ವಿಷಯವು ತಿಳಿಯದಿರುವುದು ದೌರ್ಭಾಗ್ಯದ ವಿಷಯ. ಮುಸಲ್ಮಾನರಲ್ಲಿ ಧಾರ್ಮಿಕ ಉದಾರತೆ ಇದೆ, ಆದರೆ ಕೆಲವು ರಾಜಕೀಯ ಕಾರಣಗಳು ಈ ಉದಾರತೆಯನ್ನು ನಾಶಗೊಳಿಸುವುದೇ ವಿನಹ ಹಿಂದು ಮುಸ್ಲಿಮರಿಬ್ಬರೂ ಸ್ವಭಾವವಾಗಿ ಉದಾರಿಗಳೇ ಆಗಿದ್ದಾರೆ.

## ಸ್ಪೃಶ್ಯಾಸ್ಪೃಶ್ಯತೆ

ಹಿಂದುಗಳು ತಮ್ಮನ್ನು ಅಸ್ಪೃಶ್ಯರಂತೆ ಕಾಣುತ್ತಾರೆಂದು ಮುಸಲ್ಮಾನರ ಆಕ್ಷೇಪಣೆ. ಹಿಂದುಗಳಲ್ಲಿ ಈ ಸ್ಪೃಶ್ಯಾಸ್ಪೃಶ್ಯತೆಯ ರೋಗವು ಭಯಂಕರವಾಗಿದೆಯೆಂಬುದರಲ್ಲಿ ಸ್ವಲ್ಪವೂ ಸಂದೇಹವೇ ಇಲ್ಲ. ಹಿಂದುಗಳು ಚರ್ಮಾರರನ್ನು, ಅಸ್ಪೃಶ್ಯರನ್ನು, ದೂರ ಮಾಡುವಷ್ಟು ಮುಸಲ್ಮಾನರನ್ನು ಮಾಡುತ್ತಿಲ್ಲ — ಅವರನ್ನು ಅಸ್ಪೃಶ್ಯರೆಂದು ಭಾವಿಸಿಯೇ ಇಲ್ಲವೆಂದು ಸಹ ಹೇಳಬಹುದು. ಅವರ ಸಂಗಡ ಊಟೋಪಚಾರಗಳಿಲ್ಲವೇನೆಂಬುದೇನೋ ನಿಜ. ಹಿಂದುಗಳಲ್ಲೇ ಒಬ್ಬರೊಳ್ಳಬ್ಬರು ಈ ಸಂಬಂಧವನ್ನೇ ಇಟ್ಟುಕೊಂಡಿಲ್ಲ.

ಇದೇ ರೀತಿ ಇನ್ನೂ ಅನೇಕ ಸಣ್ಣಸಣ್ಣ ವಿಷಯಗಳಿವೆ. ಇಂಥಾ ಸಣ್ಣ ವಿಷಯಗಳು ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅಣ್ಣತಮ್ಮಂದಿರಲ್ಲಿ ಸಹ ಕಂಡು ಬರುತ್ತವೆ. ಆದರೆ ಅವರು ಅಣ್ಣತಮ್ಮಂದಿರಾಗಿರುವುದಿಲ್ಲವೇ? ಅದೇ ರೀತಿಯಲ್ಲೇ ಹಿಂದೂ ಮುಸಲ್‌ಮಾನರೂ ಕೂಡ ಅಣ್ಣತಮ್ಮಂದಿರೇ ಆಗಿದ್ದಾರೆ.

## ಲಿಪಿಯ ವ್ಯತ್ಯಾಸ

ಹಿಂದುಗಳ ಲಿಪಿಯು ದೇವನಾಗರಿಯೆಂದೂ, ಮುಸಲ್ಮಾನರ ಲಿಪಿಯು ಪಾರ್ಸಿ ಲಿಪಿಯೆಂದೂ, ಇವೆರಡಕ್ಕೂ ಪರಸ್ಪರ ಸಂಬಂಧವಿಲ್ಲವೆಂದೂ ಹೇಳಲಾಗಿದೆ. ಇದೊಂದು ಕೃತಕಜಗಳ. ಅರಬ್ಬೀ ದೇಶಗಳಲ್ಲಿ ಇಸ್ಲಾಂ ಹುಟ್ಟಿದರೆ ಅರಬ್ಬಿಗೆ ಮಹತ್ವದೊರೆಯಬೇಕು. ಆದರೆ ನಾಗರಿಯು ಹಿಂದುಗಳ ಲಿಪಿಯೂ ಅಲ್ಲ, ಫಾರ್ಸಿಯು ಮುಸಲ್ಮಾನರದೂ ಅಲ್ಲ. ಬಂಗಾಳದ ಹಿಂದುಗಳಿಗೆ ನಾಗರಿಲಿಪಿ ಬೇಡ. ಮದರಾಸಿನ ಕಡೆ ಹಿಂದುಗಳಿಗೆ ಅದು ತಿಳಿಯುವುದು ಇಲ್ಲ. ಉದ್ದೇಶಪೂರ್ವಕವಾಗಿ ಅದನ್ನು ಕಲಿತವರ ಮಾತು ಬೇರೆ. ಪಂಜಾಬ್ ಮತ್ತು ಅದರ ಅಕ್ಕಪಕ್ಕದ ಹಿಂದುಗಳು ನಾಗರಿಗಿಂತಲೂ, ಪಾರ್ಸಿ ಲಿಪಿಯನ್ನೇ ಹೆಚ್ಚು ಉಪಯೋಗಿಸುವರು. ಮಧ್ಯ ಪ್ರಾಂತದ ಮುಸಲ್ಮಾನರಿಗೆ ಪಾರ್ಸಿ ಲಿಪಿಯು ತಿಳಿಯುವುದೇ ಇಲ್ಲ. ಆದುದರಿಂದ ಇದನ್ನು ಹಿಂದೂ ಮುಸಲ್ಮಾನರ ಕಲಹದ ಕಾರಣವೆನ್ನುವುದು ತಪ್ಪು.

ರಾಷ್ಟ್ರಭಾಷೆಗೆ ಸರ್ವಗುಣ ಸಂಪನ್ನವಾದ, ಓದಿ ಬರೆಯಲು ಸುಲಭವಾದ, ಮುದ್ರಣಕ್ಕೆ ಅನುಕೂಲವಾದ ಲಿಪಿ ಬೇಕು. ಈ ದೃಷ್ಟಿಯಿಂದ ದೇವನಾಗರಿ ಮತ್ತು ಉರ್ದು ಇವೆರಡರಲ್ಲಿಯೂ ದೋಷಗಳಿವೆ. ನಿರ್ದೋಷವಾದ ಮೂರನೆ ಲಿಪಿಯೊಂದು ದೊರೆಯುವವರೆಗೆ ನಾಗರಿ ಮತ್ತು ಪಾರ್ಸಿಲಿಪಿಗಳೆರಡನ್ನೂ ಉಪಯೋಗಿಸುವುದು ಒಳ್ಳೆಯದು. ಓದುಬರಹ ಬಲ್ಲ ಪ್ರತಿಯೊಬ್ಬನೂ ಇವೆರಡು ಲಿಪಿಗಳನ್ನೂ ಅಭ್ಯಾಸ ಮಾಡಬೇಕು. ಕೆಲವು ದಿನಗಳಲ್ಲಿ ಎರಡೂ ಜನಾಂಗಗಳವರಲ್ಲಿ ಪ್ರೇಮ ಹೆಚ್ಚಿ ಅನುಕೂಲವಾದದ್ದನ್ನು ಹಿಂದೂ ಮುಸಲ್ಮಾನರಿಬ್ಬರೂ ಉಪಯೋಗಿಸುವರು.

## ಉಪಸಂಹಾರ

ಅಜ್ಞಾನದಿಂದ ಅಥವಾ ಸ್ವಾರ್ಥಿ ಜನರ ದುರುಪದೇಶದಿಂದ ಒಬ್ಬರಲ್ಲೊಬ್ಬರಿಗೆ ಅವಿಶ್ವಾಸ ಉಂಟಾಗುತ್ತದೆ. ಒಬ್ಬನು ಇನ್ನೊಬ್ಬನನ್ನು ತಿಂದೇ ಬಿಡುವೆನೋ ಎಂಬಂತೆ ವರ್ತಿಸುತ್ತಾನೆ. ಆದರೆ ಒಂದೆರಡು ಸಾವಿರ ಮುಸಲ್ಮಾನರಾಗಲೀ, ಹತ್ತು ಹದಿನೈದು ಸಾವಿರ ಹಿಂದುಗಳಾಗಲೀ ಮೃತಪಟ್ಟಮಾತ್ರಕ್ಕೇ ಹಿಂದು–ಮುಸಲ್ಮಾನರು ಸಂಪೂರ್ಣವಾಗಿ ನಾಶವಾಗಿ ಹೋಗುವರೇ? ಎಂದಿಗೂ ಇಲ್ಲ!

ಸಾವಿರದ ಒಂಭೈನೂರ ಹದಿನೆಂಟನೇ ಇಸವಿಯ ಇನ್‌ಫ್ಲ್ಯೂಯಂಜಾ ರೋಗದಲ್ಲಿ ಕೋಟಿಗಿಂತ ಹೆಚ್ಚು ಮಂದಿ ಸತ್ತರು. ಆದರೂ ನಂತರ ನಡೆದ ಜನಗಣನೆಯಲ್ಲಿ ೬೦ ಲಕ್ಷಕ್ಕಿಂತ ಹೆಚ್ಚು ಜನರು ಇದ್ದರು. ನಾವು ಇನ್‌ಫ್ಲ್ಯೂಯಂಜಾಕ್ಕಿಂತಲೂ ಹೆಚ್ಚಾಗಿ ಕೊಲ್ಲಬಲ್ಲೆವೇ? ಅಂದಮೇಲೆ ಒಬ್ಬರೊನ್ನಬ್ಬರು ನಾಶಗೊಳಿಸುವುದಾದರೂ ಹೇಗೆ?

ಮುಸಲ್ಮಾನರನ್ನು ಹೊಡೆದೋಡಿಸಿ ಬಿಡುವೆವೆಂದು ಹಿಂದುಗಳು ಯೋಚಿಸಿದರೆ ಅದು ಎಂದಿಗೂ ಸಂಭವವಲ್ಲ. ಯಾವ ದಿನ ಹಿಡಿತುಂಬಾ ಮುಸಲ್ಮಾನರು ಭಾರತಕ್ಕೆ ಬಂದರೋ ಆಗಲೇ ಸ್ವತಂತ್ರಶಾಸಕರಾಗಿದ್ದ ಹಿಂದುಗಳು ಅವರನ್ನು ಓಡಿಸಲಾಗಲಿಲ್ಲವೆಂದ ಮೇಲೆ, ಈಗ ಸ್ವಯಂ ಗುಲಾಮರಾಗಿರುವ ಇವರು ೮ ಕೋಟಿ ಮುಸಲ್ಮಾನರನ್ನು ಹೇಗೆ ತಾನೆ ಓಡಿಸಬಲ್ಲರು? ಅಥವಾ ಮುಸಲ್ಮಾನರು ಹಿಂದುಗಳೆಲ್ಲರನ್ನೂ ನಿರ್ನಾಮಮಾಡುವುದಾಗಿ ಯೋಚಿಸುವುದೂ ಜಾಣತನವಲ್ಲ. ಏಕೆಂದರೆ ಭಾರತದ ರಾಜ್ಯಾಡಳಿತವು ಅವರ ಕೈಯಲ್ಲಿದ್ದಾಗಲೇ ಅವರು ಹಿಂದುಗಳನ್ನು ನಾಶಗೊಳಿಸಲಾಗಲಿಲ್ಲ. ಈಗ ಅವರೂ ಕೂಡಾ ಸ್ವತಃ ಗುಲಾಮರಾಗಿದ್ದು ಹಿಂದುಗಳನ್ನು ನಿರ್ನಾಮಮಾಡಬಲ್ಲರೇ?

ಒಟ್ಟಿನಲ್ಲಿ ಯಾರೇ ಆಗಲಿ ಒಬ್ಬರೊನ್ನಬ್ಬರು ನಾಶಗೊಳಿಸಲಾರರು. ಆದರೆ ಒಂದು ಮಾತು ಮಾತ್ರ ನಿಜ. ಏನಂದರೆ, **ಇಬ್ಬರೂ ಪರಸ್ಪರ ಕಾದಾಡಿ ಮನುಷ್ಯತ್ವವನ್ನೇ ನಾಶಮಾಡಬಲ್ಲರು, ಮನುಷ್ಯತ್ವದಿಂದ ದಾನವತ್ವಕ್ಕೆ ಹೋಗಿ ಮಂಗಳಕರವಾದ ಈ ಪುಣ್ಯಭೂಮಿಯನ್ನು ನರಕಸಮಯವಾಗಿ ಮಾಡಬಹುದು.**

ನಾನು ಕೊನೆಯಲ್ಲಿ ಹಿಂದೂ, ಮುಸಲ್ಮಾನರನ್ನು ಕೈಜೋಡಿಸಿ ಪ್ರಾರ್ಥಿಸುತ್ತೇನೆ. ಯಾರೂ ಒಬ್ಬರಿಂದೊಬ್ಬರು ಬೇರೆಯಾಗಲು ಪ್ರಯತ್ನಪಡಬೇಡಿ. ಒಬ್ಬರ ಉತ್ಸವದಲ್ಲಿ ಇನ್ನೊಬ್ಬರೂ, ಒಬ್ಬರ ಹಬ್ಬಗಳಲ್ಲಿ ಧಾರ್ಮಿಕ ಕೆಲಸಗಳಲ್ಲಿ ಮತೊಬ್ಬರೂ ಭಾಗವಹಿಸಿರಿ. ಇಬ್ಬರೂ ಸೇರಿ ಮಂದಿರಗಳ, ಮಸೀದಿಗಳ ಉಪಯೋಗಮಾಡಿಕೊಳ್ಳಿರಿ. ಇಬ್ಬರೂ ಒಂದೇ ವಂಶಜರೆಂದು ಭಾವಿಸಿರಿ. ಕೊನೆಗೆ ಎಂತಹ ಪ್ರಬಲವಾದ ಶಕ್ತಿಯೇ ಆಗಲಿ, ನಿಮ್ಮನ್ನು ಬೇರ್ಪಡಿಸಲಾರದಷ್ಟು ಒಂದಾಗಿರಿ. ಯಾರೂ ನಿಮ್ಮಲ್ಲಿ ಒಡಕನ್ನುಂಟುಮಾಡದಂತೆ ಒಕ್ಕಟ್ಟಿನಿಂದಿರಿ. ಇದರಲ್ಲೇ ನಿಮ್ಮ ಮತ್ತು ದೇಶದ ಹಿತವಡಗಿದೆ. ಆಗಲೇ ಭಾರತವು ನಿಜವಾದ ಸ್ವರ್ಣಭೂಮಿಯಾಗುವುದು. ನಾವು ನಿಜವಾದ ಮಾನವರೆನಿಸಿಕೊಳ್ಳುವೆವು.

ಅನುವಾದಕರು:—ಎಸ್. ಎಲ್. ಸುಬ್ರಹ್ಮಣ್ಯಂ


ಇದೇ ಹೊಸದಾಗಿ ಪ್ರಕಟವಾದ

❁ ಮುಗಳಿಯವರ ಕವನಸಂಗ್ರಹ ❁

“ಬಾ ಸಿ ಗ”

ಬೆಲೆ ೧—೦—೦

ದೊರೆಯುವ ಸ್ಥಳ:— ಮನೋಹರ ಗ್ರಂಥಮಾಲಾ, ಧಾರವಾಡ.

# 'ಮಾಸ್ತಿಯವರನ್ನು ಕಂಡೆ'

ಈಗ ನಾನು ಬರೆಯುವುದು ಇಂದಿಗೆ ಎರಡು ವರ್ಷದ ಹಿಂದಿನ ಮಾತು. 'ಬಿ. ವೆಂಕಟಾಚಾರ್ಯ'ರ 'ಗಳಗನಾಥ'ರ ಕಾದಂಬರಿಗಳಲ್ಲಿ ತನ್ಮಯನಾಗಿ ಕಲ್ಪನೆಯ ರೆಕ್ಕೆಗಳನ್ನು ಕಟ್ಟಿಕೊಂಡು, ಕನಸಿನ ರಾಜ್ಯದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಅಂದಿನ ಸನ್ನ ವಿಹಂಗಮ ಜೀವನವು ಮನಃಪಟಲದಿಂದ ನಶಿಸಿಹೋಗದೆ, ಮಸುಕುಮಸುಕಾಗಿ ಈಗಲೂ ಕಾಣುತ್ತಿದೆ.

ಆಗ ನಾನು ಯುದ್ಧಗಳನ್ನೂ ಆಡಿರಬಹುದು; ವೈರಿಗಳನ್ನೂ ಜಯಿಸಿರಬಹುದು; ಚಕ್ರಾಧಿಪತ್ಯಗಳನ್ನೆಲ್ಲ ನನ್ನ ಅಂಕಿತದಲ್ಲಿ ತಂದಿರಬಹುದು. ಆ ಕಾಲದಲ್ಲಿ ನನಗೆ ಮಣಿಯದ ಎದೆ ಪ್ರಾಯಶಃ ಸಿಕ್ಕಲಾರದು. ಯಾಕಂದರೆ ನಾನು ಭೂಮಂಡಲಕ್ಕೆಲ್ಲ ಮುಕುಟಮಣಿಯಾದ ಸಾಮ್ರಾಟನಾಗಿದ್ದೆ. ಇಂಥ ಸಂದರ್ಭದಲ್ಲಿ ಇಂದ್ರನಿಗೆ ದುಷ್ಟಬುದ್ಧಿ ಹುಟ್ಟಿತು. ಅವನಾಸೆ ಸುರಲೋಕವನ್ನು ಮೀರಿತು. ನಭೋಮಂಡಲವೂ ಅವನಿಗೆ ಸಾಲದಾಯಿತು. ಸಾಮ್ರಾಜ್ಯಲಾಲಸೆಯ ದಾಹ ಬೇರೆ ಸೇರಿತು. ನನ್ನ ದೇಶದ ಮೇಲೆ ದಾಳೀ ಮಾಡಿದನು. ದೇವತೆಗಳೂ ದಾನವರಾಗತೊಡಗಿದರು. ಇಂದ್ರಾಜ್ಞೆಯ ಮೇರೆ ವಿಮಾನದಿಂದ ಇಳಿದು ಬಂದರು. ಅವರನ್ನು ನೋಡಿ ನನ್ನ ದಂಡಾಳುಗಳು 'ಗೇಲಿ' ಮಾಡಹತ್ತಿದರು. ಈ ಇಪ್ಪತ್ತನೆಯ ಶತಮಾನದಲ್ಲಿ ಬಿಲ್ಲು, ಬಾಣ, ಕತ್ತಿ ಮೊದಲಾದ ಅನಾಗರಿಕ ಆಯುಧಗಳನ್ನು ತೆಗೆದುಕೊಂಡು ಕದನಕ್ಕೆ ಬರುವುದೆಂದರೇನು?

ಹೀಗೆ ದೇಶ, ಕಾಲಮಾನ, ಪರಿಸ್ಥಿತಿಯ ಮೇರೆಯನ್ನು ಮೀರಿ, ನನ್ನ ಕಲ್ಪನೆ ಹರಿದಿರಬಹುದು ನಾನು ದೇವಲೋಕವನ್ನೂ ಕೂಡ ಗೆದ್ದು, ದೇವತೆಗಳಿಗೆ ನಾಗರಿಕತೆಯ ಪಾಠ ಕಲಿಸಿರಬಹುದು. ತಪ್ಪಿದ ಸ್ಮೃತಿ ಮರಳಿಬರುವಂತೆ ಹಿಂದೆ ನಡೆದ ಘಟನೆಗಳು, ಪಡೆದ ಅನುಭವಗಳು, ಮನಸ್ಸಿನಲ್ಲಿ ಕಟ್ಟಿದ ಗಾಳಿಗೋಪುರಗಳು, ಒಂದೊಂದಾಗಿ ಚಲನಚಿತ್ರದಲ್ಲಿಯ ಪಟಗಳಂತೆ ಕ್ರಮವಾಗಿ ಹರಿದು ಬರುತ್ತಿವೆ. ಅಂದು 'ಪತ್ತೇದಾರಿ' ಕಥೆಗಳನ್ನು ಏಕಚಿತ್ತದಿಂದ ಮನನಮಾಡುತ್ತಿದ್ದುದು ಈಗಲೂ ಜ್ಞಾಪಕದಲ್ಲಿದೆ. ಒಬ್ಬ ರಾಜಕುಮಾರಿಯು ಏಳು ಮಲ್ಲಿಗೆಯ ತೂಕದವಳು. ಅವಳನ್ನು ಸರ್ಪಕಾವಲಿನಲ್ಲಿ ಕಾಯುತ್ತಿದ್ದ ಯಮಭಟರಂತ ಕಾವಲುಗಾರರ ಕಣ್ಣು ತಪ್ಪಿಸಿ, ಕದ್ದೊಯ್ದ ಆ ರಾಜಕುಮಾರನ ಸಾಹಸವೇನು! ಈ ರೀತಿ ಅಮಾನುಷ ಕೆಲಸಗಳಿಗೆ ಮೈಸೋತು, ದೈವೀ ಘಟನೆಗಳಿಗೆ ಮನಸೋತು, ಅದ್ಭುತ ಕೃತಿಗಳಿಗೆ ಬಾಯ್ದೆರೆದು, ಮಂತ್ರಮುಗ್ಧನಂತೆ ಮೂಕವಿಸ್ಮಿತನಾಗಿ, ಆ ಮಾಯಾಚಮತ್ಕೃತಿಗಳನ್ನು ಅಚ್ಚರಿಗೊಂಡು ನೋಡುತ್ತ, 'ರೆ' ರಾಜ್ಯದಲ್ಲಿ ಸಂಚರಿಸುವಾಗ, ಏನೊಂದೂ ಅಗಾಧವಿಲ್ಲದ ಅನುದಿನದ ನೀರಸವಾದ ಜೀವನವನ್ನು ಪ್ರತಿಬಿಂಬಿಸುವ ಈಗಿನ ಸಾಹಿತ್ಯವನ್ನು ಸಹಜವಾಗಿಯಾದರೊಮ್ಮೆ ಕಣ್ತೆರೆದು ನೋಡಬೇಕೆಂಬ ಕಲ್ಪನೆಯಾದರೂ ಬರಬಲ್ಲದೆ?

ಸ್ವಾಭಾವಿಕವಾಗಿ ನಾನು ಇಂದಿನ ಸಾಹಿತ್ಯದ ಹೊಸಹುಟ್ಟನರಿಯದ ಹಸುಳೆಯಾಗಿದ್ದೆನು. ಹಸುಳೆಯು ಎಷ್ಟುದಿವಸ ಹಸುಳೆಯಾಗಿರಬಲ್ಲದು? ಅದಕ್ಕೊಂದು ಕಾಲದ ಪರಿಮಿತಿಯಿಲ್ಲವೇ?

(೨)

ಎಂದಿನಂತೆ ಒಂದುದಿನ ನಾನು, ನನ್ನ ಗೆಳೆಯನೊಬ್ಬನ 'ರೂಮಿ'ಗೆ ಹೋಗಿದ್ದೆನು. ನಾನು ಬಂದುದನ್ನು ಅವನು ನೋಡಲೇ ಇಲ್ಲ. ಹೊರಗಿನ ಪರಿವೆಯಿಲ್ಲದೆ ಪುಸ್ತಕವೊಂದನ್ನು ಓದುವುದರಲ್ಲಿ ಮಗ್ನನಾಗಿದ್ದನು. ಒಮ್ಮೊಮ್ಮೆ ಓದುತ್ತಿದ್ದಂತೆಯೆ ನಗುತ್ತಿದ್ದನು. ಅವನಾನಂದವು ಹೊರಜಿಮ್ಮಿ, ತುಟಿಯಲ್ಲಿ ಮೂಡಿನಿಂತಿತ್ತು. ಅವನಷ್ಟಕ್ಕೆ ಅವನೆ ನಗುತ್ತಿರುವುದನ್ನು ನೋಡಿ ನನಗೆ ನಗೆ ಬರುವಂತಾಯಿತು. 'ನಿನಗೇನು ಹುಚ್ಚೋ? ಹೀಗೇಕೆ ನಗುತ್ತೀ?' ಎಂದು ಕೇಳಿದೆ. ಅವನು ಭಾವ ಪ್ರಪಂಚದಿಂದ ಬಾಹ್ಯಪ್ರಪಂಚಕ್ಕೆ ಬಂದವನಂತೆ "ಏನೂ ಇಲ್ಲ 'ರಂಗಪ್ಪನ ದೀಪಾವಳಿ' ಓದುತ್ತಿದ್ದೆ." ಎಂದಿಷ್ಟೇ ಹೇಳಿದನು. ತಾನು ನಕ್ಕ ಕಾರಣವನ್ನು ಮಾತ್ರ ಅವನು ವ್ಯಕ್ತಮಾಡಲಿಲ್ಲ. ಅವನೇಕೆ ನಕ್ಕನೆಂಬುದು ನನಗೊಂದು

ಗೂಢವಾಗಿಯೇ ಉಳಿದಿತ್ತು. ಈಗಲೀಗ ಆ ಗೂಢವೆಲ್ಲ ಬಿಳಕಿನಂತೆ ನಿಚ್ಛಳವಾಗಿದೆ. ಆದರೆ ಆ ದಿವಸ ನನ್ನನ್ನು ನೋಡಿ ಪರಿಹಾಸ್ಯಮಾಡಿರಬಹುದೆಂದೇ ನನ್ನ ನಂಬಿಕೆಯಾಗಿತ್ತು. ನನ್ನೊಡನೆ ಹರಟಿಹೊಡೆಯಬೇಕೆಂದು ಅವನು ಪುಸ್ತಕವನ್ನು ಮುಚ್ಚಿ ಕೈಯಲ್ಲಿ ಹಿಡಿದುಕೊಂಡನು. ಪುಸ್ತಕವೆಂದರೆ ನನಗೆ ಪ್ರಾಣದ ಸಮಾನ. ಎಲ್ಲಿಯೆ ಇರಲಿ, ಯಾರೇ ಓದುತ್ತಿರಲಿ, ಅದನ್ನು ಕಸಿದುಕೊಂಡು ನೋಡುವ ಕೆಟ್ಟ ಚಾಳಿಯೊಂದು ನನಗೆ ಅಂಟಿಕೊಂಡು ಬಿಟ್ಟಿದೆ. ನನ್ನ ಗೆಳೆಯನ ಕೈಯಿಂದ ಆ ಪುಸ್ತಕವನ್ನು ಬಿಡಿಸಿಬಿಟ್ಟೆನು. ಅದೊಂದು 'ಕ್ಯಾಲಿಕೋ' ಪ್ರತಿ. ಮುದ್ರಣ ಸೊಗಸಾಗಿತ್ತು. ಪುಟಗಳನ್ನು ಒಂದೊಂದಾಗಿ ತಿರುವಿಹಾಕುತ್ತ ನಡೆದೆನು. ಒಂದು ಪುಟದಲ್ಲಿ 'ರಂಗಪ್ಪನ ಕೋರ್ಟ್‌ಷಿಪ್' ಎಂಬ ತಲೆಬರೆಹ ಕಣ್ಣಿಗೆ ಬಿತ್ತು. ಏನು ಬರೆದಾರೋ!' ಎಂಬ ತಿರಸ್ಕಾರದಿಂದ 'ಸುಮ್ಮನೆ' ಓದಬೇಕೆಂದು ಓದತೊಡಗಿದೆ. ಹಲವಾರು ಸಾಲುಗಳು ಗತಿಸುವಲ್ಲಿಗೆ ಮೊದಲಿನ ಆ ತಾತ್ಸಾರದ 'ಸುಮ್ಮನೆ' ಯೆಂಬುದು ಹೋಗಿ ಸಹಾನುಭೂತಿಯಾಯಿತು. ಆ 'ಸಹಾನುಭೂತಿ' ಕ್ರಮೇಣ ಶ್ರದ್ಧೆಯಾಯಿತು. ಬರಬರುತ್ತ ಆ 'ಶ್ರದ್ಧೆ' ಗೌರವಕ್ಕೆ ತಿರುಗಿತು. ಕೊನೆಗೆ ಆ 'ಗೌರವ' ಪೂಜೆಯಲ್ಲಿ ಪರ್ಯವಸಾನಹೊಂದಿತು.

—'ಹೀಗೆ ಬರೆಯುವವರೂ ಕನ್ನಡದಲ್ಲಿ ಉಂಟೇ?' ಎಂದುಕೊಂಡೆನು. ಕೈ ತನ್ನ ಕಾರ್ಯದಲ್ಲಿ ತೊಡಗಿತ್ತು. ಒಂದು ಕತೆಯಾಯಿತು; ಎರಡಾಯಿತು; ಮೂರಾಯಿತು. ಪುಸ್ತಕ ಪೂರ್ತಿಯಾಗುವವರೆಗೆ ನನ್ನ ಮನದ ಹಸಿವು ಹಿಂಗಲಿಲ್ಲ. ಅದೊಂದೇ ಓದಿನಿಂದ ತೃಪ್ತಿಹೊಂದಿದೆನೆಂದು ನಾನೆಂದಿಗೂ ಹೇಳಲಾರೆ. ನಾನು 'ನೀರಸ' ವೆಂದು ತಿಳಿದ ಅನುದಿನದ ಜೀವನವನ್ನು ಸೂಕ್ಷ್ಮವಾಗಿ ಬಿಡಿಬಿಡಿಸಿ ಬರೆದ ಆ ಚಾತುರ್ಯವೆಂಥದು! ಅದ್ಭುತಗಳನ್ನು ವರ್ಣಿಸುವುದಕ್ಕಿಂತ ದಿನದಿನದ ಬಾಳನ್ನು ನೈಜವಾಗಿ ಚಿತ್ರಿಸುವುದು ಸುಲಭವಲ್ಲವೆಂಬುದು ಆಗ ನನ್ನ ನಿದರ್ಶನಕ್ಕೆ ಬಂದಿತು. ಜೀವನದ ವಿವಿಧಾವಸ್ಥೆಗಳನ್ನು ಬರೆಹದಲ್ಲಿ ಜೀವಂತವಾಗಿ ಮೂಡಿಸುವುದು 'ಸಲಭವಲ್ಲ' ವೆಂಬುದು ಅಂದಿನ ತಿಳಿವಳಿಕೆಯಾದರೆ, ಕೃತಿಯಲ್ಲಿ ಜೀವನ ಸಾಮ್ಯೋಪ್ಯ ತೋರಿಸುವುದು 'ಸಾಧ್ಯವಲ್ಲ' ವೆಂಬುದು ಇಂದಿನ ಅನುಭವ. ಬಾಳಿನ ಏಳುಬೀಳುಗಳಲ್ಲಿ ಬೆಳೆದುಬಂದವರಿಗೂ ಸಹ ಸಾಹಿತ್ಯದಲ್ಲಿ ಜೀವನ ಸಾಮ್ಯೋಪ್ಯವನ್ನು ನಿರೂಪಿಸುವುದು ಸಾಧಿಸಿಲ್ಲ. ಅಸಾಮಾನ್ಯವಾದ ಅಂಥ ಮೇಲ್ಮೆಯ ಕಲೆಯನ್ನು ಈ ಪುಸ್ತಕದಲ್ಲಿ ಲೀಲಾಜಾಲವಾಗಿ ತೋರಬೇಕಾದರೆ ಬರೆದವರಾರಿರಬೇಕೆಂಬ ಪ್ರಶ್ನೆ ಸಹಜವಾಗಿ ಎದುರು ಬಂದಿತು. ಎಷ್ಟೋ ಪುಸ್ತಗಳನ್ನು ನಾವು ಓದುತ್ತಿರುವೆವಾದರೂ, ಬರೆದವರಾರೆಂಬುದನ್ನೇ ನೋಡುವುದಿಲ್ಲ. ಬಹುದಿನದ ಆ ರೂಢಿ ನನ್ನಲ್ಲಿ ಆಳವಾಗಿ ಬೇರೂರಿತ್ತು. ಪುಸ್ತಕವನ್ನು ಮುಚ್ಚಿದೆ. ರಕ್ಷಾಪತ್ರದ ಮಧ್ಯದಲ್ಲಿ 'ಶ್ರೀನಿವಾಸ' ಎಂದಿತ್ತು. ಅದೇನು ಬರೆದವರ ಹೆಸರೋ ಅಂಕಿತವೋ—ಆಗ ನನಗೊಂದೂ ಗೊತ್ತಿರಲಿಲ್ಲ. ಸ್ವಾಭಾವಿಕವಾಗಿ ಅವರಾರೆಂಬುದನ್ನು ತಿಳಿದುಕೊಳ್ಳುವ ಕುತೂಹಲ ನನ್ನಲ್ಲಿ ಉಂಟಾಯಿತು. ನನ್ನ ಗೆಳೆಯನಿಗೆ ಗೊತ್ತಿರಬಹುದೇನೋ ಎಂದು ಭಾವಿಸಿ, "ಈ 'ಶ್ರೀನಿವಾಸ'ರೆಂದರೆ ಯಾರು?" ಎಂದು ಕೇಳಿದೆ. ಆ ವರ್ಷ 'ತುರಾಯಿ' ಅವರಿಗೆ ಪಠ್ಯವಾಗಿತ್ತು. ಅದೇ ದಿವಸ ಪ್ರಾಧ್ಯಾಪಕರು ಕನ್ನಡದ ಸಣ್ಣಕತೆಯ ಸ್ವರೂಪವನ್ನೂ ಬೆಳವಣಿಗೆಯನ್ನೂ ಕುರಿತು ಪ್ರಸ್ತಾಪಿಸಿದ್ದರಂತೆ. 'ಕನ್ನಡದ ಸಣ್ಣಕತೆಯ ಜನಕರಂತೆ ಈ ಶ್ರೀನಿವಾಸರು' ಎಂದು ಹೇಳಿದನು. 'ಶ್ರೀನಿವಾಸ' ರೆಂಬುದು ಅವರ ಕಾವ್ಯನಾಮವೆಂದೂ, ಅವರ ನಿಜನಾಮಧೇಯ 'ಮಾಸ್ತಿ ವೆಂಕಟೇಶಅಯ್ಯಂಗಾರ'ವೆಂದೂ ಅವನಿಂದಲೇ ನನಗೆ ತಿಳಿಯಬಂತು.

## (೩)

ಅಂದಿನಿಂದ ಮಾಸ್ತಿಯವರ ಕೃತಿಗಳ ಕಡೆಗೆ ನನ್ನ ಮನಸ್ಸು ಹರಿಯತೊಡಗಿತು. ಅವರ ಕತೆಗಳೆ, ಮೊದಲು, ನನ್ನ ಹೃದಯವನ್ನು ನನಗೆ ಗೊತ್ತಿಲ್ಲದಂತೆ ಕದ್ದು, ಎಂದೆಂದಿಗೂ ಮರೆಯದಂತಹ ಪ್ರಭಾವವನ್ನು ಅದರಲ್ಲಿ ತುಂಬಿದವು. ಅವರ ಪುಸ್ತಕಗಳ ಸಲುವಾಗಿ ನನಗೆ ಒಂದು ಬಗೆಯ ಹುಚ್ಚು ಹಿಡಿಯಿತು. ಈಗ ಮಾತ್ರ ಅವರ ಪುಸ್ತಕಗಳಿಗಿಂತ ಅವರ ತುಂಬ ವ್ಯಕ್ತಿತ್ವವು ನನ್ನ ಬಗೆಯನ್ನು ಸೆಳೆದಿದೆ.— ಆಗ ಅವರ ಗ್ರಂಥಾನ್ವೇಷಣೆಗೆ ಪ್ರಾರಂಭಮಾಡಿದೆನು. 'ಮನೋಹರ' ಗ್ರಂಥಭಾಂಡಾರದಲ್ಲಿ ಶೋಧ ನಡೆಸಿದೆನು. ಅವರ ಹೆಸರಿನಲ್ಲಿ ಒಂದು ಹೊರೆ ಹೊತ್ತಗೆಗಳಿದ್ದವು. ಸಾಹಿತ್ಯ ಪರಿಚಯವಿಲ್ಲದ ಆ ಹೊಸ ಕಾಲದಲ್ಲಿ 'ಇವರು ಬಹಳ ಗ್ರಂಥಗಳನ್ನು ಬರೆದಿದ್ದಾರೆ' ಎಂಬ ನನ್ನ ಕುರುಡು ಭಾವನೆಯು, ಅವರ ಸಾಹಿತ್ಯ ಮಟ್ಟನ್ನು ನಿರ್ಧರಿಸಿರಬಹುದು. ಬರಿ ಸಂಖ್ಯೆಯಿಂದ ಮಾತ್ರವಲ್ಲ; ಗುಣದ ಪ್ರಮಾಣದಿಂದಲೂ ಅವರ ಗ್ರಂಥಗಳನ್ನು ಅಳೆದು ನೋಡಿದರೆ ಅವರ ಅಂತ

ಸ್ತನ್ನು ಮುಟ್ಟುವವರು ಯಾರೂ ಇಲ್ಲವೆಂದು ನನಗೆ ಇತ್ತಿತ್ತಲಾಗಿ ತಿಳಿದುಬಂದಿದೆ. ಬಹುಮುಖವಾದ ಅವರ ಸಾಹಿತ್ಯವನ್ನು ತುಸುತುಸುವಾಗಿ ಗ್ರಹಿಸುತ್ತ ಬಂದೆನು. ಈಗಲಾದರೂ ಪೂರ್ತಿಯಾಗಿ ಗ್ರಹಿಸಿರುವೆನೆಂದು ಹೇಳ ಲಾರೆ. ಅದರ ಆಳ ಸಿಗಬೇಕಾದರೆ ಕಾಲವೆಷ್ಟು ಗತಿಸಿ ಹೋಗಬೇಕಾಗುವುದೋ!

ಮೊದಮೊದಲು ನಾನು ಬರಿ 'ಓದಿ ಓದಿ' ಆನಂದ ಪಡುತ್ತಿದ್ದೆ. ಆದರೆ 'ಅರಿತು' ಆನಂದ ಹೊಂದುತ್ತಿರ ಲಿಲ್ಲ. ಆಗಿನ ನನ್ನ ಓದಿನ ರೀತಿ ಈಗಲೂ ನೆನಪಿನಲ್ಲಿದೆ. ಮಾಸ್ತಿಯವರ ಕೃತಿಗಳಲ್ಲಿಯ ಒಳದನಿಯನ್ನು ಆಗ ಆಲಿ ಸಿರಲಿಲ್ಲ. ತೇಲುಮನಸ್ಸಿನ ಮೇಲುನೋಟಕನಾಗಿದ್ದೆ. ಅವುಗಳಲ್ಲಿ ಹುದುಗಿದ ಸರಸತೆಯನ್ನು, ಗಂಭೀರತೆ ಯನ್ನು ತಿಳಿದಿರಲೇ ಇಲ್ಲ. ಮುಂದೆ 'ಕಾಲೇಜಿ'ಗೆ ಸೇರಿದ ಮೇಲೆ **'ಸಹೃದಯ'** ರೊಬ್ಬರು 'ಕಾವ್ಯ'ದ ಕಡೆಗೆ ನನ್ನ ಲಕ್ಷ್ಯವನ್ನೆಳೆದರು. ಮುನ್ನುಡಿಗಳನ್ನು ಓದುವವರು ಸಿಗುವದು ಅಪರೂಪ. 'ನಾದಲೀಲೆ'ಯ ಮುನ್ನುಡಿಯನ್ನು ಮನನಮಾಡುತ್ತ ಹೋದಹಾಗೆ ನನ್ನಲ್ಲಿ ಆ ಕವಿಯ ಬಗ್ಗೆ ಪೂಜ್ಯಭಾವವುಂಟಾಯಿತು. **ಮಾಸ್ತಿಯವರ ತೂಕದೃಷ್ಟಿ ಕಾವ್ಯಾಭ್ಯಾಸಕ್ಕೆ ಮಾರ್ಗದರ್ಶಿಯಾಯಿತು.** ಹೀಗೆ, ಒಂದಲ್ಲ; ಹಲವಾರು ಬಗೆಯಿಂದ ಮಾಸ್ತಿಯವರು ನನ್ನ ಆರಾಧ ನೆಯ ವಸ್ತುವಾದರು. ಅವರ ಸಾಹಿತ್ಯ ನನ್ನ ನಿತ್ಯ ಪಾರಾಯಣದ ಗೀತೆಯಾಯಿತು. ಅನುಭವದ ಮೂಲ ದಿಂದಲೆ ಬಂದ ಅವರ ಸಾಹಿತ್ಯ, ನನ್ನ ಅಂತರಾತ್ಮವನ್ನು ನುಡಿಸಹತ್ತಿತು. ಪಡೆದ ಅನುಭವಗಳನ್ನು ಮಾತಿನಲ್ಲಿ ಮೂಡಿಸುವವರು ಕಡಿಮೆ; ರಸಾಭಾಸವಾಗದಂತೆ ಮೂಲ ರೂಪದಲ್ಲಿಯೆ ಇಡುವವರು ಇನ್ನೂ ಕಡಿಮೆ. ಅಂಥ ಜೊಳ್ಳುಗಳನ್ನೆಲ್ಲ ತೂರಿ ತೆಗೆದು, ಉಳಿದ ಗಟ್ಟಿಗ ರೊಡನೆ ಮಾಸ್ತಿಯವರನ್ನು ತೂಗಿ ನೋಡಿದರೆ, ಎಲ್ಲರಿ ಗಿಂತ ಮಾಸ್ತಿಯವರು ಮೂರು ತೂಕ ಮುಂದೆ ಯೆಂಬುದು ಮನವರಿಕೆಯಾಗದೆ ಇರದು.

ಕಾಲೇಜಿನ ವಿಶಾಲ ವಾತಾವರಣದಲ್ಲಿದ್ದುಕೊಂಡು ಮೊದಲನೆಯ ವರ್ಷದ ಹುಡುಗಾಟಿಕೆಯಲ್ಲಿ ಮೈಮರೆತು ಮೆರೆಯುವಾಗ 'ಜೀವನ' ಪತ್ರಿಕೆಯ ಮೊದಲನೆಯ ನಂಚಿಕೆಯನ್ನು ನೋಡುವ ಸೌಭಾಗ್ಯ ಸಿಕ್ಕಿತು. ಅದೊಂದು ನನ್ನ ಪುಣ್ಯವೆಂದೇ ಹೇಳಬೇಕು. ಅದರಲ್ಲಿ 'ಸುಬ್ಬಣ್ಣ' ಎಂದೊಂದು ಲೇಖವಿತ್ತು. 'ಸುಬ್ಬಣ್ಣ' ನವರ ಜೀವನವನ್ನು ಮಾಸ್ತಿಯವರು ಬರೆದಿದ್ದಾರೆಂದು ನನಗೆ ಗೊತ್ತಿತ್ತು. ಆದರೆ 'ಅದೇನು ಮಹಾ! ಅದನ್ನೇನು ಓದುವುದು!' ಎಂದು ತಿರಸ್ಕಾರಮಾಡಿ ಬಿಟ್ಟುಬಿಟ್ಟಿ ದ್ದೆನು. ಹೆಸರಿನಿಂದಲೇ ಬೆಲೆಕಟ್ಟುವ ಮಹಾನುಭಾವ ರಿದ್ದಾರೆ. ಅಂಥ ಬುದ್ಧಿವಿಶಾರದರಲ್ಲಿ ನಾನೊಬ್ಬನಾಗಿದ್ದೆ ನೆಂದು ಬೇರೆ ಹೇಳಬೇಕಾಗಿಲ್ಲ! ಸುಬ್ಬಣ್ಣನವರ ಜೀವನದ ಮಹತಿಯನ್ನು ಮಾಸ್ತಿಯವರು ರೂಪಿಸಿದ ಬಗೆಯನ್ನು ಕುರಿತು ಲೇಖಕರು ಬರೆದ ಮಾತು ನನ್ನ ಮನಸ್ಸನ್ನು ಹಿಡಿಯಿತು. 'ಇಂಥ ಕೃತಿಯನ್ನು ಕನ್ನಡದಲ್ಲಿ ಕಾಣು ವೆವೆ' ಎಂಬ ಈ ರೀತಿಯ ಏನೋ ಒಂದು ಉದ್ಗಾರ ನನ್ನನ್ನು ಎಚ್ಚರಿಸಿತು. 'ಸುಬ್ಬಣ್ಣ'ನನ್ನು ಓದಬೇಕೆಂಬ ಆಸೆ ಬಲವಾಯಿತು. 'ಸುಬ್ಬಣ್ಣ'ನನ್ನು ಕೊಂಡು ತಂದೆನು. ಒಮ್ಮೆ ಓದಿ ನೋಡಿದೆನು. ಮತ್ತೆ ಮತ್ತೆ ಓದಬೇಕೆನ್ನಿಸಿತು. **ಪ್ರತಿ ಓದಿಗೊಮ್ಮೆ ಅದರಲ್ಲಿ ಹೊಸ ಬೆಳಕು ತೋರಿ ಬರುತ್ತಿತ್ತು.** ಒಂದು ವ್ಯಕ್ತಿಯ ಇಡೀ ಜೀವನವನ್ನು ಎಲ್ಲಿಯೂ ಕುಂದು ತೋರದಂತೆ, ಇತರ ಪಾತ್ರ ಪರಿಪೋಷಣೆಗೆ ಭಂಗಬರದಂತೆ, ಇಷ್ಟು ಕಡಿಮೆ ಪುಟಗಳಲ್ಲಿ ಚಿತ್ರಿಸಿರುವುದು ವಿಶ್ವಸಾಹಿತ್ಯ ಕ್ಕೊಂದು ಅಚ್ಚರಿ ಎಂದೊಂದು ಮಾತು ನನ್ನ ಹೃದಯ ದಿಂದ ಹೊರಬಿತ್ತು.

ಸುಬ್ಬಣ್ಣನವರ ಬೃಹದ್ವ್ಯಕ್ತಿತ್ವದ ಹಿಂದೆ ಮಾಸ್ತಿ ಯವರ ಜೀವನದ ಛಾಯೆ ಮೂಡಿದ್ದು ನನಗೆ ಕಂಡು ಬಂದಿತು. ನಿಮಿತ್ತದ ಪೂಜೆ ನಿರಂತರ ಭಕ್ತಿಯಾಯಿತು. ಸುಬ್ಬಣ್ಣನನ್ನು ಓದಿದಂತೆಲ್ಲ ಮಾಸ್ತಿಯವರ ಮಹೋನ್ನ ತಿಯ ಸ್ವರೂಪವು ವಿಶದವಾಗಿ, ನಿವರವಾಗಿ ಅರಿಕೆ ಯಾಗುತ್ತ ಬಂತು. ಅವರ ಬರಹದಲ್ಲಿ ಒಂದು ಅಸಾ-ಮಾನ್ಯವಾದ ಶಕ್ತಿಯಿದೆ. ಜೀವಕಣಗಳನ್ನು ಹಿಡಿಯುವ ಸೂಜಿಗಲ್ಲಿನ ಸತ್ವವಿದೆ. ಮಾಸ್ತಿಯವರಿಗೆ ಗೊತ್ತಿಲ್ಲದ ಎಷ್ಟೋ ಆತ್ಮಗಳು ಅವರ ವಿಶಾಲ ವ್ಯಕ್ತಿತ್ವದ ಸುತ್ತಳತೆ ಯಲ್ಲಿ ಸಿಕ್ಕಿರುತ್ತವೆ. ಅವರು ಪಡೆದ ದಿವ್ಯವಾದ ಆ ದೇವದೃಷ್ಟಿಯನ್ನು ತಾವೂ ಪಡೆಯಲು ನಿರಂತರ ತಪ-ಗೈಯುತ್ತಿರುತ್ತವೆ. ಅವರ ಜೀವನದ ತಿರುಳನ್ನು ತಿಳಿದು ವಿಶ್ವಜೀವದೊಂದಿಗೆ ಒಂದಾಗಬೇಕೆಂದು ದಿನಬೆಳಗೂ ಎಣಿಕೆಹಾಕುವ ಜೀವಗಳೆಷ್ಟೊ ಏನೋ! ಅಂಥ ಅನೇಕ ಜೀವಿಗಳಲ್ಲಿ ನಾನೊಬ್ಬನು. ನನ್ನ ಚಿತ್ತವೆಲ್ಲವೂ ಮಾಸ್ತಿ ಯವರ ಯೋಜನೆಯಲ್ಲಿಯೇ ಮಗ್ನವಾಗಿರುತ್ತಿತ್ತು. (ಈಗ ಇಲ್ಲವೆಂದಲ್ಲ!) ಈ ರೀತಿಯಾಗಿ ನಾನು, ಅವರ

ಉದಾತ್ತಜೀವನದಲ್ಲಿ ಒಂದಾಗಿ ಬೆರೆಯುವ ಸಿದ್ಧಿಯನ್ನು ಪಡೆಯುತ್ತ ಬಂದೆನು.

(೪)

ಮುಂದೆ ಅಷ್ಟರಲ್ಲಿ 'ಜೀವನ'ವು ಮಾಸ್ತಿಯವರ ಪರಿಚಯದ ವಿಶೇಷ ಸಂಜಿಕೆಯೊಂದನ್ನು ಹೊರಡಿಸಿತು. ಪತ್ರಿಕೆ ಅಚ್ಚಾದೊಡನೆಯೆ ಕೈಗೆ ಬಂದಿತು. ಮಾಸ್ತಿಯವರ ಅಗಾಧ ಜೀವನದ ಪರಿಮಳವನ್ನು ಬೀರುವ ಸುಮಸಮನ್ವಯವದು. ಆದರೆ ನನ್ನ ದೃಷ್ಟಿಯಲ್ಲಿ, ಅದು ಅವರ ಜೀವನ ಝರಿಯೊಳಗಿನ ಒಂದು ಹನಿ ಮಾತ್ರ! ಮಾಸ್ತಿಯವರು ನನ್ನ ಆರಾಧನೆಯ ವಸ್ತುವಾಗಿದ್ದರೂ, ನಾನು ಅದುವರೆಗೆ ಅವರನ್ನು ಕಂಡಿರಲಿಲ್ಲ. ಅವರ ಚಿತ್ರವನ್ನು ನನಗೆ ಸರಿದೋರುವಂತೆ ಮನಸ್ಸಿನಲ್ಲಿಯೆ ರೂಪಿಸಿಕೊಂಡಿದ್ದೆನು. ಸ್ಫೂರ್ತಿಯ ಕುರುಹಾಗಿ ಆ ನನ್ನ ಕಲ್ಪನೆಯ ಮೂರ್ತಿ, ಸತತವೂ ನನ್ನ ಕಣ್ಣೆದುರು ಸುಳಿಯುತ್ತಿತ್ತು. ಇದೆಲ್ಲವೂ ನಡೆದುದು ಕೇವಲ ಭಾವ ಪ್ರಪಂಚದಲ್ಲಿ! ನನ್ನ ನಚ್ಚುಮೆಚ್ಚಿನ ಮೂರ್ತಿಯ ಚಿತ್ರವನ್ನು 'ಜೀವನ'ವು ನನಗೊದಗಿಸಿಕೊಟ್ಟಿತು. 'ಕನ್ನಡವೆ ರೂಪವೆತ್ತಂತಿರುವೆ ಶ್ರೀನಿವಾಸ' ಎಂದು 'ಜೀವನ'ದಲ್ಲಿದ್ದ ನುಡಿಯೊಂದಿಗೆ ನನ್ನ ದನಿಗೂಡಿಸಿದೆನು.

ನನ್ನ ಮನಸ್ಸು ಮಾಸ್ತಿಯವರನ್ನು ಹೆಚ್ಚು ಹೆಚ್ಚು ಸೇರುತ್ತ ನಡೆದಹಾಗೆ, ನೈಜಜೀವನದಲ್ಲಿ ಅವರನ್ನೊಮ್ಮೆ ನೋಡುವ ಸಂಧಿ ದೊರೆಯಬೇಕೆಂದು ನನ್ನಾತ್ಮ ಹಂಬಲಿಸಹತ್ತಿತು. ಆ ಆಸೆಯಲ್ಲಿಯೇ ನನ್ನ ಮನಸ್ಸು ಮುಳುಗಿಹೋಯಿತು. ದಿನಗಳುರುಳಿದಂತೆ ಆಸೆಯ ಆತುರ ಇಮ್ಮಡಿಸುತ್ತ ಬಂತು. ಅವರನ್ನು ನೋಡ ಬೇಕೆಂಬಾಸೆ ಬಯಲಾಸೆಯಲ್ಲವಷ್ಟೇ? ಎಂದು ನನ್ನನ್ನು ನಾನೇ ಸಂತೈಸಿಕೊಂಡೆನು. ಆ ವೇಳೆಗೆ ಸಾಹಿತ್ಯ ಸಮ್ಮೇಲನವು ಸಂಧಿಸಿತು. ಆದರೆ ಯಾವುದೋ ಕಾರ್ಯ ನಿಮಿತ್ತವಾಗಿ ಕೂಟಕೂಡಿದೆಡೆಗೆ ಹೋಗಲಾಗಲಿಲ್ಲ. ಆಗ ಅಲ್ಲಿಗೆ ಹೋಗಿದ್ದರೆ ಅವರ ದರ್ಶನಲಾಭವೂ ಆಗುತ್ತಿತ್ತು. ನನ್ನ ದೂರದ ಪೂಜೆಯನ್ನು ಸಲ್ಲಿಸಲೂ ಬರುತ್ತಿತ್ತು. ಅಲ್ಲದೆ ಅವರನ್ನು ನೋಡಬೇಕೆಂಬ ಬಯಕೆಯಿಂದ ಭಾರವಾಗಿದ್ದ ನನ್ನ ಹೃದಯವೂ ಹಗುರಾಗುತ್ತಿತ್ತು. 'ಸಿಕ್ಕ ಸಂದರ್ಭವನ್ನು ವ್ಯರ್ಥ ಹೋಗಲಾಡಿಸಿಕೊಂಡೆನಲ್ಲ!' ಎಂದು ಆ ಮೇಲೆ ಹಳಹಳಿಸಿದೆನು. ನನ್ನ ನಾನೆ ನಿಂದಿಸಿಕೊಂಡೆನು. ಕೆಲಸವೆಲ್ಲ ಮುಗಿದು ಆದ ಮೇಲೆ ಮರುಗಿದೆನು. ಕೊನೆಯಲ್ಲಿ ನಿರಾಸೆಯಾಗಬಾರದೆಂದು ಮೊದಲೆ ಯತ್ನಿಸಲಿಲ್ಲ. 'ಮಿಂಚಿದ ಮಾತಿಗೆ ಚಿಂತಿಸಿಯೇನು?' ಎಂಬ ಮಾನವನ್ಸಭಾವೋಕ್ತಿ ಸಂತೈಸಲು ಮುಂದೆ ಬಂದಿತು. ಆದರೆ ಆ ಅಂಧ ತಿಳಿವಳಿಕೆಯ ಆಶ್ರಯದಲ್ಲಿ ನಾನು ನಿಲ್ಲಲಿಲ್ಲ. ಅವರನ್ನೊಮ್ಮೆ ನೋಡಿಬಿಡಬೇಕೆಂಬ ದೃಢನಿರ್ಧಾರವನ್ನು ಮಾಡಿ, ಅಂಧ ಮುಂಗಲದಿನ ಬೇಗ ಬರಲೆಂದು ಹರಕೆಹಾಕುತ್ತಾ ಇದ್ದುಬಿಟ್ಟೆ.

(೫)

ಪ್ರತಿದಿನದ ಪದ್ಧತಿಯಂತೆ ಒಂದುದಿನ 'ಸಂಯುಕ್ತ ಕರ್ನಾಟಕ'ವನ್ನು ಓದುತ್ತಾ ಇದ್ದೆನು. ಅದರಲ್ಲಿ 'ಮಾಸ್ತಿಯವರು ಇಲ್ಲಿಯ ಕರ್ನಾಟಕ ಸಂಘದ ಬೆಳ್ಳಿಯ ಹಬ್ಬಕ್ಕೆ ಬರುವರು' ಎಂಬ ಸುದ್ದಿ ಕಣ್ಣಿಗೆ ಬಿತ್ತು. ಬಹು ದಿನದ ಬಯಕೆ ಆಯಾಸವಿಲ್ಲದೆ ಕೈಗೂಡುತ್ತದೆಂದರೆ ಯಾರಿಗೆ ಆನಂದವೆನಿಸದು! 'ಕುರುಡ ಬೇಡಿದ ಎರಡು ಕಣ್ಣುಗಳನ್ನು ದೇವರು ದಯಪಾಲಿಸಿದನೆಂದು ಕೊಂಡೆನು? ಸಂಘದ ಉತ್ಸವಮಾಡುವುದಕ್ಕಿಂತ ಮಾಸ್ತಿಯವರನ್ನು ನೋಡುವ ಉತ್ಸಾಹ ಹೆಚ್ಚಿತು. ಅವರು ಬರಬೇಕೆಂದಿದ್ದ ದಿನವೂ ಬಂದಿತು. ಕರ್ನಾಟಕ ಸಂಘದ ಕಾರ್ಯಕ್ರಮಕ್ಕಿಂತ ಮುಂಚಿತವಾಗಿ ಬೇರೊಂದೆಡೆಗೆ ಅವರ ಉಪನ್ಯಾನವಿದೆಯೆಂಬ ಸುದ್ದಿ ಬಂದಿತು. ಆ ಸ್ಥಳ 'ಲಾ ಕಾಲೇಜ' ಎಂಬುದಾಗಿ ಆ ಮೇಲೆ ತಿಳಿದು ಬಂತು. ನನ್ನ ಆತುರವು ಅಲ್ಲಿಗೇ ಎಳೆದೊಯ್ಯಿತು. ದಾರಿಯಲ್ಲಿ ಅವರ ವಿಷಯವಾಗಿ ಎಷ್ಟೆಷ್ಟೋ ಕಲ್ಪನೆಗಳನ್ನು ಕಟ್ಟಿದೆನು. ಅವರ ವ್ಯಕ್ತಿತ್ವವನ್ನು ಆ ಕ್ಷಣ ಮರೆತುಬಿಟ್ಟೆ. 'ಸಾವಿರದ ಮೇಲೆ ಸಂಬಳ ಪಡೆಯುವ ಅವರು ಯಾವ ಉಡುಪನ್ನು ಧರಿಸಿರಬಹುದು? ಸರಕಾರದ ಅಧಿಕಾರಸ್ಥಾನದಲ್ಲಿರುವ ಅವರು ಜನತೆಯೊಡನೆ ಬೆರೆಯಬಲ್ಲರೆ?' — ಇತ್ಯಾದಿ, ಹೀಗೆ ಹಲವಾರು ಸಂಶಯಗಳು ಎದುರುಬಂದವು. ಈ ವಿಚಾರದ ತಿಕ್ಕಾಟದಲ್ಲಿಯೇ ಕಾಲೇಜಿನ ಆವರಣಕ್ಕೆ ಬಂದೆನು. ಸಭಾಸ್ಥಾನದಲ್ಲಿ ಕುಳಿತ ಕೆಲ ನಿಮಿಷಗಳಲ್ಲಿಯೇ ಮಾಸ್ತಿಯವರು ಬಂದರು. ಅವರ ಸಂಗಡವೇ ನನ್ನ ಅಚ್ಚರಿಗೆ, ನನ್ನ ಮೆಚ್ಚಿನ ಕವಿಗಳಾದ ಬೇಂದ್ರೆಯವರು ಬಂದಿದ್ದರು. ನನ್ನನ್ನು ನೋಡಿದೊಡನೆಯೆ ಬೇಂದ್ರೆಯವರ ಮುಗುಳ್ನಗೆ ನನ್ನ ಮುಖದಮೇಲೆ ಬಿತ್ತು. ನಂತರ ಮಾಸ್ತಿಯವರತ್ತ ಮುಖ ತಿರುಗಿಸಿ

ದೆನು. ಎಲ್ಲವೂ ವಿಚಿತ್ರ! ನಾನು ಯೋಚಿಸಿದ ಒಡವೆಗಳೊಂದೂ ಅವರಲ್ಲಿರಲಿಲ್ಲ. ಮಾತ್ರ, ಮುಖದಲ್ಲಿ ಮಂದಸ್ಮಿತ ಮೂಡಿತ್ತು. ಅಸ್ತವನ್ನರಿಯದ ಸ್ಮಿತವದು; ವ್ಯಸ್ತಗಳನ್ನು ಕರಗಿಸಬಲ್ಲ ಅಲೌಕಿಕವಾದ ಮಂದಹಾಸವದು. 'ಶ್ರೀನಿವಾಸರೆ ನಮ್ಮ ಕನ್ನಡದ ನಗು ಹೂವೆ' ಎಂದು 'ಜಿ. ಪಿ. ರಾಜರತ್ನಂ'ರವರು ಬರೆದ ಮಾತು ಆಗ ಜ್ಞಾಪಕಕ್ಕೆ ಬಂತು. ಅವರ ಉಡುಗೆಯನ್ನು ನೋಡಿದೆನು; ಅಧಿಕಾರಿಯ ವೇಷದಂತಿರಲಿಲ್ಲ. ಕನ್ನಡಿಗರೆಲ್ಲರಿಗೆ ಗೌರವಾಸ್ಪದವಾದ ಉಡುಪಿನಂತೆ ಇತ್ತು. 'ಸೌಜನ್ಯಸರಳತೆಯು ರೂಪವೆತ್ತಂತಿರುವೆ' ಎಂಬ ಮಾತಿನ ಸತ್ಯಾಂಶ ಆಗ ತಿಳಿಯಬಂತು. 'ಚಿಕ್ಕವರಲ್ಲಿ ಚಿಕ್ಕವನು; ಹಿರಿಯರಲ್ಲಿಯೂ ಚಿಕ್ಕವನು.' ಎಂದು ಅವರು ಹೇಳಿದ ಮಾತು ನನ್ನ ಬಗೆಯನ್ನು ಬಿಂಬಿಸಿತು. ಎಲ್ಲರೊಡನೆಯೂ ಸೇರಿ ಅವರು ಆ ದಿವಸ ನಕ್ಕುದೆಷ್ಟು! ಅವರಷ್ಟು ಇತರರಾರೂ ನಕ್ಕಿರಲಾರರು! ದೂರದಿಂದಲೇ ಅವರಿಗೆ ನನ್ನ ಆತ್ಮನಿವೇದನೆಯನ್ನು ಸಲ್ಲಿಸಿದೆನು; ನನ್ನ ಭಕ್ತಿಯ ಅಲ್ಪಕಾಣಿಕೆಯನ್ನು ಮುಟ್ಟಿಸಿದೆನು.

ಅಲ್ಲಿಂದ ಕರ್ನಾಟಕ ಸಂಘದ ಹಬ್ಬಕ್ಕೆ ಬಂದೆನು. ಹಸುಹುಡುಗರಂತ ಅವರ ಹೃದಯ, ಸದಾಕಾಲವೂ ಮಂದಸ್ಮಿತ ಬೀರುವ ಅವರ ಮುಖ, ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಹಬ್ಬದಲ್ಲಿ ಎಲ್ಲರೂ ಹಸನ್ಮುಖಿಗಳಾಗಿರಬೇಕು. ಮಾಸ್ತಿಯವರು ನಕ್ಕು, ಎಲ್ಲರನ್ನೂ ನಗಿಸಿದರು. ಹಬ್ಬದ ಸೊಗಸು ಸವಿಯುವ ಪರಿಯನ್ನು ಎಲ್ಲರಿಗೂ ತೋರಿಸಿಕೊಟ್ಟರು. ಹಬ್ಬವು ಹರ್ಷದಲ್ಲಿಯೇ ಸಮಾಪ್ತಿಗೊಂಡಿತು.

ಅದೆಲ್ಲ ಪೂರೈಸಿದ ಮೇಲೆ ಬೀಂದ್ರಿಯವರನ್ನು ಕಂಡೆನು. ಬಹುದಿನದ ಮೇಲೆ ಒದಗಿಬಂದ ದರ್ಶನ. ಆಗಿನ ಆನಂದವನ್ನಂತೂ ಹೇಳ ತೀರದು. ಅದರ ರೀತಿ ಅವರ ಕಣ್ಣಿನಲ್ಲಿ ತೋರುತ್ತಿತ್ತು. ಕುಶಲ ಪ್ರಶ್ನೆಗಳಾದ ಮೇಲೆ 'ಮಾಸ್ತಿಯವರ ಭೆಟ್ಟಿ ಮಾಡಿಸುತ್ತೇನೆ' ಎಂದು ನನ್ನನ್ನು ಮಾಸ್ತಿಯವರೆಡೆಗೆ ಕರೆದೊಯ್ದರು. ನಾನು ಅಂಥ ಪ್ರಸಂಗವನ್ನು ಕಾಣುವೆನೆಂದು ಕನಸುಮನಸಿನಲ್ಲಿಯೂ ಎಣಿಸಿರಲಿಲ್ಲ. ಹಾರಲು ಬಾರದ ಮರಿಗೆ ಆಕಾಶವನ್ನು ತೋರಿಸಿದಂತಾಯಿತು. ನನ್ನ ಮೂಕ ಭಕ್ತಿಯು ಫಲ ಕೊಟ್ಟಿತು. ನನ್ನನ್ನು ನೋಡಿದಾಗ ಮಾಸ್ತಿಯವರು ಬೀರಿದ ಆ ಮುಗುಳ್ನಗೆಯ ಅಮೃತಲೀಲೆಯ ಸೊಬಗನ್ನು ನಾನು ಚಿತ್ರಿಸಿ ತೋರಿಸಲಾರೆ. ಅವರ ಕೈ ಕುಲುಕಾಟ ಮಾಡಿದ ಪ್ರಸಂಗವನ್ನು ನಾನು ಬಣ್ಣಿಸಲಾರೆ. ಮಾಸ್ತಿಯವರ ಹಸ್ತ ಪರುಷಮಣಿ. ಅದರ ಪ್ರಭಾವದಿಂದ ನನ್ನ ಅಲ್ಪ ಹೃದಯ ಪುನೀತವಾಯಿತು. ನನ್ನ ಮನಸ್ಸು ಮಾಸ್ತಿಯವರ ಮನಸ್ಸನ್ನು ಮುಟ್ಟಿತು. ಸಾಹಿತ್ಯಸೇವೆ ಮಾಡಲು ನನ್ನನ್ನು ಮಾಸ್ತಿಯವರು ಹುರಿದುಂಬಿಸಿದರು. ಅವರ ಪ್ರತಿಭೆಯ ಕಣವಾದರೂ, ಅವರ ಕಾವ್ಯಶಕ್ತಿಯ ಅಣುವಾದರೂ ನನಗೆ ಹರಿದು ಬಂದಿರುವಾಗ, ನಾನೇಕೆ ಹಿಂಜರಿಯಲೆಂದು ಅವರಿಗೆ ಭಕ್ತಿಪುರಸ್ಸರವಾಗಿ ತಲೆವಾಗಿದೆನು. ಅಂತೂ, ಅನುದಿನವೂ ನೋಡಬೇಕೆಂದು ಬಯಸುತ್ತಿದ್ದ ನನ್ನ ಪೂಜೆಯ ವಸ್ತುವನ್ನು ಕಡೆಗೊಮ್ಮೆ ಕಂಡೆ. 'Give me half the happiness thy brain must know' ಎಂದು ಒಳಗೊಮ್ಮೆ ಬೇಡಿಕೊಂಡೆ.

—ಪಾಟೀಲ ಪುಟ್ಟಪ್ಪ

# ಕಾವ್ಯಾರಾಮ

## ಶ್ರಾವಣ

ಶ್ರಾವಣಾ ಬಂತು ಕಾಡಿಗೆ | ಬಂತುನಾಡಿಗೆ |
ಬಂತು ಬೀಡಿಗೆ | ಶ್ರಾವಣಾ ಬಂತು |

ಕಡಲಿಗೆ ಬಂತು ಶ್ರಾವಣಾ | ಕುಣಿದ್ಹಾಂಗ ರಾವಣಾ ||
ಕುಣಿದಾವ ಗಾಳಿ | ಬೈರವನ ರೂಪತಾಳಿ |

ಶ್ರಾವಣ ಬಂತು ಘಟ್ಟಕ್ಕ | ರಾಜ್ಯಪಟ್ಟಕ್ಕ |
ಬಾನಮಟ್ಟಕ್ಕ |
ಏರ್ಯಾವ ಮುಗಿಲು | ರವಿ ಕಾಣೆ ಹಾಡೆಹಗಲು |

ಶ್ರಾವಣ ಬಂತು ಹೊಳಿಗಳಿಗೆ | ಅದೇ ಶುಭಗಳಿಗೆ |
ಹೊಳಿಗೆ ಮತ್ತ ಮಳಿಗೆ |
ಆಗ್ಯೇದ ಲಗ್ನ | ಅದರಾಗ ಭೂಮಿ ಮಗ್ನ |

ಶ್ರಾವಣ ಬಂತು ಊರಿಗೆ | ಕೇರಿ ಕೇರಿಗೆ |
ಹೊಡೆದ ಝೂರಿಗೆ |
ಜೋಕಾಲಿ ಏರಿ | ಅಡರ್ಯಾವ ಮರಕ ಹಾರಿ |

ಶ್ರಾವಣ ಬಂತು ಮನಿಮನಿಗೆ | ಕೂಡಿ ದನಿದನಿಗೆ |
ಮನದ ನನಿಕೊನಿಗೆ |
ಒಡೆದಾವ ಹಾಡೂ | ರಸ ಉಕ್ಕತಾವ ನೋಡು ||
ಶ್ರಾವಣ ಬಂತು || ೧ ||

ಬಿಟ್ಟ ತೊಟ್ಟಾವ ಕುತನಿಯ ಅಂಗಿ |
ಹಸಿರು ನೋಡ ತಂಗಿ |
ಹೊರಟಾನೆಲ್ಲೊ ಜಂಗಿ |
**ಜಾತ್ರಿಗೇನೋ | ನೆರದsದ ಇಲ್ಲೆ ತಾನೋ |**

ಬನಬನ ನೋಡು ಈಗ ಹ್ಯಾಂಗ |
ಮದುವಿ ಮಗನ್ಹಾಂಗ |
ತಲಿಗೆ ಬಾಸಿಂಗ |
ಕಟ್ಟಿಕೊಂಡೂ | ನಿಂತಾವ ಹರ್ಷಗೊಂಡು ||
ಹಸಿರುಟ್ಟ ಬನುರಿಯ ಹಾಂಗ |
ನೆಲಾ ಹೊಲಾ ಹ್ಯಾಂಗ |
ಅರಿಸಿಣ ಒಡೆಧಾಂಗ |
ಹೊಮ್ಮತಾವ | ಬಂಗಾರ ಚಿಮ್ಮತಾವ ||
ಗುಡ್ಡ ಗುಡ್ಡ ಸ್ಥಾವರಲಿಂಗ |
ಅವಕ ಅಭ್ಯಂಗ |
ಎರಿತಾವನ್ನೊ ಹಾಂಗ |
ಕೂಡ್ಯಾವ ಮೋಡ | ಸುತ್ತಿಲ್ಲ ನೋಡ ನೋಡ ||
ನಾಡೆಲ್ಲ ಏರಿಯ ವಾರಿ |
ಹರಿತಾವ ಝರಿ |
ಹಾಲಿನ ತೊರಿ |
ಈಗ ಯಾಕs | ನೆಲಕೆಲ್ಲ ಕುಡಿಸಲಾಕ ||
ಶ್ರಾವಣ ಬಂತು || ೨ ||

ಜಗದ್ಗುರು ಹುಟ್ಟಿದ ಮಾಸ |
ಕಟ್ಟಿ ನುರು ವೇಷ |
ಕೊಟ್ಟ ಸಂತೋಷ | ಕುಣೀತದ | ತಾನsನ ದಣಿತದ |
ಶ್ರಾವಣ ಬಂತು ಕಾಡಿಗೆ| ಬಂತು ನಾಡಿಗೆ| ಬಂತು ಬೀಡಿಗೆ|
ಶ್ರಾವಣ ಬಂತು ||

—ಅಂಬಿಕಾತನಯದತ್ತ

" ವಿದೇಹರಾಜನ ತನೂಜೆ, ದಶರಥ
ಚಕ್ರೇಶ್ವರನ ಸೊಸೆ,
ಈ ಕ್ಲೇಶವ ತಡೆವಳೆ? ಸರಿಯೇ ಈ
ತನ್ವಿಗೆ ಇಂಥ ದೆಸೆ?" ॥ ೧೫ ॥

ತನ್ನ ಜೊತೆಗೆ ಇರಬೇಕೆಂಬಾಸೆಗೆ
ಧರ್ಮದ ಹೆಸರಿಟ್ಟು
ಸತಿ ಪಡುತಿಹ ಹಿರಿಯಾಯಸ ನೋಡಿದ
ರಾಘವ ಬಸಗೆಟ್ಟು. ॥ ೧೬ ॥

ತುಂಬಿದ ಹಸುರಿನ ಮರವಿದ ಕಂಡು
ರಘುವರ ಅರಸಿತಿಯ
ಇಲ್ಲಿ ಕೂರಿಸಿದ; ನೆನೆಯುತ ಹೆಣ್ಣಿನ
ಶಕ್ತಿಯ ಪರಿಮಿತಿಯ. ॥ ೧೭ ॥

ಸಂಸ್ಕೃತ ಪದಗಳನಿನಿತನು ಎಂತು
ಎಲ್ಲಿ ಕಲಿತ ಗೌಡ,
ಎಂದೆನಗಜ್ಜರಿ; ಎಳಸುವಿರಿದನು
ಅರಿಯೆ ನೀವು ಕೂಡ ॥ ೧೮ ॥

ಸಂಸ್ಕೃತವನು ನೀವೆಲ್ಲಿ ಕಲಿತಿರಿ,
ಗೌಡರೆ, ಎನೆ ನಾನು
ಸಂತಸವಿನಿತನು ಕಣ್ಣಲಿ ತೋರಿ
ಮುದುಪ ನುಡಿದ ತಾನು. ॥ ೧೯ ॥

ನಾನು ಸಂಸ್ಕೃತವ ಕಲಿತುದೇತರದು?
ಅಯ್ಯನವರ ಗಾಣ
ಆಲೆಯಾಡಿ ಶಾಸ್ತ್ರವ ಹಿಂಡಿದ ದಿನ
ನಾನು ಹಾಲ ಜಾಣ ॥ ೨೦ ॥

ಬದಿಯಲಿರುತ ಚಿಮ್ಮಿದ ರಸ ಇಷ್ಟನು
ನಕ್ಕಿದೆ ರುಚಿ ಉಂಡು;
ಬೆಟ್ಟವಲ್ಲ ಬಿಡಿ ನನ್ನೀ ಕಲಿವು,
ಚೂರಿನ ಕಲಕಂಡು. ॥ ೨೧ ॥

ಕೋದಂಡಪಾಣಿ ಇಲ್ಲಿ ನಿಂತಿರಲು
ಇಲ್ಲಿ ಕುಳಿತು ತಾಯಿ
" ರಾಮಾ ನೆರಳಿದು ಒಹುಸುಖ," ಎಂದಳು;
ಹವಳ ಅವಳ ಬಾಯಿ. ॥ ೨೨ ॥

ಈ ಹಬ್ಬದ ದಿನ ನೋಡಿರಿ, ಒಡೆಯ,
ಗಾಳಿಯ ಸುಳಿವಿಲ್ಲ;
ಮೂಡಣ ಮಾರುತ ನಿಂತಿರೆ, ಇನ್ನೂ
ಬಾರ ತೆಂಕ ಮಲ್ಲ. ॥ ೨೩ ॥

ಪಡುವಣ ಪರ್ವತ ಗಾಳಿಯ ಹಿಂಡನು
ತಡೆದು ಕೂಡಹಾಕಿ
ಹಾರಿಸಿ ದಿನ ಕಾಯುವುದು ಅಲ್ಲದಿರೆ
ತುರುಬು ಅಲುಗದೇಕೆ? ॥ ೨೪ ॥

ದಾದಿಯ ಭಯದಲಿ ನಿಂತ ಹೈಕಳಲಿ
ವೋರ ಯಾವನೊಬ್ಬ
ದುಡುಕಿ ಬಂದವೊಲು ಗಾಳಿಯ ತುಣುಕು
ಹಾದುದೊ ಅದೆ ಹಬ್ಬ. ॥ ೨೫ ॥

ದೇವಿಯರಿಲ್ಲಿಯೆ ಕುಳಿತಿರೆ ಅವರ
ಆಯಾಸವ ಕಳೆದು
ಹರಕೆಗೊಂಬ ಏಂದೊಂದೆಳಗಾಳಿ,
ಪಡುವಣಿಂದ ಸುಳಿದು, ॥ ೨೬ ॥

ಸುತ್ತಲೆ ಹರಿಯಿತು, ಒಡಲನು ಸೋಕಿತು,
ಎಲೆಗಳನಾಡಿಸಿತು ;
ಏನೋ ಉಸಿರಿತು, ಎಂತೋ ನಲಿಸಿತು,
ಬೇಸರ ಓಡಿಸಿತು. ॥ ೨೭ ॥

ಒಂದು ಹೂವಿನೊಡನಾಡುವುದಿಲ್ಲ
ಬಿಸಿಲ ದಿನದ ಗಾಳಿ ;
ಎಲ್ಲಿ ಏನು ಎಂದೆಲ್ಲು ಇಣಿಕುವುದು ;
ಇದೇ ಅದರ ಜಾಳಿ. ॥ ೨೮ ॥

ಎಣೆಯಾಗಿಹ ಬಳ್ಳಿಯ ಜೊತೆಗಾಡಿ
ಸುಮ್ಮನೆ ಇಹುದಿಲ್ಲ;
ಹಿರಿಮರಗಳ ಹಾಯ್ವುದು; ಏನೆಂಬೆ
ಇದರ ಎದೆಯ ಕಲ್ಲ ? ॥ ೨೯ ॥

ನೂರು ಹೂಗಳನು ಹಾಯ್ದು, ಮಡಲಿನಲಿ
ನೂರು ಕಂಪ ಇರುಕಿ,
ನಮ್ಮೆಡೆ ಬರುವುದು ; ತೆಂಕಣ ಗಾಳಿಯ
ತೆರನಿದು ಬಹು ಬೆರಕೆ. ॥ ೩೦ ॥

ವುಂಡರಾಟವನು ಬಣ್ಣಿಸಿ ಗಾಳಿಯ
ಬೆರಕೆ ಎಂದುದಕೆ
ನಗುವಿರ ಒಡೆಯ ? ನಗಬೇಕಿನಿಸು
ನಗೆಯಿಲ್ಲದೆ ಬದುಕೆ? ॥ ೩೧ ॥

ಬೆರಕೆ ದೋಷ ಒಡಲಿಹ ಬಾಳಿನಲಿ ;
ಗಾಳಿಗೆ ಕುಂದಲ್ಲ.
ಮನುಜರ ಮಿತಿಯನು ಮೀರಿದ ಮಾತ್ರ
ದೈವಕೆ ದುಂದಲ್ಲ. ॥ ೩೨ ॥

ಹೂಗಳ ಜೊತೆಗಾಡಿದ ಕಂಪಲ್ಲದೆ
ತೆಂಕಣ ಈ ಗಾಳಿ
ಮುಂದೆ ಎಂದೊ ಮಲರುವ ಹಸಿರುಸಿರಿಗೆ
ತಾನಿಡುವುದು ದಾಳಿ. ॥ ೩೩ ॥

ಅಲ್ಲದೆ ಈ ಗಾಳಿಯ ಎದೆಯಿಂದಲೆ
ಸೂಸುವ ಸೌಗಂಧ
ಬೇರೆ ಬಂದಿಹುದು: ಬಲ್ಲವರಿದನು
ನುಡಿಯರು ಮರೆಯೆಂದು. ॥ ೩೪ ॥

ಪಡುಕಡಲನು ಹಾಯುತ ಹಾಯುವುದೀ
ಗಾಳಿ ಹಾಲಕಡಲ;
ಆಗ ಹೊಂದುವುದು ದಿವ್ಯ ಗಂಧವನು
ಸೋಕಿ ಹರಿಯ ಒಡಲ. ॥ ೩೫ ॥

ರಾಮನ ಒಡಲಿನ ಸೌಸವ ಕಂಡಿತು
ದೇವಿಗೆ ಗಾಳಿಯಲಿ;
ಕೆಲವು ಹೆಣ್ಗಳಿಗೆ ಇಂತಹ ಪುಣ್ಯ
ಬರೆದಿದೆ ತಾಳಿಯಲಿ. ॥ ೩೬ ॥

ಆಯಸ ಹರಿದಿರೆ, ತಾಯಿ ಸುತ್ತಲೂ
ಕಣ್ಣನು ತಿರುಹಿದರು;
ಏನು ಅಂದ ಬನ, ಏನು ಅಂದ ಆ
ದೂರದ ಕಿರಿಬಿದಿರು! ॥ ೩೭ ॥

ಧರೆ ಪೊಂಪುಳಿಹೋದಂತಿದೆ ಎತ್ತಲು
ಹೂವಿನ ಮಧುಮಾಸ;
ಚೈತ್ರದ ಬರವು ಪ್ರಕೃತಿಯ ಮೊಗದಲಿ
ಬಿತ್ತರಿಸಿದ ಹಾಸ. ॥ ೩೮ ॥

ಯುಗಾದಿಯಾಗಿಹ ಈ ದಿವಸಗಳ
ಈ ಜೆಲುವೇ ಜೆಲುವು;
ಏಮಂತ ಋತುವನು ಗೆಲಿದ ವಸಂತದ
ಕಳೆಯೇರಿದ ನಿಲುವು. ॥ ೩೯ ॥

ಹೊಂಗೆಯ ಮರದಡಿ ಹೂವಿನ ಹರಹು
ಬಿಳಿ, ಊದಾ, ನೀಲಿ;
ಹೆತ್ತವ್ವನ ಬಸಿರಂದದ ಕಂಪಿನ
ಹಸಿರು ಕಣ್ಗೆ ಮೇಲೆ ॥ ೪೦ ॥

ಎಂದೋ ಕೂಗನು ನಿಲ್ಲಿಸಿ ಹೋದ
ಕೋಗಿಲೆ, " ಹೊಸ ವರುಷ
ಬಂದಿದೆ, ನಾನೂ ಬಂದೆನು " ಎನುತಿದೆ;
ಸಾರುತಲಿದೆ ಹರುಷ. ॥ ೪೧ ॥

ದೇವರ ಮಲ್ಲಿಗೆಬನದಲಿ ಮಲರು
ಜೆಲ್ಲಿದೆ ತಾರೆಯೆನೆ;
ಸಂಪಗೆಮರದಲಿ ಕೊಂಬೆ ಕೊಂಬಿಗೆ
ನೋಡಿರಿ ನೂರು ನನೆ. ॥ ೪೨ ॥

ನಕ್ಷತ್ರಾರತಿಯಂದದಿ ಹೂಗಳ
ಗೊಂಜಲನೆತ್ತಿರುವ
ಮಾವಿನಮರವಿದು ಮರವೋ? ನಭದಲಿ
ಬರೆದರೊ ಚಿತ್ತರವ? ॥ ೪೩ ॥

" ಕಂಪನು ಬೀರಲು ಹೂವೇ ಬೇಕೇ?
ಏಕೆ? " ಎಂದು ಹಲಸು
ಇಂದ್ರಜಾಲದಲಿ ಗಮಗಮಿಸುತಲಿದೆ;
ನೋಡಿ ಅದರ ಬಳಸು. ॥ ೪೪ ॥

ಸುತ್ತಲು ತುಂಬಿದ ಹಸುರಿನ ನೆರವಿ;
ಹಿರಿಯ ಮರದ ಪರಸೆ;
ಏನು ನಂಗತಿಯೊ? ಯಾರು ನೆರಸುವರೊ
ಏಕೆ ಇವರ ಕರೆಸಿ? ॥ ೪೫ ॥

ಮಲೆರಾಯನ ಸತಿ " ಉಮಾಮಹೇಶರು
ಹಸೆನಿಂದುದರೊಸಗೆ;
ಬನ್ನಿರಿ ಎಲ್ಲಾ ಬಳಗ. " ಎನಲು ಕರೆ
ಹೊರಟಿತೊ ದೆಸೆದೆಸೆಗೆ? ॥ ೪೬ ॥

ಮಲೆಯನು ಮಲೆ ಕರೆದೂದಿದೆ ಸುದ್ದಿಯ,
ಕೂಗಿ ಮೂರು ಬಾರಿ;
ಜಗದಲಿ ಹರಹಿದೆ ಒಸಗೆಯ ಸಂತಸ,
ಎಲ್ಲೆಡೆ ನಲವೇರಿ. ॥ ೪೭ ॥

ಕರೆಯನು ಕೇಳುತ " ಒಸ್ನಿರಿ, ನಾವೂ
ಮುದುಮುಕ್ಕಳ ಹರಸಿ
ಬರುವ " ಎಂದು ಹೊರಟಿವೆ ಮುರವೆಲ್ಲ
ಹೊಸ ಉಡೆಯನು ಧರಿಸಿ. ॥ ೪೮ ॥

ಜಾಲಿ, ಬೇಲ, ಗೋಣಿ, ಬೇವು,
ಜಾತಿಯನನುಸರಿಸಿ,
ಸಿಡುಕುವ ಮರವೂ ವರುಷಕೆ ಒಮ್ಮೆ
ನೋಡಿ ನಗುವ ವರಿಸೆ. ॥ ೪೯ ॥

ಸುತ್ತಣ ಜೆಂದವ ನೋಡುತ ದೇವಿ
ತನ್ನರಸನ ಕುರಿತು
" ರಾಮಾ ಎಂತಹ ಸಿಂಗರ! " ಎಂದಳು;
" ಇದೆಯೇ ಇದ ಪೊರಪು? " ॥ ೫೦ ॥

‘ ಎಂತಹ ಸಿಂಗರ! ಎಂದನು ರಾಮ;
ಆಡಲಾರ ವಿರಸ;
ಆದರೆ ಹೆಂಡಿರು ಆಯಸಪಟ್ಟುದ
ಮರೆಯಲಾರನರಸ. ॥ ೫೧ ॥

ಈ ಒಂದರೆನುಡಿ ಸಾಲದು ಸುದತಿಗೆ
ನುಡಿದಳಾಕೆ ಅಂತೇ;
ಏನೋ ಯೋಚನೆ ಅಣ್ಮಗೆ, ತಾನು
ಕಳೆವೆನು ಆ ಚಿಂತೆ. ॥ ೫೨ ॥

“ ರಾಮಾ ಕಾಡಿನ ಕಷ್ಟವ ನೀನು
ಬಹು ಬಣ್ಣಿಸಿ ನುಡಿದೆ;
ಬರಲೇ ಬಾರದು ಎನ್ನುತ ನನ್ನನು
ಅದು ಎಷ್ಟೋ ತಡದೆ. ॥ ೫೩ ॥

“ ಇಲ್ಲಿಗೆ ಬಾರದೆ ಈ ಬನಸಿರಿಯನು
ಕಾಣಬಹುದು ಎಂತು?
ನೋಡಬಲ್ಲೆನಿದ ಇಲ್ಲಿಯೆ ಇನ್ನೂ
ಹತ್ತು ವರುಷ ನಿಂತು. ॥ ೫೪ ॥

“ ಮಧುಗಂಧದ ಸುಂದರ ವನವೆನಿತನು
ನಾನು ನೋಡಿ ತಣಿದೆ!
ಸುರನಂದನದಲ ನಿಂದಿಹೆನೆಂದೇ
ನೆನೆದು ಕಂಡ ಕ್ಷಣದೆ. ॥ ೫೫ ॥

“ ದಾಕ್ಷಿಣ್ಯಮೂರ್ತಿ ನೀ ಕರತಂದೆ
ನಾನೀ ಸುಖ ಕಂಡೆ ;
ಇಂತಲ್ಲದೆನಗೆ ವನಸಂಚಾರ
ಆಟದ ಕೈಜಿಂಡೆ ? ॥ ೫೬ ॥

“ ಬಿಸಿಲಲಿ ಮರಗಳ ನೆರಳಲಿ ಕೂರುವ
ಸುಖ ಅರಮನೆಯಲ್ಲಿ
ದೊರೆವುದೆ? ಮಧ್ಯಾಹ್ನದೊಳುದ್ಯಾನದಿ
ನಡೆವುದು ಘನವಲ್ಲ. ॥ ೫೭ ॥

ವನಸಂಚಾರದ ಸುಖವನು ಬಲ್ಲೆನು,
ನಾ ಹೊರಡುವ ವೇಳೆ;
ಆದರೆ ಇಷ್ಟೆಂದಿದ ನಾ ಕಾಣೆನು ;
ನಿಜ ಊಹೆಗೆ ಮೇಲೆ. ॥ ೫೮ ॥

“ ದಿನದಿನವೂ ಅಲ್ಲಿ ಅಯೋಧ್ಯೆಯಲಿ
ಇದೇ ಚಂದ್ರ ಸೂರ್ಯ
ಇದ್ದರು ; ಏತಕೆ ಇಂತು ಕಾಣರು ?
ಇದು ಎನಗಾಶ್ಚರ್ಯ. ” ॥ ೫೯ ॥

ಅನುಭವಿಸುವ ಸುಖವನು ಬಣ್ಣಿಸುವಳು
ಅರ್ಧ ನಿಜದಿ ಅರಸಿ ;
ತನಗೋಸುಗ ದೊರೆಗಾಯಸ ಬೇಡ
ಎಂದು ಅರ್ಧ ಮರೆಸಿ : ॥ ೬೦ ॥

ಎಂಬುದ ಬಲ್ಲನು ರಾಘವ; ಪತಿಯ
ಸ್ನೇಹದ ಪರಿಗಾಗಿ
ದಿನವೂ ಅಚ್ಚರಿ ; ಇಂದೂ ಕೇಳಿದ
ದಿನದೊಲು ಬೆರಗಾಗಿ. ॥ ೬೧ ॥

ಒಲುಮೆಯೊಳವರಂದಾಡಿದ ಮಾತು
ಇಂದೂ ನಡೆಯುವುದು ;
ನಗರದ ಬಾಳುವೆ ನಾಡಿನ ನುಂದಿಯ
ಸೌಖ್ಯವ ತೊಡೆದಿಹುದು. ॥ ೬೨ ॥

ಪಟ್ಟಣ ಎಂಬುದು ತೊದಲಿದ ಮಾತು
ಪಟ್ಟಿನು ಎನಲು ಸರಿ;
ಕಟ್ಟಣವೇ ಆ ಮನೆ? ಅಕೊ ಸಾಲಕೆ
ಕೆಟ್ಟೇ ಎಂಬ ಮೊರೆ. ॥ ೬೩ ॥

ಮನೆಯೆನ್ನುವ ಎಡೆ ಮನುಜಗೆ ಬೇಕು ;
ಬಯಲೂ ಇರಬೇಕು.
ನಾನು ಬೇಕು ; ನಾವೂ ಇರಬೇಕು ;
ಅಂತಿರೆ ಸರಿತೇಕು. ॥ ೬೪ ॥

ಮನೆಯಲಿ ಕುಳಿತಿರೆ ಬಯಲಿನ ಚೆಂದ
ತಿಳಿಯುವುದೇ ಜನಕೆ ?
ಹೆಗ್ಗಣವಾಯಿತು ಹಾಳ ಹೊಕ್ಕು ಜನ ;
ಹೊಯಿದಟ್ಟಿರಿ ಬನಕೆ. ॥ ೬೫ ॥

ನೆಲವೇ ನೀರೇ ಗಾಳಿಯೆ ಬೆಳಕೇ?
ಹಿಡಿಯಿತೊಂದೆ ಹುಚ್ಚು;
ಸರ್ವಂ ಭಕ್ಷ್ಯಾಯೊ ದುರ್ಮಂತ್ರದ
ಅತಿಯಾಸೆಯ ಕಿಚ್ಚು. ॥ ೬೬ ॥

ನಿಮ್ಮಂದದಿ ಒಮ್ಮೊಮ್ಮೆ ಬಯಲಲಿ
ನಡೆವರ ಮೊಕದಲ್ಲಿ
ಕಾಣುವ ಕಳೆ ಕಾಣದು ಬೀಪಾರದ
ಹೊತ್ತು ಹರುಕನಲ್ಲಿ. ॥ ೬೭ ॥

ಇವರಿಂತಿರುತಿರೆ, ಮುರವನು ಸಾರಿ
ಹೊನ್ನ ಬಾಯ ಗೊರವ
ಕೊಂಬಿಯೇರಿ ಕೊರಲೆತ್ತಿ ಹಾಡಿತು;
ನಲಿಸಿತು ಈ ಹರವ ॥ ೬೮ ॥

ಹಕ್ಕಿ ಬಂದು ಹಾಡದೆ ಇರೆ ಮರಕೆ
ದನಿಯ ಸೌಖ್ಯವೆಲ್ಲಿ ?
ನೀವೈತರದಿರೆ ನಿಮ್ಮೊಡನೆನಗೆ
ಸಲ್ಲಾಪವೆ ಸೊಲ್ಲೆ ? ॥ ೧೯ ॥

ಬನದಲಿ ಕೇಳುವ ಎನಿತೋ ಸ್ವರದಲಿ
ಗೊರವನ ಕೊರಲು ಸವಿ.
ಈ ಇಂಪನು ಬೀರಾವ ದನಿಯಲೂ
ಕಾಣದು ನನ್ನ ಕಿವಿ. ॥ ೨೦ ॥

ದೇವರ ಆಟದ ಮನೆ ಈ ಲೋಕ:
ಇಲ್ಲಿ ದನಿಗೆ ಕೊರೆಯೆ ?
ಕಂಪಿಗೆ ? ರುಚಿಗೆ ? ಮನುಜಗೆ ಸಾಧ್ಯವೆ
ಇಹ ಬಣ್ಣವ ಬರೆಯೆ ? ॥ ೨೧ ॥

ಇನಿದೆಲ್ಲಾ ಸ್ವರ; ಎಲ್ಲವು ದೇವರು
ನಮ್ಮ ಕರೆವ ರೀತಿ;
ಒಮ್ಮೆ ಒಂದು ತೆರ, ಮತ್ತೆ ಬೇರೆ ತರ,
ಹರಿವುದವನ ಪ್ರೀತಿ. ॥ ೨೨ ॥

ಎಲ್ಲಿಯೊ ಇರುವನು ನಾವರಿಯದ ಎಡೆ
ಬಹುದಲ್ಲಿಂದ ಕರೆ.
ಯಾರದು ? ಗೊರವ. ಕರೆದವ ಕಾಣ:
" ಇಕೊ ಎ ಇತ್ತ ಅರೆ " ॥ ೨೩ ॥

ಒಳಗೇ ಇರುವನು; ಅವನು ಎಂಬರು
ಇರಬಹುದೇಕೊಲ್ಲ ?
ಆದರು ಇಂತೇ ಎನಬಾರದು; ದೊರೆ
ಸಿಲುಕನು, ಬಹುಕಳ್ಳ. ॥ ೨೪ ॥

ವಿಜಯಾಪುರದಲಿ ಗೊಮ್ಮಟವಂತೆ;
ಅಲ್ಲಿ ಕುಳಿತು ಗೆಳೆಯ
ಪಿಸು ಮಾತಾಡಲು ಇಲ್ಲಿ ಕೇಳುವುದು;
ಮಧ್ಯೆ ಎಂಥ ವಳಯ! ॥ ೨೫ ॥

ಹಾಳು ಭಾವಿ; ತಲೆ ತಿರುಗುವ ಅಗಲ;
ಈಸಲು ಬರಿ ಶೂನ್ಯ.
ಬದಿಗಿಲ್ಲ ಗೆಳೆಯ; ತುಡುಕಲು ಬಾರನು;
ಕಾಂಬನು ಅದೆ ಪುಣ್ಯ ॥ ೨೬ ॥

ಬದಿಯಲಿ ಕೇಳಿತು; ಬದಿಯಲೆ ಹುಟ್ಟಿತೆ
ಸ್ವರ? ಏನೀ ಭ್ರಾಂತು?
ಒಳಗೋ ಹೊರಗೋ ? ಜರ್ಜಗೆ ಕೊನೆಯೆ ?
ಅಂತು, ಇಂತು, ಎಂತು. ॥ ೨೭ ॥

ಆ ಗೊಮ್ಮಟದಲಿ ಕಾಂಬನು ಗೆಳೆಯ;
ಈ ಗೊಮ್ಮಟದಲ್ಲಿ
ಕಾಣದೆ ಪಿಸುನುಡಿ ನುಡಿವನು; ಹುಡುಕಿ
ಮರುಳಾಗುವೆವೆಲ್ಲ. ॥ ೨೮ ॥

ಏನು ಹೇಳುತಿದ್ದೆನೊ ? ಓ, ಗೊರವ.
ಆ ಕೊರಲಿನ ಸಣ್ಣು
ಮನವನು ಸಾರಿತೆ, ನೋಡಿರಿ ಜೀವ
ನಲಿದ ಬಳ್ಳಿ ಮಿಂಚು. ॥ ೨೯ ॥

ಗೊರವನ ದನಿಯನು ಕೇಳಿದ ದೇವಿ
" ರಾಮಾ, ಈ ದನಿಗೆ
ಸಮನಿರಲಾರದು ಎನಿದು ಇಂಪು! "
ಎಂದಳು ಅಣ್ಮನಿಗೆ. ॥ ೩೦ ॥

ಹಕ್ಕಿಯಿಂಚರಕೆ ಮೆಚ್ಚಿದ ಮನವ
ಇಂತು ನುಡಿಯಲರಸಿ
" ಇದಕೂ ಇಂಪಿನ ದನಿ ನಾ ಒಲ್ಲೆ "
ಎಂದ ರಾಮ ಸರಸಿ. ॥ ೩೧ ॥

" ಯಾವುದು ದನಿಯದು ? ನಾ ಕೇಳಿಹೆನೆ ? "
ಎಂದು ಮಾತೆ ಸೀತೆ
ಕೇಳಿದಳಾಣ್ಮನ, ಕಲಿಸುವ ಜಾಣ್ಮೆಗೆ
ಏನೀತೆ ಸುಪ್ರೀತೆ. ॥ ೩೨ ॥

" ನೀ ಎನ್ನನು ರಾಮಾ ಎನ್ನುವ ದನಿ
ಎನಗದು ಬಹು ಇನಿದು "
ಎಂದನು ರಘುವರ ; ಅನೃತವನಾಡದ
ಆಣೆಯೆ ರಾಮನದು. ॥ ೩೩ ॥

ಕಾದಲರಾಡುವ ಕೂರ್ಪಿನ ಮಾತು
ಹೆರರು ಕೇಳತಗವು ;
ಅಣ್ಣ ಅತ್ತಿಗೆಯ ನುಡಿ ಲಕ್ಷ್ಮಣನ
ಕಿವಿದೆರೆಯನೆ ಹೊಗವು. ॥ ೩೪ ॥

ಹೆಂಡಿರ ಕಂಡರೆ ರಘುನಾಥನಿಗೆ
ಏನೊ ತರದ ಮೆಚ್ಚು.
ಲೋಕಮಾತೆ ಅಂತಿದ್ದಳು ರಾಮ
ಒಲಿದುದೇನು ಹೆಚ್ಚು ? ॥ ೩೫ ॥

ಆ ಅಂದದ ಹಣೆ ; ಚೆಂದದ ತಿಲಕ ;
ಸೇರೆ ಸೇರೆ ಗಣ್ಣು ;
ಮೂಗೋ ಸಂಪಿಗೆ ; ನಗೆಯೆಳೆ ಬಸಿಲಲ
ಕಳಿತ ತುಟಿಯ ಹಣ್ಣು.

ನೆಲದಾವರೆ ಮುಲ್ಲಿಗೆಯಲಿ ಕಟ್ಟಿದ
ಮುಡಿ ಹೂ ಬಿಸಿಲಿಂದ
ಇನಿಸು ಬಾಡಿರಲು ಹೆರಳಲಿ ಕಾಣುವ
ಅದೇನೊ ಹೊಸ ಚಂದ, ॥ ೮೭ ॥
ಅಣ್ಣಗೆ ನಿಜದಲಿ ತನ್ನಯ ದನಿಯೇ
ಇಂಪು ಎಂದು ತಾಯಿ.
ಮನದಲಿ ಬಲ್ಲಳು ; ಆದರು ಸರಸದ
ಜಪಲ ಬಿಡದು ಬಾಯಿ. ॥ ೮೮ ॥
ಇನಿಸು ಕಂದಿರುವ ಸಿರಿಮೊಗವನು ದೊರೆ
ಇರುವೆಡೆ ತಿರುಗಿಸುತ,
ಹೊಳೆವ ಕಣ್ಣಕೊನೆ ಚೆಂದುಟಿಯೆಡೆಯಲಿ
ಮೊಳೆತಿರೆ ದರ ಹಸಿತ, ॥ ೮೯ ॥
" ದಿನದಿನವೂ ನೀನಿಂತಹ ನುಡಿಗಳ
ನುಡಿಯುತಲೇ ಇರುವೆ ;
ಹೆಣ್ಣಿನ ಹೆಮ್ಮೆಯನಿಂತು ಹೆಚ್ಚಿಸಲು
ಬಲ್ಲವರಲಿ ತರವೆ ? " ॥ ೯೦ ॥
ಎಂದು ಕೇಳಿದಳು ದೇವಿ. ದಾಶರಥಿ
ನಗುತ ಸುಮ್ಮನಿದ್ದು
ರಾಣಿಯ ಬಿನ್ನಾಣದ ಮೊಗದಾಟವ
ನೋಟದಿಂದ ಮೆದ್ದ. ॥ ೯೧ ॥
ಈ ವೇಳೆಗೆ ದೇವಿಗೆ ನೆನಪಾಯಿತು
ಆ ದಿನ ರಾಘವನ
ಹುಟ್ಟಿದ ನವಮಿ ಎಂಬುದು ; ನೆನೆದು
ಕರೆದಳೊಂದೆಸಮನೆ. ॥ ೯೨ ॥
" ಅವ್ವಾ, ಮರೆತೆನೆ, ರಾಮಾ ಈ ದಿನ
ನೀ ಹುಟ್ಟಿದ ಹಬ್ಬ.
ನಿನ್ನೆ ನೆನೆದನಳು ಇಂದು ಮರೆತಿಹೆನು ;
ಏನೆನ್ನಲಿ ಮಬ್ಬ ? " ॥ ೯೩ ॥
" ನಾನು ಮರೆತರೂ ನೀ ಮರೆಯುವುದೇ
ಲಕ್ಷ್ಮಣ ? ಯಾವುದಕೂ
ಹೊಣೆ ನಿಂತಿರುವನು ನೀನೇ ಮರೆತರೆ
ನಡೆವುದೆಂತು ಬದುಕು ? " ॥ ೯೪ ॥
" ಹಬ್ಬದ ಅಡುಗೆಯ ಇಲ್ಲಿಯೆ ಮಾಡುವ,
ಆ ಮರದಡಿಯಲ್ಲಿ ;
ಪಣ್ಣು ಹಂಪಲನು ಬೇಗನೆ ತಾರಾ,
ಮೈದುನ, ನಡೆ, ಎಲ್ಲಿ ! "

ಏನು ಸಂಭ್ರಮ, ಏನು ಸಡಗರ,
ವಿಲಾಸ ಅದು ಏನು !
ಪತಿ ಜೊತೆಗಿರೆ ದೇವಿಯ ನುಡಿ ಎಲ್ಲಾ
ಆರದ ಹೊಸಜೇನು. ॥ ೯೬ ॥
ಅಡುಗೆಗೆಂದು ಶ್ರೀರಾಮನೆ ಒಳ್ಳೆಯ
ಪುಳ್ಳಿಯನಾರಿಸಿದ ;
ಒಲಿದ ಜೀವರಿಗೆ ಊಳಿಗಗೆಯ್ವೆನು
ಎಂಬುದು ತೋರೆ ಸದಾ. ॥ ೯೭ ॥
ಏನೇನಡುಗೆಯೊ ? ಆ ಮಾತೇಕೆ ?
ಈ ಬೆಂಗಾಡಿನಲಿ
ದೊರೆಗಳ ಊಟವೆ ? ಬರಬೀಕೆಂತು
ಚಕ್ಕುಲಿ ಕೋಡಬಳೆ ? ॥ ೯೮ ॥
ಬದನೆಯ ಪಳಿದೆಯ ; ಬುಡುಮೆಯ ಪಲ್ಯ ;
ಸಾವೆಯಕ್ಕಿಯನ್ನ ;
ನವಣೆಯ ಪಾಯಸ: ಉಂಡರು ಏನ ?
ಅರಸುತನದ ಕನ್ನ. ॥ ೯೯ ॥
ಜನಕನ ಕುಮಾರಿ ದಶರಥರಾಮನ
ಹುಟ್ಟಿದ ಹಬ್ಬದಲಿ
ಅಡುಗೆ ಮಾಡಿದಳು : ಹೊಗಳಿಹುದಿದನು
ಮುನ್ನಾ ಕಬ್ಬದಲಿ ॥ ೧೦೦ ॥
ಅಣ್ಣನ ಜೊತೆಯಲಿ ಊಟವ ಮುಗಿಸಿ
ಅತ್ತಿಗೆಗೆಡೆಯಿರಿಸಿ
ಲಕ್ಷ್ಮಣನೋಲೈಸಿದನಾ ಹಿರಿಯರ
ಇಚ್ಛೆಯನನುಸರಿಸಿ ॥ ೧೦೧ ॥
ಮುಳ್ಳಲಿ ಹರಹಿದ ಒಲ್ಲಿಯ ತೆರದಲಿ
ನೊಂದಳು ನನ್ನಮ್ಮ ;
ನೆನೆವೆನೆ ಒಳಗು ಹುಳ್ಳಹುಳ್ಳಗೆ ;
ತಡೆಯೆನು ಮೈಜುಮ್ಮ. ॥ ೧೦೨ ॥
ಒಂದು ಹೊತ್ತಿನಲಿ ರಾಯರ ಹಾಸುಗೆ
ಬಿಸಿಲ ನೆಲದಿ ಹೊರಳಿ,
ಸಂಜೆಗೆ ಮಂಚವನೇರಿ ಮುಟ್ಟುವುದು
ಒಡೆಯರೊಡಲ ಮರಳಿ. ॥ ೧೦೩ ॥
ಯಾರನು ಬಿಟ್ಟಿತು ಈ ಸಂಸಾರ ?
" ನನ್ನವರನು ಹೊರೆವೆ "
ಎಂದ ದೈವಕೇ ಮಾರ್ನುಡಿಯಿತು : " ನಾ

ಕತ್ತಲು ಬೆಳುದಿಂಗಳು ಸಂಸಾರ
ಕಟ್ಟು ಧರ್ಮ ಮೊಟ್ಟೆ ;
ಎಂದರು ಹರಿದಾನರು ; ಇದ ಮರೆತರೆ
ವ್ಯರ್ಥ ನೀನು ಕೆಟ್ಟೆ. ॥ ೧೦೫ ॥

ಹೊರಡುವ ಹೊತ್ತಲಿ ಸೀತಾದೇವಿ
ಹರಸಿದರೀ ಮರವ :
" ನೆರಳನಿತ್ತ ಸಖಿ, ಪಡೆ ಎಂದೆಂದಿಗು
ಬಹುತಳಿರಿನ ಹೊರವ ; ॥ ೧೦೬ ॥

" ಬಾಡಬೇಡ ನೀ " ಎಂದಳು ; ಮತ್ತೆ
" ಅಡುಗೆಗೆ ನೆರವಾದ
ಬಾವಿ ಬತ್ತದಿರು " ಎಂದಳು ; ಬಾಲನ
ಹರಿಸಿದೊಲು ಯಶೋದ. ॥ ೧೦೭ ॥

ಆ ಮರವೇ ಇದು ; ಆ ನೀರೇ ಅದು ;
ಬಾಳಿ ಬಂತು ವೃಕ್ಷ.
ತಾರದೆ ಇದೆ ಜಲ ; ನಲಹಿದೆ ತಾಯಿ
ಹಾಕಿದ ಆ ರಕ್ಷೆ. ॥ ೧೦೮ ॥

ಆ ಮರವೇ ಇದು ಎಂಬೆವು ನಾವು ;
ಅಲ್ಲ ಎಂಬ ಜಾಣ.
ಮಾತು ಬಾತು ಫಲವೇನು ? ಅಲ್ಲ ಬಿಡು,
ಅದರದೆ ಸಂತಾನ. ॥ ೧೦೯ ॥

ಇಲ್ಲಿ ಇದೇ ಮರ ಇಲ್ಲದ ದಿನವ
ನೋಡಿದ ಜನವಿಲ್ಲ ;
ಏಸು ಕಾಲದಿಂದೆಯೋ ಬಲ್ಲೆವೆ ?
ಕಾಣದ ನುಡಿ ಸಲ್ಲ. ॥ ೧೧೦ ॥

ಇದರಲಿ ನೆರಳನು ಕಡಿಯರು ಮುಂದಿ ;
ಇದು ಒಣಗಿದುದಿಲ್ಲ ;
ಸುಗ್ಗಿಯ ದಿನ ಬಂತೋ ಏನಿದರಲಿ
ಹೊಸ ತಳಿರಿನ ಕೊಳ್ಳ ! ॥ ೧೧೧ ॥

ಈ ಬುಡವನು ನೆಟ್ಟುದ ನಾ ಕಾಣೆ ;
ಇದು ಒಣಗುವ ದಿನಕೆ
ಕೊಂಬೆ ಒಂದ ತೆಗೆದಿಲ್ಲಿಯೆ ನೆಡುವರೆ
ಬುದ್ಧಿ ಇರಲಿ ಜನಕೆ. ॥ ೧೧೨ ॥

ಬಸರಿಯಲೇ ಇದರಂದದ ತಂಪು
ಬೇರೆಯ ಮರಕಿಲ್ಲ ;
ಕುಳಿತು ನೋಡಲಿ ; ನಾನು ಹೇಳುತಿಹ
ಮಾತಲಿ ಹರುಕಿಲ್ಲ. ॥ ೧೧೩ ॥

ಅಣ್ಣನ ಹುಟ್ಟಿದ ಹಬ್ಬವ ಮಾಡಿದ
ಈ ತಾಣದ ಅಜ್ಜು
ಮನಕೆ ಮೆಚ್ಚಿ ಬಹಳಿಲ್ಲಿಗೆ ದೇವಿ
ಈ ವರುಷದ ಹೆಜ್ಜು ; ॥ ೧೧೪ ॥

ರಾಮು, ದೇವಿ, ಲಕ್ಷ್ಮಣ, ಮೂವರು
ಒಂದಿಗೆ ದಯಮಾಡಿ
ಮೂರುಗಳಿಗೆ ಈ ಎಡೆ ಸಂತಸದಲಿ
ನಡೆವರು ಸುಳಿದಾಡಿ, ॥ ೧೧೫ ॥

ಅವರಿಂತೋಡಾಡಿದ ವೇಳೆಯಲಿ
ತಾತ, ಹೆತ್ತಾತ,
ನೋಡಿದುದುಂಟು ; ನಮ್ಮ ಮನೆಗಳಲಿ
ಕೇಳಿಹೆವೀ ಮಾತ. ॥ ೧೧೬ ॥

ಪುಣ್ಯವಂತರಿಗೆ ಕಾಣುವರೆಂದು
ಹೇಳಿ ಕೇಳಿ ಬಲ್ಲೆ ;
ಕರುಣಿಸೆ ಕಾಂಬರು ; ಪುಣ್ಯವೆ ? ದೇವರ
ಕೃಪೆಗೆ ಏಕೆ ಎಲ್ಲೆ ? ॥ ೧೧೭ ॥

ನನಗೆಂದಾದರು ಕಾಂಬರೊ ಎಂದು
ನಾನು ಹರೆಯದಿಂದ
ರಾಮರಾಮನವಮಿಯು ಕಾಯುವೆನು
ಈ ತಾಣಕೆ ಬಂದು. ॥ ೧೧೮ ॥

ಇಂದು ಕಾಂಬೆನೋ ರಾಮು ಲಕ್ಷ್ಮಣ
ಸೀತಾದೇವಿಯರ ?
ಬರುವರು ತಪ್ಪದೆ ತಮ್ಮನು ನಲಿಸಿದ
ಈ ಮರ ಬಾವಿ ವರ, ॥ ೧೧೯ ॥

ಎಂದು ಇಲ್ಲಿ ಈ ಬಿಸಿಲ ಹೊತ್ತಿನಲಿ
ಬಂದಿಹೆ ನಾನೀಗ ;
ರಾಮನವಮಿ ದಿನ ತಪ್ಪಿದುದಿಲ್ಲ ;
ಅಬ್ಬ ಏನು ಜೇಗೆ ! ॥ ೧೨೦ ॥

ಸೀತಾರಾಮರು ಕಾಣುವುದುಂಟೇ
ಎಂಬರು ಮುಪ್ಪಾಗ
ಮೂರು ವೀನ ಜನ ; ಉಳಿದ ವೀನಕೆ
ನಂಬಿಕೆ ಇಬ್ಬಾಗ. ॥ ೧೨೧ ॥

ಕಾಣುವರೆಂದೇ ನಂಬಿಹೆ ನಾನು,
ಹಿರಿಯರ ನುಡಿ ಹಿಡಿದು ;
ಕಾಂಬರೆ ಇಲ್ಲವೆ ನೋಡಬೇಡವೆ,
ನಂಬಿಕೆಯಲಿ ನಡೆದು ?

ಕಣ್ಣಿಗೇನು ಕಾಣುವುದೆ ಗಾಳಿ? ಕೈ
ಆಡಿಸೆ ಮೈಸೋಕಿ
ತಾಗಿಹೆನೆಂಬುದು: ಅಂತೆಯೆ ದೇವರು:
ಕಾಣರು ಏಕಾಕಿ. ॥ ೧೫೩ ॥

ತೆಳುವಾಗಿರುವರು; ಬುದ್ಧಿಯನಾಡಿಸೆ
ಮನಸಿಗೆ ತಟ್ಟುವರು;
ಸೈಪುಳ್ಳವರಿಂತಿರಲಿ ನಡೆಯುವ
ದೇವರ ದಿಟ್ಟಿಪರು. ॥ ೧೫೪ ॥

ನಮ್ಮೆದುರಿನಲೇ ನಾಕ ನರಕ
ಬೆರೆದಿವೆ ಮರ್ತ್ಯದಲಿ;
ಯಾವುದು ಬೇಕೋ ಅದನು ಕಾಣುವೆವು
ನಾವೇ ಕೃತ್ಯದಲಿ. ॥ ೧೫೫ ॥

ಹೊಡೆಯಿತೆ ನರಕ, ನೀಡಿತೆ ನಾಕ,
ಒಂದೇ ಈ ಬಲಗೈ;
ತೊಳೆದರೆ ದೇಗುಲ, ಬಿಟ್ಟರೆ ನಾರುವ
ಬುದ್ದಲಿ, ಈ ಹೊಲಮೈ. ॥ ೧೫೬ ॥

ಇನಿವಾತಾಡಿದ ನಾಲಗೆ ನಾಕ;
ಕೊರಚಾಡಿತೆ ನರಕ;
ಒಂದೇ ಸ್ಥಳದಲಿ ದಿನವೂ ಕಾಂಬೆವು
ಈ ಎರಡೂ ಸರಕ. ॥ ೧೫೭ ॥

ಸ್ವರ್ಗ ನರಕಗಳು ಇಂತೆಲ್ಲಾ ಎಡೆ
ಹೆಣೆದಿವೆ ನನ್ನೊಡೆಯ;
ಕಲಿಯಬೇಕು ಮನುಜರು ಒಂದರಲೆ
ಕಾಣಲು ಇಮ್ಮಡಿಯ. ॥ ೧೫೮ ॥

ಕಾಂಬೆನೆ ಸೀತಾ ರಾಮಲಕ್ಷ್ಮಣರ
ಒಂದಿಗೆ ಮೂವರನೂ?
ಎಂದಿಗೆ ಕಾಂಬೆನೊ ನಂಬಿದ ನನ್ನ
ಬಾಳಿನ ದೇವರನು! ॥ ೧೫೯ ॥

ಕಾಣಲೆಬೇಕೆಂಬಾಗ್ರಹ ಕೂಡದು;
ಕಂಡರೆ ಬಹು ಒಳಿತು;
ಕಾಣದೆ ಇರಲೂ ಸಮ; ನೆನೆ ಅವರನು;
ಮೌನದಲ್ಲಿ ಕುಳಿತು. ॥ ೧೬೦ ॥

ರಘುನಾಯಕ ರಾಮರಮೇಶವಿಭೋ
ಎಂದು ಹಿರಿಯರಂದು
ಹೊಗಳಿದ ಪ್ರಭುವೇ, ಕೃಪೆಮಾಡೆನ್ನಲಿ,
ಮೈದೋರೈತಂದು. ॥ ೧೬೧ ॥

---

ಗೌಡನ ಮಾತನು ಕೇಳುತ ನಾನು
ತಗ್ಗಿನ ಮರದಡಿಗೆ
ಕಂಡೆನಿಬ್ಬರನು: ಹುಡುಗ ನಿಂತಿಹನು;
ಕುಳಿತಿರುವಳು ಹುಡುಗಿ; ॥ ೧೬೨ ॥

ಹೊಸ ಹರೆಯದಿ ಹಜ್ಜೆಯನಿಕ್ಕಿರುವರು.
ನಗುತಲಿಹಳು ಹೆಣ್ಣು;
ಏನೊ ಹೇಳುವಳು; ಏನೂ ಕೇಳದೆ
ಗಂಡು ಬರಿಯ ಕಣ್ಣು. ॥ ೧೬೩ ॥

ಸೀತಾರಾಮರೆ ಬಂದರೊ ಹೇಗೆ?
ತುಡಿಯಿತು ನನ್ನ ಎದೆ.
ಬಾರರೇತಕೆ ಮುದುಪನ ಮೆಚ್ಚಿ,
ತುಂಬಲು ಕಣ್ಣ ಬಿದೆ? ॥ ೧೬೪ ॥

ಬಟ್ಟೆಯ ಸೆಣೆಯುತಲಿಹಳೋ ಹೆಣ್ಣು?
ಉಲಿವುದು ಕೈಕಡಗ;
ಏನು ಮಾತೊ ಅದು, ಗಂಡಿನ ಮಾತು,
ನುಡಿಯುತಿಹನು ಹುಡುಗ. ॥ ೧೬೫ ॥

ನನ್ನ ನೋಟವನು ತಿಳಿದವ ತಾನೂ
ಅತ್ತ ನೋಡಿ ಗೌಡ
ಹೇಳಿದ: ನನ್ನನು ಕರೆಯಬಂದಿಹರು,
ಮಗ ಸೊಸೆ ಕೂಡ. ॥ ೧೬೬ ॥

ಪೂಜೆಯ ಹೊತ್ತಿಗೆ ಕರೆಯಿರಿ ಎಂದು
ಹೇಳಿದೆ ಮುಂಜಾವ.
ಕೆಲಸವು ಆಯಿತು, ಕರೆದುದು ಆಯಿತು,
ಬಂದಿಹರೀತಾವ. ॥ ೧೬೭ ॥

ಗಂಡಗೆ ಹೇಳುವ ಮಾತನು ಮನೆಯಲಿ
ನುಡಿವುದೆಂತು ಹುಡುಗಿ?
ಕಣ್ಣ ಸನ್ನೆಯಲಿ ಅವನನು ಕರೆದು
ಒಯ್ವಳು ಕೊಳದೆಡೆಗೆ. ॥ ೧೬೮ ॥

ಹಗ್ಗವ ಹೊಸೆಯುವ ನೆವದಲಿ, ಅರಿವೆಯ
ಒಗೆಯುವ ನೋಗಿನಲಿ,
ತುಸ ಜೊತೆಗಿರುವರು ನಗುವರು ನುಡಿವರು
ಒಲಿದನುರಾಗದಲಿ. ॥ ೧೬೯ ॥

ಓ ಈರವ್ವಾ, ಬಾರವ್ವಾ ಕ್ಷಣ,
ರಾಮಾ, ಕ್ಷಣ ಬಾರೋ;
ನಿಮ್ಮಿಬ್ಬರನೂ ಕೇಳತಾರೆ ಇಕೊ,
ಪೇಟೆಯ ಅಯನೋರು. ॥ ೧೭೦ ॥

ಕತ್ತಲು ಬೆಳುದಿಂಗಳು ಸಂಸಾರ
ಕಟ್ಟು ಧರ್ಮ ಮೊಟ್ಟೆ ;
ಎಂದರು ಹರಿದಾಸರು ; ಇದ ಮರೆತರೆ
ವ್ಯರ್ಥ ನೀನು ಕೆಟ್ಟೆ. ॥ ೧೦೫ ॥

ಹೊರಡುವ ಹೊತ್ತಲಿ ಸೀತಾದೇವಿ
ಹರಸಿದರೀ ಮರವ :
" ನೆರಳನಿತ್ತ ಸಖಿ, ಪಡೆ ಎಂದೆಂದಿಗು
ಬಹುತಳಿರಿನ ಹೊರವ ; ॥ ೧೦೬ ॥

" ಬಾಡಬೇಡ ನೀ " ಎಂದಳು ; ಮತ್ತೆ
" ಅಡುಗೆಗೆ ನೆರವಾದ
ಬಾವಿ ಬತ್ತದಿರು " ಎಂದಳು ; ಬಾಲನ
ಹರಿಸಿದೊಲು ಯಶೋದ. ॥ ೧೦೭ ॥

ಆ ಮರವೇ ಇದು ; ಆ ನೀರೇ ಅದು ;
ಬಾಳಿ ಬಂತು ವೃಕ್ಷ.
ತಾರದೆ ಇದೆ ಜಲ ; ನಲಹಿದೆ ತಾಯಿ
ಹಾಕಿದ ಆ ರಕ್ಷೆ. ॥ ೧೦೮ ॥

ಆ ಮರವೇ ಇದು ಎಂಬೆವು ನಾವು ;
ಅಲ್ಲ ಎಂಬ ಜಾಣ.
ಮಾತು ಬಾತು ಫಲವೇನು ? ಅಲ್ಲ ಬಿಡು,
ಅದರದೆ ಸಂತಾನ. ॥ ೧೦೯ ॥

ಇಲ್ಲಿ ಇದೇ ಮರ ಇಲ್ಲದ ದಿನವ
ನೋಡಿದ ಜನವಿಲ್ಲ ;
ಏನು ಕಾಲದಿಂದೆಯೋ ಬಲ್ಲೆವೆ ?
ಕಾಣದ ನುಡಿ ಸಲ್ಲ. ॥ ೧೧೦ ॥

ಇದರಲಿ ನೆರಳನು ಕಡಿಯರು ಮಂದಿ ;
ಇದು ಒಣಗಿದುದಿಲ್ಲ ;
ಸುಗ್ಗಿಯ ದಿನ ಬಂತೋ ಏನಿದರಲಿ
ಹೊಸ ತಳಿರಿನ ಕೊಳ್ಳ ! ॥ ೧೧೧ ॥

ಈ ಬುಡವನು ನೆಟ್ಟುದ ನಾ ಕಾಣೆ ;
ಇದು ಒಣಗುವ ದಿನಕೆ
ಕೊಂಬೆ ಒಂದ ತೆಗೆದಿಲ್ಲಿಯೆ ನೆಡುವರೆ
ಬುದ್ಧಿ ಇರಲಿ ಜನಕೆ. ॥ ೧೧೨ ॥

ಬಸರಿಯಲೇ ಇದರಂದದ ತಂಪು
ಬೇರೆಯ ಮರಕಿಲ್ಲ ;
ಕುಳಿತು ನೋಡಲಿ ; ನಾನು ಹೇಳುತಿಹ
ಮಾತಲಿ ಹರುಕಿಲ್ಲ. ॥ ೧೧೩ ॥

ಅಣ್ಣನ ಹುಟ್ಟಿನ ಹಬ್ಬವ ಮಾಡಿದ
ಈ ತಾಣದ ಅಜ್ಜು
ಮನಕೆ ಮೆಚ್ಚಿ ಬಹಳಿಲ್ಲಿಗೆ ದೇವಿ
ಈ ವರುಷದ ಹೆಚ್ಚು ; ॥ ೧೧೪ ॥

ರಾಮು, ದೇವಿ, ಲಕ್ಷ್ಮಣ, ಮೂವರು
ಒಂದಿಗೆ ದಯಮಾಡಿ
ಮೂರುಗಳಿಗೆ ಈ ಎಡೆ ಸಂತಸದಲಿ
ನಡೆವರು ಸುಳಿದಾಡಿ, ॥ ೧೧೫ ॥

ಅವರಿಂತೋಡಾಡಿದ ವೇಳೆಯಲಿ
ತಾತ, ಹೆತ್ತಾತ,
ನೋಡಿದುದುಂಟು ; ನಮ್ಮ ಮನೆಗಳಲಿ
ಕೇಳಿಹೆವೀ ಮಾತ. ॥ ೧೧೬ ॥

ಪುಣ್ಯವಂತರಿಗೆ ಕಾಣುವರೆಂದು
ಹೇಳಿ ಕೇಳಿ ಬಲ್ಲೆ ;
ಕರುಣಿಸೆ ಕಾಂಬರು ; ಪುಣ್ಯವೆ ? ದೇವರ
ಕೃಪೆಗೆ ಏಕೆ ಎಲ್ಲೆ ? ॥ ೧೧೭ ॥

ನನಗೆಂದಾದರು ಕಾಂಬರೊ ಎಂದು
ನಾನು ಹರೆಯದಿಂದ
ರಾಮರಾಮನವಮಿಯು ಕಾಯುವೆನು
ಈ ತಾಣಕೆ ಬಂದು. ॥ ೧೧೮ ॥

ಇಂದು ಕಾಂಬೆನೋ ರಾಮು ಲಕ್ಷ್ಮಣ
ಸೀತಾದೇವಿಯರ ?
ಬರುವರು ತಪ್ಪದೆ ತಮ್ಮನು ನಲಿಸಿದ
ಈ ಮರ ಬಾವಿ ವರ, ॥ ೧೧೯ ॥

ಎಂದು ಇಲ್ಲಿ ಈ ಬಿಸಿಲ ಹೊತ್ತಿನಲಿ
ಬಂದಿಹೆ ನಾನೀಗ ;
ರಾಮನವಮಿ ದಿನ ತಪ್ಪಿದುದಿಲ್ಲ ;
ಅಬ್ಬ ಏನು ಬೇಗೆ ! ॥ ೧೨೦ ॥

ಸೀತಾರಾಮರು ಕಾಣುವುದುಂಟೇ
ಎಂಬರು ಮುಪ್ಪಾಗ
ಮೂಡಿ ವೀಸ ಜನ, ಉಳಿದ ವೀಸಕೆ
ನಂಬಿಕೆ ಇಬ್ಬಾಗ. ॥ ೧೨೧ ॥

ಕಾಣುವರೆಂದೇ ನಂಬಿಹೆ ನಾನು,
ಹಿರಿಯರ ನುಡಿ ಹಿಡಿದು ;
ಕಾಂಬರೆ ಇಲ್ಲವೆ ನೋಡಬೇಡವೆ,
ನಂಬಿಕೆಯಲಿ ನಡೆದು ?

ಕಣ್ಣಿಗೇನು ಕಾಣುವುದೆ ಗಾಳಿ ? ಕೈ
ಆಡಿಸೆ ಮೈ ನೋಕಿ
ತಾಗಿಹೆನೆಂಬುದು: ಅಂತೆಯೆ ದೇವರು:
ಕಾಣರು ಏಕಾಕಿ. ॥ ೧೨೩ ॥

ತೆಳುವಾಗಿರುವರು; ಬುದ್ಧಿಯನಾಡಿಸೆ
ಮನಸಿಗೆ ತಟ್ಟುವರು;
ಸೈಪುಳ್ಳವರಿಂತಿದಿರಲಿ ನಡೆಯುವ
ದೇವರ ದಿಟ್ಟಿಪರು. ॥ ೧೨೪ ॥

ನಮ್ಮೆದುರಿನಲೇ ನಾಕ ನರಕ
ಬೆರೆದಿವೆ ಮರ್ತ್ಯದಲಿ;
ಯಾವುದು ಬೇಕೋ ಅದನು ಕಾಣುವೆವು
ನಾವೇ ಕೃತ್ಯದಲಿ. ॥ ೧೨೫ ॥

ಹೊಡೆಯಿತೆ ನರಕ, ನೀಡಿತೆ ನಾಕ,
ಒಂದೇ ಈ ಬಲಗೈ;
ತೊಳೆದರೆ ದೇಗುಲ, ಬಿಟ್ಟರೆ ನಾರುವ
ಬುದ್ದಲಿ, ಈ ಹೊಲಮೈ. ॥ ೧೨೬ ॥

ಇನಿವಾತಾಡಿದ ನಾಲಗೆ ನಾಕ;
ಕೊರಚಾಡಿತೆ ನರಕ;
ಒಂದೇ ಸ್ಥಳದಲಿ ದಿನವೂ ಕಾಂಬೆವು
ಈ ಎರಡೂ ಸರಕ. ॥ ೧೨೭ ॥

ಸ್ವರ್ಗ ನರಕಗಳು ಇಂತೆಲ್ಲಾ ಎಡೆ
ಹೆಣೆದಿವೆ ನನ್ನೊಡೆಯ;
ಕಲಿಯಬೇಕು ಮನುಜರು ಒಂದರಲೆ
ಕಾಣಲು ಇಮ್ಮಡಿಯ. ॥ ೧೨೮ ॥

ಕಾಂಬೆನೆ ಸೀತಾ ರಾಮಲಕ್ಷ್ಮಣರ
ಒಂದಿಗೆ ಮೂವರನೂ ?
ಎಂದಿಗೆ ಕಾಂಬೆನೊ ನಂಬಿದ ನನ್ನ
ಬಾಳಿನ ದೇವರನು ! ॥ ೧೨೯ ॥

ಕಾಣಲೆಬೇಕೆಂಬಾಗ್ರಹ ಕೂಡದು;
ಕಂಡರೆ ಬಹು ಒಳಿತು;
ಕಾಣದೆ ಇರಲೂ ನಮ; ನೆನೆ ಅವರನು;
ಮೌನದಲ್ಲಿ ಕುಳಿತು. ॥ ೧೩೦ ॥

ರಘುನಾಯಕ ರಾಮರಮೇಶವಿಭೋ
ಎಂದು ಹಿರಿಯರಂದು
ಹೊಗಳಿದ ಪ್ರಭುವೇ, ಕೃಪೆಮಾಡೆನ್ನಲಿ,
ಮೈದೋರೈತಂದು. ॥ ೧೩೧ ॥

---

ಗೌಡನ ಮಾತನು ಕೇಳುತ ನಾನು
ತಗ್ಗಿನ ಮರದಡಿಗೆ
ಕಂಡೆನಿಬ್ಬರನು: ಹುಡುಗ ನಿಂತಿಹನು;
ಕುಳಿತಿರುವಳು ಹುಡುಗಿ; ॥ ೧೩೨ ॥

ಹೊಸ ಹರೆಯದಿ ಹಜ್ಜೆಯನಿಕ್ಕಿರುವರು.
ನಗುತಲಿಹಳು ಹೆಣ್ಣು;
ಏನೊ ಹೇಳುವಳು; ಏನೂ ಕೇಳದೆ
ಗಂಡು ಬರಿಯ ಕಣ್ಣು. ॥ ೧೩೩ ॥

ಸೀತಾರಾಮರೆ ಬಂದರೊ ಹೇಗೆ?
ತುಡಿಯಿತು ನನ್ನ ಎದೆ.
ಬಾರರೇತಕೆ ಮುದುಪನ ಮೆಚ್ಚಿ,
ತುಂಬಲು ಕಣ್ಣ ಬೆದೆ ? ॥ ೧೩೪ ॥

ಬಟ್ಟೆಯ ಸೆಣೆಯುತಲಿಹಳೋ ಹೆಣ್ಣು ?
ಉಲಿವುದು ಕೈಕಡಗ;
ಏನು ಮಾತೊ ಅದು, ಗಂಡಿನ ಮಾತು,
ನುಡಿಯುತಿಹನು ಹುಡುಗ. ॥ ೧೩೫ ॥

ನನ್ನ ನೋಟವನು ತಿಳಿದವ ತಾನೂ
ಅತ್ತ ನೋಡಿ ಗೌಡ
ಹೇಳಿದ: ನನ್ನನು ಕರೆಯಬಂದಿಹರು,
ಮಗ ಸೊಸೆ ಕೂಡ. ॥ ೧೩೬ ॥

ಪೂಜೆಯ ಹೊತ್ತಿಗೆ ಕರೆಯಿರಿ ಎಂದು
ಹೇಳಿದೆ ಮುಂಜಾವ.
ಕೆಲಸವು ಆಯಿತು, ಕರೆದುದು ಆಯಿತು,
ಬಂದಿಹರೀತಾವ. ॥ ೧೩೭ ॥

ಗಂಡಗೆ ಹೇಳುವ ಮಾತನು ಮನೆಯಲಿ
ನುಡಿವುದೆಂತು ಹುಡುಗಿ ?
ಕಣ್ಣ ಸನ್ನೆಯಲಿ ಅವನನು ಕರೆದು
ಒಯ್ವಳು ಕೊಳದೆಡೆಗೆ. ॥ ೧೩೮ ॥

ಹಗ್ಗವ ಹೊಸೆಯುವ ನೆವದಲಿ, ಅರಿವೆಯ
ಒಗೆಯುವ ನೋಗಿನಲಿ,
ತುಸ ಜೊತೆಗಿರುವರು ನಗುವರು ನುಡಿವರು
ಒಲಿದನುರಾಗದಲಿ. ॥ ೧೩೯ ॥

ಓ ಈರವ್ವಾ, ಬಾರವ್ವಾ ಕ್ಷಣ,
ರಾಮಾ, ಕ್ಷಣ ಬಾರೋ;
ನಿಮ್ಮಿಬ್ಬರನೂ ಕೇಳತಾರೆ ಇಕೊ,
ಪೇಟೆಯ ಅಯನೋರು. ॥ ೧೪೦ ॥

ಬನ್ನಿರ, ಹಬ್ಬದ ದಿನ ಕೈಮೊಕ್ಕಿ,
ಹರಕೆಯ ತಕ್ಕೊಳ್ಳಿ ;
ಸತ್ಯವಂತರಾಡಿದ ಒಳ್ನುಡಿಯಲಿ
ಹಬ್ಬಲಿ ಮನೆ.ಬಳ್ಳಿ. ॥ ೧೪೧ ॥

ಮಾತಿನ ಜಾಣರು, ಮನೆಮಗ ರಾಮು,
ಎಲ್ಲ ಹೆಣ್ಣು ಸೀತೆ,
ಎಂದು ಹೇಳುವುದ ಕೇಳಿಹೆ ನಾನು ;
ಇದೇನು ಬರಿಮಾತೆ ? ॥ ೧೪೨ ॥

ಹುಚ್ಚು ತಬ್ಬಿನಲಿ ಆಲೆಯಾಡುವನು
ಇಂಥ ಮಾತ ಜಾಣ ;
ಯಾವ ಹಾಲುಬೆಲ್ಲವನು ಕೊಡಬಹುದು
ಈ ಮಾಟದ ಗಾಣ ? ॥ ೧೪೩ ॥

ಹೆರವರ ಹೆಣ್ಣಿಂದೊಡನೆಯೆ ಹುಬ್ಬು
ಹಾರುವ ಅಣ್ಣರಿಗೆ
ಎಲ್ಲಾ ಹೆಣ್ಣೂ ಸೀತೆಯಾಗುವುದು
ಕಾಗು ಹೊನ್ನ ಸರಿಗೆ ॥ ೧೪೪ ॥

ದೇವರೆ ನಿಜ, ಹೆತ್ತಾತನು ಎದುರಲಿ
ಆದಿನ ರಾಮನಿರೆ,
ಮಗನನು ಕಂಡನು, ದೇವರ ಕಾಣನು ;
ಮಾಯೆಗೆ ನಾವಿದಿರೆ ? ॥ ೧೪೫ ॥

ಮಗನಲಿ ದೇವರ ನೋಡುವ ಪುಣ್ಯ
ಅಯೋಧ್ಯ ದಶರಥಗೇ
ಇಲ್ಲದೆ ಹೋಯಿತು ; ಬಹುದೆ ನನಗೆ ? ಆ
ನುಡಿ ಸರಿ ಬರಿ ಕತೆಗೆ. ॥ ೧೪೬ ॥

ಮಗನಲಿ ದೇವರು ಕಾಣುವ ಮುನ್ನ
ಹರಿಯಬೇಕು ಮಮತೆ;
ಮುಕ್ತಿಯ ನೆಲೆಯನು ಮುಟ್ಟದೆ ಮನುಜಗೆ
ನಿಲುಕದು ಆ ಸಮತೆ. ॥ ೧೪೭ ॥

ಅಣುರೇಣುವಿನಲಿ ಇರುವನು ರಾಮು;
ಮಾಯೆ ಅವನ ನುರೆಸಿ
ತೆರೆಯಾಗಿದೆ; ಕರುಣಿಸೆ ಕಾಂಬನು ಆ
ಕ್ಷಣ, ಇನಿಸದ ಸರಿಸಿ. ॥ ೧೪೮ ॥

ಇದನು ಯಾರಿಗೂ ಕರುಣಿಸಬಹುದು
ದೇವರು; ಮಾಯೆ ತೆರೆ;
ಸುಲಭವಲ್ಲ ಈ ಪರಿ ಕಳೆಯುವರೆ
ಮಮತೆಯ ಕಣ್ಣ ಪರೆ. ॥ ೧೪೯ ॥

ಮುದುಪನ್ನ ಕೂಗನು ಕೇಳಿದ ಮಕ್ಕಳು
ಬಂದರು ನಮ್ಮೆಡೆಗೆ.
ನೋಡಲು ಎಂದೂ ಸೊಗಸು ಜೊತೆಯಲಿ
ನಡೆವ ಹುಡುಗ ಹುಡುಗಿ. ॥ ೧೫೦ ॥

ಬಂದು ನನಗೆ ಕೈಮುಗಿದರು; ನಾನು
ಒಳಿತಾಗಲಿ ಎಂದೆ.
ಹುಡುಗ ತಂದೆಯೆಡೆ ಸಾರಿದ; ಹುಡುಗಿ
ನಿಂದಳವನ ಹಿಂದೆ. ॥ ೧೫೧ ॥

" ಪೂಜೆಗೆ ಹೊತ್ತಾಯಿತು ಎಂದಮ್ಮ
ಹೇಳಿಕಳುಹಿದಾಳೆ "
ಎಂದನು ತರುಣ : " ದೇಗುಲದಲ್ಲಿ
ಊದಬೇಕು ಕಾಳೆ " ॥ ೧೫೨ ॥

ಮುದುಪನ ಮಾತದು ಏನೇ ಇರಲಿ
ನನಗಾಕ್ಷಣದಲ್ಲಿ
ಚಿತ್ರವೊಂದು ಮೂಡಿತು, ನಮ್ಮೆಲ್ಲರ
ನಿಲ್ಲಿಸಿ ಮನದಲ್ಲಿ. ॥ ೧೫೩ ॥

ದಶರಥ ಸೀತಾರಾಮರು ಇವರು,
ನಾನೇ ಆದೆ ಜನಕ ;
ಮನದಿಂದಳಿಯದು ಇನ್ನಾ ಚಿತ್ರ
ಈ ಉಸಿರಿರುವನಕ. ॥ ೧೫೪ ॥

" ಗೌಡರೆ, ಹಬ್ಬದ ದಿವಸಕೆ ಒಳ್ಳೆಯ
ಕತೆ ಹೇಳಿದಿರಹುದು;
ನಿಮ್ಮ ರೀತಿಯನು ನೋಡಿ ಮನಸಿಗೆ
ನೆಮ್ಮದಿಯಾಗಿಹುದು. ॥ ೧೫೫ ॥

" ಇನ್ನು ನಾನು ಬರಲೇ " ಎನ್ನುತ ನಾ
ಹೊರಟುಬರಲು ನಿಂತೆ;
ಕೈಜೋಡಿಸಿ ಮೊಗಕಿಟ್ಟನು ತಾನೂ
ನಿಂತು ಗೌಡ ಅಂತೆ. ॥ ೧೫೬ ॥

" ಹಬ್ಬದ ದಿನ ಶ್ರೀರಾಮನೆ ಬಂದನೊ
ಎನೆ ಬಂದಿರಿ ಒಡೆಯ;
ಒಳ್ಳಿತು ಬನ್ನಿರಿ; ಮತ್ತೆಂದಾದರು
ಇತ್ತ ಬೆಳಸಿ ಅಡಿಯ." ॥ ೧೫೭ ॥

ಅಹುದು ಎಂದೆ ಗೌಡನ ಎಂದಾದರು
ಮರಳಿ ನೋಡಲೆಳಸಿ
" ನಿಮ್ಮ ಹೆಸರು, ಗೌಡರೆ " ಎಂದೆನು ನಾ:
ಗೌಡ ನುಡಿದ ಬಳಸಿ.

" ಹೇಳುವಂಥ ಹೆಸರೇನಿದೆ, ಒಡೆಯ ?
ಗೆಲ್ಲದೆ ಹೆಸರೇನು ?
ಸೋತ ಮನುಜ ಬರಿಹುಳ; ಅದರುದ್ದ
ತುದಾ ಏಳು ಗೇಣು. " || ೧೫೯ ||

" ಅದು ಸರಿ; ಆದರೆ ಎಂತ ಹುಳುವಿಗೂ
ತಾಯಿ ಕರೆದ ಹೆಸರು
ಒಂದಿಹುದಲ್ಲ ? ಯಾರು ಬಿಟ್ಟರೂ
ಬಿಡದು ಹೆತ್ತ ಬಸಿರು." || ೧೬೦ ||

ಹೇಳಲು ಒಲ್ಲದೆ ಹೇಳಿದ ಗೌಡ
ಇಷ್ಟು ನುಡಿದ ಮೇಲೆ:
" ಜವರ ಎಂದು ಕರೆದಳು ನಮ್ಮವ್ವ,
ಮೊಲೆಯೂಡುವ ವೇಳೆ. || ೧೬೧ ||

" ಜವರ ಎನುತ ಈ ಮೊಗವನು ಮುದ್ದಿಸಿ,
ಬಾಯಿಗೆ ಮೊಲೆ ಇಕ್ಕಿ,
ಮಗುವನು ತಾಯಿ ಮಗನ ಮಾಡಿದಳು;
ಬೆಳೆಯಿತು ಮೈಸೊಕ್ಕಿ. || ೧೬೨ ||

" ಜವರ ಎನುತ ಮರೆಯಾದಳು; ಹೂಳುವ
ಕೆಲಸ ಕೊಟ್ಟು ಕೈಗೆ;
ಒಡಲದು ಬೆರೆತುದೆ ನೆಲದಲಿರುಬೆ; ಇದೊ
ಕರೆ ಕೊಡುತಿದೆ ಮೈಗೆ. || ೧೬೩ ||

" ತಾಯಿ ಆ ಹೆಸರ ಹಿಡಿದು ಕರೆದುದೇ
ಆಯಿತೆನಗೆ ಮೋಸ;
ಬಾಳಿನ ಜ್ವರದಲಿ ಜವರಾ ಎಂಬದು
ಮನದ ಮೇಲೆ ದೋಷ." || ೧೬೪ ||

" ದೋಷವಲ್ಲ ಬಿಡಿ ಗೌಡರೆ; ನೀವು
ಸತ್ಯವ ಹಿಡಿದಿಹಿರಿ;
ಇಷ್ಟು ದೂರ ಕರೆ ತಂದವನಿನ್ನು
ಈ ಕೈ ಬಿಡನು ಸರಿ." || ೧೬೫ ||

ಎಂದು ಮರಳಿ ಅವರನು ಬೀಳ್ಕೊಂಡು
ಸರಿದು ಬಂದೆನಿತ್ತ;
ಗೌಡನ ಮಾತಿಗೆ ಮಾರುಹೋಗಿರಲು
ಆಂತರ್ಯ, ಚಿತ್ತ. || ೧೬೬ ||

ಮನೆಗೆ ಬಂದವನೆ ನಡೆದ ಸಂಗತಿಯ
ಹೇಳಿದೆನೆಲ್ಲರಿಗೆ.
" ಮುದುಪಗೆ ಒಲಿಯಲಿ ದೇವರು " ಎಂದಳು
ಹೆಂಡತಿ ಮನ ಕರಗಿ. || ೧೬೭ ||

" ಈರವ್ವನ ನೋಡಲು ನನಗಾಸೆ "
ಎಂದಳೆನ್ನ ಮಗಳು ;
ಅಳಿಯನೆಂದ: " ಲೆಕ್ಕಕೆ ಸಿಕ್ಕುವುವೆ
ನೀ ಪಡುವಾಸೆಗಳು ? " || ೧೬೮ ||

ನಡೆದ ಸಂಗತಿಯ ನೆನವು ಹಬ್ಬಕೆ
ತಂದಿತು ಹೊಸ ಮೆರುಗ;
ಇಂತೆನಲಾಗದ ಸಂತಸ ಬೆಳಗಿತು
ಅಂದು ಒಳಗು ಹೊರಗ. || ೧೬೯ ||

" ನಂಬಿ ಕೆಟ್ಟವರು ಇಲ್ಲಾ " ಎನ್ನುತ
ಶಪಥ ಮಾಡಿ ಮುದುಪ
ಮೂರ್ತಿಯಾಗಿಹನು ಎದುರಲಿ, " ನೋಡು,
ನನ್ನ ಬಾಳ ಪದಪ. " || ೧೭೦ ||

" ನಾ ಈರವ್ವಾ, ನಾನೇ ಮಗಳು,
ನಾನನಂತೆ ಸೀತೆ, "
ಎಂದು ಮನದಿ ದನಿ ಕೇಳುತಲಿಹುದು,
ನುಡಿಯೆ ಜಗನ್ಮಾತೆ. || ೧೭೧ ||

ಗೌಡನು ಎಳಸುವ ತೆರದಲಿ ನಾನು
ಕಾಣೆನು ಆ ತಾಯ ;
ದನಿಯನು ಕಿವಿಯಲಿ ಕೇಳೆನು ; ನೋಡೆನು
ಅಲುಗುತಿರುವ ಬಾಯ. || ೧೭೨ ||

ಅರಿವನು ಸಾರಿದೆ, ಭಾವವ ಮುಟ್ಟಿದೆ,
ಇಂದಿಗೆ ಈ ಎಣಿಕೆ ;
ಮುಂದೆ ಎಂದಿಗೋ ಮುಟ್ಟುವದಾತ್ಮವ
ಹರಿದು ಭವದ ಕುಣಿಕೆ. || ೧೭೩ ||

ಸೀತಾರಾಮರು ಕಾಣುವುದುಂಟೇ
ಎನ್ನುವ ಬಲ್ಲವರು
ಸತ್ಯದ ಹೊರಗನು ಕಾಯುವ ಭರದಲಿ
ಒಳಗನು ಕೊಲ್ಲುವರು. || ೧೭೪ ||

ಬಾಳನು ಬೆಳಗಲು ಬಲ್ಲ ನಂಬಿಕೆಯ
ನಾನು ಸತ್ಯ ಎಂಬೆ ;
ಇದ ಮಾಡದ ನುಡಿ ಏತರ ಸತ್ಯ ?
ಅದು ಸತ್ಯದ ಗೊಂಬೆ. || ೧೭೫ ||

ಬಾಳನು ಬೆಳಗಲು ಬಲ್ಲಾತತ್ತ್ವ
ಅಸತ್ಯವೆಂತಹುದು ?
ದಾರಿಯ ತೋರುವ ಗುಣ ಬೆಳಕಿನದು ;
ಕತ್ತಲೊಳೆಂತಿಹುದು ? || ೧೭೬ ||

ಮುದುಪನ ನಂಬಿಕೆ ನನ್ನಲಿ ಮೊಳೆಯದು ;
ನನ್ನದು ನಿಮಗಲ್ಲ :
ಮೊಗದಲಿ ಮನದಲಿ ದೈವಸೃಷ್ಟಿಯಲಿ
ಇವನವೊಲಿವನಿಲ್ಲ. ॥ ೧೭೭ ॥

ಆ ನಂಬಿಕೆಯಲಿ ಗೌಡನ ಆತ್ಮ
ಪಡೆದಿದೆ ಆ ಹಸನ ;
ಹರಿಯಲಿ ನೀವು ಒಲಿವ ತತ್ತ್ವದಲಿ
ನಿಮ್ಮಾತ್ಮದ ವ್ಯಸನ. ॥ ೧೭೮ ॥

ಇನ್ನೂ ನುಡಿವೆನು : ಸೀತಾರಾಮರ
ಹೆಸರನು ಈ ಲೋಕ
ಪೂಜಿಸಲಾರದು ; ಇಂತಿದೆ ನಮ್ಮ
ಕರ್ಮದುರ್ವಿಪಾಕ ; ॥ ೧೭೯ ॥

ಆದರು, ಅವರಾ ಹೆಸರನು ಲೋಕ
ಹಿಡಿದಿರಲಿ ಬಿಡಲಿ,
ಹೆಸರು ಗುರುತಿಸಿದ ಸತ್ಯದ ಬಿತ್ತನು
ಬಿಡದೆ ಒಳಗೆ ನೆಡಲಿ. ॥ ೧೮೦ ॥

ಮರವಾಗಲಿ ಆ ಸತ್ಯದ ಬಿತ್ತು ;
ಹೊರವಾಗಲಿ ಬೆಳೆದು ;
ಆ ನೆರಳಲಿ ತಣಿಯಲಿ ಜಗವೆಲ್ಲ,
ಕಲ್ಯಾಣವ ತಳೆದು. ॥ ೧೮೧ ॥

---

# ಬೋಯಿ ಹಾಡು

★

ಅಂಹಾ,ಅಂಹಾ,ಪಲ್ಲಕ್ಕಿಯವರೋ, ಪಲ್ಲಕ್ಕಿಯವರೋ |
ರಾಗೀಯ ಗಂಜೀಗೆ ಮೀಸಲಾದವರೋ ॥ ಪ ॥

ಪಲ್ಲಕ್ಕಿ ಹೊತ್ತೊತ್ತು ಭುಜವೆಲ್ಲ ಬಾತರೂ
ಮೈಯೆಲ್ಲ ಸುರಿದರೂ ನೀರೋ ನೀರೋ ॥
ಅಲ್ಲದ ಸಲ್ಲದ ಬೈಗಳ ವಿಷಗಳ
ಸುಮ್ಮಾನದಿಂದಲಿ ದಿನ ದಕ್ಕಿಸುವರೋ ॥ ೧ ॥

ಎಡವೀದ ಹೆಬ್ಬೊಟ್ಟು ನೆತ್ತರ ಸುರಿದರು
ಸವರಲು ನಿಮಿಷೊಂದು ಗಡ ನಿಲ್ಲದವರೋ ||
ಗಡಿಬಿಡಿಯಿಂದಲೆ ಮುಳ್ಳುಮುರಿದ ಕಾಲು
ಹತ್ತೊತ್ತಿ ಕುಂಟುತ್ತ ಜೀ ಓಡುವವರೋ ॥ ೨ ॥

ದೇವನುಲ್ಲಿಗೆಯಕ್ಕಿ ರಾಜಾನ್ನವನ್ಉಂಡು
ಕೊಬ್ಬಿದ ನರಪೇತಹೊರುವಂಥ ಜನರೋ ||
ದೈವುಳ್ಳ ಜನರೀಗೆ ಸಣ್ಣಕ್ಕಿ ಪಲ್ಲಕ್ಕಿ
ಪಲ್ಲಕ್ಕಿ ಹೊರುವರನಾರು ನೋಡುವರೋ ॥ ೩ ॥

ಭೋಯಿಯಾಗುದಕಿಂತ ನಾಯಿಯಾಗುದೆ ಲೇಸು |
ಭೋ ಎಂದು ಭೋ ಎಂದು ಹುಡಿಯೆಲ್ಲ ಬಾಯಾಗ |
ಕೃಷ್ಣನಾಮಕ ನಾವು ಎರವಾದ ಜನರೋ
ಶ್ರೀಧರನ ನಾಮವ ದಿನ ಹಾಡುವವರೋ ॥ ೪ ॥

—ಶ್ರೀಧರ



REGD NO. 175.

# ದಕ್ಕನ್-ಪ್ರಭಾತ

Deccan Prabhat

دکن پربھات - کنڑی اخبار ہفتہ وار رایچور

ಸಂಪುಟ ೦ | ಶಾಯಿಪೂರ ತಾ|| ೨೭ ಡೈ ೧೩೫೧ ಫ|| ಸಾ|| ೦-೧೨-೪೦ ಸೋಮವಾರ | ಸಂಚಿಕೆ ೪೮

## ಮುಕರಮ್ ಜಹಾಮಾರ್ಕೆಟ್

OUR BELOVED PRINCE
WALASHAN COL. MUKARRAM JAH BAHADUR

## ಉದ್ಯಮವಿಶೇಷ ಸಂಚಿಕೆ

ಬಿಡಿ ಸಂಚಿಕೆ ೨॥ ಆಣೆ

ಜುಲೈ ೧೯೪೧ | 49

ಪರಿವಿಡಿ

48

ಕಲೆಗಾಗಿ ಕಲೆ ?
ಹರವರ ವಿಲಾಸ
ಸರ್ವಾಧಿಕಾರಿಗಳು
ಹೇಗಾಗುವರು ?
ಪತಿತ ಪಾವನ ಕದ
ದ್ರಾಂಪತ್ಯ ಜೀವನವು
ಸಫಲ ವಾಗುವುದೆಂತು
ಹೂತ ಚೂತ (ಕವಿತ
ನನ್ನ ಸೂಟು (ಕದ
ಪುನರ್ಮಿಲನ (ಚಿತ್ರಸೃಷ್ಟಿ
ರಶ್ಯಾ ಜರ್ಮನಿ ಯುದ್ಧ
ಹಳೆಯ ಹಗ್ಗಳಿಕ (ನಾಟಿ ಬಟ
ಪುಸ್ತಕ ವಿಮರ್ಶೆ
ಮಾಸ ಭವಿಷ
ಮಳೆಯ ಭವಿಷ್ಯ
ರೂಸೋ
ಕುಮಾರವ್ಯಾಸನ ಶೈಲಿ
ಸಾಮ್ಯಯೋಗಿ (ನಾಟಿಕ

ಬೆಲೆ ೨ ಆಣೆ

Sree Bharathee Home Library.

Shringeri

ಪ್ರಜಾಮತ

VAKCHITRA June 1942

# ವಾಕ್ಚಿತ್ರ

K. VENKATESHIAH & BROS.,
Book Sellers & General Merchants.

ಏನೇನಿದೆ—೨೦

- ಹೋಲಿವುಡ್‌ನ ಬೇಟೆನಾಯಿಗಳು
- ನಟನ ಜೀವಿತವು ಹುಟ್ಟಿನ ಹಾಸಿಗೆಯಲ್ಲ
- ಪತ್ನಿ (ಚಿತ್ರವಿಮರ್ಶೆ)
- ಸ್ಟುಡಿಯೋ ಸುದ್ದಿಗಳು
- ನಮ್ಮ ಉತ್ಪಾದಕರ ಜನಾಬ್ದಾಶಿ
- ಕಲಕಂಠೆ ಖುರ್ಷಿದ್

ಇತ್ಯಾದಿ :: ಇತ್ಯಾದಿ.

★

ವಾರ್ಷಿಕ ಚಂದಾ ೧—೦—೦
(ಹಾಸಲು ಉಚಿತ)
ಬಿಡಿಪ್ರತಿ ೦—೧—೦

ಗುಬ್ಬಿ ಸಿಲಮ್ಸ್‌ರವರ ಜೀವನ ನಾಟಕದಲ್ಲಿ ಶ್ರೀಮತಿ ಶಾಂತಾ ಹುಬ್ಳಿಕರ್.

ತಾರ ೨ ಮಂಡಲ ೧

ಜೂರ್ ಗಳತಿ.

# ಬಾಲ ಮಿತ್ರ

1941

ಈ ಮಾಸಪತ್ರಿಕೆ ಎಲಿಮೆಂಟರಿ ಶಾಲೆಯ ಮಕ್ಕಳಿಗೋಸ್ಕರ ರಚಿಸಲ್ಪಟ್ಟದ.

VOL. 26 SEPTEMBER 1941 NO 9

*Price: 1 Pie*] [ಕ್ರಯ: 1 ಪೈ

ಆಗ ಅವರು ಶೀಲೋವಿನಲ್ಲಿ ಅನ್ನ ಪಾನಗಳನ್ನು ತೆಗೆದುಕೊಂಡ ಮೇಲೆ ಹನ್ನೆಲು ಎಮ್ಮು ಯಾಜಕನಾದ ಏಲಿಯು ಯೆಹೋವನ ಮಂದಿರದ್ವಾರದ ಬಳಿಯಲ್ಲಿ ಒಂದು ಪೀಠದ ಮೇಲೆ ಕೂತಿರುವಾಗ ಹೋಗಿ

ಬಹು ದುಃಖದಿಂದ ಕಣ್ಣೀರುಸುರಿಸುತ್ತಾ ಯೆಹೋವನನ್ನು ಕುರಿತು—ಸೇನಾಧೀಶ್ವರನಾದ ಯೆಹೋವನೇ, ನಿನ್ನ ದಾಸಿಯ ದುಃಖವನ್ನು ಪರಾಂಬರಿಸು; ನನ್ನನ್ನು ತಿರಸ್ಕರಿಸದೆ ಕನಿಕರಪಟ್ಟು ನನಗೊಬ್ಬ ಮಗನನ್ನು ಕೊಡಬೇಕು; ಅವನು ಜೀವದಿಂದಿರುವ ತನಕ ನಿನ್ನವನಾಗಿಯೇ ಇರುವ ಹಾಗೆ ನಿನಗೆ ಪ್ರತಿಷ್ಠಿಸಿ ಕೊಡುವೆನು; ಅವನ ತಲೆಯ ಮೇಲೆ ಕ್ಷೌರ ಕತ್ತಿಯನ್ನು ಬರಗೊಡುವದಿಲ್ಲ ಎಂದು ಪ್ರಾರ್ಥಿಸಿ ಹರಕೆ ಮಾಡಿದಳು. (1ಸಮು. 1: 9—11),

ಅವರು ಮರುದಿನ ಬೆಳಿಗ್ಗೆ ಎದ್ದು ಯೆಹೋವನನ್ನು ಆರಾಧಿಸಿ ರಾಮದಲ್ಲಿದ್ದ ತಮ್ಮ ಮನೆಗೆ ಬಂದರು. ಎಲ್ಕಾನನು ತನ್ನ ಹೆಂಡತಿಯಾದ ಹನ್ನಳನ್ನು ಕೂಡಲು ಆಕೆಯು ಯೆಹೋವನ ಅನುಗ್ರಹದಿಂದ ಗರ್ಭಿಣಿಯಾಗಿದಿನ ತುಂಬಿದ ಮೇಲೆ ಒಬ್ಬ ಮಗನನ್ನು ಹೆತ್ತಳು. ಯೆಹೋವನನ್ನು ಬೇಡಿಪಡಕೊಂಡೆನೆಂದು ಹೇಳಿ ಆ ಮಗನಿಗೆ ಸಮುವೇಲನೆಂದು ಹೆಸರಿಟ್ಟಳು. (1ಸಮು. 19: 20).

ಬಾಲಕನಾದ ಸಮುವೇಲನು ಏಲಿಯ ಕೈಕೆಳಗಿದ್ದುಕೊಂಡು ಯೆಹೋವನ ಸೇವೆ ಮಾಡುತ್ತಿದ್ದನಷ್ಟೆ. ಆ ಕಾಲದಲ್ಲಿ ದೈವೋಕ್ತಿಗಳು ವಿರಳವಾಗಿದ್ದವು; ದೇವ ದರ್ಶನಗಳು ಅಪರೂಪವಾಗಿದ್ದವು. ಏಲಿಯ ಕಣ್ಣುಗಳು ದಿನ ದಿನಕ್ಕೆ ಮೊಬ್ಬಾಗುತ್ತಾ ಬಂದು ಚೆನ್ನಾಗಿ ಕಾಣದೆಹೋಗಿದ್ದವು. ಇವನು ಒಂದಾನೊಂದು ರಾತ್ರಿ ತನ್ನ ಸ್ಥಳದಲ್ಲಿ ಮಲಗಿದ್ದನು; ಸಮುವೇಲನು ಯೆಹೋವನ ಮಂದಿರದಲ್ಲಿದ್ದ ದೇವರ ಮಂಜೂಷವಿದ್ದ ಸ್ಥಳದಲ್ಲಿ ಮಲಗಿದ್ದನು. ಆಗ ದೇವ ದೀಪವು ಇನ್ನೂ ಉರಿಯುತ್ತಿರುವಾಗಲೇ ಯೆಹೋವನು ಸಮುವೇಲನನ್ನು ಕರೆದನು; ಸಮುವೇಲನು ಬಂದೆನೆಂದು ಉತ್ತರ ಕೊಟ್ಟು ಒಡನೆ ಏಲಿಯ ಬಳಿಗೆ ಹೋಗಿ—ಇಗೋ ಬಂದಿದ್ದೇನೆ; ನೀನು ನನ್ನನ್ನು ಕರದಿಯಲ್ಲಾ ಎನ್ನಲು ಏಲಿಯು—ನಾನು ನಿನ್ನನ್ನು ಕರೆಯಲಿಲ್ಲ, ಹೋಗಿ ಮಲಗಿಕೋ ಅಂದನು. ಸಮುವೇಲನು ಹೋಗಿ ಮಲಗಿದನು. ಯೆಹೋವನು ತಿರಿಗಿ—ಸಮುವೇಲನೇ ಎಂದು ಕರೆದನು. ಸಮುವೇಲನು ಕೂಡಲೆ ಎದ್ದು ಏಲಿಯ ಬಳಿಗೆ ಹೋಗಿ—ಇಗೋ, ಬಂದಿದ್ದೇನೆ; ನೀನು ನನ್ನನ್ನು ಕರೆದಿಯಲ್ಲಾ ಅನ್ನಲು ಅವನು—ಮಗನೇ, ನಾನು ನಿನ್ನನ್ನು ಕರೆಯಲಿಲ್ಲಾ, ಹೋಗಿ ಮಲಗಿಕೋ ಎಂದನು. ಆ ವರೆಗೂ ಸಮುವೇಲನಿಗೆ ಯೆಹೋವನ ಅನುಭವವಿರಲಿಲ್ಲ, ಅವನು ದೈವೋತ್ತರಗಳನ್ನು ಹೊಂದಿರ

ಲ್ಲ. ಯೆಹೋವನು ಸಮುವೇಲನನ್ನು ಮೂರನೆಯ ಸಾರಿ ಕ
ವನು ತಟ್ಟನೆ ಏಲಿಯ ಹತ್ತಿರ ಹೋಗಿ—ಇಗೋ, ಬಂದಿದ್ದೇನೆ, ನನ್ನನ್ನ
ಕರೆದಿಯಿಲ್ಲಾ ಅನ್ನಲು ಹುಡುಗನನ್ನು ಕರೆದವನು ಯೆಹೋವನೇ ಎಂದು
ಏಲಿಯು ತಿಳಿದು ಅವನಿಗೆ—ಹೋಗಿ ಮಲಗಿಕೋ; ತಿರಿಗಿ ಶಬ್ದವಾದರೆ
ಯೆಹೋವನೇ, ಅಪ್ಪಣೆಯಾಗಲಿ, ನಿನ್ನ ದಾಸನು ಕಾದಿದ್ದಾನೆ ಎಂದು
ಹೇಳು ಅಂದನು. ಸಮುವೇಲನು ತಿರಿಗಿ ಹೋಗಿ ತನ್ನ ಸ್ಥಳದಲ್ಲಿ ಮಲಗಿ
ಕೊಳ್ಳಲು ಯೆಹೋವನು ಪ್ರತ್ಯಕ್ಷನಾಗಿ ಮುಂಚಿನಂತೆ ಸಮುವೇಲನೇ,
ಸಮುವೇಲನೇ ಅಂದನು: ಸಮುವೇಲನು—ಅಪ್ಪಣೆಯಾಗಲಿ, ನಿನ್ನ
ದಾಸನು ಕಾದಿದ್ದಾನೆ ಅಂದನು. (1 ಸಮು. 1—10)

---

# ವಾಕ್ಯ ವಿವರಣೆ

## ನಂಬಿಕೆಯ ಹುಟ್ಟುವಿಕೆ

ಚಿತ್ರ ಪಠದಲ್ಲಿ ಸಮುವೇಲನೆಂಬ ಒಬ್ಬ ಚಿಕ್ಕ ಹುಡುಗನು ಹಾಸಿಗೆಯ ಮೇಲೆ
ಕೊತಿರುವದನ್ನು ನೋಡುತ್ತೇವೆ. ದೇವಾಲಯದಲ್ಲಿ ಮಲುಗಿಕೊಂಡು ನಿದ್ರೆ
ಮಾಡುತ್ತಿರುವಾಗ ದೇವರು ಸಮುವೇಲನನ್ನು ಕರೆದನು. ಚಿಕ್ಕ ಹುಡುಗನಿಗೆ ದೇವ
ದರ್ಶನವಾಯಿತು. ದೇವರ ಕರೆಯುವಿಕೆಗೆ ವಿಧೇಯನಾದನು. ದೇವರ ವಾಕ್ಯವು
ಸಮುವೇಲನ ನಂಬಿಕೆಗೆ ಆಧಾರವಾಗಿತ್ತು. ಈ ಕಾಲದಲ್ಲಿ ಬಾಲ ಮಿತ್ರ ಎಂಬ
ಪತ್ರಿಕೆಯನ್ನು ಓದುವ ಮಕ್ಕಳಿಗೆ ದೇವ ದರ್ಶನವಾಗಬಹುದು. ದೇವರ ವಾಕ್ಯ
ವನ್ನು ಓದುತ್ತಾರೆ. ಆ ವಾಕ್ಯವು ನಂಬಿಕೆಗೆ ಆಧಾರವಾಗಿದೆ,

ದೇವರು ಚಿಕ್ಕ ಮಕ್ಕಳನ್ನು ಕರೆಯುತ್ತಾನೆ. ಮಕ್ಕಳನ್ನು ಬಿಡಿರಿ; ನನ
ಹತ್ತರ ಬರುವದಕ್ಕೆ ಅವುಗಳಿಗೆ ಅಡ್ಡಿ ಮಾಡಬೇಡಿರಿ; ಪರಲೋಕ ರಾಜ್ಯವು ಇಂಥ
ವರದೇ ಎಂದು ಹೇಳಿ ಅವುಗಳ ಮೇಲೆ ಕೈಯಿಟ್ಟು ಆಶೀರ್ವದಿಸಿದನು. ಯೇಸು
ಅಂದನು.

ದೇವರು ಒಬ್ಬನೇ ಎಂದು ಸಮುವೇಲನು ನಂಬಿಕೊಂಡನು ಆದುದರಿಂದ
ಅವನು ಬೇರೆ ದೇವರುಗಳಿಗೆ ಕೈ ಮುಗಿಯುಲಿಲ್ಲ. ಸಂಬ್ರಾಣಿ ಸುಡಲಿಲ್ಲ. ಬೇರೆ
ಹೆಸರುಗಳನ್ನು ಎತ್ತಲಿಲ್ಲ.

ದೇವರ ವಾಕ್ಯವನ್ನು ಸಾರುತ್ತಿದ್ದನು. ದೇವರ ಕಟ್ಟಳೆಗಳನ್ನು ಜನರಿಗೆ
ಬೋಧಿಸುತ್ತಿದ್ದನು.

ಸಮುವೇಲನು ದೊಡ್ಡವನಾದ ಮೇಲೆ ಯಾಜಕನಾದನು. ದೇವರು ಸಮುವೇಲನ ಪ್ರಾರ್ಥನೆಗಳನ್ನು ಕೇಳಿ ಅವನ ಸೀಮೆಯವರಿಗೆ ಯುದ್ಧದಲ್ಲಿ ಜಯಕೊಟ್ಟನು. ಸಮುವೇಲನು ಮಹಾ ಭಕ್ತನಾದನು.

ಸಮುವೇಲನು ಪಾಪದ ದೆಸೆಯಿಂದ ಅರಸನನ್ನೂ ದೊಡ್ಡವರನ್ನೂ ಗದರಿಸಿದನು. ದೇವರ ಕಡೆಗೆ ಜನರನ್ನು ತಿರಿಗಿಸಿದನು. ಪಕ್ಷಪಾತ ಯಾರಿಗೂ ತೋರಿಸಲಿಲ್ಲ. ದೇವರ ಮುಂದೆ ನ್ಯಾಯವನ್ನು ಜನರಿಗೆ ತೀರಿಸಿದನು.

ದೇವರು ಈ ಒಳ್ಳೇ ಮಾರ್ಗದಲ್ಲಿ ಚಿಕ್ಕ ಮಕ್ಕಳನ್ನು ನಡಿಸುತ್ತಾನೆ. ಅವರು ದೇವರ ವಾಕ್ಯಕ್ಕೆ ವಿಧೇಯನಾಗಬೇಕಷ್ಟೆ.

—J. S.

---

# ಸಂಗೀತ

TUNE:—*Jesus my Saviour to Bethlehem came.*

## ಯೇಸುಕ್ರಿಸ್ತನು

[ಕಳೆದ ತಿಂಗಳಿನ ಸಶೇಷ]

53 ಗೆತ್ಸೇಮನೆ ತೋಟ ಸೇರಿದನು
ದುಃಖದಿ ಅತ್ತತ್ತು ಬೇಡಿದನು
ನಿಜ ಚಿತ್ತ ತಂದೆಯೆ ಆಗಲಪ್ಪಾ
ಅಂದನು ಅಲ್ಲವಾ.

54 ಅನ್ಯಾಯ ತೀರ್ಪನ್ನು ಮಾಡಿದರು
ಶಿಲುಬೆ ಮರವ ಹೊರ್ಸಿದರು
ಎಲ್ಲರು ಗೇಲಿಯು ಮಾಡಿದರು
ಶ್ರೀ ಯೇಸು ಸ್ವಾಮಿಗು.

ಪಲ್ಲವಿ:—ದೇವಕುಮಾರನು
ಕರ್ತನಾದೇಸುವು
ನನ್ನನ್ನು ಹುಡುಕ ಬಂದಿರ್ವನು
ಮನುಷ್ಯನಾಗಿಯು

55 ಲೋಕದ ಪಾಪವ ಹೊತ್ತವನು
ಪಾಪವು ಲೇಶವು ರಹಿತನು
ಪಾಪಸ್ವರೂಪಿಯು ಆದವನು
ನಂಗಾಗಿ ಯೇಸುವು.

56 ಮುಳ್ಳಿನ ಕಿರೀಟ ಹೊತ್ತನಲ್ಲಾ
ಸುಳ್ಳಿನ ದೂರನ್ನು ತಾಳ್ದನಲ್ಲಾ
ಕಳ್ಳರ ಮಧ್ಯದಿ ತೂಗಾಡಿದ
ನೋಡು ಆ ಶ್ರಮೆಯ.

57 ಅಯ್ಯಯ್ಯೊ ಗಾಯವು ತಲೆಯಲ್ಲಿ
ಅಯ್ಯಯ್ಯೊ ಗಾಯವು ಕೈಗಳಲ್ಲಿ
ಅಯ್ಯಯ್ಯೊ ಗಾಯವು ಪಕ್ಕೆಯಲ್ಲಿ
ಬೆನ್ನು ಕಾಲ್ಗಳಲ್ಲಿ.

58 ಪಟ್ಟನು ಶ್ರಮೆಯು ಪಾಪಿಗಾಗಿ
ತಾಳಿದ ನಿಂದೆಯು ಪಾಪಿಗಾಗಿ
ಸತ್ತನು ಕ್ರೂಜೇಲಿ ನನಗಾಗಿ
ಯೇಸು ಮೃತ್ಯು ವೈರಿ.

[ಸಶೇಷ]

---

# ಯಾತ್ರಿಕನ ಪ್ರಯಾಣ

## ನಾಸ್ತಿಕ ಉಪಾಧ್ಯಾಯನು

[ಕಳೆದ ತಿಂಗಳಿನ ಸಶೇಷ]

ತರುವಾಯ ನಾವು ರಾಜ ಮಾರ್ಗದಲ್ಲಿ ಹೋಗುತ್ತಿರುವಾಗ ರಾಜ ಮಾರ್ಗದಲ್ಲಿ ನಮ್ಮೆದುರಿಗೆ ಮೆಲ್ಲಗೆ ಬರುವ ಒಬ್ಬನನ್ನು ದೂರದಲ್ಲಿ ಕಂಡೆವು.

ಕ್ರೈಸ್ತಯ್ಯ--ಸಹೋದರನಾದ ಕೋರಿಕಯ್ಯನೇ, ಆಗೋ, ಅಲ್ಲಿ ಒಬ್ಬನು ಚಿಯೋನಿಗೆ ಬೆನ್ನು ಹಾಕಿ ನಮ್ಮೆದುರಿಗೆ ಬರುತ್ತಾನೆ.

ಕೋರಿಕಯ್ಯ--ಅವನನ್ನು ಕಂಡೆನು; ಅವನು ಇಚ್ಛಕ ಪಿಶಾಚಿಯೋ ಏನೋ! ಜಾಗ್ರತೆಯಾಗಿರುವ.

ಹೀಗೆ ನಾವಿಬ್ಬರೂ ಮಾತಾಡುತ್ತಿರುವಾಗಲೇ ಅವನು ಹತ್ರ ಬಂದು, ನಮ್ಮನ್ನು ಕಲೆತು--ಎಲ್ಲಿಗೆ ಹೋಗುತ್ತೀರೆಂದು ಕೇಳಿದನು. ಅವನ ಹೆಸರು ನಾಸ್ತಿಕ ಉಪಾಧ್ಯಾಯನು.

ಕ್ರೈಸ್ತಯ್ಯನು--ಜಿಯೋನ್ ಪರ್ವತಕ್ಕೆ ಹೋಗುತ್ತೇವೆಂದಾಗ, ನಾಸ್ತಿಕ ಉಪಾಧ್ಯಾಯನು ಗುಹಿಲಿಕ್ಕಿ ನಕ್ಕನು.

ಕ್ರೈಸ್ತಯ್ಯನು--ನೀವು ನಗುವುದು ಯಾಕೆ ?

ನಾಸ್ತಿಕ ಉಪಾಧ್ಯಾಯನು--ನೀವು ಜ್ಞಾನವಿಲ್ಲದ ಜನರಾಗಿ ತೊಳಲಿ ಬಳಲುವದೇ ಹೊರತು, ಮುತ್ತೇನು ಫಲವಿಲ್ಲದ ಕಷ್ಟವಾವ ಪ್ರಯಾಣ ಮಾಡುವದನ್ನು ನೋಡಿ ನಗುತ್ತೇನೆ.

ಕ್ರೈಸ್ತಯ್ಯ--ಯಾಕೆ ? ನಾವು ಅಲ್ಲಿ ಸೇರಕೂಡದನ್ನುತ್ತೀರೋ ?

ನಾಸ್ತಿಕ--ಸೇರುವದು ಹಾಗೆ ? ನೀವು ಹುಡುಕುವ ಸ್ಥಳವು ಸ್ವಪ್ನಗಳಲ್ಲಿ ಹೊರತು ಈ ಲೋಕದಲ್ಲಿ ಎಲ್ಲಿಯೂ ಕಾಣುವದಿಲ್ಲ.

ಕ್ರೈಸ್ತಯ್ಯ---ಅದು ಇಹದಲ್ಲಿ ಇಲ್ಲ ಪರದಲ್ಲಿ ಉಂಟು.

ನಾಸ್ತಿಕ---ನಾನು ಸ್ವದೇಶದಲ್ಲಿ ಇದ್ದಾಗ ಈ ಸಮಾಚಾರವನ್ನು ಕೇಳಿ, ಹೊರಟು, ಆ ಪರಲೋಕ ಪಟ್ಟಣವನ್ನು ಹುಡುಕುತ್ತಾ ಇಪ್ಪತ್ತು ವರುಷ ತಿರುಗಿದೆನು; ಆದರೆ ಅದು ಹೊರಟ ದಿನದಿಂದ ಇಂದಿನ ವರೆಗೂ ಸಮೀಪವಾಗಲಿಲ್ಲ. ಇದಕ್ಕೆ ದೇವರ ವಾಕ್ಯ ನೋಡಿರಿ (ಪಟ್ಟಣದ ದಾರಿ ತಿಳಿಯದವನಿಗೆ ಮೂಢರು [ತಿಳಿಸಲು] ಪಡುವ ಪ್ರಯಾಸದಿಂದ ಅಯಾಸವೇ ಪ್ರಸಂಗಿ. 10: 15). (ನಾವು ಆತನ ಕೆಲಸವನ್ನು ನೋಡಬೇಕು, ಆತನ್ನು ಬೇಗನೆ ನಡಿಸಲಿ, ಇಸ್ರಾಯೇಲ್ಯರ ಸದನುಲ ಸ್ವಾಮಿಯ ಉದ್ದೇಶನನ್ನು ನಾವು ತಿಳಿಯಬೇಕು, ಅದು ಸಮೀಪಿಸಿ ಬರಲಿ ಎಂದು ನುಡಿಯುವವರ ದುರವಸ್ಥೆಯನ್ನು ಏನು ಹೇಳಲಿ ಯೇಶಾಯ 5: 19).

[ಸಶೇಷ]

—*J. M. R. A.*

---

# ರೋಗದಲ್ಲಿ ಬಿದ್ದ ಹುಡುಗ

ಒಬ್ಬ ಹುಡುಗನು ರೋಗದಿಂದ ನರಳುತ್ತಾ ಹಾಸಿಗೆ ಹಿಡಿದು ಮಲಗಿದ್ದನು. ಎಷ್ಟು ಔಷಧೋಪಚಾರ ಮಾಡಿದರೂ ಗುಣವಾಗಲೇ ಇಲ್ಲ. ಅವನು ತನ್ನ ತಾಯನ್ನು ಕರೆದು ಅಮ್ಮಾ ನನಗೆ ಈ ರೋಗವು ದಿನ ದಿನಕ್ಕೆ ಹೆಚ್ಚಾಗುತ್ತದೆ. ಈ ಘೋರ ವ್ಯಾಧಿಯು ಪರಿಹಾರವಾಗಿ ನನಗೆ ಶೀಘ್ರ ಗುಣವಾಗುವಂತೆ ದೇವರನ್ನು ಪ್ರಾರ್ಥಿಸು! ಬಂದು ಬೇಡಿಕೊಂಡನು. ಅದಕ್ಕೆ ತಾಯಿಯು—ಮಗೂ, ನಿನಗೆ ದೇವರು ಈ ರೋಗದಿಂದ ಮಾತ್ರವಲ್ಲದೆ ಪಾಪವೆಂಬ ರೋಗದಿಂದಲೂ ಸಹ ಗುಣಮಾಡ ಶಕ್ತನೆಂದು ನಾನು ಬಲ್ಲೆ, ಆದರೆ ನೀನು ಯಾವಾಗಲೂ ಬರೀ ದುಷ್ಟ ಪಾಪ ಕೃತ್ಯಗಳನ್ನೇ ಮಾಡುತ್ತಾ ಬಂದೆ, ಆ ದುಷ್ಟ ಕರ್ಮಗಳ ನಿಜ ಪಶ್ಚಾತ್ತಾಪವು ನಿನ್ನ ಮನಸ್ಸಿನಲ್ಲಿ ಏನೂ ತೋರುವದಿಲ್ಲ. ನಾನಾದರೂ, ಯಾವ ರೀತಿಯಿಂದ ದೇವರನ್ನು ಪ್ರಾರ್ಥಿಸಲಿ; ಅಂದಳು.

ಪ್ರಿಯ ಬಾಲಕರೇ:---ಸಾಯುವ ತನಕ ಬರೀ ಪಾಪ ಕೃತ್ಯಗಳನ್ನು ಮಾಡುತ್ತಿದ್ದು, ಮರಣದ ಹಾಸಿಗೆಯಲ್ಲಿರುವಾಗ ಮಾತ್ರ ದೇವರನ್ನು ನೆನಸುವದು ನ್ಯಾಯವೇ ? ಮರಣ ಕಾಲದಲ್ಲಾದರೂ ಯಥಾರ್ಥವಾಗಿ ಪಶ್ಚಾತ್ತಾಪಪಟ್ಟು ದೇವರಿಗೆ ಮೊರೆ ಇಡುವವರನ್ನು ಆತನು ರಕ್ಷಿಸುತ್ತಾನೆಂಬದು ನಿಜ. ಆದರೆ ಆ ಕಾಲದಲ್ಲಿ ಯಥಾರ್ಥವಾದ ಪಶ್ಚಾತ್ತಾಪ ಹುಟ್ಟುತ್ತದೋ ಯಾರು ಬಲ್ಲರು ? ಆದಕಾರಣ ತನಗೆ ಒಳ್ಳೆಯದಾಗಬೇಕೆಂದು ಬಯಸುವ ಪ್ರತಿಯೊಬ್ಬರು, ಚಿಕ್ಕವರಾಗಲಿ, ದೊಡ್ಡವರಾಗಲಿ, ತಮಗೆ ಕ್ಷೇಮ ಇರುವಾಗಲೇ ಮಾಡಿದ ಪಾಪ ಕೃತ್ಯಗಳಿಗೆ ದುಃಖಪಟ್ಟು,

ಪಾಪಿಗಳ ರಕ್ಷಕನಾದ ಯೇಸು ಸ್ವಾಮಿಯನ್ನು ನಂಬಿ---ದೇವರೇ ಪಾಪಿಯಾದ ನನ್ನನ್ನು ರಕ್ಷಿಸು ಎಂದು ನಿಜ ಮನಸ್ಸಿನಿಂದ ಬೇಡಿಕೊಳ್ಳುವ ಪ್ರತಿಯೊಬ್ಬ ಪಾಪಿಯನ್ನು ಅವರ ಪಾಪಗಳಿಂದ ಬಿಡಿಸಿ ರಕ್ಷಿಸುತ್ತಾನೆ. ಕ್ರಿಸ್ತೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರವಾಗಿಯೇ ಈ ಲೋಕಕ್ಕೆ ಬಂದನು. ಈಗ ಕರೆಯುತ್ತಿದ್ದಾನೆ. ನಿಮಗೆ ನಿಜ ನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು (ದೇವರನ್ನು) ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ ಎಂಬದಾಗಿ ಯೇಸು ಸ್ವಾಮಿ ಹೇಳಿದ್ದಾನೆ. ಆದ್ದರಿಂದ ಆತನನ್ನು ನಂಬಿ ರಕ್ಷಣೆ ಹೊಂದಿರಿ.

V. M.

---

## ಮನುಷ್ಯನ ಸೃಷ್ಟಿ

21. ಎಲ್ಲವುಗಳು ಹ್ಯಾಗೆ ಹುಟ್ಟಿದವು ?

ಸೂರ್ಯ.ಚಂದ್ರ ನಕ್ಷತ್ರಗಳೂ ಭೂಮಿಯೂ ಅದರಲ್ಲಿರುವ ಎಲ್ಲಾ ವಸ್ತುಗಳೂ ದೇವರ ವಾಕ್ಯದಿಂದ ಉಂಟಾದವು. ಉಂಟಾದಾಗ ಎಲ್ಲಾ ಬಹು ಒಳ್ಳೇಯವುಗಳಾಗಿದ್ದವು.

22. ಮೊದಲನೇ ಮನುಷ್ಯನು ಯಾರು ? ಆವನು ಯಾವಾಗ ನಿರ್ಮಿಸಲ್ಪಟ್ಟವನು ?

ಆದಮನು ಮೊದಲನೇ ಮನುಷ್ಯನಾಗಿಯೂ ಹವ್ವಳು ಮೊದಲನೇ ಸ್ತ್ರೀಯಾಗಿಯೂ ಸುಮಾರು 6,000 ವರುಷಗಳ ಮುಂಚೆ ನಿರ್ಮಿಸಲ್ಪಟ್ಟು ಏಡೆ.ತೋಟದಲ್ಲಿ ಇರಿಸಲ್ಪಟ್ಟರು.

[ಸಶೇಷ]

---

1941 **ದೈವೋಕ್ತಿ ಸೆಪ್ಟೆಂಬರ್** 1941

1 ಸೋ ಯೆಹೋವ ದೇವರು ಸೂರ್ಯನೂ ಗುರಾಣಿಯೂ ಆಗಿದ್ದಾನಲ್ಲಾ. ಯೆ
2 ಮಂ ಹೋವನು ಕೃಪೆಯನ್ನೂ ಘನವನ್ನೂ ಅನುಗ್ರಹಿಸುವನು ಕೀರ್ತ. 84:11.
3 ಬು ದೇವರು ನನಗೆ ಕೃಪೆಯಿಂದ ಒಪ್ಪಿಸಿದ ಕೆಲಸವನ್ನು ನಡಿಸಿ ನಾನು ಪ್ರವೀಣ
4 ಗು ○ ಶಿಲ್ಪಿಯಂತೆ ಆಸ್ತಿವಾರ ಹಾಕಿದೆನು. 1 ಕೊರಿಂಥ. 3: 10.

5 ಶು ನಾವು ಆತನೊಂದಿಗೆ ಕೆಲಸ ನಡಿಸುವವರಾಗಿದ್ದು—ನೀವು ಹೊಂದಿದ ದೇವರ ಕೃಪೆ
6 ಶ ಯನ್ನು ವ್ಯರ್ಥಮಾಡಿಕೊಳ್ಳಬೇಡಿರೆಂದು ಎಚ್ಚರಿಸುತ್ತೇವೆ. 2ಕೊರಿಂಥ. 6: 1.
7 ಭಾ ನೀವೆಲ್ಲರು ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೇ ಮನೆವಾರ್ತೆಯವರಾ
8 ಸೋ ಗಿದ್ದು ಪ್ರತಿಯೊಬ್ಬನು ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ
ಉಪಯೋಗಿಸಲಿ. 1ಪೇತ್ರ. 4: 10.
9 ಮಂ ದೇವರು ಅಹಂಕಾರಿಗಳನ್ನು ಎದುರಿಸಿ ದೀನರಿಗೆ ದಯೆ ತೋರಿಸುತ್ತಾನೆ.
1ಪೇತ್ರ. 5: 5.
10 ಬು ಆ ಬಾಲಕನು ಬೆಳೆದು ಬಲಗೊಂಡು ಜ್ಞಾನದಿಂದ ತುಂಬಿದವನಾದನು.
ಲೂಕ. 2: 40.
11 ಗು ನನ್ನ ಕೃಪೆಯೇ ನಿನಗೆ ಸಾಕು, 2ಕೊರಿಂಥ. 12: 9.
12 ಶು ನಮ್ಮ ಕರ್ತನ ಕೃಪೆಯು ಅತ್ಯಧಿಕವಾಗಿದ್ದು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆ
13 ಶ ಯನ್ನೂ ಪ್ರೀತಿಯನ್ನೂ ನನ್ನಲ್ಲಿ ಉಂಟುಮಾಡಿತು. 1ತಿಮೊ. 1: 14.
14 ಭಾ ಕರ್ತನಾದ ಯೇಸುವಿನ ಕೃಪೆಯಿಂದಲೇ ರಕ್ಷಣೆ ಹೊಂದುವೆವೆಂಬದಾಗಿ ನಂಬು
15 ಸೋ ತ್ತೇವಲ್ಲಾ ಹಾಗೆಯೇ ಅವರೂ ಹೊಂದುವರು. ಆ. ಕೃ. 15: 11.
16 ಮಂ ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ
17 ಬು ಕೃಪೆಯಿಂದಲೇ. ರೋಮಾ. 3: 24.
18 ಗು ರಕ್ಷಣೆಯನ್ನುಂಟುಮಾಡುವ ದೇವರಕೃಪೆಯು ಪ್ರತ್ಯಕ್ಷವಾಯಿತು. ತೀತ. 2: 11.
19 ಶು ಇದು ನಂಬತಕ್ಕ ಮಾತಾಗಿದೆ. ದೇವರಲ್ಲಿ ನಂಬಿಕೆ ಇಟ್ಟಿರುವವರು ಸತ್ಕ್ರಿಯೆಗ
20 ಶ ಳನ್ನು ಮಾಡುವದರಲ್ಲಿ ಜಾಗರೂಕರಾಗಿರುವಂತೆ ನೀನು ಎಲ್ಲಾ ಮಾತುಗಳನ್ನು
21 ಭಾ ● ದೃಢವಾಗಿ ಹೇಳಬೇಕೆಂದು ಅಪೇಕ್ಷಿಸುತ್ತೇನೆ. ಇವು ಉತ್ತಮವಾಗಿಯೂ
22 ಸೋ ಮನುಷ್ಯರಿಗೆ ಪ್ರಯೋಜನಕರವಾಗಿವೆ. ತೀತ. 3: 8.
23 ಮಂ ನಂಬಿಕೆಯು ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷ
24 ಬು ಣೆಯು ನಿಮ್ಮಿಂದುಂಟಾದದ್ದಲ್ಲ. ಅದು ದೇವರ ವರವೇ, ಅದು
25 ಗು ಪುಣ್ಯ ಕ್ರಿಯೆಗಳಿಂದ ಉಂಟಾದದ್ದಲ್ಲ. ಅದರಿಂದ ಹೊಗಳಿಕೊಳ್ಳುವದಕ್ಕೆ
26 ಶು ಯಾರಿಗೂ ಆಸ್ಪದವಿಲ್ಲ. ನಾವು ಆತನಿಂದಲೇ ನಿರ್ಮಿತರಾದೆವು. ಸತ್ಕ್ರಿ
27 ಶ ಯೆಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ
28 ಭಾ ಸೃಷ್ಟಿಸಲ್ಪಟ್ಟೆವು. ಎಫೆ. 2; 1–10.
29 ಸೋ ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಿದೆಯಲ್ಲಾ. ನೀವು
30 ಮಂ ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು.
2ಕೊರಿಂಥ. 8: 9.

NOTICE

"*Bala Mitra*," Monthly, 10 copies, Rs. 1-4: 50 copies, Rs. 6-4 per annum, postage included. Published by James Stewart, Bannur, Mysore State

33-41 Printed by the S. L. P. Akkithimanahalli, Bangalore